


ಶ್ರದ್ಧಾರ್ಘ್ಯಾಭಿವಂದನೆ

ಸಂಪಾದಕರು :
ಜಿ. ಜ್ಞಾನಾನಂದ, ಸರಿತಾ ಜ್ಞಾನಾನಂದ.

ಆಚಾರ್ಯಾಭಿವಂದನೆ

ಸಂಪಾದಕರು :
ಜಿ.ಜ್ಞಾನಾನಂದ, ಸರಿತಾ ಜ್ಞಾನಾನಂದ,

ಶ್ರೀ 'ನಾಭ' ಸನ್ಮಾನ ಸಮಿತಿ
2–163, ಬಿಇಎಂಎಲ್ ನಗರ : : ಕೆಜಿಎಫ್ 563 115

ACHARYABHIVANDANE, Felicitation Volume presented to Vedabrahmasri NA. BHA. CHANDRASEKHARA ACHARYA in his Seventyfirst birth year. Published by SRI 'NABHA' SANMANA SAMITHI, 2-163, BEML Nagar, KGF 563 115, Karnataka. Editors : G GNANANANDA, and Smt. SARITHA GNANANANDA,

Pages : vi + 456 | Price : Rs. 30-00

ರಕ್ಷಾಪುಟ–ಚಿತ್ರಗಳು | ಅಚ್ಚು ಕೂಟ
ಜಿ. ವೀರೇಂದ್ರ | ದವಲತ್ ಪ್ರಿಂಟರ್ಸ್
ಶಂಕರ್ ಸ್ಟೂಡಿಯೋ | ೩೫, ಸಂಪಿಗೆ ರಸ್ತೆ
ಚಿಕ್ಕಬಳ್ಳಾಪುರ ೫೬೨ ೧೦೧ | ಬೆಂಗಳೂರು ೫೬೦ ೦೦೩

ಬೆಲೆ : ಮುವ್ವತ್ತು ರೂಪಾಯಿಗಳು

ಆಚಾರ್ಯಾಭಿವಂದನೆ—ವೇದಬ್ರಹ್ಮಶ್ರೀ ನಾ.ಭಾ. ಚಂದ್ರಶೇಖರಾಚಾರ್ಯ ಅವರಿಗೆ ಅವರ ಎಪ್ಪತ್ತೊಂದನೆಯ ಹುಟ್ಟು ವರ್ಷದಲ್ಲಿ ನವೆಂಬರ್ ೯, ೧೯೮೦ರಂದು ಅರ್ಪಿಸಿದ ಸಂಭಾವನಾ ಸಂಪುಟ

ಪುಟಗಳು : vi + ೪೫೬


ಆಚಾರ್ಯಾಭಿವಂದನೆ ಆವರಣಾಂತರಂಗ

ದ್ವಿತೀಯಾವರಣ – ಸಂಶೋಧನಾಂಕ (೧೧೬ – ೨೩೪)

ತೃತೀಯಾವರಣ - ಮೋಹನೀಯಾಂಕ (೨೩೫ - ೨೯೪)

ಚತುರ್ಥಾವರಣ - ಸಂಭಾವನಾಂಕ (೨೯೫ - ೩೬೯)

ಪಂಚಮಾವರಣ ಸಂಘಾಂಕ (೩೭೧ - ೪೫೯)



'ಆಚಾರ್ಯಾಭಿವಂದನೆ'ಗೆ ಅಭಿವಾದನೆ

ವಿಶ್ವಕರ್ಮಸಂಪ್ರದಾಯದ ಬಗ್ಗೆ ನಮ್ಮ ನಾಡಿನಲ್ಲಿ ಜನಜಾಗ್ರತಿಯನ್ನು ಒದಗಿಸಿರುವವರಲ್ಲಿ ವೇದಬ್ರಹ್ಮಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರು ಅಗ್ರಗಣ್ಯರು. ಅವರ ವೈದಿಕ ವೈದುಷ್ಯ, ಶಾಸ್ತ್ರಚಿಂತನೆ, ವಿಮರ್ಶಾತ್ಮಕವಾದ ವಿಚಾರಧಾರೆ, ಮನವೊಪ್ಪಿಸುವಂಥ ವಾಗ್ಧೋರಣೆ ಇವು ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿವೆ. ಇವೆಲ್ಲದರ ಹಿನ್ನೆಲೆಯಲ್ಲಿರುವ ಅವರ ಸದಾಚಾರ ಸಂಪನ್ನತೆ ಅವರಿಗೆ ಗೌರವಾದರಗಳನ್ನೂ ಒದಗಿಸಿವೆ. ವೇದೋಕ್ತವಾದ ಕರ್ಮಗಳನ್ನು ಕುರಿತು ಅವರ ಅಧಿಕಾರ, ಒಲುಮೆ, ನಂಬಿಕೆಗಳು ಅವರನ್ನು ಹಿರಿಯರನ್ನಾಗಿಸಿವೆ.

ವಿಶ್ವಕರ್ಮಜನಾಂಗದ ಅಭ್ಯುದಯಕ್ಕೆ, ಸಾಂಸ್ಕೃತಿಕ ಉತ್ಥಿತಿಗೆ ಅವರು ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆ ಕನ್ನಡಜನತೆಯ ಏಳಿಗೆಗೇ ಒಂದು ಕೊಡುಗೆ. ಜಾನಪದ ಜೀವನದಲ್ಲಿ ಪಾಲ್ಗೊಳ್ಳುವ ಒಂದೊಂದು ಜನಾಂಗವೂ ಮುನ್ನಡೆದರೇ ನಾಡಿನ ಹಿತ. ಇತಿಹಾಸದ ಓರೆಕೋರೆಗಳಲ್ಲಿ, ಸಾಮಾಜಿಕ ತಿಕ್ಕಾಟದಲ್ಲಿ ಎಲ್ಲ ಜನಾಂಗಗಳೂ ಒಂದಲ್ಲೊಂದು ಕಾಲದಲ್ಲಿ ಒಂದಲ್ಲೊಂದು ಕಾರಣದಿಂದ ದಾರಿ ತಪ್ಪುವುದುಂಟು, ಆದರ್ಶವನ್ನು ಮರೆಯುವುದುಂಟು, ಹಿಂದುಳಿಯುವುದುಂಟು. ಆಯಾ ಜನಾಂಗದ ಹಿರಿಯರು ಎಚ್ಚತ್ತು ಇತರರಿಗೆ ದಾರಿ ತೋರಿಸ ಬೇಕಾಗುತ್ತದೆ. ಇದು ಆ ಜನಾಂಗಕ್ಕೆ ಮಾತ್ರವಲ್ಲದೆ ಇಡೀ ನಾಡಿಗೆ ನೆರವಾಗುತ್ತದೆ. ಹೀಗೆ ದಾರಿ ತೋರಿಸುವ ಹಿರಿಯರಲ್ಲಿ ನಾವು ದೈವಾಂಶವನ್ನು ಗುರುತಿಸಬೇಕು; 'ವಿಭೂತಿ'ಯನ್ನು ಕಾಣಬೇಕು. ಚಂದ್ರಶೇಖರಾಚಾರ್ಯರು ಇಂಥ ಹಿರಿಯರು.

ಅವರ ಬದುಕಿನಲ್ಲಿ ಎಪ್ಪತ್ತು ವರ್ಷಗಳ ಘಟ್ಟವೊಂದು ಸರಿದಾಗ, ಅವರ ನೆರವನ್ನು ಪಡೆದುಕೊಂಡವರೂ, ಅವರ ಹಿರಿಮೆಯನ್ನು ಗುರುತಿಸಿದವರೂ ಸೇರಿ ತಂತಮ್ಮ ಕೃತಜ್ಞತೆಯ ಕುರುಹಾಗಿ ಅವರಿಗೆ ಬಹಿರಂಗವಾಗಿ **'ಆಚಾರ್ಯಾಭಿವಂದನೆ'**ಯನ್ನು ಸಿದ್ಧಪಡಿಸಿರುವುದು ಸರಿಯೇ, ಸಹಜವಾದುದೇ. ಜನಾಂಗದ

ಹರವಿನಲ್ಲೇ ಬಹುಮಟ್ಟಿಗೆ ಹೆಸರಾದ ಈ ವಿಭೂತಿ ಪುರುಷರನ್ನು ನಾಡಿಗೆ ತೋರಿಸಬೇಕಾದುದು ಅಗತ್ಯವೇ. ಅವರ ಹಿರಿಮೆಯನ್ನು ನಾಡೇ ಅರಿತು ಕೊಳ್ಳಬೇಕು. ಅವರ ಶಾಸ್ತ್ರಶ್ರದ್ಧೆ, ಕರ್ಮನಿಷ್ಠೆ, ಆಚಾರಪರತೆಗಳು ನಾಡಿನ ಎಲ್ಲರಿಗೂ ಆದರ್ಶವಾದರೆ ಒಳಿತಲ್ಲವೇ ?

ವಿಶ್ವಕರ್ಮಬ್ರಾಹ್ಮಣ ಜನಾಂಗವು ವೇದಕಾಲದಿಂದಲೂ, ಸೈಂಧವ ಸಂಸ್ಕೃತಿಯ ಕಾಲದಿಂದಲೂ ಭಾರತದ ಸಂಸ್ಕೃತಿಗೆ ಬಹುಮುಖವಾದ ಕೊಡುಗೆ ಗಳನ್ನು ಕೊಟ್ಟಿದೆ. ವೈದಿಕವಾಙ್ಮಯದಲ್ಲೂ ವಾಸ್ತುಶಿಲ್ಪಕ್ಷೇತ್ರದಲ್ಲೂ ಅವರ ಪಾತ್ರ ವಿಶಿಷ್ಟವಾದುದೇ. ಅವರ ಅರಿವು, ಆದರ, ಕಾಣ್ಕೆ, ಕನಸುಗಳೇ ನಮ್ಮ ದೇಶದ ದೇವಾಲಯಗಳ ವೈಭವದ ಹಿನ್ನಲೆ; ನಮ್ಮ ದೇವತಾಮೂರ್ತಿಗಳ ಸೌಂದರ್ಯ- ಸಂಕೇತಗಳು ಅವರಿಂದಲೇ ಸಿದ್ಧವಾದುವು. ಆಗಮದ ರೂಪ ರಚನೆಯೂ ಅವರ ಸಾಹಸವೇ. ದೇವಾಲಯದ ಚೌಕಟ್ಟಿನಲ್ಲಿ ಬಿಂಬ ಪ್ರತಿಷ್ಠೆ, ಅರ್ಚನೆ, ಉತ್ಸವಗಳಲ್ಲಿ ಅವರ ನೇರವಾದ ನೆರವು ತಪ್ಪಿಹೋದುದು ಆಗಮದ ಆಚಾತುರ್ಯಗಳಲ್ಲಿ ಒಂದು ವಿವರ. ದೇವಾಲಯ ಸಂಸ್ಕೃತಿ ಶಿಥಿಲವಾಗಲು ಇದೇ ಕಾರಣವಾಯಿತು. ಈಗಲಾದರೂ ಆಗಮವನ್ನು ಸೇರಮಾಡಿ ಶಿಲ್ಪಿಗಳ ಪಾಲಿಗೇ ಪ್ರತಿಷ್ಠಾದಿಕಾರ್ಯಗಳನ್ನು ಬಿಡುವುದು ಒಳ್ಳೆಯದು. ಅರ್ಚಕರಿಗೂ, ಶಿಲ್ಪಿಗಳಿಗೂ ಒಡನಾಟ ನಿಕಟವಾಗಬೇಕು. ವೈದಿಕ ನೆಲೆಯಲ್ಲಿ ಎರಡೂ ಗುಂಪುಗಳು ಕಲೆಯಬೇಕು. ಈ ಕೆಲಸಕ್ಕೆ ನಾಂದಿಯಾಗಿ ಚಂದ್ರಶೇಖರಾ ಚಾರ್ಯರು ದುಡಿದಿದ್ದಾರೆ.

ಆದುದರಿಂದ, ಅವರಿಗೆ ಸಲ್ಲಿಸುವ 'ಅಭಿವಂದನೆ'ಯ ನೆಪದಿಂದ ನಮ್ಮ ಸಂಸ್ಕೃತಿಯಲ್ಲಿ ವಿಶ್ವಕರ್ಮ ಕಲ್ಪನೆಯ, ಜನಾಂಗದ, ಪಾತ್ರವನ್ನು ಕುರಿತು ಚಿಂತನೆ ಇಲ್ಲಿ ನಡೆದಿದೆ. '**ಆಚಾರ್ಯಾಭಿವಂದನೆ**'ಗೆ ಐದು ಆವರಣಗಳು : ವೇದ, ಸಂಶೋಧನೆ, ಮಹನೀಯರು, ಸಂಭಾವನೆ, ಸಂಘ. ಕಡೆಯ ಎರಡು ಉತ್ಸವದ ವಿಷಯವಾದ ಚಂದ್ರಶೇಖರಾಚಾರ್ಯರನ್ನು ಕುರಿತದ್ದು. ಆಚಾರ್ಯರ ಹಿರಿಮೆಯ ಹಲವು ಪ್ರಕಾರಗಳನ್ನು, ಅವರ ವ್ಯಕ್ತಿತ್ವದ ಸ್ವಾರಸ್ಯ ವನ್ನು, ಅವರ ಸಾಮಾಜಿಕ ಸೇವೆಯ ವಿವರಗಳನ್ನು ಅವರ ಪರಿಚಿತರೂ, ಅಭಿ ಮಾನಿಗಳು ಒಕ್ಕಣಿಸಿದ್ದಾರೆ. ಕನ್ನಡ, ತೆಲುಗು, ಇಂಗ್ಲೀಷ್, ಸಂಸ್ಕೃತಗಳಲ್ಲಿ

ಅವರನ್ನು ಕುರಿತ ಪ್ರಶಸ್ತಿ ಕವನಗಳಿವೆ. ಎಲ್ಲರ ಆದರಾಭಿಮಾನಗಳಿಗೆ ಪಾತ್ರ ರಾದವರು ಆಚಾರ್ಯರು ಎಂಬುದನ್ನು ಕಂಡುಕೊಳ್ಳಬಹುದು.

ಅವರ ಹಿರಿಮೆಗೆ ಹಿನ್ನಲೆಯನ್ನು ಹೊಂದಿಸುವಂತೆ 'ಮಹನೀಯಾಂಕ' ದಲ್ಲಿ ಈ ಜನಾಂಗದ ಹಿಂದಿನ ಹಲವು ಮಹಾಮಹಿಮರ ಜೀವನ ವೃತ್ತಾಂತ ಗಳನ್ನು ನಿರೂಪಿಸಲಾಗಿದೆ. ಅನುಭಾವಿ ವಚನಕಾರರಾದ ಮೌನೇಶ್ವರರು, ಪವಾಡಪುರುಷರಾಗಿ ಮೆರೆದ ಸಿದ್ದಪ್ಪಾಜಿ, ತ್ರಿಕಾಲಜ್ಞಾನಿಗಳಾದ ಚಾಂಗ ದೇವರು, ಪ್ರಭಾವಶಾಲಿ ಸಾಧಕರಾದ ಲಚ್ಯಾಣದ ಸಿದ್ಧಲಿಂಗ ಮಹಾ ರಾಜರು ಶಿಲ್ಪಯೋಗಿಗಳಾದ ಪೋತಲೂರು ವೀರಬ್ರಹ್ಮೇಂದ್ರಸ್ವಾಮಿಗಳು ಇವರ ಬಾಳ ಕಥೆಗಳನ್ನೂ, ವ್ಯಕ್ತಿಚಿತ್ರಗಳನ್ನೂ ನುರಿತ ಲೇಖಕರು ಒದಗಿಸಿ ದ್ದಾರೆ. ಆಂಧ್ರದಲ್ಲಿ ಪೋತಲೂರು ವೀರಬ್ರಹ್ಮೇಂದ್ರಸ್ವಾಮಿ, ಮಹಾರಾಷ್ಟ್ರ ದಲ್ಲಿ ಚಾಂಗದೇವರನ್ನು ಬಿಟ್ಟರೆ ಉಳಿದವರ ಪ್ರಖ್ಯಾತಿ ಅವರವರ ಸೀಮೆಗಳಲ್ಲಿ ಮಾತ್ರವೇ ಉಳಿದು ಬಂದಿರುವಂತೆ ಕಾಣುತ್ತದೆ. ಆದುದರಿಂದ ಈ ಬರಹ ಗಳು ಅವರ ಮೇಲೆ ಬೆಳಕನ್ನು ಚೆಲ್ಲಿ, ಜನರ ಗಮನವನ್ನು ಆ ಕಡೆ ಸೆಳೆಯಲು ಸಹಾಯಕವಾಗುತ್ತವೆ.

ದ್ವಿತೀಯಾವರಣವೆನಿಸಿಕೊಂಡ 'ಸಂಶೋಧನಾಂಕ' ವಿಚಾರಪರಿಪ್ಲುತ ವಾದ ಹತ್ತು ಪ್ರಬಂಧಗಳನ್ನೊಳಗೊಂಡಿದೆ. ವಿಶ್ವಬ್ರಾಹ್ಮಣರು, ವೈಶ್ವ ಕರ್ಮಣಧರ್ಮ ಇವೇ ಪ್ರಮುಖ ಚೌಕಟ್ಟಾದರೂ ಅದರ ಪರಿಧಿಯೊಳಗೆ ಶಿಲ್ಪ, ಚಿತ್ರಕಲೆ, ಯಂತ್ರ ಇವುಗಳ ವಿಸ್ತೃತ ವಿವೇಚನೆಯಿದೆ. ಭಾರತೀಯ ಲಲಿತ ಕಲೆಗಳ, ಉಪಯುಕ್ತ ಕಲೆಗಳ ಉಗಮವನ್ನು ಕಾಣಿಸುವ ಯತ್ನ ಇಲ್ಲಿ ನಡೆದಿದೆ. ದಿಟವಾಗಿ, ಇಷ್ಟು ಮೂಲಭೂತವಾದ ವಿವರಗಳನ್ನು ಹೊರಗಾಣಿ ಸಿರುವ ಈ ಅಂಕವನ್ನು ಸಂಪಾದಿಸಿರುವವರು ಅಭಿನಂದನಾರ್ಹರು. ನಮ್ಮ ಕಲೆಯ ಮೂಲವನ್ನು ಹುಡುಕುತ್ತ ಆಧ್ಯಾತ್ಮಿಕ ಕಲ್ಪನೆಗಳನ್ನು ಮಾತ್ರ ಹಿಡಿದು ಹೆಣಗಾಡುವುದು ನಮಗೆ ತಿಳಿದದ್ದೇ ಕಲೆಗೊಂದು ಸಾಮಾಜಿಕ ನೆಲೆಯಿದೆ ಯೆಂಬುದು ತಿಳಿದಿದ್ದರೂ, ಅದರ ವೃತ್ತಿಗತವೈಶಿಷ್ಟ್ಯವೇನು ಎಂಬುದು ಈ ಪ್ರಬಂಧಗಳಿಂದ ಸ್ಪಷ್ಟವಾಗುತ್ತದೆ.

ಸೈಂಧವ ಸಂಸ್ಕೃತಿಯ ಮುದ್ರಿಕೆಗಳಲ್ಲಿ ಸೇರಿರುವ ತ್ರಿಶೀರ್ಷಮೂರ್ತಿಯ ಚಿತ್ರಣ ತುಂಬ ಕುತೂಹಲಕಾರಿಯಾದುದು. ಇದರ ಬಗ್ಗೆ ಹಲವಾರು ವಿವರಣೆಗಳು ಪ್ರಚಲಿತವಾಗಿವೆ. ಇದನ್ನು ತ್ವಷ್ಟಾರನೆಂದು ಗುರುತಿಸಿರುವ ಲೇಖನ ಈ ಅಂಕದಲ್ಲೇ ಸೇರಿದೆ. ಇದು ಸ್ವಾರಸ್ಯವಾದ ವಿವೇಚನೆ. ತ್ವಷ್ಟಾರನು ವಿಶ್ವಕರ್ಮ, ಜಗತ್ತಿನ ಶಿಲ್ಪಿ, ಎಲ್ಲ ರೂಪಗಳ ರೂವಾರಿ. ಇವನ ಪ್ರತಿಮೆಯನ್ನು ಕುರಿತ ಸಂಶೋಧನೆ ಇನ್ನೂ ನಡೆಯಬೇಕಾಗಿದೆ. ಆದರೆ ಈಗ ನಡೆದಿರುವುದು ಅದಕ್ಕೆ ದಾರಿದೀಪವಾಗಬಲ್ಲುದು. ಸೈಂಧವ ಸಂಸ್ಕೃತಿಯಲ್ಲಿ ತ್ವಷ್ಟಾರನ ಪಾತ್ರವನ್ನು ಅರಿತುಕೊಳ್ಳಬೇಕಾದುದು ಭಾರತೀಯ ಸಂಸ್ಕೃತಿಯ ನೆಲೆಗಟ್ಟನ್ನು ನಿಶ್ಚಯಿಸುವಾಗ ಅಗತ್ಯವಾಗುತ್ತದೆ.

ಈ ವಿಭಾಗಕ್ಕೆ ಪೂರ್ವರೂಪವಾಗಿರುವ 'ವೇದಾಂಕ'ವೂ ಹೀಗೆಯೇ ಹಲವು ಪ್ರೌಢವಾದ ವಿವೇಚನೆಗಳಿಂದ ಕೂಡಿಕೊಂಡಿದೆ. ಬರೆದವರೆಲ್ಲ ಹಿರಿಯ ವಿದ್ವಾಂಸರು, ವಿಮರ್ಶೆಯಲ್ಲಿ ನುರಿತವರು, ಬರಹದಲ್ಲಿ ಪಳಗಿದವರು. ವೈದಿಕ ಚೌಕಟ್ಟನಲ್ಲಿ ವಿಶ್ವಕರ್ಮನ ಪ್ರಾದುರ್ಭಾವವನ್ನೂ, ವಿಕಾಸವನ್ನೂ, ಪ್ರಭಾವವನ್ನೂ ಚೆನ್ನಾಗಿ ಅಳವಡಿಸಿದ್ದಾರೆ.

ಹೀಗೆ ಸರ್ವಾಂಗಸುಂದರವಾದ **'ಆಚಾರ್ಯಾಭಿವಂದನೆ'** ಕನ್ನಡ ಸಾರಸ್ವತಲೋಕದಲ್ಲಿ ನಾಲ್ಕು ಕಾಲ ನಿಲ್ಲುವಂಥ ಸಂಭಾವನಾಗ್ರಂಥ. ಇದರ ಯೋಜನೆಯನ್ನು ಕೈಗೂಡಿಸಿಕೊಂಡು, ತಪಸ್ಸಿನಂತೆ ದುಡಿದಿರುವ ಶ್ರೀ ಜ್ಞಾನಾನಂದರು ನಮ್ಮೆಲ್ಲರ ಅಭಿವಂದನೆಗೆ ಪಾತ್ರರಾಗಿದ್ದಾರೆ. ಶ್ರೀ ಚಂದ್ರಶೇಖರಾಚಾರ್ಯರ ತಪಸ್ಸಿನ ಫಲವಾಗಿ ಜ್ಞಾನಾನಂದರಂಥ ಕಾಯಕಶಿಲ್ಪಿಗಳು ದೊರೆತರು ; ಇಂಥವರು ದೊರೆತದ್ದಾರಾಗಿ ನಮ್ಮೆಲ್ಲರ ಅರಿವು ಹೆಚ್ಚುವಂತಾಗಲಿ ಎಂದು ಹಾರೈಸಿ ಈ ನಾಲ್ಕು ಮಾತನ್ನು ಮುಗಿಸುತ್ತೇನೆ.

ವಿದ್ಯಾಲಂಕಾರ
ಸಾ ಕೃ. ರಾಮಚಂದ್ರರಾವ್, ಎಂ.ಎ.,

೩೦೫, ೧೧ನೇ ಬ್ಲಾಕು
ಜಯನಗರ, ಬೆಂಗಳೂರು–೧೧

ಶ್ರೀ 'ನಾಭಾ' ಸನ್ಮಾನ ಸಮಿತಿ
ಅಧ್ಯಕ್ಷ ವಾಣಿ

ಹೃದಯದಿಂದ ಮೂಡಿದ ಭಾವನೆಗೆ ಮಹತ್ವಪೂರ್ಣ ಶಕ್ತಿ ಇದೆ. ಸನ್ಮಿತ್ರರು ಸೇರಿ ಶ್ರೀಮದಾಚಾರ್ಯರನ್ನು ಅಭಿನಂದಿಸಬೇಕು, ಸನ್ಮಾನಿಸಬೇಕು - ಎಂದು ಯೋಚಿಸಿದ್ದು ಫಲದಾಯಕವಾಗಿದೆ. ಯಾವುದಾದರೊಂದು ಸದ್ಭಾವನೆ, ತಪಸ್ಸಾದರೆ ಅದಕ್ಕೆ ದೈವೀಶಕ್ತಿಯ ಆಶೀರ್ವಾದ ಹರಿದು ಬರುತ್ತದೆ. ಅದರ ಪ್ರಭೆ ಸುತ್ತಲೆತ್ತ ಪ್ರಸರಿಸುತ್ತದೆ. **'ಆಚಾರ್ಯಾಭಿವಂದನೆ'** ಬ್ರಹ್ಮಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರಿಗೆ ಅರ್ಪಿಸುತ್ತಿರುವ ಸಂಭಾವನ ಗ್ರಂಥ. ವೇದಾಂಕ, ಸಂಶೋಧನಾಂಕ, ಮಹನೀಯಾಂಕ, ಸಂಭಾವನಾಂಕ, ಸಂಘಾಂಕ – ಎಂಬ ಐದು ಆವರಣಗಳಿಂದ ಕೂಡಿರುವ ಈ ಸಂಕೃತಿಯಲ್ಲಿ ಹಲವು ವಿದ್ವಾಂಸರ ವಿಚಾರ ಪೂರ್ಣ ಲೇಖನಗಳು ಒಂದೆಡೆ ದೊರಕುವಂತಾಗಿದೆ. ಇದೊಂದು ಜ್ಞಾನ ಸಂಗಮ.

'ವೇದ' ಎಂಬ ಪದವು 'ವಿದ್' ಎಂಬ ಧಾತುವಿನಿಂದ ಬಂದದ್ದು. 'ವಿದ್' ಎಂದರೆ ಅರಿಯುವುದು ಎಂದು ಅರ್ಥ. ವೇದವೆಂದರೆ ಜ್ಞಾನ. ವೇದಗಳಲ್ಲಿ ಪ್ರಾಚೀನವಾದ ಋಗ್ವೇದದಲ್ಲಿ ಬರುವ **ವಿಶ್ವಕರ್ಮ ಸೂಕ್ತ** ಪರಬ್ರಹ್ಮನ ವಿಷಯವಾದುದು. ವೇದದ ದರ್ಶನವೇ ಈ ಸೂಕ್ತದಲ್ಲಿದೆ—ಎನ್ನಬಹುದು. ವಿಶ್ವಕರ್ಮನೇ ಜಗತ್ತಿಗೆ ಆದಿ ಆಧಾರ. ಅವನೇ ಜಗನ್ನಿರ್ಮಾಪಕ. ಸಕಲ ದೇವತೆಗಳನ್ನು ಸೃಷ್ಟಿಸಿದ ಸರ್ವಜ್ಞನವನು. ಅವನು ಎಲ್ಲೆಡೆಯೂ ವ್ಯಾಪಿಸಿದ್ದಾನೆ. ಪ್ರಾಜ್ಞರಿಗೆ ಆವನು ಧ್ಯಾನಗಮ್ಯ. ಇಂಥ ವಿಶ್ವಕರ್ಮನೆ ವಿಶ್ವಬ್ರಾಹ್ಮಣರ ಪರಬ್ರಹ್ಮ. ವೇದಗಳನ್ನು ಅಧ್ಯಯನ ಮಾಡಿ, ಅಲ್ಲಿ ತುಂಬಿರುವ ತತ್ತ್ವಗಳನ್ನು ಜೀರ್ಣಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಆದುದರಿಂದ ವೇದಗಳ ಸಾರವನ್ನು ನಿರೂಪಿಸುವ ಸದ್ಗ್ರಂಥಗಳ ಸೃಷ್ಟಿಯಾಗಬೇಕಾಗಿದೆ. ಅದಕ್ಕಾಗಿ ಶ್ರಮಿಸಬೇಕು.

ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ ।

— ಋಗ್ವೇದ

(ಪರಿಶ್ರಮವಿಲ್ಲದೆ ದೇವತಾಶಕ್ತಿಗಳ ಮೈತ್ರಿ ಸಾಧ್ಯವಿಲ್ಲ) ವೇದ ಉಚ್ಚ ಕಂಠದಿಂದ ಸಾರಿ ಹೇಳುತ್ತದೆ — ಕ್ರಿಯಾಶೀಲರಾಗಿ ಎಂದು.

ಸಂಗಚ್ಛಧ್ವಂ, ಸಂವದಧ್ವಂ, ಸಂವೋ ಮನಾಂಸಿ

– ಋಗ್ವೇದ

(ಒಗ್ಗಟ್ಟಾಗಿ ಮುನ್ನಡೆಯಿರಿ, ಒಗ್ಗಟ್ಟಿನಿಂದ ಮಾತನಾಡಿರಿ, ಏಕಮನಸ್ಕರಾಗಿ ಆದರ್ಶವನ್ನು ಕಾರ್ಯರೂಪಕ್ಕೆ ತನ್ನಿ) ಎಂಥ ನುಡಿಗಳಿವು! ಸಮಾಜ ವಿಕಾಸದ ಮೂಲ ಮಂತ್ರವನ್ನೇ ಈ ಮಿಂಚುನುಡಿಗಳು ಘೋಷಿಸುತ್ತವೆ.

"ಬ್ರಾಹ್ಮಣ್ಯವು ಜನ್ಮಜಾತ ಸ್ವತ್ತಲ್ಲ,ಅದು ಆದರ್ಶ ಮಾನವನ ಸಾಧನೆ"— ಎಂಬ ನುಡಿ ಎಲ್ಲರ ಹೃದಯವನ್ನೂ ಅರಳಿಸಬೇಕು. ಬ್ರಾಹ್ಮಣ್ಯವೇ ಜೀವನದ ಪರಮ ಆದರ್ಶ. ಅದನ್ನು ಸಾಧನೆಯಿಂದ ಪಡೆಯಬೇಕು. ಗಾಯತ್ರಿಯ ಅರ್ಥ, "ಸವಿತಾ ನಾಮಧಾರಿಯಾದ ವಿಶ್ವಕರ್ಮನ ಧೀಶಕ್ತಿಯನ್ನು ಧ್ಯಾನಿಸೋಣ. ಆತನು ನಮ್ಮಲ್ಲಿ ಧೀಶಕ್ತಿಯನ್ನು ಮೂಡಿಸಿ, ಮುನ್ನಡೆಸಲಿ"— ಎಂದು. ಈಶೋಪನಿಷತ್ತು ಮಾನವರನ್ನು ಜ್ಞಾನ ಹಾಗೂ ಕರ್ಮಸಿದ್ಧಿಗಳ ಕಡೆಗೆ ಕರೆದೊಯ್ಯುವ ದಿವ್ಯೋಪನಿಷತ್ತು. ಪ್ರಚಂಡ ಕ್ರಿಯಾಶಕ್ತಿ ನಮಗಿಂದು ಬೇಕಾಗಿದೆ - ಎಂಬುದೇ ಅದರ ಸಂದೇಶ.

ಸೃಷ್ಟಿಕರ್ತನಾದ ವಿಶ್ವಕರ್ಮನೆ ದಿವ್ಯ ಶಿಲ್ಪಿ. ಅವನ ಮಾನಸ ಪುತ್ರರೆ ಸಾನಗ, ಸನಾತನ, ಅಹಭೂನ, ಪ್ರತ್ನ ಮತ್ತು ಸುಪರ್ಣರು. ಅವರಿಂದಲೆ ವಿಶ್ವಬ್ರಾಹ್ಮಣರು ಜನಿಸಿದ್ದು. ವೈದಿಕ ಶಿಲ್ಪಿಗಳಲ್ಲಿ ವಿಶ್ವರೂಪ, ಋಭು, ವಿಭು, ವಾಜ, ಕಶ್ಯಪ – ಇವರು ಇತರ ಮುಖ್ಯ ಶಿಲ್ಪಿಗಳು. ವೇದಗಳಲ್ಲಿ ಬರುವ ಶಿಲ್ಪಿಗಳನ್ನೇ ಕುರಿತು ಬೃಹತ್ ಕೃತಿಯನ್ನು ರಚಿಸುವುದು ಅವಶ್ಯಕವಾಗಿದೆ. ಸಿಂಧೂ ಕಣಿವೆಯ ತ್ರಿಶೀರ್ಷ ಮೂರ್ತಿಯನ್ನು ಕುರಿತು ಸಾಕಷ್ಟು ಬೆಳಕನ್ನು ಇಲ್ಲಿಯ ಲೇಖನ ಬೀರಿದೆ. ಈ ವಿಚಾರವಾಗಿ ವಿದ್ವಾಂಸರ ದೃಷ್ಟಿಯನ್ನು ಸೆಳೆಯಬೇಕು.

ಶಿಲ್ಪಕ್ಕೂ ವೇದಕ್ಕೂ ಇರುವ ಸಂಬಂಧ ಅಪೂರ್ವವಾದುದು. ಪ್ರಾಚೀನ ಶಿಲ ಶಾಸ್ತ್ರಗಳ ಅಧ್ಯಯನ ತುಂಬ ಆವಶ್ಯಕ. ಈ ದಿಶೆಯಲ್ಲಿ ಹೆಚ್ಚು ಕೆಲಸ ವಾಗಬೇಕಾಗಿದೆ. ವಿಶ್ವಬ್ರಾಹ್ಮಣರಿಗೆ ಸೇರಿದ ಹಲವು ದೇವಾಲಯಗಳು ಜೀರ್ಣವಾಗಿವೆ. ಅವುಗಳ ಜೀರ್ಣೋದ್ಧಾರ ಕಾರ್ಯ ಆವಶ್ಯಕ. ವಿಶ್ವ ಬ್ರಾಹ್ಮಣರು ಭಾರತದ ಶಿಲ್ಪಕ್ಕಿತ್ತ ಅಪೂರ್ವ ಕಾಣಿಕೆಯನ್ನು ಕುರಿತು ಸಂಶೋಧನೆ ಆವಶ್ಯಕ. ಹಲವು ಉಲ್ಲೇಖಗಳು ಶಾಸನಗಳಲ್ಲಿ ದೊರಕುತ್ತವೆ. ಎಲ್ಲ ವನ್ನೂ ಸಂಗ್ರಹಿಸಿ, ಸಚಿತ್ರ ಗ್ರಂಥವನ್ನು ರಚಿಸಬೇಕಾಗಿದೆ.

ಮೌನೇಶ್ವರ, ಸಿದ್ದಪ್ಪಾಜಿ, ಚಾಂಗದೇವ, ಸಿದ್ಧಲಿಂಗ ಮಹಾರಾಜರು, ಪೋತಲೂರು ವೀರಬ್ರಹ್ಮೇಂದ್ರ ಸ್ವಾಮಿಗಳು, ಮೊದಲಾದ ವಿಶ್ವಬ್ರಾಹ್ಮಣ ಮಹಾಪುರುಷರನ್ನು ಐತಿಹಾಸಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಆವಶ್ಯಕತೆ ತುಂಬಾ ಇದೆ. ಈ ದಿಶೆಯಲ್ಲಿ ಸಂಶೋಧಕರು ಮಾಡಬಹುದಾದ ಕೆಲಸ ಅಮೂಲ್ಯ. ಅದಕ್ಕಾಗಿ ಹಲವು ವರ್ಷಗಳ ಸತತಾಭ್ಯಾಸ, ಸಂಶೋಧನೆಗಳಾಗ ಬೇಕಾಗಿದೆ.

ಬ್ರಹ್ಮಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರ ಜೀವನ, ಕಾರ್ಯ ಪ್ರಪಂಚ, ಸಾಧನೆ, ಸಿದ್ಧಿಗಳನ್ನು ಕುರಿತ ಹಲವು ಸಹೃದಯರ ಲೇಖನಗಳು ಶ್ರೀಮದಾಚಾರ್ಯರ ಜೀವನ ಪರಿಚಯಕ್ಕೆ ತುಂಬಾ ಸಹಾಯಕ. ಅವರವರು ಕಂಡಂತೆ ಮಹನೀಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅಮೂಲ್ಯ ವಾದುವು.

ಸಂಭಾವನಾ ಗ್ರಂಥಕ್ಕೆ ಲೇಖನಗಳನ್ನು ಸಂಗ್ರಹಿಸಿ ಅಚ್ಚು ಹಾಕಿಸುವ ಕೆಲಸ ಬಹು ಕಷ್ಟವಾದುದು. ಆ ಕೆಲಸವನ್ನು ನಿರ್ವಹಿಸಿದ ಧೀರರು ಶ್ರೀ ಜ್ಞಾನಾನಂದ ದಂಪತಿಗಳು. ಶ್ರೇಷ್ಠ ಕೃತಿಗಳ ಉಗಮಕ್ಕೆ ಈ ಆಚಾರ್ಯಾಭಿ ವಂದನೆ ನಾಂದಿ, ಮುಂಬರಲಿರುವ ಸಿದ್ಧಿಶೈಲದ ಬುನಾದಿ.

ಉ. ಕಾ. ಸುಬ್ಬರಾಯಾಚಾರ್, ಎಂ.ಎ.
ಅಧ್ಯಕ್ಷರು : ಶ್ರೀ 'ನಾ ಭಾ' ಸನ್ಮಾನ ಸಮಿತಿ

ಶ್ರೀ 'ನಾಭಾ' ಸನ್ಮಾನ ಸಮಿತಿ

ಕೃತಜ್ಞತಾಂಜಲಿ

ವೇದಬ್ರಹ್ಮಶ್ರೀ ನಾ.ಭಾ. ಚಂದ್ರಶೇಖರಾಚಾರ್ಯರು ಎಳೆಯ ಪ್ರಾಯ ದಿಂದಲೇ ವಿಶ್ವಬ್ರಾಹ್ಮಣ ಸಮಾಜ ಸೇವೆಯಲ್ಲಿ ಆಸಕ್ತರಾದವರು; ಸಮಾಜ ಸೇವಾಕಾರ್ಯಗಳಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಾ ಬಂದಿರುವವರು. ಅವರ ಸಮಾಜಸೇವೆ ಕಳೆದ ಐದು ದಶಕಗಳಿಂದಲೂ ಅವ್ಯಾಹತವಾಗಿ ಈ ಸಮಾಜಕ್ಕೆ ಸಂದಾಯವಾಗುತ್ತಾ ಬಂದಿದೆ. ಸಮಾಜದ ಎಲ್ಲಾ ಚಟುವಟಿಕೆ ಗಳಲ್ಲೂ ಅವರು ಭಾಗವಹಿಸದೆ ಅವಕ್ಕೆ ಪೂರ್ಣತೆಯೇ ಇಲ್ಲವೇನೋ ಎನ್ನುವಷ್ಟರಮಟ್ಟಿಗೆ ಅವರ ಪಾತ್ರ ಹೊಂದಿಕೊಂಡಿದೆ ವೈಶ್ವಕರ್ಮಣ ಸಾಹಿತ್ಯ ದಲ್ಲಿ ಶ್ರೀ ನಾ.ಭಾ. ಚಂದ್ರಶೇಖರಾಚಾರ್ಯರು ನಡೆಸಿರುವ ಕೃಷಿ ಅನನ್ಯ ವಾದುದು. ವೇದ ಚೋದಿತವಾದ ವಿಶ್ವಕರ್ಮ ತತ್ತ್ವವನ್ನು ಎಳೆ ಎಳೆಯಾಗಿ ಎಲ್ಲರೂ ಅರಿಯುವ ರೀತಿಯಲ್ಲಿ ತಿಳಿಯಾದ ಭಾಷೆಯಲ್ಲಿ ತಮ್ಮ ನಿರರ್ಗಳ ವಾಗ್ಝರಿಯಿಂದ ಅವರು ಇಂದಿಗೂ ಶ್ರೋತೃಗಳ ಹೃದಯಕುಹರವನ್ನು ಮುಟ್ಟುತ್ತಿದ್ದಾರೆ. ವೈಶ್ವಕರ್ಮಣ ಧರ್ಮ ಪ್ರಸಾರದ ವೈತಾಳಿಕರಲ್ಲಿ ಆಚಾರ್ಯರು ಅಗ್ರಮಾನ್ಯರು. ವಿಶ್ವಬ್ರಾಹ್ಮಣರ ಷೋಡಶ ಸಂಸ್ಕಾರಗಳ ನಿರ್ವಹಣೆಯಲ್ಲಿ ಆಚಾರ್‍ಯರು ಇಂದೂ ಅವರಿಗೆ ಮಾರ್ಗದರ್ಶನ ಮಾಡು ತ್ತಿದ್ದಾರೆ. ನಮ್ಮ ರಾಜಕೀಯ ಸಾಮಾಜಿಕ ಹಕ್ಕುಗಳಿಗಾಗಿ ಅವರು ಇಂದೂ ನಿರಂತರವಾಗಿ ತಮ್ಮ ಲೇಖನ-ಭಾಷಣಗಳ ಮೂಲಕ ಶ್ರೀ ಸಾಮಾನ್ಯರಲ್ಲಿ ತಿಳಿವನ್ನು ಬಿತ್ತುತ್ತಿದ್ದಾರೆ. ಲೌಕಿಕ ವಿದ್ಯಾ ಪಾರಂಗತತ್ವವನ್ನೂ, ವೇದ–ವೇದಾಂತಗಳ ಬಗ್ಗೆ ಬರೆಯುವಾಗ-ಮಾತನಾಡುವಾಗ ತಮ್ಮ ಗಹನ ಪಾಂಡಿತ್ಯ ವನ್ನೂ, ರಾಜಕೀಯ–ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸಿ ದಾರಿ ತೋರು ವಾಗ ತಮ್ಮ ಜಾಣಾಕ್ಷತೆಯನ್ನೂ ತೋರಿ ಅವರು ಎಲ್ಲರ ಮೆಚ್ಚಿಗೆ ಗೌರವ ಗಳನ್ನು ಗಳಿಸಿರುವ ಪ್ರತಿಭಾನ್ವಿತರು.

ಜೂನ್ ೨೨, ೧೯೧೦ (ಶ್ರೀ ಸಾಧಾರಣಸಂವತ್ಸರ ಜ್ಯೇಷ್ಠ ಶುದ್ಧ ಪೂರ್ಣಿಮಾ ಬುಧವಾರ ಮಧ್ಯಾಹ್ನ ೧೨-೩೦ ಘಂಟೆ) ನಾಗಮಂಗಲದ ಯಜಮಾನ್ ಭಾಸ್ಕರಾಚಾರ್ಯ ದಂಪತಿಗಳಿಗೆ ಜನಿಸಿದ ಆಚಾರ್ಯರು ತಮ್ಮ ಎಳೆಯ ಪ್ರಾಯದಲ್ಲಿಯೇ ಸಮಾಜ ಸೇವಾ ಚಟುವಟಿಕೆಗಳಲ್ಲಿ ಅರ್ಪಿತರಾಗಿ ಸಮಾಜೋನ್ನತಿಗಾಗಿ ದುಡಿಯುತ್ತಿದ್ದ ಬಿ. ಜಿ. ಶಂಕರಯ್ಯ, ತರಿಕೆರೆ ಶಾಮಣ್ಣ, ಮ. ಗಂಗಾಧರಮೂರ್ತಿ ಮುಂತಾದ ಮಹನೀಯರ ಪ್ರಭಾವಕ್ಕೆ ಸಿಲುಕಿ, ಸಮಾಜ ಸೇವೆಯನ್ನೇ ತಮ್ಮ ಜೀವನದ ಆದರ್ಶವನ್ನಾಗಿಸಿಕೊಂಡು, ಕಳೆದ ಐದು ದಶಕಗಳಿಂದಲೂ ಏಕ ಪ್ರಕಾರವಾಗಿ ಸಮಾಜ ಸೇವೆಯಲ್ಲಿಯೇ ನಿರತರಾಗಿರುವ ಆಚಾರ್ಯರು ಸಾಹಿತ್ಯವಿದರು. ಅನೇಕ ಲೇಖನ, ಹೊತ್ತಗೆ ಗಳನ್ನು ಪ್ರಕಟಿಸಿರುವವರು. ಸಂಪ್ರದಾಯಸ್ಥರಾದರೂ ಆಧುನಿಕ ವಿಚಾರ ಗಳನ್ನು ಮಾನ್ಯಮಾಡಿ ಹೊಸ ಸಂಗತಿಗಳನ್ನು ಗೌರವಿಸುವವರು. ತಮ್ಮ ಪಾಂಡಿತ್ಯ–ಸಹೃದಯತೆಗಳಿಂದ, ಸಮಾಜ ಪ್ರೇಮ–ಸಮರ್ಪಣಾಭಾವಗಳಿಂದ ನೆರೆನಾಡಿನ ವಿದ್ವಾಂಸರಿಗೂ, ಸಮಾಜ ಸೇವಕರಿಗೂ ಆತ್ಮೀಯರಾಗಿರುವ ಸ್ನೇಹ ಶೀಲರು. ವಿದ್ವತ್ತನ್ನು ಸದಾ ಗೌರವಿಸಿ ಪ್ರೇಮಿಸುವವರು.

ಈ ರೀತಿಯ ವಿಶಿಷ್ಟ ವ್ಯಕ್ತಿತ್ವದ ಆಚಾರ್ಯರು ಯಾವುದೇ ಸಮಾಜ ಕ್ಕಾದರೂ ಭೂಷಣ ಪ್ರಾಯರೇ. ಅವರನ್ನು ಮಂಡ್ಯದ ಸಮಾಜದವರು **ವಿದ್ಯಾಭೂಷಣ** ಎಂದೂ, ಮಂಗಳೂರಿನವರು **ವಿಶ್ವಕರ್ಮ ಜ್ಞಾನಧುರೀಣ** ಎಂದೂ ಶಹಪುರದ ಏಕದಂಡಿಗಿ ವಿಶ್ವಕರ್ಮ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ದೇವೇಂದ್ರ ಮಹಾಸ್ವಾಮಿಗಳು **ವಿದ್ಯಾಲಂಕಾರ** ಎಂದೂ, ಆಂಧ್ರದ ವಿಶ್ವ ಬ್ರಾಹ್ಮಣ ಧರ್ಮಪೀಠವು **ಅಧ್ವರ್ಯು ಶಿರೋಮಣಿ** ಎಂದೂ ಈಗಾಗಲೇ ಹಲವು ಬಿರುದುಗಳಿಂದ ಸನ್ಮಾನಿಸಿರುವರು. ಶ್ರೀಮದಾಚಾರ್ಯರು ತಮ್ಮ ಎಪ್ಪತ್ತೊಂದನೆಯ ವಯಸ್ಸಿನಲ್ಲಿ ಅಡಿ ಇರಿಸುತ್ತಾರೆ. ಜೂನ್ ೨೮, ೧೯೮೦ ರಂದು ಭೀಮರಥ ಶಾಂತಿ ಆಚರಿಸಲಿದ್ದಾರೆ ಎಂಬುದನ್ನು ಅರಿತ ಹಲವು ಅಭಿಮಾನಿಗಳು ಬೆಂಗಳೂರಿನಲ್ಲಿ ಮಾರ್ಚ್ ೨೮, ೧೯೮೦ ರಂದು ಸಭೆ ಸೇರಿ ಆಚಾರ್ಯರನ್ನು ಸನ್ಮಾನಿಸಬೇಕೆಂದು, ಆ ಸಂದರ್ಭದಲ್ಲಿ ಒಂದು ಸಂಭಾವನ್ನ ಗ್ರಂಥವನ್ನು ಅವರಿಗೆ ಅರ್ಪಿಸಬೇಕೆಂದು ತೀರ್ಮಾನಿಸಿ ಈ ಕರ್ತವ್ಯವನು

ನೆರವೇರಿಸಲು ದಾನಿಗಳು, ಸದಸ್ಯರನ್ನು ಸಂಗ್ರಹಿಸಿ ಕಾರ್ಯನಿರತನಾಗಲು ಶ್ರೀ 'ನಾಭಾ' ಸನ್ಮಾನ ಸಮಿತಿ ಏರ್ಪಾಟಾಯಿತು. ಪ್ರೊ. ಉ.ಕಾ. ಸುಬ್ಬರಾಯಾಚಾರ್ಯ ಅವರು ಸಮಿತಿಯ ಅಧ್ಯಕ್ಷರಾಗಿದ್ದು ಆದರ್ಶವಾದ ರೀತಿಯಲ್ಲಿ ಕೆಲಸ ಮಾಡುವಂತೆ ದಾರಿ ತೋರಿ ಉಪಕರಿಸಿದ್ದಾರೆ. ಶ್ರೀ ಕೆ. ಸಿ. ಕಾಳಾಚಾರ್ಯ ಅವರು ಉಪಾಧ್ಯಕ್ಷರಾಗಿ ಅವಿರತ ಶ್ರಮದಿಂದ ಯೋಜಿತ ಕಾರ್ಯಗಳು ಕೈಗೂಡಲು ನೆರವಾಗಿದ್ದಾರೆ. ಖಜಾಂಚಿಗಳಾಗಿ ಶ್ರೀ ಕೆ. ವಾಸುದೇವಾಚಾರ್ಯರು ಸಮಿತಿಯು ಆರ್ಥಿಕವಾಗಿ ಬಲಗೊಳ್ಳಲು ತುಂಬಾ ಶ್ರಮವಹಿಸಿದ್ದಾರೆ.

ಸಮಿತಿಯು ಕೇವಲ ಕರ್ನಾಟಕಕ್ಕೆ ಸೀಮಿತಗೊಳ್ಳದೆ ನೆರೆನಾಡುಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಮತ್ತು ಕೇರಳಗಳಲ್ಲೂ ವ್ಯಾಪಿಸಿ, ಅಲ್ಲಿಯ ಪ್ರಮುಖರ ನೆರವನ್ನೂ ಪಡೆದು ಅಲ್ಲಿಯ ವಿಶ್ವಬ್ರಾಹ್ಮಣ ಬಂಧುಗಳನ್ನೂ ತನ್ನ ಪರಿಧಿಯಲ್ಲಿ ಅಡಗಿಸಿಕೊಂಡು ವೈಶಿಷ್ಟ್ಯಪೂರ್ಣವಾಗಿ ಬೆಳಗಿದೆ. ಆದ್ದರಿಂದ ಇದೊಂದು ರೀತಿಯಲ್ಲಿ ದಕ್ಷಿಣ ಭಾರತದ ವಿಶ್ವಬ್ರಾಹ್ಮಣ ಸಮಾಜ ಅರ್ಪಿಸುತ್ತಿರುವ ಗೌರವ. ಈ ಕಾರ್ಯಕ್ರಮದಲ್ಲಿ ಉತ್ಸಾಹ ತೋರಿ ನೆರವಾದ ಮಹನೀಯರು ಅನೇಕರು. ಅವರ ಅಕ್ಕರೆಯ ಆಸರೆಯಿಂದ ವಿದ್ವತ್ಸನ್ಮಾನದ ಈ ಕಾರ್ಯ ಇಷ್ಟು ವೈಶಿಷ್ಟ್ಯಪೂರ್ಣವಾಗಿ ಸಾಗುತ್ತಿದೆ.

ಅಲ್ಪಾವಧಿಯಲ್ಲಿಯೇ ಬೃಹತ್ತರವಾದ ಈ ಕಾರ್ಯ ನೆರವೇರಲು ಆಸರೆಯಾಗಿ ನಿಂತು, ಆಚಾರ್ಯರಿಗೆ ಅಭೂತಪೂರ್ವ ಗೌರವ ಸಲ್ಲಿಸುವುದರಲ್ಲಿ ನೆರವಾದ ಎಲ್ಲಾ ದಾನಿಗಳಿಗೂ, ಸದಸ್ಯರಿಗೂ, ಕಾರ್ಯಕಾರಿ ಮಂಡಲಿಯವರಿಗೂ ಕೃತಜ್ಞತೆಗಳು. ಈ ರೀತಿಯಲ್ಲಿ ಸಮಾಜ ಸೇವೆಯನ್ನು, ಸಾಹಿತ್ಯ ಸೇವೆಯನ್ನು, ನಿಷ್ಕಾಮಕರ್ಮಯೋಗವನ್ನಾಗಿ ಮೈಗೂಡಿಸಿಕೊಂಡು ಸಾಗಿಸುತ್ತಿರುವ ಆಚಾರ್ಯರಿಗೆ **ಆಚಾರ್ಯಾಭಿವಂದನೆ** ಅರ್ಪಿಸಲು ನೆರವಾದವರಿಗೆಲ್ಲಾ ಸರ್ವಶಕ್ತನಾದ ಶ್ರೀ ವಿಶ್ವಕರ್ಮ ಪರಮೇಶ್ವರನು ಸಕಲ ಸನ್ಮಂಗಳಗಳನ್ನು ಕರುಣಿಸಲಿ.

ಕಾರ್ಯದರ್ಶಿ,
ಶ್ರೀ 'ನಾಭಾ' ಸನ್ಮಾನ ಸಮಿತಿ

'ಆಚಾರ್ಯಾಭಿನಂದನೆ'

ಸಂಪಾದಕರ ನುಡಿ

ಕನ್ನಡ ಸಾಹಿತ್ಯದಲ್ಲಿ ಸಂಭಾವನಾಗ್ರಂಥಗಳ ಸಿರಿ ಸಂಮೃದ್ಧವಾಗಿಯೇ ಇದೆ. ಅವುಗಳಲ್ಲಿ ಹಲವು ಸರ್ವಕಾಲಿಕ ಮೌಲ್ಯವನ್ನು ಹೊಂದಿದ್ದು ತಿಳಿವಿನ ದೀವಿಗೆಗಳಾಗಿ ವಿದ್ವಾಂಸರ ಮೆಚ್ಚಿಗೆಗೆ ಪಾತ್ರವಾಗಿವೆ. ವಿದ್ವಾಂಸರನ್ನು ಈ ರೀತಿಯ ವಿದ್ವತ್ ಸಮಾರಾಧನೆಯಿಂದ ಸತ್ಕರಿಸಿ ಗೌರವಿಸುವುದು, ತನ್ಮೂಲಕ ಸಾಹಿತ್ಯವನ್ನು ಸಿರಿಗೊಳಿಸಿ ತಿಳಿವಿನ ಅನ್ವೇಷಕರ ಜ್ಞಾನ ದಿಗಂತವನ್ನು ವಿಸ್ತಾರಗೊಳಿಸುವುದು ಒಂದು ಸತ್ಸಂಪ್ರದಾಯ. ಜ್ಞಾನದೇವಿಯ ಆರಾಧಕರಾಗಿರುವ ಶ್ರೀ ನಾ.ಭಾ. ಚಂದ್ರಶೇಖರಾಚಾರ್ಯ ಅವರಿಗೆ ಅವರ ಎಪ್ಪತ್ತೊಂದನೆಯ ಹುಟ್ಟು ವರ್ಷದಲ್ಲಿ ಈ ರೀತಿಯ ವಿದ್ವತ್ಪೂರ್ಣ ಸಂಪುಟವೊಂದನ್ನು ಅರ್ಪಿಸಿ ಅವರ ಜ್ಞಾನ ಯಜ್ಞ, ಸೇವಾದೀಕ್ಷೆ, ಸಮಾಜಸೇವೆ, ಕರ್ಮಯೋಗಗಳ ಬಾಳನ್ನು ನಾವು ಅಭಿವಂದಿಸುವ ಸೌಭಾಗ್ಯ ದೊರತದ್ದು ಸಮಾಜದ ಪುಣ್ಯ. ತಮ್ಮ ಬಾಳಿನ ಅಂಗವಾಗಿ ಅವರು ರೂಢಿಸಿಕೊಂಡು ಬಂದಿರುವ ಜ್ಞಾನ ಪ್ರಸಾರಕ್ಕೆ ಈ ಸಂಪುಟ ನೆರವಾಗುವುದು ಅವರಿಗೆ ಸಂತೋಷ ತರುವ ಅಂಶವೆಂದು ಶ್ರೀ 'ನಾಭಾ' ಸನ್ಮಾನ ಸಮಿತಿಯವರು ಸಂಭಾವನಾ ಗ್ರಂಥವನ್ನು ಸಂಪಾದಿಸುವ ಹೊಣೆಯನ್ನು ನಮಗೆ ವಹಿಸಿದರು.

ಲೇಖನಗಳ ಸಂಪಾದನೆಗೆ ಇದ್ದ ಕಾಲವು ಅಲ್ಪವಾಗಿದ್ದರೂ ಹಿರಿಯ ವಿದ್ವಾಂಸರು ವಿಶ್ವಾಸದಿಂದ ಸಹಕರಿಸಿ, ತಮ್ಮ ಲೇಖನಗಳನ್ನು ಇತ್ತು ನೆರವಾಗಿದ್ದಾರೆ. ಅವರ ಸಹಕಾರವೇ ಆಚಾರ್ಯಾಭಿವಂದನೆಯ ಮೌಲ್ಯಕ್ಕೆ ಕಾರಣವಾಗಿದೆ. ಕೆಲವು ಲೇಖನಗಳನ್ನು ಸಂಸ್ಕೃತ, ಇಂಗ್ಲೀಷ್, ತೆಲುಗು ಭಾಷೆಗಳಿಂದ ಆಯ್ಕೆಮಾಡಿ / ಆಹ್ವಾನಿಸಿ ಅನುವಾದಿಸಲಾಗಿದೆ. ಅನುವಾದಕರ ಹೆಸರು ಅನುಕ್ತವಾದ ಅನುವಾದಗಳು ಸಂಪಾದಕರವು. ಮತ್ತೆ ಕೆಲವನ್ನು ಕನ್ನಡದ ಕೃತಿಗಳಿಂದಲೇ ಆಯ್ಕೆ ಮಾಡಲಾಗಿದೆ. ಅನುವಾದಕ್ಕೆ, ಆಯ್ಕೆಗೆ

ಅಪ್ಪಣೆ ನೀಡಿರುವ ಆಯಾ ಲೇಖಕರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಅತ್ಯಲ್ಪಕಾಲಾವಧಿಯಲ್ಲಿಯೇ ತಮ್ಮ ಲೇಖನಗಳನ್ನು ಕಳುಹಿಸಿ ಸಹಕರಿಸಿದ ವಿದ್ವಾಂಸರಿಗೆಲ್ಲಾ ನಮನ.

ಅತ್ಯಂತ ಪ್ರಾಚೀನ ಪರಂಪರೆಯನ್ನು ಪಡೆದು ಭಾರತೀಯ ಸಂಸ್ಕೃತಿಯಲ್ಲಿ ವೈಶಿಷ್ಟ್ಯಪೂರ್ಣ ಕೊಡುಗೆಗಳನ್ನು ನೀಡಿರುವ ವಿಶ್ವಬ್ರಾಹ್ಮಣರ ಬಗ್ಗೆ ತಿಳಿವನ್ನು ನೀಡುವ ಹೊತ್ತಗೆಗಳು ಕನ್ನಡದಲ್ಲಿ ವಿರಳ. ಈ ಕೃತಿಯು ಆ ದಿಶೆಯಲ್ಲಿ ಓದುಗರ ಜ್ಞಾನ ಸಂವರ್ಧನೆಗೆ ನೆರವಾಗಿ ಅವರ ಆಸಕ್ತಿಯನ್ನು ಸೆಳೆಯಲು ಸಮರ್ಥವಾದರೆ, ನಾವು ಸಮರ್ಪಿಸುತ್ತಿರುವ **ಆಚಾರ್ಯಾಭಿವಂದನೆ** ನಾಲ್ಕು ಕಾಲ ಅರಿವು-ತಿಳಿವುಗಳನ್ನು ಬೆಳಿಸುವ ಹೊತ್ತಗೆಯಾಗಿ ಕನ್ನಡ ಸಾಹಿತ್ಯದಲ್ಲಿ ಉಳಿದು ಬಂದರೆ. ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇವೆ.

ಈ ಕೃತಿಗೆ **ಅಭಿವಾದನೆ**ಯನ್ನು ಬರೆದಿರುವ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರಿಗೂ, **ಅಧ್ಯಕ್ಷವಾಣಿ**ಯನ್ನು ಬರೆದಿರುವ ಪ್ರೊ. ಉ.ಕಾ. ಸುಬ್ಬರಾಯಾಚಾರ್ ಅವರಿಗೂ ನಮ್ಮ ನಮನ.

ಹಿರಿಯ ವಿದ್ವಾಂಸರಿಗೆ ಸಲ್ಲಿಸುತ್ತಿರುವ ಗೌರವದಲ್ಲಿ ನಮ್ಮ ಸೇವೆ ಸಲ್ಲಿಸಲು ಅನುವು ಮಾಡಿಕೊಟ್ಟ ಶ್ರೀ 'ನಾಭಾ' ಸನ್ಮಾನ ಸಮಿತಿಯವರಿಗೂ, ಅಚ್ಚಿನ ಕೆಲಸವನ್ನು ನಿರ್ವಹಿಸಿಕೊಟ್ಟ ದವಲತ್ ಪ್ರಿಂಟರ್ಸ್‌ನ ಶ್ರೀ ಡಿ. ಎಸ್. ಜೆ. ಗುಪ್ತ ಅವರಿಗೂ ನಮ್ಮ ಕೃತಜ್ಞತೆಗಳು.

೨-೧೬೩, ಬಿಇಎಂಎಲ್ ನಗರ | **ಜಿ. ಜ್ಞಾನಾನಂದ**, ಎಂ.ಎ.,
ಕೆಜಿಎಫ್ ೫೬೩ ೧೧೫ | **ಸರಿತಾ ಜ್ಞಾನಾನಂದ**, ಬಿ.ಎ.,ಬಿಎಡ್.,

ಆಚಾರ್ಯಾಭಿವಂದನೆ



ಶ್ರೀ ನಾ.ಭಾ. ಚಂದ್ರಶೇಖರಾಚಾರ್ಯ ಅವರ ಜೀವನ ವಿವರಗಳು

ಜನನ : ಶ್ರೀ ಸಾಧಾರಣ ಸಂವತ್ಸರ ಜ್ಯೇಷ್ಠ ಶುದ್ಧ ಪೂರ್ಣಿಮಾ ಬುಧವಾರ ಮಧ್ಯಾಹ್ನ ೧೨–೩೦ ಘಂಟೆ [ತಾರೀಕು ಜೂನ್ ೨೨, ೧೯೧೦]

ತಂದೆ : ಯಜಮಾನ್ ಭಾಸ್ಕರಾಚಾರ್ಯರು ತಾಯಿ : ಗೌರಮ್ಮನವರು

ಗೋತ್ರ : ಸಾನಗಸ

ಸ್ಥಳ : ನಾಗಮಂಗಲ (ಮಂಡ್ಯ ಜಿಲ್ಲೆ)

ವಿದ್ಯಾಭ್ಯಾಸ : ಇಂಟರ್‌ಮೀಡಿಯಟ್ (ಮೈಸೂರಿನಲ್ಲಿ)

ಉದ್ಯೋಗ : ನ್ಯಾಯಾಂಗ ಇಲಾಖೆ [ಸೇರಿದ್ದು ಶ್ರೀರಂಗಪಟ್ಟಣದಲ್ಲಿ ೧೯೨೯ ಮಾರ್ಚ್ ೧೯. ನಿವೃತ್ತರಾದದ್ದು ೧೯೬೫ ಜೂನ್ ೨೨ ರಂದು]

ಪ್ರಶಸ್ತಿಗಳು : ಮಂಡ್ಯದ ಸಮಾಜದವರಿಂದ ‘ವಿದ್ಯಾಭೂಷಣ’, ಮಂಗಳೂರಿನ ಸಮಾಜದವರಿಂದ ‘ವಿಶ್ವಕರ್ಮ ಜ್ಞಾನಧುರೀಣ’, ವಿಶ್ವ ಬ್ರಾಹ್ಮಣ ಧರ್ಮ ಪೀಠಂ ನೂಜಿವೀಡು ಇವರಿಂದ ‘ಅಧ್ವರ್ಯು ಶಿರೋಮಣಿ’, ಶ್ರೀ ಶ್ರೀ ಶ್ರೀ ದೇವೇಂದ್ರ ಮಹಾಸ್ವಾಮಿಗಳು ಪೀಠಾಧ್ಯಕ್ಷರು ವಿಶ್ವಕರ್ಮ ಏಕದಂಡಿಗಿ ಮಠ ಶಹಪುರ ಇವರಿಂದ ‘ವಿದ್ಯಾಲಂಕಾರ’

ವಿವಾಹ : ೧೯೩೪

ಪತ್ನಿ : ಶ್ರೀಮತಿ ಸಾವಿತ್ರಮ್ಮ

ಮಕ್ಕಳು : ಸದ್ಯೋಜಾತ ಮೂರ್ತಿ ಎಂ.ಎ., ಛಾಯಾಪತಿ, ಬಿ.ಇ., ಮನುಪ್ರಭಾ, ಭಾಗ್ಯಶ್ರೀ ಬಿ.ಎ., ಯೋಗೇಶ್ವರಿ ಬಿ.ಎ.,

ಪ್ರಸ್ತುತವಿಳಾಸ : ೫೬೮, ೪೩ನೇ ಕ್ರಾಸು, ೮ನೇ ಬ್ಲಾಕು, ಜಯನಗರ ಬೆಂಗಳೂರು ೫೬೦ ೦೪೧.

ಓಂ ತತ್ ಸವಿತುರ್ ವರೇಣ್ಯಂ ||
ಭರ್ಗೋ ದೇವಸ್ಯ ಧೀಮಹಿ |
ಧಿಯೋ ಯೋ ನಃ ಪ್ರಚೋದಯಾತ್ ||



— ಡಾ|| ಡಿ. ವಿ. ಜಿ.



ಆಚಾರ್ಯಾಯ ಪ್ರಿಯಂ ಧನಮಾಹೃತ್ಯ

ಪ್ರಥಮಾವರಣ

— ವೇದಾಂಕ

೧

ಪ್ರೊ. ಜಿ. ಎಸ್. ಚಕ್ರವರ್ತಿ, ಎಂ.ಎ.,

ಋಗ್ವೇದೀಯ ವಿಶ್ವಕರ್ಮ ಸೂಕ್ತ

ದಶಮ ಮಂಡಲ: ಸೂಕ್ತ ೮೧

ಋಷಿಃ : ವಿಶ್ವಕರ್ಮಾ ಭೌವನಃ, ದೇವತಾ : ವಿಶ್ವಕರ್ಮಾ, ಛಂದಃ : ತ್ರಿಷ್ಟುಪ್; ವಿರಾಡ್ರೂಪಾ.

ಯ ಇಮಾ ವಿಶ್ವಾ ಭುವನಾನಿ ಜುಹ್ವ
ದೃಷಿರ್ಹೋತಾ ನ್ಯಸೀದತ್ಪಿತಾ ನಃ ।
ಸ ಆಶಿಷಾ ದ್ರವಿಣಮಿಚ್ಛಮಾನಃ
ಪ್ರಥಮಚ್ಛದವರಾ ಆ ವಿವೇಶ ॥ ೧ ॥

ಋಷಿಃ – ಸರ್ವಜ್ಞನೂ। ಹೋತಾ – ಹೋಮ ಸಂಪಾದಕನೂ ಆದ। ಯಃ – ಯಾವ ವಿಶ್ವಕರ್ಮನು। ವಿಶ್ವಾ – ಸಕಲವಾದ। ಇಮಾ ಭುವನಾನಿ – ಈ ಲೋಕಗಳನ್ನೆಲ್ಲ । ಜುಹ್ವತ್ – ಆಹುತಿ ರೂಪದಲ್ಲಿ ಅರ್ಪಿಸಿ। ನ್ಯಸೀದತ್ – ತನ್ನ ದಿವ್ಯ ಸ್ಥಾನದಲ್ಲಿ ಕುಳಿತನೋ। ಸಃ – ಅಂಥ। ನಃ ಪಿತಾ – ನಮಗೆಲ್ಲ ಉತ್ಪಾದಕನೂ ಪಾಲಕನೂ ಆದ ವಿಶ್ವಕರ್ಮನು। ಆಶಿಷಾ – ತನ್ನ ಸಂಕಲ್ಪ ಪೂರ್ವಕವಾದ। ದ್ರವಿಣಂ – ಧನವನ್ನು। ಇಚ್ಛಮಾನಃ – ಅಪೇಕ್ಷಿಸಿಯೂ। ಪ್ರಥಮಚ್ಛತ್ – ಮೊದಲು ಎಲ್ಲವನ್ನೂ (ಅಗ್ನಿರೂಪದಲ್ಲಿ) ವ್ಯಾಪಿಸಿಯೂ। ಅವರಾನ್ – ತನ್ನಿಂದ ಉತ್ಪನ್ನವಾದ ಸಕಲ ಭೂತಗಳನ್ನೂ। ಆ ವಿವೇಶ – ಪ್ರವೇಶಿಸಿದನು।

[1]ಈ ಮಂತ್ರದಲ್ಲಿ ವಿಶ್ವಕರ್ಮನ ನಾಲ್ಕು ಅವಸ್ಥೆಗಳು ವರ್ಣಿತವಾಗಿವೆ.

೧. ವಿಶ್ವಕರ್ಮನು ಸಕಲ ವಿಶ್ವವನ್ನೂ ಯಜ್ಞಾಹುತಿಯಲ್ಲಿ ಅರ್ಪಿಸಿದನು ಎಂದರೆ, ಪ್ರಳಯರೂಪವಾದ ಕ್ರಿಯೆ.

೨. ಪುನಃ ಜಗತನ್ನು ಸೃಜಿಸಬೇಕೆಂಬ ಇಚ್ಛೆ.

೩. ಸೃಷ್ಟಿಗೆ ಪೂರ್ವ ನಿಷ್ಪ್ರಪಂಚವೂ ಪಾರಮಾರ್ಥಿಕವೂ ಆದ ರೂಪವನ್ನು ಹೊಂದಿರುವುದು.

೪. ತನ್ನ ಇಚ್ಛೆಯಿಂದಲೇ ಸೃಷ್ಟವಾದ ಸಕಲ ಭೂತಗಳ ಹೃದಯದಲ್ಲೂ ಪ್ರವೇಶಿಸಿ ಸರ್ವಾಂತರ್ಯಾಮಿಯಾಗಿರುವುದು.

ಇಲ್ಲಿ ಇನ್ನೊಂದು ವಿಷಯ ಗಮನಾರ್ಹ. ಸೃಷ್ಟ್ಯಾದಿ ಕಾರ್ಯಗಳಲ್ಲಿ ಪ್ರಥಮತಃ ಸೃಷ್ಟಿಯು ವರ್ಣಿತವಾಗಿಲ್ಲ. ಮೊದಲು ಪ್ರಳಯ ರೂಪವಾದ ಕ್ರಿಯೆ. ಅನಂತರ ಸೃಷ್ಟಿಯ ಇಚ್ಛೆ. ತದನಂತರ ಸೃಷ್ಟಿ, ಮತ್ತು ಸೃಷ್ಟವಾದ ಜಗತ್ತಿನಲ್ಲಿ ತನ್ನ ವ್ಯಾಪಕತ್ವ.

ಸರ್ವಮೇಧ ಯಾಗದಲ್ಲಿ ಸಕಲ ಭೂತಗಳನ್ನೂ ಆಹುತಿರೂಪದಲ್ಲಿ ಅರ್ಪಿಸಿ ಕೊನೆಗೆ ತನ್ನನ್ನು ಆಹುತಿರೂಪದಲ್ಲಿ ಅರ್ಪಿಸಿದ ವಿಷಯವೇ ಯ ಇಮಾ ವಿಶ್ವಾ ಎಂಬ ಈ ಮಂತ್ರದಲ್ಲಿ ಪ್ರಶಂಸಿತವಾಗಿದೆ. ಇಲ್ಲಿ ಯಜ್ಞವೇ ಸಕಲ ಭೂತಗಳನ್ನೂ ಭುಜಿಸಿರುವುದರಿಂದ ಅದಕ್ಕೆ ಭುಜ್ಯು ಎಂದು ಹೆಸರು. ಯಜ್ಞರೂಪಿಯಾದ ಪ್ರಜಾಪತಿಯೇ ಭುಜ್ಯು.

ಲಯದನಂತರ ಈಶ್ವರನು ನಿತ್ಯವಾಗಿ ಅದ್ವಿತೀಯನಾಗಿರಲು ಸಾಧ್ಯವಿಲ್ಲ. ಸದ್ವಿತೀಯನಾಗಲು ಅವನಲ್ಲೂ ಕಾಮವು ಉದ್ಭವಿಸುತ್ತದೆ. ಅದನ್ನೇ ಪ್ರಕೃತವಾದ ಮಂತ್ರದಲ್ಲಿ ಆಶಿಷಾ ದ್ರವಿಣಮಿಚ್ಛಮಾನಃ ಎಂದಿದೆ (ಸ ಪ್ರಜಾಪತಿರೇಕಃ ಪುಷ್ಕರಪರ್ಣೇ ಸಮಭವತ್ ತಸ್ಯಾಂತರ್ಮನಸಿ ಕಾಮಸ್ಸಮವರ್ತತ | ಇದಗ್ಂ ಸೃಜೇಯಮಿತಿ–ತೈ ಆ. ೧ : ೨೩ : ೧). ಅದೇ ಸಂಕಲ್ಪದಂತೆ ಜಗತ್ತನ್ನು ನಿರ್ಮಿಸಿ (ತತೋಽರುಣಾಃ ಕೇತವೋ ವಾತರಶನಾ ಋಷಯ ಉದತಿಷ್ಠನ್......ತೈ. ಆ. ೧ : ೨೩ : ೨) ತನ್ನಿಂದಲೇ ನಿರ್ಮಿತವಾದ ಸಕಲ ಭೂತಗಳಲ್ಲೂ ತಾನೇ ಪ್ರವೇಶಿಸಿದನು (ತತ್ಸೃಷ್ಟ್ವಾ ತದೇವಾನುಪ್ರಾವಿಶತ್ | ತದನುಪ್ರವಿಶ್ಯ | ಸಚ್ಚತ್ಯಚ್ಚಾಭವತ್... ತೈ ಉ ೨ : ೬).

ಸರ್ವಜ್ಞನೂ, ಹೋಮ ಸಂಪಾದಕನೂ ಆದ ಯಾವ ವಿಶ್ವಕರ್ಮನು ಸಕಲ ಲೋಕಗಳನ್ನೂ ಆಹುತಿ ರೂಪದಲ್ಲಿ ಅರ್ಪಿಸಿ ತನ್ನ ದಿವ್ಯ ಸ್ಥಾನದಲ್ಲಿ ಕುಳಿತನೋ, ಅಂಥ ಜಗತ್ಪಾಲಕನಾದ ವಿಶ್ವಕರ್ಮನು ತನ್ನ ಸಂಕಲ್ಪ ಪೂರ್ವಕ

ವಾದ ಧನವನ್ನಪೇಕ್ಷಿಸಿಯೂ ಪ್ರಥಮದಲ್ಲಿ ಸರ್ವವನ್ನೂ ಅಗ್ನಿರೂಪದಲ್ಲಿ ವ್ಯಾಪಿಸಿಯೂ ಸಕಲ ಭೂತಗಳನ್ನೂ ಪ್ರವೇಶಿಸಿದನು.

ಕಿಂ ಸ್ವಿದಾಸೀದಧಿಷ್ಠಾನಮಾರಮ್ಭಣಂ
ಕತಮತ್ಸ್ವಿತ್ಕಥಾಸೀತ್ ।
ಯತೋ ಭೂಮಿಂ ಜನಯನ್ವಿಶ್ವಕರ್ಮಾ
ವಿ ದ್ಯಾಮೌರ್ಣೋನ್ಮಹಿನಾ ವಿಶ್ವಚಕ್ಷಾಃ ॥ ೨ ॥

ಯತಃ – ಯಾವ ಉಪಾದಾನ (ಮೂಲ) ಕಾರಣಗಳಿಂದ। ವಿಶ್ವಚಕ್ಷಾಃ– ಸಕಲವನ್ನೂ ನೋಡಬಲ್ಲ। ವಿಶ್ವಕರ್ಮಾ - ಲೋಕೇಶ್ವರನು। ಭೂಮಿಂ – ಭೂಮಿಯನ್ನು। ಜನಯನ್ – ಉತ್ಪನ್ನ ಮಾಡುತ್ತ। ಮಹಿನಾ - ತನ್ನ ಮಹಾತ್ಮ್ಯದಿಂದ। ದ್ಯಾಂ–ದ್ಯುಲೋಕವನ್ನೂ। ವ್ಯೌರ್ಣೋತ್-ನಿರ್ಮಿಸಿದನೋ ಅಂಥ ಅಧಿಷ್ಠಾನಂ – ಈ ಲೋಕ ನಿರ್ಮಾಣಕ್ಕೆ ಆಧಾರವು। ಕಿಂ ಸ್ವಿತ್ ಆಸೀತ್ – ಯಾವುದಿದ್ದಿತು। ಆರಂಭಣಂ – ಉತ್ಪಾದನಕ್ಕೆ ಮೂಲಕಾರಣವು। ಕತಮತ್ ಸ್ವಿತ್ – ಯಾವುದಾಗಿದ್ದಿತು?। ಕಥಾ ಆಸೀತ್ – ಯಾವ ಪ್ರಕಾರವಾಗಿದ್ದಿತು[2]।

2. ಈಶ್ವರನಿಂದ (ಪ್ರಜಾಪತಿ–ವಿಶ್ವಕರ್ಮ ಇವೆಲ್ಲ ಪರ್ಯಾಯಪದಗಳು) ನಿರ್ಮಿತವಾದ ಜಗತ್ತಿನ ಸೃಷ್ಟಿಯನ್ನು ಲೌಕಿಕ ದೃಷ್ಟಿಯಿಂದ ಪರಿಶೀಲಿಸಿದರೆ ಒಂದು ಪ್ರಶ್ನೆ ಸಹಜ. ಪ್ರಳಯರೂಪವಾದ ಯಜ್ಞದ ನಂತರ ಈಶ್ವರನು ಒಬ್ಬನೇ ಉಳಿಯುತ್ತಾನೆ. (ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ । ನಾನ್ಯತ್ ಕಿಞ್ಚನ ಮಿಷತ್। ಐ. ಆ. ೨ : ೪ : ೧) ಅದ್ವಿತೀಯನಾಗಿದ್ದಾಗ ಅವನಿಗೆ ಸೃಷ್ಟಿಯ ಇಚ್ಛೆ ಉಂಟಾಗುತ್ತದೆ. ಸದ್ರೂಪವಾದ ಜಗತ್ತಿನ ಸೃಷ್ಟಿಗೆ ಮೂಲಕಾರಣ ಇರಬೇಕು (ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ। ಭ. ಗೀ. ೨ : ೧೬). ಆದರೆ ಈಶ್ವರನು ಅದ್ವಿತೀಯನಾಗಿದ್ದಾಗ ಅವನಿಗೆ ಸೃಷ್ಟಿಯ ಇಚ್ಛೆ ಉಂಟಾಗುತ್ತದೆ. ಆಗ ಸೃಷ್ಟಿಗೆ ಬೇಕಾದ ಅಧಿಷ್ಠಾನ ಆರಂಭಣ ಯಾವುದೂ ಇಲ್ಲ (ಲೌಕಿಕವಾದ ಉದಾಹರಣೆಯನ್ನು ತೆಗೆದುಕೊಂಡರೆ ಘಟ[ಮಡಿಕೆ]ಯನ್ನು ಮಾಡಲು ಇಚ್ಛಿಸುವ ಕುಂಬಾರನಿಗೆ ಅಧಿಷ್ಠಾನ, ಆರಂಭಣ ಇತ್ಯಾದಿ ಕಾರಣ ಸಾಮಗ್ರಿ ಇರಬೇಕು. ಅಧಿಷ್ಠಾನ, ಎಂದರೆ ಘಟದ ನಿರ್ಮಾಣಕ್ಕೆ ಅವಶ್ಯವಾದ ಸ್ಥಾನ. ಆರಂಭಣ ಎಂದರೆ ಉಪಾದಾನಕಾರಣ. ಘಟದ ನಿರ್ಮಾಣಕ್ಕೆ ಮಣ್ಣು ಉಪಾದಾನ ಕಾರಣ). ಅಭಾವದಿಂದ (ಎಂದರೆ ಏನೂ ಮೂಲವಿಲ್ಲದಿರುವಾಗ) ಭಾವರೂಪದ ಜಗತ್ತು ಹೇಗೆ ಸೃಷ್ಟವಾಯಿತು ಎಂಬುದೇ ಪ್ರಶ್ನೆ.

ಈ ಪ್ರಶ್ನೆಗೆ ಉಚಿತವಾದ ಉತ್ತರ ದೊರೆಯಬೇಕಾದರೆ ಏಕ ಮಾತ್ರವಾದ ಈಶ್ವರ ತತ್ತ್ವವು ಸದ್ರೂಪವೇ ಅಥವಾ ಅಸದ್ರೂಪವೆ; ಭಾವರೂಪವೆ ಅಥವಾ ಅಭಾವರೂಪವೆ

ಎಂಬ ವಿಷಯವನ್ನು ತಿಳಿಯಬೇಕು. ಸಂಹಿತಾ ವಾಕ್ಯಗಳನ್ನೂ ಉಪನಿಷದ್ವಾಕ್ಯಗಳನ್ನೂ ಪರಿಶೀಲಿಸಿದರೆ, ಜಗತ್ಸೃಷ್ಟಿಗೆ ಮೊದಲು ಅಸತ್ತು ಮಾತ್ರ ಇದ್ದಿತು. ಅಸತ್ತಿನಿಂದ ಸತ್ತು (ಭಾವರೂಪ ಜಗತ್ತು) ಉತ್ಪನ್ನವಾಯಿತು ಎಂಬ ವರ್ಣನವೇ ಅಧಿಕವಾಗಿ ಕಾಣುತ್ತದೆ.

‘ಸೃಷ್ಟಿಗೆ ಮೊದಲು ಅಸದ್ವಸ್ತುವೂ ಇರಲಿಲ್ಲ. ಸದ್ವಸ್ತುವೂ ಇರಲಿಲ್ಲ. ಕೇವಲ ತಮಸ್ಸು ಸರ್ವತ್ರವೂ ವ್ಯಾಪಿಸಿತ್ತು’ ಎಂದು ಋಕ್ಸಂಹಿತಾವಾಕ್ಯ ತಿಳಿಸುತ್ತದೆ (ನಾಸದಾಸೀನ್ನೋ ಸದಾಸೀತ್.... ಋ ೧೦:೧೨೯:೧.) ‘ಸೃಷ್ಟಿಗೆ ಪೂರ್ವ ಸದ್ರೂಪವಾದ ವಸ್ತು ಯಾವುದೂ ಇರಲಿಲ್ಲ. ಕೇವಲ ಅಸತ್ತು ಮಾತ್ರ ಇದ್ದಿತು. ಅದರಿಂದ ಸದ್ರೂಪವಾದ ಜಗತ್ತು ನಿರ್ಮಿತವಾಯಿತು’ ಎಂದು ಉಪನಿಷದ್ವಾಕ್ಯಗಳು ವರ್ಣಿಸುತ್ತವೆ [ಅಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ ತಸ್ಮಾದಸತಃ ಸದಜಾಯತ ಛಾ. ಉ ೬:೨:೧ ; ಅಸದ್ವಾ ಇದಮಗ್ರ ಆಸೀತ್। ತತೋ ವೈ ಸದಜಾಯತ|. ತೈ. ಉ.೨:೭]

ಈ ರೀತಿಯಾದ ವರ್ಣನಗಳು ಸ್ಥೂಲವಾದ ದೃಷ್ಟಿಗೆ ಪರಸ್ಪರ ವಿರುದ್ಧವಾಗಿ ಕಾಣುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಆಶಂಕೆಯನ್ನು ತೋರಿಸಿ ಅದಕ್ಕೆ ಸಮಾಧಾನವನ್ನೂ ಹೇಳಿದೆ.

ಅಸತ್ತಿನಿಂದ ಸತ್ತು ಹೇಗೆ ಉತ್ಪನ್ನವಾಗಬಲ್ಲುದು ಎಂಬ ಆಶಂಕೆಗೆ ಶ್ವೇತಕೇತುವಿನ ತಂದೆ ಈ ರೀತಿ ಉತ್ತರ ಕೊಡುತ್ತಾನೆ: “ಎಲೈ ಮಗುವೆ, ಇದು ಹೇಗೆ ಸಾಧ್ಯ. ಅಸತ್ತಿನಿಂದ ಸದ್ರೂಪದ ಜಗದುತ್ಪತ್ತಿ ಹೇಗೆ? (ಕುತಸ್ತು ಖಲು ಸೋಮ್ಯೈವಂ ಸ್ಯಾದಿತಿ ಹೋವಾಚ ಕಥಮಸತಃ| ಸಜ್ಜಾಯೇತೇತಿ| ಸತ್ತ್ವೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ| ಛಾ. ಉ ೬:೨:೨) ಸೃಷ್ಟಿಗಿಂತ ಪೂರ್ವ ಸದ್ರೂಪವಾದ ತತ್ತ್ವವಲ್ಲದೆ ಬೇರೊಂದಿದ್ದಿಲ್ಲ. ಏಕ, ಅದ್ವಿತೀಯ ಈ ರೀತಿ ಸದ್ರೂಪವಾದ ತತ್ತ್ವ ಮಾತ್ರ ಇದ್ದಿತು” ಎಂದು ನಿಷ್ಕೃಷ್ಟವಾಗಿ ತಿಳಿಸಿದ್ದಾನೆ. ಎಂದರೆ, ಜಗತ್ತಿನ ಸೃಷ್ಟಿಗೆ ಮೊದಲು ಜಗತ್ತಿನ ಅತ್ಯಂತಾಭಾವವಿರಲಿಲ್ಲ [ಎಂದರೆ ಶುದ್ಧ ಶೂನ್ಯವಾದುದು. ಉದಾಹರಣೆಗೆ ಬಂಜೆಯ ಮಗ. ಇದು ಆತ್ಯಂತಿಕವಾದ ವಿರುದ್ಧ ಸ್ಥಿತಿಯನ್ನು ತೋರಿಸುತ್ತದೆ. ಪ್ರಳಯ ಕಾಲದಲ್ಲಿ ಜಗತ್ತಿನ ಸ್ಥಿತಿಯು ಈ ವಿಧವಾದ ಅತ್ಯಂತಾಭಾವವನ್ನು ಹೊಂದಿರುವುದಿಲ್ಲ. ಲೋಕದೃಷ್ಟಿಗೆ ಕಾಣದಿರುವಷ್ಟು ಮಾತ್ರ ಸೂಕ್ಷ್ಮ ರೂಪದಲ್ಲಿರುತ್ತದೆ] ; ಪ್ರಾಗಭಾವ [ಎಂದರೆ ಶುದ್ಧಶೂನ್ಯವಲ್ಲ. ಉತ್ಪನ್ನವಾಗುವದಕ್ಕೆ ಮೊದಲು ಈ ಅವಸ್ಥೆಯಲ್ಲಿಲ್ಲದಿರವುದು ಎಂದು ಮಾತ್ರ ತಾತ್ಪರ್ಯ. ಎಂದರೆ, ಪ್ರಕಾಶಕ್ಕೆ ಬರುವ ಸ್ವರೂಪ ಯೋಗ್ಯತೆ ಮತ್ತು ಸಾಮರ್ಥ್ಯವಿರುವುದು ಎಂದು ಅರ್ಥ] ಮಾತ್ರ ಇದ್ದಿತು ಎಂದು ತೋರಿಸುತ್ತಾನೆ. ಅದಕ್ಕೆ ಒಂದು ಉದಾಹರಣೆಯನ್ನು ತೋರಿಸಲು “ಒಂದು ನ್ಯಗ್ರೋಧ ವೃಕ್ಷದ

ಫಲವನ್ನು ತೆಗೆದುಕೊಂಡು ಬಾ" ಎಂದು ಗುರುವು ಶಿಷ್ಯನಿಗೆ ಹೇಳುತ್ತಾನೆ. ಶಿಷ್ಯನು ತರುತ್ತಾನೆ (ಆಲ, ಅಶ್ವತ್ಥ ಇತ್ಯಾದಿ ಎತ್ತರವೂ ವಿಸ್ತೃತವೂ ಆದ ವೃಕ್ಷಗಳಲ್ಲಿ ಒಂದು). "ಆ ಫಲವನ್ನು ಬಿಚ್ಚು" ಎಂದಾಗ ಬಿಚ್ಚುತ್ತಾನೆ. "ಅದರಲ್ಲೇನಿದೆ ನೋಡು" ಎಂದಾಗ ಬಿಚ್ಚಿ "ಅದರಲ್ಲಿ ಸೂಕ್ಷ್ಮವಾದ ಬೀಜಗಳಿವೆ" ಎನ್ನುತ್ತಾನೆ. "ಆ ಸಣ್ಣ ಬೀಜವನ್ನು ಒಡೆದು ನೋಡು" ಎಂದಾಗ ಒಡೆದು ನೋಡಿ "ಏನೂ ಇಲ್ಲ" ಎಂಬ ಉತ್ತರ ಸಿಗುತ್ತದೆ. ಆಗ ತಂದೆಯು ಉತ್ತರ:

"ಎಲೈ ಮಗುವೆ, ಸೂಕ್ಷ್ಮವಾದ ಬೀಜವು ಒಡೆದ ನಂತರ ಅದರಲ್ಲಿರುವ ಇನ್ನೂ ಅತ್ಯಂತ ಸೂಕ್ಷ್ಮವಾದ ಸಾರವನ್ನು ನೀನು ನೋಡಲಾರೆ. ಆದರೆ ನಿನ್ನ ಕಣ್ಣಿಗೆ ಬೀಳದಿರುವ ಈ ಸಾರದಿಂದಲೇ ಅತ್ಯುನ್ನತವೂ, ಅತಿ ವಿಸ್ತೃತವೂ ಆದ ನ್ಯಗ್ರೋಧ ವೃಕ್ಷವು ಬೆಳೆಯುತ್ತದೆ; ಅದರಂತೆಯೇ, ಎಲೈ ಮಗುವೆ, ನಿನ್ನ ಕಣ್ಣಿಗೆ ಕಾಣದಿರುವ ಸೂಕ್ಷ್ಮ ವಸ್ತುವಿನಲ್ಲಿ ವಿಶ್ವ ವೈಶಾಲ್ಯವನ್ನು ಪಡೆದಿರುವ ಈ ಜಗತ್ತು ಅಡಗಿದ್ದಿತು. ಈ ಜಗತ್ತನ್ನು ವಿಸ್ತಾರಗೊಳಿಸುವ ಸ್ವರೂಪ ತತ್ತ್ವವು ಆ ಸೂಕ್ಷ್ಮ ವಸ್ತುವಿನಲ್ಲಿದ್ದಿತು." ಎಂದು ಉಪದೇಶ ಮಾಡುತ್ತಾ ಜಗತ್ತಿನ ಪ್ರಾಗಭಾವವನ್ನು ತೋರಿಸುತ್ತಾನೆ (ತಂ ಹೋವಾಚ ಯಂ ವೈ ಸೋಮ್ಯೈತಮಣಿಮಾನಂ ನ ನಿಭಾಲಯಸ ಏತಸ್ಯ ವೈ ಸೋಮ್ಯ........ಸ ಯ ಏಷೋಽಣಿ ಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಆತ್ಮಾ ತತ್ತ್ವಮಸಿ ಶ್ವೇತಕೇತೋ–ಛಾ.ಉ. ೬ : ೧೨ : ೨–೩)

ಪ್ರಕೃತವಾದ ಮಂತ್ರದಲ್ಲಿ ಮಹಿನಾ ಎಂಬ ಈಶ್ವರನ ಮಹತ್ತ್ವಸೂಚಕವಾದ ಪದವಿರುತ್ತದೆ. ಯಾವ ಈಶ್ವರನನ್ನು ಉಪನಿಷದಾದಿಗಳು ಅಣೋರಣೀಯಾನ್.... ಮಹತೋ ಮಹೀಯಾನ್ ಎಂದು ವರ್ಣಿಸಿದೆಯೋ ಅದೇ ಈಶ್ವರನು ಅವರಾನ್ ಆ ವಿವೇಶ ಎಂದೂ ಪ್ರಶಂಸಿಸಿದೆ. ಈಶ್ವರನ ಕೇವಲ ಸಂಕಲ್ಪದಿಂದಲೇ ಜಗದ್ವ್ಯವಹಾರಗಳೆಲ್ಲ ಸಾಧ್ಯ ಎಂದು ತಿಳಿಸಿದ್ದಾರೆ.

ಸರ್ವಜ್ಞನಾದ ಜಗತ್ಕರ್ತನು ಯಾವ ಆಧಾರ ಮತ್ತು ಉಪಾದಾನ ಕಾರಣಗಳಿಂದ ಭೂಮಿಯನ್ನು ಉತ್ಪನ್ನ ಮಾಡುತ್ತ ತನ್ನ ಮಹಾತ್ಮ್ಯದಿಂದ ದ್ಯುಲೋಕವೆಲ್ಲವನ್ನೂ ನಿರ್ಮಿಸಿದನೋ, ಅಂಥ ಈ ಲೋಕ ನಿರ್ಮಾಣದ ಆಧಾರಸ್ಥಾನವಾವುದು? ಇದರ ಉತ್ಪತ್ತಿಗೆ ಮೂಲ ಕಾರಣವಾವುದು? ಅದರ ಪ್ರಕಾರವೇನು? ಅದರ ಸ್ವರೂಪವೇನು?

ವಿಶ್ವತಶ್ಚಕ್ಷುರುತ ವಿಶ್ವತೋಮುಖೋ
ವಿಶ್ವತೋಬಾಹುರುತ ವಿಶ್ವತಸ್ಪಾತ್ ।
ಸಂ ಬಾಹುಭ್ಯಾಂ ಧಮತಿ ಸಂ ಪತತ್ರೈ
ರ್ದ್ಯಾವಾ ಭೂಮೀ ಜನಯನ್ದೇವ ಏಕಃ ॥ ೩ ॥

ವಿಶ್ವತಶ್ಚಕ್ಷುಃ – ಸರ್ವತ್ರ ಪ್ರಸರಿಸಿದ ಕಣ್ಣುಗಳುಳ್ಳವನೂ। ಉತ – ಮತ್ತು। ವಿಶ್ವತೋಮುಖಃ - ಸರ್ವತ್ರ ಹೊಂದಿರತಕ್ಕ ಮುಖವುಳ್ಳವನೂ। ವಿಶ್ವತೋಬಾಹುಃ- ಸರ್ವತ್ರ ಪ್ರಸರಿಸಿದ ಬಾಹುಗಳುಳ್ಳವನೂ। ಉತ - ಮತ್ತು। ವಿಶ್ವತಸ್ಪಾತ್ – ಎಲ್ಲ ಕಡೆಯೂ ನೀಡಿದ ಪಾದಗಳುಳ್ಳವನೂ ಆದ ಈಶ್ವರನು। ಬಾಹುಭ್ಯಾಂ – ತನ್ನ ಬಾಹುಗಳಿಂದ। ಸಂ ಧಮತಿ – ದ್ಯುಲೋಕಕ್ಕೆ ಚೈತನ್ಯ ಕೊಡುತ್ತಾನೆ। ಪತತ್ರೈಃ – ತನ್ನ ಪಾದಗಳಿಂದ। ಸಂ – ಪೃಥ್ವಿಗೆ ಚೈತನ್ಯ ಕೊಡುತ್ತಾನೆ। ದ್ಯಾವಾಭೂಮೀ – ದ್ಯಾವಾಭೂಮಿಗಳನ್ನು। ಜನಯನ್ – ಉತ್ಪನ್ನ ಮಾಡುತ್ತ। ಏಕಃ – ಅದ್ವಿತೀಯನಾಗಿಯೂ– ದೇವಃ[3] – ಪ್ರಕಾಶಿಸುತ್ತಲೂ ಇದ್ದಾನೆ।

3. ಏಕಃ ದೇವಃ—ಈ ಮಂತ್ರದಲ್ಲಿ ವಿಶ್ವಕರ್ಮನ (ಪರಮೇಶ್ವರನ) ಮಹತ್ವ ರೂಪವನ್ನು ವರ್ಣಿಸಲಾಗಿದೆ. ಈ ಮಂತ್ರದಲ್ಲಿರುವ ಅಭಿಪ್ರಾಯವೇ ಪುರುಷ ಸೂಕ್ತದ ಸಹಸ್ರಶೀರ್ಷಾ ಪುರುಷಃ ಎಂಬ ಮಂತ್ರದಲ್ಲಿ ತಿಳಿಸಲಾಗಿದೆ. ಈ ಮಂತ್ರ ದಲ್ಲಿರುವ ವಿಶ್ವತಃ ಎಂಬ ಶಬ್ದಕ್ಕೆ ಬದಲಾಗಿ ಅಲ್ಲಿ ಸಹಸ್ರ ಎಂಬ ಶಬ್ದದ ಪ್ರಯೋಗ ವಿದೆ. ಈ ಎರಡು ಶಬ್ದಗಳ ಅರ್ಥವೂ ಒಂದೇ.

ಅಧಿಷ್ಠಾನವೂ ಆರಂಭಣವೂ ಇಲ್ಲದೆ 'ಜಗತ್ಸೃಷ್ಟಿಯು ಹೇಗೆ ಎಂದು ಆಕ್ಷೇಪಕ್ಕೆ ಅವಕಾಶವಿಲ್ಲವೆಂದು ಮೊದಲೆ ತಿಳಿಸಿದೆ. ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ಪ್ರಶಂಸೆಯು ಈಶ್ವರನ ಮಹತ್ತ್ವವನ್ನು ತಿಳಿಸುತ್ತದೆ. ಈಶ್ವರನೇ ಅಧಿಷ್ಠಾನ; ಇವನೇ ಆರಂಭಣ ಉಪಾದಾನಕಾರಣವೂ ಇವನೇ. ಜಗತ್ತೆಲ್ಲವೂ ಇವನ ಅವಸ್ಥಾ ವಿಶೇಷವೇ. ಬಾಹುಭ್ಯಾಂ ಧಮತಿ; ಪತತ್ರೈಃ ಧಮತಿ ಎಂಬುದರಿಂದ ನಿಮಿತ್ತ ಕಾರಣವನ್ನು ತಿಳಿಸಿದಂತಾಯಿತು. ವಿಶ್ವತಶ್ಚಕ್ಷುಃ ಇತ್ಯಾದಿ ವರ್ಣನಗಳಿಂದ ವಿಶ್ವ ವ್ಯಾಪಕತ್ವವನ್ನು ತಿಳಿಸಿದೆ. ಮೃತ್ತಿನಿಂದ ಘಟಾದಿಗಳು ರೂಪಾಂತರಗಳನ್ನು ಹೊಂದಿ ಪರಿವರ್ತಿತವಾಗುವಂತೆ ಅದ್ವಿತೀಯನಾಗಿದ್ದ ಈಶ್ವರನು ರೂಪಾಂತರಗಳನ್ನು ಹೊಂದಿ ನಾನಾ ವಿಧವಾಗಿ ಪರಿಣಮಿಸುತ್ತಾನೆ. ಅಗ್ನಿ, ವಾಯು, ಆದಿತ್ಯ ಇವರೆಲ್ಲರೂ ಇವನ ರೂಪಾಂತರಗಳು. ಈ ಮಂತ್ರವನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿ ಉದಾಹರಿಸಿದೆ. ಇದೇ ಮಂತ್ರವು ತೈತ್ತಿರೀಯ ಸಂಹಿತೆಯಲ್ಲೂ (೪:೬:೨:೪); ತೈತ್ತಿರೀಯ ಆರಣ್ಯಕ ದಲ್ಲೂ (ನಾ. ಉ. ೧೦:೧:೩) ಪಠಿತವಾಗಿದೆ. ಬಾಹುಭ್ಯಾಂ ಎಂಬುದಕ್ಕೆ ಧರ್ಮ ಮತ್ತು ಅಧರ್ಮ ಎಂಬ ಎರಡು ತೋಳುಗಳಿಂದು ಕೆಲವೆಡೆಗಳಲ್ಲಿ ಅರ್ಥ ಮಾಡಿದೆ. ಧಮತಿ ಎಂಬುದಕ್ಕೆ ಶಂಕರಾಚಾರ್ಯರು ಸಂಯೋಜಯತಿ ಎಂದರ್ಥ ಮಾಡಿದ್ದಾರೆ.

ರೂಪಂ ರೂಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿಚಕ್ಷಣಾಯ।
ಇಂದ್ರೋ ಮಾಯಾಭಿಃ ಪುರುರೂಪ ಈಯತೇ ಯುಕ್ತಾ ಹ್ಯಸ್ಯ ಹರಯಃ ಶತಾ ದಶ

(ಋ ೬:೪೭:೧೮)

ಇತ್ಯಾದಿ ವಾಕ್ಯಗಳಲ್ಲಿ ವಿವರಿಸುವಂತೆ ಈಶ್ವರನು ತನ್ನ ಪ್ರಭುತ್ವ ಶಕ್ತಿಯಿಂದ ವಿಶ್ವರೂಪನಾಗಿರುತ್ತಾನೆ [ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟಃ ರೂಪಂ ರೂಪಂ ಪ್ರತಿರೂಪೋ ಬಭೂವ-ಕಠ.ಉ.೨:೨:೧೧; ವಿಶ್ವರೂಪಂ ಹರಿಣಂ.... ಸಹಸ್ರ ರಶ್ಮಿಃ ಶತಧಾ ವರ್ತಮಾನಃ-ಪ್ರಶ್ನ ೧:೮].

ಸರ್ವತ್ರ ಪ್ರಸರಿಸಿದ ಕಣ್ಣುಗಳುಳ್ಳವನೂ, ಸರ್ವತ್ರ ಹೊಂದಿರುವ ಮುಖಗಳುಳ್ಳವನೂ, ಸರ್ವತ್ರ ಪ್ರಸರಿಸಿದ ಬಾಹುಗಳುಳ್ಳವನೂ, ಎಲ್ಲ ಕಡೆಯೂ ನೀಡಿದ ಪಾದಗಳುಳ್ಳವನೂ ಆದ ಈಶ್ವರನು ತನ್ನ ಬಾಹುಗಳಿಂದ ದ್ಯುಲೋಕಗಳನ್ನು ಪ್ರೇರಿಸುತ್ತಾನೆ. ಪಾದಗಳಿಂದ ಪೃಥಿವಿಗೆ ಚೈತನ್ಯವನ್ನುಂಟು ಮಾಡುತ್ತಾನೆ. ದ್ಯಾವಾ ಪೃಥಿವಿಗಳಿಗೆ ಉತ್ಪಾದಕನಾದ ವಿಶ್ವಕರ್ಮನು ಅದ್ವಿತೀಯನಾಗಿ ಪ್ರಕಾಶಿಸುತ್ತಾನೆ.

ಕಿಂ ಸ್ವಿದ್ವನಂ ಕ ಉ ಸ ವೃಕ್ಷ ಆಸ
ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।
ಮನೀಷಿಣೋ ಮನಸಾ ಪೃಚ್ಛತೇದುತದ್
ಯದಧ್ಯತಿಷ್ಠದ್ಭುವನಾನಿ ಧಾರಯನ್ ॥ ೪ ॥

ಯತಃ – ಯಾವ ವನವೃಕ್ಷಾದಿಗಳಿಂದ। **ದ್ಯಾವಾಪೃಥಿವೀ** – ದ್ಯಾವಾಪೃಥಿವಿಗಳನ್ನು। **ನಿಷ್ಟತಕ್ಷುಃ** – ಜಗನ್ನಿರ್ಮಾಪಕರು ನಿರ್ಮಿಸಿದರೋ। **ವನಂ** – ಆ ವನವು। **ಕಿಂಸ್ವಿತ್** – ಯಾವುದು?। **ಸಃ ವೃಕ್ಷಃ** – ಆ ವೃಕ್ಷವು। **ಕ ಉ ಆಸ?** – ಯಾವುದು?। **ಮನೀಷಿಣಃ** – ಎಲೈ ಪ್ರಾಜ್ಞರೇ। **ಯತ್** – ಯಾವ ತತ್ತ್ವವು। **ಭುವನಾನಿ** – ಸಕಲ ಲೋಕಗಳನ್ನೂ। **ಧಾರಯನ್** – ಧರಿಸುತ್ತ। **ಅಧ್ಯತಿಷ್ಠತ್**4 -ಆಧಾರ ಭೂತವಾಗಿರುವುದೋ। **ತತ್** - ಅದರ ಸ್ವರೂಪವನ್ನು। **ಮನಸಾ** - ಧ್ಯಾನರೂಪದಲ್ಲಿ। **ಪೃಚ್ಛತೇದು**-ವಿಮರ್ಶೆಮಾಡಿ ತಿಳಿಯಿರಿ।

4ದ್ಯಾವಾ ಪೃಥಿವಿಗಳನ್ನು ನಿರ್ಮಿಸಿದ ವೃಕ್ಷವಾವುದು? ಯಾವ ಸತ್ವವು ಸಕಲ ಲೋಕಗಳನ್ನೂ ಧರಿಸಿದೆ? ಎಂಬ ಪ್ರಶ್ನೆ.

"ಜಗದೀಶ್ವರನೇ ವೃಕ್ಷ. ಈ ವೃಕ್ಷದ ಪ್ರೇರಕನೂ ಅವನೆ (ಅಹಂ ವೃಕ್ಷಸ್ಯ ರೇರಿವಾ। ಕೀರ್ತಿಃ ಪೃಷ್ಠಂ ಗಿರೇರಿವ...—ತೈ ಆ.೧:೧೦:೧). ಪುರಾತನವಾದ ವೃಕ್ಷದ ಬುಡವು ಮೇಲಕ್ಕಿದೆ. ಇದರ ಕೊಂಬೆಗಳು ಅಧೋ ಮುಖವಾಗಿವೆ. ಇದರಲ್ಲಿಯೇ ಸಕಲ ವಿಶ್ವಗಳೂ ಸ್ಥಾಪಿತವಾಗಿವೆ (ಊರ್ಧ್ವಮೂಲೋಽವಾಕ್ ಶಾಖ ಏಷೋಽಶ್ವತ್ಥಸ್ಸನಾತನಃ...ತಸ್ಮಿನ್ ಲೋಕಾಃಶ್ರಿತಾಸ್ಸರ್ವೇ– ಕಠ.ಉ. ೬:೧)" ಎಂಬುದೆ

ಉತ್ತರ. ಅಲ್ಲದೆ ಇದರ ಧಾರಕಶಕ್ತಿ ಯಾವುವೆಂದರೆ, "ಸವಿತೃವು ಪೃಥ್ವಿಯನ್ನು ಬಂಧಕ ಸಾಮಗ್ರಿಗಳಿಂದ ಭದ್ರವಾಗಿ ಸ್ಥಾಪಿಸಿದ್ದಾನೆ. ಆಧಾರ ಸ್ತಂಭವಿಲ್ಲದೆಯೆ ಅಂತರಿಕ್ಷವು ದೃಢವಾಗಿ ನಿಲ್ಲುವಂತೆ ಮಾಡಿದ್ದಾನೆ (ಸವಿತಾ ಯನ್ತ್ರೈಃ ಪೃಥಿವೀ ಮರಮ್ಣಾದಸ್ತಮ್ಭನೇ ಸವಿತಾ ದ್ಯಾಮದೃಂಹತ್—ಋ ೧ : ೧೪೯ : ೧೧) ದ್ಯಾವಾಪೃಥಿವೀ ಅಂತರಿಕ್ಷ ಇವೆಲ್ಲ ವಿಶ್ವಗೃಹ. ಲೋಕತ್ರಯವನ್ನು ಒಳಗೊಂಡ ಈ ವಿಶ್ವಗೃಹದಲ್ಲಿ ಪಂಚಜನರೂ ವಾಸಿಸುತ್ತಾರೆ. ಆದಿತ್ಯನು ಎಲ್ಲರಿಗೂ ಸಮಾನವಾದ ಜ್ಯೋತಿಯನ್ನು ಒದಗಿಸುತ್ತಾನೆ (ಪ್ರತ್ನಂ ಜಾತಂ ಜ್ಯೋತಿರ್ಯದಸ್ಯ ಪ್ರಿಯಂ ಪ್ರಿಯಾಃ ಸಮವಿಶನ್ತ ಪಞ್ಚ—ಋ ೧೦:೫೫ : ೨). ಇವನೇ ಸಕಲ ಲೋಕಗಳ ಧಾರಕನು. ಆದಿತ್ಯ ರೂಪದ ವೃಕ್ಷದ ಫಲವು ರಸವತ್ತಾದುದೂ ಜಗತ್ಪಾಲಕವೂ ಆಗಿರುತ್ತದೆ (ಯಸ್ಮಿನ್ ವೃಕ್ಷೇ ಮಧ್ವದಃ ಸುಪರ್ಣಾ... ಋ ೧ : ೧೬೪ : ೨೨).

ದ್ಯಾವಾ ಪೃಥಿವಿಗಳ ನಿರ್ಮಾಣಕ್ಕೆ ಸಹಾಯಕವಾದ ವನವಾವುದು ಮತ್ತು ವೃಕ್ಷವಾವುದು? ಎಲೈ ಪ್ರಾಜ್ಞರೇ, ಧ್ಯಾನರೂಪದಲ್ಲಿ ಆ ವಿಷಯವನ್ನು ವಿಮರ್ಶಿಸಿ ತಿಳಿಯಿರಿ. ಯಾವ ತತ್ತ್ವವು ಸಕಲ ಲೋಕಗಳನ್ನೂ ಧರಿಸಿರುವುದೋ ಅದರ ಸ್ವರೂಪವನ್ನು ಅರಿಯಲು ವಿಮರ್ಶಿಸಿರಿ.

ಯಾ ತೇ ಧಾಮಾನಿ ಪರಮಾಣಿ ಯಾವಮಾ
ಯಾ ಮಧ್ಯಮಾ ವಿಶ್ವಕರ್ಮನ್ನುತೇಮಾ ।
ಶಿಕ್ಷಾ ಸಖಿಭ್ಯೋ ಹವಿಷಿ ಸ್ವಧಾವಃ
ಸ್ವಯಂ ಯಜಸ್ವ ತನ್ವಂ ವೃಧಾನಃ ॥ ೫ ॥

ಸ್ವಧಾವಃ – ಅನ್ನಯುಕ್ತನಾದ। **ವಿಶ್ವಕರ್ಮನ್** - ಎಲೈ ವಿಶ್ವಕರ್ಮನೇ। **ತೇ**-ನಿನ್ನ। ಯಾ-ಯಾವ। **ಪರಮಾಣಿ ಧಾಮಾನಿ** - ಅತ್ಯುತ್ಕೃಷ್ಟವಾದ ಶರೀರವುಂಟೋ। **ಯಾ** - ಯಾವುದು। **ಮಧ್ಯಮಾ** - ಮಧ್ಯಮ ರೂಪದ್ದಾಗಿರುವುದೋ। **ಉತ** - ಮತ್ತು। **ಯಾ** - ಯಾವುದು। **ಅವಮಾ** - ನಿಕೃಷ್ಟವಾಗಿರುವುದೋ। **ತಾ ಇಮಾ** - ಆ ಎಲ್ಲ ವಿಧವಾದ ಶರೀರ ವಿಶೇಷಗಳನ್ನೂ। **ಹವಿಷಿ** - ಹವಿಸ್ಸನ್ನು ಅರ್ಪಿಸುವ ಕಾಲದಲ್ಲಿ। **ಸಖಿಭ್ಯಃ**-ನಿನ್ನ ಮಿತ್ರರಾದ ನಮಗೆ। **ಶಿಕ್ಷ** - ಕೊಡು। **ಸ್ವಯಂ** - ನೀನೂ ಸಹ। **ತನ್ವಂ** - ನಿನ್ನ ಈ ಎಲ್ಲ ವಿಧವಾದ ಶರೀರವನ್ನೂ। **ವೃಧಾನಃ**[5] - ಪುಷ್ಟಿಗೊಳಿಸುತ್ತ। **ಯಜಸ್ವ** - ಪೂಜಿಸು।

[5]ವಿಶ್ವಕರ್ಮನ ವಿಶ್ವರೂಪವಾದ ಶರೀರ ವಿಸ್ತರಣವು ಪ್ರಕೃತವಾದ ಮಂತ್ರದಲ್ಲಿ ನಿರ್ದೇಶಿಸಲ್ಪಟ್ಟಿದೆ. ಈ ವಿಸ್ತರಣವು ಮೂರು ಪ್ರಕಾರವುಳ್ಳದ್ದಾಗಿದೆ. ಪರಮ, ಮಧ್ಯಮ

ಮತ್ತು ಅಧಮ. ಇವು ದ್ಯುಲೋಕ, ಅಂತರಿಕ್ಷ ಮತ್ತು ಪೃಥ್ವೀರೂಪವೆಂದಾಗಬಹುದು ಅಥವಾ ದೇವತಾರೂಪ, ಮನುಷ್ಯ ರೂಪ ಮತ್ತು ಕ್ರಿಮಿಕೀಟಾದಿ ರೂಪ ಎಂದಾಗ ಬಹುದು. ಎಂದರೆ ವಿಶ್ವದ ಸಕಲ ಚಿದಚಿದ್ರೂಪವಾದ ಸಕಲವೂ ಈಶ್ವರನ ದಿವ್ಯ ವಿಭೂತಿ.

ಅದ್ವಿತೀಯನಾದ ನಾನು ಸದ್ವಿತೀಯನಾಗಬೇಕು ಎಂದು ಈಶ್ವರನ ಸಂಕಲ್ಪ. ಅದಕ್ಕನುಗುಣವಾಗಿ ಸೂಕ್ಷ್ಮರೂಪದಿಂದಿದ್ದ ಈಶ್ವರ ತತ್ವವು ಮೂರು ವಿಧವಾದ ಶರೀರವನ್ನು ಹೊಂದಿ ಮೂರು ಲೋಕಗಳನ್ನೂ ಸೃಜಿಸಿ ಮೂರು ಲೋಕಗಳಲ್ಲೂ ವಿಸ್ತೃತಿಯನ್ನು ಹೊಂದಿತು ಅದು ಹೇಗೆಂದರೆ—

"ಸಲಿಲದ ಮೇಲೆ ಹಿರಣ್ಯಗರ್ಭವು ಒಂದು ಸಂವತ್ಸರ ತೇಲಾಡುತ್ತಿತ್ತು. ಒಂದು ಸಂವತ್ಸರದ ಅನಂತರ ಪ್ರಜಾಪತಿಯ ಆವಿರ್ಭಾವವಾಯಿತು. ಆಗ ಪ್ರಜಾಪತಿಗೆ ಆಧಾರಸ್ಥಾನ ಯಾವುದೂ ಇರಲಿಲ್ಲವಾದ್ದರಿಂದ ವಾಕ್ಕನ್ನುಚ್ಚರಿಸಿದನು.

ಭೂಃ ಎಂದು ಉಚ್ಚರಿಸಿದಾಗ ಭೂಲೋಕವೂ,
ಭುವಃ ಎಂದು ಉಚ್ಚರಿಸಿದಾಗ ಅಂತರಿಕ್ಷವೂ,
ಸ್ವಃ ಎಂದಾಗ ದ್ಯುಲೋಕವೂ ಉತ್ಪನ್ನವಾದವು.

ಈಶ್ವರನು ಈ ಮೂರು ಲೋಕಗಳನ್ನೂ ಆಕ್ರಮಿಸಿ ಅದನ್ನು ಮೀರಿ ನಿಂತನು

"**ಭೂಃ, ಭುವಃ, ಸ್ವಃ** ಎಂದು ಪ್ರಜಾಪತಿಯಿಂದ ಪ್ರಕಟಿತವಾದ ಮೂರು ವ್ಯಾಹೃತಿಗಳೂ ಲೋಕ ಪ್ರತ್ಯಕ್ಷಕ್ಕೆ ವಿಷಯಗಳು ಇದನ್ನು ಮೀರಿದ ನಾಲ್ಕನೆಯ ಮಹತ್ತತ್ತ್ವವನ್ನು ಮಹಾಚಮಸ್ಯನು ಸಾಕ್ಷಾತ್ಕರಿಸಿ ಅದರ ಮಹತ್ತ್ವವನ್ನು ಅರಿತನು ಅದೇ ದಿವ್ಯಾತ್ಮ. ಉಳಿದ ದೇವತೆಗಳೆಲ್ಲ ಇದರ ರೂಪಾಂತರಗಳು. **ಮಹಃ** ಎಂಬುದೇ ಆದಿತ್ಯನು."

ಅನ್ನಸಂಪದ್ಯುಕ್ತನಾದ ಎಲೈ ವಿಶ್ವಕರ್ಮನೇ, ನಿನ್ನ ಯಾವ ಉತ್ಕೃಷ್ಟವಾದ, ಮಧ್ಯಮರೂಪದ ಮತ್ತು ನಿಕೃಷ್ಟವಾದ ಶರೀರ ಪ್ರಭೇದಗಳುಂಟೋ ಆ ಎಲ್ಲ ವಿಧವಾದ ಶರೀರ ವಿಶೇಷಗಳನ್ನೂ, ಹವಿಸ್ಸನ್ನು ಅರ್ಪಿಸುವ ಕಾಲದಲ್ಲಿ ನಿನ್ನ ಮಿತ್ರರಾದ ನಮಗೂ ಅನುಗ್ರಹಿಸು. ನೀನೂ ಸಹ ನಿನ್ನ ಈ ಎಲ್ಲ ರೂಪದ ಶರೀರವನ್ನೂ ಪುಷ್ಟಿಗೊಳಿಸುತ್ತ ಪೂಜೆಯನ್ನರ್ಪಿಸು.

ವಿಶ್ವಕರ್ಮನ್ ಹವಿಷಾ ವಾವೃಧಾನಃ
ಸ್ವಯಂ ಯಜಸ್ವ ಪೃಥಿವೀಮುತ ದ್ಯಾಮ್ ।
ಮುಹ್ಯನ್ತ್ವನ್ಯೇ ಅಭಿತೋ ಜನಾಸ
ಇಹಾಸ್ಮಾಕಂ ಮಘವಾ ಸೂರಿರಸ್ತು ॥ ೬ ॥

ವಿಶ್ವಕರ್ಮನ್ - ಎಲೈ ವಿಶ್ವಕರ್ಮನೇ। ಹವಿಷಾ - ಹವಿಸ್ಸಿನಿಂದ। ವಾವೃಧಾನಃ - ವೃದ್ಧಿಯನ್ನು ಹೊಂದಿ। ಸ್ವಯಂ - ನೀನಾಗಿಯೇ। ಪೃಥಿವೀಂ - ಪೃಥ್ವಿಯನ್ನೂ। ಉತ-ಮತ್ತು । ದ್ಯಾಂ - ದ್ಯುಲೋಕವನ್ನೂ। ಯಜಸ್ವ - ಪೂಜಿಸು। ಅನ್ಯೇ ಜನಾಸಃ - ಕರ್ಮರಹಿತರಾದ ಉಳಿದ ಜನರು। ಅಭಿತಃ - ಸರ್ವತ್ರ। ಮುಹ್ಯಂತು - ಅಜ್ಞಾನದಿಂದ ಆವೃತರಾಗಲಿ। ಮಘವಾ - ಧನವಂತನಾದ ವಿಶ್ವಕರ್ಮನು। ಇಹ - ನಮ್ಮ ಈ ಯಜ್ಞದಲ್ಲಿ। ಅಸ್ಮಾಕಂ - ನಮಗೆ। ಸೂರಿಃ - ಸ್ವರ್ಗ ಪ್ರಾಪಕನಾಗಿ। ಅಸ್ತು[6]- ಆಗಿರಲಿ।

[6] ಯಜ್ಞಮಯನೂ, ಯಜ್ಞಮೂಲನೂ ಆದ ವಿಶ್ವಕರ್ಮನ ಪ್ರಶಂಸೆಯೆ ಈ ಸೂಕ್ತದ ವಿಷಯ. ವಿಶ್ವಕರ್ಮನು ಯಜ್ಞಕರ್ತ ಮತ್ತು ಯಜ್ಞಭೋಕ್ತಾ. ಸೃಷ್ಟಿಗೆ ಮೊದಲು ತಾನೆ ಯಜ್ಞಭೂಮಿ, ಸೃಷ್ಟಿಯ ನಂತರ ವಿಶ್ವವೇ ಯಜ್ಞಭೂಮಿ, ಸೂಕ್ಷ್ಮರೂಪನಾದ ವಿಶ್ವಕರ್ಮನು ಸ್ಥೂಲರೂಪದಲ್ಲಿ ಆವಿರ್ಭವಿಸುವುದೇ ಸೃಷ್ಟಿ. ಈ ಸೃಷ್ಟಿಗೂ ಯಜ್ಞವೇ ಮೂಲ. ಈ ಯಜ್ಞದಲ್ಲಿ ಹವಿಸ್ಸೂ ವಿಶ್ವಕರ್ಮನೆ, ಹವಿಸ್ಸನ್ನು ಭುಜಿಸುವವನೂ ಅವನೆ. ತನ್ನ ವಿಸ್ತೃತವಾದ ಪ್ರಕಾಶನವೇ ಯಜ್ಞದ ಫಲ. ಅದನ್ನೇ ಪ್ರಕೃತವಾದ ಮಂತ್ರದಲ್ಲಿ 'ಹವಿಷಾ ವಾವೃಧಾನಃ' ಎಂದು ತಿಳಿಸಿದೆ.

ಇದು ಬಹಳ ಗಂಭೀರವಾದ ವಿಷಯ. ಆಧ್ಯಾತ್ಮಿಕ ಮತ್ತು ಆಧಿದೈವಿಕ ತತ್ತ್ವಗಳನ್ನೊಳಗೊಂಡುದು. ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಲಯ ಇವೆಲ್ಲ ಚಕ್ರಾಕಾರ. ಎಲ್ಲವೂ ಈಶ್ವರನ ಅವಸ್ಥಾ ವಿಶೇಷಗಳೆ. ಎಲ್ಲಕ್ಕೂ ಯಜ್ಞವೇ ಮೂಲ. ಸೃಷ್ಟಿ, ಸ್ಥಿತಿ, ಲಯರೂಪವಾದ ಯಜ್ಞ ನಡೆಯುತ್ತಲೇ ಇರಬೇಕು. ಇವು ಚಲನಾತ್ಮಕಗಳಾದ ಅವಸ್ಥಾವಿಶೇಷಗಳು. ಈ ಅಂಶವು ಯಜ್ಞ ಶಬ್ದದ ನಿರ್ವಚನದಿಂದಲೆ ತಿಳಿಯುತ್ತದೆ.

'ಸೋಮವನ್ನು ಹಿಂಡುವಾಗ ಯಜ್ಞಹನನ. ಯಜ್ಞವಿಸ್ತೃತಿ ಉಂಟಾದಾಗ ಅದರ ಜನನ. ಈ ರೀತಿ ವಿಸ್ತೃತಿ ಮತ್ತು ಸಂಕೋಚ ಎರಡೂ ಅನುಸ್ಯೂತವಾಗಿ ನಡೆಯುವುದರಿಂದ (ಯನ್ + ಜ = ಯಞ್ಜ = ಯಜ್ಞ) ಅದು ಯಜ್ಞ (ಶ.ಬ್ರಾ, ೩:೯:೪:೨೩)

ಯಜ್ಞವೇ ವಿಶ್ವಕರ್ಮ ; ವಿಶ್ವಕರ್ಮನೇ ಯಜ್ಞ. ಯಜ್ಞರೂಪವಾದ ಪ್ರತಿಬಿಂಬವನ್ನು ನಿರ್ಮಿಸಿದುದರಿಂದಲೆ ಪ್ರಜಾಪತಿಯು ಯಜ್ಞರೂಪನು. ವಿಶ್ವಕರ್ಮನು ಯಾವ ರೀತಿ ವಿಶ್ವಾತ್ಮನೊ ಆ ರೀತಿ ಯಜ್ಞವೂ ವಿಶ್ವಾತ್ಮ. ಯಜ್ಞವೇದಿಯೆ ವಿಶ್ವದ ಪ್ರತಿಬಿಂಬ ಮತ್ತು ವಿಶ್ವವ್ಯಾಪಕ. ವಿಶ್ವದ ಸಕಲ ತೇಜೋರಾಶಿಗಳೂ ಉಳಿದ ಸಕಲ ಚರಾಚರಾತ್ಮಕವಾದ ಭೂತಗಳೂ ಇದರ ಅವಯವಗಳು. ಈ ಯಜ್ಞವೇದಿಯೇ ಪೃಥ್ವೀ ಅಂತರಿಕ್ಷ, ದ್ಯುಲೋಕ ಮತ್ತು ಆದಿತ್ಯ (ಶ.ಬ್ರಾ.೧೦:೫:೪:೧ ರಿಂದ ೩) ಯಜ್ಞವೇದಿಯ ದೇಹವೆ ಆದಿತ್ಯಾಂತರ್ಗತವಾದ ಹಿರಣ್ಮಯ ಪುರುಷ. ಇವನ ಸ್ವರೂಪವು ಎಷ್ಟು ಆಕರ್ಷಕ ಮತ್ತು ಮಹತ್ತ್ವಪೂರ್ಣವಾದ್ದು ಎಂದರೆ,

"ಯಜ್ಞವೇದಿಯಲ್ಲಿರುವ ಸ್ವರ್ಣಪಾತ್ರವೂ, ಪುಷ್ಕರಪರ್ಣವೂ, ಆದಿತ್ಯಾನ್ತರ್ಗತನಾದ ಹಿರಣ್ಮಯ ಪುರುಷನ ಎರಡು ಪಾದಗಳು. ಯಜ್ಞವೇದಿಯಲ್ಲಿರುವ ಎರಡು ಸ್ರುಕ್ಪಾತ್ರೆಗಳೂ ಇವನ ಬಾಹುಗಳು. ಇವರೆ ಇಂದ್ರಾಗ್ನಿಗಳು. ಎರಡು ಇಷ್ಟಕೆಗಳು ಪೃಥಿವ್ಯಂತರಿಕ್ಷಗಳು, ವಿಶ್ವಜ್ಯೋತೀರೂಪವಾದ ಇಷ್ಟಕೆಗಳೆ ಸಕಲ ದೇವತೆಗಳು, ಇವುಗಳ ಸಂಖ್ಯೆ ಮೂರು. ಈ ಮೂರರೂ ಅಗ್ನಿ, ವಾಯು ಮತ್ತು ಆದಿತ್ಯರನ್ನು ಪ್ರತಿಬಿಂಬಿಸುತ್ತವೆ (ರುಕ್ಮಶ್ಚ ಪುಷ್ಕರಪರ್ಣಂ ಚಾಪಶ್ಚಾದಿತ್ಯ ಮಂಡಲಂ....ವಿಶ್ವಜ್ಯೋತಿಷ ಏತಾ ದೇವತಾ ಅಗ್ನಿರ್ವಾಯುರಾದಿತ್ಯ ಇತಿ....—ಶ.ಬ್ರಾ. ೧೦:೫:೪:೧೫)

'ವಿಶ್ವಾತ್ಮಕನಾದ ಪ್ರಜಾಪತಿಯು ತನ್ನ ಯಜ್ಞದಲ್ಲಿ ತನ್ನನ್ನೇ ಆಹುತಿಯನ್ನಾಗಿ ಅರ್ಪಿಸಿ, ಪುನಃ ಸೃಷ್ಟಿಗೆ ಸಂಕಲ್ಪವನ್ನು ಹೊಂದಿ ಜಗತ್ತನ್ನು ವಿಸ್ತಾರಗೊಳಿಸುತ್ತಾನೆ. 'ಕ' ಸಂಜ್ಞಕನಾದ ಇದೇ ವಿಶ್ವಕರ್ಮನು ಸೃಷ್ಟಿಕಾಲದಲ್ಲಿ ಸಕಲ ಭೂತಗಳಿಗೂ ಚೈತನ್ಯದಾಯೀ, ಶಕ್ತಿದಾತನು. ಸಕಲ ದೇವತೆಗಳೂ ಇವನ ಆಜ್ಞೆಯನ್ನು ಪಾಲಿಸುತ್ತಾರೆ.' (ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ| ಯಸ್ಯಚ್ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿಧೇಮ—ಋ.ಸಂ.೧೦:೧೨೧:೨)

ದೇವತೆಗಳು ಮತ್ತು ಅಸುರರಾದಿಯಾಗಿ ಅಣುವಿನವರೆಗೆ ಉತ್ಪನ್ನವಾದ ಸಕಲವೂ ಯಜ್ಞದ ಫಲ. ಈ ಯಜ್ಞಕರ್ತರು ಮೂವರು.

೧. ಪ್ರಜಾಪತಿ ೨. ಅಗ್ನಿ ೩. ಮಾನವರೂಪನಾದ ಯಜಮಾನ.

ಈ ಮೂವರ ಕರ್ಮವೂ ಒಂದೇ ನಿಯಮವನ್ನನುಸರಿಸಬೇಕು. ಮಾನವನೂ ಸಹ ಈ ವಿಶ್ವಯಜ್ಞವನ್ನನುಸರಿಸಿ ಕರ್ಮವನ್ನಾಚರಿಸಲು ಅಗ್ನಿಯ ಅನುಗ್ರಹ ಅತ್ಯವಶ್ಯಕ. ವಿಶ್ವವ್ಯವಹಾರವು ಅಕುಂಠಿತವಾಗಿ ನಡೆಯಲು ಪರಸ್ಪರ ಸಾಹಾಯಕವಾದ ಕರ್ಮ ಅತ್ಯವಶ್ಯ. ಈ ವಿಷಯವನ್ನು ತೈತ್ತಿರೀಯ ಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ:

'ಯಜ್ಞವು ಪುರುಷ ಪ್ರಮಾಣವುಳ್ಳದ್ದು. ಮಾನವರು ಈ ತತ್ತ್ವವನ್ನು ಅರಿತು ಕರ್ಮವನ್ನು ಆಚರಿಸಿದರೆ ತಾನೂ ಮೂಲ ಪುರುಷನ ಪ್ರಮಾಣವನ್ನೇ ಹೊಂದುತ್ತಾನೆ' (ಪುರುಷ ಸಂಮಿತೋ ಯಜ್ಞಃ| ಯಜ್ಞಃ ಪುರುಷಸಂಮಿತಃ... ತೈ.ಬ್ರಾ. ೩:೭:೧೧:೫) ಎಂದರೆ ತನ್ನ ಸಂಕುಚಿತ ಸ್ವಭಾವದಿಂದ ಮುಕ್ತನಾಗುತ್ತಾನೆ. ಈ ಆತ್ಮವಿಸ್ತೃತಿಯೇ ಯಜ್ಞದ ಉದ್ದೇಶ್ಯ.

ಎಲೈ ವಿಶ್ವಕರ್ಮನೇ, ನಮ್ಮ ಹವಿಸ್ಸಿನಿಂದ ನೀನು ವೃದ್ಧಿಯನ್ನು ಹೊಂದಿ, ನೀನಾಗಿಯೇ ದ್ಯಾವಾ ಪೃಥಿವಿಗಳನ್ನು ಪೂಜಿಸು. ಕರ್ಮರಹಿತ

ರಾದ ಉಳಿದ ಜನರು ಸರ್ವತ್ರ ಮೋಹದಿಂದ ಆವರಿಸಲ್ಪಡಲಿ. ಧನವಂತನಾದ ವಿಶ್ವಕರ್ಮನು ನಮ್ಮ ಈ ಯಜ್ಞದಲ್ಲಿ ನಮಗೆ ಸ್ವರ್ಗಪ್ರಾಪಕನಾಗಲಿ.

ವಾಚಸ್ಪತಿಂ ವಿಶ್ವಕರ್ಮಾಣಮೂತಯೇ
ಮನೋಜುವಂ ವಾಜೇ ಅದ್ಯಾ ಹುವೇಮ ।
ಸ ನೋ ವಿಶ್ವಾನಿ ಹವನಾನಿ ಜೋಷದ್
ವಿಶ್ವಂಶಭೂರವಸೇ ಸಾಧುಕರ್ಮಾ ॥ ೭ ॥

ವಾಚಸ್ಪತಿಂ[7] - ಮಂತ್ರರೂಪವಾದ ವಾಕ್ಕುಗಳಿಗೆ ಒಡೆಯನೂ। **ವಿಶ್ವಕರ್ಮಾಣಂ**- ಸಕಲ ಜಗತ್ತಿಗೂ ನಿರ್ಮಾಪಕನೂ। **ಮನೋಜುವಂ** - ಮನಸ್ಸಿನಂತೆ ವೇಗವುಳ್ಳವನೂ, ಆದ ವಿಶ್ವಕರ್ಮನನ್ನು। **ವಾಜೇ** - ಯುದ್ಧದಲ್ಲಿ। **ಅದ್ಯ** - ಈಗ। **ಊತಯೇ** - ರಕ್ಷಣಾರ್ಥವಾಗಿ। **ಹುವೇಮ** - ಕರೆಯುತ್ತೇವೆ। **ವಿಶ್ವಶಂಭೂಃ** - ಸಕಲರಿಗೂ ಮಂಗಳವನ್ನುಂಟು ಮಾಡುವನೂ। **ಸಾಧುಕರ್ಮಾ** - ಉತ್ತಮವಾದ ಕರ್ಮವುಳ್ಳವನೂ ಆದ। **ಸಃ** - ವಿಶ್ವಕರ್ಮನು। **ನಃ** - ನಮ್ಮ। **ವಿಶ್ವಾನಿ ಹವನಾನಿ** - ಸಕಲ ಆಹ್ವಾನಗಳನ್ನೂ। **ಅವಸೇ** - ನಮ್ಮ ರಕ್ಷಣಾರ್ಥವಾಗಿ। **ಜೋಷತ್** - ಸೇವಿಸಲಿ.

[7] ಜಗತ್ತಿನ ಸೃಷ್ಟಿಗೂ, ವಿಸ್ತೃತಿಗೂ ವಿಶ್ವಕರ್ಮನ ಆತ್ಮಯಜ್ಞವೆ ಮೂಲ ಕಾರಣವೆಂಬುದು ಹಿಂದಿನ ಮಂತ್ರಗಳು ಪ್ರಶಂಸಿಸಿವೆ. ಅದೇ ವಿಶ್ವಕರ್ಮನನ್ನು ಪ್ರಕೃತವಾದ ಮಂತ್ರದಲ್ಲಿ 'ವಾಚಸ್ಪತಿಂ ವಿಶ್ವಕರ್ಮಾಣಂ' ಎಂದು ಸ್ತುತಿಸಿದೆ. ಯಜ್ಞರೂಪನೂ, ಸೃಷ್ಟಿ, ಸ್ಥಿತಿ, ಲಯಗಳಿಗೆ ಮೂಲ ಕಾರಣನೂ ಆದ ವಿಶ್ವಕರ್ಮನನ್ನು ಈ ವಿಶೇಷಣದಿಂದ ಪ್ರಶಂಸಿರುವುದು ಉಚಿತವಾಗಿರುತ್ತದೆ.

ಮೂರು ಲೋಕಗಳಲ್ಲೂ ಘೃತಪೂರ್ಣವಾದ ಸರಸ್ಸನ್ನು ಹೊಂದಿರುವುದರಿಂದ ವಿಶ್ವಕರ್ಮನು 'ಸರಸ್ವಾನ್' ಎಂದು ಪ್ರಸಿದ್ಧನು. ವಾಗ್ದೇವಿಯೂ 'ಸರಸ್ವತೀ' ಎಂದು ಪ್ರಸಿದ್ಧಳಾಗಿದ್ದಾಳೆ (ಸರಸ್ವಂತಮಿತಿ ಪ್ರಾಹ ವಾಚಂ ಪ್ರಾಹುಃ ಸರಸ್ವತೀಮ್— ಬೃ.ದೇ. ೨:೫೧)

ಜಗತ್ಕಾರಣನಾದ ವಿಶ್ವಕರ್ಮನು ಯಾವ ರೀತಿ ತ್ರಿಲೋಕ ವ್ಯಾಪಿಯೋ ಹಾಗೆಯೇ ತತ್ಸ್ವರೂಪಳೇ ಆದ ವಾಗ್ದೇವಿಯೂ (ಬ್ರಹ್ಮವಾಕ್) ತ್ರಿಲೋಕ ವ್ಯಾಪಿಯಾಗಿದ್ದಾಳೆ (ಉಷಸ್ಸೇ ಮುಂತಾದ ಉಳಿದ ದೇವತೆಗಳೂ ವಾಗ್ದೇವಿಯ ರೂಪಾಂತರಗಳೇ ಎಂದೂ ಹಿಂದೆ ತಿಳಿಸಿದೆ).

ಸಕಲ ವ್ಯವಹಾರಗಳಿಗೂ ಕಾರಣನಾದ ವಿಶ್ವಕರ್ಮನೆ [illegible]. ಜಗತ್ತಿನಲ್ಲಿರುವ ಯಾವ ವಸ್ತುವಾಗಲಿ ವಿಶ್ವಕರ್ಮನಿಂದ ಕೃತವಾದುದಲ್ಲದೆ [illegible]

ಉತ್ಪನ್ನವಾದ ಸಕಲವೂ ವಾಗ್ರೂಪದ ವ್ಯವಹಾರಕ್ಕೆ ಸೇರಿರುತ್ತೆ. ಆದ್ದರಿಂದ ವಿಶ್ವಕರ್ಮನಿಗೂ ವಾಕ್ಕಿಗೂ ಅಭೇದ (ವಾಗ್ವೈ ವಿಶ್ವಕರ್ಮ ಋಷಿಃ—ಶ.ಬ್ರಾ. ೮:೧೨:೧)

ವಾಕ್ಕುಗಳಿಗೆ ಒಡೆಯನೂ, ಸಕಲ ಜಗತ್ತಿಗೂ ನಿರ್ಮಾಪಕನೂ, ಮನಸ್ಸಿನಂತೆ ವೇಗವುಳ್ಳವನೂ ಆದ ವಿಶ್ವಕರ್ಮನನ್ನು ಈಗ ಯಜ್ಞದಲ್ಲಿ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ. ಎಲ್ಲರಿಗೂ ಮಂಗಳವನ್ನು ಉಂಟುಮಾಡುವವನೂ, ಉತ್ತಮವಾದ ಕರ್ಮವುಳ್ಳವನೂ ಆದ ವಿಶ್ವಕರ್ಮನು ನಮ್ಮ ರಕ್ಷಣಾರ್ಥವಾಗಿ ನಮ್ಮ ಸಕಲ ಆಹ್ವಾನಗಳನ್ನೂ ಸೇವಿಸಲಿ, ಸಕಲ ಹವಿಸ್ಸುಗಳನ್ನೂ ಸ್ವೀಕರಿಸಲಿ.

ಸೂಕ್ತ ೮೨

ಋಷಿಃ : ವಿಶ್ವಕರ್ಮಾ ಭೌವನಃ, ದೇವತಾ : ವಿಶ್ವಕರ್ಮಾ, ಛಂದಃ : ತ್ರಿಷ್ಟುಪ್

ಚಕ್ಷುಷಃ ಪಿತಾ ಮನಸಾ ಹಿ ಧೀರೋ
ಘೃತಮೇನೇ ಅಜನನ್ನಮ್ನಮಾನೇ ।
ಯದೇದನ್ತಾ ಅದದೃಹನ್ತ ಪೂರ್ವ
ಆದಿದ್ದ್ಯಾವಾ ಪೃಥಿವೀ ಅಪ್ರಥೇತಾಮ್ ॥ ೧ ॥

ಚಕ್ಷುಷಃ[8] - ಚಕ್ಷುರಾದಿ ಇಂದ್ರಿಯಗಳಿಗೆ। ಪಿತಾ - ಪಾಲಕನೂ। ಮನಸಾ – ಆತ್ಮಾಭಿಮಾನದಿಂದ। ಧೀರಃ - ಧೀರನೂ ಆದ ವಿಶ್ವಕರ್ಮನು। ಘೃತಂ - ಉದಕವನ್ನೂ। ಅಜನತ್ – ಉತ್ಪನ್ನ ಮಾಡಿದನು। ನಮ್ನಮಾನೇ - ಇದೇ ಉದಕದಲ್ಲಿ ತೇಲಾಡುತ್ತಿರುವ। ಏನೇ - ದ್ಯಾವಾಪೃಥಿವಿಗಳೆರಡನ್ನೂ ಉತ್ಪನ್ನ ಮಾಡಿದನು। ಯದೇತ್ - ಯಾವಾಗ। ಪೂರ್ವೇ - ಅತ್ಯಂತ ಪ್ರಾಚೀನವಾದ। ಅಂತಾಃ - (ದ್ಯಾವಾ ಪೃಥಿವಿಗಳಿಗೆ ಸೇರಿದ) ದಿಗಂತಗಳು। ಅದದೃಹಂತ-ದೃಢವಾಗಿ ನಿಯಮಿತವಾದವೋ। ಆದಿತ್ -- ಆ ಒಡನೆಯೇ। ದ್ಯಾವಾ ಪೃಥಿವೀ - ದ್ಯಾವಾ ಪೃಥಿವಿಗಳೆರಡೂ । ಅಪ್ರಥೇತಾಂ – ವಿಸ್ತೃತಿಯನ್ನು ಹೊಂದಿದವು[9].

8_9 ಚಕ್ಷುಷಃ ಪಿತಾ ಎಂಬ ವಿಶೇಷಣದಿ [illegible] ಸನ್ನು ಈ ಮಂತ್ರದಲ್ಲಿ ಪ್ರಶಂಸಿದೆ. ಈ ವಿಶೇಷಣಕ್ಕೆ ಎರಡು ವಿಧ [illegible] ಹೇಳಬಹುದು:

೧. ಚಕ್ಷುರಿಂದ್ರಿಯವೇ [illegible] ಸಕಲ ಇಂದ್ರಿಯ [illegible] ವಾದ ಶರೀರಕ್ಕೂ ಉತ್ಪಾದಕನೆಂಬರ್ಥ ಒಂದು; ಎರಡನೆ [illegible] ವಾಗಿ

[illegible] ತೇಜಸ್ಸಿ [illegible] ಷಃ ಪಿತಾ' ಎಂದರೆ ಜ್ಞಾನಸಾಧಕವಾದ ತೇಜಸ್ಸಿಗೆ ಉತ್ಪಾದಕ [illegible] ಇನ್ನೊ [illegible].

ಈ ಎರಡು ವಿಧವಾದ ತಾತ್ಪರ್ಯಗಳಿಗೂ ವೈದಿಕ ವಾಕ್ಯಗಳ ಆಧಾರವಿದೆ.

'ಪಿತೃ' ಶಬ್ದಕ್ಕೆ ಪಾಲಕನೆಂದಾಗಲಿ, ಒಡೆಯನೆಂದಾಗಲಿ ಅರ್ಥ ಮಾಡಬಹುದು. ಪೋಷಕನಾದ್ದರಿಂದಲೆ ಒಡೆಯ. ಚಕ್ಷುರಾದೀಂದ್ರಿಯಗಳಿಗೆ ಪ್ರಾಣವೆ ಪೋಷಕ ಮತ್ತು ಪ್ರಾಣವಿರುವುದರಿಂದಲೆ ಇಂದ್ರಿಯಗಳು ಸುಸ್ಥಿತಿಯಲ್ಲಿವೆ. ಈ ಪ್ರಾಣ ಪರಬ್ರಹ್ಮರೂಪ. ಸಕಲ ಇಂದ್ರಿಯಗಳೂ ಪ್ರಾಣರೂಪಿಯಾದ ಬ್ರಹ್ಮನಿಂದಲೆ ರಕ್ಷಿತವಾಗುತ್ತವೆ (ವಿಜಾನಾಮ್ಯಹಂ ಯತ್ಪ್ರಾಣೋ ಬ್ರಹ್ಮ—ಛಾ. ಉ. ೪:೧೦:೫). "ಆದಿತ್ಯರೂಪನೂ (ಆದಿತ್ಯೋ ಹ ವೈ ಪ್ರಾಣಃ—ಪ್ರ ೧:೫) ವೈಶ್ವಾನರಾಗ್ನಿ ಸಂಜ್ಞಕನೂ (ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣಃ....ಪ್ರ, ೧:೭) ಆದ ಪರಬ್ರಹ್ಮನು ಸಕಲ ಜಗತ್ತಿಗೂ ಪ್ರಾಣರೂಪನು, ವಿಶ್ವರೂಪಿ. ಜಗತ್ಪ್ರಾಣರೂಪಿಯಾದ ಆದಿತ್ಯನು ಉದಯಿಸಿ ವಿಶ್ವವೆಲ್ಲ ಚೈತನ್ಯಯುಕ್ತವಾಗಿರುವಂತೆ ಮಾಡುತ್ತಾನೆ (ಅಥಾದಿತ್ಯ ಉದಯನ್....ಸರ್ವಾನ್ ಪ್ರಾಣಾನ್ ರಶ್ಮಿಷು ಸಂ ನಿಧತ್ತೆ—ಪ್ರ. ಉ. ೧:೬).

ಈ ಪ್ರಾಣವೇ ಸಕಲ ಇಂದ್ರಿಯಗಳಿಗೂ ಪೋಷಕ, ದೇಹದ ಸಕಲ ಇಂದ್ರಿಯಗಳೂ ಈ ಪ್ರಾಣಕ್ಕೆ ಅಧೀನವಾಗಿದ್ದು ಇದರ ನಿಯಮಗಳನ್ನು ಪಾಲಿಸುತ್ತವೆ. ಜಗದ್ವ್ಯಾಪಕವಾದ ಈ ಪ್ರಾಣಕ್ಕೆ ಮನಸ್ಸೇ ಸೇವಕ, ಚಕ್ಷುಸ್ಸೇ ರಕ್ಷಕ. ಶ್ರೋತ್ರವೇ ಪ್ರಕಾಶರೂಪವಾದ ಸಾಧನ.

ವಾಕ್ಕೆ ಗೃಹಪಾಲಕವಾದ್ದಶಕ್ತಿ. ಪ್ರಾಣರೂಪನಾದ ಬ್ರಹ್ಮನು ಇತರ ಇಂದ್ರಿಯಗಳ ಸಹಾಯವಿಲ್ಲದೆ ಇರಬಲ್ಲನು; ಆದರೆ ಇಂದ್ರಿಯಗಳು ಮಾತ್ರ ಪ್ರಾಣದ ಸಹಾಯವಿಲ್ಲದೆ ಬದುಕಲಾರವು. ಪ್ರಾಣವು ಸ್ವತಂತ್ರವಾಗಿರಬಲ್ಲುದೆಂದೂ, ಪ್ರಾಣವಿಲ್ಲದೆ ಇಂದ್ರಿಯಗಳಾವೂ ಜೀವಿಸಲಾರವೆಂದೂ ತಿಳಿಸಲು ಬೃಹದಾರಣ್ಯಕೋಪನಿಷತ್ತಿನಲ್ಲಿ ಇತಿಹಾಸ ರೂಪವಾದ ಒಂದು ಸನ್ನಿವೇಶವು ವಿವೃತವಾಗಿದೆ.

"ಒಂದು ಸಲ ವಾಗಾದೀಂದ್ರಿಯಗಳಿಗೂ ಪ್ರಾಣಕ್ಕೂ ತಮ್ಮ ವೈಯಕ್ತಿಕವಾದ ಶ್ರೇಷ್ಠತೆಯ ವಿಷಯದಲ್ಲಿ ಒಂದು ಚರ್ಚೆಯುಂಟಾಗಿ, ಚಕ್ಷುಸ್ಸು ಶ್ರೋತ್ರ ಇವೆಲ್ಲವೂ ಪರ್ಯಾಯದಂತೆ ಒಂದೊಂದು ವರ್ಷ ಶರೀರವನ್ನು ತ್ಯಜಿಸಿ ಹೊರಟುಹೋದಾಗಲೂ ಆ ಒಂದು ಇಂದ್ರಿಯವಿಲ್ಲದೆ ಉಳಿದ ಇಂದ್ರಿಯಗಳು ಕೆಲಸ ಮಾಡುತ್ತಿದ್ದವು. ಪುರುಷನು ಜೀವಿಸಿಯೆ ಇದ್ದನು. ಆಗ ಪ್ರಾಣವು ತನ್ನ ವೈಶಿಷ್ಟ್ಯತೆಯನ್ನು ಪರೀಕ್ಷಿಸಲಿಚ್ಛಿಸಿ ದೇಹವನ್ನು ತ್ಯಜಿಸಲಾರಂಭಿಸಿತು. ಒಡನೆಯೆ ಸಕಲ ಇಂದ್ರಿಯಗಳೂ ಶಿಥಿಲವಾದವು. ಆಗ ಇಂದ್ರಿಯಗಳು, 'ಎಲೈ ಪ್ರಾಣನೆ, ನೀನು ನಮ್ಮನ್ನು ಬಿಟ್ಟು ಹೋಗಬೇಡ. ನಿನ್ನನ್ನುಳಿದು ಜೀವಿಸಲಾರೆವು. ನೀನೆ ನಮ್ಮೆಲ್ಲರ ಪಾಲಕ, ನಮಗೆಲ್ಲ ಶ್ರೇಷ್ಠ' ಎಂದು ಯಾಚಿಸಿದವು." ಪ್ರಾಣರೂಪಿಯಾದ ಪರಬ್ರಹ್ಮನೇ ಇಂದ್ರಿ

ಯಾಧಿಪತಿಯೂ ಇಂದ್ರಿಯ ಪೋಷಕವೂ ಆದ ಪ್ರಾಣರೂಪದಲ್ಲಿದ್ದಾನೆಂದು ಸಕಲ ಶ್ರುತಿಗಳು ಪ್ರಶಂಸಿಸುತ್ತವೆ.

ಹೀಗೆ ಯಾವ ವಿಶ್ವಾತ್ಮಕವಾದ ತತ್ತ್ವವು ಇಂದ್ರಿಯ ಸಂಘಾತರೂಪವಾದ ಶರೀರಕ್ಕೆಲ್ಲ ಪೋಷಕವಾಗಿದೆಯೆಂದು ವರ್ಣಿತವಾಗಿದೆಯೋ ಅದೇ ತತ್ತ್ವವು ವಿಶ್ವವ್ಯಾಪಕವಾದ ಜ್ಯೋತಿಸ್ತತ್ತ್ವವೆಂದೂ ಉಪನಿಷದಾದಿಗಳಲ್ಲಿ ವರ್ಣಿತವಾಗಿದೆ. ಅದನ್ನೇ ಸಾಯಣರು ಚಕ್ಷುಷಃ ಪಿತಾ ಎಂಬ ವಿಶೇಷಣಕ್ಕೆ ಎರಡನೆಯ ತಾತ್ಪರ್ಯವನ್ನು ವಿವರಿಸುವಾಗ ತಿಳಿಸಿದ್ದಾರೆ.

"ಜ್ಞಾನ ಸಾಧನವೂ, ಜಗತ್ಪ್ರಕಾಶವೂ ಆದ ತೇಜಸ್ಸೆ 'ಚಕ್ಷುಸ್' ಶಬ್ದದಿಂದ ನಿರ್ದಿಷ್ಟವಾಗಿದೆ. ವಿಶ್ವಕರ್ಮನು ಈ ತೇಜಸ್ಸಿನ ಪೋಷಕ" ಎಂದು ಎರಡನೆ ತಾತ್ಪರ್ಯ. ಭೀಷಾಸ್ಮಾದ್ವಾತಃ ಇತ್ಯಾದಿ ವಾಕ್ಯಗಳಲ್ಲಿ ವರ್ಣಿತವಾಗಿರುವಂತೆ ಸೂರ್ಯಾ ಚಂದ್ರಮಸರೇ ಮೊದಲಾಗಿ ಸಕಲ ಲೋಕವೂ ಇವನ ನಿಯಮಕ್ಕೆ ಬೆದರಿ ಎಲ್ಲರೂ ತಮ್ಮ ತಮ್ಮ ಲೋಕರಕ್ಷಣ ಕ್ರಮವಾದ ಕರ್ತವ್ಯದಲ್ಲಿ ನಿರತರಾಗಿದ್ದಾರೆ. ಆ ಸಾರ್ವಭೌಮತ್ವವನ್ನು ಪ್ರಕಟಿಸುತ್ತಿರುವುದರಿಂದ ಮನಸಾ ಹಿ ಧೀರಃ ಎಂದಿದೆ.

ಚಕ್ಷುರಾದೀಂದ್ರಿಯಗಳಿಗೆ ಪಾಲಕನೂ, ಆತ್ಮಾಭಿಮಾನದಿಂದ ಧೀರನೂ, ಆದ ವಿಶ್ವಕರ್ಮನು ಉದಕವನ್ನು ಉತ್ಪನ್ನಮಾಡಿದನು. ಅನಂತರ ಇದೇ ಉದಕದಲ್ಲಿ ತೇಲಾಡುತ್ತಿರುವ ದ್ಯಾವಾ ಪೃಥಿವಿಗಳನ್ನು ಉತ್ಪನ್ನ ಮಾಡಿದನು. ದ್ಯಾವಾ ಪೃಥಿವಿಗಳಿಗೆ ಸೇರಿದ ದಿಗಂತಗಳು ಯಾವಾಗ ದೃಢವಾಗಿ ನಿಯಮಿತವಾದವೋ ಆ ಒಡನೆಯೇ ದ್ಯಾವಾ ಪೃಥಿವಿಗಳೆರಡೂ ವಿಸ್ತರಿಸಲ್ಪಟ್ಟವು.

ವಿಶ್ವಕರ್ಮಾ ವಿಮನಾ ಆದ್ವಿಹಾಯಾ
ಧಾತಾ ವಿಧಾತಾ ಪರಮೋತ ಸಂದೃಕ್ ।
ತೇಷಾಮಿಷ್ಟಾನಿ ಸಮಿಷಾ ಮದನ್ತಿ
ಯತ್ರಾ ಸಪ್ತಋಷೀನ್ ಪರ ಏಕ ಮಾಹುಃ ॥ ೨ ॥

ವಿಶ್ವಕರ್ಮಾ - ವಿಶ್ವಕರ್ಮ ದೇವನು। ವಿಮನಾಃ - ವಿಶೇಷ ಪ್ರಜ್ಞೆಯುಳ್ಳ ಮನಸ್ಸುಳ್ಳವನೂ। ವಿಹಾಯಾಃ - ಮಹಾತ್ಮನೂ। ಧಾತಾ - ಸೃಷ್ಟ್ಯಾದಿಗಳಿಗೆ ಕರ್ತನೂ। ವಿಧಾತಾ – ಸಕಲ ಜಗತ್ತಿಗೂ ನಿರ್ಮಾಪಕನೂ। ಪರಮಾ – ಶ್ರೇಷ್ಠನೂ। ಸಂದೃಕ್ - ಎಲ್ಲವನ್ನೂ ಸೂಕ್ಷ್ಮವಾಗಿ ನೋಡುವವನೂ ಆಗಿದ್ದಾನೆ। ಯತ್ರ - ಯಾವ ವಿಶ್ವಕರ್ಮನಲ್ಲಿ। ತೇಷಾಂ - ಸಕಲ ಜ್ಯೋತಿಗಳ। ಇಷ್ಟಾನಿ - ಸ್ವರೂಪಗಳೂ। ಇಷಾ- ಉದಕದೊಡನೆ ಕೂಡಿ। ಸಂಮದನ್ತಿ - ಒಟ್ಟಿಗೆ ತೃಪ್ತಿಯನ್ನು ಹೊಂದುವುವೊ

ಆ ವಿಶ್ವಕರ್ಮನನ್ನು| ಸಪ್ತರ್ಷೀನ್ ಪರಃ - ಸಪ್ತರ್ಷಿಗಳಿಗಿಂತಲೂ ಅಧಿಕನೂ| ಏಕಂ - ಅದ್ವಿತೀಯನೂ ಆದ ಆದಿತ್ಯನೆಂದು| ಆಹುಃ - (ತಿಳಿದವರು) ಹೇಳುತ್ತಾರೆ.

10. ಈ ಮಂತ್ರಕ್ಕೆ ಆದಿತ್ಯಪರವಾಗಿ ಒಂದು ವಿಧವಾಗಿಯೂ, ಪರಮಾತ ಪರವಾಗಿ ಇನ್ನೊಂದು ವಿಧವಾಗಿಯೂ ತಾತ್ಪರ್ಯವನ್ನು ಹೇಳಿದೆ. ವಿಮನಾಃ, ವಿಹಾಯಾಃ, ಧಾತಾ ಇತ್ಯಾದಿ ವಿಶೇಷಣಗಳಿಗೆ ಎರಡು ಸನ್ನಿವೇಶದಲ್ಲೂ ಒಂದೇ ತಾತ್ಪರ್ಯ. 'ತೇಷಾಮಿಷ್ಟಾನಿ ಸಮಿಷಾಮದನ್ತಿ'; "ಸಪ್ತರ್ಷೀನ್ ಪರಃ" ಎಂಬ ವರ್ಣನೆಗಳಲ್ಲಿ ಮಾತ್ರ ಅರ್ಥ ವ್ಯತ್ಯಾಸವಿದೆ.

೧. ಆದಿತ್ಯಪರವಾದ ತಾತ್ಪರ್ಯ :—ಸಪ್ತರ್ಷಿಗಳೆಂದರೆ, ಆದಿತ್ಯನ ಏಳು ಅವಯವಗಳು. ಸಪ್ತರಶ್ಮಿಗಳಾಗಬಹುದು ಅಥವಾ ಅಯನ, ಋತು, ಮಾಸ, ಪಕ್ಷ, ಅಹಸ್ಸು, ರಾತ್ರಿ, ಮುಹೂರ್ತ ಈ ಅವಯವಗಳಾಗಬಹುದು.

ಆದಿತ್ಯನ ರೂಪಗಳು ನೂರುವಿಧ. ದಿವ್ಯರೂಪವನ್ನು ಸೇರಿಸಿದರೆ ನೂರೊಂದು. ಇಷ್ಟನ್ನೂ ಏಳು ಗುಂಪಾಗಿ ಮಾಡಬಹುದು. ಅವು, ನಾಲ್ಕು ದಿಕ್ಕುಗಳು, ಪೃಥಿವಿ, ಅಂತರಿಕ್ಷ ಮತ್ತು ದ್ಯುಲೋಕ ಈ ಏಳು ಅವಯವಗಳ ನಡುವೆ ಆದಿತ್ಯನು ಪ್ರಕಾಶಿಸುತ್ತಿದ್ದಾನೆ. ಇವನನ್ನು ಸಪ್ತರಶ್ಮಿಗಳೂ ಆಶ್ರಯಿಸಿ ರಸಸಂಗ್ರಹರೂಪವಾದ ಆನಂದವನ್ನನುಭವಿಸುತ್ತಿವೆ.

"ಏಳು ಪ್ರಕಾರವಾದ ಈ ವಿಶ್ವದಲ್ಲಿ ಆದಿತ್ಯನು ಏಳು ವಿಧವಾಗಿ ಸ್ಥಾಪಿತನಾಗಿದ್ದಾನೆ. ಇವು ಏಳು ಋತುಗಳು (ಅಧಿಕಮಾಸವೂ ಸೇರಿ) ಸಪ್ತಸ್ತೋಮಗಳು, ಸಪ್ತಛಂದಸ್ಸುಗಳು, ಸಪ್ತಪ್ರಾಣಗಳು, ಸಪ್ತದಿಕ್ಕುಗಳು. ಇವೆಲ್ಲವೂ ಆದಿತ್ಯನನ್ನು ಆಶ್ರಯಿಸಿ ಸುತ್ತುವರಿದು ನಿಂತಿವೆ"

"ಇದೇ ನೂರೊಂದು ರೂಪವುಳ್ಳ ಆದಿತ್ಯನು ಸಪ್ತಾಕ್ಷರಗಳುಳ್ಳ ಬ್ರಹ್ಮನಲ್ಲಿ ಪ್ರತಿಷ್ಠಿತನಾಗಿದ್ದಾನೆ. ಋಗ್ರೂಪವೊಂದು, ಯಜೂರೂಪವೆರಡು, ಸಾಮವೆರಡು, ಬ್ರಹ್ಮಾತ್ಮಕವಾದುದು ಎರಡು. ಒಟ್ಟು ಸಪ್ತಾಕ್ಷರ ಸ್ವರೂಪನಾದ ಬ್ರಹ್ಮನೆ ವಿಶ್ವ. ವಿಶ್ವವ್ಯಾಪಿಯಾದ ಈ ಬ್ರಹ್ಮನಲ್ಲಿ ಆದಿತ್ಯನು ಪ್ರತಿಷ್ಠಿತನಾಗಿದ್ದಾನೆ." (ಸಪ್ತವಿಧಮಭಿಸಂಪದ್ಯತ.... ಸಪ್ತಸು ದಿಕ್ಷು ಪ್ರತಿಷ್ಠಿತಃ—ಶ.ಬ್ರಾ. ೧೦:೨:೩ ರಿಂದ ೬)

'ಇಷ' ಶಬ್ದಕ್ಕೆ ಉದಕವೆಂದರ್ಥ. ಆದಿತ್ಯನ ಉತ್ತಮವಾದ ಸ್ಥಾನದಿಂದ ಹೊರಡುವ ಆದಿತ್ಯ ರಶ್ಮಿಗಳು ನಾನಾ ಕಡೆಗಳಿಗೂ ಪ್ರಸರಿಸಿ ಲೋಕಕ್ಕೆಲ್ಲ ಉದಕವನ್ನು ಹರಡುತ್ತವೆ ಪುನಃ ಅದೇ ಉದಕವನ್ನು ಸಂಗ್ರಹಿಸಿ ತೃಪ್ತಿಯನ್ನು ಹೊಂದುತ್ತವೆ. ಇಲ್ಲಿ ಕೇವಲ ಉದಕವೆಂದೇ ತಾತ್ಪರ್ಯವಲ್ಲ. ರಸರೂಪವಾದ ಉದಕವೆಂದರ್ಥ. ಅನ್ನವೆಂದೂ ತಾತ್ಪರ್ಯ.

೨. ಅಧ್ಯಾತ್ಮಪರವಾದ ತಾತ್ಪರ್ಯ: ಸಪ್ತರ್ಷಿಗಳೆಂದರೆ ಸಪ್ತೇಂದ್ರಿಯಗಳು. ಈ ಇಂದ್ರಿಯಗಳಿಗೆ ಪರಮಾತ್ಮನೆ ವಿಷಯ, ಎಂದು ತಾತ್ಪರ್ಯ ಹೇಳಿದರೆ ಒಂದು ಶಂಕೆ ಏಳುತ್ತದೆ. ಚಕ್ಷುರಾದೀಂದ್ರಿಯಗಳು ರಾಗಕ್ಕೆ ಕಾರಣವಾಗಿ ಬ್ರಹ್ಮಸಾಕ್ಷಾತ್ಕಾರಕ್ಕೆ ಅವಕಾಶ ಕೊಡುವುದಿಲ್ಲ. ಅವು ಸಾಕ್ಷಾತ್ಕಾರಕ್ಕೆ ದ್ವೇಷಿಗಳು. ಅವು ಹೇಗೆ ಬ್ರಹ್ಮಜ್ಞಾನಕ್ಕೆ ಸಾಧಕ (...ತತ್ರಭವಾ ವಿಷಯರಾಗಾಃ ಸಹಜತ್ವಾತ್ ಭ್ರಾತೃವ್ಯಾಃ—ಬೃ. ಉ. ಶಂ. ಭಾ : ೨ : ೨ : ೧) ಎಂದರೆ, ಇವು ಬಾಹ್ಯೇಂದ್ರಿಯಗಳಲ್ಲ, ಸೂಕ್ಷ್ಮಕರಣಗಳು ಎಂದರ್ಥ ಎಂದು ಸಮಾಧಾನ ಹೇಳಿದೆ. ಇಂದ್ರಿಯರೂಪರಾದ ಋಷಿಗಳೆಲ್ಲರೂ ಪ್ರಾಣರೂಪನಾದ ಆತ್ಮನಲ್ಲಿ ಐಕ್ಯರಾಗುತ್ತಾರೆ ಎಂದು ತಾತ್ಪರ್ಯ.

"ಕೆಳಗಡೆ ತಿರುಗಿಸಿರುವ ತಲೆಯುಳ್ಳದ್ದೂ, ಮೇಲ್ಗಡೆ ತಿರುಗಿಸುವ ಅಡೀ ಭಾಗವುಳ್ಳದ್ದೂ ಆದ ಚಮಸಪಾತ್ರೆಯೇ ಪುರುಷನ ಶಿರಸ್ಸು. ಸಪ್ತಪ್ರಾಣಗಳೇ ಸಪ್ತರ್ಷಿಸಂಜ್ಞಕವಾಗಿವೆ. ಎಂಟನೆಯದಾದ ವಾಕ್ಕುಮಂತ್ರರೂಪಿಯಾದ ಬ್ರಹ್ಮನೊಂದಿಗೆ ಐಕ್ಯವನ್ನು ಹೊಂದಿರುತ್ತದೆ (ಅರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಸ್ತಸ್ಮಿನ್ಯಶೋ ನಿಹಿತಂ ವಿಶ್ವರೂಪಮ್ । ತಸ್ಯಾಸತ ಋಷಯಃ ಸಪ್ತ ತೀರೇ ವಾಗಷ್ಟಮೀ ಬ್ರಹ್ಮಣಾ ಸಂವಿದಾನಾ-ಬೃ. ಉ. ೨:೨:೩). ಋಷಿಸಂಜ್ಞಕವಾದ ಸಪ್ತಪ್ರಾಣಗಳಾವುವೆಂದರೆ; ಎರಡು ಶ್ರೋತ್ರಗಳಲ್ಲಿ ಒಂದು ಗೋತಮ ಇನ್ನೊಂದು ಭಾರದ್ವಾಜ; ಎರಡು ಚಕ್ಷುಸ್ಸುಗಳಲ್ಲಿ ಒಂದು ವಿಶ್ವಾಮಿತ್ರ ಇನ್ನೊಂದು ಜಮದಗ್ನಿ; ಎರಡು ನಾಸಿಕಗಳಲ್ಲಿ ಒಂದು ವಸಿಷ್ಠ ಇನ್ನೊಂದು ಕಶ್ಯಪ. ಅನ್ನಭಕ್ಷಕವಾದ್ದರಿಂದ ನಾಲಿಗೆಯೇ (ವಾಕ್) ಅತ್ರಿ" (ಇಮಾವೇವ ಗೋತಮ ಭರದ್ವಾಜೌ....ಬೃ.ಉ. ೨:೨:೪) ಇಂದ್ರಿಯರೂಪದ ಸಕಲಋಷಿಗಳೂ ಪ್ರಾಣರೂಪದ್ಯ್ಸಪರಮಾತ್ಮನನ್ನು ಆಶ್ರಯಿಸಿ ಆನಂದವನ್ನನುಭವಿಸುತ್ತವೆಯೆಂದು ತಾತ್ಪರ್ಯ.

ವಿಶ್ವಕರ್ಮನು ವಿಶೇಷವಾದ ಪ್ರಜ್ಞೆಯುಳ್ಳವನು, ಮಹಾತ್ಮನು, ಸಕಲ ಜಗತ್ತಿಗೂ ನಿರ್ಮಾಪಕನು, ಶ್ರೇಷ್ಠನು ಮತ್ತು ಸಕಲವನ್ನೂ ಸೂಕ್ಷ್ಮವಾಗಿ ನೋಡಬಲ್ಲವನು. ಯಾವ ವಿಶ್ವಕರ್ಮನಲ್ಲಿ ಸಕಲ ಜ್ಯೋತಿಗಳ ಸ್ವರೂಪವೂ ಉದಕಮಿಶ್ರಿತವಾಗಿ ಒಟ್ಟಿಗೆ ಸೇರಿ ಸಂತೃಪ್ತಿಯನ್ನು ಹೊಂದುವುವೋ ಆ ವಿಶ್ವಕರ್ಮನನ್ನು ಸಪ್ತರ್ಷಿಗಳಿಗಿಂತಲೂ ಅಧಿಕನೂ, ಅದ್ವಿತೀಯನೂ ಆದ ಆದಿತ್ಯನೆಂದು ತಿಳಿದವರು ಹೇಳುತ್ತಾರೆ.

ಯೋ ನಃ ಪಿತಾ ಜನಿತಾ ಯೋ ವಿಧಾತಾ
ಧಾಮಾನಿ ವೇದ ಭುವನಾನಿ ವಿಶ್ವಾ ।
ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯನ್ತ್ಯನ್ಯಾ ॥ ೩ ॥

ಯಃ - ಯಾವ ದೇವನು । **ನಃ** – ನಮಗೆ । **ಪಿತಾ** - ಪಾಲಕನೂ । **ಜನಿತಾ** - ಉತ್ಪಾದಕನೂ ಆಗಿರುವನೋ । **ಯಃ** – ಯಾವನು । **ವಿಧಾತಾ** – ಸಕಲ ಜಗತ್ತಿಗೂ ನಿರ್ಮಾಪಕನೋ । **ಧಾಮಾನಿ** - ಸಕಲ ತೇಜಃ ಸ್ಥಾನಗಳನ್ನೂ । **ವೇದ** - ತಿಳಿದಿರುವನೋ । **ವಿಶ್ವ ಭುವನಾ** - ಸಕಲ ಜಗತ್ತನ್ನು ತಿಳಿದಿರುವನೋ । **ಯಃ** - ಯಾರು । **ದೇವಾನಾಂ** ಅಗ್ನ್ಯಾದಿ ದೇವತೆಗಳಿಗೆ । **ನಾಮಧಾಃ** - ನಾಮನಿರ್ದೇಶಮಾಡುವನೋ ಆ ದೇವನು । **ಏಕಏವ** - ಅದ್ವಿತೀಯನಾಗಿದ್ದಾನೆ । **ತಂ** - ಆ ವಿಶ್ವಕರ್ಮನನ್ನು । **ಅನ್ಯಾ ಭುವನಾ** - ಇತರ ಭೂತಜಾತಗಳು । **ಸಂಪ್ರಶ್ನಂ** – ಈಶ್ವರ ಸ್ವರೂಪವನ್ನು ತಿಳಿಯುವ ಪ್ರಶ್ನೆಯೊಡನೆ । **ಯನ್ತಿ** - ಸಮೀಪಿಸುತ್ತವೆ.

11. ಈ ಮಂತ್ರದಲ್ಲಿ ಎರಡು ಮುಖ್ಯವಾದ ಅಭಿಪ್ರಾಯಗಳಿವೆ :

೧) ಸಕಲ ಉತ್ಪತ್ತಿ ಸ್ಥಿತಿಗಳಿಗೆ ಕಾರಣನಾದ ವಿಶ್ವಕರ್ಮನೊಬ್ಬನೆ. ಸಕಲ ಜಗನ್ನಿರ್ಮಾಪಕನು; ನಾಮ ನಿರ್ದೇಶಮಾಡುವವನು ಮತ್ತು ನಾಮ ಪ್ರಭೇದಗಳನ್ನು ಹೊಂದಿರುವವನು.

೨) ಉತ್ಪನ್ನವಾದ ಜಗತ್ತಿಗೆ ಅತೀತನಾಗಿರುವುದರಿಂದ ಗ್ರಾಹ್ಯಾತೀತನು. ದೇವತೆಗಳ ಜ್ಞಾನಕ್ಕೂ ಮೀರಿದ ಸ್ವರೂಪವುಳ್ಳವನು. ಸಕಲರೂ ಇವನ ಸ್ವರೂಪವೇನೆಂದು ಪ್ರಶ್ನಿಸುವರೇ ವಿನಾ ಅವನ್ನು ಪೂರ್ಣವಾಗಿ ಅರಿತವರಿಲ್ಲ.

ಸಕಲ ಜಗತ್ತೂ ಈತನ ಅಂಶ. ಇಂದ್ರಾದಿ ದೇವತೆಗಳ ಹೆಸರೂ ಇವನ ನಾಮಾಂತರ. [illegible] ಕರ್ಮಾನುಸಾರವಾಗಿ **ಪಿತಾ**, ಜನಿತಾ ಇತ್ಯಾದಿ ವಿಶೇಷಣಗಳು. "ಈಶ್ವರನು ಒಬ್ಬನೆ. ಅವನು ವಿಶ್ವರೂಪನು. ತಾನು ಧರಿಸಿದ ರೂಪಕ್ಕನುಗುಣವಾದ ಸಂಜ್ಞೆಯಿಂದ ವ್ಯವಹೃತನು" (ಯಾದೃಗೇವ ದದೃಶೇ ತಾದೃಗುಚ್ಯತೆ.... ೫:೪೪:೬) "ವಿಶ್ವವನ್ನೆಲ್ಲಾ ಒಂದಾಗಿ ಯೋಜಿಸುವುದರಿಂದ ಇವನು 'ಯಜುಸ್'. ಸಕಲವಸ್ತುಗಳೂ ಇವನಿಂದ ಸಮಾನಸ್ಥಿತಿಯನ್ನು ಹೊಂದಿರುವುದರಿಂದ 'ಸಾಮನ್' ಹೀಗೆ ನಾನಾ ರೂಪಗಳು; ನಾನಾ ನಾಮಗಳು" (ಯಜುರಿತ್ಯೇಷ ಹೀದಗ್ಂ ಸರ್ವಂ.... ಶ.ಬ್ರಾ. ೧೦:೫:೨:೨೦) ಆದರೂ ಪಾರಮಾರ್ಥಿಕ ಸತ್ಯ ಒಂದೇ (ಮೃತ್ತಿಕೇತ್ಯೇವ ಸತ್ಯಂ.... ಛಾ. ಉ. ೬:೧:೪)

ಇವನ ಪರಮಾರ್ಥ ಸತ್ಯವೇನೆಂದು ಸುಲಭವಾಗಿ ತಿಳಿಯುತಕ್ಕ ವಿಷಯವಲ್ಲ ಆದ್ದರಿಂದಲೆ ಕಿಂ ಸ್ವಿದಾಸೀದಧಿಷ್ಠಾನಂ...(೧:೮೧:೨) ಕೋ ದದರ್ಶ ಪ್ರಥಮಂ ಜಾಯಮಾನಂ...(೧:೧೬೪:೪) ಇತ್ಯಾದಿ ಪ್ರಶ್ನೆಗಳು ಸಹಜ. ಅದನ್ನೇ ತಂ ಸಂಪ್ರಶ್ನಂ ಭುವನಾ ಯನ್ತ್ಯನ್ಯಾ ಎಂದು ತಿಳಿಸಿದೆ.

ಯಾವ ದೇವನು ಸಕಲ ಜಗತ್ತಿಗೂ ನಿರ್ಮಾಪಕನೂ, ಪಾಲಕನೂ ಆಗಿರುವನೋ, ಯಾರು ಸಕಲ ತೇಜಃಸ್ಥಾನಗಳನ್ನೂ ತಿಳಿದಿರುವನೋ, ಯಾರು ಅಗ್ನ್ಯಾದಿ ದೇವತೆಗಳಿಗೆ ನಾಮನಿರ್ದೇಶವನ್ನು ಕೊಡುವನೋ, ಆ ದೇವನು ಅದ್ವಿತೀಯನಾಗಿದ್ದಾನೆ. ಇತರ ಭೂತಜಾತಗಳೆಲ್ಲವೂ ಈಶ್ವರನ ಸ್ವರೂಪವನ್ನು ತಿಳಿಯುವ ಪ್ರಶ್ನೆಯೊಡನೆ ಅವನನ್ನು ಸಮೀಪಿಸುತ್ತವೆ.

ತ ಆಯಜನ್ತ ದ್ರವಿಣಂ ಸಮಸ್ಮಾ
ಋಷಯಃ ಪೂರ್ವೇ ಜರಿತಾರೋ ನ ಭೂನಾ ।
ಅಸೂರ್ತೇ ಸೂರ್ತೇ ರಜಸಿ ನಿಷತ್ತೇ
ಯೇ ಭೂತಾನಿ ಸಮಕೃಣ್ವನ್ನಿಮಾನಿ ॥ ೪ ॥

ಯೇ - ಯಾವ ಮಹರ್ಷಿಗಳು । **ಅಸೂರ್ತೇ** - ಸ್ಥಾವರಾತ್ಮಕವೂ। **ಸೂರ್ತೇ** ಜಂಗಮಾತ್ಮಕವೂ ಆದ। **ರಜಸಿ** – ಲೋಕದಲ್ಲಿ। **ನಿಷತ್ತೇ** - ಇರುವ। **ಇಮಾನಿ ಭೂತಾನಿ** - ಸಕಲ ಭೂತಗಳನ್ನೂ। **ಸಮಕೃಣ್ವನ್** – ಸಂಸ್ಕರಿಸಿದರೋ। **ತೇ** – ಅಂಥ **ಪೂರ್ವೇ ಋಷಯಃ** - ಪ್ರಾಚೀನರಾದ ಋಷಿಗಳು। **ಭೂನಾ** - ಅಧಿಕವಾದ ಸ್ತೋತ್ರಗಳಿಂದ। **ಜರಿತಾರೋ ನ** - ಸ್ತುತಿ ಕರ್ತರು ಪೂಜಿಸುವಂತೆ। **ಅಸ್ಮೈ** - ವಿಶ ಕರ್ಮನನ್ನು ಉದ್ದೇಶಿಸಿ। **ದ್ರವಿಣಂ** - ಚರುಪುರೋಡಾಶಾದಿಗಳಿಂದ। **ಸಮಾಯ ಜನ್ತ**[12] - ಸರ್ವತ್ರ ಪೂಜಿಸುತ್ತಾರೆ.

12. ಇಂದ್ರಿಯರೂಪರಾದ ಋಷಿಗಳು ಪ್ರಾಣರೂಪದ ಪರಮಾತ್ಮನನು ಸೇವಿಸಿ ಅದರ ಫಲವಾಗಿ ತೃಪ್ತಿಹೊಂದಿದ ವಿಷಯವನ್ನು ಹಿಂದೆ ತಿಳಿಸಿದೆ. **ತೇಷಾಮಿಷ್ಟಾನಿ ಸಮಿಷಾ ಮದಂತಿ'** (೧:೮೨:೩) ಪ್ರಕೃತವಾದ ಮಂತ್ರದಲ್ಲಿ ಅದೇ **ಭಾವವನ್ನು ವಿಸ್ತರಿಸಿದೆ.**

ಸೂರ್ತ ಎಂದರೆ ಜಂಗಮಾತ್ಮಕ ಜಗತ್ತು; ಅಸೂರ್ತ ವೆಂದರೆ ಸ್ಥಿರವಾದ ಜಗತ್ತು. ಋಷಿಗಳು ಸ್ಥಾವರ ಜಂಗಮಾತ್ಮಕಗಳಾದ ಸಕಲ ಲೋಕಗಳನ್ನೂ ವಿಶ್ವಕರ್ಮನ ಸ್ಥಾನವೆಂದರಿತು ಅವನ ಸರ್ವವ್ಯಾಪಕತ್ವವನ್ನು ಸಾಕ್ಷಾತ್ಕರಿಸಿಕೊಂಡು ಪೂಜಿಸಿದರು ಎಂದು ಒಂದರ್ಥ.

ಎರಡನೆಯದಾಗಿ—ರಶ್ಮಿರೂಪರಾದ ಋಷಿಗಳ ಆದಿತ್ಯಪೂಜೆ. ಪ್ರಥಮತಃ ಆದಿತ್ಯನಿಂದ ಪ್ರಸರಿಸಿದ ಸ್ಥಾವರ ಜಂಗಮಾತ್ಮಕಗಳಿಂದ ಸಕಲ ಲೋಕಗಳನ್ನೂ ತಮ್ಮ ತೇಜಸ್ಸಿನಿಂದ ವ್ಯಾಪಿಸುತ್ತವೆ. ಪುನಃ ಅದೇ ಲೋಕಗಳ ಸಾರವನ್ನು ಹೀರಿ ಆ ಸಾರ ರೂಪವಾದ ದ್ರವ್ಯದಿಂದ ಆದಿತ್ಯನಿಗೆ ಪೂಜೆಯನ್ನರ್ಪಿಸುತ್ತವೆ ಎಂದು ಇನ್ನೊಂದರ್ಥ.

ಸ್ಥಾವರಾತ್ಮಕವೂ ಜಂಗಮಾತ್ಮಕವೂ ಆದ ಸಕಲ ಭೂತಗಳಿಂದ ಕೂಡಿದ ಲೋಕದಲ್ಲಿ ಪ್ರಾಚೀನರಾದ ಮಹರ್ಷಿಗಳು ತಮ್ಮ ಪ್ರಭಾವದಿಂದ ಸಕಲ ಭೂತಗಳನ್ನೂ ಸಂಸ್ಕರಿಸಿದರು. ಸ್ತುತಿಕರ್ತರು ತಮ್ಮ ಮಹತ್ತಾದ ಸುಕ್ತಿಗಳಿಂದ ಪೂಜಿಸುವಂತೆ, ಈ ಮಹರ್ಷಿಗಳೂ ಚರುಪುರೋಡಾಶಗಳಿಂದ ವಿಶ್ವಕರ್ಮನನ್ನು ಆರಾಧಿಸುತ್ತಾರೆ.

ಪರೋ ದಿವಾ ಪರ ಏನಾ ಪೃಥಿವ್ಯಾ
ಪರೋ ದೇವೇಭಿರಸುರೈರ್ಯದಸ್ತಿ ।
ಕಂ ಸ್ವಿದ್ಗರ್ಭಂ ಪ್ರಥಮಂ ದಧ್ರ ಆಪೋ
ಯತ್ರ ದೇವಾಃ ಸಮಪಶ್ಯನ್ತ ವಿಶ್ವೇ ॥ ೫ ॥

ದಿವಾ ಪರಃ - ದ್ಯುಲೋಕಕ್ಕಿಂತಲೂ ಅಧಿಕವೂ। ಏನಾಪೃಥಿವ್ಯಾಪರಃ - ಈ ಪೃಥ್ವಿಗಿಂತಲೂ ಅಧಿಕವೂ। ದೇವೇಭಿಃ - ದೇವತೆಗಳಿಗಿಂತಲೂ ಅಧಿಕವೂ। ಅಸುರೈಃ - ಅಸುರರಿಗಿಂತಲೂ ಅಧಿಕವೂ ಆದ। ಯತ್ ಗರ್ಭಂ ಅಸ್ತಿ - ಯಾವ ರಹಸ್ಯ ತತ್ವವುಂಟೋ। (ಯತ್ - ಯಾವುದನ್ನು)। ಆಪಃ – ಉದಕಗಳು। ಪ್ರಥಮಾ - ಎಲ್ಲಕ್ಕಿಂತಲೂ ಮೊದಲು। ದಧ್ರೇ - ಧರಿಸಿದವೋ। ಯತ್ರ - ಯಾವ ಗರ್ಭದಲ್ಲಿ। ವಿಶ್ವೇ ದೇವಾಃ - ಇಂದ್ರಾದಿ ಸಕಲ ದೇವತೆಗಳೂ। ಸಮಪಶ್ಯನ್ತ[13] - ಪರಸ್ಪರ ದರ್ಶನವನ್ನು ಹೊಂದಿದರೋ (ಆ ಗರ್ಭವು) ಕಂ ಸ್ವಿತ್ - ಯಾವುದು ? ಅದರ ಸ್ವರೂಪವೇನು ?

13. ಅದಿತಿರ್ಜಾತಮದಿತಿರ್ಜನಿತ್ವಂ (ಋ. ಸಂ. ೧:೮೯:೧೦) ಇತ್ಯಾದಿಯಾಗಿ ಸಂಹಿತೆಗಳಲ್ಲೂ, ಏಕೋ ವಶೀ ಸರ್ವಭೂತಾಂತರಾತ್ಮಾ (ಕಠ. ಉ. ೫:೧೨ ಇತ್ಯಾದಿಯಾಗಿ ಉಪನಿಷತ್ತುಗಳಲ್ಲೂ ವರ್ಣಿಸಿರುವಂತೆ ಇಲ್ಲಿಯೂ, ಈ ವಿಶ್ವಕರ್ಮನು ಜಗದತಿರಿಕ್ತನೆಂದೂ, ಸಕಲ ಜಗತ್ತೂ, ಸಕಲ ದೇವತೆಗಳೂ ಇವನಲ್ಲೇ ಅಂತರ್ಗತರಾಗಿದ್ದಾರೆಂದೂ ಪ್ರಶಂಸಿಸಿ, ಜಗತ್ತಿಗೆಲ್ಲ ಗರ್ಭರೂಪನಾದ ಇವನನ್ನು ಸೃಷ್ಟಿಗೆ ಪೂರ್ವ ಉದಕಗಳು ಧರಿಸಿದ್ದವು ಎಂದು ಸ್ತುತಿಸಿದೆ.

ಜಗತ್ತಿಗೆಲ್ಲ ಮುಖ್ಯ ಕಾರಣವಾದ ಉದಕವೇ ಸತ್ಯ. ಎಲ್ಲೆಲ್ಲಿ ಉದಕದ ದಿವ್ಯ ಪ್ರಕಾಶವು ಪ್ರಸರಿಸುವುದೋ ಅಲ್ಲೆಲ್ಲ ಸತ್ಯದ ಅಂಶ ಪ್ರವಹಿಸುತ್ತದೆ. ಇದೇ ಉದಕ

ದಲ್ಲಿ ಸುವರ್ಣರೂಪದ ಅಂಡವು ಉದ್ಭೂತವಾಗಿ ಜಗತ್ತಿಗೆ (ವಿಶ್ವಗರ್ಭಕ್ಕೆ) ಮೂಲ ವಾಯಿತು (ತಸ್ಮಾದ್ಯೇನಾಪೋ ಯಂತಿ ತತ್ಸತ್ಯಸ್ಯ ರೂಪಂ....ಶ. ಬ್ರಾ. ೪:೧:೬).

ಸಲಿಲನೇ ಪ್ರಥಮಧಾರಕವಾದ ಆಶ್ರಯವಾದುದರಿಂದಲೂ, ಬ್ರಹ್ಮನಂತೆಯೆ ಉದಕವೂ ಜಗದ್ವ್ಯಾಪಿಯಾಗಿರುವುದರಿಂದಲೂ, ಪೃಥ್ವೀ, ಅಂತರಿಕ್ಷ, ದ್ಯುಲೋಕ, ದೇವತೆಗಳು, ಮನುಷ್ಯರು ಇತ್ಯಾದಿ ಸಕಲರೂಪಗಳನ್ನೂ ಹೊಂದುತ್ತದೆ. ಆದ್ದರಿಂದ ಈ ಉದಕವೇ ಬ್ರಹ್ಮನೆಂದು ಯಾರು ಅನುಸಂಧಾನ ಮಾಡುವರೋ ಅವರು ಸಕಲ ಸಂತೃಪ್ತಿಯನ್ನು ಪಡೆಯುತ್ತಾರೆ (ಸಯೋऽಆಪೋ ಬ್ರಹ್ಮೇತ್ಯುಪಾಸ್ತ ಆಪ್ನೋತಿ ಸರ್ವಕಾಮಾಂಸ್ತೃಪ್ತಿಮಾನ್ ಭವತಿ—ಛಾ. ಉ. ೭:೧೦:೨) ಇತ್ಯಾದಿಯಾಗಿ ಉದಕ ತತ್ತ್ವವನ್ನು ಪ್ರಶಂಸಿಸುವ ಉಪನಿಷದ್ವಾಕ್ಯಗಳಿಗೆ ಈ ಮಂತ್ರವು ಆಧಾರವಾಗಿದೆ.

ದ್ಯುಲೋಕಕ್ಕಿಂತಲೂ ಅಧಿಕವೂ, ಈ ಪೃಥ್ವಿಗಿಂತಲೂ ಅಧಿಕವೂ, ದೇವತೆಗಳಿಗಿಂತಲೂ ಅಧಿಕವೂ, ಅಸುರರಿಗಿಂತಲೂ ಅಧಿಕವೂ ಆದ ಗರ್ಭ ರೂಪವಾದ ಯಾವ ರಹಸ್ಯವಿದೆಯೋ, ಯಾವುದನ್ನು ಉದಕಗಳು ಎಲ್ಲಕ್ಕಿಂತಲೂ ಮೊದಲು ಧರಿಸಿದವೋ, ಯಾವ ಗರ್ಭದಲ್ಲಿ ಇಂದ್ರಾದಿ ಸಕಲ ದೇವತೆಗಳೂ ಪರಸ್ಪರ ದರ್ಶನವನ್ನು ಹೊಂದಿದರೋ, ಆ ಗರ್ಭದ ರಹಸ್ಯ ಸ್ವರೂಪವೇನು?

ತಮಿದ್ಗರ್ಭಂ ಪ್ರಥಮಂ ದಧ್ರ ಆಪೋ
ಯತ್ರದೇವಾಃ ಸಮಗಚ್ಛಂತ ವಿಶ್ವೇ ।
ಅಜಸ್ಯ ನಾಭಾವಧ್ಯೇಕಮರ್ಪಿತಂ
ಯಸ್ಮಿನ್ವಿಶ್ವಾನಿ ಭುವನಾನಿ ತಸ್ಥುಃ ॥ ೬ ॥

ಯತ್ರ - ಯಾವ ಗರ್ಭದಲ್ಲಿ । ವಿಶ್ವೇದೇವಾಃ - ಸಕಲ ದೇವತೆಗಳೂ ಸಮಗಚ್ಛಂತ - ಒಟ್ಟಿಗೆ ಸೇರಿಕೊಂಡಿರುವರೋ । ತಮಿದ್ಗರ್ಭಂ - ಅದೇ ಗರ್ಭವನ್ನು । ಆಪಃ - ಉದಕಗಳು । ಪ್ರಥಮಂ - ಸೃಷ್ಟಿಗೆ ಪೂರ್ವದಲ್ಲಿ । ದಧ್ರೇ - ಧರಿಸಿದವು । ಯಸ್ಮಿನ್ - ಯಾವ ಈ ಅಂಡದಲ್ಲಿ । ವಿಶ್ವಾನಿ ಭುವನಾನಿ - ಸಕಲ ಭೂತಗಳೂ । ತಸ್ಥುಃ - ಸ್ಥಾಪಿತವಾಗಿವೆಯೋ ಅಂಥ । ಏಕಂ - ಅದ್ವಿತೀಯವಾದ ಬ್ರಹ್ಮಾಂಡವು । ಅಜಸ್ಯ ನಾಭೌ - ಜನ್ಮರಹಿತವಾದ ಮೂಲತತ್ವದ ನಾಭಿಯಲ್ಲಿ । ಅರ್ಪಿತಂ - ಅರ್ಪಿತ ವಾಗಿದೆ (ಸ್ಥಾಪಿತವಾಗಿದೆ).

14. 'ಜಗತ್ಸೃಷ್ಟಿಗೆ ಪೂರ್ವ ಬ್ರಹ್ಮಾಂಡವನ್ನೇ ತನ್ನಲ್ಲಿ ಅಡಗಿಸಿಕೊಂಡಿದ್ದ ಹಿರಣ್ಯಗರ್ಭನು ಸಲಿಲದಲ್ಲಿ ಸ್ಥಾಪಿತನಾಗಿದ್ದನು' ಎಂದು ಹಿಂದಿನ ಮಂತ್ರದಲ್ಲಿ ಹೇಳಿ

ರುವ ವಿಷಯವು ಇಲ್ಲಿ ವಿವರಿಸಲ್ಪಟ್ಟಿದೆ. ಇಲ್ಲಿ ಅಜಸ್ಯನಾಭೌ ಎಂಬ ಪದಗಳು ಮಂತ್ರದ ಮುಖ್ಯಾಂಶವನ್ನು ತಿಳಿಸುತ್ತವೆ.

'ಅಜ' ಶಬ್ದಕ್ಕೆ ಜನ್ಮರಹಿತವಾದುದೆಂದರ್ಥ. 'ಭುವನ' ಶಬ್ದವು ಉತ್ಪನ್ನವಾದ ಸಕಲ ಭೂತಗಳನ್ನು ನಿರ್ದೇಶಿಸುತ್ತದೆ. ಪರಬ್ರಹ್ಮನಿಂದ ಸೃಷ್ಟವಾದ ಸಕಲಭೂತಗಳೂ ಜನ್ಮರಹಿತನಾದ ಹಿರಣ್ಯಗರ್ಭನ ನಾಭಿಯಲ್ಲಿ ಅಂತರ್ಗತವಾಗಿವೆ ಎಂದರ್ಥ.

ಯಾವ ಗರ್ಭದಲ್ಲಿ ಸಕಲ ದೇವತೆಗಳೂ ಒಟ್ಟಿಗೆ ಸೇರಿಕೊಂಡಿರುವರೋ, ಅಂಥ (ವಿಶ್ವಕರ್ಮರೂಪವಾದ) ಗರ್ಭವನ್ನು ಉದಕಗಳು ಸೃಷ್ಟಿಗೆ ಪೂರ್ವದಲ್ಲಿ ಧರಿಸಿದವು. ಯಾವ ಈ ಅಂಡದಲ್ಲಿ ಸಕಲ ಭೂತಗಳೂ ಸ್ಥಾಪಿತವಾಗಿವೆಯೋ ಅಂಥ ಅದ್ವಿತೀಯವಾದ ಬ್ರಹ್ಮಾಂಡವು ಜನ್ಮ ರಹಿತವಾದ ಮೂಲತತ್ತ್ವದ ನಾಭಿಯಲ್ಲಿ ಅರ್ಪಿತವಾಗಿದೆ.

ನ ತಂ ವಿದಾಥ ಯ ಇಮಾ ಜಜಾನಾಽ
ನ್ಯದ್ಯುಷ್ಮಾಕಮನ್ತರಂ ಬಭೂವ ।
ನೀಹಾರೇಣ ಪ್ರಾವೃತಾ ಜಲ್ಪ್ಯಾ ಚಾಽ
ಸುತೃಪ ಉಕ್ಥಶಾಸಶ್ಚರನ್ತಿ ॥ ೭ ॥

ಯಃ - ಯಾವ ವಿಶ್ವಕರ್ಮನು । ಇಮಾ - ಈ ಭೂತಗಳನ್ನು । ಜಜಾನ - ಉತ್ಪನ್ನ ಮಾಡಿದನೋ । ತಂ - ಆ ವಿಶ್ವಕರ್ಮನನ್ನು । ನ ವಿದಾಥ - ನೀವು ಅರಿಯ ಲಾರಿರಿ । ಯುಷ್ಮಾಕಂ - ಪ್ರತ್ಯೇಕತೆಯನ್ನು ಹೊಂದಿರುವ ಅನನ್ತ ಜೀವರುಗಳಿ ಗಿಂತಲೂ । ಅಂತರಂ - ಬೇರೆಯಾದ । ಅನ್ಯತ್ - ಪರತತ್ತ್ವವೊಂದು । ಬಭೂವ - ಇರುತ್ತದೆ । (ಈ ಪರತತ್ತ್ವದ ಜ್ಞಾನವಿಲ್ಲದೆ) । ನೀಹಾರೇಣ - ಮಂಜಿನ ಗಡ್ಡೆಯಂತಿ ರುವ ಅಜ್ಞಾನದಿಂದ । ಪ್ರಾವೃತಾಃ - ಮುಚ್ಚಲ್ಪಟ್ಟಿರುವವರೂ । ಜಲ್ಪ್ಯಾ - ಅಭಿ ಮಾನ ಪೂರ್ವಕವಾಗಿ ವ್ಯವಹಾರಗಳಲ್ಲಿ ನಿರತರಾಗಿರುವವರೂ । ಅಸುತೃಪಃ - ಕೇವಲ ಭೋಗವನ್ನೇ ಪ್ರಧಾನವಾಗಿಟ್ಟುಕೊಂಡಿರುವವರೂ ಆದ ಅಜ್ಞಾನಿಗಳು । ಚರನ್ತಿ[15] - ಅಧಿಕವಾಗಿರುತ್ತಾರೆ (ಸಂಸಾರದಲ್ಲಿ ಅಲೆಯುತ್ತಾರೆ).

15. ವಿಶ್ವಕರ್ಮನಿಂದ ಉತ್ಪನ್ನವಾದ ಯಾವ ಚೇತನವೂ ಇವನ ಮಹಿಮೆ ಯನ್ನು ತಿಳಿಯಲು ಶಕ್ತವಾಗಿಲ್ಲ. ಇದಕ್ಕೆ ಕಾರಣಗಳು ಎರಡು.

೧) ಈಶ್ವರನು ಇಂದ್ರಿಯಾದ್ಯುಪಕರಣಗಳಿಗೆ ಗೋಚರನಲ್ಲ. ತಪಸ್ವಿಗಳಾದ ಋಷಿಗಳೂ ಈಶ್ವರನ ಒಂದಂಶವನ್ನು ಮಾತ್ರ ಸಾಕ್ಷಾತ್ಕರಿಸಬಲ್ಲರು.

೨) ಈ ತಪಸ್ಸಿನ ಪ್ರಭಾವವು ಎಲ್ಲೋ ಕೆಲವು ದಿವ್ಯವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಉತ್ಪನ್ನವಾದ ಸಕಲ ಚೇತನಗಳೂ ಸಾಧಾರಣವಾಗಿ ಅಹಂಕಾರದಿಂದಲೂ ಆವೃತ ವಾಗಿವೆ.

ಜಗತ್ಕಾರಣನಾದ ಈಶ್ವರನು ಜಗತ್ತಿನ ವೈವಿಧ್ಯದಲ್ಲಿ ಏಕತ್ವವನ್ನು ಪ್ರತಿಪಾದಿಸುವ ಸೂತ್ರಾತ್ಮನಾಗಿ ಸರ್ವಾಂತರ್ಯಾಮಿಯಾಗಿದ್ದರೂ ಇವನ ಮಹಿಮೆಯನ್ನು ತಿಳಿಯಲು ಶಕ್ಯವಿಲ್ಲ.

"ಈ ಸೂತ್ರಾತ್ಮನು ಪೃಥಿವ್ಯಾದಿ ಸಕಲ ಲೋಕಗಳಲ್ಲೂ, ಅಗ್ನ್ಯಾದಿ ಸಕಲ ದೇವತೆಗಳಲ್ಲೂ ವ್ಯಾಪಿಸಿದ್ದರೂ, ಅವಾವಕ್ಕೂ ಇವನ ಮಹಿಮೆಯನ್ನು ತಿಳಿಯಲು ಶಕ್ಯವಿಲ್ಲ."

ಗುಹ್ಯತಮವಾದ ಈಶ್ವರ ಸಾಕ್ಷಾತ್ಕಾರಕ್ಕೆ ಜ್ಞಾನ ಮತ್ತು ಧ್ಯಾನಗಳಿಂದ ಕೂಡಿದ ಆತ್ಮಶುದ್ಧಿ ಮತ್ತು ಶಕ್ತಿಗಳಿರಬೇಕು. ಆದರೆ 'ಬೆಂಕಿಯನ್ನು ಹೊಗೆ ಮುಚ್ಚುವಂತೆಯೂ, ಕನ್ನಡಿಯ ಪ್ರಕಾಶವನ್ನು ಕೊಳೆ ಮುಚ್ಚುವಂತೆಯೂ, ಆತ್ಮನ ಪ್ರಕಾಶವನ್ನು ಕಾಮರೂಪಿಯಾದ ವೈರಿಯು ಮುಚ್ಚುತ್ತದೆ' (ಧೂಮೇನಾವ್ರಿಯತೇ ವಹ್ನಿರ್ಯಥಾದರ್ಶೋ ಮಲೇನಚ ತಥಾ ತೇನೇದಮಾವೃತಮ್ - ಭ. ಗೀ. ೩:೩೮) ಮಂಜಿನ ಗಡ್ಡೆಯಂತಿರುವ ಅಜ್ಞಾನದಿಂದ ಅವರು ಮುಚ್ಚಲ್ಪಟ್ಟಿದ್ದಾರೆ (ನೀಹಾರೇಣ ಪ್ರಾವೃತಾ .ಜಲ್ಪ್ಯಾ). ಕೇವಲ ಇಂದ್ರಿಯ ಸೌಖ್ಯವೇ ಅವರ ಗುರಿ. ಅಸುತೃಪಃ, ಉಕ್ಥಶಾಸಃ ಎಂಬ ವಿಶೇಷಣಗಳು ಭೋಗಾಸಕ್ತರಾದ ಅವರ ನಿಕೃಷ್ಟವಾದ ಜೀವನ ವನ್ನು ತಿಳಿಸುತ್ತವೆ. ಪರತತ್ತ್ವಜ್ಞಾನವು ಅವರಿಗೆ ಸಾಧ್ಯವಿಲ್ಲ ಎಂದು ತಾತ್ಪರ್ಯ.

ಯಾವ ವಿಶ್ವಕರ್ಮನು ಈ ಭೂತಗಳನ್ನು ಉತ್ಪನ್ನ ಮಾಡಿದನೋ ಆ ವಿಶ್ವಕರ್ಮನನ್ನು ನೀವು ಅರಿಯಲಾರಿರಿ. ಪ್ರತ್ಯೇಕತೆಯನ್ನು ಹೊಂದಿರುವ ಅನಂತ ಜೀವರುಗಳಿಗಿಂತಲೂ ಬೇರೆಯಾದ ಪರತತ್ತ್ವವೊಂದಿದೆ. ಈ ಪರತತ್ತ್ವ ಜ್ಞಾನವಿಲ್ಲದೆ ಮಂಜಿನ ಗಡ್ಡೆಯಂತಿರುವ ಅಜ್ಞಾನದಿಂದ ಮುಚ್ಚಲ್ಪಟ್ಟಿರು ವವರೂ ಸ್ವಾಭಿಮಾನ ಪೂರ್ವಕವಾದ ವ್ಯವಹಾರಗಳಲ್ಲಿ ನಿರತರಾಗಿರುವವರೂ, ಕೇವಲ ಇನ್ದ್ರಿಯ ಭೋಗವನ್ನೇ ಪ್ರಧಾನವಾಗಿಟ್ಟುಕೊಂಡಿರುವವರೂ, ಕಾಮ್ಯ ಕರ್ಮಕ್ಕೆ ಪ್ರಧಾನವಾದ ಮಂತ್ರಗಳನ್ನೇ ಪಠಿಸುತ್ತಿರುವ ಭೋಗಾ ಸಕ್ತರೂ ಆದ ಅಜ್ಞಾನಿಗಳೇ ಅಧಿಕವಾಗಿರುತ್ತಾರೆ. ★


ಗಾಯತ್ರಿಗೆ ವಿಶ್ವಕರ್ಮ ನಾಮ

ದೇವಾಸುರಾಃ ಸಂಯತ್ತಾ ಆಸನ್ ತೇಷಾಂ ಗಾಯತ್ರ್ಯೋಜೋಬಲಮಿಂದ್ರಿಯಂ ವೀರ್ಯಂ ಪ್ರಜಾಂಪಶೂನ್ತ್ಸಙ್ಗೃಹ್ಯಾದಾಯ ಪಕ್ರಮ್ಯಾತಿಷ್ಠತ್ ತೇಽಮನ್ಯನ್ತಯತರಾನ್ ವಾ ಇಯಮುಪಾವರ್ತ್ಸ್ಯತಿ ತ ಇದಂ ಭವಿಷ್ಯನ್ತೀತಿ ತಾಂವ್ಯಹ್ವಯನ್ತ ವಿಶ್ವಕರ್ಮನ್ನಿತಿ ದೇವಾ ದಾಭೀತ್ಯಸುರಾಃ ||

(ಯಜುಃ ಕಾಂ ೨: ಪ್ರ ೩: ಅ ೩)

ಸಾಯಣ ಮಾಧವೀಯ ಭಾಷ್ಯಾನುಸಾರ ತಾತ್ಪರ್ಯ ದೇವಾಸುರರು ಯುದ್ಧಸನ್ನದ್ಧರಾದರು. ಚರ್ಮ-ರಕ್ತ-ಮಾಂಸಾದಿ ಧಾತುಗಳಲ್ಲಿ ಎಂಟನೆಯ ಧಾತುವು ಓಜಸ್ಸೆಂದು ಹೇಳುತ್ತಾರೆ. ಅಂತಹ ಓಜಸ್ಸು, ಶರೀರಕ್ಕೆ ಶಕ್ತಿಯಾದ ಬಲ, ದೃಷ್ಟ್ಯಾದಿಗಳಿಗೆ ಅವಶ್ಯಕವಾದ ಇಂದ್ರಿಯಗಳು, ಉತ್ಸಾಹವಾದ ವೀರ್ಯ, ಪುತ್ರಾದಿಗಳಾದ ಪ್ರಜೆಗಳು, ಗವಾದಿ ಪಶುಗಳು ಮುಂತಾದ ಆರು ಪದಾರ್ಥಗಳನ್ನು ಸಂಗ್ರಹಿಸಿ ಗಾಯತ್ರಿಯು ಉಭಯರಿಗೂ ಕಾಣಿಸದಂತೆ ಮರೆಯಾದಳು. ಆಗ ದೇವ–ದಾನವರಿಬ್ಬರೂ ಸೇರಿ ಗಾಯತ್ರಿಯ ಅನುಗ್ರಹಾಪೇಕ್ಷೆಯಿಂದ, ಆಕೆಯ ಅನುಗ್ರಹಗಳಿಸಿದವರಿಗೆ ಸಕಲ ತೇಜೋಸಂಪತ್ತಿನ ರಾಶಿ ಲಭಿಸುವುದೆಂದು ಆಶಿಸಿ, ಆಕೆಯನ್ನು ಪರಿಪರಿವಿಧಗಳಿಂದ ಪ್ರಾರ್ಥಿಸುತ್ತಾ, ದೇವತೆಗಳು ವಿಶ್ವಕರ್ಮಾ ಎಂದೂ ಅಸುರರು ದಾಭೀ ಎಂದೂ ಸಂಬೋಧಿಸಿದರು ಆದ್ದರಿಂದ ಗಾಯತ್ರೀ ಮಹಾದೇವಿಗೆ ವಿಶ್ವಕರ್ಮನಾಮವು ಅನ್ವಯವಾಯಿತು.

★



೨

ಕವಿರಾಜಶೇಖರ, ಅಭಿನವಮುರಾರಿ,
ವಿದ್ಯಾಪ್ರವೀಣ, ಮಾಧ್ವವಿದ್ಯಾತೀರ್ಥ
ದುರಿಶೇಟಿ ವೆಂಕಟರಾಮಾಚಾರ್ಯುಲು

ವಿರಾಟ್ಪುರುಷ ತತ್ತ್ವ

ಭಾರತ ದೇಶವು ವೈದಿಕ ಮತಕ್ಕೆ ತಾಣ. ವೈದಿಕ ಮತವೆಂದರೆ ವೇದಗಳನ್ನು ಸರ್ವೋಪರಿಪ್ರಮಾಣವೆಂದು ಅಂಗೀಕರಿಸಿರುವ ಮತ. ಇದಕ್ಕೆ ಹೊರತಾಗಿರುವ ಇತರ ಮತಗಳನ್ನೆಲ್ಲಾ ಅವೈದಿಕ ಮತಗಳೆಂದು ಗುರ್ತಿಸುವುದು ವಾಡಿಕೆ. ವೇದಮತವನ್ನು ಅನುಸರಿಸಿ ವಿರಾಟ್ಪುರುಷ ತತ್ವವನ್ನು ಇಲ್ಲಿ ಪ್ರತಿಪಾದಿಸುತ್ತಿದ್ದೇನೆ.

ವೇದ, ಶಾಸ್ತ್ರ, ಪುರಾಣ, ಇತಿಹಾಸ, ಕಾವ್ಯ, ನಾಟಕ ಮುಂತಾದ ವಿಭಾಗಗಳಿಂದ ಶಾಖೋಪಶಾಖೆಯಾಗಿ ಬಹುಳವಾಗಿ ವ್ಯಾಪಿಸಿರುವ ವೈದಿಕ-ವಾಙ್ಮಯದಲ್ಲಿ ವೇದರಾಶಿ ಉತ್ತುಂಗ ಹಿಮವತ್ ಶೃಂಗದಂತೆ ಸರ್ವೋಚ್ಚವಾಗಿ ಪ್ರಕಾಶಿಸುತ್ತದೆ. ಅಂತಹ ವೇದರಾಶಿಯಲ್ಲಿ ರುದ್ರನಾರಾಯಣಾದಿ ಪದಗಳಿಂದ ಗುರ್ತಿಸಲ್ಪಡುವ ಅನೇಕ ದೇವತೆಗಳು ಪ್ರಶಂಸಿಸಲ್ಪಟ್ಟಿದ್ದಾರೆ. ಅಂತಹ ಎಲ್ಲಾ ದೇವತೆಗಳನ್ನೂ ತನ್ನ ಆತ್ಮಾಂಶಗಳನ್ನಾಗಿ ಮಾಡಿಕೊಂಡು ಅಕ್ಷರ ಬ್ರಹ್ಮವಾಗಿ **ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾ ಚಂದ್ರಮಸೌ ವಿಧೃತೌ ತಿಷ್ಠತಃ, ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾ ಪೃಥಿವ್ಯೌ ವಿಧೃತೇ ತಿಷ್ಠತಃ, ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ನಿಮೇಷಾ ಮುಹೂರ್ತಾ ಅಹೋರಾತ್ರಾಣ್ಯರ್ಧ ಮಾಸಾ ಮಾಸಾ ಋತವಸ್ಸಂವತ್ಸರಾಶ್ಚೇತಿ ವಿಧೃತಾಸ್ತಿಷ್ಠಂತಿ;** ಎಂದು ಪ್ರಶಂಸಿಸಲ್ಪಟ್ಟು ಅನೇಕ ಬ್ರಹ್ಮಾಂಡಗಳನ್ನು ಶಾಸಿಸುವಂತಹ ಉನ್ನತ ಪದವಿಯನ್ನು ಅಲಂಕರಿಸಿರುವ ವಿರಾಟ್ಪುರುಷನು ಕಂಗೊಳಿಸುತ್ತಿದ್ದಾನೆ.

ಯಜುರಾರಣ್ಯಕದಲ್ಲಿ, ತೈತ್ತಿರೀಯೋಪನಿಷತ್ತಿನಲ್ಲಿ ಪುರುಷಸೂಕ್ತವೆಂಬ ಹೆಸರಿನಲ್ಲಿ ಕೆಲವು ಮಂತ್ರಗಳ ಸಮುಚ್ಚಯವಾಗಿ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿರುವಂತೆ ಕಂಡುಬರುತ್ತದೆ. ನಾಲ್ಕು ವೇದಗಳ ಸಂಹಿತಾ ಭಾಗಗಳಲ್ಲೂ ಕೂಡ ಈ ಪುರುಷ ಸೂಕ್ತದ ಹಲವಾರು ಮಂತ್ರಗಳು ದೊರೆಯುತ್ತವೆ. ಇಂದು ಆಸೇತುಶೀತಾಚಲ ಪರ್ಯಂತವಾಗಿ ಇದು ಸಕಲ ಬ್ರಾಹ್ಮಣರಿಂದಲೂ 'ಪುರುಷಸೂಕ್ತ'ವೆಂಬ ಹೆಸರಿನಿಂದ ಪಠಿಸಲ್ಪಡುತ್ತಿದೆ. **ಪುರುಷಃ ಪುರೋಽಗ್ರತೋಽಜಾಯತ ಕೃತೋ ಕಲ್ಪಯನ್ನಾಸನ್ ದ್ವೇಚ** ಎಂದು ಮೊದಲ ಭಾಗವು **ಜಾಯತೇ ವಶೇ ಸಪ್ತಚ** ಎಂದು ಎರಡನೆಯ ಭಾಗವು ಅವಿಭಕ್ತವಾಗಿವೆ. ಮೊದಲ ವಿಭಾಗದಲ್ಲಿ ಎಪ್ಪತ್ತೆರಡು ಪಾದಗಳು ಮತ್ತು ಎರಡನೆಯ ಭಾಗದಲ್ಲಿ ಇಪ್ಪತ್ತೇಳು ಪಾದಗಳು [72+27=99] ಒಟ್ಟಿಗೆ ತೊಂಬತ್ತೊಂಬತ್ತು ಪಾದಗಳು ಕಂಡು ಬರುತ್ತವೆ.

ಈ ಸೂಕ್ತವು ಕ್ರಮಬದ್ಧವಾಗಿ ವಿರಾಟ್ಪುರುಷನನ್ನು ವರ್ಣಿಸುತ್ತದೆ. ಪುರುಷನೆಂದರೆ ಪರಬ್ರಹ್ಮ. ಆತನೇ ಪರತತ್ತ್ವ ಭಾರತೀಯ ವೇದಾಂತ ಶಾಸ್ತ್ರವು ವೇದವೇದಾಂತಗಳಲ್ಲಿ ಆ ವಿರಾಟ್ಪುರುಷನನ್ನು ವರ್ಣಿಸಲು ಪ್ರಯತ್ನಿಸಿ ಕೊನೆಗೆ **ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹಾ** ಎಂದು ಆತನನ್ನು ವರ್ಣಿಸಲಾರದೆ ಸೋಲನ್ನು ಒಪ್ಪಿಕೊಂಡಿವೆ. ಅಂತಹ ಪರಮಪುರುಷನನ್ನು ಸುಸ್ಪಷ್ಟವಾಗಿ ಎಂದರೆ ಸ್ಥೂಲವಾಗಿ, ಸೂಕ್ಷ್ಮವಾಗಿ (ಸಾಧಾರಣವಾಗಿ, ವಿಶೇಷವಾಗಿ) ಅರ್ಥ ಸಂದೇಹಕ್ಕೆ ಎಡೆ ಇಲ್ಲದಂತೆ ಈ ಸೂಕ್ತವು ವರ್ಣಿಸುವುದರಿಂದಲೇ ಈ ಸೂಕ್ತಕ್ಕೆ 'ಪುರುಷಸೂಕ್ತ'ವೆಂದು ಹೆಸರಾಗಿದೆ. ಬಗೆಬಗೆಯ ದೇವತೆಗಳಿಗೆ ವಿವಿಧ ಸೂಕ್ತಗಳು ವೈದಿಕ ವಾಙ್ಮಯದಲ್ಲಿ ದೊರೆಯುತ್ತವೆ. ಅಗ್ನಿ, ಇಂದ್ರ, ರುದ್ರ, ವಿಶ್ವಕರ್ಮ, ನಾರಾಯಣ ಮುಂತಾದ ದೇವತೆಗಳಿಗೆಲ್ಲಾ ಅವರವರ ಹೆಸರಿನಲ್ಲಿ ಸೂಕ್ತಗಳು, ಉಪನಿಷತ್ತುಗಳು ಇವೆ. ಆದರೆ ಇದು ಆ ರೀತಿಯದಲ್ಲ. ಏಕೆಂದರೆ ಆ ರೀತಿಯಲ್ಲಿ ಇಲ್ಲಿ ಇತರ ದೇವತೆಗಳ ವರ್ಣನೆ ದೊರೆಯದು. ಕೇವಲ ವಿರಾಟ್ಪುರುಷನನ್ನು ವರ್ಣಿಸಲಾಗಿದೆ. ಆದ್ದರಿಂದ ಇದರಲ್ಲಿ ಯಾವ ದೇವತೆಯನ್ನು ಪುರುಷನನ್ನಾಗಿ ಭಾವಿಸಿ ವರ್ಣಿಸಲಾಗಿದೆಯೋ ಆ ದೇವತೆಯೇ ಪರತತ್ತ್ವವೆಂದು, ಪರಬ್ರಹ್ಮವೆಂದು, ಅಕ್ಷರವೆಂದು ನಾವು ಗುರುತಿಸಬಹುದು.

ಮೊದಲ ಭಾಗವು (ಪೂರ್ವ ನಾರಾಯಣೀಯ) **ಸಹಸ್ರಶೀರ್ಷಾ ಪುರುಷಃ** ಎಂದು ಪ್ರಾರಂಭವಾಗಿ **ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ** ಎನ್ನುವವರೆವಿಗೂ ಹರಡಿಕೊಂಡಿದೆ. ಈ ಎಪ್ಪತ್ತೆರಡು ಪಾದಗಳಲ್ಲಿ ವಿರಾಟ್ಪುರುಷನ ಸಾಧಾರಣ ವರ್ಣನೆ ಇದೆ. ಇದರಲ್ಲಿ ಯಾವುದೇ ಒಂದೆಡೆಯಲ್ಲಾದರೂ ಸಂಜ್ಞಾನಾಮವಾಚಕದೊಂದಿಗೆ ಯಾವ ಒಬ್ಬ ದೇವತೆಯನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲ. ಎಲ್ಲಾ ಕಡೆಗಳಲ್ಲೂ ಹರಿ-ಹರ-ಹಿರಣ್ಯಗರ್ಭಾದಿ ಸರ್ವ ದೇವತೆಗಳಿಗೂ ಸಾಧಾರಣ ವಾಚಕವಾದ ಪುರುಷ ಎಂಬ ಪದವೇ ಉಪಯೋಗಿಸಲ್ಪಟ್ಟಿದೆ.

"ಪುರುಷನು ಸಹಸ್ರ ಶೀರ್ಷನು; ಸಹಸ್ರಾಕ್ಷನು. ಆತನು ಭೂಮಿಯನ್ನು ಆವರಿಸಿರುವನು. ನಿನ್ನೆ ಇದ್ದದ್ದು, ಇಂದು ಇರುವುದು, ನಾಳೆ ಇರಬಹುದಾದುದು ಎಲ್ಲವೂ ಪುರುಷನೇ. ಆದ್ದರಿಂದ ಈ ಪುರಷನು ತುಂಬಾ ಹಿರಿಯ. ಸಾಧಾರಣ-ವಾಗಿ ಇಂದ್ರಿಯಗಳ ಬಲದಿಂದ ಮನುಷ್ಯನು ಕಾಣುತ್ತಿರುವುದು ಆತನ ಏಕ ಪಾದ ವಿಭೂತಿಯನ್ನೇ. ಆತನ ತ್ರಿಪಾದ ವಿಭೂತಿ ಸಾಧಾರಣ ದೃಷ್ಟಿಗೆ ಎಟುಕುವಂತಹುದಲ್ಲ. ಅಂತಹ ಪುರುಷನನ್ನು ಹವಿಸ್ಸನ್ನಾಗಿ ಮಾಡಿಕೊಂಡು ಪೂರ್ವಿಕರಾದ ದೇವತೆಗಳು (ಋಷಿಗಳು) ಯಜ್ಞವನ್ನು ಮಾಡಿದರು. ಆ ಯಜ್ಞದಲ್ಲಿ ವಸಂತವು ಆಜ್ಯ; ಗ್ರೀಷ್ಮವು ಸಮಿತ್ತು; ಶರತ್ ಹವಿಸ್ಸು. ದೇವತೆಗಳು ಆ ಪುರುಷನನ್ನೇ ಪಶುವನ್ನಾಗಿ ಬಂಧಿಸಿದರು. ಅಂತಹ ಪುರುಷನ ಮುಖವೇನು ? ಕೈಗಳು ಎಂತಹವು ? ಎದೆ ಎಂತಹುದು ? ಪಾದಗಳು ಯಾವುವು ? ಆ ಪುರುಷನ ಮುಖವೇ ಬ್ರಾಹ್ಮಣ. ಕೈಗಳು ಕ್ಷತ್ರಿಯ. ಎದೆ ವೈಶ್ಯ. ಪಾದಗಳು ಶೂದ್ರ. ಆ ಪುರುಷನ ಮನಸ್ಸಿನಿಂದ ಚಂದ್ರ, ಕಣ್ಣುಗಳಿಂದ ಸೂರ್ಯನು, ಮುಖದಿಂದ ಇಂದ್ರಾಗ್ನಿಗಳು, ಪ್ರಾಣದಿಂದ ವಾಯುವು, ನಾಭಿಯಿಂದ ಆಕಾಶ, ಶಿರದಿಂದ ದ್ಯುಲೋಕ, ಪಾದಗಳಿಂದ ಭೂಮಿ, ಕಿವಿಗಳಿಂದ ದಿಕ್ಕುಗಳು ಇಂತು ಲೋಕಗಳು ನಿರ್ಮಿಸಲ್ಪಟ್ಟವು."— ಈ ವಿವರಣೆ ಪುರುಷ ಸೂಕ್ತದ ಮೊದಲ ಸ್ವಲ್ಪ ಭಾಗದ ಸಂಗ್ರಹಾರ್ಥ. ಈ ಮಂತ್ರದಲ್ಲೆಲ್ಲಾ ಎಲ್ಲೂ ಪುರುಷ ಪದದ ವಿನಾ ಬೇರಾವ ಪದವೂ ಪ್ರಯೋಗವಾಗಿಲ್ಲ. ಆದ್ದರಿಂದ ಇದು ಪುರುಷನ ಸಾಧಾರಣ ವರ್ಣನೆಯೆಂದು ಈ ಮೊದಲೇ ಬಿನ್ನೈಸಿಕೊಂಡಿದ್ದೇನೆ.

ಇನ್ನು ನಂತರದ ಭಾಗದ ವಿಷಯದ ಬಗ್ಗೆ ಆಲೋಚಿಸೋಣ. **ಅ ದ್ಭ್ಯಃ ಸಂಭೂತಃ ಪೃಥಿವ್ಯೈ ರಸಾಚ್ಚ ವಿಶ್ವಕರ್ಮಣ ಸ್ಸಮವರ್ತತಾದಿ ತಸ್ಯ ತ್ವಷ್ಟಾ ವಿದಧ ದ್ರೂಪಮೇತಿ** ಎಂದು ಪ್ರಾರಂಭವಾಗಿ **ಅಮುಂ ಮ ನಿಷಾಣ ಇಷ್ಟಂ ಮನಿಷಾಣ ಸರ್ವಮ್ಮನಿಷಾಣ** ಎಂದು ಇಪ್ಪತ್ತೇಳು ಪಾದಗಳಲ್ಲಿ ಮುಗಿಸಲ್ಪಟ್ಟಿದೆ. ಸಾಧಾರಣ ರೀತಿಯಲ್ಲಿ ಸ್ಥೂಲವಾಗಿ ಪ್ರಥಮ ಭಾಗದಲ್ಲಿ ವರ್ಣಿಸಲ್ಪಟ್ಟ ಪುರುಷನು ಇಲ್ಲಿ ಸುಸ್ಪಷ್ಟವಾಗಿ ವಿಶೇಷ ರೂಪದಲ್ಲಿ ವರ್ಣಿಸಲ್ಪಟ್ಟಿದ್ದಾನೆ.

"ತ್ವಷ್ಟೃ ರೂಪನಾದ ವಿಶ್ವಕರ್ಮನಿಂದ ಈ ವಿಶ್ವವು ಪ್ರವರ್ತಗೊಂಡಿತು. ಗಾಢಾಂಧಕಾರದಿಂದ ಆಚೆ ಆದಿತ್ಯ ತೇಜೋರೂಪನಾದ ಪರಮಪುರುಷನಾದ ವಿಶ್ವಕರ್ಮನನ್ನು ನಾನು ಬಲ್ಲೆ. ಆ ಪರಮ ಪುರುಷನಾದ ವಿಶ್ವಕರ್ಮನನ್ನು ಅರಿತವನು ಅಮೃತನಾಗುತ್ತಾನೆ. ಈ ವಿಶ್ವಕರ್ಮನನ್ನು ಅರಿಯುವುದಕ್ಕಿಂತಲೂ ಬೇರೊಂದು ಮಾರ್ಗ ಕಂಡುಬರದು. ಪ್ರಜಾಪತಿಯಾದ ಆ ವಿಶ್ವಕರ್ಮನು ತಾಯಿಯ ಗರ್ಭವನ್ನು ಹೊಕ್ಕು, ಹುಟ್ಟಲು ಅವಕಾಶವಿಲ್ಲದ (ಅಜಾಯಮಾನ ವಾದ) ಕೊರಡುರೂಪದ ಪಿಂಡವು ಬಗೆಬಗೆಯ ಕರಚರಣಾದಿ ಅವಯವಗಳಿಂದ ರೂಪವಂತ ಶಿಶುವಾಗಿ ಜನಿಸುವಂತೆ ಮಾಡುತ್ತಾನೆ. ವಿದ್ವಾಂಸರಾದವರು ಆತನ ತತ್ತ್ವವನ್ನು ಅರಿತಿರುವರು. ಆ ಪುರುಷನಾದ ವಿಶ್ವಕರ್ಮ ತನ್ನ ತೇಜಸ್ಸಿನಿಂದ ಎಲ್ಲಾ ದೇವತೆಗಳು ತಪಿಸುವಂತೆ ಮಾಡುತ್ತಿದ್ದಾನೆ. ಆ ವಿಶ್ವಕರ್ಮ ಬೃಹಸ್ಪತಿ ರೂಪದಿಂದ ದೇವತೆಗಳಿಗೆ ಪುರೋಹಿತನಾಗಿದ್ದಾನೆ. ಆ ವಿಶ್ವಕರ್ಮ ದೇವತೆಗಳೆಲ್ಲರಿಗಿಂತಲೂ ಮುಂದಿದ್ದ. ಅಂತಹ ಪುರುಷನಾದ ವಿಶ್ವಕರ್ಮನನ್ನು ಅರಿತವನಿಗೆ ಎಲ್ಲಾ ದೇವತೆಗಳು ವಶವರ್ತಿಗಳಾಗುತ್ತಾರೆ. ಹ್ರೀ ಶ್ರೀ ದೇವಿಗಳು ಅಂತಹ ವಿದ್ವಾಂಸನಿಗೆ ಪತ್ನಿಗಳು"—ಹೀಗೆ ಉತ್ತರ ನಾರಾಯಣೀಯದ ಅರ್ಥವನ್ನು ಸಂಗ್ರಹಿಸಬಹುದು.

ಎರಡನೆಯ ಭಾಗದಲ್ಲಿ ಶಿವಕೇಶವಾದಿ ಅನ್ಯ ಯಾವ ದೈವದ ಪರ್ಯಾಯ ಪದವೊಂದೂ ಪ್ರಯೋಗಿಸಲ್ಪಟ್ಟಿಲ್ಲ. ತೊಂಬತ್ತೊಂಬತ್ತು ಪಾದಗಳ ಪೂರ್ವಾರ್ಧ-ಉತ್ತರಾರ್ಧ ರೂಪದಲ್ಲಿ ವ್ಯಾಪಿಸಿಕೊಂಡಿದ್ದು ಪರಮ ಪ್ರಮಾಣ ವಾಗಿ ವೈದಿಕ ಮತದವರೆಲ್ಲರ ಆದರಕ್ಕೂ ಪಾತ್ರವಾಗಿರುವ ಈ ಪ್ರಸಿದ್ಧ ಸೂಕ

ದಲ್ಲಿ ಪುರುಷ, ವಿಶ್ವಕರ್ಮ, ತ್ವಷ್ಟೃ ಪದಗಳು ಮಾತ್ರವೇ ಪ್ರಯೋಗವಾಗಿವೆ. ಆದ್ದರಿಂದ ವಿಶ್ವಕರ್ಮನೆ ಪರಮಪುರುಷನೆಂದು, ಆತನು ತ್ವಷ್ಟೃರೂಪವನ್ನು ಪಡೆದನೆಂದು ಸ್ಪಷ್ಟವಾಗುತ್ತದೆ. ಶೈವ ವೈಷ್ಣವಾದಿ ಮತಪ್ರವರ್ತಕರು ಉತ್ತರಾರ್ಧದಲ್ಲಿರುವ ವಿಶ್ವಕರ್ಮ ಎಂಬ ಪದವನ್ನು ತಮ್ಮ ತಮ್ಮ ದೈವಗಳಿಗೆ ಪರ್ಯಾಯ ಪದಗಳೆಂದು ಸಮನ್ವಯಪಡಿಸಿಕೊಂಡು ವಿವರಣೆ ನೀಡುತ್ತಾರೆ. ವೈದಿಕ ವಾಙ್ಮಯದಲ್ಲಿ 'ವಿಶ್ವಕರ್ಮ' ಎಂಬ ಹೆಸರಿನ ದೇವತೆಯೇ ಇಲ್ಲದೆ ಇದ್ದಲ್ಲಿ ಅವರು ಆ ರೀತಿ ಅನ್ವಯಿಸಿಕೊಂಡು ಅರ್ಥೈಸುವುದರಲ್ಲಿ ಸಮಂಜಸತೆ ಕಾಣಿಸೀತು. ಆದರೆ ವೈದಿಕ ವಾಙ್ಮಯದಲ್ಲಿ ಅನೇಕ ಎಡೆಗಳಲ್ಲಿ ವಿಶ್ವಕರ್ಮನೆಂಬ ದೇವ ಸ್ಪಷ್ಟರೂಪದಿಂದ ಉಲ್ಲೇಖಿತನಾಗಿರುವಾಗ ಆ ಪದವನ್ನು ನಾರಾಯಣನೆಂದೋ, ರುದ್ರನೆಂದೋ ಸಮನ್ವಯಪಡಿಸುವುದು ಯಾವ ರೀತಿ ತಾನೆ ಸೂಕ್ತವಾದೀತು?

ವಿಶ್ವಕರ್ಮನೇ ಪರತತ್ತ್ವವೆಂದು ನಿರೂಪಿಸಲು ಪುರುಷಸೂಕ್ತಕ್ಕಿಂತಲೂ ಬಲವತ್ತರವಾದ ಪ್ರಮಾಣವನ್ನು ವಿವರಿಸುತ್ತೇನೆ. ವೇದಾಂಗಗಳಾದ ವ್ಯಾಕರಣ, ನಿರುಕ್ತಗಳನ್ನು ಅನುಸರಿಸಿ ಸಂಸ್ಕೃತ ಭಾಷೆಯಲ್ಲಿ ಪ್ರತಿಯೊಂದು ಹೆಸರಿಗೂ ತನ್ನದೇ ಆದ ಅರ್ಥವುಂಟು. ವೈದಿಕ ವಾಙ್ಮಯದಲ್ಲಿ ಕಂಡುಬರುವ ಎಲ್ಲಾ ದೇವತೆಗಳ ಹೆಸರುಗಳು ಶಾಸ್ತ್ರೀಯವಾಗಿ ನಿಷ್ಪನ್ನವಾಗಿರುವವೇ. ಆ ನಿಷ್ಪತ್ತಿಯನ್ನು ಅನುಸರಿಸಿ ಆಯಾ ಪದವಾಚ್ಯಗಳಾದ ದೇವತೆಗಳಲ್ಲಿ ಯಾವ ಯಾವ ಗುಣಗಳು ಇರುವವೆಂಬುದನ್ನು, ಅವರು ನಿರ್ವಹಿಸುವ ಕಾರ್ಯವನ್ನು ಆ ಹೆಸರುಗಳು ಅವಯವಾರ್ಥದಿಂದ ವಿವರಿಸುವುದನ್ನು ಪರಿಶೀಲಿಸೋಣ. **ರುದ್ರಂ ದ್ರಾವಯತೀತಿ ರುದ್ರಃ** ದುಃಖವನ್ನು ನಿವಾರಿಸುವವನು ರುದ್ರ. **ನಾರಾಃ ಅಯನಂ ಯಸ್ಯಸಃ ನಾರಾಯಣಃ** ಜಲವನ್ನು (ನಾರ) ನಿವಾಸವನ್ನಾಗಿ (ಅಯನ) ಉಳ್ಳವನು ನಾರಾಯಣ. **ಅಗತಿ (ಕುಟಿಲಂ) ಗಚ್ಛತತಿ ಅಗ್ನಿಃ** ಕುಟಿಲವಾಗಿ ಜ್ವಲಿಸುವನು ಅಗ್ನಿ. **ಯಮ ಯತೀತಿ ಯಮಃ** ಆಳ್ವಿಕೆ ನಡೆಸುವವನು ಯಮ. **ವಿಶ್ವಾನಿ ಕರ್ಮಾಣಿ ಯಸ್ಯಸಃ ವಿಶ್ವಕರ್ಮಾ** ಸಮಸ್ತವಾದ (ವಿಶ್ವ) ಕರ್ಮಗಳನ್ನೂ ತನ್ನಲ್ಲಿಯೇ ಪಡೆದಿರುವವನು ವಿಶ್ವಕರ್ಮ ಎಂದು ಎಲ್ಲಾ ದೇವತೆಗಳ ಕರ್ಮಗಳೂ ಈ ಒಂದೇ ಹೆಸರಿನಲ್ಲಿಯೇ ಅವಯವಾರ್ಥದಿಂದ ಅನ್ವರ್ಥವಾಗಿ ನಿಹಿತವಾಗಿದೆ.

ಪೂರ್ವೋಕ್ತ ವಿವರಣೆಯಿಂದ ವೈದಿಕ ವಾಙ್ಮಯದಲ್ಲಿ ಕಂಡುಬರುವ ಎಲ್ಲಾ ದೇವತೆಗಳೂ ಸೀಮಿತ ಕರ್ಮಗಳನ್ನು ಮಾತ್ರವೇ ನಿರ್ವಹಿಸಬಲ್ಲವು ಎಂಬುದು ಸ್ಪಷ್ಟವಾಗುತ್ತದೆ. ಅವರಲ್ಲೆಲ್ಲಾ ವಿಶ್ವಕರ್ಮ ಎಂಬುವನೊಬ್ಬ ಮಾತ್ರವೇ ಎಲ್ಲಾ ಕರ್ಮಗಳನ್ನು ನಿರ್ವಹಿಸಬಲ್ಲ ದಕ್ಷತೆಯನ್ನು ಪಡೆದಿರುವ ನೆಂದು ಅರ್ಥವಾಗುತ್ತದೆ. ಅನ್ಯ ದೈವಗಳೆಲ್ಲವೂ ' ನಿರ್ವಹಿಸುವ ಎಲ್ಲಾ ಕರ್ಮಗಳೂ ವಿಶ್ವದಲ್ಲಿಯ ಕರ್ಮಗಳೇ ಆದುದರಿಂದ ಆಯಾ ಕರ್ಮಗಳನ್ನು ನಿರ್ವಹಿಸುವಾಗ ಈತನೇ ಆ ಹೆಸರುಗಳಿಂದ ವ್ಯವಹರಿಸಲ್ಪಡುತ್ತಾನೆಂದು, ಅದ್ದ ರಿಂದಲೇ **ಯೋ ದೇವಾನಾಂ 'ನಾಮಧಾ ಏಕಏವ, ಏಕಮೇವಾದ್ವಿ ತೀಯಂ ಬ್ರಹ್ಮ** ಮುಂತಾದ ಶ್ರುತಿವಚನಗಳು ಈ ವಿಶ್ವಕರ್ಮನಿಗೆ ಸಮನ್ವಯ ಪಡಿಸಲಾಗಿದೆ ಎಂದು ನಾವು ಅರಿಯಬಹುದು..

'ವಿಶ್ವಕರ್ಮೋಪನಿಷತ್'ನಲ್ಲಿ **ವಿಶ್ವಕರ್ಮಣಃ ಪ್ರಾಣೋಜಾಯತೇ, ಖಂವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯಧಾರಿಣೀ ವಿಶ್ವ ಕರ್ಮಣೋ ಬ್ರಹ್ಮಾಜಾಯತೇ, ವಿಶ್ವಕರ್ಮಣೋ ರುದ್ರೋಜಾಯತೇ, ವಿಶ್ವಕರ್ಮಣೋ ನಾರಾಯಣೋ ಜಾಯತೇ ಅಥ ರುದ್ರೋ ವಿಶ್ವ ಕರ್ಮಾ, ಬ್ರಹ್ಮ ವಿಶ್ವಕರ್ಮಾ, ಶಿವಶ್ಚ ವಿಶ್ವಕರ್ಮಾ. ವಿಷ್ಣುಶ್ಚ ವಿಶ್ವ ಕರ್ಮಾ, ಶಕ್ರಶ್ಚ ವಿಶ್ವಕರ್ಮಾ, ದ್ಯಾವಾ ಪೃಥಿವ್ಯೌ ಚ ವಿಶ್ವಕರ್ಮಾ ಊರ್ಧ್ವಶ್ಚ ವಿಶ್ವಕರ್ಮಾ, ಅಧಶ್ಚ ವಿಶ್ವಕರ್ಮಾ** ಇತ್ಯಾದಿ ವಚನಗಳಿಂದ ಎಲ್ಲ ದೇವತೆಗಳೂ ಎಲ್ಲ ಪದಾರ್ಥಗಳೂ ವಿಶ್ವಕರ್ಮನಿಂದಲೇ ಆವಿರ್ಭೂತವಾದ ವೆಂದು ಆತನೇ ಎಲ್ಲಾ ದೈವಗಳ, ಎಲ್ಲಾ ಪದಾರ್ಥಗಳ ರೂಪವೆಂದು ಹೇಳ ಲ್ಪಟ್ಟಿದೆ.

ಇದೇ ರೀತಿಯಲ್ಲಿಯೇ 'ನಾರಾಯಣೋಪನಿಷತ್ತಿ' ನಲ್ಲೂ ಹೇಳಲ್ಪಟ್ಟಿದೆ. 'ವಿಶ್ವಕರ್ಮೋಪನಿಷತ್ತಿ'ನಲ್ಲಿ ವಿಶ್ವಕರ್ಮ ಪದವು ಎಲ್ಲೆಲ್ಲಿ ಉಂಟೋ ಅಲ್ಲೆಲ್ಲಾ ನಾರಾಯಣೋಪನಿಷತ್ತಿನಲ್ಲಿ ನಾರಾಯಣ ಪದವಿದೆ. ಈ ಎರಡು ಉಪ ನಿಷತ್ತುಗಳು ಒಂದರ ಪ್ರತಿಬಿಂಬವೇ ಮತ್ತೊಂದಾಗಿ ಗೋಚರಿಸುತ್ತದೆ. **ನಾರಾಯಣಾತ್ ಪ್ರಾಣೋಜಾಯತೇ, ಖಂ ವಾಯುರ್ಜ್ಯೋತಿ ರಾಪಃ ಪೃಥಾವಿ ವಿಶ್ವಸ್ಯ ಧಾರಿಣೀ** ಮುಂತಾಗಿ ಇದೆ. ಈ ಎರಡರ ಸಾಮಂಜಸ್ಯವನ್ನು ಪರಿಶೀಲಿಸೋಣ.

ವಿಶ್ವಕರ್ಮ ಎಲ್ಲಾ ಕ್ರಿಯೆಗಳನ್ನೂ ನಿರ್ವಹಿಸಬಲ್ಲವನು. ನಾರಾಯಣನೆಂದರೆ ನರ ಶರೀರವನ್ನು ಧರಿಸುವವನು ಅಥವ ನೀರನ್ನು ನಿವಾಸವನ್ನಾಗಿಸಿಕೊಂಡಿರುವನು ಎಂದೋ ಅದೇ ರೀತಿಯ ಎರಡು ಮೂರು ಕರ್ಮಗಳನ್ನು ಮಾತ್ರವೇ ನಿರ್ವಹಿಸುವವನು ಎಂದು ಅರ್ಥವಾಗುತ್ತದೆ. ಅಖಿಲ ವಿಶ್ವಕ್ರಿಯೆಗಳನ್ನು ನಿರ್ವಹಿಸಿಸುವವನು, ಪ್ರಾಣವನ್ನು, ಪಂಚಭೂತಗಳನ್ನು, ಬ್ರಹ್ಮನನ್ನು ರುದ್ರನನ್ನು, ನಾರಾಯಣನನ್ನು, ಸಾವಿರಾರು ಪದಾರ್ಥ ಸಂಪದವನ್ನು ಸೃಷ್ಟಿಸಬಲ್ಲ ಆ ಕ್ರಿಯೆಗಳೆಲ್ಲವನ್ನು (ಕರ್ಮಗಳನ್ನು) ನಿರ್ವಹಿಸಬಲ್ಲ ದಕ್ಷತೆ ಆತನಿಗಿಲ್ಲ. ಆ ಕ್ರಿಯೆಗಳೆಲ್ಲವೂ ವಿಶ್ವದೊಳಗಿನ ಕರ್ಮಗಳೇ. ಮತ್ತೆ ನಾರಾಯಣ ಎಂಬ ಪದದಿಂದ ಲಭಿಸುವ ಕ್ರಿಯೆಗಳು ಬ್ರಹ್ಮಾದಿ ದೇವತೆಗಳನ್ನು, ಎಲ್ಲಾ ಪದಾರ್ಥಗಳನ್ನು ಸೃಷ್ಟಿಸಲು ಸಮರ್ಥವಾದುವಲ್ಲ. ನಾರಾಯಣನು ಬ್ರಹ್ಮಾದಿ ಸಕಲ ಪದಾರ್ಥ ರೂಪಗಳನ್ನೂ ಪಡೆಯಲಾರ. ವಿಶ್ವಕರ್ಮ ವಿಶ್ವದ ಕ್ರಿಯೆಗಳನ್ನೆಲ್ಲಾ ನಿರ್ವಹಿಸ ಬೇಕಾದುದರಿಂದ ಯಾವ ಪದಾರ್ಥವನ್ನಾದರೂ ಸೃಷ್ಟಿಸಬಲ್ಲ; ಯಾವ ಪದಾರ್ಥದ ರೂಪವನ್ನಾದರೂ ಪಡೆಯಬಲ್ಲ. ವೈದಿಕ ವಾಙ್ಮಯದಲ್ಲಿ ವಿಶ್ವಕರ್ಮ ಎಂಬ ಶಬ್ದದಂತೆ ವಿಶ್ವತೋ ಮುಖವಾದ ಅರ್ಥವನ್ನು ಪ್ರಸಾದಿಸಬಲ್ಲ ಶಬ್ದವು ಯಾವ ದೇವತೆಗೂ ಇಲ್ಲ. ಪರಮ ಪುರುಷ, ವಿರಾಟ್ಪುರುಷ, ಪರಬ್ರಹ್ಮ, ಪರಮಾತ್ಮನಾಗಲು ವಿಶ್ವಕರ್ಮನಿಗೆ ಇರುವಂತಹ ಅರ್ಹತೆ ಮತ್ತ್ಯಾವ ದೈವಕ್ಕೂ ಇಲ್ಲ. ಆದ್ದರಿಂದಲೇ 'ವಿಶ್ವಕರ್ಮ ಸೂಕ್ತ'ವು ಆ ಪರಮ ಪುರುಷನನ್ನು ಇಂತು ಪ್ರಶಂಸಿಸುತ್ತದೆ :

"ವಿಶ್ವಕರ್ಮನೆಂಬ ದೈವವು ಪ್ರಳಯಕಾಲದಲ್ಲಿ ಹೋತೃವಾಗಿ ಎಲ್ಲಾ ಭುವನಗಳನ್ನೂ ಅಗ್ನಿಯಲ್ಲಿ ಹೋಮಿಸಿ ನಮಗೆ ತಂದೆಯಾಗಿರುವನು. ಆತನು ಸತ್ಯಕಾಮನು; ಸತ್ಯಸಂಕಲ್ಪನು. ಆದ್ದರಿಂದ ಜಗದ್ರೂಪದಲ್ಲಿ ಸಗುಣನಾಗಿ ಸರ್ವ ಭೂತಗಳ ಹೃದಯಕುಹರಗಳಲ್ಲಿ ಪ್ರವೇಶಿಸುತ್ತಿರುವನು. ಆ ಪರಮ ಪುರುಷ ಮನಸ್ಸಂಕಲ್ಪದಿಂದ ಲಯಕರ್ತೃವೂ, ಸೃಷ್ಟಿಕರ್ತೃವೂ, ಪೋಷಣಕರ್ತೃವೂ ಆಗಿ ಸರ್ವಜ್ಞನಾಗಿದ್ದಾನೆ. ಎಲ್ಲಾ ದೇವರ ಹೆಸರುಗಳಿಂದಲೂ ಆತನೊಬ್ಬನೇ ಪ್ರಕಾಶಿಸುತ್ತಿರುವನು. ಪೂರ್ವ ಋಷಿಗಳು ಪಂಚ ವೈಶ್ವಕರ್ಮಣರಾದ ಸಾನಗ ಸನಾತನಾದಿಗಳು ಆತನನ್ನು ಕುರಿತು ಯಜ್ಞವನ್ನು ಮಾಡಿದ್ದರು. ಎಲ್ಲೈ

ಮಾನವರೇ, ಇಂತು ಸಕಲ ಭುವನಗಳನ್ನು ಸೃಜಿಸಿದ ಆತನನ್ನು, ನೀವು ಅಜ್ಞಾನದಿಂದ ಆವೃತ್ತರಾಗಿದ್ದು ನಿಮ್ಮ ಬದುಕಿನಿಂದಲೇ ತೃಪ್ತಿಗೊಂಡು, ನಿಮಗೆ ಜನ್ಮ ನೀಡಿದ ತಂದೆಯನ್ನು ಮರೆತಿರುವಿರಿ. ಆತನು ದ್ಯುಲೋಕಕ್ಕೂ-ಭೂಲೋಕಕ್ಕೂ-ಸುರರಿಗೂ, ಅಸುರರಿಗೂ ದೂರವಾಗಿದ್ದು, ಪರನಾಗಿ ಕಾಣಲಾರದಾಗಿದ್ದಾನೆ. ಚಕ್ರದ ಮಧ್ಯಬಿಂದುವಿನೊಂದಿಗೆ ಎಲ್ಲಾ ಅರೆಗಳೂ ಬಿಗಿದಿರುವಂತೆ ಆತನಲ್ಲಿ ಸಕಲ ಬ್ರಹ್ಮಾಂಡಗಳೂ ಬಂಧಿಸಲ್ಪಟ್ಟಿವೆ. ಆತನು ವಿಶ್ವತಶ್ಚಕ್ಷುವು, ವಿಶ್ವತೋಮುಖನು ; ವಿಶ್ವತೋಹಸ್ತನು ; ವಿಶ್ವತಃ ಪಾದನು. ಈ ಭೂಮಿಯನ್ನು ಸೃಷ್ಟಿಸುತ್ತಿರುವ ಆತನಿಗೆ ಆಧಾರವು ಯಾವುದು ? ವಿಶ್ವಚಕ್ಷುವಾದ ಆ ವಿಶ್ವಕರ್ಮ ತನ್ನ ತೇಜಸ್ಸಿನಿಂದ ಭೂಮಿ ಆಕಾಶಗಳನ್ನು ಆವರಿಸಿದ. ಆ ವಿಶ್ವಕರ್ಮ ಯಾವ ಕಾಡಿನಿಂದ ಎಂತಹ ಗಿಡಮರಗಳನ್ನು ಕಡಿದು ಈ ಭೂಮಿ ಆಕಾಶಗಳನ್ನು ನಿರ್ಮಿಸಿರುವನು ? ನಮ್ಮನ್ನು ರಕ್ಷಿಸಲೆಂದು ಬೃಹಸ್ಪತಿ ರೂಪನಾದ ವಿಶ್ವಕರ್ಮನನ್ನು ಆಹ್ವಾನಿಸೋಣ."

ಋಗ್ವೇದದ ದಶಮ ಮಂಡಲದ ಎಂಬತ್ತೊಂದು ಎಂಬತ್ತೆರಡನೆಯ ಸೂಕ್ತಗಳ ಹದಿನಾರು ಋಕ್ಕಿಗಳಲ್ಲಿ ಕೆಲವು ವಾಕ್ಯಾರ್ಥಗಳನ್ನು ಇಲ್ಲಿ ಉದಾಹರಿಸಿದ್ದೇನೆ. ಇದೇ ಯಜುಸ್ಸಂಹಿತೆಯಲ್ಲಿ ಹದಿನೇಳನೆಯ ಅಧ್ಯಾಯದಲ್ಲಿ ಹದಿನೇಳನೆಯ ಯಜುಸ್ಸಿನಿಂದ ಮುವತ್ತೆರಡನೆಯ ಯಜುಸ್ಸಿನ ತನಕ ಸ್ವಲ್ಪ ಪಾಠ ಬೇಧದೊಂದಿಗೆ ದೊರೆಯುತ್ತದೆ. ಇಂತಹ ಮಧುರವಾದ ಸೃಷ್ಟಿ ಶಿಲ್ಪವು ಮತ್ತಾವ ದೇವತಾ ಸೂಕ್ತದಲ್ಲೂ ಕಂಡು ಬರದು. ಈ ಮೊದಲೇ ಉದಾಹರಿಸಿದ ಪುರುಷ ಸೂಕ್ತ ಮಂತ್ರವಿವರಣದಿಂದ, ವಿಶ್ವಕರ್ಮ ಶಬ್ದದ ನಿರ್ವಚನದಿಂದ, ವಿಶ್ವಕರ್ಮ ಸೂಕ್ತಾರ್ಥದಿಂದ, ವಿಶ್ವಕರ್ಮ ಎಂಬ ದೈವವು ವಿರಾಟ್ಪುರುಷನೆಂದು, ಸಮಸ್ತ ಕರ್ಮಗಳನ್ನು ನಿರ್ವಹಿಸ ಬಲ್ಲ ದಕ್ಷನೆಂದು, ಎಲ್ಲಾ ದೇವತೆಗಳು, ನಿರ್ವಹಿಸುವ ಕರ್ಮಗಳು ಸಾಗರದಲ್ಲಿ ನೀರಿನ ಬಿಂದುಗಳು ಸೇರಿರುವಂತೆ ಆತನ ವಿಶ್ವಕರ್ಮಗಳೊಂದಿಗೆ ಸಮಾವಿಷ್ಟವಾಗಿ ಆ ದೈವಗಳು ಆತನ ಅಂಶಗಳಾಗುತ್ತಾರೆಂಬುದು, ಹರಿ-ಹರ-ಹಿರಣ್ಯಗರ್ಭಾದಿ ಸಕಲ ದೇವತೆಗಳು ಆತನ ಲೀಲಾವತಾರಿಗಳೆಂದು, ಆದ್ದರಿಂದ ಆತನೊಬ್ಬನೇ ಆಯಾ ಕ್ರಿಯಾ ನಿರ್ವಹಣಾ ಸಮಯದಲ್ಲಿ ಆಯಾ ದೈವದ ಹೆಸರಿನಿಂದ ವ್ಯವಹರಿಸಲ್ಪಡುತ್ತಾ ಸಕಲ ದೇವತಾ ಸ್ವರೂಪನಾಗಿದ್ದಾನೆ ಎಂಬುದು ಸ್ಪಷ್ಟವಾಗಿದೆ.

ಯೋ ದೇವಾನಾಂ ನಾಮಧಾ ಏಕ ಏವ ಎಂಬುದಕ್ಕೆ ಭಾಷ್ಯಾಚಾರ್ಯರಾದ ಸಾಯಣ ಮಾಧವರು **ಯಶ್ಚ ವಿಶ್ವಕರ್ಮಾ ದೇವಾನಾಂ ನಾಮಧಾ ಸ್ವಯಮೇವ ಸರ್ವ ದೇವತಾ ರೂಪೇಣ ಆವಿರ್ಭೂಯ ಇಂದ್ರ ಮಿತ್ರಾದಿ ದೇವತಾ ನಾಮ ಧಾರಯಿತಿ. ಅತ ಏವಾನ್ಯತ್ರ ಆಮ್ನಾತಮ್. ಇಂದ್ರಂ ಮಿತ್ರಂ ವರುಣಮಗ್ನಿ ಮಾಹುರಥೋದಿವ್ಯ ಸ್ಸುಪರ್ಣೋ ಗರುತ್ಮಾನ್. ಏಕಂ ಸದ್ವಿಪ್ರಾ ಬಹುಧಾವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ಇತಿ** ಎಂದು ವಿಶದೀಕರಿಸಿದ್ದಾರೆ. ವಿಶ್ವಕರ್ಮ ದೇವನ ಪ್ರಭಾವವನ್ನು ಭಾಷ್ಯಾಚಾರ್ಯರು ಹೇಗೆ ಗುರುತಿಸಿದ್ದಾರೆಂಬುದು ವಿದಿತವಾಗುತ್ತದೆ.

ಈಶಾವಾಸ್ಯಾದಿ ಉಪನಿಷತ್ತುಗಳ ಸಾರವು ವಿಶ್ವಕರ್ಮ ತತ್ತ್ವವೆಂದೇ ಬಿನ್ನೈಸುತ್ತೇನೆ. ಇಷ್ಟೇ ಏಕೆ, ಸಂಹಿತೆಗಳು, ಎಲ್ಲಾ ಆರಣ್ಯಕಗಳು, ಸಕಲ ಬ್ರಾಹ್ಮಣಗಳು, ಸರ್ವೋಪನಿಷತ್ತುಗಳು ವಿಶ್ವಕರ್ಮನನ್ನೇ ವಿರಾಟ್ಪುರುಷನನ್ನಾಗಿ ಪ್ರತಿಪಾದಿಸುತ್ತವೆ. ಅನ್ಯ ದೇವತಾ ಪ್ರಶಂಸೆಗಳು ಕೂಡ ಆತನ ಅಂಶ ಪ್ರಶಂಸೆಗಳಾಗಿ ಆತನ ವಿಶ್ವರೂಪವನ್ನು ಅಭಿವರ್ಣಿಸುತ್ತಿವೆ. ಆತನು ಅಂಗಿ, ಎಲ್ಲಾ ದೇವತೆಗಳೂ ಆತನ ಅಂಗಗಳು. ಆತನು ಅವಯವಿ, ಎಲ್ಲಾ ದೇವತೆಗಳೂ ಆತನ ಅವಯವಗಳು. ಆತನು ಅಂಶಿ, ಎಲ್ಲಾ ದೇವತೆಗಳೂ ಆತನ ಅಂಶಗಳು. ಯಾರ ಆರಾಧನವಾದರೂ ಆತನ ಅಂಶಾರಾಧನ ಮಾತ್ರವೇ. ಆತನ ಆರಾಧನೆಯೇ ಪರಿಪೂರ್ಣಾರಾಧನೆ. ಆದ್ದರಿಂದಲೇ **ಸರ್ವ ದೈವತ ರೂಪಾಯ ಸರ್ವಾಗಮ ಫಲಾಯಚ | ಸರ್ವ ಯಜ್ಞಾತ್ಮನೇ ಸರ್ವ ಸಾಕ್ಷಿಣೇ ಶುಭ ಮಂಗಳಮ್ ||** ಎಂದು 'ಶ್ರೀಮದ್ವಿಶ್ವಕರ್ಮ ಸುಪ್ರಭಾತಮ್'ನ ಮಂಗಳಾಶಾಸನದಲ್ಲಿ ನಾನು ಬರೆದಿದ್ದು.

ಶಾರೀರ ಮಾನಸರುಜಾ ಮತಿ ದಾರುಣಾನಾಂ
ಸಂಶೋಷಣಾಯ ಭವಪಾಶ ನಿಕೃಂತನಾಯ |
ಧರ್ಮೇಽಧ್ವನಿ ಪ್ರಚಲನಾಯ ತದೇಕ ರೀತ್ಯಾ
ಶ್ರೀ ವಿಶ್ವಕರ್ಮ ಚರಣೌ ಶರಣಂ ಪ್ರಪದ್ಯೇ ||

★

ಬಿಂಡಿಗನವಿಲೆ ನಾರಾಯಣ
ಅಯ್ಯಂಗಾರ್ಯರು

೩

ಗಾಯತ್ರಿ ಮಂತ್ರದ ರಹಸ್ಯಾರ್ಥ

ಬ್ರಹ್ಮರ್ಷಿಗೋತ್ರವನ್ನು ಪಡೆದು ಅದೇ ವಂಶದಲ್ಲಿಯೇ ಜನಿಸಿದ ಬಾಲಕನು ಉಪನಯನ ಸಂಸ್ಕಾರ ಹೊಂದಿ ಗಾಯತ್ರಿ ಮಂತ್ರೋಪದೇಶವನ್ನು ಪಡೆದುಕೊಂಡು ದ್ವಿಜತ್ವವನ್ನು ಗಳಿಸಿಕೊಂಡ ನಂತರವೇ ಅವನು ನಿಜವಾದ ಬ್ರಾಹ್ಮಣನಾಗುವ ಅರ್ಹತೆ ಗಳಿಸಿಕೊಳ್ಳುತ್ತಾನೆ. **ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ। ಧಿಯೋಯೋನಃ ಪ್ರಚೋದಯಾತ್ ॥** ಈ ಮಂತ್ರದ ಜಪದಿಂದ ವಟುವು ಸೂರ್ಯನ ಸರ್ವಾದರಣೀಯ ಬೆಳಕನ್ನು ಬಯಸಿ ಅದರಿಂದ ತನ್ನ ಪ್ರಜ್ಞೆಯನ್ನು ಪ್ರಖರಗೊಳಿಸುತ್ತಾ, ಬುದ್ಧಿಯನ್ನು ವೃದ್ಧಿಗೊಳಿಸುವಂತೆ ಪ್ರಾರ್ಥಿಸಲಾಗುತ್ತದೆ. ಋಗ್ವೇದದಲ್ಲಿ ಉಪಲಬ್ಧವಿರುವ ಅನೇಕ ಗಾಯತ್ರೀ ಛಂದಸ್ಸಿನ ಮಂತ್ರಗಳಲ್ಲಿ ಇದೇ ಮಂತ್ರವನ್ನು ದ್ವಿಜತ್ವದ ಗಳಿಕೆಗಾಗಿ ಆಯ್ದಿರುವುದು ಅತ್ಯಂತ ಸೂಕ್ತವು, ಅದ್ಭುತವೂ ಆಗಿದೆ. ಶಾಲೆಗೆ ಹೋಗುವ ಬಾಲಕನಾಗಲಿ, ಬೆಳೆದು ವ್ಯವಹಾರಜ್ಞನಾಗಿರುವ ಹಿರಿಯನಾಗಲಿ, ಆತನ ಯಶಸ್ಸು ಆತನ ಹರಿತವಾದ ಪ್ರಜ್ಞೆ ಮತ್ತು ಬುದ್ಧಿಗಳನ್ನೇ ಅವಲಂಬಿಸಿದೆಯಲ್ಲವೇ? ಅದಕ್ಕಾಗಿಯೇ ಪ್ರಜ್ಞಾಧನನ ಪ್ರಾರ್ಥನೆ!

ಸಂಧ್ಯೋಪಾಸನಾ ಕಾಲದಲ್ಲಿ ಬಳಸುವ ಅಸಾವಾದಿತ್ಯೋ ಬ್ರಹ್ಮ [ತೈತ್ತಿರೀಯ ಆರಣ್ಯಕ, ೨:೨] ಈ ಸೂರ್ಯನು ಬ್ರಹ್ಮ) ಎಂಬ ವೈದಿಕ ಮಂತ್ರವು ಸ್ಥೂಲ ನೇತ್ರಕ್ಕೆ ಕಾಣಿಸುತ್ತಾ, ಬಾನೆಲ್ಲವನ್ನೂ ತನ್ನ ತೇಜೋಮಯ ಬೆಳಕಿನಿಂದ ತುಂಬುವ ಸೂರ್ಯದೇವನನು ಕಣ್ಣಿಗೆ ಕಾಣದ ಅತ್ಯಂತ ಪ್ರಜ್ಞಾಶಾಲಿಯೂ ಸಮಸ್ತ ಲೋಕಗಳ ಸೃಷ್ಟಿಕರ್ತನೂ ಆಗಿರುವ ಆ ಮಹಾ ವಿಶ್ವಶಿಲ್ಪಿಯನ್ನು

ಪ್ರತಿನಿಧಿಸುತ್ತಾನೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಆದ್ದರಿಂದ ಗಾಯತ್ರಿ ಜಪವನ್ನು ಪ್ರಧಾನವಾಗಿ ಉಳ್ಳ ಈ ಸಂಧ್ಯೋಪಾಸನೆಯು ಉಪನಿಷತ್ತುಗಳಲ್ಲಿ ವಿವರಿಸಲಾಗಿರುವ ಅಂತರಾದಿತ್ಯವಿದ್ಯೆಯೇ ಎಂಬುದು ಸ್ಪಷ್ಟವಾಗುತ್ತದೆ. ಈ ರಹಸ್ಯವನ್ನು ಅರಿತರೆ ಬ್ರಾಹ್ಮಣಗಳು, ಉಪನಿಷತ್ತುಗಳು ಈ ಮಂತ್ರಕ್ಕೆ ನೀಡಿರುವ ಮಹತ್ತರ ಪ್ರಾಶಸ್ತ್ಯದ ಅರ್ಥವು ಸ್ಫುರಿಸೀತು. ಈ ಗಾಯತ್ರಿ ಮಂತ್ರವು ಋಗ್ವೇದದ ವೈಶ್ವಾಮಿತ್ರ ಮಂಡಲದಲ್ಲಿ (೩:೬೨:೧೦) ದೊರೆಯುತ್ತದೆ. ಋಗ್ವೇದದ ಮೂರನೆಯ ಮಂಡಲದ ದ್ರಷ್ಟಾರತ್ವವನ್ನು ಪಡೆದಿರುವ ಬ್ರಹ್ಮರ್ಷಿ ವಿಶ್ವಾಮಿತ್ರರಿಗೆ ತಮಗೆಲ್ಲಾ ದ್ವಿಜತ್ವವನ್ನು ಗಳಿಸುವ ಅವಕಾಶವನ್ನು ಒದಗಿಸಿದ್ದಕ್ಕಾಗಿ ಮಾನವರು ಕೃತಜ್ಞರಾಗಿರಬೇಕು. ಆದ್ದರಿಂದಲೇ ಈ ಮಂತ್ರವನ್ನು ಅದರ ದ್ರಷ್ಟಾರ ಮಹರ್ಷಿಯ ಪವಿತ್ರನಾಮ ಸ್ಮರಣೆಯನ್ನು ನಡೆಸದೆ ಉಚ್ಚರಿಸಬಾರದೆಂದು ನಿಯಮವಿದೆ. ಪೌರಾಣಿಕರು ಈತನನ್ನು ಅಬ್ರಾಹ್ಮಣ ವಂಶದಲ್ಲಿ ಜನಿಸಿ ಸ್ವಶಕ್ತಿ, ಹಠಗಳಿಂದ ಬ್ರಾಹ್ಮಣ್ಯವನ್ನು ಗಳಿಸಿದಾತನೆಂದು ಕಥೆ ಸೃಷ್ಟಿಸಿ ಉಪಕಾರವೇ ಮಾಡಿದ್ದಾರೆ. ಅನ್ಯಥಾ 'ಬ್ರಾಹ್ಮಣ್ಯವು ಜನ್ಮಜಾತ ಸ್ವತ್ತಲ್ಲ — ಅದು ಆದರ್ಶ ಮಾನವನ ಸಾಧನೆ. ಸ್ವಶಕ್ತಿ ದುಡಿಮೆಗಳಿಂದಲೇ ಅದನ್ನು ಸಾಧಿಸಬೇಕು.' ಎಂದು ಬೋಧಿಸುತ್ತಾ ಬ್ರಾಹ್ಮಣ್ಯವನ್ನು ಪ್ರಸಾದಿಸುವಂತಹ ಉನ್ನತ ಸ್ಥಾನದಲ್ಲಿ ಆತನು ವಿರಾಜಮಾನನಾಗಿರುತ್ತಿರಲಿಲ್ಲ; ಆತನ ಈ ಗಾಯತ್ರಿ ಮಂತ್ರವು ದ್ವಿಜತ್ವಕ್ಕೆ ಅವಶ್ಯಕ ಜ್ಞಾನವನ್ನು ರೂಢಿಸಿಕೊಳ್ಳದೆ ಅನ್ಯಮಾರ್ಗವಿಲ್ಲ ಎಂದು ಉಪದೇಶಿಸಿ ಮಾರ್ಗವನ್ನು ತೋರುತ್ತಿರಲಿಲ್ಲ.

'ಈ ಜ್ಞಾನ ಯಾವುದು?' ಈ ಪ್ರಶ್ನೆಗೆ ಗಾಯತ್ರಿ ಮಂತ್ರದಲ್ಲಿಯೇ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸೋಣ. **ಸವಿತೃ** ಎಂಬುದು ಸೂರ್ಯನ ಹಲವು ಪರ್ಯಾಯನಾಮಗಳಲ್ಲಿ ಒಂದು. ಇದರ ಅರ್ಥ ಉತ್ಪಾದಕ ಎಂದು. ಉತ್ಪಾದಕ ಎಂದರೆ ತಂದೆ. ಸುಧಾತುವಿಗೆ ಹೊರಕ್ಕೆ ತಳ್ಳು, ಆವಿಷ್ಕರಿಸು ಎಂಬ ಅರ್ಥವಿರುವುದನ್ನು ಅನುಸರಿಸಿ 'ಸವಿತುಃ' ಎಂಬ ಪದಕ್ಕೆ ಈ ಅರ್ಥವು ಸಿದ್ಧಿಸುತ್ತದೆ. **ಸುತ** ಎಂಬ ಪದಕ್ಕೆ ಹೊರಕ್ಕೆ ತಳ್ಳಲ್ಪಟ್ಟವ ಎಂದೇ ಅರ್ಥ. ಸೋಮರಸವು ಗಿಡವನ್ನು ಒತ್ತಿ ಹೊರಕ್ಕೆ ಸೆಳೆಯಲ್ಪಟ್ಟದ್ದರಿಂದಲೇ ಅದಕ್ಕೆ ಸುತ ಎಂಬ ಪದ ಸಲ್ಲುತ್ತದೆ. ಅರಣಿಯಲ್ಲಿ ಸುಪ್ತವಾಗಿ

ರುವ ಅಗ್ನಿಯಂತೆ ಹುಟ್ಟಿಗೂ ಮೊದಲೇ ಸುತರು ತಮ್ಮ ತಂದೆಯಲ್ಲಿ ತೇಜೋ ರೂಪದಲ್ಲಿ ಸಂಸ್ಥಿತರಾಗಿರುತ್ತಾರೆ ಎಂಬುದೇ ಇದರ ಭಾವ. ಆದ್ದರಿಂದಲೇ ಸಂಘರ್ಷಣೆಯಿಂದ ಮೂಡಿದ ಹೋಮಾಗ್ನಿಯನ್ನು 'ಸುತ' ಎಂದು ಋಗ್ವೇದ ದಲ್ಲಿ ಸಂಬೋಧಿಸಿರುವುದು. ಸವಿತುಃ ಎಂಬ ಪದವನ್ನು ಸೂರ್ಯಭಗವಾನನಿಗೆ ಅನ್ವಯಿಸಿದಾಗ ಪ್ರಸವ ಶಬ್ದದೊಂದಿಗೆ ಅದರ ಸಂಬಂಧವಿರುತ್ತದೆ. **ಸವಿತಾ ವೈ ಪ್ರಸವಾನಾಂ ಈಶೇ** (ಸವಿತೃ ಸಂತಾನಕ್ಕೆ ಒಡೆಯ) ಎಂದು ವೇದ ಘೋಷಿಸುತ್ತದೆ. ಋಗ್ವೇದ ೧:೧೬೪:೧೬ರಲ್ಲಿ **ಸ ಪಿತುಷ್ ಪಿತಾಸತ್** (ಆತನು ತಂದೆಗಳ ತಂದೆ) ಎಂದು ಆತನನ್ನು ಪಿತಾಮಹ ಎಂದಿದೆ. ಹೀಗೆ ಹೇಳುವುದರ ಮೂಲಕ ಆತನು ಎಲ್ಲರಿಗಿಂತಲೂ ಸುದೀರ್ಘವೂ, ಗಂಭೀರವೂ ಆದ ಲೋಕಾನುಭವಿ ಎಂದು ಅರ್ಥವಾಗುತ್ತದೆ. ಅಥವ ಆತನೇ ಜ್ಞಾನ ಸ್ವರೂಪಿ. ಈ ಮಂತ್ರವನ್ನೇ ತೈತ್ತಿರೀಯ ಆರಣ್ಯಕದಲ್ಲಿ (೧: ಅನುವಾಕ ೨) ಅತ್ಯಂತ ರಹಸ್ಯಮಯ ರೀತಿಯಲ್ಲಿ ಉಲ್ಲೇಖಿಸುತ್ತಾ ಬೇರೊಂದು ಪಾಠವನ್ನೇ ನೀಡುತ್ತದೆ **ಸವಿತುಃ ಪಿತಾಸತ್.** ಪಿತೃಶಬ್ದಕ್ಕೆ ಬದಲಾಗಿ ಸವಿತೃ ಶಬ್ದ ವನ್ನು ಬಳಸಿದೆ. ತೈತ್ತಿರೀಯ ಉಪನಿಷತ್ತಿನಲ್ಲೂ ಇದೇ ರಹಸ್ಯಮಯ ಪ್ರಯೋಗ ಲಭಿಸುತ್ತದೆ. **ಸವಿತುಃ ಪಿತಾಸತ್** (ಆತನು ಉತ್ಪಾದಕರ ತಂದೆ). ಇದು ವೇದ ಕಾಲದಲ್ಲಿ ಸವಿತಾ ಶಬ್ದವನ್ನು ತಂದೆ ಎಂಬ ಅರ್ಥದಲ್ಲಿ ಬಳಸ ಲಾಗುತ್ತಿತ್ತು. ಆದ್ದರಿಂದ ಗಾಯತ್ರಿ ಮಂತ್ರದ ಅರ್ಥವನ್ನು ಅರಸುತ್ತಿರುವ ನಾವು ಸವಿತೃ ಶಬ್ದ ವಾಚ್ಯನಾದ ದೇವನು ತಂದೆ ಎಂಬುದನ್ನು ಗುರುತಿಸಿ, ಅತ್ಯಂತ ಶ್ರೇಷ್ಠವಾದ (ವರೇಣ್ಯಂ) ಆತನ ಬೆಳಕನ್ನು (ಭರ್ಗಃ) ಕುರಿತು ಧ್ಯಾನಿಸಬೇಕೆಂದು ನಿರ್ದೇಶಿಸಿರುವುದನ್ನು ಕಂಡುಕೊಳ್ಳಬಹುದು. ಕೇವಲ ಬೆಳಕನ್ನು ಕುರಿತು ಧ್ಯಾನಿಸುವುದರಿಂದ ಜ್ಞಾನ (ಧೀಶಕ್ತಿ) ಉಂಟಾಗದು. ಆದ್ದರಿಂದ ಗಾಯತ್ರಿಯ ಅರ್ಥವನ್ನು ಇಂತು ಭಾವಿಸಬೇಕು: 'ನಾವು ನಮ್ಮ ಪಿತನ ಧೀಶಕ್ತಿಯನ್ನು ಕುರಿತು ಧ್ಯಾನಿಸೋಣ. ಆತ ನಮ್ಮಲ್ಲಿ ಧೀಶಕ್ತಿಯನ್ನು ಮೂಡಿಸಿ ಮುನ್ನಡೆಸಲಿ'

ಈಗ ಸವಿತಾ ನಾಮಧಾರಿಯಾದ ನಮ್ಮ ಈ ತಂದೆ ಯಾರು? ಎಂದು ಕೇಳಿದರೆ ಒಡನೆಯೇ ನಾವು ಋಗ್ವೇದದಲ್ಲಿ (೧೦:೮೧-೮೨) ಹೇಳಲ್ಪಟ್ಟಿರುವ ವಿಶ್ವಕರ್ಮ [**ಯೋ ನಃ ಪಿತಾ ಜನಿತಾ ಯೋ ವಿಧಾತಾ ಧಾಮಾನಿ ವೇದ**

ಭುವನಾನಿ ವಿಶ್ವ....] ಅಥವ ಪ್ರಜಾಪತಿ ಒಡನೆಯೇ ಸ್ಫುರಿಸುತ್ತಾನೆ. ಆತನೇ ನಮ್ಮ ತಂದೆ. ಅಷ್ಟೇ ಅಲ್ಲ ಬಾಹ್ಯರೂಪವಾದ ಚಕ್ಷುವಿಗೂ ಕೂಡ ಆತನೇ ತಂದೆ **(ಚಕ್ಷುಷಃ ಪಿತಾ)**. ಚಕ್ಷು ತಿಳಿವಿಗೆ, ಜ್ಞಾನಕ್ಕೆ ಸಂಕೇತ. ಕಣ್ಣು ನೋಡುತ್ತದೆ. ನೋಡುವುದು ಎಂದರೆ ಅರಿಯುವುದು ಎಂದು ತಾನೇ? ಆದ್ದರಿಂದ ವಿಶ್ವಜನಕನಾದ ವಿಶ್ವಕರ್ಮನೇ ನಮ್ಮ ತಂದೆ; ಆತನೇ ಜ್ಞಾನದ ತೌರು.

ವಿಶ್ವಕರ್ಮನಿಗೆ ಸಂಬಂಧಿಸಿದ ಜ್ಞಾನವು ಯಾವುದು? — ತನ್ನನ್ನು ತಾನೇ ಅರ್ಪಿಸಿಕೊಂಡು ತನ್ಮೂಲಕ ಎಲ್ಲಾ ಜಗತ್ತುಗಳನ್ನೂ ಸೃಷ್ಟಿಸಿ ಅದರಲ್ಲಿಯ ಜೀವಕೋಟಿಗಳನ್ನು ರೂಪಿಸಿ, ಅವುಗಳಲ್ಲಿ ಪ್ರವೇಶಿಸಿ, ಅವುಗಳಲ್ಲಿ ಸುಪ್ತರಾಗಿರುವವನು **(ಪ್ರಥಮಚ್ಛದವರಾ ಆ ವಿವೇಶ**, ಎಲ್ಲಾ ಜೀವಿಗಳಲ್ಲೂ ಸುಖದುಃಖಗಳನ್ನುಂಟು ಮಾಡುತ್ತಾ ಅವುಗಳಲ್ಲಿ ನಿಹಿತನಾಗಿರುವ ಭಗವಂತನು ತನ್ನನ್ನೂ ತನಗೆ ಉಳಿಸಿಕೊಂಡಿಲ್ಲ. ಆತ್ಮತ್ಯಾಗ, ಪ್ರೇಮಗಳ ಮೂಲಕ ತನ್ನ ಸಂತಾನವನ್ನು ಸೃಷ್ಟಿಸಿ, ಅವರನ್ನು ಒಳಹೊಕ್ಕು ಅವರೇ ತಾನಾಗುವನು. ತಾನೇ ರೂಪಿಸಿದ (ಸೃಷ್ಟಿಸಿದ) ಸರ್ವವನ್ನೂ ವಾಸ್ತವಿಕ ದೃಷ್ಟಿಯಿಂದ ಸಹೇತುವಾಗಿ ತಾನೇ ಎಂದು ಭಾವಿಸಿನೋಡಲು ಅವುಗಳಲ್ಲಿ ಇಂತು ಪ್ರವೇಶಿಸುವುದು ಅತ್ಯಾವಶ್ಯಕ. ಇದೇ ಆತನ ಪೈತೃಕ ಜ್ಞಾನ. ಈ ತಿಳಿವಿನ ಗಳಿಕೆಯ ಮೇಲೆಯೇ ನಾವು ದೃಷ್ಟಿ ಇರಿಸಬೇಕಾದದ್ದು. ಇದರಿಂದಲೇ ಮಾನವನು ಪ್ರೇಮ, ಕರುಣೆಗಳ ಮೂಲಕ ಸಮಸ್ತ ಜೀವಕೋಟಿಯೇ ತಾನೆಂದು ಭಾವಿಸಿ ಅವುಗಳಲ್ಲಿ ತಾನೂ ಪ್ರವೇಶಿಸುವುದು ಸಾಧ್ಯವಾಗುವಂತಹ ತಿಳಿವು ಅವನದಾಗಬಲ್ಲದು. ಹೀಗೆ ಮಾಡುವುದರಿಂದಲೇ ಆತನು ಸವಿತೃ (ತಂದೆ) ಎನಿಸಿಕೊಳುತ್ತಾನೆ — ತನ್ನನ್ನು ತಾನೇ ಹಿಂಡಿಕೊಂಡು ಸ್ವಾರ್ಥವನ್ನು ತ್ಯಜಿಸಿ ಹೊರಬಂದು ವಿಶಾಲವಾದ ಸರ್ವಾತ್ಮದಲ್ಲಿ ತನ್ನನ್ನು ಹಂಚಿಕೊಳ್ಳುತ್ತಾನೆ. ತ್ಯಾಗದ ಭೂಮಿಕೆಯಲ್ಲಿ ಸಾಧಿಸಿದ ನಿಸ್ವಾರ್ಥ ಕರ್ಮವು ಸೃಷ್ಟಿಯಲ್ಲಿ ತದಾತ್ಮ್ಯ ಭಾವವನ್ನು, ಸಮಾನ ಅನುಭೂತಿಯನ್ನು ಇತ್ತು ಪ್ರಜ್ಞಾವಂತನನ್ನಾಗಿಸುವಂತಹ ತಿಳಿವನ್ನು ಕೋರುವ ಪ್ರಾರ್ಥನೆಗಿಂತಲೂ ಮಿಗಿಲಾದ ಪ್ರಾರ್ಥನೆ ಯಾವುದು ತಾನೇ ಇದೆ?

★

● ವಿದ್ವಾನ್ ತಾ. ವೆಂ. ಮುತ್ತಾಚಾರ್ಯ,
ಬಿ.ಎ., (ಆನರ್ಸ್,) ಬಿ.ಎಡ್.,

೬

ವಿಶ್ವಕರ್ಮಾನ್ವಯ ಮಹಾದ್ರುಮ

ಶ್ರೀಕಂಠ ತನಯನನು । ಶ್ರೀಕರ ಗಜಾಸ್ಯನನು
ವೈಕುಂಠ ಪತಿ ಮುಖಸುರಾರ್ಚಿತನನು
ಶ್ರೀ ಕುಮಾರಾಗ್ರಜನ । ನಾ ಕಮಲಭವನುತನ -
ನೇಕದಂತನನಾವಗಂ ನಮಿಪೆನು ॥೧॥

ಸರ್ವಮಂಗಳೆ ಲಕುಮಿ । ಈರ್ವರಿಂದೊಡಗೂಡಿ
ಸರ್ವದಾ ನೆಲಸಲೆನ್ನಲಿ ಸರಸತಿ
ಉರ್ವಿಯೊಳಿಹ ಪುರಾಣ- । ಸರ್ವಕ್ಕು ಪಿತನೆನಿಪ
ಗರ್ವರಹಿತಗೆ ಮಯನಿಗಾನತನಹೆಂ ॥೨॥

ಮಯನು ನೀಲೋತ್ಪಲಸು । ನಯನನನುಪಮ ಮುನಿನಿ
ಚಯವರಂ ವೇದಪ್ರಕಾಶಕನಿವಂ
ಪ್ರಿಯಕರ ಪುರಾಣ ಜನ । ಕ ಯತೀಂದ್ರನೀತಗನು
ನಯದಿಂದೆ ನತನಪ್ಪೆನಾನಾವಗಂ ॥೩॥

ಶ್ರೀ ಕಾಳಹಸ್ತೀಂದ್ರ । ನೇ ಕರವಮುಗಿವುತಾಂ
ಶ್ರೀಕರ ಪದಾಬ್ಜಕಭಿವಂದಿಸುವೆನೈ
ಸಾಕಾರವಿಭವವ ಕೃ । ಪಾಕರಿಸಿ ಪೇಳ್ವುದೈ
ಲೋಕೈಕ ಗುರುವರನ ವಿಶ್ವಾತ್ಮನಾ ॥೪॥

ಇಹುದೆರಡುತೆರದ ಗುಣ । ರಹಿತವೆಂದೊಂದು ಗುಣ
ಸಹಿತವೆಂದೊಂದು ಮೂರ್ತಿವಿಭೇದ ತಾಂ
ಅಹುದು ಸಗುಣತೆ ತಾನು । ವಹಿಸೆ ನಿರ್ಗುಣತೆಯಂ
ಮಹನೀಯ ವಿಶ್ವಕರ್ಮಾಕಾರದಾ ॥೫॥

ಆಕಾರ ರಹಿತವಿಭು । ಸಾಕಾರನೆಂತಾದ
ನೋ ಕಾಳಹಸ್ತೀಶ ಗುರುಮೂರ್ತಿಯೇ
ಶ್ರೀಕೃಪಾದೃಷ್ಟಿಯಿಂ । ದೇಕಮನದಿಂದೊರೆದು
ನೀ ಕಳೆವುದೈ ಎನ್ನ ಸಂಶಯವಿದಂ ||೬||

ಗಂಧಮಿಲ್ಲದ ಶಬ್ದ । ಬಂಧಮಿಲ್ಲದ ರೂಪ
ವೊಂದಮಿಲ್ಲದ ನಿರಾಲಂಬವಾದ
ಎಂದುಂ ಮಹಾಶೂನ್ಯ । ದಿಂದಿರ್ದವಿಭುವಿನೊಳ
ಗೊಂದುನಾದಂ ಪುಟ್ಟಿದುದು ಪೂರ್ವದೊಳ್ ||೭||

ಬಿಂದು ಜನಿಪುದುನಾದ । ದಿಂದಂ ಕಲಾ ಜನನ
ಸಂದುದೈ ಬಿಂದುವಿಂದೆಲೆ ನೃಪತಿಯೆ
ಬಿಂದುನಾದಕಳಾಸು । ಬಂಧದಿಂದವ್ಯಯಾ
ನಂದಪೂರ್ಣಂ ಪ್ರಣವಮುದು ಪುಟ್ಟುಗುಂ ||೮||

ಪ್ರಣವಮದು ತಾನು ಕಾ । ರಣಮಪ್ಪುದಂಕುರದ
ಗಣಕೋಟಿಗಳಿಗಿದಂ ದಹಿಸಲರಿದೈ
ಪ್ರಣಿಶಿಸಲ್ಕರಿದುಜಲ । ಕಣಗಳಿಂ ನೆನೆಸಲಿಕು-
ಮಣಮಾಗದೈ ವಿಚಾರಿಸಿ ನೋಡಲು ||೯||

ಈ ಜಗತ್ಕಾರಣಂ । ಪೂಜನೀಯಂ ಮೂಲ
ಬೀಜಮೊಂದಿಹುದು ಸಕಲಾಂಕುರಕ್ಕುಂ
ತೇಜೋಮಯಂ ಪರಂ । ನೈಜಸ್ವರೂಪಮದು
ಜಾಜ್ವಲ್ಯಮಾಗಿಹ ಪರಬ್ರಹ್ಮವೈ ||೧೦||

ಆ ವಿಭುವಿನಂಕುರದೊ । ಳಾವಿರ್ಭವಿಸಿದುದೈ
ಶ್ರೀ ವಿಶ್ವಕರ್ಮನೆಂಬೊಂದು ವೃಕ್ಷಂ
ಈ ವಿಶ್ವಮಂ ವೃಕ್ಷ । ಮಾವರಿಸಿಹುದು ವಲ್ಕ
ಲಾವಳಿಗಳಿಂ ಬೇರ್ಗಳಿಂ ಶಾಖೆಯಿಂ ||೧೧||

ದ್ರುಮವಿದುವೆ ವಿಶ್ವಮೂ । ರ್ತಿಮಯಂ ಪ್ರರಬ್ರಹ್ಮ
ಮಮಲಂ ಸ್ವಯಂಭು ಭಗವಂತನೆ ವಲಂ
ವಿಮಲಂ ಪರಮವೇ । ದ ಮಯಂ ಜಗತ್ಕರ್ತ
ನವಿತ ಮಹಿಮಂ ವಿಶ್ವಕರ್ಮನಿವನೈ ||೧೨||

ವಿಶ್ರುತನನಂತಂ ಸ। ಹಸ್ರ ಶೀರ್ಷಂ ಮೇಣ್ ಸ
ಹಸ್ರಾಕ್ಷನೈ ಸಹಸ್ರಾಂಘ್ರಿ ಕಮಲಂ
ನೀ ಶ್ರವಣಗೈ ನೃಪ ಸ। ಹಸ್ರ ಮೂರ್ತಿಯಿವಂ ಸ
ಹಸ್ರ·ನಾಮಕದೇವ ನಿಮಗೆ ನಮಿಪೆಂ ||೧೩||

ಅವನು ತಾ ಬ್ರಹ್ಮಂ ಮ। ಹಾವಿಷ್ಣು ವಾ ರುದ್ರ
ನಾವಾಸವಂ ವಿಶ್ವಕರ್ಮನೊಳಗೆ
ಈ ವಿಶ್ವಮಂ ಬೆಳಗು। ವಾ ವಿಮಲ ರವಿಯಾರು
ದೇವನಿವನೊಳು ಕಾಳಹಸ್ತಿ ಮುನಿಯೆ ||೧೪||

ಆ ದಿವ್ಯವೃಕ್ಷದೊಳ। ಗೀ ದೇವತಾ ಜಾಲ
ಮಾದಿಯಿಂದಂ ನಿರುತ ನೆಲಸಿರ್ಪರೈ
ಆದಿತ್ಯ ವಿಷ್ಣುರು। ದ್ರಾದಿ ಸುರರಸುರಗಣ
ಮಾದೇವ ವಿಶ್ವಕರ್ಮಾಂಗಸ್ಥರೈ ||೧೫||

ಎಲ್ಲಿಹಂ ಬ್ರಹ್ಮ ತಾ। ನೆಲ್ಲಿಹಂ ವಿಷ್ಣು ಮೇ
ಣೆಲ್ಲಿಹಂ ರುದ್ರನಾ ಸುರಗಣವರಂ
ಎಲ್ಲಿರ್ಪನೈ ಭಾನು। ಸಲ್ಲಲಿತ ವೃಕ್ಷವಿದ
ರಲ್ಲಿ ಪೇಳೆನಗೆ ದಂಯೆಯಿಂದ ಗುರುವೇ ||೧೬||

ಅಗಣಿತ ಮಹಿಮನಿವಂ। ತ್ರಿಗುಣ ಸಂಯುಕ್ತನವು
ಜಗದೊಳ್ ರಜಸ್ಸತ್ವ ತಾಮಸಂಗಳ್
ಮಿಗೆ ರಕ್ತಮೈ ರಜಸ್। ಬಗೆಗೊಳಿಪ ಸತ್ವ ಬಿಳಿ
ತ್ರಿಗುಣಗಳ ತಾಮಸಂ ಕೃಷ್ಣವರ್ಣಂ ||೧೭||

ಆ ವಿಷ್ಣು ಸತ್ವದಿಂ। ದಾವಿರ್ಭವಿಪನು ಮೇ
ಣಾ ವಾರಿಜೋದ್ಭವ ರಜೋಜಾತನೈ
ದೇವರುದ್ರಂ ತಮೋ। ಭಾವಜಾತಂ ಮತ್ತೆ
ಆ ವಿಶ್ವಕರ್ಮನೀ ರೂಪಗುಣಿಯೈ ||೧೮||

ಭೂರಿತರುವಿದರಲ್ಲಿ। ಬಾರಿ ಬಾರಿಗು ತಾನು
ತೋರುವುದು ಜನನಂ ವಿಲೀನಮನಿಶಂ
ಮೂರುಗುಣಗಳನಿವಂ। ಮೀರಿ ಮೇಲೇರಿರುವ
ಧೀರನಾ ವಿಶ್ವಕರ್ಮಂ ಜನಿಸನೈ ||೧೯||

ದೇವತೆಗಳಿವರೆಲ್ಲ । ರಾ ವಿಶ್ವಕರ್ಮನಿಂ
ದಾವಿರ್ಭವಿಪರು ತನು ಭೇದಂಗಳಿಂ
ಆ ವೇದ ಜಾಲದೊಳು । ತಾವುಕ್ತರಾಗಿಹರು
ಭಾವಿಸಲ್ ಪೃಥಗಾತ್ಮರಾಗಿಪ್ಪರು ॥೨೦॥

ಒಬ್ಬನೇ ಬ್ರಹ್ಮತಾ । ನೊಬ್ಬನೇ ವಿಷ್ಣು ಮೇ
ಣೊಬ್ಬನೇ ಮಹಾದೇವನಾರುದ್ರನು
ಒಬ್ಬನೆ ದಿವಾಕರಂ । ಹಬ್ಬಿರುವ ವಿಭುವತಾಂ
ತಬ್ಬಿರುವ ಮೂರ್ತಿತ್ರಯ ಸ್ವರೂಪಂ ॥೨೧॥

ಇಂತು ವೇದಂಗಳಲಿ । ಸಂತತಂ ಸುರರುತಾಂ
ಸಂತುಷ್ಟರಾಗಿಹರು ಸನ್ನುತಿಗಳಿಂ
ಎಂತಿವರು ಜನಿಸಿದರ । ನಂತ ವಿಭುವಿನೊಳು ನಿ
ಶ್ಚಿಂತರಾದೇವತಾ ಸಂತತಿಗಳು ॥೨೨॥

ವರವಿಶ್ವಕರ್ಮನೆಂ । ಬುರುತರದ್ರುಮವಿದರೊ
ಳಿರುವುವೈ ವಿವಿಧಶಾಖೆಗಳೈದು ತಾಂ
ಪರಶಿವ ನಿರಾಕಾರ । ಪರಮ ಸಾಕಾರ ಮೇಣ್
ಚಿರಕರ್ತ ಕರ್ಮನೆಂಬೀನಾಮದಿಂ ॥೨೩॥

ವರವಿಷ್ಣುರುದ್ರನೀ । ಶ್ವರ ಸದಾಶಿವನು ಸರ
ಸಿರುಹ ಸಂಭವನುಮಿವರಿಂ ತೀವಿದ
ಪರಮ ಪಂಚಬ್ರಹ್ಮ । ಪರಿಪೂರ್ಣಮಾಗಿಹುದು
ವರ ಶಾಖಪಂಚಕಂ ಘನವೃಕ್ಷದೊಳ್ ॥೨೪॥

ಶಾಖಪಂಚಕದಿಂದ । ನೇಕದೀಪ್ತಿಯದೇವ
ತಾ ಕೋಟಿ ಪೂರ್ಣಮಾ ಪ್ರತಿಶಾಖೆಗಳ್
ಶಾಖೋಪಶಾಖೆಯಿಂ । ದಾಕಾರಮಂ ಪಡೆದು
ನೇಕ ಪ್ರಕಾರದೊಳಗಾ ತರುವಿನೊಳ್ ॥೨೫॥

ಈ ತರುವಿನುಪಶಾಖೆ । ತಾ ತಳೆದಿಹುದು ಋಷಿ
ವ್ರಾತಮಂ ವಿಶ್ವಕರ್ಮನ ಲೀಲೆಯಿಂ
ಖ್ಯಾತ ರಾಕ್ಷಸಮಯವು । ಪೂತ ಯಕ್ಷ ರಮಯವಿ
ನೀತ ಗಂಧರ್ವಮಯ ಮನುಶಾಖೆತಾಂ ॥೨೬॥

ಆದಿತರುವಿದಕೆ ವಿ। ದ್ಯಾಧರಾಪ್ಸರ ಸಿದ್ಧ
ರಾದಿಗಳೆ ಪಲ್ಲವಗಳೆನಿಸಿಪ್ಪರು
ಮೇದಿನಿಯ ನರರು ಜಂ। ತ್ವಾದಿಗಳು ಸರ್ವೇಶ
ನೀ ದಿವ್ಯತರುವಿನೆಲೆಯಾಗಿಪ್ಪರು ॥೨೭॥

ನಾರುಗಳೆ ನಾಗಗಳು। ಬೇರುಗಳೆ ಗ್ರಹಗಳ್ಶೆ
ತಾರಕೆಗಳೇ ಪುಷ್ಪವಾಗಿಪ್ಪವೈ
ಭೂರಿವೇದಂಗಳೇ। ಸಾರತರ ಫಲನಿಕರ
ಆರ್ಕೈದು ನೋಡಲೀ ಭವ್ಯತರುಗೆ ॥೨೮॥

ಈ ಮಹಾದ್ರುಮದೊಳಿಹ। ಕೋಮಲ ಮಧುರಫಲ
ಸ್ತೋಮಗಳ್ ಬ್ರಹ್ಮರಸ ಪೂರಣಗಳು
ಸ್ವಾಮಿ ಈ ವಿಶ್ವಕ। ರ್ಮಾಮಲನ ರೂಪವು
ದ್ದಾಮ ಪ್ರಣವ ಬೀಜಮಿಹುದವುಗಳೊಳ್ ॥೨೯॥

ಇಂತು ನಾನಾದೇವ। ತಿಂಥಿಣಿಯ ಪಡೆಯುತೆ ನಿ
ರಂತರಂ ಪುಟ್ಟಮೆರೆವೀದ್ರುಮದೊಳು
ಅಂತರ್ಗತಂ ವಿಭುವ। ದೆಂತು ಸಂಭಾವ್ಯನಹ
ನೆಂತಿವನ ತಾಂ ತಿಳಿವರಾಂಯೋಗಿಗಳ್ ॥೩೦॥

ತನ್ನುದರದೊಳು ವಿಶ್ವ। ವನ್ನೆಧರಿಸುತೆ ಲೋಕ
ದುನ್ನತಿಯು ಸಾಧಿಸುತಲಿಹನು ದೇವಂ
ಉನ್ನತಂ ವಟ ಪತ್ರ। ಸನ್ನಿಧಿಸ್ಥಿತನಿವಂ
ಘನ್ನಮಹಿಮಂ ದಶಾಂಗುಲದಳತೆಯಾ ॥೩೧॥

ಬಾಲರವಿಕೋಟ್ಯಭನು। ಬಾಲಸ್ವರೂಪಿ ಮೇಣ್
ಲೀಲಾವಿನೋದಂ ದಿಗಂಬರನಿವಂ
ಕಾಲಮಾಯಾತೀತ। ಮೂಲನಿವ ಯೋಗನಿ
ದ್ರಾಲೋಲನಾಗಿಹನು ವಿಶ್ವಕರ್ಮಂ ॥೩೨॥

ಪದಕಮಲದಿಂ ಹೊಕ್ಕು। ಳದವರೆಗುಮಜನು ಕಂ
ಠದ ತನಕವಾವಿಷ್ಣು ಶಿರವು ಶಿವನು
ಪದುಳದಿಂದೀ ಸ್ವರೂ। ಪದೆ ವಿಶ್ವಕರ್ಮ ತನು
ವದು ಮೆರೆವುದೈತ್ರಯಿಮೂಲನಿವನಾ ॥೩೩॥

ಕರಗಳಿಂ ಪಿಡಿದು ನಿಜ । ಚರಣದಂಗುಷ್ಠವನು
ಪರಮನಿವ ಚುಬುಕಿಸುತಲಿಹ ಲೀಲೆಯಿಂ
ವರಯೋಗ ನಿದ್ರೆಯೊಳ । ಗಿರುತಿಹನು ಶಿಶುವು ವಟ
ತರುಪತ್ರದೊಳು ಮಲಗಿ ವಿಶ್ವಕರ್ಮ ||೩೪||
ವರಬಾಲರೂಪಗಿವ । ಗಿರುವುವೈ ಮೆರೆವ ಸಾ
ವಿರ ಕಣ್ಣುಗಳು ಮತ್ತೆ ಮುಖಗಳೈದು
ನರರಿಂತು ಲೋಕದೊಳ । ಗೊರೆಯುತಿಹರೆಂತಿವನ
ನರಿವರೆಂಬುದನಿಂದು ಗುರುವೆ ಪೇಳೈ ||೩೫||
ಈ ಪರಬ್ರಹ್ಮತರು । ತಾ ಪಂಚಶಾಖೆಯಿಂ
ದಾ ಪಂಚಮುಖಗಳಿಂ ಪ್ರತಿಶಾಖೆಯಾ
ರೂಪದಿ ಸಹಸ್ರ ಶೀ । ರ್ಷೋಪಭರಿತಂ ದಿವ್ಯ
ದೀಪಕಂ ಪಾದಪಂ ಕಂಗೊಳಿಪುದೈ ||೩೬||
ಇಂತೀ ದ್ರುಮಂ ತಾನ । ನಂತ ಶಾಖಾ ಪ್ರಪೂ
ರ್ಣಂ ತಾನೆನಿಸಿರಲ್ಕನಂತ ಸಂಜ್ಞಂ
ಇಂತಾದುದೈ ಬೀಜ । ಸಂತತಿ ಸಹಸ್ರಮಂ
ತಾಂ ತಳೆದಿರಲು ಸಹಸ್ರಾಕ್ಷಿ ಪಾದಂ ||೩೭||
ಘನವಿಶ್ವಕರ್ಮದೇ । ವನ ಜನ್ಮ ಕರ್ಮಗಳ
ಘನನುಮಗಣನೆಯಮರರಿಗಸದಳಂ
ಎನಲಿನ್ನು ನಾವೆಂತಿ । ವನ ಗಣಿಸಲಳವಹುದು
ಜನಪ ಸುವ್ರತ ಮಹಾರಾಜ ಪೇಳೈ ||೩೮||
ಅನಘನಾ ವಿಶ್ವಕ । ರ್ಮನ ವಿಶ್ವದೀಕ್ರಿಯೆಯ
ಘನಚರಿತೆಯನು ಕೇಳಿ ಧನ್ಯನಾದೆಂ
ಎನಗಿದ್ದ ಸಂಶಯವ । ವಿನಶಿಸಿದೆ ಮೋಕ್ ಕೃತಾ
ರ್ಥನಗೈದೆಯೈ ಜ್ಞಾನಿವರಯೋಗಿಯೇ ||೩೯||
ಪರಮ ಪಾವನವೆನಿಪ । ವರವಿಶ್ವಕರ್ಮನಾ
ಪರಿಶುದ್ಧ ಚರಿತೆಯಂ ಶ್ರವಣಗೈದು
ಚಿರಪುಣ್ಯಶೀಲನಾ । ಗಿರುವೆ ನೀನೀಕಥೆಯ
ನರರು ಕೇಳಲ್ ಪಡೆವರಮರ ಸುಖವಂ ||೪೦||

ಜಗವ ಗರ್ಭದೆ ಧರಿಸಿ । ಮಿಗೆತೇಜದಿಂ ಪೊಳೆವ
ಜಗದ ಗುರುವಿವನು ವಿಶ್ವವ ಸೃಷ್ಟಿಸಲ್
ಮಿಗೆ ಕೌತುಕಂಗೊಳಿಪ । ಅಗಣಿತ ಮಹಾಮಹಿಮ
ಬಗೆಗೊಳಿಪ ಪುರುಷಾಕೃತಿಯ ಪಡೆದನೈ ||೪೧||

ವರಪಂಚಮುಖದ । ಮೇಣ್ ಪರಿವಿರಾಜಿತ ಜಟೆಯ
ಸುರುಚಿರ ವಿಲೋಚನತ್ರಯದ ಶಾಂತಂ
ಪರಿಪೂರ್ಣರಕ್ತ ಗೌ । ರ ರುಚಿಯಾ ವರಭಸ್ಮ
ಧರ ವಿಶ್ವಕರ್ಮ ನಿಂತೆಸೆದುದಿಸಿದಂ ||೪೨||

ಪದುಳಹಸ್ತದ ಪುಸ್ತ । ಕದ ಪಾಶದಸಿಯ ಸೂ
ತ್ರದ ಬಿಲ್ಲಿನಭಯ ಹಸ್ತದ ಕೊಡಲಿಯ
ವಿದಳಿಪಂಕುಶದ ಬಾ । ಣದ ಕುಠಾರದ ದೇವ
ನುದಿಸಿದಂ ಪುರುಷಾಕೃತಿಯೊಳು ತಾನೆ ||೪೩||

ಶಿಷ್ಟನೀ ವಿಭುವು ತ । ನ್ನಿಷ್ಟದಂತೆಂಬೆ ವಿಶ್ವ
ಸೃಷ್ಟಿಗೋಸುಗ ಸುರರ ಸಂಸೃಜಿಸಿದಂ
ಸೃಷ್ಟರಾದರು ಗುಣವಿ । ಶಿಷ್ಟರಾ ಮನು ಮಯರು
ತ್ವಷ್ಟನುಂ ಶಿಲ್ಪಿಯುಂ ವಿಶ್ವಜ್ಞನುಂ ||೪೪||

ಘನಪಂಚಮುಖದಿಂದೆ । ಮನುಮುಖ್ಯರುದಿಸಿದರು
ವಿನುತ ಬಾಹುಗಳಿಂದಲಾ ಕ್ಷತ್ರಿಯರ್
ಜನಿಸಿತೈ ವೈಶ್ಯ ಶೂ । ದ್ರ ನಿಕರಂ ಕ್ರಮದಿಂದಿ
ವನ ತೊಡೆಗಳಿಂದಡಿಗಳಿಂ ವಿಭುವಿನಾ ||೪೫||

ಮನಸಿನೊಳಗಾ ಚಂದ್ರ । ನಿನಸು ಲೋಚನದೊಳಾ
ನನದೊಳಗ್ನಿ ಪ್ರಾಣದೊಳು ಮರುತನು
ಘನಪಾದದಿಂ ಪೃಥ್ವಿ । ನಿಸಿಜದುವು ವಿಶ್ವಕ
ರ್ಮನೊಳುದೇವನೊಳು ವಿವಿಧಾಂಗಗಳಲಿ ||೪೬||

ವಿಭುವಿವನಹೊಕ್ಕುಳಲಿ । ನಭವಿದುದ್ಭವಿಸಿದುದು
ಶುಭದ ಮಸ್ತಕದೆ ಜನಿಸಿಹುದು ಸಗ್ಗಂ
ಸಬಲನಾ ಕೇಶಜಾ । ಲಭವಗಳು ಮೇಘಗಳು
ಅಭಯನಾ ಕಿವಿಗಳಿಂ ದಿಶೆ ಪುಟ್ಟಿತೈ ||೪೭||

ವರ ರೋಮರಂಧ್ರದಿಂ । ಪರಿಜನಿಸಿತುದಕಂ ರು
ಚಿರ ಪಾದಮೂಲದಿಂ ನದಿಸಮೂಹಂ
ಉರುಕುಕ್ಷಿಯಿಂದೆ ಸಾ । ಗರ ಜಾಲವುಂ ಮತ್ತೆ
ಗಿರಿಗಳುಂ ಪುಟ್ಟಿದುವು ಪರಿಪರಿಯಲಿ ||೪೮||

ಕಂಗೊಳಿಪ ಸಚರಾಚ । ರಂಗಳಿಂ ತೀವಿರ್ಪ
ಮಂಗಳಾಕಾರದೀ ಸರ್ವಜಗಮಂ
ಪಿಂಗದನವರತಂ ನಿ । ಜಾಂಗದಿಂ ಸೃಷ್ಟಿಸಿ ಶು
ಭಾಂಗ ತಾಂ ಮೆರೆವನ್ನೈ ವಿಶ್ವಕರ್ಮ ||೪೯||

ಮುನಿಯೆ ಪೇಳ್ಳೆ ಗುರುವೆ । ಮನುವಾರು ಮಯನಾರು
ಘನ ಶಿಲ್ಪಿಯಾತ್ವಷ್ಟ್ರವಿಶ್ವಜ್ಞರಾರ್
ವಿನಯದಿಂ ಬೇಡುತಿ । ರ್ಪೆನು ನಿನ್ನನೆಂತಿರ್ಪು
ದನುನಯದೆ ಪೇಳವರ ಮೂರ್ತಿಸ್ವರೂಪಂ ||೫೦||

ಶಿವನೆ ಮನುವೈ ವಿಷ್ಣು । ವಿವನೆ ಮಯನ್ನೈ ತ್ವಷ್ಟ್ರ
ಸುವಿಮಲ ಬ್ರಹ್ಮನೆನಿಸಿಹನು ಕೇಳ್ಳೆ
ದಿವದೊಡೆಯನಾ ಶಿಲ್ಪಿ । ರವಿತಾನೆ ವಿಶ್ವಜ್ಞ
ಇವರಿಂತು ಪ್ರೋಕ್ತರಾಗಿರುತಿರ್ಪರೈ ||೫೧||

ನೇಮದಿಂ ಪೇಳ್ವುದು ಮ । ಹಾಮುನಿಯೆ ಪರಿಶುದ್ಧ
ಧೀಮಂತನೇ ಪುರುಷವ್ಯಾಘ್ರನೇ
ತಾಮಸರಹಿತ ಶ್ರುತಿ । ಸ್ತೋಮಮ ತಿಳಿದವನೇ
ಆ ಮಹಾಮನುಮುಖ್ಯರೇಕುದಿಸಿದರ್ ||೫೨||

ವಿಶ್ವವೃಕ್ಷಸ್ಥನೀ । ವಿಶ್ವಕರ್ಮಂ ಸುಶ
ಕ್ತಿಸ್ವರೂಪವ ತಾಳ್ದನುತ್ಸಾಹದಿಂ
ಶಾಶ್ವತಂ ಮೆರೆವುತಿರು । ವೈಶ್ವರ್ಯಶೀಲ ಶ
ಕ್ತಿ ಸ್ವರೂಪವಿದು ತಾನ್ಯೆದುತೆರನ್ನೈ ||೫೩||

ಹೇ ಶಾಂತಚಿತ್ತ ಕೇ । ಳಾ ಶಕ್ತಿಪಂಚಕದ
ವೈಶಿಷ್ಟ್ಯನಾಮಗಳಿವಾದಿಶಕ್ತಿ ।
ನಾಶವೇ ಇಲ್ಲದಿ । ಚ್ಛಾಶಕ್ತಿ ವರದ ಕ್ರಿ
ಯಾಶಕ್ತಿ ಮಾಯೆ ಮೇಣ್ ಜ್ಞಾನಶಕ್ತಿ ||೫೪||

ಒಡೆಯಪಂಚಾನನಂ । ಪಡೆದೈದು ಶಕ್ತಿಯಿಂ
ದೊಡಗೂಡಿ ವಾಸಿಪರು ಮನ್ವಾದಿಗಳ್
ಒಡಮೂಡಿ ನಾಲ್ದೆಸೆಗ । ಳೆಡೆಯಲ್ಲಿಯುಂ ಮತ್ತೆ
ನಡುವೆಯುಂ ವಸಿಸುತಿಹರಾ ಬ್ರಹ್ಮಣರ್ ||೫೫||

ಶಿವನಾಮಕಂ ಪೂರ್ವ । ತೆವೆ ಮೂಡಲೊಳ್ ಮೂರ್ತಿ
ಸುವಿಮಲಮುಖಂ ಮೂರ್ತಿಯಾ ಪಡುವಲೊಳ್
ನೃವರ ಕೇಳಾವೃತ್ತ । ರವನು ತೀವಿಪ್ಪುದೇ
ಸುವದನಂ ಕರ್ತೃವೆಂಬಾ ಹೆಸರಿನಾ ||೫೬||

ಬಗೆಗೊಳಿಸುತಿರ್ಪುದು । ಜಗದೊಡೆಯನೈದನೆಯ
ಮೊಗಮದುವೆ ನಡುವಿರ್ಪದು ಕೇಳುದೈ
ಸೊಗಯಿಸುವ ವಿಭುವಿವನ । ಅಗಣಿತ ಸುಮಹಿಮೆಯಾ
ಮೊಗವಿದಕೆ ಕರ್ಮವೆಂಬಭಿಧಾನವೈ ||೫೭||

ಶಿವನಾದಿಶಕ್ತಿಯುತ । ನಿವನು ಮನುನಾಮಕನು
ಸುವಿಮಲಂ ವಿಷ್ಣುವಿಚ್ಛಾಶಕ್ತ್ಯುತಂ
ಸುವಿಚಾರಿ ಕಮಲಸಂ । ಭವನು ಕ್ರಿಯಾಶಕ್ತಿ
ಸುವಿಶಿಷ್ಟನೈ ತ್ವಷ್ಟೃವರ ನಾಮಕಂ ||೫೮||

ದಿವದೊಡೆಯ ನಿಂದ್ರತಾಂ । ನಿವಸಿಪಂ ಶಿಲ್ಪಿನಾ
ಮವನು ಧರಸುತ್ತೆ ಮಾಯಾಶಕ್ತಿಯಿಂ
ಇವರು ಪೂರ್ವವ ದಕ್ಷಿ । ಣವ ಪಶ್ಚಿಮವನುತ್ತ
ರವನನುಕ್ರಮದಿಂದಲಾಶ್ರಯಿಸಿಹರ್ ||೫೯||

ಒಡೆಯ ಪಂಚಾನನನ । ನಡುವಿಪ್ಪ ಮೊಗದಿಂದ
ಲೊಡಮೂಡಿ ಬಂದನಾ ವಿಶ್ವಜ್ಞನು
ಪಡೆದಿಹಂ ರವಿ ಪೆಸರ ನೊಡಗೂಡಿ ವಾಸಿಸುವಂ
ಬಿಡದೆ ಸುಜ್ಞಾನ ಶಕ್ತಿಯನಾವಗಂ ||೬೦||

ಈ ಜಗತ್ತ್ರುವಿನಲಿ । ಸೋಜಿಗದ ಪಂಚ ಶಾ
ಖಾ ಜಾತರಾದರೀಶ್ವರ ಮುಖ್ಯರು
ರಾಜರ್ಷಿ ಕೇಳಿವರು । ಈ ಜಗತ್ಕಾರಣರು
ತೇಜಸ್ವಿಗಳು ಶಕ್ತಿಯುಕ್ತರಿವರು ||೬೧

ವರಜಗತ್ತರುವಿನಿಂ । ದುರೆ ಪುಟ್ಟದೀ ಬ್ರಹ್ಮ
ಣರಿಗೆಂತು ಶಾಖೆಗಳ ಭೇದಮಹುದು
ಪರಿಯೊಳಿಂತೀಕ್ರಮದೊ । ಳಿರುವುದೈ ದಿಗ್ಭೇದ
ವರಿವುದೈ ವೇದ ಶಾಖಾ ಭೇದಮಂ ||೬೨||

ಮೂಡಲೊಳು ಋಕ್ ಶಾಖೆ । ಮೂಡಿಹುದು ತೆಂಕಣವ
ಕೂಡಿಕೊಂಡಿಪ್ಪುದು ಯಜುಶ್ಶಾಖೆ ತಾಂ
ರೂಢಿಯಲಿ ಸಾಮವೊಡ । ಗೂಡಿಹುದು ಪಶ್ಚಿಮವ
ನಂ ಡಮರುಧರ ಸಖದಿಶೆಯನಥರ್ವಂ ||೬೩||

ಪದುಳವೃಕ್ಷದೊಳಿರುವ । ಮೊದಲಶಾಖೆಯೆ ತಾ ವಿ
ವಿಧ ಶಾಖೆಯೈದರೊಳು ಕೂಡಿರುತ್ತುಂ
ಉದಿಸಿಹಾಬ್ರಹ್ಮರಿಂ । ಗೊದಗುತ್ತೆ ತಾ ನೆರವು
ದಿದು ಮನು ಮಯಾದಿ ಮಹನೀಯರಿಂಗೆ ||೬೪||

ಮನುಗೆ ಋಕ್ ಮೇಣ್ ಮಯಗೆ । ಘನಯಜುಸ್ತ್ವಷ್ಟ್ರವಿಂ
ಗನವದ್ಯಸಾಮ ಶಿಲ್ಪಗಥರ್ವಣಂ
ವಿನುತ ವಿಶ್ವಜ್ಞನಿಂ । ಗನವರತ ಮಾಪ್ರಣವ
ವೆನಿಪ ಶಾಖೆಯದಾಯ್ತು ತರುವಿದರೊಳು ||೬೫||

ವರಪಂಚಶಾಖೆಗಳ । ಲಿರುವುವನುಶಾಖೆಗಳು
ಪರಿಗಣಿಸಲಹುದೆ ಶಾಖಾಭೇದಮಂ
ಉರುಶಾಖೆಯನು ಭೇದ । ಮಿರುವುದೈ ಋಷಿಗಣಕು
ಮರಿವುದೈ ಸುವ್ರತ ಮಹೀಪಾಲನೇ ||೬೬||

★

೫

ಶಿಲ್ಪಿ ಬ್ರಾಹ್ಮಣರ ಕೂಟಸ್ಥ

● ವಡ್ಡೆಪಾಟಿ ನಿರಂಜನಶಾಸ್ತ್ರಿ

ಸಕಲ ಭುವನ-ಬ್ರಹ್ಮಾಂಡಗಳು, ಜೀವಜಂತುಜಾಲಗಳು ಯಾವ ವಿಶ್ವಕರ್ಮನ ಸೃಷ್ಟಿಯಾಗಿದ್ದು ಆ ಪರಮೇಶ್ವರನು ಶಿಲ್ಪಿಗಳಿಗೆ ಮಾತ್ರವೇ ಹೇಗೆ ಕೂಟಸ್ಥನಾಗಿರುವನು ಎಂಬುದನ್ನು ಪರಿಶೀಲಿಸೋಣ.

ಪೂರ್ವೋಕ್ತ "ಯ ಇಮಾ ವಿಶ್ವಾ ಭುವನಾನಿ" ಎಂದು ಪ್ರಾರಂಭವಾಗುವ ವಿಶ್ವಕರ್ಮಸೂಕ್ತದ ಪಠಣ ಪ್ರಯೋಜನವನ್ನು ವಿವರಿಸುತ್ತಾ ವಿದ್ಯಾರಣ್ಯ ಚರಣರು ಇಂತು ವಿವರಿಸಿದ್ದಾರೆ:

ಇಂದ್ರೋ ವೃತ್ರಂ ಮಹಂತಂ ವಜ್ರೇಣ ಪ್ರದ್ರುತವಾನ್ ತಥಾ ವಜ್ರ ಪ್ರದ್ರುತಃ ಅಸುರ ಮಾಯಯಾ ಸಹ ಷೋಡಶ ಪ್ರಕಾರಾಣಿ ಶರೀರಾಣಿ ಸ್ವೀಚಕಾರ। ಸ್ವೀಕೃತ್ಯಚ ಶಬ್ದಾಭೀಧೇಯೈಸ್ಸೈಸ್ಸರ್ವಕಾರಣ ಶರೀರೈಸ್ತಮಿಂದ್ರಂ ಹಸ್ತಪಾದಾದ್ಯವಯವೇಷು ಬಬಂಧ। ತದಾನೀಂ ಸ ಇಂದ್ರಃ ಏನಾಂ ವಿಚಾರ್ಯ ಅನೀಕೇನಸೈನ್ಯೇನಯುಕ್ತಾಯಾಗ್ನಯೇ ಏತಾವಗ್ನಿಸ್ತಿಗ್ಮೇನೇತಿ ಮಂತ್ರ ದ್ವಯೇನ ಸಾಧ್ಯಮಾಹುತಿಂ ದೃಷ್ಟ್ವಾಹುತವಾನ್। ತತಸ್ಸೋಽಗ್ನಿಸ್ತೃಪ್ತೋ ವೃತ್ರಸ್ಯ ಷೋಡಶ ಸರ್ವಾಕಾರಣಿ ಶರೀರಾಣ್ಯಾಹರತ್। ತತ ಊರ್ಧ್ವಂ ಯ ಇಮಾ ವಿಶ್ವೇತಿ ಸೂಕ್ತದ್ವಯಾ ಸಾಧ್ಯೇನ ವೈಶ್ವಕರ್ಮಣ ಹೋಮೇನ ವೃತ್ರವಧ ಜನ್ಯಾತ್ ಪಾಪ್ಮನೋ ನಿರ್ಮುಕ್ತಃ ಕಿಮ ಯಂ ವೈಶ್ವಕರ್ಮಣ ಹೋಮಃ ಪ್ರತಿ ಮಂತ್ರಂ ಪೃಥಕ್ಕಾರ್ಯಃ ಕಿಂವಾ ಸೂಕ್ತದ್ವಯಂ ಸಮುಚ್ಚಾರ್ಯ ಆಪೋಸ್ವಿ ದೇಕೈಕ ಮುಚ್ಚಾರ್ಯಾನುಷ್ಠೇಯಃ? ಇತಿ ತತ್ರಾಪ್ಯಪಕ್ಷದ್ವಯಂ ಶಾಖಾಂತರಗತ

ತ್ವೇನಾಂಗಿ ಕರೋತಿ। ಯಂ ಕಾಮಯೇತಚಿರಂ ಪಾಪ್ಮನೋನಿರ್ಮುಚ್ಯೇತ್....
ಏಕೈಕ ಹೋಮೇನ ಶನೈಶ್ಯನೈಃ ಪಾಪನಿರ್ಮುಕ್ತೋಭವತಿ ಸರ್ವಾನುಚ್ಚಾರ್ಯೈಕ ಹೋಮೇನತು ತದಾನೀಮೇವ ಪಾಪನಿರ್ಮೋಕಃ ಪೃಥಕ್ಸೂಕ್ತದ್ವಯೇಪಿ ಸಾಮರ್ಥ್ಯಂ ಪೃಥಕ್ಸಂಪಾದಿತಂ ಭವತಿ। ಅಪಿಚ ಸೂಕ್ತ ದ್ವಿತ್ವಂ ಯಜಮಾನಸ್ಯ ಪ್ರತಿಷ್ಠಾಯ್ಯೆ ಸಂಪದ್ಯತೇ ತಸ್ಮಾದಯಮೇವ ಪಕ್ಷಶ್ರೈಯನಿತ್ಯರ್ಥಃ।

ಇಂದ್ರನು ವೃತ್ರನನ್ನು ಕೊಂದ. ಇಂದ್ರವಜ್ರದಿಂದ ಕೊಲ್ಲಲ್ಪಟ್ಟ ವೃತ್ರಾಸುರನು ಮಾಯೆಯಿಂದ ಹದಿನಾರು ವಿಧವಾದ ಶರೀರಗಳನ್ನು ಧರಿಸಿ ಇಂದ್ರನ ಹಸ್ತಪಾದಾದಿ ಅವಯವಗಳನ್ನು ಬಂಧಿಸಿದ. ಆಗ ಇಂದ್ರನು ಪರಿಸ್ಥಿತಿ ಯನ್ನು ಪರಿಶೀಲಿಸಿ **ಅಗ್ನಿಸ್ತಿಗ್ಮೇನ** ಎಂಬ ಮಂತ್ರದ್ವಯವನ್ನು ಆಹುತಿಗಳಾಗಿ ಅಗ್ನಿಹೋತೃವಿಗೆ ಅರ್ಪಿಸಿದ. ಇದರಿಂದ ಆ ಅಗ್ನಿಯು ಸಂತೋಷಗೊಂಡು ಸರ್ಪಾಕಾರದಲ್ಲಿದ್ದ ವೃತ್ರನ ಹದಿನಾರು ಶರೀರಗಳನ್ನು ತೊಲಗಿಸಿದನು. ತದನಂತರ **ಯ ಇಮಾ ವಿಶ್ವಾ** ಎಂಬ ಸೂಕ್ತದ್ವಯದಿಂದ ನಡೆಸಿದ ವೈಶ್ವ ಕರ್ಮಣ ಹೋಮದಿಂದ ವೃತ್ರ ವಧೆಯಿಂದ ಸೊಂಕಿದ್ದ ಪಾಪದಿಂದ ಮುಕ್ತ ನಾದನು ಈ ವೈಶ್ವಕರ್ಮಣ ಹೋಮವು ಪ್ರತಿ ಮಂತ್ರಕ್ಕೂ ಬೇರೆಬೇರೆಯಾಗಿ ಮಾಡಬೇಕಾಗಿದೆಯೇ ? ಅಥವಾ ಸೂಕ್ತದ್ವಯವನ್ನು ಪಠಿಸಿ ಒಂದೊಂದು ಬಾರಿ ಅನುಷ್ಠಿಸಬೇಕೇ ? ಎಂಬ ಪ್ರಶ್ನೆಗೆ ಇಲ್ಲಿ ಮೊದಲ ಪಕ್ಷದ್ವಯವು ಶಾಖಾಂತರಗತವಾದುದರಿಂದ ಅಂಗೀಕಾರಾರ್ಹವಾಗುತ್ತದೆ. ಬಹುಕಾಲದ ಪಾಪ ಸಂಗ್ರಹವನ್ನು ಕರಗಿಸುವಂತಹ ಪದ್ಧತಿಯಾವುದು ಎಂಬುದನ್ನು ನಾವು ಪರಿಶೀಲಿಸದೆ ನಿರ್ವಾಹವಿಲ್ಲ.

ಒಂದೊಂದು ಹೋಮದಿಂದಲೂ ಮೆಲ್ಲಮೆಲ್ಲನೆ ಯಜಮಾನ ಪಾಪ ವಿನಿರ್ಮುಕ್ತನಾಗುತ್ತಾನೆ. ಎಲ್ಲಾ ಮಂತ್ರಗಳನ್ನು ಹೇಳಿದರು ಒಂದು ಹೋಮವನ್ನು ಮಾಡಿದಾಗಲೇ ಪಾಪ ವಿನಿರ್ಮುಕ್ತನಾಗುತ್ತಾನೆ. ಬೇರೆಬೇರೆ ಯಾಗಿ ಸೂಕ್ತ ದ್ವಯದಿಂದ ಸಮರ್ಥಿಸಲ್ಪಟ್ಟು ಬೇರೆಬೇರೆಯಾಗಿ ಸಂಪಾದಿ ಸಲ್ಪಡುತ್ತದೆ. ಆದರೂ ಎರಡೂ ಸೂಕ್ತಗಳು ಯಜಮಾನನ ಪ್ರತಿಷ್ಠೆಗಾಗಿಯೇ ಸಂಪಾದಿಸಲ್ಪಟ್ಟವು. ಆದ್ದರಿಂದ ಈ ಎರಡೂ ಸೂಕ್ತಗಳನ್ನು ಪಠಿಸಿ, ಹೋಮವನ್ನು ಮಾಡುವ ಪದ್ಧತಿಯೇ ಶ್ರೇಯಸ್ಕರವಾದುದು.

—ಎಂದು ಹೇಳಲಾಗಿರುವುದರಿಂದ ಸೃಷ್ಟಿ ಕರ್ತೃತ್ವವನ್ನು ತಿಳಿಸುವ

ವಿಶ್ವಕರ್ಮ ಎಂಬ ಹೆಸರಿನಲ್ಲಿಯೇ ಪರಾತ್ಪರತ್ವವು ಪ್ರತಿಪಾದಿಸುವುದರೊಂದಿಗೆ ಆ ನಾಮ ಸ್ಮರಣ ಮಾತ್ರದಿಂದಲೇ ಬ್ರಹ್ಮಹತ್ಯಾದಿ ಸಮಸ್ತ ಪಾಪಗಳೂ ನಶಿಸಿ ಹೋಗುತ್ತವೆಯೆಂದು ತಿಳಿದು ಬರುತ್ತದೆ. ಭಗವನ್ನಾಮ ಸ್ಮರಣೆಯಿಂದ ಪಾಪಕ್ಷಯವು ನಡೆಯುತ್ತದೆ ಎಂಬುದು ಉತ್ಪ್ರೇಕ್ಷೆಯೇನು ಅಲ್ಲ. ಆದರೆ ಸೂಕ್ತಪಠನದಿಂದ ಇಂದ್ರನು ತನ್ನ ಪಾಪವನ್ನು ದೂರೀಕರಿಸಿದನು ಎಂಬುದನ್ನು ಪರಿಶೀಲಿಸಬೇಕಾಗಿದೆ. ಇಂದ್ರನು ತ್ವಷ್ಟೃವಿನ ಪುತ್ರನಾದ ವಿಶ್ವರೂಪಾಚಾರ್ಯನನ್ನು ಕೊಂದು ಗುರುಹತ್ಯಾ ದೋಷವನ್ನು ಮಡಿಲಲ್ಲಿ ಕಟ್ಟಿಕೊಂಡು, ತ್ವಷ್ಟೃವು ಇಂದ್ರನ ಹತ್ಯೆಗಾಗಿ ವೃತ್ರನನ್ನು ಸೃಷ್ಟಿಸಿ ಕಳುಹಿಸಿದಾಗ ವಿಶ್ವಕರ್ಮನ ಅನುಗ್ರಹದಿಂದ ಲಭಿಸಿದ ವಜ್ರಾಯುಧದಿಂದ ವೃತ್ರನ ಶಿರಶ್ಛೇದನ ಮಾಡಿದನೆಂದು ಹಲವು ಶ್ರುತಿಗಳು ಹೇಳುತ್ತವೆ. ಆ ವೃತ್ರನ ಶಿರಶ್ಛೇದನದ ಪಾಪ ಬಾಧೆಯನ್ನು ಇಂದ್ರನು ವೈಶ್ವಕರ್ಮಣ ಹೋಮವನ್ನು ಆಚರಿಸಿ ಕಳೆದುಕೊಂಡ. ಬ್ರಹ್ಮಹತ್ಯಾ ದೋಷವು ವಿಶ್ವಕರ್ಮ ಸಂಬಂಧಿ ಹೋಮದಿಂದ ಹೇಗೆ ಕಳೆಯಿತು ಎಂಬ ಸಂಶಯಕ್ಕೆ ನಾವು ಉತ್ತರ ತಿಳಿಯಬೇಕು.

ವಿಶ್ವಕರ್ಮನು ಜಗದೀಶ್ವರನಾದರೂ, ಸರ್ವಜಗತ್ತುಗಳ ಸೃಷ್ಟಿಕರ್ತನಾದರೂ ತನ್ನ ತೇಜದ ಪ್ರತಿಬಿಂಬ ಮೂರ್ತಿಯನ್ನು ಲೋಕ ಸರ್ಜನಾ ಕುಶಲಿಯನ್ನು, ತ್ವಷ್ಟೃನಾಮದಿಂದ ಪ್ರತ್ಯೇಕ ಪುತ್ರರೂಪದಲ್ಲಿ ವ್ಯಕ್ತಪಡಿಸಿದನು. ಆದ್ದರಿಂದಲೇ **ವಿಶ್ವಕರ್ಮಣ ಸ್ಸಮವರ್ತತಾಧಿ ತಸ್ಯ ತ್ವಷ್ಟಾ ವಿದಧದ್ರೂಪಮೇತಿ** ಎಂಬ ಯಜುರಾರಣ್ಯಕ ವಚನದಿಂದ ಜಗತ್ಕರ್ತನಾದ ವಿಶ್ವಕರ್ಮನಿಂದ ಸಮಸ್ತ ಪ್ರಪಂಚವೂ ಉಂಟಾಯಿತು. ಆ ವಿರಾಡ್ರೂಪ ಪಡೆಯಲು ತ್ವಷ್ಟೃ ಕಾರ್ಯಶೀಲನಾಗಿದ್ದಾನೆ ಎಂದು ತಿಳಿದು ಬರುತ್ತದೆ. ಪರಮೇಶ್ವರನಾದ ವಿಶ್ವಕರ್ಮ ಸಂತಾನೋತ್ಪತ್ತಿಗೆ ಕಾರಣನಾದುದರಿಂದ ಪ್ರಜಾಪತಿತ್ವವನ್ನು, ಋಷಿತ್ವವನ್ನು ಧರಿಸಿ ಬೆಳಗುತ್ತಿರುವುದು. ವಿಶ್ವಕರ್ಮ ತೇಜಸ್ಸಂಭೂತನಾದ ತ್ವಷ್ಟೃವು ಅಪರ ಬ್ರಹ್ಮನಾಗಿ ವಿಶ್ವರೂಪನೆಂಬ ಪ್ರಥಮ ಪುತ್ರನನ್ನು, ವಿಶ್ವಕರ್ಮನೆಂಬ ಎರಡನೆಯ ಪುತ್ರನನ್ನು ಪಡೆದನೆಂದು ವೇದ ಪುರಾಣಗಳಲ್ಲಿ ಉಕ್ತವಾಗಿವೆ. ಈ ತ್ವಷ್ಟೃ, ವಿಶ್ವಕರ್ಮ, ವಿಶ್ವರೂಪಾದಿಗಳು ಕೇವಲ ದೇವತೆಗಳಾಗಿಯೇ ಅಲ್ಲದೆ ಮರ್ತ್ಯರಾಗಿ, ಬ್ರಾಹ್ಮಣ ವಾಚ್ಯರಾಗಿ ಅವತರಿಸಿ

ದ್ದಂತೆ ಹಲವಾರು ಶ್ರುತಿ ಪುರಾಣ ವಚನಗಳು ಲಭಿಸುತ್ತವೆ. ತ್ವಷ್ಟೃ ಪ್ರಜಾಪತಿಯು ತನ್ನ ಕುಮಾರನಾದ ವಿಶ್ವರೂಪಾಚಾರ್ಯನನ್ನು ಕೊಂದ ಕಾರಣಕ್ಕಾಗಿ ಇಂದ್ರನನ್ನು ವಧೆಮಾಡಲೆಂಬ ಉದ್ದೇಶದಿಂದ ವೃತ್ರನನ್ನು ಸೃಷ್ಟಿಸಿದ್ದು, ಆ ವೃತ್ರನನ್ನು ವಧಿಸಲು ಇಂದ್ರನು ಪ್ರಾರ್ಥಿಸಿದಾಗ ವಜ್ರಾಯುಧವನ್ನು ಹದ ಮಾಡಿಕೊಟ್ಟು ಇಂದ್ರನ ಮೂಲಕ ವೃತ್ರ ಸಂಹಾರ ನಡೆಸಿದ್ದೂ, ಆ ವೃತ್ರನ ಹತ್ಯೆಯ ಪಾಪವನ್ನು ಇಂದ್ರನು ವಿಶ್ವಕರ್ಮ ಪರಮೇಶ್ವರನ ಧ್ಯಾನದಿಂದ ಕಳೆದುಕೊಂಡಿದ್ದೂ ಗಮನಿಸಿದರೆ ವಿಶ್ವಕರ್ಮ ಪರಮೇಶ್ವರನಿಂದ ಪರಂಪರಾನುಗತವಾಗಿ ತ್ವಷ್ಟೃ, ವಿಶ್ವರೂಪ, ವಿಶ್ವಕರ್ಮಾ ಮುಂತಾದ ಶಿಲ್ಪಕಲಾಕೋವಿದ ಬ್ರಾಹ್ಮಣ ವಂಶ ಕೂಟಸ್ಥರುಂಟಾದರು ಎಂಬುದು ಸ್ಪಷ್ಟವಾಗುತ್ತದೆ. ಇದು ನಾರಾಯಣನ ನಾಭಿಕಮಲದಿಂದ ಬ್ರಹ್ಮನು, ಮನದಿಂದ ಮನ್ಮಥನು ಜನ್ಮಸಿದರೆಂಬ ಪುರಾಣವಚನಗಳಿಗಿಂತ ಬಲವತ್ತರವಾದುದು. ವಿಶ್ವ ಸೃಷ್ಟಿ ಕ್ರಿಯಾ ಪ್ರವರ್ಧನಾಪೇಕ್ಷೆಯಿಂದ ವಿಶ್ವಕರ್ಮ ಮಹರ್ಷಿ ಲೋಕ ಕ್ರಿಯಾ ಧುರೀಣರಾದ ಹಲವಾರು ವಿಶ್ವಕರ್ಮ ಋಷಿಗಳನ್ನು ಸೃಷ್ಟಿಸಿದಂತೆ ಪೂರ್ವೋದಾಹೃತ ಯಜುರ್ಮಂತ್ರದಲ್ಲಿಯ **ತಆಯುಜಂತದ್ರವಣಗ್ಂ ಸಮಸ್ಮಾ ಋಷಯಃ ಪೂರ್ವೇಜರಿತಾರೋ ನಭೂನಾ** ವಾಕ್ಯದಿಂದ ಸ್ಪಷ್ಟವಾಗುತ್ತದೆ. ಈ ವಿಶ್ವಕರ್ಮ ಪರಂಪರೆಯು ವ್ಯಾಪಕವಾಗಿ ಹರಡಿಕೊಂಡಿರುವುದನ್ನು ವೇದ ಸಾಹಿತ್ಯ ಪರಿಶೀಲಿಸಿದ ಯಾರಾದರೂ ಗುರುತಿಸಬಲ್ಲರು.

'ವಿಶ್ವಕರ್ಮ ಬ್ರಾಹ್ಮಣ ವಂಶಾಗಮಮು' ಕೃತಿಯಿಂದ ಆಯ್ದು ಅನುವಾದಿಸಿದವರು :

ವಿದ್ವಾನ್ ತಾಡಿಚರ್ಲ ವೀರರಾಘವಶರ್ಮ

ಶ್ರೀ ಸಾವಿತ್ರೀ ಪೀಠಾಧ್ಯಕ್ಷ, ಪೇರೂರು ಬ್ರಹ್ಮರಥಾರೂಢ

ಶ್ರೀ ಕನುಪರ್ತಿ ಬಸವಾಚಾರ್ಯ ಸ್ವಾಮಿ

ಇದೇ ವಿಷಯಿಕವಾದ ಅನುಮಾನವು ವೆಂಕಟಕೃಷ್ಣ ದೀಕ್ಷಿತರಿಗೆ ಬಂದ ಸಂಗತಿಯ ಉಲ್ಲೇಖ 'ರಥಕಾರಾಧಿಕರಣಂ' (ಪ್ರಕರಣ ೧೭) ಕೃತಿಯಲ್ಲಿ ದೊರೆಯುತ್ತದೆ. ದೀಕ್ಷಿತರ ಪ್ರಶ್ನೆ: "ಪರಮೇಶ್ವರನನ್ನು ವಿಶ್ವಕರ್ಮ ಶಬ್ದದಿಂದ ಪ್ರತಿಪಾದಿಸಲಾಗಿದೆ. ಎಂದರೆ ವಿಶ್ವಕರ್ಮನೇ ಪರಮೇಶ್ವರ ಎಂದು ಹೇಳಿದಂತಾಯಿತು. ಇದರಿಂದ ಎಲ್ಲಾ ವಂಶಗಳಿಗೆ ಬ್ರಹ್ಮನೇ ಕರ್ತೃವೆಂದು ಸ್ಪಷ್ಟವಾಗಿ

ತಿಳಿಯುತ್ತದೆ. ಸರ್ವಶಬ್ದವಾಚ್ಯನು ಪರಮೇಶ್ವರನಾದ್ದರಿಂದ ವಿಶ್ವಕರ್ಮ ಶಬ್ದ ವಾಚ್ಯನಾದರೂ ಪರಮೇಶ್ವರನೇ. ಆದ್ದರಿಂದಲೇ ವಿದ್ಯಾರಣ್ಯರು ವಿಶ್ವಕರ್ಮ ಶಬ್ದ ವಾಚ್ಯನು ಪರಬ್ರಹ್ಮನೆಂದು ಹೇಳಿದರು. ಇಂತಿರುವಾಗ ರಥಕಾರರೇ ವಿಶ್ವಕರ್ಮನ ವಂಶಜರೆಂದು ಹೇಗೆ ನಿರ್ಣಯಿಸಲು ಸಾಧ್ಯ?"

ಈ ಸಂಶಯಕ್ಕೆ ಕಸುಪರ್ತಿ ಬಸವಾಚಾರ್ಯ ಸ್ವಾಮಿಗಳು ನೀಡಿದ ಉತ್ತರ: ಈ ರೀತಿಯ ಶಂಕೆಗೆ ಅವಕಾಶವೇ ಇಲ್ಲ. ಏಕೆಂದರೆ ಆಶ್ವಲಾಯನ ಸರ್ವಾನುಕ್ರಮಣಿಕೆಯಲ್ಲೂ, ಭಾರತ, ಭಾಗವತ, ವಿಷ್ಣು, ಸ್ಕಾಂದಾದಿಪುರಾಣ ಗಳಲ್ಲೂ ವಿಶ್ವಕರ್ಮನು ಬ್ರಹ್ಮಾದಿ ದೇವತೆಗಳಿಂದ ಸ್ತುತ್ಯನಾದ ದೇವನಾಗಿದ್ದು ಋಷಿಜನ್ಯನೆಂದು ಪ್ರತಿಪಾದಿಸಲಾಗಿದೆ. ಆ ವಿಶ್ವಕರ್ಮನೇ ರಥಕಾರರ ವಂಶಕ್ಕೆ ಜನಕನಾದ್ದರಿಂದ ಅವನಿಗೇ ರಥಕಾರ ವಂಶದ ಕರ್ತೃತ್ವವು ಸಂಕ್ರಮಿಸುವು ದೆಂದು ಹಲವು ಪ್ರಮಾಣಗಳು ಹೇಳುತ್ತವೆ. ಆಶ್ವಲಾಯನ ಸರ್ವಾನುಕ್ರಮ ಣಿಕೆಯ ವ್ಯಾಖ್ಯೆಯಾದ ಷಡ್ಗುರು ಭಾಷ್ಯದ ತೃತೀಯಾಧ್ಯಾಯದಲ್ಲಿ **ಯ ಇಮಾ ವಿಶ್ವಾ ವಿಶ್ವಕರ್ಮಾ ಭೌವನೋ ವೈಶ್ವಕರ್ಮಾಣಂತ್ವಿತಿ** ಎಂಬ ಮಂತ್ರಗಳು ತ್ರಿಷ್ಟುಪ್ ಛಂದದಲ್ಲಿದ್ದು, ಪೃಥಿವ್ಯಾದಿ ಪಂಚಭೂತಗಳನ್ನು ಉತ್ಪನ್ನ ಮಾಡಿದಂತಹವನು, ಯಜ್ಞಕರ್ತನಾದಂತಹವನು, ಸರ್ವಸಾಕ್ಷಿ ಯಾದಂತಹ ದೇವನೂ ಆದ ವಿಶ್ವಕರ್ಮ ದೈವತ್ವವನ್ನು ಪಡೆದಿದ್ದು, ಭೌವನ ವಿಶ್ವಕರ್ಮ ಋಷಿಯನ್ನು ದ್ರಷ್ಟಾರನ್ನಾಗಿ ಪಡೆದಿದೆ. ಈ ಬ್ರಹ್ಮರ್ಷಿಯು ಭುವನ ಋಷಿಯ ಪುತ್ರನು ಎಂದು ವಿವರಿಸಿ ಅಷ್ಟಮಾಧ್ಯಾಯದಲ್ಲಿ **ಇಮಾನುಕಂ ಭುವನಂ ಆಪ್ತ್ಯಸ್ಸಾಧನೋ ವೈಶ್ವದೇವಂ ದ್ವೈಪದಂ ತ್ರೈಷ್ಟುಭಂ** ಎಂಬ ಮಂತ್ರಕ್ಕೆ ವಿಶ್ವೇದೇವ ದೈವತ್ವವು. ದ್ವಿಪದಾತ್ಮಕ ವಿರಾಟ್‌ಛಂದವೆಂದು ಹೇಳಲಾಗಿದೆ. ಇಲ್ಲಿ ಭುವನನು ಆಪ್ತ್ಯಪುತ್ರನೆಂದು ಆತನಿಗೆ ಸಾಧನ ಭೌವನ ನೆಂಬ ಋಷಿಪುತ್ರನಿದ್ದು ಆತನೂ ಮಂತ್ರದ್ರಷ್ಟಾರನೆಂದು ತಿಳಿದುಬರುತ್ತದೆ. ಸರ್ವಾನುಕ್ರಮಣಿಕೆಯ ಕರ್ತೃ **ಕ್ವಚಿತ್ಕಥಂಚಿತ್** ಎಂಬ ಸೂತ್ರವನ್ನು ದಾಹರಿಸಿದ್ದಾನೆ. ಇದರ ಅರ್ಥ-ಮೊದಲಾಗಲಿ, ನಂತರವಲ್ಲಾಗಲಿ, ಕಥಾರೂಪ ದಲ್ಲಾಗಲಿ ಇಂತಹ ಗೋತ್ರದವನೆಂದು ಹೇಳಲ್ಪಡದೆ ಇದ್ದರೆ ಪುರುಮೀಳಾದಿ ರಾಜರ್ಷಿಗಳಲ್ಲದ ಊರ್ವಶಿ ಮುಂತಾದ ಸ್ತ್ರೀಯರಲ್ಲದ ಬ್ರಹ್ಮರ್ಷಿಯು ಅನುಕ್ತ ಗೋತ್ರಕಾರನಾದರೆ ಆತನನ್ನು ಅಂಗಿರಸ ಪುತ್ರನೆಂದು ಅರಿಯಬೇಕು. ಈ

ರೀತಿಯವನ ಗೋತ್ರವು ಆಂಗಿರಸಗೋತ್ರವೇ ಎಂದು ತಿಳಿಯಬೇಕು. ಸರ್ವಾನುಕ್ರಮಣಿಕೆಯಿಂದ ಈ ವಿಷಯ ತಿಳಿಯುತ್ತದೆ. ಕಥಾಸಾಹಿತ್ಯದಲ್ಲಿ ಆತನ ಗೋತ್ರವು ಉಕ್ತವಾಗಿದ್ದರೆ ಅದೇ ಆತನ ಗೋತ್ರವಾಗುತ್ತದೆಂಬೋ ಹೊರತು ಬೇರೆಯಾಗದು. ಉದಾರಹಣೆಗೆ ವೃಷಭಸ್ತನಿಗೆ ಗೋತ್ರವನ್ನು ಹೇಳದಿದ್ದರೂ **ವೃಷಭಸ್ತೋ ವೈಶ್ವಾಮಿತ್ರಾ** ಎಂಬುದರಿಂದ ವೃಷಭಸ್ತನಿಗೆ ವಿಶ್ವಾಮಿತ್ರ ಗೋತ್ರವು ಕಥೆಗಳಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಆತನಿಗೆ ವಿಶ್ವಾಮಿತ್ರ ಗೋತ್ರವೇ ಲಭಿಸುವುದು ಆಂಗಿರಸಗೋತ್ರವಲ್ಲ. ಅನುಕ್ತ ಗೋತ್ರತ್ವದಲ್ಲಿ ನಾರಾಯಣಗೋತ್ರತ್ವವಿಲ್ಲವಾದ್ದರಿಂದ ಉಪಲಬ್ಧವಾಗದಿದ್ದ ಗೋತ್ರವುಳ್ಳವನು ನಾರಾಯಣಗೋತ್ರವುಳ್ಳವನು ಎಂದು ಹೇಳಕೂಡದು. **ಮಹಿನೋ ಮಹಂತಾಂ** ಎಂಬ ಸ್ಥಳದಲ್ಲಿ ಅಪ್ತಿಯಪುತ್ರ ಅಷ್ಟಾದಶ ತ್ರಿತನೆಂಬ ಹೆಸರುಳ್ಳವನು. ಆದರೆ ಚಂದ್ರನು ಆಪ್ತಿಪುತ್ರನೆಂದು ಹೇಳಕೂಡದು. ಎಂದರೆ ಅಪ್ತಿಗೆ ಚಂದ್ರನೆಂಬ ಪುತ್ರನು ಇಲ್ಲವೆಂದು ಅರ್ಥ. ಆದರೆ **ಏಕೋನಾಪ್ತ್ಯಸ್ತಿ ತೋದಾ** ಎಂಬಲ್ಲಿ ತ್ರಿತನು ಅಪ್ತಿಪುತ್ರನೆಂದು ಪ್ರಸಿದ್ಧವಾಗಿದೆ. ಆಪ್ತ್ಯ ಎಂಬ ವಚನವು ಸ್ಪಷ್ಟೀಕರಣಾರ್ಥವಾಗಿದೆ. ಇಂತು ವಿಶ್ವಕರ್ಮನು ಅಮರನಲ್ಲದ ಭುವನ ಮಹರ್ಷಿಯ ಪುತ್ರನೆಂದು ಉಕ್ತವಾಗಿರುವುದರಿಂದ ಆತನಿಗೆ ಅಂಗಿರಸ ಗೋತ್ರವು ಅವಿಕಲವಾದುದು.

ಋಗ್ವೇದದ ಐತರೇಯ ಬ್ರಾಹ್ಮಣ ಗ್ರಂಥದಲ್ಲಿ **ಏತೇನ ಹವಾ ಐಂದ್ರೇಣ ಮಹಾಭಿಷೇಕೇನ ಕಶ್ಯಪೋ ವಿಶ್ವಕರ್ಮಾಣಂ ಭೌವನಮ ಭಿಷಿಷೇಚಹ ತಸ್ಮಾದು ವಿಶ್ವಕರ್ಮ ಭೌವನಃ ಸಮಂತಂ ಸರ್ವತಃ ಪೃಥಿವೀಂ ಜಯನ್ ಪರಿಯಾಯಾಶ್ವೇನಚ ಮೇಧ್ಯೇನ ಚೇಜೆ** [ಕಶ್ಯಪ ಪ್ರಜಾಪತಿಯು ಭುವನಋಷಿಯ ಪುತ್ರನಾದ ವಿಶ್ವಕರ್ಮನಿಗೆ ಇಂದ್ರ ಸಂಬಂಧಿಯಾದ ಮಹಾಭಿಷೇಕವನ್ನು ಮಾಡಿದನು. ಆ ಸಾಮ್ರಾಜ್ಯಾಭಿಷೇಕದಿಂದ ಭುವನ ಪುತ್ರನಾದ ವಿಶ್ವಕರ್ಮನು ಚತುಃ ಸಮುದ್ರವಲಯಾಂಕಿತ ನಾಲ್ಕು ದಿಕ್ಕುಗಳನ್ನು ಜಯಿಸಿ ಪೃಥ್ವೀಪಾಲಕನಾದನು. ಅಶ್ವಮೇಧಯಾಗವನ್ನು ಮಾಡಿದನು.] ಎಂದು ಉಕ್ತವಾಗಿದೆ. ಈ ಭುವನಮಹರ್ಷಿಯ ಪುತ್ರನಾದ ವಿಶ್ವಕರ್ಮನು ರಥಕಾರ (ಶಿಲ್ಪಿ) ಎಂಬುದನ್ನು ಮಹಾಭಾರತ (ಉದ್ಯೋಗ್ಯ ಪರ್ವ, ಅಧ್ಯಾಯ ೫೯) ಹೀಗೆ ತಿಳಿಸುತ್ತದೆ: 'ಪಾಂಡವರು ಜೂಜಿನಲ್ಲಿ ಸರ್ವಸ

ವನ್ನೂ ಕಳೆದುಕೊಂಡರೆಂದು ನೀನು ಆನಂದಪಡುತ್ತಾ ಹೇಳುತ್ತೀ. ಆದರೆ ಅರ್ಜುನನ ರಥಕ್ಕೆ ಅಶ್ವಗಳು ಹೇಗುಂಟಾದವು? ಧ್ವಜ ಹೇಗೆ ಬಂತು?' ಎಂದು ದುರ್ಯೋಧನನು ಸಂಜಯನನ್ನು ಕೇಳಿದನು. ಸಂಜಯನು 'ಎಲೇ ಅರಸನೇ! ವಿಶ್ವಕರ್ಮ ತನ್ನ ಮನಸ್ಸಿನಲ್ಲಿ ಚಿತ್ರ ರೂಪವಾಗಿ ಕಲ್ಪಿಸಿದನು. ತ್ವಷ್ಟೃಪ್ರಜಾಪತಿಯೇ ಆ ಧ್ವಜದ ರೂಪಕಲ್ಪನೆ ನಡೆಸಿದ. ದೈವಯೋಗದಿಂದ ದೀನರು ಧನಿಕರಾಗುವುದು, ಲಘುವಾದವರು ಮಹತ್ತರವಾಗುವುದು ಸಾಧ್ಯತಾನೇ? ವಾಯು ಪುತ್ರನಾದ ಹನುಮಂತನು ಭೀಮಸೇನನ ಅನುಮತಿಯ ಪ್ರಕಾರ ತನ್ನ ರೂಪವನ್ನು ಆ ಧ್ವಜದಲ್ಲಿ ಆರೋಪಿಸಿದನು. ಆ ರಥವು ಒಂದು ಯೋಜನಾ ಪ್ರಮಾಣದಲ್ಲಿ ತಿರ್ಯಗೂರ್ಧ್ವ ದಿಶೆಗಳನ್ನು ಆವರಿಸುವಂತಹುದಾಗಿದ್ದು, ವೃಕ್ಷಗಳಿಂದ ಆವರಿಸಲ್ಪಟ್ಟಿದ್ದರೂ ಕಾಣಿಸುವಂತೆ ಇತ್ತು. ಇಂತಹ ವಿಚಿತ್ರವಾದ ಮಾಯಾರಥವನ್ನು ಭುವನ ಪುತ್ರನಾದ ವಿಶ್ವಕರ್ಮನು ನಿರ್ಮಿಸಿದನು. ಆಕಾಶದಲ್ಲಿ ಮೂಡಿ ಇಂತಹ ವರ್ಣವೆಂದು ನಿಷ್ಕರ್ಷವಾಗಿ ಗುರುತಿಸಲು ಸಾಧ್ಯವಿಲ್ಲದಂತಹ ಇಂದ್ರಧನುಸ್ಸಿನಂತೆಯೇ ರಥ ಧ್ವಜವನ್ನು ಕಲ್ಪಿಸಿದನು. ಅದು ಬಹುವಾಕಾರ ಪಡೆದಿದ್ದು, ಹೊಗೆಯು ಆಕಾಶದಲ್ಲಿ ವ್ಯಾಪಿಸಿ ಗಾಳಿಯಲ್ಲಿ ನಾನಾ ರೂಪಗಳನ್ನು ಪಡೆಯುವ ತೆರನಾಗಿ ಭುವನ ಪುತ್ರನು ಈ ಧ್ವಜವನ್ನು ನಿರ್ಮಿಸಿದನು. ಆ ರಥಕ್ಕೆ ಎಲ್ಲಿಯೂ ತಡೆ ಎಂಬುದೇ ಇಲ್ಲ, ಅತ್ಯಂತ ವೇಗವಾಗಿ ಪಯಣಿಸುವ ಶ್ವೇತಾಶ್ವಗಳು ಚಿತ್ರರಥನಿಂದ ಕೊಡಲ್ಪಟ್ಟು ಆ ರಥಕ್ಕೆ ಕಟ್ಟಲ್ಪಟ್ಟವು ... '

ಆದ್ದರಿಂದ ಭುವನಪುತ್ರನೆಂದು ಪ್ರತಿಪಾದಿತನಾದ ವಿಶ್ವಕರ್ಮನು ಋಷಿ ವಂಶಜನೆಂದು, ರಥಕಾರನೆಂದು ಸುಪ್ರಸಿದ್ಧವಾದುದು. ಆ ವಂಶಪರಂಪರೆಯವರು ರಥಕಾರರು. ಇವರೇ ಇಂದಿನ ವಿಶ್ವಬ್ರಾಹ್ಮರೆಂದು ಹೆಸರಾಗಿದ್ದಾರೆ.

'ರಥಕಾರಾಧಿಕರಣಮ್' ಕೃತಿಯಿಂದ ಆಯ್ದು ಅನುವಾದಿಸಿದವರು :

ವಿದ್ವಾನ್ ತಿಪ್ಪಣಾಚಾರ್ಯ ಬಾಳಾಚಾರ್ಯ ಪ್ರಭಾಕರ

★

ದರ್ಶನಾಚಾರ್ಯ, ಕಳಾಪ್ರಪೂರ್ಣ
● ಡಾ. ಕೊಂಡೂರು ವೀರರಾಘವಾಚಾರ್ಯ

೬

ವೇದ ವಾಙ್ಮಯದಲ್ಲಿ ಶಿಲ್ಪ ಪರಂಪರೆ

ಬ್ರಹ್ಮಾಂಡದ ಸೃಷ್ಟಿ ಆರಂಭವಾದಂದೇ ವಿಶ್ವಶಿಲ್ಪವು ಅಂಕುರಿಸಿತು. ಚಿತ್ರವಿಚಿತ್ರವೂ, ಮಹದುಪಯೋಗಕರವೂ, ಆನಂದ ಪ್ರದಾಯಕವು ಆದ ಪರಮೇಶ್ವರನ ಸೃಷ್ಟಿ ಶಿಲ್ಪವನ್ನು ಗಮನಿಸಿಯೇ ಲೌಕಿಕ ಶಿಲ್ಪವನ್ನು ಮಾನವನು ರೂಪಿಸಿ, ಬೆಳೆಸಿಕೊಂಡಿದ್ದಾನೆ. ಶಿಲ್ಪವೆಂದರೆ ಕೌಶಲ್ಯದೊಂದಿಗೆ ಮಿಳಿತವಾದ ಕರ್ಮವೆಂದು ಅರ್ಥ. ಇದೇ ಅರ್ಥದಲ್ಲಿಯೇ ವೇದವಾಙ್ಮಯದಲ್ಲಿ ಈ ಶಬ್ದವನ್ನು ಪ್ರಯೋಗಿಸಲಾಗಿದೆ. ಯಜುರ್ಬ್ರಾಹ್ಮಣದ (೨ : ೮ : ೨೫) ಈ ಮಂತ್ರಕ್ಕೆ ಸಾಯಣಾಚಾರ್ಯರು ಅರ್ಥ ಹೇಳುತ್ತಾ ಇಲ್ಲಿಯ 'ಶಿಲ್ಪ' ಶಬ್ದಕ್ಕೆ ಕರ್ಮ ಕೌಶಲ್ಯವೆಂದೇ ಭಾಷ್ಯ ನೀಡಿದ್ದಾರೆ—

ಯೇಭಿಶ್ಶಿಲ್ಪೈಃ ಪಪ್ರಥಾನಾ ಮದೃಗ್ಂಹತ್
ಯೇಭಿರ್ಧ್ಯ ಮಭ್ಯಪಿಗ್ಂಶತ್ಪ್ರಜಾಪತಿಃ ।
ಯೇಭಿರ್ವಾಚಂ ವಿಶ್ವರೂಪಾಗ್ಂ ಸಮವ್ಯಯತ್
ತೇನೇಮ ಮಗ್ನ ಇಹ ವರ್ಚಸಾ ಸಮಂಗ್ಧಿ ॥

[ಭಾಷ್ಯ :— ಪ್ರಜಾಪತಿಃ ಯೇಭಿ ಶ್ಶಿಲ್ಪೈಃ = ಕರ್ಮಕೌಶಲೈಃ]

ಅರಸನ ಪಟ್ಟಾಭಿಷೇಕದ ಕಾಲದಲ್ಲಿ ಈ ಮಂತ್ರವನ್ನು ಪಠಿಸುವುದು ಆಚಾರ. ಇದರ ಅರ್ಥ ಇಂತಿದೆ—

ವಿಶ್ವಕರ್ಮ ಪ್ರಜಾಪತಿಯ [**'ಪ್ರಜಾಪತಿರ್ವಿಶ್ವಕರ್ಮಾ'** ಎಂದು ಯಜುರಾರಣ್ಯಕದ ವಾಕ್ಯವಿದೆ] ಯಾವ ಕರ್ಮ ಕೌಶದಲ್ಯ ಫಲವಾಗಿ ಈ

ಭೂಮಿಯನ್ನು, ನದೀ- ನದ, ಸಮುದ್ರ, ಪರ್ವತ, ಅರಣ್ಯ ಮುಂತಾದುವನ್ನು ಸುಂದರವೂ ಸದೃಢವೂ ಆಗಿರುವಂತೆ ಮಾಡಿದನೋ, ಅಂತೆಯೇ ಅದೇ ಕೌಶಲ್ಯದಿಂದ ಬಾನಿನಲ್ಲಿ ಯಾವ ನಕ್ಷತ್ರ, ತಾರೆ, ಗ್ರಹಗಳನ್ನು ಸೃಷ್ಟಿಸಿದನೋ, ಯಾವ ಕರ್ಮ ಕೌಶಲ್ಯದಿಂದ ವಾಕ್ಕನ್ನು ಶಬ್ದಾಲಂಕಾರ ರಸ ಗುಣ ಶೋಭಿನಿಯನ್ನಾಗಿಸಿದನೋ, ಅಂತಹುದೇ ಕರ್ಮ ಕೌಶಲ್ಯದಿಂದ ಎಲೈ ಅಗ್ನೀ, ಈ ರಾಜನನ್ನು ವರ್ಚಸ್ವಿಯನ್ನಾಗಿ ಮಾಡು.

ಇದರ ತಾತ್ಪರ್ಯ ಶಿಲ್ಪದಿಂದ ರಾಜನು ಜನಮನೋಹರನಾಗಬೇಕೆಂಬ ಸದಾಶಯ.

ವೇದದಲ್ಲಿ ಶಿಲ್ಪವು ವಿಶ್ವಸೃಷ್ಟಿಯೊಂದಿಗೇ ಪ್ರಾರಂಭವಾಗುತ್ತದೆ. ವಿಶ್ವದ ಸೃಷ್ಟಿ ವಿಧಾನವನ್ನು ವರ್ಣಿಸುವ ಸೂಕ್ತಗಳನ್ನು ವಿಶ್ವೋತ್ಪತ್ತಿ ಸೂಕ್ತಗಳೆಂದು ವೇದವಿದರು ಹೆಸರಿಸುತ್ತಾರೆ. ಇಂತಹ ಸೂಕ್ತಗಳಲ್ಲಿ **ನಾಸದಾಸೀನ್ನೋ ಸದಾಸೀತ್** ಎಂದು ಆರಂಭವಾಗುವ 'ನಾಸದೀಯ ಸೂಕ್ತ'ವೆಂದು ಹೆಸರಾಗಿರುವ ಸೂಕ್ತ ಸರ್ವ ಪ್ರಥಮವಾಗಿ ಉಲ್ಲೇಖನಾರ್ಹವಾದುದು. ಈ ಸೂಕ್ತದದಲ್ಲಿ ಜಗತ್ತಿನ ಸೃಷ್ಟಿಗೂ ಮೊದಲು ಇದ್ದ ತತ್ತ್ವವು ಸತ್ ಆಗಲಿ ಅಸತ್ತಾಗಲಿ ಅಲ್ಲ, ಅದು **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹಾ** ಎನ್ನುವಂತೆ ಅವಾಙ್ಮನಸ ಗೋಚರವಾದುದೆಂದು ವಿವರಿಸುತ್ತದೆ. ಆ ತತ್ತ್ವದಿಂದಲೇ ಆಕಾಶಾದಿಗಳೂ, ಕ್ರಮವಾಗಿ ಪದಾರ್ಥ, ಜೀವ, ಆತ್ಮ ಮುಂತಾದವನ್ನು ಪಡೆದಿರುವ ವಿಶ್ವವು ಆವಿರ್ಭವಿಸಿದವು. ಪರಮಾದಿ ಜಗತ್ಕಾರಣ ತತ್ತ್ವವಾದ ಇದೇ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಮುಂತಾದ ಕರ್ಮಗಳಿಗೆ ಕಾರಣವಾದುದರಿಂದ ಇದನ್ನು ವೈದಿಕ ವಿಶ್ವೋತ್ಪತ್ತಿ ಸೂಕ್ತವೊಂದು 'ವಿಶ್ವಕರ್ಮ' ಎಂದು ವರ್ಣಿಸಿದೆ. ಈ ಸೂಕ್ತಕ್ಕೆ ವಿಶ್ವಕರ್ಮ ಸೂಕ್ತವೆಂದೇ ಹೆಸರಿದೆ. ಈ ವಿಶ್ವಕರ್ಮ ಸೂಕ್ತವು ಋಗ್ವೇದದ ದಶಮ ಮಂಡಲದಲ್ಲೂ, ಕೃಷ್ಣಾಯಜುರ್ವೇದದ ಚತುರ್ಥ ಕಾಂಡದಲ್ಲೂ ಇದೆ. ಋಗ್ವೇದೀಯ ವಿಶ್ವಕರ್ಮ ಸೂಕ್ತಕ್ಕಿಂತಲೂ ಯಜುರ್ವೇದೀಯ ವಿಶ್ವಕರ್ಮ ಸೂಕ್ತವು ಸ್ವಲ್ಪ ದೊಡ್ಡದು. ಈ ಎರಡಕ್ಕೂ ಸಾಯಣಾಚಾರ್ಯರು ವಿಸ್ತೃತವಾಗಿ

ಭಾಷ್ಯವನ್ನು ಬರೆದು ವಿಶ್ವಕರ್ಮನ ಪರಾತ್ಪರತ್ವವನ್ನೂ, ವಿಶ್ವಸೃಷ್ಟಿ ಕರ್ತೃತ್ವವನ್ನೂ ಸ್ಥಾಪಿಸಿದ್ದಾರೆ. ಆ ಸೂಕ್ತದ ಪ್ರಾರಂಭ ಇಂತಿದೆ—

ಯ ಇಮಾ ವಿಶ್ವಾ ಭುವನಾನಿ ಜುಹ್ವದ್
ಋಷಿರ್ಹೋತಾ ನಿಷಸಾದ ಪಿತಾನಃ ।
ಸ ಆಶಿಷಾ ದ್ರವಿಣ ಮಿಚ್ಛಮಾನಃ
ಪರಮಚ್ಛದೋ ವರ ಆ ವಿವೇಶ ॥
ವಿಶ್ವಕರ್ಮಾ ಮನಸಾ ಯದ್ವಿಹಾಯಾ
ಧಾತಾ ವಿಧಾತಾ ಪರಮೋತಾ ಸಂದೃಕ್

—ಇದು ಯಜುರ್ವೇದೀಯ ಸೂಕ್ತ. **ವಿಶ್ವ ವಿಷಯಾಣಿ ಸೃಷ್ಟಿ ಸ್ಥಿತಿ ಸಂಹಾರ ರೂಪಾಣಿ (ಕರ್ಮಾಣಿ) ಯಸ್ಯಾಸೌ ವಿಶ್ವಕರ್ಮಾ** ಎಂದು ಸಾಯಣಾಚಾರ್ಯರು ಈ ಸೃಷ್ಟಿಯಲ್ಲಿಯ ಸಮಸ್ತ ಕರ್ಮಗಳೂ ವಿಶ್ವಕರ್ಮನಲ್ಲಿಯೇ ನಿಹಿತವಾಗಿದೆಯೆಂದು ವೇದದ ಹೃದಯವನ್ನು ಬಿಚ್ಚಿ ಹರವಿದ್ದಾರೆ. ಈ ವಿಶ್ವಕರ್ಮನೇ ಆದಿ ಶಿಲ್ಪಿ; ವಿಶ್ವ ಶಿಲ್ಪಿ.

ಸೃಷ್ಟಿ ಕರ್ತನನ್ನು ಶಿಲ್ಪಿಯೊಂದಿಗೆ ಹೋಲಿಸಿರುವ ಇನ್ನೊಂದು ಋಗ್ವೇದೋಕ್ತ ಮಂತ್ರವನ್ನು ಕೇಳಿ—

ಬ್ರಹ್ಮಣಸ್ಪತಿ ರೇತಾ ಸಂ ಕರ್ಮಾರ ಇವಾಧಮತ್ ।
ದೇವಾನಾಂ ಪೂರ್ವ್ಯೇ ಯುಗೇಽಸತಸ್ಸದಜಾಯತ
(ಋಗ್ವೇದ ೧೦ : ೭೨ : ೨)

ಕರ್ಮಕಾರನು (ಶಿಲ್ಪಿಯು) ಅಗ್ಗಿಷ್ಟಿಕೆಯಲ್ಲಿ ಲೋಹಾದಿ ವಸ್ತುಗಳನ್ನು ಕಾಯಿಸಿ, ಬಡಿದು ನಿರ್ಮಿಸುವಂತೆಯೇ ಸೃಷ್ಟಿಕರ್ತನಾದ ಆ ಬ್ರಹ್ಮಣಸ್ಪತಿಯು ಈ ಜಗತ್ತುಗಳನ್ನು ಪ್ರಕೃತಿಯನ್ನು (ಪದಾರ್ಥಗಳನ್ನು) ನೋಟದಿಂದಲೇ (**ಸ ಈಕ್ಷತ ಲೋಕಾನ್ನು ಸೃಜಾ ಇತಿ**) ಸೃಷ್ಟಿಸಿದ. ಜಗತ್ತುಗಳ ಸೃಷ್ಟಿಕರ್ತೃವನ್ನು ವಿಶ್ವಕರ್ಮನೆಂದೇ ಹೆಸರಿಸುವುದು ವೇದಕ್ಕೆ ತುಂಬ ಇಷ್ಟವೆಂಬುದನ್ನು ತೋರಲು ಪುರುಷ ಸೂಕ್ತವೇ ಉದಾಹರಣೆ. ಪುರುಷನೆಂದರೆ ಇಲ್ಲಿಯ ಅರ್ಥ **ಪುರಿ** (=ಹೃದಯ ಗುಹೇ) **ಶಯನಾತ್ ಪುರುಷಃ** ಎಂದು.

ಆಚಾರ್ಯ ಶಂಕರರು ಸರ್ವಜೀವಿಗಳ ಹೃದಯಾಲಯಗಳಲ್ಲಿ ಜೀವ ರೂಪದಲ್ಲಿ ರುವುದರಿಂದ ಆ ಪರಮಾತ್ಮನಿಗೇ ಪುರುಷನೆಂಬ ನಾಮ ಸಂಕ್ರಮಿಸಿತು ಎಂದು ಹೇಳಿದ್ದಾರೆ. ಪರಮಾತ್ಮನೇ ಹೃದಯ ದೇಗುಲವನ್ನು ಹೊಕ್ಕನೆಂದು ಹೇಳಲು ವಿಶ್ವಕರ್ಮಸೂಕ್ತದ **ಸ ಆಶಿಷಾ ದ್ರವಿಣ ಮಿಚ್ಛಮಾನಃ ಪರಮಚ್ಛದವರ ಆ ವಿವೇಶ** ಎಂಬ ವಾಕ್ಯವೇ ಪ್ರಮಾಣ. ಆ ವಿವೇಶ ಎಂಬ ಪದವನ್ನು ಆಧಾರವನ್ನಾಗಿರಿಸಿಕೊಂಡೇ ಉಪನಿಷತ್ತುಗಳು ಅನುಪ್ರವೇಶ ತತ್ತ್ವವನ್ನು ವಿಸ್ತರಿಸಿದವು. ಇಂತು ಜಗತ್ಕಾರಣ ಶಬ್ದವನ್ನು ಪುರುಷ ಶಬ್ದ ದಿಂದ ಹೇಳುತ್ತಾ ಬಂದ ಪುರುಷಸೂಕ್ತವು ಆ ಪುರುಷನ ಸೃಷ್ಟಿಮಹಿಮೆಯನ್ನು ವರ್ಣಿಸಿ ವರ್ಣಿಸಿ ಕೊನೆಗೆ

ಅದ್ಭ್ಯಃ ಸ್ಸಂಭೂತಃ ಪೃಥಿವ್ಯೈ ರಸಾಚ್ಚ
ವಿಶ್ವಕರ್ಮಣ ಸ್ಸಮವರ್ತತಾಧಿ
ತಸ್ಯ ತ್ವಷ್ಟಾ ವಿದಧ ದ್ರೂಪ ಮೇತಿ
ತತ್ಪುರುಷಸ್ಯ ವಿಶ್ವ ಮಾಜಾನ ಮಗ್ರೇ

– ಎಂದು ನುಡಿದು ಜಗತ್ಕಾರಣನಾದವನಿಗೆ ವಿಶ್ವಕರ್ಮನೆಂಬ ನಾಮವೇ ವ್ಯವಹಾರ ಯೋಗ್ಯ, ಸಾರ್ಥಕವೆಂದು ವೇದವು ಭಾವಿಸಿರುವುದನ್ನು ಸ್ಪಷ್ಟ ಗೊಳಿಸಿದೆ. ಈ ವಿಶ್ವಕರ್ಮನೇ ಪ್ರಪ್ರಥಮ ಜಗತ್ ಶಿಲ್ಪಿ ಎಂಬುದು ವೇದವೇ ಇಂತು ನಿರ್ಣಯಿಸಿದೆ.

ಸಪ್ರಥಮ ಸ್ಸಂಕೃತಿರ್ವಿಶ್ವಕರ್ಮಾ ।
ಸಪ್ರಥಮೋ ಮಿತ್ರೋ ವರುಣೋಽಗ್ನಿಃ ।
ಸಪ್ರಥಮೋ ಬೃಹಸ್ಪತಿಶ್ಚಿಕಿತ್ವಾನ್ ॥

[ಭಾಷ್ಯ :—ಸಮೀಚೀನಾ ಕೃತಿಃ ನಿರ್ಮಾಣಂ ಯಾಸ್ಯಾಸೌ ಸಂಕೃತಿಃ]

ಯೋಗ್ಯ ನಿರ್ಮಾಣ ಶಕ್ತಿ ಇರುವವನು ಸಂಕೃತಿ ಎಂದರೆ ಶಿಲ್ಪಿ. ಅಂತಹ ಸಂಕೃತಿ(ಶಿಲ್ಪಿ)ಗಳಲ್ಲಿ ಮೊದಲಿಗ ವಿಶ್ವಕರ್ಮ. ಆ ವಿಶ್ವಕರ್ಮನ ನಂತರ ಉಲ್ಲೇಖಾರ್ಹರಾದ ಶಿಲ್ಪಿಗಳು ಮಿತ್ರ, ವರುಣ, ಅಗ್ನಿ, ಬೃಹಸ್ಪತಿ ಇತ್ಯಾದಿಗಳು. ಆದ್ದರಿಂದ ವೇದವೇ ವಿಶ್ವಕರ್ಮನನ್ನು ಆದಿ ಶಿಲ್ಪಿಯಾಗಿ

ಭುವನ ಶಿಲ್ಪಿಯಾಗಿ ಘೋಷಿಸಿದೆ. ಈ ವಿಶ್ವಕರ್ಮನು ಋಷಿಯಾಗಿ, ಪ್ರಜಾಪತಿಯಾಗಿ, ಶಿಲ್ಪಿ ಬ್ರಾಹ್ಮಣರ ಕೂಟಸ್ಥನಾಗಿ ಪರಿಪರಿವಿಧಗಳಲ್ಲಿ ಅವತರಿಸಿ ಶಿಲ್ಪಿವಂಶವನ್ನು ಶಿಲ್ಪಿ ಸಂಪ್ರದಾಯವನ್ನು ವಿಸ್ತರಿಸಿದನೆಂದು ವೇದಗಳಲ್ಲೂ, ಪುರಾಣಗಳಲ್ಲೂ ಹೇಳಲಾಗಿದೆ.

ವೇದ ವಾಙ್ಮಯದಲ್ಲಿ ಈ ವಿಶ್ವಕರ್ಮನ ನಂತರ ಉಲ್ಲೇಖಾರ್ಹ ಶಿಲ್ಪಿಯು ಪ್ರಜಾಪತಿ ತ್ವಷ್ಟೃ. ಈ ತ್ವಷ್ಟೃವು ವಿಶ್ವಕರ್ಮನ ಅವತಾರವೇ ಎಂದು ಈ ಮೊದಲೇ ಉದಾಹರಿಸಿರುವ **ವಿಶ್ವಕರ್ಮಣ ಸ್ಸಮವರ್ತತಾಧಿ ತಸ್ಯ ತ್ವಷ್ಟಾ ವಿದಧದ್ರೂಪ ಮೇತಿ** ಎಂಬ ಪುರುಷ ಸೂಕ್ತ ಮಂತ್ರವು ಹೇಳುತ್ತದೆ. ವಿಶ್ವಕರ್ಮನಿಗೆ ತ್ವಷ್ಟೃ ಒಬ್ಬನೇ ಅಲ್ಲದೆ ಮನು, ಮಯ, ಶಿಲ್ಪಿ, ಮತ್ತು ವಿಶ್ವಜ್ಞರೆಂಬ ಮತ್ತೂ ನಾಲ್ವರು ಸುತರುಂಟೆಂದು, ಈ ಐದು ಮಂದಿ ಪ್ರಪಂಚದಲ್ಲಿ ಕಬ್ಬಿಣ, ಮರ, ತಾಮ್ರ, ಶಿಲೆ ಮತ್ತು ಚಿನ್ನದ ಪಂಚ ಶಿಲ್ಪಗಳನ್ನು ರೂಪಿಸಿದರೆಂದು ಸ್ಕಾಂದ, ಬ್ರಹ್ಮಾಂಡ, ವಸಿಷ್ಠ ಪುರಾಣಾದಿಗಳು ಸಾರುತ್ತಿವೆ. ವಿಶ್ವಕರ್ಮನಿಗೆ ಸಾನಗ, ಸನಾತನ, ಅಹಭೂನ, ಪ್ರತ್ನ ಮತ್ತು ಸುಪರ್ಣರೆಂಬ ಪಂಚರ್ಷಿಗಳು ಮಾನಸ ಪುತ್ರರೆಂದು ಯಜುರ್ವೇದವು ಹೇಳುತ್ತದೆ. ಇವರಿಂದಲೇ ಪಂಚಶಿಲ್ಪಗಳನ್ನು ಆಚರಿಸುವ ವಿಶ್ವಬ್ರಾಹ್ಮಣರು ಜನ್ಮಿಸಿದರೆಂದು ಪುರಾಣ ಶಿಲ್ಪ ಆಗಮ ಶಾಸ್ತ್ರಾದಿಗಳು ನುಡಿಯುತ್ತವೆ. ಇಂದಿನ ವಿಶ್ವಬ್ರಾಹ್ಮಣ ಶಿಲ್ಪಿಗಳು ಈ ಸಾನಗಾದಿ ಪಂಚವಿಂಶತ್ಯುತ್ತರಶತ ಬ್ರಹ್ಮರ್ಷಿಗಳ ಗೋತ್ರೋತ್ಪನ್ನರೆಂಬುದು ಸರ್ವವಿದಿತ ಸಂಗತಿ.

ವೇದದಲ್ಲಿ ಅಡಿಗಡಿಗೂ ಬಹುಳವಾಗಿ ದರ್ಶನವನ್ನೀಯುವವನು ತ್ವಷ್ಟೃ. ಋಗ್ವೇದದ ಪ್ರಥಮ ಮಂಡಲದ ೧೩ನೇ ಸೂಕ್ತದಲ್ಲಿ ಮೊದಲ ಬಾರಿಗೆ ತ್ವಷ್ಟೃ ಶಬ್ದವು ದೊರೆಯುತ್ತದೆ.

ಇಹ ತ್ವಷ್ಟಾರ ಮಗ್ರಿಯಂ
ವಿಶ್ವರೂಪ ಮುಪಾಹ್ವಯೇ
ಅಸ್ಮಾಕ ಮಸ್ತು ಕೇವಲಃ

ತಕ್ಷೂ, **ತಕ್ಷೂ-ತನೂ ಕರಣೇ** ಎಂಬ ಧಾತುಗಳಿಂದಲೂ, **ತ್ವಿಷ ದೀಪ್ತೌ** ಎಂಬ ಧಾತುವಿನಿಂದಲೂ ತ್ವಷ್ಟೃ ಶಬ್ದ ಸ್ವರೂಪವು ನಿಷ್ಪನ್ನವಾಗುತ್ತದೆ ಎಂದು ಸಾಯಣರು ಹೇಳುತ್ತಾರೆ. ಎಂದರೆ ಒಂದು ವಸ್ತುವಿಗೆ

ಸಾವಯವವಾದ ರೂಪಕಲ್ಪನೆ ನೀಡುವವನು ತ್ವಷ್ಟೃ ಎಂದು ಅರ್ಥ. ಈ ಮಂತ್ರದಲ್ಲಿಯ ವಿಶ್ವರೂಪಂ ಎಂಬ ಪದಕ್ಕೆ ಭಾಷ್ಯದಲ್ಲಿ **ವಿಶ್ವಾನಿ ರೂಪಾಣಿ ತ್ವಷ್ಟ್ರಾತ್ಪನ್ನತ್ವೇನ** ಎಂದು ಹೇಳುವಾಗ, **ತ್ವಷ್ಟಾ ವೈ ಪಶುನಾಂ ಮಿಥುನಾನಾಂ ರೂಪಕೃತ್** ಎಂಬ ತೈತ್ತಿರೀಯ ಸಂಹಿತಾವಾಕ್ಯವನ್ನು ಪ್ರಮಾಣವಾಗಿ ನೀಡಿದ್ದಾರೆ ಆಚಾರ್ಯ ಸಾಯಣರು. ಇದರಿಂದ ಸಮಸ್ತ ರೂಪಶಿಲ್ಪಗಳ ನಿರ್ಮಾತೃ, ಅಧಿಪತಿ ತ್ವಷ್ಟೃವೇ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಅನುಗುಣವಾಗಿ ವೇದದಲ್ಲಿ ತ್ವಷ್ಟೃದೇವನ ಸೃಷ್ಟಿವೈಭವವನ್ನು ಈ ವಾಕ್ಯಗಳು ವಿವರಿಸುತ್ತವೆ.—

ತ್ವಷ್ಟಾ ರೂಪಾಣಾಮಧಿಪತಿಃ
ತ್ವಷ್ಟಾ ರೂಪಾಣಿಹಿ ಪ್ರಭುಃ
ತ್ವಷ್ಟಾ ರೂಪಾಣಿ ವಿಕರೋತಿ
ತ್ವಷ್ಟಾರಗ್ಂ ರೂಪಾಣಿ ವಿಕುರ್ವನ್ತಂ ವಿಪಶ್ಚಿಂ

ವೇದ ಮಂತ್ರವೊಂದು ವಧೂವರರನ್ನು ನಿರ್ಮಿಸುವ ದೇವನು ತ್ವಷ್ಟೃವೇ ಎಂದು ಹೇಳುತ್ತದೆ—

ತ್ವಷ್ಟಾ ಜಾಯಾಮಜನಯ ತ್ತ್ವಷ್ಟಾಸ್ಯೈತ್ವಾಂ ಪತಿಮ್
ತ್ವಷ್ಟಾ ಸಹಸ್ರಮಾಯೂಗ್ಂಷಿ
ದೀರ್ಘಮಾಯುಃ ಕೃಣೋತುವಾಮ್ ||

'ಎಲೈ ವರನೇ, ತ್ವಷ್ಟೃವು ನಿನಗೆಂದೇ ಈಕೆಯನ್ನು ಪತ್ನಿಯನ್ನಾಗಿ ಸೃಷ್ಟಿಸಿದ್ದಾನೆ. ಅಂತೆಯೇ ಈ ವಧುವಿಗೆ ನಿನ್ನನ್ನು ಪತಿಯನ್ನಾಗಿ ಮಾಡಿದ್ದಾನೆ. ಅಂತಹ ತ್ವಷ್ಟೃ ನಿಮಗೆ ದೀರ್ಘಾಯುರ್ಭಾಗವನ್ನು ನೀಡಲಿ !' ಎಂಬುದು ಈ ಮಂತ್ರಾರ್ಥ. ಈ ಮಂತ್ರವನ್ನು ಪಠಿಸದೆ ಯಾವ ವೈದಿಕ ವಿವಾಹವು ಪೂರ್ಣವಾಗದು. ಅಷ್ಟೇ ಅಲ್ಲ, ಗರ್ಭದಲ್ಲಿಯ ಪಿಂಡಕ್ಕೆ ಇಂದ್ರಿಯಗಳನ್ನು ರೂಪಿಸಿ, ರೂಪನಿರ್ಮಾಣ ಮಾಡಿದ್ದು ಕೂಡ ತ್ವಷ್ಟೃ ಶಕ್ತಿಯೇ ಎಂಬುದನ್ನು ಋಗ್ವೇದದ ದಶಮಂಡಲದ ಈ ಮಂತ್ರ ವಿವರಿಸುತ್ತದೆ.

ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಗ್ಂಶತು ।
ಆಸಿಂಚತು ಪ್ರಜಾಪತಿ ರ್ಧಾತಾ ಗರ್ಭಂ ದಧಾತು ತೇ ||

ಇಂತು ತ್ವಷ್ಟೃ ರೂಪನಿರ್ಮಾಣ ಮಾಡಿದ ದೇವನೆಂದು ಸ್ಪಷ್ಟಗೊಳಿಸಲಾಗಿದೆ. ಗರ್ಭಾದಾನ ಸಂಸ್ಕಾರದಲ್ಲಿ ಈ ಮಂತ್ರವನ್ನು ಪಠಿಸುತ್ತಾರೆ. ಅನಿರ್ವಚನೀಯವಾದ ದೈವಶಿಲ್ಪದಿಂದಲೇ ಮಾನುಷ ಶಿಲ್ಪವು ರೂಪುಗೊಂಡಿತೆಂಬುದನ್ನು ಹೇಳಲು ತ್ವಷ್ಟೃ ವಿಶ್ವಕರ್ಮನ ಸೃಷ್ಟಿ ಶಿಲ್ಪವನ್ನು ಕುರಿತು ಪ್ರಸ್ತಾಪಿಸಲಾಗಿದೆ.

ವೇದದಲ್ಲಿ ಅನೇಕ ಎಡೆಗಳಲ್ಲಿ ಇಂದ್ರನಿಗೆ ಬಲವತ್ತರವಾದ ವಜ್ರಾಯುಧವನ್ನು ತಯಾರಿಸಿಕೊಟ್ಟದ್ದು ತ್ವಷ್ಟೃವೇ ಎಂದು ಉಕ್ತವಾಗಿದೆ.

ಮಹ್ಯಂ ತ್ವಷ್ಟಾ ವಜ್ರ ಮತಕ್ಷದಾಯಸಂ (ಋ ೧೦:೪೮:೩) ತ್ವಷ್ಟೃ ದೇವ ನನಗೆ ಉಕ್ಕಿನಿಂದ ವಜ್ರಾಯುಧವನ್ನು ತಯಾರಿಸಿ ಕೊಟ್ಟನೆಂದು ಇಂದ್ರನೇ ಹೇಳಿದ್ದಾನೆ —

ಅಸ್ಮಾ ಇದು ತ್ವಷ್ಟಾ, ತಕ್ಷದ್ವಜ್ರಂ
ಸ್ವ ಸ್ತಮಂ ಸ್ವರ್ಯಂ ರಣಾಯ
—ಎಂದು ಅಥರ್ವವೇದ ಹೇಳುತ್ತದೆ.

ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ ಎಂದು ಋಗ್ವೇದ ಹೇಳುತ್ತದೆ. ಈ ಮಂತ್ರದಲ್ಲಿ ಅತಕ್ಷತ್ ಎಂಬ ಕ್ರಿಯಾಪದಕ್ಕೆ ವಜ್ರಾಯುಧವನ್ನು ನಿರ್ಮಿಸಿ ಸಾಣೆ ಹಿಡಿದು ಕೊಟ್ಟನೆಂದು ಅರ್ಥ. ಸ್ವರ್ಯವೆಂದರೆ ಸ್ವರ್ಗಕ್ಕೆ ಉಪಕಾರ ಮಾಡುವುದು ಎಂದು.

ವೇದ ಪ್ರಸಿದ್ಧರಾದ ದೈವಶಿಲ್ಪಾಚಾರ್ಯದಲ್ಲಿ ವಿಶ್ವಕರ್ಮ, ತ್ವಷ್ಟೃ, ವಿಶ್ವರೂಪ ಎಂಬುವವರು ಪ್ರಥಮ ಉಲ್ಲೇಖನಕ್ಕೆ ಅರ್ಹರಾದವರು. ವಿಶ್ವರೂಪಾಚಾರ್ಯ ತ್ವಷ್ಟೃವಿನ ಕುಮಾರನೇ —

ವಿಶ್ವರೂಪಾವೈ ತ್ವಾಷ್ಟ್ರಃ
ಪುರೋಹಿತೋ ದೇವಾನಾಮಾಸೀತ್

—ಎಂದು ಯಜುರ್ವೇದ ಹೇಳುತ್ತದೆ. ತ್ವಾಷ್ಟ್ರ ಎಂದರೆ ತ್ವಷ್ಟೃವಿನ ಪುತ್ರನೆಂದು ಅರ್ಥ. ವಿಶ್ವರೂಪಾಚಾರ್ಯರ ಕಥೆ ವೇದದಲ್ಲಿ ಮಾತ್ರವೇ ಅಲ್ಲದೆ ಭಾಗವತಾದಿ ಪುರಾಣಗಳಲ್ಲೂ ವರ್ಣಿಸಲಾಗಿದೆ.

ಈ ಮುವ್ವರ ನಂತರ ಹೇಳಬೇಕಾದ ವೈದಿಕ ಶಿಲ್ಪಿಗಳು ಋಭುಗಳು – ಋಭು, ವಿಭ್ವ, ವಾಜ. ಅಂಗಿರೋ ಮಹರ್ಷಿಯ ಎಂಟನೆಯ ಮಗನಾದ ಸುಧನ್ವ ಶಿಲ್ಪಾಚಾರ್ಯನ ಕುಮಾರರು. ರಥಾದಿ ನಿರ್ಮಾಣಗಳಲ್ಲಿ ಅದ್ವಿತೀಯ ಚಾತುರ್ಯವುಳ್ಳ ರಥಕಾರರು. ಋಗ್ವೇದದಲ್ಲಿ ಹನ್ನೊಂದು ಸೂಕ್ತಗಳಲ್ಲಿ ಇವರ ಪ್ರಭಾವವನ್ನು ವರ್ಣಿಸಲಾಗಿದೆ.

ತಕ್ಷನ್ ರಥಂ ಸುವೃತಂ ವಿದ್ಮನಾಪಸ
ಸ್ತಕ್ಷನ್ ಹರೀ ಇಂದ್ರವಾಹಾ ವೃಷಣ್ವಸೂ ।
ತಕ್ಷನ್ ಪಿತೃಭ್ಯಾಂ ಋಭವೋ ಯುವದ್ವಯಃ
ತಕ್ಷನ್ ವತ್ಸಾಯ ಮಾತರಂ ಸಚಾಭುವಂ ॥

(ಋ ೧: ೧೧೧: ೧)

ಶಿಲ್ಪಕರ್ಮ ಕೌಶಲ್ಯ ಉಳ್ಳ ಋಭುಗಳು ಅಶ್ವಿನೀ ದೇವತೆಗಳಿಗೆ ಒಳ್ಳೆಯ ಚಕ್ರಗಳುಳ್ಳ ರಥವನ್ನು ಮಾಡಿಕೊಟ್ಟರು. ಇಂದ್ರನಿಗೆ ದೃಢವಾದ ಕುದುರೆಗಳನ್ನು ನಿರ್ಮಿಸಿಕೊಟ್ಟರು (ನಿರ್ಮಿಸಿಕೊಟ್ಟರು ಎಂದರೆ ಈ ಕುದುರೆಗಳು ಯಂತ್ರಗಳಾಗಿದ್ದವು ಎಂಬ ಧ್ವನಿ ಬರುತ್ತದೆ). ವೃದ್ಧರಾದ ತಮ್ಮ ಮಾತಾಪಿತೃಗಳನ್ನು ಯುವಾವಸ್ಥೆಗೆ ತಂದು ಅವರ ಆಯುವೃದ್ಧಿ ಮಾಡಿದರು. ಇದರಿಂದ ಋಭುಗಳಿಗೆ ವೈದ್ಯಶಾಸ್ತ್ರ ಪ್ರಾವೀಣ್ಯತೆಯೂ ಇರುವಂತೆ ಸ್ಪಷ್ಟವಾಗುತ್ತದೆ. ಕರುವಿಗಾಗಿ ಯೋಗ್ಯವಾದ ಧೇನುವನ್ನು ನಿರ್ಮಿಸಿದರು ಇಷ್ಟೆ ಅಲ್ಲ –

ತಕ್ಷನ್ನಾಸತ್ಯಾಭ್ಯಾಂ ಪರಿಜ್ಮಾನಂ ಸುಖಂ ರಥಂ ।
ತಕ್ಷನ್ ಧೇನುಂ ಸಬರ್ದುಘಾಂ (ಋ ೧ : ೨೦:೩)

ಋಭುಗಳು ಅಶ್ವನೀದೇವತೆಗಳಿಗಾಗಿ ಅನಿರ್ಬಂಧಿತವಾದ, ಹಾಗೂ ಸರ್ವತ್ರ ಸಂಚರಿಸಬಲ್ಲ, ಕೂರಲು ಸುಖಕರವಾದ ರಥವನ್ನೂ, ಹಾಲು ಕರೆಯಲು ಹಸುವನ್ನು ನಿರ್ಮಿಸಿದರೆಂದು ಮಂತ್ರಾರ್ಥ. **ಸಬರ್ದುಘಾಂ** ಎಂಬ ಮಾತಿಗೆ **ಸರ್ವದುಘಾಂ** ಎಂದು ಕೆಲವರು **ಕಾಮದುಘಾಂ** ಎಂದು ಕೆಲವರು ಪಠಿಸುತ್ತಾರೆ. ಸರ್ವದುಘಾಂ ಧೇನು ಎಂದರೆ ಸಮಸ್ತನ್ನೂ ನೀಡುವ ಧೇನು – ಕಾಮಧೇನು – ಎಂದು ಅವರ ಅಭಿಪ್ರಾಯ.

ಕಾಶ್ಯಪ ಶಿಲ್ಪಕ್ಕೆ ಉಪೋದ್ಘಾತವನ್ನು ಬರೆದ ವಾಝೆ ಕೃಷ್ಣಶರ್ಮ ಅವರು ಕಾಮದುಘಾಂ ಎಂಬ ಪಾಠವನ್ನು ಗ್ರಹಿಸಿ ಕಾಮಧೇನು ಒಂದು — ಮಹಾಯಂತ್ರವೆಂದು ಹೇಳಿದ್ದಾರೆ.

ಶಿಲ್ಪಜ್ಞಾ ಯದ್ಯ ದಿಷ್ಟಂತತ್ತ ತ್ನಾ ಧಾಯಿತುಂ ಸಮರ್ಥಾಂ ಧೇನುಂ ನಿರ್ಮಮುಃ ಅನೇನ ಕಾಮಧೇನು ನಾಮ್ನಾ ಪ್ರಸಿದ್ಧಂ ಕಿಂಚನ್ಮಹಾಯಂತ್ರಂ ಭವತೀತಿ ತರ್ಕಯಾಮಿ। ವಿಶೇಷತ ಸ್ತ್ರಕ್ಷಧಾತೋಃ ಪ್ರಯೋಗಾತ್ ಕೃತಿ ಸುತ್ತ್ವ ಲಕ್ಷ್ಯತೇ ।

— ಇವೆಲ್ಲವೂ ಅವರ ವಾಕ್ಯಗಳು. ತಕ್ಷ ಧಾತುವಿಗೆ ರೂಪಿಸಿರುವ ಎಂದು ತಾನೇ ಅರ್ಥ ? ವಿಷ್ಣುವಿನ ಅವತಾರಗಳೆಂದು ಹೇಳಲಾಗುವ ಮತ್ಸ್ಯ, ನರ ಸಿಂಹಾದಿಗಳು ಕೂಡ ಯಂತ್ರಮಯ ಶಿಲ್ಪಗಳೆಂದೇ ಸಮರಾಂಗಣ ಸೂತ್ರ ಧಾರಾದಿ ಶಿಲ್ಪಶಾಸ್ತ್ರಕಾರರ ಭಾವನೆ.

ಈ ಋಭುಗಳಿಗೆ ರಥಾಶ್ವಗಳು, ಧೇನುಗಳು ನಿರ್ಮಾಣ ಚಾತುರ್ಯವೇ ಅಲ್ಲದೆ ಒಂದು ಪಾತ್ರೆಯನ್ನು ನಾಲ್ಕಾಗಿ ಮಾಡುವ ಪ್ರಜ್ಞೆಯೂ ಇದ್ದಂತೆ ಋಭು ಸೂಕ್ತದಿಂದ ತಿಳಿಯುತ್ತದೆ. ಮಾನವ ಶಿಲ್ಪಿಗಳಾದ ಇವರು ತಮ್ಮ ಶಿಲ್ಪಿಚಾತುರ್ಯದಿಂದ ಇಂದ್ರಾದಿಗಳನ್ನು ಮೆಚ್ಚಿಸಿ ದೇವತ್ತ್ವವನ್ನು ಹೊಂದಿ ಹವಿರ್ಭಾಗವನ್ನು ಸ್ವೀಕರಿಸಿದರೆಂದು ಈ ಮಂತ್ರವು ಹೇಳುತ್ತದೆ :

ವಿಷ್ಟ್ವೀ ಶಮೀ ತರಣಿತ್ವೇನ ವಾಘತೋ
ಮರ್ತಾಸಸ್ಸಂತೋ ಅಮೃತತ್ವಮಾನಶುಃ ।
ಸೌಧನ್ವನಾ ಋಭವಃ ಸೂರಚಕ್ಷಸಃ
ಸಂವತ್ಸರೇ ಸಮಪೃಚ್ಯನ್ತ ಧೀತಿಭಿಃ ॥

(ಋ ೧ : ೧೧೦ : ೪)

ಈ ಋಭುಗಳನಂತರ ಹೇಳಬಹುದಾದ ಮಹಾಶಿಲ್ಪಿ ಕಶ್ಯಪ ಪ್ರಜಾಪತಿ. ಈತನನ್ನು ಕುರಿತು ತೈತ್ತಿರೀಯ ಬ್ರಾಹ್ಮಣದಲ್ಲಿಯ ಒಂದು ಮಂತ್ರ ಇಂತು ನುಡಿಯುತ್ತದೆ :

ಯತ್ತೇ ಶಿಲ್ಪಂ ಕಶ್ಯಪ ರೋಚನಾತ್
ಇಂದ್ರಿಯಾವತ್ಪುಷ್ಕಲಂ ಚಿತ್ರಭಾನು
ಯಸ್ಮಿಂ ತ್ಸೂರ್ಯಾ ಆರ್ಪಿತಾ ಸ್ಸಪ್ತ ಸಾಕಂ
ತಸ್ಮಿನ್ ರಾಜಾನ ಮಧಿ ವಿಶ್ರಯೈನಮ್

ಎಲೈ ಕಶ್ಯಪ ಪ್ರಜಾಪತಿಯೇ, ನಿನ್ನ ಶಿಲ್ಪವು ತೇಜೋವಂತವಾಗಿದ್ದು, ಶಕ್ತಿಸಂಪನ್ನವೂ ಸಂಪೂರ್ಣವೂ ಆದ ಚಿತ್ರವಿಚಿತ್ರಗಳಿಂದ ಪ್ರಕಾಶಿಸುತ್ತಿವೆ. ಅಂತಹ ಈ ನಿನ್ನ ಶಿಲ್ಪದಲ್ಲಿ ಏಳುಮಂದಿ ಸೂರ್ಯರು ಪ್ರತಿಷ್ಠಿತರಾಗಿದ್ದಾರೆ. ಅಂತಹ ಶಿಲ್ಪ (ವಿಶಿಷ್ಟವಾದ ಭವನ)ದಲ್ಲಿ ಈ ರಾಜನಿಗೆ ಆಶ್ರಯವನ್ನು ಕಲ್ಪಿಸುವಂತಹವನಾಗು.

ಈ ಕಶ್ಯಪ ಪ್ರಜಾಪತಿ ವಿಶ್ವಕರ್ಮನ ಅಂಶಾವತಾರವೆಂದು ಮಂತ್ರಗಳು ಕೆಲವು ವಿವರಿಸುತ್ತವೆ. ಕಶ್ಯಪಶಿಲ್ಪದಿಂದ ಪ್ರಭಾವಿತವಾದುದಕ್ಕಾಗಿ ಈ ಭೂಮಿಯನ್ನು ಕಾಶ್ಯಪಿ ಎಂದು ಕರೆಯಲಾಗಿದೆ. ಇಂದಿನ 'ಕಾಶ್ಯಪ ಶಿಲ್ಪ' ಎನ್ನುವ ಶಿಲ್ಪಗ್ರಂಥವು ಈ ಕಶ್ಯಪನ ಕೃತಿಯೇ ಎಂದು ಹೇಳಲಾಗುತ್ತದೆ.

ಋಗ್ವೇದದಲ್ಲಿ ರಥವೆ ಅಲ್ಲದೆ, ಆಯುಧ ಧನಸ್ಸು, ಕುಂತ ಇತ್ಯಾದಿ ಪ್ರಹರಣ ಸಾಧನಗಳ ನಿರ್ಮಾಣಗಳ ಸ್ತುತಿ ಒಂದು ಮಂತ್ರದಲ್ಲಿದೆ.

ಅಹಂ ರುದ್ರಾಯ ಧನುರಾ ತನೋಮಿ
ಬ್ರಹ್ಮದ್ವಿಷೇ ಶಿರವೇ ಹಂತವಾ ಉ

(ಋ ೧೦ : ೧೨೫ : ೬)

ಎಂದರೆ ರುದ್ರನಿಗಾಗಿ ಧನುಸ್ಸನ್ನು ನಿರ್ಮಿಸುತ್ತಿದ್ದೇನೆ ಎಂದು. ಈ ಧನುಸ್ಸಿನ ನಿರ್ಮಾಣ ಮಾಡಿದ್ದು ತ್ರಿಪುರಾಸುರ ವಧೆಗಾಗಿ ಎಂದು ಸಾಯಣಾಚಾರ್ಯರ ಭಾಷ್ಯ. ಮತ್ತೊಂದು ಮಂತ್ರದಲ್ಲಿ ಚಕ್ರವಿಲ್ಲದ ರಥದ ಸ್ತುತಿ ಇದೆ: **ಯಂ ಕುಮಾರ ನವಂ ರಥಂಮಚಕ್ರಂ ಮನಸಾ ಕೃಣೋಃ** ಚಕ್ರರಹಿತವಾದ ಈ ರಥ ಎಂತಿರುತ್ತತೋ ಕಂಡಿರುವವರು ಯಾರು ?

ವೇದ ಕಾಲದಲ್ಲಿ ವಿಗ್ರಹ ನಿರ್ಮಾಣವಿಲ್ಲವೆಂದು, ಆದ್ದರಿಂದ ಮೂರ್ತಿ

ಪೂಜೆ ವೈದಿಕವಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಆ ವಾದವನು ಸುಳ್ಳೆಂದು ಹೇಳುವ ಆಧಾರ ವೇದಗಳಲ್ಲಿಯೇ ಇದೆ ನೋಡಿ :

ಕ ಇಮಂ ದಶಭಿರ್ಮನೇಂದ್ರ ಕ್ರೀಣಾತಿ ಧೇನುಭಿಃ ।
ಯದಾ ವೃತ್ರಾಣಿ ಜಂಘನ ದಥೈನಂ ಮೆ. ಪುನರ್ದದತ್ ।

(ಋ, ೪:೨೪ : ೧೦)

"ಹತ್ತು ಹಸುಗಳನ್ನು ಯಾರಾದರು ಕೊಟ್ಟು ಈ ಇಂದ್ರನನ್ನು ಕೊಂಡರೆ ಚೆನ್ನಾಗಿರುತ್ತಿತ್ತು. ತನ್ನ ಪಾಪವನ್ನು ಕಳೆದುಕೊಂಡ ನಂತರ ನನ್ನ ಇಂದ್ರನನ್ನು ನನಗೆ ಹಿಂತಿರುಗಿಸಿದರೆ ಸಾಕು"—ಇದು ಶಿಲ್ಪಿಯೊಬ್ಬನ ಮಾತು. ಇಂದ್ರನನ್ನು ಕೊಳ್ಳುವುದು ಎಂದರೆ ಪ್ರತಿಮಾ ರೂಪಿ ಇಂದ್ರನೆಂದು ತಾನೇ ಇಲ್ಲಿ ಅರ್ಥ ? ಇದಕ್ಕೆ ನೆರವಾಗುವಂತೆ ತನ್ನ ಕೆಲಸ ಮುಗಿದ ನಂತರ ಹಿಂತಿರುಗಿಸಬೇಕೆನ್ನುವ ಮಾತು ! ಇದರಿಂದ ವೇದ ಕಾಲದಲ್ಲಿ ಶಿಲ್ಪಿ ಮೂರ್ತಿಗಳನ್ನು ನಿರ್ಮಿಸಿ ಅವನ್ನು ಬಾಡಿಗೆಗೆ ಕೊಡುತ್ತಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ಇಹೈವ ಧ್ರುವಾಂ ನಿಮಿನೋಮಿ ಶಾಲಾಂ
ಕ್ಷೇಮೇ ತಿಷ್ಟತು ಘೃತ ಮುಕ್ಷಮಾಣಾ
ಇಹೈವ ಧ್ರುವಾ ಪ್ರತಿತಿಷ್ಠ ಶಾಲೇ
ಅಶ್ವಪತೀ ಗೋಮತೀ ಸೂನೃತಾವತೀ

ಈ ಮಂತ್ರದಲ್ಲಿ ಯಜಮಾನನಾದವನು ವಾಸಯೋಗ್ಯವಾದ ಭೂಮಿಯಲ್ಲಿ ಗೃಹ ನಿರ್ಮಾಣವನ್ನು ನಡೆಸಿ ಸತ್ಸಂತಾನ ಸೌಭಾಗ್ಯವನ್ನು, ಗೋ - ಅಶ್ವಾದಿ ಸಂಪತ್ತನ್ನು ಕೋರುತ್ತಿರುವುದು ಸ್ಪಷ್ಟವಾಗಿದೆ.

ಇಂತು ವೇದ ವಾಙ್ಮಯದಲ್ಲಿ ಗೃಹವಾಸ್ತು, ರಥಶಿಲ್ಪ, ಮೂರ್ತಿ ನಿರ್ಮಾಣ ಕೌಶಲ್ಯ, ಯಂತ್ರ ಅಶ್ವಾದಿಗಳ ನಿರ್ಮಾಣ ತಂತ್ರಜ್ಞಾನ, ಧನುಸ್ಸು, ಕುಂತ, ಮೂಸಲಾದಿ ಆಯುಧ ನಿರ್ಮಾಣ ತಂತ್ರ ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಶಿಲ್ಪದಲ್ಲಿರುವ ದೇವ - ಮಾನವಾದಿ ಶಿಲ್ಪಭೇದವನ್ನು ಅಲ್ಲಿ

ಉಲ್ಲೇಖಿಸಿಲ್ಲ. ವೇದ ಪ್ರಸಿದ್ಧರಾದ ಸಾನಗಾದಿ ಋಷಿಪಂಚಕವು ಅಥವಾ ಮನ್ವಾದಿ ಪಂಚಬ್ರಹ್ಮರು), ಕಶ್ಯಪಾದಿ:ಪ್ರಜಾಪತಿಗಳು, ಭೃಗು ಭಾರಾದ್ವಾಜಾದಿ ಮಹರ್ಷಿಗಳು ಮಹಾಶಿಲ್ಪಾಚಾರ್ಯರು ಮಾತ್ರವೇ ಅಲ್ಲದೆ ಶಿಲ್ಪಶಾಸ್ತ್ರಗಳ ಕರ್ತೃಗಳೂ ಅಹುದು.

ಈ ಲೇಖನದಲ್ಲಿ ವೇದಗಳಲ್ಲಿ ಶಿಲ್ಪಿಗಳ ಪರಂಪರೆಯ ಕೆಲಭಾಗವನ್ನು ಮಾತ್ರವೇ ಉಲ್ಲೇಖಿಸುತ್ತಿದ್ದೇನೆ. ಅನ್ಯಥಾ ಈ ವಿಷಯವು ಬೃಹತ್ ಕೃತಿಯೊಂದಕ್ಕೆ ಸಾಕಾಗುವಷ್ಟು ಸಾಮಗ್ರಿಯನ್ನು ಒದಗಿಸಬಲ್ಲ ವಸ್ತು. ಈ ಶಿಲ್ಪದ ಪಾವಿತ್ರ್ಯವನ್ನು 'ಯಾಜುಷಾಥರ್ವಣ ಮಹಾಶಿಲ್ಪೋಪನಿಷತ್ತು' ವಿಸ್ತಾರವಾಗಿ ವಿವರಿಸಿದೆ.

ಶಿಲ್ಪೇನೈ ವೇದ ಮುಪ ಬೃಂಹಿಂತಂ ।
ಏಭಿಸ್ಸುಖಂ ಜೀವೇಯ್ಯುರ್ಲೋಕಾಃ (ಶಿಲ್ಪೋಪನಿಷತ್ತು) ★

ಜ್ಞಾನದ ಗುರಿ

ಸದ್ಯಶ್ಚಿದ್ಯಃ ಶವಸಾ ಪಂಚ ಕೃಷ್ಟೀಃ
ಸೂರ್ಯ ಇವ ಜ್ಯೋತಿಷಾಪಸ್ತತಾನ ।
ಸಹಸ್ರಸಾಃ ಶತಸಾ ಅಸ್ಯ ರಂಹಿ ರ್ನ ಸ್ಮಾ
ವರಂತೇ ಯುವತಿಂ ನ ಶರ್ಯಾಮ್ ॥

(ಋಗ್ವೇದ, ೧೦:೧೭೮:೩)

ಸಾನಗಾದಿ ಪಂಚಗೋತ್ರಜರಾದ ಎಲೈ ವೈಶ್ವಕರ್ಮಣ ಪ್ರಮುಖರೇ, ಗರುಡನು ಹೇಗೆ ತನ್ನ ಬಲದಿಂದ ಆಕಾಶದಲ್ಲಿ ವಿಹರಿಸುತ್ತಾನೋ, ಸೂರ್ಯನು ಹೇಗೆ ಪ್ರಕಾಶಮಾನನಾಗಿ ಅನುಗ್ರಹೇಚ್ಛೆಯಿಂದ ಸರ್ವಲೋಕವನ್ನು ಬೆಳಗುತ್ತಾನೆಯೋ, ಹಾಗೆಯೇ ನಿಮ್ಮ ಜ್ಞಾನದ ಧ್ಯೇಯವು—ಬಲವಾದ ಧನುಸ್ಸಿನಿಂದ ಹೂಡಲ್ಪಟ್ಟ ಬಾಣವು ಗುರಿಯನ್ನು ಹೇಗೆ ಶೀಘ್ರವಾಗಿ ಮುಟ್ಟುತ್ತದೆಯೋ ಹಾಗೆ—ಸಹಸ್ರ ಜನರನ್ನು, ಕೊನೆಗೆ ನೂರು ಜನರನ್ನು, ನಿಮ್ಮಂತೆಯೇ ಜ್ಞಾನಿಗಳನ್ನಾಗಿ ಮಾಡುವುದರ ಮೂಲಕ ಅಲ್ಪಕಾಲದಲ್ಲಿಯೇ ಉದ್ಧರಿಸುವುದಾಗಲಿ.

ಶಿಲ್ಪಸಿದ್ಧಾಂತಿ, ಶಿವಯೋಗಿ

ಶ್ರೀ ಸಿದ್ಧಲಿಂಗ ಸ್ವಾಮಿಗಳವರು

೭

ವಿಶ್ವಕರ್ಮ ಮತದ ಮೂಲ ತತ್ತ್ವ - ಪ್ರಾಶಸ್ತ್ಯ

ಅನಾದಿಕಾಲದಿಂದಲೂ ಪ್ರಪಂಚಕ್ಕೆ ಅಡಿಗಲ್ಲಾಗಿರುವ ವಿಶ್ವಕರ್ಮ ಮತವು ವಿಶ್ವವು ಎಂದು ಸೃಷ್ಟಿಯಾಯಿತೋ, ವೇದಗಳು ಎಂದು ವಿಶ್ವಕರ್ಮನ ಮುಖಗಳಿಂದ ಹೊರಹೊರಟವೋ ಅಂದೇ ನಿರ್ಣಯವಾಗಿರುತ್ತದೆ. ವಿಶ್ವ ಕರ್ಮ ಮತವು ಒಬ್ಬ ಮನುಷ್ಯನಿಂದಾಗಲಿ, ಒಬ್ಬ ದೇವತೆಯಿಂದಾಗಲಿ ನಿರ್ಣಯವಾದುದಲ್ಲ; ದೇವಾಧಿ ದೇವತೆಗಳ ಒಡೆಯನೂ, ಸರ್ವೋತ್ಕೃಷ್ಟನೂ ಆದ ಸರ್ವೇಶ್ವರನಿಂದಲೇ ಪ್ರತಿಪಾದಿಸಲ್ಪಟ್ಟಿರುತ್ತದೆ. ವೇದಾಗಮಗಳಲ್ಲೆಲ್ಲಿ ಹುಡುಕಿದರೂ ಕಂಡುಬರದೆ ಇರುವ ಅರ್ವಾಚೀನರಾದ ಒಬ್ಬೊಬ್ಬರ ಕಾಲಗಳಲ್ಲಿ ಕಲ್ಪಿತಗಳಾದ ಮತಗಳಂತೆ ಅನಾಧಾರವಾದ ಇಂದಿನ ನವಯುಗದ ಮತವಿದಲ್ಲ. ಎಲ್ಲ ಮತಗಳಿಗೂ ಮೂಲವಾಗಿದ್ದು, ಎಲ್ಲರಿಗೂ ಪ್ರತ್ಯಕ್ಷವಾಗಿ ರಂಜಿಸಿ, ಕೇಂದ್ರಸ್ಥಾನವನ್ನು ಪಡೆದಿರುವ ಆಚಾರ್ಯ ಮತವಿದು. ಗರ್ಭಾಧಾನಾದಿ ಅಂತ್ಯೇಷ್ಟಿಯವರೆಗೂ, ಕರ್ಷಣಾದಿ ಪ್ರತಿಷ್ಠಾಂತದವರೆಗೂ ನಡೆಯುವ ಜಗತ್ತಿನ ಸಮಸ್ತ ಕರ್ಮಗಳೂ, ಕೊನೆಗೆ ಜ್ಞಾನಾರ್ಜನೆಗೆ ಬೇಕಾದ ಕರ್ಮ ಗಳೂ ವೈಶ್ವಕರ್ಮಣಗಳೇ ಆಗಿರುತ್ತವೆ. ವೈಶ್ವಕರ್ಮಣ ವಸ್ತುಗಳಿಲ್ಲದೆ ಯಾವ ಆಶ್ರಮಧರ್ಮವೂ ಸಿದ್ಧಿಸುವುದಿಲ್ಲ. ನಾಸ್ತಿಕರ ಮತಗಳನ್ನು ಬಗ್ಗು ಬಡಿದು, ಆಸ್ತಿಕ ಧ್ವಜವನ್ನು ಇಂದಿಗೂ ಕೈ ಎತ್ತಿ ಪಿಡಿದಿರುವ ಲೋಕೈಕವೀರ ಮತವಿದು. ಲೋಕದ ಎಲ್ಲೆಡೆಯಲ್ಲೂ ಕಾಣುತ್ತಲಿರುವ ಗುಡಿಗೋಪುರ ಪ್ರಾಸಾದಗಳೇ ವಿಶ್ವಕರ್ಮ ಧ್ವಜಗಳು. ಎಲ್ಲ ಪವಿತ್ರ ಕ್ಷೇತ್ರಗಳಲ್ಲೂ ಇರುವ ದೇವಾಲಯಗಳೇ ಸಮಸ್ತ ವಿದ್ವಾಂಸರ, ಪಂಡಿತರ, ವೈದಿಕರ ಮತ್ತು ಸರ್ವರ

ಪಾಠಶಾಲೆಗಳು. ಮೂರ್ಖರಾಗಲಿ, ವಿದ್ವಾಂಸರಾಗಲಿ, ಜನನ ಮರಣಗಳನ್ನು ನೀಗಿ ಮುಕ್ತಿಯನ್ನು ಪಡೆಯಬೇಕಾದರೆ ಈ ಪಾಠಶಾಲೆಯಲ್ಲಿಯೇ ಓದಬೇಕು. ಎಲ್ಲರಿಗೂ ಸುಲಭವಾಗಿ ಓದುವ ಹಾದಿಯನ್ನು ತೋರಿಸುವ ಮುಂದೆ ತೋರುವ ಮತವೇ ವಿಶ್ವಕರ್ಮ ಮತವು. ವೇದಾಂತಗಳ ಸಾರವೂ, ಆಗಮಗಳ ತಳ ಹದಿಯೂ, ಕಲೆಗಳ ತಿರುಳೂ, ಪುರಾಣ ಪುಣ್ಯಕತೆಗಳ ತೌರೂರೂ ಆಗಿ ಸರ್ವೋತ್ಕೃಷ್ಟವೂ ಜಗದ್ಗುರುವೂ ಆಗಿದ್ದು, ಕಶ್ಯಪಾದಿ ಬ್ರಹ್ಮರ್ಷಿಗಳ ಕಾಲ ದಲ್ಲಿ ಅತ್ಯಂತ ಪೂಜ್ಯಭಾವದಲ್ಲಿದ್ದ ಈ ಮತವು ಕಾಲಕ್ರಮದಲ್ಲಿ ಕೆಲ ಪಾಷಂಡಿ ಗಳ ತಾಡನೆಗೆ ಸಿಲುಕಿ, ಅಧಃಪಾತವಾಗಿರುತ್ತದೆ. ಆದರೂ ಈ ಮತದ ನಿಜತತ್ತ್ವಸ್ವರೂಪವು ವೇದೋಪನಿಷತ್ತುಗಳಲ್ಲೂ, ಆಗಮ ಪುರಾಣಗಳಲ್ಲೂ ಸ್ಪಷ್ಟವಾಗಿರುತ್ತದೆ. ಅವುಗಳಲ್ಲಿ ಮುಖ್ಯವಾದ ವಿಶ್ವಕರ್ಮ ಶಬ್ದಾರ್ಥವನ್ನೂ, ವಿಶ್ವಕರ್ಮತತ್ತ್ವವನ್ನೂ ವೇದಗಳೂ ತದ್ಭಾಷ್ಯಗಳೂ ಯಾವ ಪ್ರಕಾರ ಉದ್ಘಟಿ ಸುತ್ತಲಿವೆ ಎಂಬುದನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸುತ್ತೇವೆ.

ವಿಶ್ವಕರ್ಮಮತ ಪ್ರಾಶಸ್ತ್ಯ

ಯಜುರ್ವೇದ ಅ. ೩, ಪ. ೪, ಅ. ೭, ೭ ಶ್ರುತಿ **ಪ್ರಜಾಪತಿರ್ವಿಶ್ವ ಕರ್ಮಾ** । (ಭಾಷ್ಯ॥ ಪ್ರಜಾನಾಂ ಪಾಲಕಃ ಪ್ರಜಾಪತಿಃ ವಿಶ್ವಂ ಕರ್ಮ ಕರಣೀಯಂ ಯಸ್ಯಾಸೌ ವಿಶ್ವಕರ್ಮಾ ॥) ಅಂದರೆ ಪ್ರಜೆಗಳನ್ನು ಕಾಪಾಡು ತ್ತಿರುವುದರಿಂದ ಪ್ರಜಾಪತಿಯೆಂತಲೂ, ಪ್ರಪಂಚವನ್ನು ಸೃಷ್ಟಿ ಮಾಡಿರುವುದ ರಿಂದ ವಿಶ್ವಕರ್ಮನೆಂತಲೂ ಇರುತ್ತದೆ.

ಕಣ್ವಸಂಹಿತೆ ಅ. ೧೩, ಅನು. ೪, ಶ್ರು॥ ಮಾತೇವ .... ಪ್ರಜಾ ಪತಿರ್ವಿಶ್ವಕರ್ಮಾವಿಮುಂಚತು ॥ ಎಂಬಲ್ಲಿ (ಭಾ॥ ವಿಶ್ವಸೃಷ್ಟಿರೂಪಂ ಕರ್ಮ ಯಸ್ಯಾಸೌ ವಿಶ್ವಕರ್ಮಾ ॥)

ತಾ॥ ಜಗತ್ಸೃಷ್ಟಿರೂಪವಾದ ಕರ್ಮವುಳ್ಳವನು ವಿಶ್ವಕರ್ಮನು ಎಂಬು ದಾಗಿಯೂ, ತೈತ್ತಿರೀಯಾರಣ್ಯಕ ಪುರುಷಸೂಕ್ತದಲ್ಲಿ —

ಶ್ರು॥ **ವಿಶ್ವಕರ್ಮಣಸ್ಸಮವರ್ತತಾಧಿ** ॥ ಇದಕ್ಕೆ ವಿದ್ಯಾರಣ್ಯ ಭಾಷ್ಯ: ವಿಶ್ವಕರ್ಮಣಃ ಜಗತ್ಕರ್ತುಃ ಪರಮೇಶ್ವರಾತ್ ಅಧಿಸಮವರ್ತತ ಆಧಿಕ್ಯೇನ ನಿಷ್ಪನ್ನಃಯೋಽಯಂ ಬ್ರಹ್ಮಾಂಡಾಭಿಮಾನೀ ಚೇತನಃ ಪುಮಾನ್ ಸೋಽಯ

ವಿಶ್ವರಾಂಶಃ ತಸ್ಯವಿರಾಟ್ಪುರುಷಸ್ಯ ರೂಪಂ ಚತುರ್ದಶಲೋಕರೂಪಾವಯವಸ್ಥಾನಂ ವಿದಧತ್ ನಿಷ್ಪಾದಯತ್ ॥ ತ್ವಷ್ಟಾ ವಿಶ್ವಕರ್ಮಾ ಜಗದೀಶ್ವರಃ॥

ತಾ॥ ವಿಶ್ವಕರ್ಮನೇ ಜಗನ್ನಿರ್ಮಾಣಕರ್ತನಾದ ಪರಮೇಶ್ವರನ ಆಧಿಕ್ಯದಿಂದ ಹುಟ್ಟುವ ಆ ಪುರುಷನ ರೂಪವು ತ್ವಷ್ಟೃವಾದ ಜಗದೀಶ್ವರನಾಗಿ ಪ್ರವರ್ತಿಸುತ್ತಾನೆಂಬುದಾಗಿಯೂ,

ರಾಮಾನುಜ ಭಾಷ್ಯ ಪ್ರಕಾರ। ವಿಶ್ವಕರಣಃ-ಅಧಿ ಸಮವರ್ತತ ವಿಶ್ವಂ ಪ್ರಪಂಚ ಕರ್ಮ ಯಸ್ಯ ಸಃ ವಿಶ್ವಕರ್ಮಾ ಪುರುಷೋತ್ತಮಃ ॥ ವಿಶ್ವಕರ್ಮಾಮನು ಸ್ತ್ವಷ್ಟೇತಿ ಸಹಸ್ರ ನಾಮಸೂಕ್ತಂ ತಸ್ಮಾದಧೀಶ್ವರಾತ್ ॥

ತಾ॥ ಪ್ರಪಂಚವನ್ನು ನಿರ್ಮಾಣಮಾಡಿದ ಪುರುಷೋತ್ತಮನು. 'ವಿಶ್ವಕರ್ಮಾ ಮನುಸ್ತ್ವಷ್ಟಾ' ಎಂಬುದಾಗಿ ಸಹಸ್ರನಾಮ ಸೂಕ್ತದಲ್ಲಿ ಹೇಳಿರುವುದರಿಂದ ತ್ವಷ್ಟಾ ಎಂದರೆ ಸರ್ವಪ್ರಪಂಚಕರ್ತಾ ಎಂಬುದಾಗಿಯೂ,

ಮಹೀಧರ ಭಾಷ್ಯದಲ್ಲಿ ॥ ವಿಶ್ವಂ ಕರ್ಮ ಯಸ್ಯ ವಿಶ್ವಕರ್ಮಣಃ ॥

ತಾ॥ ಸರ್ವಕರ್ಮಾಧಿಪತಿಯೇ ವಿಶ್ವಕರ್ಮನು ಎಂತಲೂ,

ಶು। ಯು। ದಯಾನಂದಭಾಷ್ಯ ॥ ವಿಶ್ವಂ ಸರ್ವಂ ಕ್ರಿಯಮಾಣಸ್ಯ ಸ ವಿಶ್ವಕರ್ಮಾ ತಸ್ಯ ಪರಮೇಶ್ವರಸ್ಯ ॥

ತಾ॥ ಸಕಲ ಕ್ರಿಯಾರೂಪನೇ ವಿಶ್ವಕರ್ಮನು. ಆತನೇ ಪರಮೇಶ್ವರನು ಎಂಬುದಾಗಿಯೂ,

ಋಗ್ವೇದ ೮ ೮ ೪೭ ೨೮॥ ವಿಶ್ವಕರ್ಮಣಾ ವಿಶ್ವದೇವ್ಯಾವತಾ ॥ ಇದಕ್ಕೆ ವ್ಯಾಖ್ಯಾನ ॥ ವಿಶ್ವಕರ್ಮಾವಿಶ್ವದೇವ್ಯಾವತೇತಿ। ವಿಶ್ವಾನಾಂ ಭುವನಾನಾಂ ಕರ್ಮಯಸ್ಯ ಸಃ ವಿಶ್ವಕರ್ಮಾ ಸಮಸ್ತ ಪ್ರಪಂಚ ಕಲ್ಪನಾಧಿಷ್ಠಾನಕರಣೇ ಸಮರ್ಥ ಇತ್ಯರ್ಥಃ ॥ ಅಂದರೆ

ಈ ಸಮಸ್ತ ಚರಾಚರ ಪ್ರಪಂಚಸೃಷ್ಟಿಕರ್ತನಾಗಿಯೂ ರಕ್ಷಕನಾಗಿಯೂ ಇರುವವನೇ ವಿಶ್ವಕರ್ಮ ಪರಬ್ರಹ್ಮನೆಂಬುದಾಗಿಯೂ, ವಿಶ್ವಕರ್ಮಾ ಎಂಬ ಶಬ್ದಕ್ಕೆ ಪ್ರತಿಯೊಬ್ಬ ಭಾಷ್ಯಕಾರರೂ ತಮ್ಮ ತಮ್ಮ ಮತಕ್ಕನುಸಾರವಾಗಿ ವ್ಯಾಖ್ಯಾನ ಮಾಡಿರುತ್ತಾರೆ.

ಪಾಣಿನೀಯಾಚಾರ್ಯರು, ವಿಶ್ವಕರ್ಮ ಶಬ್ದವು ಬಹುವ್ರೀಹಿ ಸಮಾಸವು. ಅನೇಕ ಮನ್ಯಪದಾರ್ಥೇ ಎಂಬ ೨:೨:೨೪ ಪಾಣಿನೀ ಸೂತ್ರ ಪ್ರಕಾರ ವಿಶ್ವಂ ಕೃತ್ಸ್ನಂ ಕರ್ಮ ಕ್ರಿಯಾ ವ್ಯಾಪಾರೋ ಯಸ್ಯ ಸಃ ವಿಶ್ವಕರ್ಮಾ। ಎಂದು ನಿಷ್ಪನ್ನವಾಗಿರುತ್ತದೆ ಎಂದು ಹೇಳಿದ್ದಾರೆ.

ಮುಖ್ಯವಾಗಿ ಸಕಲ ಲೋಕಾಂತರ ವಾಸನೂ, ಸಚ್ಚಿದಾನಂದ ಸ್ವರೂಪನೂ, ಅಖಂಡ ಬ್ರಹ್ಮಾನಂದೈಕರಸನೂ, ನಿತ್ಯನೂ, ನಿರಂಜನನೂ, ನಿರ್ವಿಕಲ್ಪನೂ ಆಗಿರುವ ವಿಶ್ವಕರ್ಮ ಪರಬ್ರಹ್ಮನನ್ನು ಯಾವ ವಿದ್ವಾಂಸರು ತಿಳಿಯುತ್ತಾರೋ ಅವರು ಇಹ ಪರ ಸುಖ ಸಂಪತ್ತುಗಳನ್ನು ಅನುಭವಿಸುತ್ತಾರೆ ಎಂದು ವೇದಭಾಷ್ಯವು ಮುಕ್ತಕಂಠದಿಂದ ಸಾರುತ್ತಿರುವುದು. ಆದಕಾರಣ ವಿಶ್ವಕರ್ಮ ಪರಬ್ರಹ್ಮತತ್ತ್ವವನ್ನು ಪ್ರತಿಯೊಬ್ಬ ಮಾನವನೂ ಗುರುಮುಖದಿಂದ ತಿಳಿದು ಧನ್ಯರಾಗಬೇಕಾಗಿರುವುದು.

ಶ್ರು॥ ಯೋ ದೇವಾನಾಂ ನಾಮಧಾ ಏಕಏವತಗ್ಂ ಸಂಪ್ರಶ್ನಂ ಭುವನಾಯನ್ತ್ಯನ್ಯಾ । ತ ಆಯುಜಂತದ್ರವಿಣಗ್ಂ ಸಮಸ್ಮಾ ಋಷಯಃ ಪೂರ್ವೇ-ಜರಿತಾರೋ ನಭೂನಾ । ಅಸೂರ್ತಾರಜಸೋ ವಿಮಾನೆ ಯೇ ಭೂತಾನಿ ಸಮಕೃಣ್ವನ್ನಿಮಾನಿ । ನ ತಂ ವಿಧಾಯ ಇದಂ ಜಜಾನಾನ್ಯದ್ ಯುಷ್ಮಾಕಮಂತರಂಭವತಿ । ನೀಹಾರೇಣ ಪ್ರಾವೃತಾಜಲ್ಪ್ಯಾಚಾಸುತೃಪ ಉಕ್ಥಶಾಸಶ್ಚರಂತಿ । ಪರೋದಿವಾಪರಏನಾ ॥೨॥

ಯಾವಾತನು ತಾನೊಬ್ಬನೆಯಾಗಿ ಇಂದ್ರಮಿತ್ರವರುಣಾದಿ ಸಕಲ ದೇವತಾ ನಾಮಗಳನ್ನು ಧರಿಸಿದನೋ ಅಂತಹ ಪರಮೇಶ್ವರನಾದ ವಿಶ್ವಕರ್ಮನಲ್ಲಿ ಸಮಸ್ತ ಭುವನಬ್ರಂಹ್ಮಾಂಡಗಳೂ ಪ್ರಳಯಕಾಲದಲ್ಲಿ ಲೀನವಾಗುತ್ತವೆ.

ಯಾವ ವಿಶ್ವಕರ್ಮನು ಈ ಜಗತ್ತನ್ನು ಸೃಷ್ಟಿಸಿದನೋ ಆ ವಿಶ್ವಕರ್ಮನನ್ನು ಆತನಿಂದಲೇ ಸೃಷ್ಟಿಸಲ್ಪಟ್ಟ ಎಲ್ಲೈ ಜೀವರುಗಳಿರಾ ! ನೀವೂ ನಾವೂ ತಿಳಿದುಕೊಳ್ಳದೆ ಇರುತ್ತೇವೆ. ಪ್ರತ್ಯಯರೂಪವಾದ ವಿಶ್ವಕರ್ಮತತ್ತ್ವವು ಇಲ್ಲವೆಂದು ಹೇಳಕೂಡದು. ಸರ್ವವೇದಾಂತವೇದ್ಯವಾದ ಆ ತತ್ತ್ವವು ಇರುತ್ತದೆ. ಆತ್ಮಸ್ವರೂಪವಾದ ಆ ತತ್ವವನ್ನು ಏಕೆ ತಿಳಿದುಕೊಳ್ಳದೆ ಇರುತ್ತೇವೆಂದರೆ ಜೀವಕೋಟಿಗಳು ಮಂಜಿನಂತಿರುವ ಅಜ್ಞಾನದಿಂದಾವರಿಸಲ್ಪಟ್ಟು ನಾನು

ದೇವರು, ನಾನು ಮನುಷ್ಯನು, ಕ್ಷೇತ್ರವು ಧನವು ನನ್ನದು ಎಂಬ ಮಮಕಾರದಿಂದ ಸುಳ್ಳನ್ನೇ ಹೇಳುತ್ತ ಯಾವ ಪ್ರಕಾರದಿಂದಾಗಲಿ ಸ್ವರ್ಗಾಪೇಕ್ಷೆಯಿಂದ ಯಜ್ಞಾದ್ಯುಕ್ತ ಕರ್ಮಗಳನ್ನು ಮಾಡುತ್ತ ಸಂಚರಿಸುತ್ತಾರೆ. ಈ ವಿಧವಾದ ಐಹಿಕಾಮುಷ್ಮಿಕ ಭೋಗ ಗರ್ವಿತರಾಗಿ ಮೆರೆಯುತ್ತಿರುವುದರಿಂದ ಮಿಥ್ಯಾಜ್ಞಾನಪರಾಧೀನರಾದ ನಿಮಗೆ ಯಥಾರ್ಥತತ್ತ್ವಜ್ಞಾನವಿರುವುದಿಲ್ಲ. ಯಾವ ಪರತತ್ತ್ವವು ಗುಹೆಯಂತಿರುವ ಹೃದಯಪುಂಡರೀಕದಲ್ಲಿ ಗೂಢವಾಗಿರುವುದೋ ಆ ತತ್ತ್ವವು ಸ್ವರ್ಗಲೋಕಕ್ಕಿಂತಲೂ ದೂರವಾಗಿ ವಿಲಕ್ಷಣವಾದುದಾಗಿಯೂ ದೇವತೆಗಳಿಂದಲೂ, ರಾಕ್ಷಸರಿಂದಲೂ ಹೊಂದಲಸಾಧ್ಯವಾಗಿರುತ್ತದೆ (ಅಂದರೆ ಗುರುಶಾಸ್ತ್ರವಿಮುಖರಾದವರಿಗೆ ಹೊಂದಲಶಕ್ಯವಾಗಿರುತ್ತದೆ) ಎಂದು ಯಜುರ್ವೇದ ವಿಶ್ವಕರ್ಮಸೂಕ್ತದ ತಾತ್ಪರ್ಯವಿರುವುದು.

ಅಜ್ಞಾನಾವೃತರಾದ ಬದ್ಧಜೀವಿಗಳು ವಿಶ್ವಕರ್ಮತತ್ತ್ವಜ್ಞಾನವಿಲ್ಲದೆ ಜನನ ಮರಣವೆಂಬ ದುಃಖಸಮುದ್ರದಲ್ಲಿ ಮುಳುಗಿ ತೇಲುತ್ತಿರುತ್ತವೆ. ಈ ಬದ್ಧಜೀವಿಗಳು ಬಿಡುಗಡೆ(ಮುಕ್ತಿ)ಯನ್ನು ಹೊಂದಬೇಕಾದರೆ "ಅಥಾ ತೋ ಬ್ರಹ್ಮಜಿಜ್ಞಾಸಾ" ವಿಶ್ವಕರ್ಮತತ್ತ್ವವಿಚಾರವನ್ನು ಮಾಡಬೇಕು. ಏಕೆಂದರೆ ಈ ಪ್ರಪಂಚದ ಸಕಲಸಂಪತ್ತುಗಳು ಅಶಾಶ್ವತಗಳಾದ ಮೂರು ದಿನದ ಬಾಳಿನವಾದುದರಿಂದ ವಿವೇಕಿಯು ಶಾಶ್ವತವಾದ ಬ್ರಹ್ಮಾನಂದವನ್ನೇ ಬಯಸಬೇಕು. ಆ ಬ್ರಹ್ಮವು ತಮ್ಮ ಆತ್ಮವೇ ಆದರೂ ಅದರ ಗುಟ್ಟು ಯಾರಿಗೂ ತಿಳಿದಿರುವುದಿಲ್ಲ ಆದಕಾರಣ ಬ್ರಹ್ಮವಿಚಾರವು ಅಗತ್ಯವು. ಈ ಬ್ರಹ್ಮವಿಚಾರಮಾರ್ಗವನ್ನು ಬ್ರಹ್ಮವಾದಿಗಳು ಹೀಗೆ ಹೇಳುತ್ತಾರೆ:

ತೇಧ್ಯಾನಯೋಗಾನುಗತಾ ಅಪಶ್ಯನ್॥ (ಶ್ವೇತಾಶ್ವತರ) ಎಂಬಂತೆ, ಆ ಬ್ರಹ್ಮವೇತ್ತರು ಚಿತ್ತೈಕಾಗ್ರತೆಯೆಂಬ ಧ್ಯಾನಯೋಗದಿಂದ ಮೂಲ ಕಾರಣ ಸ್ವರೂಪನಾದ ವಿಶ್ವಕರ್ಮನನ್ನು ನೋಡಿದರು. ಮತ್ತು ಅದೇ ಶ್ವೇತಾಶ್ವತರ ಶ್ರುತಿ 'ಏಷದೇವೋ ವಿಶ್ವಕರ್ಮಾ ಮಹಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ। ಹೃದಾಮನೀಷಾ ಮನಸಾಭಿಕ್ಲೃಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ ॥'

ಜಗದ್ರೂಪ ಮಾಯಾಸಂಸರ್ಗದಿಂದ ಚತುರ್ದಶಭುವನ ಸೃಷ್ಟಿಕರ್ತನಾಗಿಯೂ, ಪ್ರತ್ಯಕ್ಷನಾಗಿಯೂ ಪ್ರಕಾಶಿಸುವ ಈ ವಿಶ್ವಕರ್ಮನು ಯಾವಾಗಲೂ ಸಕಲ ಜೀವಿಗಳ ಹೃದಯದಲ್ಲಿ ಚೆನ್ನಾಗಿ ನಿಂತುಕೊಂಡಿರುತ್ತಾನೆ. ಈತನೇ ಸಾಕ್ಷಿರೂಪನಾಗಿ ಪರಮಾತ್ಮ ಸ್ವರೂಪ ಜ್ಞಾನಸಾಧಕಗಳಾದ ಮನಸ್ಸು ಬುದ್ಧಿ, ಚಿತ್ತಗಳಿಂದ ಸಚ್ಚಿದಾನಂದ ಸ್ವರೂಪದ ಅಭಿವ್ಯಕ್ತನಾಗಿರುತ್ತಾನೆ. ಸಾಧನಚತುಷ್ಟಯಸಂಪನ್ನರಾದ ಮುನಿಜನಗಳು ಈ ಸ್ವರೂಪವನ್ನು ತತ್ತ್ವಮಸ್ಯಾದಿ ಮಹಾವಾಕ್ಯ ಪ್ರತಿಪಾದ್ಯೈಕರೂಪನಾದ ಅಖಂಡೈಕರಸಬ್ರಹ್ಮವೇ ನಾನಾಗಿರುತ್ತೇನೆಂಬ ಪ್ರತ್ಯಕ್ಷ ಜ್ಞಾನದಿಂದ ತಿಳಿದುಕೊಂಡರೋ ಅಂತಹ ಜ್ಞಾನಸಂಪನ್ನರು ಪುನರಾವೃತ್ತಿರಹಿತವಾದ ವಿಶ್ವಕರ್ಮ ಪದವನ್ನು ಹೊಂದುತ್ತಾರೆ. ಎಂಬುದು ವೇದೋಪನಿಷತ್ತುಗಳ ತಾತ್ಪರ್ಯವಾಗಿರುವುದರಿಂದ ವೈಶ್ವಕರ್ಮಣರಾದ ನಾವುಗಳು ಶ್ರೀಗುರುಮುಖದಿಂದ ವಿಶ್ವಕರ್ಮ ಜ್ಞಾನವನ್ನು ಸಂಪಾದಿಸಿ ಮುಕ್ತಿಯನ್ನು ಪಡೆಯುವುದೇ ಪ್ರಥಮ ಕರ್ತವ್ಯವಾಗಿರುತ್ತದೆ. ಇದಕ್ಕಾಗಿಯೇ ನಮ್ಮ ಪೂರ್ವಾಚಾರ್ಯರು ಈಶ್ವರನಿಮಿತ್ತ ಕರ್ಮಾನುಷ್ಠಾನವು ಬಹುಸುಲಭವಾದ ಮಾರ್ಗವೆಂದು ತಿಳಿದು ನಮ್ಮಗಳಿಗೆ ಉಪದೇಶಮಾಡಿರುತ್ತಾರೆ. ಏಣಿಯು ಇಲ್ಲದಿದ್ದರೆ ಮಾಳಿಗೆ ಮುಂತಾದವುಗಳಿಗೆ ಹತ್ತಲ ಸಾಧ್ಯವಾದಂತೆ, ಮುಕ್ತಿಯ ಸೌಧವನ್ನು ಆರೋಹಣಮಾಡಲು ಬಾಹ್ಯ ಪೂಜೆಗಳೇ ಆಲಂಬನಗಳು. ಆದುದರಿಂದಲೇ ಗೃಹಸ್ಥಾಶ್ರಮಿಗಳಿಗೆ ಪಂಚಾಯತ ಪೂಜೆಯು ಪ್ರಾಮುಖ್ಯವೆಂದು ಆಗಮಗಳಲ್ಲಿ ಉಕ್ತವಾಗಿರುತ್ತದೆ. ವೇದಗಳು ವಿಶ್ವಕರ್ಮನೊಬ್ಬನನ್ನು ಪೂಜಿಸುವುದರಿಂದ ಸಮಸ್ತ ದೇವತೆಗಳನ್ನೂ ಪೂಜಿಸಿದಂತಾಗುತ್ತದೆಂದು ಸಿಂಹನಾದ ಮಾಡುತ್ತಿರುವುವು.

ಸರ್ವತೋಮುಖವಾಗಿಯೂ ವಿಶ್ವಕರ್ಮನ ಪೂಜೆಯನ್ನೇ ಸರ್ವರೂ ಮಾಡುತ್ತ ಸಕಲ ಸಿದ್ಧಿಗಳನ್ನೂ ಪಡೆದಿರುವಾಗ ವಿಶ್ವಕರ್ಮಮತೀಯರು ಮಾತ್ರ ತಮ್ಮ ಕುಲ ಕ್ರಮಾಗತವಾಗಿ ಬಂದಿರುವ ಸ್ವಧರ್ಮವನ್ನು ಬಿಟ್ಟು ಅನ್ಯದೇವರನ್ನು ಪೂಜಿಸುತ್ತ, ಅನ್ಯಶಾಸ್ತ್ರಗಳನ್ನೋದುತ್ತ, ಅನ್ಯಧರ್ಮಗಳಿಂದ ನಡೆಯುತ್ತಿರುವುದು ಆಶ್ಚರ್ಯಜನಕವೂ ವ್ಯಸನವೂ ಆಗಿರುತ್ತದೆ. ಈ ಅನ್ಯ ಧರ್ಮಾವಲಂಬಿಗಳ ಗತಿಯನ್ನು ಮೂಲಸ್ತಂಭಕಾರನು ಹೀಗೆ ಹೇಳುತ್ತಾನೆ:

ಶ್ಲೋ॥ ವಿಶ್ವಕರ್ಮಾ ಜಗನ್ನಾಥಃ ವಿಶ್ವಕರ್ಮಾ ಜಗದ್ಗುರುಃ ।
ವಿಶ್ವಕರ್ಮಾ ಜಗತ್ತೇಜಃ ವೈಶ್ವಕರ್ಮಮಿದಂಜಗತ್ ॥
ಏವಂ ಶ್ರೀವಿಶ್ವಕರ್ಮಾಣಂ ತನ್ನಿಬೋಧಕ ಸುಶ್ರುತಿಂ ।
ಅನ್ಯಶಾಸ್ತ್ರಾವಬೋಧಾಚ್ಚ ಅನ್ಯದೇವಸಮರ್ಚನಂ ॥
ನಜಾನಂತೋಽಪರಂಪಾರಂ ತಸ್ಯಶ್ರೀವಿಶ್ವಕರ್ಮಣಃ ।
ಭ್ರಾಂತಾಶ್ಚರಂತಿಚೋನ್ಮತ್ತಾಸ್ತ್ವಂತೇ ಗಚ್ಛಂತಿ ನಾರಕಂ ॥
ತಸ್ಮಾತ್ಸರ್ವ ಪ್ರಯತ್ನೇನ ವಿಶ್ವಕರ್ಮಾಣಮರ್ಚಯೇತ್ ।
ತಥೈವ ತಸ್ಯ ಶಾಸ್ತ್ರಾಣಿ ಸರ್ವಥೈವ ಸಮಭ್ಯಸೇತ್ ।
ಜ್ಞಾನವಂತೋ ಮಹಾತ್ಮಾನೋಽಚಾಂತೇ ಗಚ್ಛಂತಿ ಸದ್ಗತಿಂ ॥

ವಿಶ್ವಕರ್ಮನೇ ಜಗತ್ತಿಗೆ ಪ್ರಭುವು, ವಿಶ್ವಕರ್ಮನೇ ಜಗತ್ತಿಗೆ ಗುರುವು. ವಿಶ್ವಕರ್ಮನೇ ಜಗತ್ತಿನ ಪ್ರಕಾಶವು. ಈ ಜಗತ್ತೆಲ್ಲವೂ ವಿಶ್ವಕರ್ಮನೇ. ಈ ವಿಶ್ವಕರ್ಮನನ್ನು ಬಿಟ್ಟು ಯಾವುದೂ ಇಲ್ಲ. ಇಂತಹ ವಿಶ್ವಕರ್ಮನನ್ನು, ಈ ವಿಶ್ವಕರ್ಮ ತತ್ತ್ವವನ್ನು ಬೋಧಿಸುವ ವೇದಗಳನ್ನು ಬಿಟ್ಟು ಅನ್ಯದೇವತೆಗಳನ್ನು ಪೂಜಿಸುವುದರಿಂದಲೂ ಮನಸ್ಸು ವ್ಯಾಕುಲವಾಗಿ, ವಿಶ್ವಕರ್ಮ ಪ್ರಭಾವವನ್ನು ಪಾರಗಾಣದೆ ಅವಿದ್ಯಾಪರತಂತ್ರರಾಗಿ, ಭ್ರಾಂತರಾಗಿ ಹುಚ್ಚರಂತೆ ಮನಸ್ಸು ಬಂದಂತೆ ನಡೆದು ಕಡೆಗೆ ನರಕವನ್ನು ಹೊಂದುತ್ತಾರೆ. ಆದುದರಿಂದ ಸರ್ವಪ್ರಯತ್ನದಿಂದಲೂ ವಿಶ್ವಕರ್ಮನನ್ನೇ ಪೂಜಿಸಬೇಕು. ವಿಶ್ವಕರ್ಮ ಮಹಾತ್ಮ್ಯ ಬೋಧಕಗಳಾದ ಶಾಸ್ತ್ರಗಳನ್ನೇ ಓದಬೇಕು. ಈ ವಿಶ್ವಕರ್ಮೋಪಾಸನೆಯಾದ ವಿಶ್ವಕರ್ಮಯೋಗದಿಂದ ಜನನಮರಣ ಬಂಧ ವಿಮೋಚನೆಯಾಗಿ ವಿಶ್ವಕರ್ಮಸಾಯುಜ್ಯವನ್ನು ಪಡೆಯುತ್ತಾರೆ. ಇದೇ ವೈಶ್ವಕರ್ಮಣ ಬ್ರಾಹ್ಮಣಮತೀಯರ ಮೂಲ ಧರ್ಮವು.

ಶಿಲ್ಪ

ಇನ್ನು ವಿಶ್ವಕರ್ಮ ಜನಾಂಗದವರ ವಿಶ್ವವಿಜ್ಞಾನವನ್ನು ವಿವರಣೆ ಮಾಡಿದರೆ, ಹಿಂದಿನ ಕಾಲದಲ್ಲಿ ಕಲಾ ವಿಜ್ಞಾನಗಳಲ್ಲೂ ಮುಂದುವರಿದವರೆಂದರೆ ವಿಶ್ವಕರ್ಮ ಜನಾಂಗದವರೆ ಸಕಲ ಮತೀಯರಿಗೂ ಜೀವನ ಧರ್ಮವು ಸರಳವಾಗಿ ಸಾಗುವುದಕ್ಕೆ ಬೇಕಾಗುವ ವಸ್ತುನಿರ್ಮಾಣಗಳು ವಿಶ್ವಕರ್ಮ ಮತೀ

ಯರದೇ ಆಗಿತ್ತು. ವಿಶ್ವಕರ್ಮ ಬ್ರಾಹ್ಮಣರ ಮನೆಗಳಿಲ್ಲದ ಊರಾಗಲಿ, ಪಟ್ಟಣಗಳಾಗಲಿ ಇರಲೇ ಇಲ್ಲ. ವಿಶ್ವಕರ್ಮ ಧರ್ಮಕ್ಕೆ ಬೆಲೆಯನ್ನು ಕಟ್ಟಲು ತತ್ಸಮಾನವಾದ ಬೇರೆ ವಸ್ತುವೇ ಇರಲಿಲ್ಲ. ಎಲ್ಲ ಜನತೆಯ ಧರ್ಮವನ್ನುಳಿಸಿ ದೇಶೋದ್ಧಾರಮಾಡಲು ವಿಶ್ವಕರ್ಮ ಮುನಿಯರು ತಮ್ಮ ದೇಹವನ್ನೇ ಅರ್ಪಣ ಮಾಡಿ ತಪಿಸಿ ತಪಸಿ ಬೆಂಡಾದರು. ಹೀಗೇತಕ್ಕೆ ದುಡಿದರೆಂದು ಕೇಳಬಹುದು.

ಶ್ಲೋ॥ ತತ್ರಾಸಿಕರ್ಮಸೇವಾಯಾ ಮಸಿರ್ಲಿಪಿವಿಧೌಸ್ಮೃತಾ ।
ಕೃಷಿರ್ಭೂಕರ್ಷಣೇಪ್ರೋಕ್ತಾ ವಿದ್ಯಾಶಾಸ್ತ್ರೋಪಜೀವನೇ ॥
ವಾಣಿಜ್ಯಂ ವಣಿಜಾಂ ಕರ್ಮ ಶಿಲ್ಪಂ ಸ್ಯಾತ್ಕರಕೌಶಲಂ ।
ತಚ್ಚಚಿತ್ರಕಲಾಪತ್ರ ಛೇದ್ಯಾದಿ ಬಹುಧಾಸ್ಮೃತಂ ॥

ಅಸಿಕರ್ಮ, ಲಿಪಿಕರ್ಮ, ಕೃಷಿಕರ್ಮ, ಶಾಸ್ತ್ರಜೀವನ, ವಾಣಿಜ್ಯಕರ್ಮ, ಶಿಲ್ಪಕರ್ಮ ಎಂಬ ಈ ಷಟ್ಕರ್ಮಗಳಿಗಾಗಿಯೇ ಬಳಲಿದರು. ಈಗಲೂ ನಮ್ಮವರು ಈ ಷಟ್ಕರ್ಮನಿರತರಾದರೆ ಆಗಲಿ ಶ್ರೀ ವಿಶ್ವಕರ್ಮೇಶ್ವರನ ಅನುಗ್ರಹ ಉಂಟಾಗಿ ಸಕಲ ಸಂಪತ್ತುಗಳೂ ಪ್ರಾಪ್ತವಾಗುವುವು. ಈ ಪ್ರಕಾರ ವಿಶ್ವಕರ್ಮ ಮುನಿಯರು ಅಸಾಧಾರಣ ಕಲಾಕೌಶಲದಲ್ಲಿದ್ದ ಉದಾಹರಣೆಗಳು ವಿಪುಲವಾಗಿ ದೊರಕುತ್ತವೆ. ಅವುಗಳಲ್ಲಿ ಪ್ರಪಂಚದ ಹಿತಕ್ಕಾಗಿ ಅನೇಕ ಯಂತ್ರ ಸಾಧನ-ಗಳನ್ನು ಮಾಡಿದ್ದರು. ಈ ಯಂತ್ರಗಳು ಅಗ್ನಿ, ಜಲ, ವಾಯು, ಆಕಾಶ ಸಂಬಂಧವಾಗಿದ್ದು ಸ್ವೇಚ್ಛೆಯಾಗಿ ಭೂ ಗಮನ, ಆಕಾಶಗಮನ, ಸಮುದ್ರ-ಗಮನಗಳನ್ನು ಮಾಡುತ್ತ ಕ್ಷಣಮಾತ್ರದಲ್ಲಿ ಸಕಲ ಪ್ರಪಂಚವನ್ನೂ ಸಂಚರಿಸುತ್ತಿದ್ದವು. ಇದರಿಂದ ಆಗಿನ ಜನರು ವಿಶ್ವ ವ್ಯವಹಾರವನ್ನೂ, ಆರ್ಥಿಕ ನೈತಿಕ ಪರಿಸ್ಥಿತಿಗಳನ್ನೂ ತಿಳಿದು ಶಾಂತಿಸುಖಗಳಿಂದ ಬದುಕುತ್ತಿದ್ದರು. ಇಂತಹ ಯಂತ್ರಗಳಲ್ಲಿ ಗಜಯಂತ್ರ, ವ್ಯೋಮಚಾರಿ ವಿಹಂಗಯಂತ್ರ, ಆಕಾಶಗಾಮಿ ದಾರುಮಯ ವಿಮಾನಯಂತ್ರ, ದ್ವಾರಪಾಲಯಂತ್ರ, ಯೋಧಯಂತ್ರಗಳೇ ಮೊದಲಾದುವು ಅನೇಕವಾಗಿರುತ್ತವೆ. ಈ ಯಂತ್ರಗಳ ನಿರ್ಮಾಣಕ್ರಮಗಳನ್ನು ಶಿಲ್ಪಶಾಸ್ತ್ರದಲ್ಲಿ ಹೀಗೆ ಹೇಳುತ್ತಾರೆ:

ಶ್ಲೋ ॥ ಯಂತ್ರೇಣಕಲ್ಪಿತೋಹಸ್ತೀ ನದನ್ ಗಚ್ಛನ್ ಪ್ರತೀಯತೆ ।
ಶುಕಾದ್ಯಾಃ ಪಕ್ಷಿಣಃ ಕ್ಲೃಪ್ತಾಸ್ತಾಲಸ್ಯಾನುಗಮಾನ್ಮುಹುಃ ॥
ಜನಸ್ಯ ವಿಸ್ಮಯಕೃತೋ ನೃತ್ಯಂತಿ ಚ ಪಠಂತಿ ಚ ।

ಪುತ್ರಿಕಾ ವಾ ಗಜೇಂದ್ರೋ ವಾ ತುರಗೋ ಕರ್ಮಟೋಪಿವಾ ।
ಬಲನ್ನೈರ್ವರ್ತನ್ನೈರ್ನೃತ್ಯಂಸ್ತಾಲೇನ ಹರತೇ ಮನಃ ॥

ಲಘುದಾರುಮಯಂ ಮಹಾವಿಹಂಗಂ ದೃಢಸುಶ್ಲಿಷ್ಟತನುಂ ವಿಧಾಯತಸ್ಯ ।
ಉದಿರೇ ರಸಯಂತ್ರಮಾಧೀತಜ್ವಲನಾಧಾರಮಧೋಸ್ಯಚಾಗ್ನಿಪೂರ್ಣಂ ॥
ತತ್ರಾರೂಢಃ ಪುರುಷಸ್ತಸ್ಯಪಕ್ಷದ್ವಂದ್ವೋಚ್ಚಾಲಪ್ರೋಜ್ಝಿತೇನಾನಿಲೇನ ।
ಸುಪ್ತಸ್ಯಾಂತಃ ಪಾರತಸ್ಯಾಸ್ಯಶಕ್ತ್ಯಾ ಚಿತ್ರಂಕುರ್ಯಾನ್ನಂಬರೇಯಾತಿ ದೂರಂ॥

ಎಂಬುದಾಗಿ ಶಿಲ್ಪಶಾಸ್ತ್ರದಲ್ಲಿ ಮಹಾ ವಿಹಂಗ ಯಂತ್ರವನ್ನು ಹಗುರವಾದ ಮರದಿಂದ ಅತ್ಯುನ್ನತವೂ ಅತಿ ನೀಚವೂ ಆಗದಂತೆಯೂ ಪಕ್ಷಿಯ ಶರೀರದಂತೆಯೂ ಮಾಡಿ, ಅದರ ಹೊಟ್ಟೆಯೊಳಗೆ ರಸಯಂತ್ರವನ್ನಿಟ್ಟು, ಅಗ್ನಿಜ್ವಾಲೆಯನ್ನು ತುಂಬಿ, ಅದರಲ್ಲಿ ಕೂತು ಅದರ ರೆಕ್ಕೆಗಳಾಡುವಂತೆ ಮಾಡಿದರೆ ಗಾಳಿಯಿಂದ ಮೇಲಕ್ಕೆ ಹತ್ತಿ ಎಷ್ಟು ದೂರವಾದರೂ ಹೋಗಬಹುದೆಂದೂ, ಇನ್ನೂ ಅನೇಕ ಯಂತ್ರಗಳು ನಾಟ್ಯ ಮಾಡುತ್ತಲೂ, ಮಾತನಾಡುತ್ತಲೂ ಮನುಷ್ಯರನ್ನು, ವಿಸ್ಮಯಗೊಳಿಸಿದ್ದುವೆಂದು ಹೇಳಿರುವುದರಿಂದ ಈ ಶಾಸ್ತ್ರಾಧ್ಯಯನವೂ ತತ್ಕರ್ಮಚಾತುರ್ಯವೂ ನಮ್ಮ ಜನಾಂಗದಲ್ಲಿ ಎಷ್ಟರಮಟ್ಟಿಗಿತ್ತೆಂಬುದು ಗೊತ್ತಾಗುತ್ತದೆ. ಮತ್ತೊಂದು ಮಹತ್ತ್ವಪೂರ್ಣವಾದ ವಿದ್ಯೆಯನ್ನು ಶಿಲ್ಪದಲ್ಲಿ ಹೇಳಿರುತ್ತದೆ.

ಅದೇನೆಂದರೆ - ಕದಳೀಗರ್ಭವಿದ್ಯಾ, ಪರ್ಣಲಘುವಿದ್ಯಾ ಎಂದು ಎರಡು ವಿದ್ಯೆಗಳು. ಇವುಗಳಿಂದ ಪ್ರಯೋಜನವೇನೆಂದರೆ –ಕದಳಿಗರ್ಭವಿದ್ಯೆಯಿಂದ ಕಲ್ಲನ್ನು ಮೃದುವಾಗಿ ಮಾಡುವುದು, ಕಲ್ಲನ್ನು ಕರಗಿಸುವುದು ಮತ್ತು ಎಷ್ಟು ಉದ್ದ ಬೇಕಾದರೂ ನೇರವಾಗಿ ಕಲ್ಲನ್ನು ಸೀಳುವುದು. ಪರ್ಣಲಘುವಿದ್ಯೆಯಿಂದ ಕಲ್ಲನ್ನು ಹಗುರವಾಗುವಂತೆ ಮಾಡುವುದು. ನೋಡಿದಿರಾ ! ಇದೆಷ್ಟು ಮಹಿಮೆಯುಳ್ಳದು. ಆಧುನಿಕರು ಇದನ್ನು ನಿಜವೆಂದು ನಂಬುವುದೂ ಕಷ್ಟ. ಇದರ ಸತ್ಯಾಂಶವನ್ನು ನಾವೂ ಊಹಿಸಬಹುದಾದರೆ ಈಗಿರುವ ಹಳೇಬೀಡು ಬೇಲೂರು ಮುಂತಾದ ದೇವಾಲಯಗಳಲ್ಲಿ ಅತಿಸೂಕ್ಷ್ಮವಾಗಿ ಕೆಲಸವನ್ನು

ಮಾಡಿರುತ್ತಾರೆ. ಇದರಲ್ಲಿ ಕೊರೆದಿರುವುದು ಸೂಕ್ಷ್ಮವಾಗಿದ್ದರೂ ಕಂಬಗಳೂ, ಬೋದಿಗೆಗಳೂ, ತೊಲೆಗಳೂ ಅತಿ ದಪ್ಪವಾಗಿಯೂ, ಎತ್ತರವಾಗಿಯೂ, ಮೇಲಕ್ಕೆತ್ತಲಸಾಧ್ಯವಾಗಿಯೂ ಇರುತ್ತವೆ. ಇವುಗಳನ್ನು ನಿಲ್ಲಿಸುವುದಾಗಲಿ, ಮೇಲಕ್ಕೆತ್ತುವುದಾಗಲಿ, ಹೇಗೆ ಹಗ್ಗವನ್ನೂ ಸರಪಣಿಗಳನ್ನೂ ಕಟ್ಟಿದರೂ ಈಗಿನಂತೆ (ಕಪ್ಪಿ) ಚಕ್ರಗಳಿಂದ ಎತ್ತಿದರೂ ಆ ಸೂಕ್ಷ್ಮವಾಗಿ ಕೊರೆದುಬಿಡಿಸಿರುವ ಕೆಲಸಗಳು ಒಂದನ್ನೊಂದು ತಾಕಿ ಮುಕ್ಕೂ ಮೂಳೂ ಆಗಬೇಕಾಗುತ್ತದೆ. ಕೆಲವು ಕಡೆ ದೇವಾಲಯದೊಳಕ್ಕೆ ಮಣ್ಣು ತುಂಬಿ ತೊಲೆಗಳನ್ನೂ ಚಪ್ಪಡಿಗಳನ್ನೂ ಮೇಲಕ್ಕೇರಿಸುವುದುಂಟು. ಹಾಗೆ ಮಾಡಿರುತ್ತಾರೆಂದರೆ ಇದು ಅಸಂಭವ. ಈ ಪರ್ಣಲಘು ವಿದ್ಯೆಯಿಂದಲೇ ಅವರು ಈ ಅಸಾಧ್ಯ ಕೆಲಸವನ್ನು ಸಾಧ್ಯಮಾಡಿರುತ್ತಾರೆಂದು ಸುಲಭವಾಗಿ ಊಹಿಸಬಹುದು. ಇದರಂತೆಯೇ ಇನ್ನೂ ಅನೇಕ ಮರ್ಮವಾದ ವಿದ್ಯೆಗಳು, ಅಂದರೆ ಕಬ್ಬಿಣಕ್ಕೆ ಉಕ್ಕಿನ ಹದ ಕೊಡುವುದು, ಲೋಹಗಳನ್ನು ಹಗುರವಾಗಿ ಮಾಡುವುದು. ಕೃತಕ ಬೆಳ್ಳಿ ಚಿನ್ನ ಮುಂತಾದುವನ್ನು ಮಾಡುವುದು ಇತ್ಯಾದ್ಯನೇಕ ವಿದ್ಯೆಗಳ ಮರ್ಮವನ್ನು ನಮ್ಮವರು ವಂಶಪಾರಂಪರ್ಯವಾಗಿ ತಿಳಿದುಕೊಂಡು ಮಹಾ ಪಂಡಿತ ಪ್ರಕಾಂಡರಾಗಿದ್ದರು. ಇದರಿಂದ ಅವರು ನಿರಂಕುಶಪ್ರಭುಗಳಾಗಿ ಜಗತ್ತನ್ನು ಸ್ವಾಧೀನಮಾಡಿಕೊಂಡಿದ್ದರು. ಇಂತಹ ಮಹತ್ತ್ವವುಳ್ಳ ಶಿಲ್ಪ ವಿದ್ಯಾರಾಜ್ಯವನ್ನೇ ಕಳೆದುಕೊಂಡ ನಾವುಗಳು ತಾಯಿ ಇಲ್ಲದ ತಬ್ಬಲಿ ಮಕ್ಕಳಂತಾಗಿರುವೆವು. ಯುಗಯುಗಗಳಲ್ಲೂ ವ್ಯಾಪಕವಾಗಿದ್ದ ವಿಶ್ವಕರ್ಮ ಮತದ ಸರ್ವೋತ್ಕೃಷ್ಟವೂ, ಪೂಜ್ಯತೆಯೂ, ಮರ್ಯಾದೆಯೂ ಇಂದು ಲುಪ್ತವಾಯಿತು. ಇಷ್ಟಾದರೂ ನೀವುಗಳು ಎಚ್ಚರಿಕೆ ತಂದುಕೊಂಡಿಲ್ಲ. "ಉತ್ತಿಷ್ಠತ ಜಾಗೃತ !" ಏಳಿ, ಎದ್ದೇಳಿ, ಜಾಗೃತರಾಗಿರಿ!

ನಮ್ಮ ಸ್ಥಿತಿ — ಅಭಿವೃದ್ಧಿಗೆ ಸಲಹೆ

ವಿಶ್ವಕರ್ಮ ಜನಾಂಗದವರು ಕಾರ್ಯ ಸಮರ್ಥರಾಗಿದ್ದರೂ ಜೀವನಕ್ಕಿಲ್ಲದೆ ದ್ರವ್ಯಾರ್ಜನೆ ಮಾಡಲವಕಾಶವಿಲ್ಲದೆ ತೊಂದರೆಪಡುವವರ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಿದೆ. ಇದರ ಕಾರಣವನ್ನು ಹೀಗೆ ಹೇಳಬಹುದು: ಭರತಖಂಡದ

ಜನಾಂಗಗಳ ಸುವರ್ಣಸಂಪತ್ತಿಯು ಅನ್ಯದೇಶಗಳನ್ನು ಸೇರುವುದು ಒಂದು. ವಿಶ್ವಕರ್ಮಜನಾಂಗದವರು ಎಲ್ಲ ವಿಧವಾದ ಕೈಗಾರಿಕೆಗಳನ್ನೂ ಅಭ್ಯಾಸ ಮಾಡದೆ ಇರುವುದಿನ್ನೊಂದು. ಈ ಎರಡು ಕಾರಣಗಳಿಂದ ದಾರಿದ್ರ್ಯದೇವತೆಯು ಪ್ರತಿಯೊಬ್ಬರ ಮನೆಯಲ್ಲೂ ಸೇರಿದಳು. ಈ ದುರ್ದೇವತೆಯನ್ನು ಹೊಡೆ ದೋಡಿಸಬೇಕಾದರೆ ಪ್ರತಿಯೊಬ್ಬರ ಮನೆಯಲ್ಲಿಯೂ ಬಾಲಕ ಬಾಲಕಿಯರು ಯಜಮಾನನ ಸಹಾಯಕಾರ್ಯಾಸಕ್ತಿ ಕಷ್ಟಗಳನ್ನು ಸಹಿಸಿಕೊಳ್ಳುವುದು, ಧೈರ್ಯ ಮತ್ತು ಉತ್ಸಾಹದಿಂದಿರುವುದು, ಖರ್ಚು ವೆಚ್ಚಗಳಲ್ಲಿ ಮಿತವಾಗಿರು ವಿಕೆ ಇವುಗಳನ್ನು ಕಲಿತು ಅದರಂತೆಯೇ ನಡೆಯಬೇಕು. ಪ್ರತಿಯೊಬ್ಬನೂ ದಿನಕ್ಕೆ ಎರಡು ಘಂಟೆಗಳ ಕಾಲಕ್ಕೆ ಕಡಿಮೆ ಇಲ್ಲದೆ ಯಾವುದಾದರೂ ಲಾಭಕರ ವಾದ ಉದ್ಯೋಗವನ್ನು ಮಾಡಿಯೇ ತೀರಬೇಕು. ಹೆಂಗಸರು ಪ್ರಾಯಶಃ ಯಾವ ದ್ರವ್ಯಾರ್ಜನೆಯಲ್ಲಿಯೂ ವರ್ತಿಸಕೂಡದೆಂಬ ವಿಧಿಯನ್ನು ಬಿಡಬೇಕು. ಅವರುಗಳೂ ತಮ್ಮ ಕೈಲಾದ ವೃತ್ತಿಯನ್ನವಲಂಬಿಸಿ ಅದರಿಂದ ಸಂಪತ್ತನ್ನು ಗಳಿಸಬೇಕು. ಇತರ ಜನಾಂಗದವರ ಹೆಂಗಸರು ಗಂಡಸರಂತೆಯೇ ಕೆಲಸಗಳನ್ನು ಮಾಡುತ್ತಿರುವುದರಿಂದ ಅವರುಗಳ ಸಂಪತ್ತು ಹೆಚ್ಚುತ್ತಿರುವುದು. ಅಲ್ಲದೆ ವಿಶ್ವಕರ್ಮ ಜನಾಂಗದಲ್ಲಿ ಒಗ್ಗಟ್ಟು ಹೆಚ್ಚಬೇಕು. ದೊಡ್ಡ ಪ್ರಯತ್ನಗಳನ್ನು ಹತ್ತು ಜನಗಳು ಸೇರಿ ಐಕ್ಯಮತ್ಯದಿಂದ ನಡೆಸಬೇಕು. ಈ ಐಕ್ಯಮತ್ಯವು ವಿಶ್ವಕರ್ಮ ಜನಾಂಗದವರಲ್ಲಿ ವಿರಳ. ಪರಸ್ಪರ ದ್ವೇಷಾಸೂಯೆಗಳನ್ನು ಬಿಟ್ಟು, ಸೌಹಾರ್ದದಿಂದ ಒಗ್ಗಟ್ಟಾಗಿ ಕೆಲಸ ಮಾಡುವುದು ನಮ್ಮಲ್ಲಿ ಬರಬೇಕು. ಶಿಲ್ಪಕಲೆಗಳನ್ನೂ, ವ್ಯವಸಾಯಗಳನ್ನೂ, ವ್ಯಾಪಾರಗಳನ್ನೂ ಹೆಚ್ಚಿಸಿ ಅವು ಗಳಿಂದ ಆರ್ಥಿಕ ಸಂಪತ್ತನ್ನು ಸರಿಮಾಡಿಕೊಳ್ಳಬೇಕು. ತಕ್ಕಷ್ಟು ವಿದ್ಯಾ ಭ್ಯಾಸಮಾಡಿ, ಈಗಿನ ಯಾಂತ್ರಿಕ ಕಾರ್ಖಾನೆಗಳಲ್ಲಿ ಕೆಲಸಗಾರರಾಗಿ ಪಳಗಿ ಯಂತ್ರವಿದ್ಯಾನಿಪುಣರಾಗಬೇಕು. ಎಲ್ಲ ವಿಧದ ಕಾರ್ಖಾನೆಗಳಲ್ಲಿಯೂ ಅನು ಭವಪಡೆದು ಉತ್ತಮ ನಿಪುಣರಾಗಬೇಕು. ಈಗ ಕಲಿತಿರುವೆವೆಂದು ಹೆಮ್ಮೆ ಪಡುವ ಕೇವಲ ಚಿನ್ನ ಬೆಳ್ಳಿ ಕೆಲಸಗಳಲ್ಲಿಯೇ ತೊಳಲಾಡದೆ ಸಮಸ್ತ ವಿಧ ಶಿಲ್ಪಕರ್ಮದಲ್ಲಿಯೂ ನಿರತರಾಗಬೇಕು. ಅಂದು ನಾವು ನಿಜವಾಗಿಯೂ ಶಿಲ್ಪಿಗಳಾಗುವೆವು; ಸುಖಿಗಳೂ ಆಗುವೆವು. ಧಾರ್ಮಿಕ, ನೈತಿಕ, ಆರ್ಥಿಕ

ವಿಷಯಗಳಲ್ಲಿ ರಾಜರುಗಳು ಹೇಗೆ ಪ್ರಜೆಗಳನ್ನು ಶಿಕ್ಷಣ ಕೊಟ್ಟುತಿದ್ದುವರೋ ಆದರಂತೆಯೇ ವಿಶ್ವಕರ್ಮ ಪೀಠಾಚಾರ್ಯರಾದ ಗುರುಗಳು ಶಿಷ್ಯರಾದ ತಮ್ಮ ಜನಾಂಗದವರನ್ನು ಚತುರೋಪಾಯದಿಂದ ಬೋಧಿಸಿ ಧರ್ಮಗ್ಲಾನಿಯಾಗ ದಂತೆ ಮಾಡಬೇಕು. ಇವೇ ವಿಶ್ವಕರ್ಮ ಮತೀಯರ ಸಂಪತ್ಸಮೃದ್ಧಿಗೆ ಮೂಲವು.

★

ವೈಶ್ವಕರ್ಮಣ ಯಜ್ಞ

ಯಜ್ಞಸ್ಯ ಚಕ್ಷುಃ ಪ್ರಭೃತಿರ್ಮುಖಂಚ ವಾಚಾ
ಶ್ರೋತ್ರೇಣ ಮನಸಾ ಜುಹೋಮಿ ।
ಇಮಂ ಯಜ್ಞಂ ಪಿತತಂ ವಿಶ್ವಕರ್ಮಣಾ
ದೇವಾ ಯಂತು ಸುಮನಸ್ಯಮಾನಾಃ ॥

(ಅಥರ್ವವೇದ, ೨:೩೫)

ಲೋಕಸಂಗ್ರಹರೂಪ ಯಜ್ಞಕ್ಕೆ (ಎಲ್ಲಾ ಯಾಗಗಳಿಗೂ) ನೇತ್ರ ಸ್ವರೂಪವಾಗಿಯೂ ಮುಖದಂತೆ ಮುಖ್ಯವಾದುದಾಗಿಯೂ ವೈಶ್ವಕರ್ಮಣ ಯಾಗವಿದೆ. ಏಕೆಂದರೆ ಇದರ ಮೂಲಕವೇ ಎಲ್ಲ ಯಜ್ಞಗಳಿಗೂ ಸಿದ್ಧಿ ಯುಂಟಾಗುತ್ತದೆ. ಎಲ್ಲ ದೇವತೆಗಳಿಗೂ ವಿಶ್ವಕರ್ಮನು ನೇತ್ರದಂತೆ ಮುಖ್ಯನು. ಎಲ್ಲ ರೂಪವನ್ನು ಧಾರಣೆಮಾಡಿ ಆ ಮೂಲಕ ತಾನೊಬ್ಬನೇ ವಿಶ್ವವನ್ನು ನಡೆಸುತ್ತಿರುವವನೂ, ಎಲ್ಲ ಯಜ್ಞಗಳಿಲ್ಲಿಯೂ ಮೊದಲು ಹವಿಸ್ಸನ್ನು ಸ್ವೀಕರಿ ಸುವ ಪ್ರಧಾನ ದೈವವೂ, ಆಗಿರುನಂತಹ ಭಗವಂತನನ್ನು ಮಂತ್ರಗಳಿಂದಲೂ, ಸರ್ವೇಂದ್ರಿಯಗಳಿಂದಲೂ, ಅಂತಃಕರಣದಿಂದಲೂ ಧ್ಯಾನಮಾಡಿ ಹೋಮ ಮಾಡುತ್ತೇವೆ. ಈ ಯಾಗ ಮಂತ್ರಗಳಲ್ಲಿ ಉಕ್ತವಾಗಿರುವ ದಿವ್ಯಜ್ಞಾನದ ತಿಳುವಳಿಕೆಯಿಂದ ಕೂಡಿ ಮಾಡಿರುವ ಈ ಯಜ್ಞದಿಂದ ಎಲ್ಲ ದೇವತೆಗಳೂ ಅನುಗ್ರಹರೂಪರಾಗಿ ಯಜ್ಞಕರ್ತನಿಗೂ, ಸಕಲ ಪ್ರಪಂಚಕ್ಕೂ ಕ್ಷೇಮ ವನ್ನುಂಟು ಮಾಡಲಿ.

ಪ್ರೊ. ಉ. ಕಾ. ಸುಬ್ಬರಾಯಾಚಾರ್.
ಎಂ.ಎ.,

೮

ಈಶೋಪನಿಷತ್ತು

ಬಹು ಪ್ರಾಚೀನ ಕಾಲದಿಂದಲೂ 'ಈಶ್ವರ, ಜೀವ, ಜಗತ್ತು --- ಎಂದರೇನು?' ಎಂಬುದರ ಜಿಜ್ಞಾಸೆ ನಡೆಯುತ್ತ ಬಂದಿದೆ. ಉಪನಿಷತ್ತುಗಳಲ್ಲಿ ಮುಮುಕ್ಷುಗಳು ತಮ್ಮ ಗುರುಗಳ ಬಳಿ ಜಿಜ್ಞಾಸೆ ಮಾಡಿದ್ದಾರೆ, ಪ್ರಶ್ನಿಸಿದ್ದಾರೆ, ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡಿದ್ದಾರೆ. ಉಪನಿಷತ್ ಎಂಬ ಪದದಲ್ಲಿ 'ಉಪ' ಮತ್ತು 'ನಿ' ಎಂಬ ಉಪಸರ್ಗಗಳೊಡನೆ 'ಸದ್' ಎಂಬ ಧಾತು ಸೇರಿಕೊಂಡಿದೆ. 'ಉಪ' ಎಂದರೆ ಹತ್ತಿರವೆಂದೂ, 'ನಿ' ಎಂದರೆ ನಿಷ್ಠೆ ಎಂದೂ 'ಸದ್' ಎಂದರೆ ಕುಳಿತುಕೊಳ್ಳುವುದು ಅಂದರೆ ಸಾಮೀಪ್ಯವೆಂದೂ ಅರ್ಥವಾಗುತ್ತದೆ. ಗುರುವಿನ ಬಳಿ ನಿಷ್ಠೆಯಿಂದ ಕುಳಿತು ಕೇಳಿದ ತತ್ತ್ವವೇ ಉಪನಿಷತ್ತು – ಎಂದು 'ಉಪನಿಷತ್' ಎಂಬ ಪದಕ್ಕೆ ಅರ್ಥ ಹೇಳಬಹುದು. ಗುರುವಿನ ಬಳಿ ಏಕಾಗ್ರತೆಯಿಂದ ಮನನ ಮಾಡಿದಾಗ ಮಾತ್ರ ತತ್ತ್ವದ ಗೋಚರ. ಉಪನಿಷತ್ತು ನಮ್ಮ ವಿಚಾರ ಶಕ್ತಿಯನ್ನು ಬೆಳೆಸಿ, ಆತ್ಮಸಾಕ್ಷಾತ್ಕಾರದ ಪಥದ ಮೇಲೆ ಬೆಳಕು ಬೀರುತ್ತದೆ.

ಉಪನಿಷತ್ತುಗಳು ವೇದದ ಕೊನೆಯ ಭಾಗದಲ್ಲಿ ಬರುವುದರಿಂದ ಅವುಗಳಿಗೆ ವೇದಾಂತವೆಂದು ಹೆಸರಾಗಿದೆ. ವೇದಾಂತವೆಂದರೆ ವೇದಗಳ ವಿಕಸಿತಾರ್ಥವೆಂದೂ ಭಾವಿಸಬಹುದು. ಕೆಲವು ವಿದ್ವಾಂಸರ ಪ್ರಕಾರ ಉಪನಿಷತ್ತುಗಳ ಸಂಖ್ಯೆ ೧೭೦. ಆದರೆ ಹತ್ತು ಉಪನಿಷತ್ತುಗಳು ಮುಖ್ಯವಾದವು. ಶ್ರೀ ಶಂಕರಾಚಾರ್ಯರು ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಎಂಬ ಹತ್ತು ಉಪನಿಷತ್ತುಗಳಿಗೇ ಭಾಷ್ಯ ಬರೆದದ್ದು.

'ಈಶ' ಎಂಬ ಪದಕ್ಕೆ ಒಡೆಯ, ಸ್ವಾಮಿ, ಈಶ್ವರ, ಪ್ರಭು, ಪುರುಷ, ಪರಬ್ರಹ್ಮ ಮೊದಲಾದ ಅರ್ಥಗಳಿವೆ. ಪರಬ್ರಹ್ಮನನ್ನು ಕುರಿತದ್ದು ಈಶೋಪನಿಷತ್ತು. ಈ ಉಪನಿಷತ್ತಿನಲ್ಲಿ ಹದಿನೆಂಟು ಮಂತ್ರಗಳಿವೆ. ಇವನ್ನು ರಚಿಸಿದ ಋಷಿಯ ಹೆಸರು ಸರಿಯಾಗಿ ತಿಳಿಯದು. ಕೆಲವರು ಈ ಋಷಿ ದಧ್ಯಙ್ ಆಥರ್ವಣ ಎಂದು ಹೇಳುತ್ತಾರೆ. ಈ ಋಷಿ ಮಧುವಿದ್ಯೆಯ ದ್ರಷ್ಟೃ ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ. ಈಶೋಪನಿಷತ್ತು ಆಕೃತಿಯಲ್ಲಿ ಚಿಕ್ಕದಾದರೂ, ಅದರ ವಿಚಾರಧಾರೆ ವೇದಾಂತಿಗಳ ಗೌರವಕ್ಕೆ ಪಾತ್ರವಾಗಿದೆ. ಈ ಉಪನಿಷತ್ತಿನ ಕೆಲವು ಮಂತ್ರಗಳ ಅರ್ಥ ಕೆಲವೆಡೆ ಅನುಕ್ತ. ಆದುದರಿಂದ ಅದರ ವ್ಯಾಖ್ಯಾನದಲ್ಲಿ ಏಕರೂಪತೆ ಕಾಣದಿರಬಹುದು. ಋಷಿ ತಮ್ಮ ಅನುಭೂತಿಯನ್ನು ಸಂಕ್ಷಿಪ್ತವಾಗಿ ನಿರೂಪಿಸಿರುವುದೇ ಈ ಕಷ್ಟಕ್ಕೆ ಕಾರಣ.

ಈ ಉಪನಿಷತ್ತಿನ ಮೊದಲಲ್ಲಿ ಬರುವ ಶಾಂತಿಪಾಠ ಆಕರ್ಷಣೀಯ. ಅಲ್ಲಿ ಈಶ್ವರನು ಪೂರ್ಣ ಎಂದು ಹೇಳಿದೆ. ಪೂರ್ಣನಾದ ಈಶ್ವರನಿಂದ ಈ ವಿಶ್ವ ಬಂದಿದೆ. ಈ ವಿಶ್ವವೂ ಪೂರ್ಣವೇ. ಪೂರ್ಣನಾದ ಈಶ್ವರನಿಂದ ಪೂರ್ಣವಾದ ಈ ವಿಶ್ವವನ್ನು ತೆಗೆದರೆ ಉಳಿಯುವುದು ಪೂರ್ಣವಾದ ಈಶ್ವರ. ಅವನು ಸದಾ ಪೂರ್ಣ. ಅವನಲ್ಲಿ ಏರಿಳಿತಗಳಿಲ್ಲ. ಒಟ್ಟಿನಲ್ಲಿ ಈಶ್ವರನು ಸಂಪೂರ್ಣ ಎಂಬ ತತ್ತ್ವವನ್ನು ಈ ಶಾಂತಿಪಾಠದಲ್ಲಿ ಹೇಳಿದೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಓಂ ಶಾಂತಿಃ ಶಾಂತಿಃ ಶಾಂತಿಃ

"ಅದು (ಪರಬ್ರಹ್ಮ) ಪೂರ್ಣ, ಇದು (ಈ ವಿಶ್ವ) ಪೂರ್ಣ. ಪೂರ್ಣದಿಂದ ಪೂರ್ಣ ಹೊರಬಂದಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೆ ಉಳಿಯುವುದು ಪೂರ್ಣ."

ಪರಬ್ರಹ್ಮನಿಗೆ ಚ್ಯುತಿ ಇಲ್ಲ. ಅವನು ಪರಿಪೂರ್ಣ. ಅವನು ಅಮರ. ಅವನ ಸೃಷ್ಟಿಯಾದ ಈ ವಿಶ್ವಕ್ಕೂ ಅವನ ಪೂರ್ಣತೆ ಇದೆ. ಈ ವಿಶ್ವಕ್ಕೆ ಪ್ರಳಯವಾದರೆ, ಈಶ್ವರನಿಗೆ ನಷ್ಟವಿಲ್ಲ. ಅವನು ಪೂರ್ಣನೇ ಆಗಿರುತ್ತಾನೆ. ಪರಬ್ರಹ್ಮನಿಗೂ ಅವನ ಸೃಷ್ಟಿಯಾದ ಈ ವಿಶ್ವಕ್ಕೂ ವಿಶೇಷ ಸಂಬಂಧವಿದೆ.

ಈ ಜಗತ್ತು ಅಸ್ಥಿರ, ಮಾಯೆ ಎಂದು ಹಲವರು ಅಲಕ್ಷಿಸುವುದುಂಟು. ಆದರೆ ಈಶೋಪನಿಷತ್ತು, ಈಶ್ವರನು ಈ ಜಗತ್ತಿನಲ್ಲಿಯೂ ವ್ಯಾಪ್ತವಾಗಿದ್ದಾನೆ – ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಜಗತ್ತಿನಲ್ಲಿ ಹುಟ್ಟಿದ ಬಳಿಕ, ಈಶ್ವರನು ನಮಗೆ ಕೊಟ್ಟಿರುವುದರಲ್ಲಿ ತೃಪ್ತರಾಗಿ, ಯಥಾನುಶಕ್ತಿ ತ್ಯಾಗಮಾಡುವುದರ ಮೂಲಕ ಬದುಕಬೇಕು. ಪರರ ವಸ್ತುವನ್ನು ಕಬಳಿಸದೆ, ತನ್ನ ಸತ್ಕರ್ಮದಿಂದ ದೊರೆತುದರಲ್ಲಿ ಸಂತೋಷಗೊಂಡು ಜೀವಿಸುವುದೇ ಧರ್ಮ.

ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್ ॥ ೧ ॥

"ವಿಶ್ವದ ಚಲನೆಯಲ್ಲಿರುವ ಈ ಜಗತ್ತು ಈಶ್ವರನಿಂದ ವ್ಯಾಪ್ತ. ತ್ಯಾಗದ ಮೂಲಕ ಸುಖಿಸುತ್ತ ಬದುಕಬೇಕು. ಪರರ ಧನಕ್ಕಾಗಿ ಆಶೆಪಡಬಾರದು."

ರೋಗರುಜಿನಗಳ ಬೀಡಾದ ಈ ಜಗತ್ತಿನಲ್ಲಿ ಹುಟ್ಟಿದ ಬಳಿಕ, "ಸಾಕು ಮಾಡೋ ಜನ್ಮ, ಸಾಕು ಮಾಡೋ" ಎಂದು ಗೋಳಾಡುತ್ತ, ಬೇಗನೆ ಸಾಯುವುದೇ ಉತ್ತಮವೆಂಬ ಹೇಡಿತನವನ್ನು ಉಪನಿಷತ್ತು ಬೋಧಿಸುವುದಿಲ್ಲ. "ತೇನ ತ್ಯಕ್ತೇನ ಭುಂಜೀಥಾಃ" ಎಂಬ ಭಾಗ ಸ್ವಲ್ಪ ತೊಡಕಾಗಿ ಕಾಣಬಹುದು. ಈ ಭಾಗಕ್ಕೆ ಎರಡು ರೀತಿಯ ಅರ್ಥ ಹೇಳಬಹುದು. ತೇನ = (ತಸ್ಮಾತ್) ಆದುದರಿಂದ, ತ್ಯಕ್ತೇನ ಭುಂಜೀಥಾಃ = ತ್ಯಾಗದಿಂದ ಸುಖಿಸಬೇಕು – ಎಂಬುದು ಒಂದು ಅರ್ಥ. ತೇನ = ಈಶ್ವರನಿಂದ, ತ್ಯಕ್ತೇನ = ದತ್ತವಾದುದನ್ನು, ಭುಂಜೀಥಾಃ – ಸುಖಿಸಬೇಕು ಎಂಬುದು ಮತ್ತೊಂದು ಅರ್ಥ. ಹುಟ್ಟಿದ ಬಳಿಕ ಧೀರರಾಗಿ ಕಷ್ಟಗಳನ್ನು ಎದುರಿಸಿ, ತಮಗೆ ದೊರೆಕಿದುದರಲ್ಲಿ ಸಂತೃಪ್ತರಾಗಿ, ನೂರುವರ್ಷಗಳು ಸಂತೋಷವಾಗಿ ಬದುಕಬೇಕು — ಎಂಬ ಪೌರುಷವಾದ ಆದರ್ಶವನ್ನು ಉಪನಿಷತ್ತು ನಮ್ಮ ಮುಂದೆ ಇಡುತ್ತದೆ. ಸೋಮಾರಿಯಾಗಿ ಹೇಡಿಯಾಗಿ ಜೀವನದಿಂದ ಎಂದಿಗೂ ಪಲಾಯನ ಮಾಡಬಾರದು. ಪ್ರತಿಯೊಬ್ಬರೂ ಕ್ರಿಯಾಶಾಲಿಗಳಾಗಿ ಬದುಕಬೇಕೆಂಬ ಪ್ರಚಂಡ ಕಾರ್ಯೋತ್ಸಾಹವನ್ನು ತುಂಬುತ್ತದೆ ಉಪನಿಷತ್ತಿನ ಸಂದೇಶ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ ೨ ॥

"ಈ ಲೋಕದಲ್ಲಿ ಕರ್ಮ ಮಾಡುತ್ತಲೆ ನೂರವರ್ಷಗಳ ಕಾಲ ಬದುಕಲು ಇಚ್ಛಿಸಬೇಕು. ಮನುಷ್ಯನಿಗೆ ಇದಕ್ಕಿಂತ ಬೇರೆ ಮಾರ್ಗವಿಲ್ಲ. ಕರ್ಮವು ಮನುಷ್ಯನಿಗೆ ಅಂಟುವುದಿಲ್ಲ."

ಜೀವನದ ಗುರಿ ನೈಷ್ಕರ್ಮ್ಯವಲ್ಲ, ಸತ್ಕರ್ಮ ಪ್ರವೃತ್ತಿ. ಕರ್ಮರಂಗ ದಲ್ಲಿರುವ ಆತ್ಮಕ್ಕೆ ಕರ್ಮಲೇಪವಿಲ್ಲ. ನಮ್ಮಲ್ಲಿರುವ ಅಹಂಕಾರವೇ ಸದಾ ಕರ್ಮ ಕ್ಷೇತ್ರದಲ್ಲಿರುವುದರಿಂದ ಅದಕ್ಕೆ ಸುಖ ದುಃಖಗಳ ದ್ವಂದ್ವಾನುಭವ. ಆತ್ಮಕ್ಕೆ ಕೇವಲ ರಸಾನುಭೂತಿ. ಅದಕ್ಕೆ ಕರ್ಮಲೇಪವಿಲ್ಲ. ದೇಹಧಾರಿಯಾದ ಆತ್ಮ ದೊಡನೆ ನಾವು ನೂರುವರ್ಷಗಳ ಕಾಲ ಸತ್ಕರ್ಮ ಮಾಡುತ್ತಲೇ ಬದುಕಬೇಕು. ಸೋಮಾರಿಗಳು ಸತ್ಕರ್ಮದಲ್ಲಿ ತೊಡಗದೆ, ಪರರ ಧನವನ್ನು ಲಪಟಾಯಿಸಿ, ಸಮಾಜಘಾತುಕರಾಗುತ್ತಾರೆ. ಇಂಥವರಿಂದ ಉತ್ಪಾದನೆ ಕುಂಠಿತವಾಗಿ, ಸಮಾಜ ವಿಕಾಸಕ್ಕೆ ಆಘಾತವಾಗುತ್ತದೆ. ದೇಹದಲ್ಲಿ ಶಕ್ತಿ ಇರುವವರೆಗೆ ದುಡಿದು ತಿನ್ನಬೇಕು. ಆತ್ಮವಿಕಾಸಕ್ಕೆ ಅಡ್ಡಿಯನ್ನುಂಟು ಮಾಡುವವರು ಆತ್ಮಘಾತುಕರು. ಅಂಥವರು ಘೋರ ಅಂಧಕಾರದಲ್ಲಿ ಬಿದ್ದು ತೊಳಲಾಡುವರು.

ಅಸೂರ್ಯಾ ನಾಮ ತೇ ಲೋಕಾ ಅಂಧೇನ ತಮಸಾ ವೃತಾಃ |
ತಾಗ್ಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ||೩||

"ಆತ್ಮಘಾತುಕರಾದ ಜನರು ದೇಹ ತ್ಯಜಿಸಿದ ಬಳಿಕ, ಸೂರ್ಯನಿಲ್ಲದ ಗಾಂಢಾಂಧಕಾರ ಲೋಕಗಳನ್ನು ಸೇರುತ್ತಾರೆ."

ಆತ್ಮಕ್ಕೆ ಯಾರೂ ಘಾತವನ್ನುಂಟುಮಾಡಲಾರರು. ಆತ್ಮವನ್ನು ಮರೆಯುವುದು ಆತ್ಮವನ್ನು ಕೊಂದ ಹಾಗೆಯೇ. ಆತ್ಮವನ್ನು ಉಪೇಕ್ಷಿಸಿ, ಅಹಂಕಾರವನ್ನೇ ಸರ್ವಸ್ವವೆಂದು ತಿಳಿದು ಮದಾಂಧರಾಗಿ ಬದುಕುವವರು ಆತ್ಮ ಘಾತುಕರು. ಇಂಥವರು ದೇಹ ತ್ಯಜಿಸಿದ ಬಳಿಕ ಕತ್ತಲಲ್ಲಿ ಬದುಕಬೇಕಾಗು ತ್ತದೆ. ಆತ್ಮಕ್ಕೆ ಸಾವಿಲ್ಲ. ಸಾವಿರುವುದು ಶರೀರಕ್ಕೆ. ಆತ್ಮ ತನ್ನ ಹೊರ ಹೊದಿಕೆ ಯಾದ ಅಹಂಕಾರ, ಮನಸ್ಸು, ಬುದ್ಧಿ, ಶರೀರ—ಇವುಗಳ ಕವಚದೊಂದಿಗೆ ಪುನಃ ಈ ಜಗತ್ತನ್ನು ಪ್ರವೇಶಿಸುತ್ತದೆ. ಜನನ ಮರಣಗಳ ಕೊಂಡಿಯಿಂದ ಕಳಚಿಕೊಂಡು ಪರಬ್ರಹ್ಮನಲ್ಲಿ ಐಕ್ಯವಾಗುವುದೇ ಮೋಕ್ಷ.

ಈ ಆತ್ಮದ ಸ್ವರೂಪವೇನು? ಪರಮಾತ್ಮ ಮತ್ತು ಆತ್ಮ ಕೇವಲವಾಗಿ ಅಭಿನ್ನರು. ಪರಮಾತ್ಮನ ಶಕ್ತಿ ಸಾಮರ್ಥ್ಯಗಳು ಆತ್ಮನಲ್ಲೂ ಇವೆ. ಅದರ

ಸ್ವರೂಪವನ್ನು ಉಪನಿಷತ್ತು ಮನೋಜ್ಞವಾಗಿ ವಿವರಿಸುತ್ತದೆ. ಆತ್ಮವು ಅಚಲ; ಏಕ; ಮನಸ್ಸಿಗಿಂತಲೂ ವೇಗವಾಗಿ ಚಲಿಸಬಲ್ಲುದು. ಅದು ಇಂದ್ರಿಯ ಗಮ್ಯವಲ್ಲ. ಅದು ನಿಶ್ಚಲವಾಗಿದ್ದರೂ ಇತರ ವಸ್ತುಗಳಿಗಿಂತ ವೇಗವುಳ್ಳದ್ದು. ಅದು ವಿಶ್ವಕ್ರಿಯೆಯ ಅಧ್ಯಕ್ಷನಾಗಿ, ದೇಹ, ಪ್ರಾಣ, ಮನಸ್ಸು, ದಿವ್ಯಸತ್ಯ, ದಿವ್ಯ ಆನಂದ, ದಿವ್ಯಚೇತನ ಹಾಗೂ ಇಚ್ಛಾಶಕ್ತಿಗಳನ್ನು ನಿಯಂತ್ರಿಸುತ್ತದೆ.

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥ ೪ ॥

"ಏಕವೂ ಅದ್ವಿತೀಯವೂ ನಿಸ್ಪಂದವೂ ಮನಸ್ಸಿಗಿಂತ ವೇಗವಾದುದೂ ದೇವತೆಗಳು ಮುಟ್ಟಲಾರದುದೂ ಓಡುವ ಎಲ್ಲವನ್ನೂ ನಿಂತಲ್ಲೇ ನಿಂತು ಹಿಮ್ಮೆಟ್ಟಿಸುವುದೂ ಆದ ಆತ್ಮ, ವಿಶ್ವಚೈತನ್ಯದ ಮೂಲಕ ಎಲ್ಲ ಕ್ರಿಯೆಗಳೂ ನಡೆವಂತೆ ಮಾಡುತ್ತದೆ."

ಈ ಮಂತ್ರದಲ್ಲಿ 'ಮಾತರಿಶ್ವಾ' ಹಾಗೂ 'ಅಪಃ' ಎಂಬ ಎರಡು ಪದಗಳು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. 'ಮಾತರಿಶ್ವಾ' ಎಂದರೆ ವಾಯು ವೆಂದೂ 'ಅಪಃ' ಎಂದರೆ ಜಲಪ್ರವಾಹ, ಕರ್ಮಪ್ರವಾಹ ಎಂದೂ ಸಾಮಾನ್ಯ ವಾಗಿ ಅರ್ಥ ಹೇಳುವುದುಂಟು. ಆದರೆ 'ಮಾತರಿಶ್ವಾ' ಎಂಬ ಪದಕ್ಕೆ ವಿಶ್ವ ಚೈತನ್ಯ ಎಂದು ಅರ್ಥಮಾಡಬೇಕು. 'ಅಪಃ' ಎಂಬ ಪದಕ್ಕೆ ಏಳು ವಿಶ್ವತತ್ತ್ವ ಗಳು ಹಾಗೂಅವುಗಳ ಕ್ರಿಯೆ ಎಂದು ಶ್ರೀ ಅರವಿಂದರು ಅರ್ಥ ಹೇಳಿದ್ದಾರೆ. ಆ ಏಳು ತತ್ತ್ವಗಳೆಂದರೆ ದೇಹ, ಪ್ರಾಣ, ಮನಸ್, ದಿವ್ಯ ಸತ್ಯ, ದಿವ್ಯ ಆನಂದ, ದಿವ್ಯ ಇಚ್ಛಾಶಕ್ತಿ ಮತ್ತು ಪ್ರಜ್ಞೆ ಹಾಗೂ ದಿವ್ಯಚೇತನ. ಹೀಗೆ ಉಪನಿಷತ್ತಿನ ಅರ್ಥ ವಿಶಾಲವಾಗುತ್ತದೆ.

ಉಪನಿಷತ್ತಿನ ಋಷಿ ಆತ್ಮಸ್ವರೂಪವನ್ನು ಇನ್ನೊಂದು ಮಂತ್ರದಲ್ಲಿ ಸ್ಪಷ್ಟಪಡಿಸುತ್ತಾರೆ :

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।
ತಂದತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥

"ಅದು (ಆತ್ಮವು) ಚಲಿಸುತ್ತದೆ, ಚಲಿಸುವುದಿಲ್ಲ. ಅದು ದೂರದಲ್ಲಿದೆ, ಹತ್ತಿರದಲ್ಲಿದೆ. ಅದು ಎಲ್ಲದರ ಅಂತರ್ಯದಲ್ಲಿದೆ, ಬಾಹ್ಯದಲ್ಲಿದೆ."

ಇಲ್ಲಿ ಆತ್ಮದ ಅಪಾರ ಶಕ್ತಿಯನ್ನು ಉಪನಿಷತ್ತು ಸ್ಪಷ್ಟಗೊಳಿಸಿದೆ. ಆತ್ಮದ ಅನಂತ ಶಕ್ತಿಯು ಬೋಧೆಯಾದರೆ, ಮಾನವನ ದೃಷ್ಟಿಯೇ ಬೇರೆಯಾಗುತ್ತದೆ. ಆಗ ಬದುಕಿಗೆ ಹೊಸ ಅರ್ಥ ಬರುತ್ತದೆ. ಆ ಸ್ಥಿತಿಯನ್ನು ಕುರಿತ ಋಷಿವಾಣಿ ಮಾನವರಿಗೆ ಹೊಸ ದೃಷ್ಟಿಯನ್ನು ನೀಡುತ್ತದೆ.

ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥ ೬ ॥

"ಯಾರು ಸರ್ವಭೂತಗಳಲ್ಲಿ ಆತ್ಮವನ್ನೇ ಕಾಣುತ್ತಾನೋ, ಆತ್ಮದಲ್ಲಿ ಸರ್ವಭೂತಗಳನ್ನು ಕಾಣುತ್ತಾನೋ ಅಂಥವನು ಜುಗುಪ್ಸೆ ಪಡುವುದಿಲ್ಲ."

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ॥ ೭ ॥

"ಆತ್ಮವೇ ಸರ್ವಭೂತಗಳಾಗಿವೆ ಎಂದು ತಿಳಿದವನಿಗೆ, ಏಕವನ್ನೇ ಕಾಣುವವನಿಗೆ, ಮೊಹವೆಲ್ಲಿ ? ಶೋಕವೆಲ್ಲಿ ?"

ವಿಶ್ವವೆಲ್ಲ ಆತ್ಮವೆಂದು ತಿಳಿದಾಗ ದ್ವಂದ್ವಾನುಭೂತಿ ಇಲ್ಲ. ಆಗ ಆತ್ಮಾನ್ನುಭೂತಿ. ಜಗತ್ತನ್ನು ಬೇರೆಯೆಂದು ಕಾಣದಿರುವಾಗ, ತಾನೂ ಜಗತ್ತೂ ಆತ್ಮವೇ ಎಂದು ತಿಳಿದಾಗ, ಬೇಸರಪಡುವ ಅವಕಾಶವಿಲ್ಲ. ಆತ್ಮವನ್ನು ಎಲ್ಲೆಡೆ ಕಾಣುವವರಿಗೆ ಮೋಹವೂ ಇಲ್ಲ, ಶೋಕವೂ ಇಲ್ಲ. ಅಖಂಡ ವಿಶ್ವವೇ ಆತ್ಮಮಯ. ವಿಶ್ವಾತ್ಮರಾದಾಗಲೇ ಅಖಂಡಾನುಭವ.

ಆತ್ಮ ಪರಮಾತ್ಮನ ಅಂಶ. ಕೇವಲವಾಗಿ ಆತ್ಮ ಪರಮಾತ್ಮರಲ್ಲಿ ವ್ಯತ್ಯಾಸವಿಲ್ಲದಿದ್ದರೂ ಪರಮಾತ್ಮನ ಶಕ್ತಿ ಸ್ವರೂಪಗಳನ್ನು ಸ್ಪಷ್ಟಪಡಿಸಲು ಉಪನಿಷತ್ತು ಯತ್ನಿಸುತ್ತದೆ.

ಸ ಪರ್ಯಗಾಚ್ಛುಕ್ರಮಕಾಯಮವ್ರಣಂ
ಅಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಸ್ಸ್ವಯಂಭೂಃ
ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

"ಅವನು (ಪರಬ್ರಹ್ಮನು) ವ್ಯಾಪಿಸುವ, ಬೆಳಗುವ, ಶರೀರವಿಲ್ಲದ, ಸ್ನಾಯುಗಳಿಲ್ಲದ, ಪಾಪಲೇಪವಿಲ್ಲದ, ವ್ರಣವಿಲ್ಲದ, ಪರಿಶುದ್ಧ ಸ್ವರೂಪನು. ಅವನು ಕವಿ, ಮನೀಷಿ, ಸರ್ವವ್ಯಾಪಿ, ಸ್ವಯಂಭು, ಅನಂತಕಾಲದವರೆಗೆ ಕರ್ತವ್ಯಗಳನ್ನು ಯುಕ್ತರೀತಿಯಲ್ಲಿ ಅನುಶಾಸನಮಾಡಿದ್ದಾನೆ."

ಪರಬ್ರಹ್ಮದ ಸ್ವರೂಪವನ್ನು ಬುದ್ಧಿಪೂರ್ವಕವಾಗಿ ವರ್ಣಿಸುವುದು ಬಹು ಕಷ್ಟವಾದರೂ ಮಂತ್ರದ್ರಷ್ಟಾರರಾದ ಋಷಿ ಆ ಕೆಲಸ ಮಾಡಿದ್ದಾರೆ. ಪರಬ್ರಹ್ಮನ ಪ್ರಕ್ಷೇಪಣವೇ ಈ ಜಗತ್ತು. ಪರಿಭೂಃ ಎಂದರೆ ಸರ್ವತ್ರ ಮುನ್ನಡೆಯುವುದು. ಅವನ ಇಚ್ಛೆಯಂತೆ ಎಲ್ಲವೂ ನಡೆಯುತ್ತದೆ. ಆ ಇಚ್ಛೆ ಸ್ವಾರ್ಥಮೂಲವಾದ ಮನುಷ್ಯನ ಇಚ್ಛೆಯಂತಲ್ಲ. ಅದು ಕಾಲ ದೇಶಾತೀತವಾದ ಇಚ್ಛೆ. ಅವನು ಇಚ್ಛಿಸಿದುದು ಆಗುತ್ತದೆ. ಅದಕ್ಕೆ ವಿರೋಧವಿಲ್ಲ. ಅವನು ತಾನೇ ತಾನಾದವನು. ಅವನಿಗೆ ಅವನೇ ಒಡೆಯ, ಸ್ವಯಂಭು. ಅವನೇ ಈಶ, ಒಡೆಯ. ಅವನು ನಿರ್ಮಲ, ಪಾಪಲೇಪವಿಲ್ಲದವನು. ಅವನು ಮಾಂಸಖಂಡ, ನರ ಮೊದಲಾದವುಗಳಿಂದ ನಿರ್ಮಿತನಾದವನಲ್ಲ. ಅವನು ಪ್ರತಿಭಾವಂತ. ಆದುದರಿಂದ ಅವನನ್ನು ಕವಿ ಎಂದು ಕರೆಯುವುದು. 'ಕವಿ' ಎಂಬ ಪದಕ್ಕೆ ವೇದದಲ್ಲಿ ಕ್ರಾಂತದರ್ಶಿ, ಸತ್ಯದರ್ಶಿ ಎಂಬ ವಿಶಾಲ ಅರ್ಥವಿದೆ. 'ಮನೀಷಿ' ಎಂದರೆ ಮನೋನಿಗ್ರಹವಿರುವವನು. ಮನೀಷಿತ್ವ ಪರಬ್ರಹ್ಮನ ಮತ್ತೊಂದು ಸಾಮರ್ಥ್ಯ. ಜಗತ್ತಿನ ನಿಯಾಮಕನು ಅವನು. ಅವನನ್ನು ಮನುಷ್ಯನ ಆಕೃತಿಯೊಂದಿಗೆ ಹೋಲಿಸಲಾಗುವುದಿಲ್ಲ. ಅವನು ನಿರ್ಗುಣ. ಜಗತ್ತು ಶಾಶ್ವತವಾಗಿ ನಡೆಯುವಂತೆ ಅವನು ವಿಧಾಯಕಮಾಡಿದ್ದಾನೆ. ಪರಬ್ರಹ್ಮನ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಪರಬ್ರಹ್ಮನ ಸಾಕ್ಷಾತ್ಕಾರವಾಗಬೇಕು. ಆಗಲೇ ಜೀವ, ಜಗತ್ತು ಮತ್ತು ಈಶ್ವರ – ಈ ಮೂರರ ಸಂಪೂರ್ಣ ಅರ್ಥ ಸ್ಪಷ್ಟವಾಗುವುದು.

ಆತ್ಮವಿಚಾರ, ಪರಮಾತ್ಮನ ವಿಚಾರ ತಿಳಿಸಿದ ಬಳಿಕ, ಉಪನಿಷತ್ತು ಜಗತ್ತಿನಲ್ಲಿ ಹೇಗೆ ಬದುಕಬೇಕೆಂಬುದರ ಕಡೆಗೆ ಬೆಳಕು ಬೀರುತ್ತದೆ. ಲೌಕಿಕರು ಆತ್ಮಸಾಧನೆಯ ಕಡೆಗೆ ಗಮನವಿಡುವುದಿಲ್ಲ. ಆತ್ಮಸಾಧಕರು ಲೌಕಿಕವನ್ನು ಉಪೇಕ್ಷೆಮಾಡುತ್ತಾರೆ. ಲೌಕಿಕ ಹಾಗೂ ಅಲೌಕಿಕ ದೃಷ್ಟಿಗಳನ್ನು ಸಮನ್ವಯ ಮಾಡುವುದು ಅವಶ್ಯಕ ಎಂದು ಎಚ್ಚರಿಕೆ ನೀಡುತ್ತದೆ ಉಪನಿಷತ್ತು.

ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮು ಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ ॥೯॥

"ಅವಿದ್ಯೆಯನ್ನು ಉಪಾಸನೆ ಮಾಡುವವರು ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ. ವಿದ್ಯೆಯಲ್ಲೇ ರತರಾದವರು ಇನ್ನೂ ಹೆಚ್ಚಿನ ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ."

ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ॥ ೧೦ ॥

"ಅವಿದ್ಯೆಯ ಫಲ ಬೇರೆ, ವಿದ್ಯೆಯ ಫಲ ಬೇರೆ – ಹೀಗೆಂದು ಧೀರರು ನಿರೂಪಿಸಿದ್ದನ್ನು ಕೇಳಿದ್ದೇವೆ."

ವಿದ್ಯಾಂ ಚಾ ವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥ ೧೧ ॥

"ಯಾರು ವಿದ್ಯೆ ಮತ್ತು ಅವಿದ್ಯೆಗಳೆರಡನ್ನೂ ಅರಿಯುವರೋ ಅವರು ಅವಿದ್ಯೆಯ ಮೂಲಕ ಮೃತ್ಯುವನ್ನು ದಾಟಿ, ವಿದ್ಯೆಯ ಮೂಲಕ ಅಮೃತತ್ವವನ್ನು ಪಡೆಯುತ್ತಾರೆ."

ಅಂಧಂ ತಮಃ ಪ್ರವಿಶಂತಿ ಯೇಽಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಗ್ಂ ರತಾಃ ॥೧೨॥

"ಅಸಂಭೂತಿಯನ್ನು ಉಪಾಸನೆ ಮಾಡುವವರು, ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ. ಸಂಭೂತಿಯನ್ನು ಉಪಾಸನೆ ಮಾಡುವವರು ಮತ್ತಷ್ಟು ಅಧಿಕ ಕತ್ತಲೆಯನ್ನು ಪ್ರವೇಶಿಸುತ್ತಾರೆ."

ಅನ್ಯದೇವಾಹುಃ ಸಂಭವಾತ್ ಅನ್ಯದಾಹುರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ॥ ೧೩ ॥

"ಸಂಭೂತಿಯ ಫಲ ಬೇರೆ. ಅಸಂಭೂತಿಯ ಫಲ ಬೇರೆ. ಧೀರರು ಈ ರೀತಿ ವಿವರಿಸಿದ್ದನ್ನು ಕೇಳಿದ್ದೇವೆ."

ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಽಮೃತಮಶ್ನುತೇ ॥ ೧೪ ॥

"ಯಾರು ಸಂಭೂತಿಯನ್ನೂ, ವಿನಾಶವನ್ನೂ ಸಮಗ್ರವಾಗಿ ತಿಳಿಯುವನೋ ಅವನು ವಿನಾಶದ ಮೂಲಕ ಮೃತ್ಯುವನ್ನು ದಾಟಿ, ಸಂಭೂತಿಯ ಮೂಲಕ ಅಮೃತತ್ವವನ್ನು ಪಡೆಯುತ್ತಾನೆ."

ಮೇಲಣ ಆರು ಮಂತ್ರಗಳಲ್ಲಿ ವಿದ್ಯೆ, ಅವಿದ್ಯೆ; ಸಂಭೂತಿ, ಅಸಂಭೂತಿಗಳ ನಿರೂಪಣೆ ಬರುತ್ತದೆ. ವಿದ್ಯೆ ಎಂದರೆ ಆತ್ಮಜ್ಞಾನ, ಅವಿದ್ಯೆ ಎಂದರೆ ಲೋಕಕರ್ಮ. ಸಂಭೂತಿ ಎಂದರೆ ಪರಬ್ರಹ್ಮ, ಅಸಂಭೂತಿ ಎಂದರೆ ಈ ಜಗತ್ತು. ಲೋಕದಲ್ಲಿ ಹುಟ್ಟಿದ ಬಳಿಕ ಸತ್ಕರ್ಮ ಮಾಡುತ್ತಲೆ ನೂರುವರ್ಷ ಬದುಕಲು ಯತ್ನಿಸಬೇಕು. ಆದರೆ, ಜೀವನ ಕೇವಲ ಕರ್ಮದಲ್ಲೇ ಮುಕ್ತಾಯವಾಗಬಾರದು. ಕರ್ಮದೊಡನೆ ಆತ್ಮಜ್ಞಾನವನ್ನು ಸಾಧಿಸಬೇಕು. ಆತ್ಮಜ್ಞಾನವನ್ನು ಮರೆತ ಕರ್ಮ ನಮ್ಮನ್ನು ಘೋರಾಂಧಕಾರದತ್ತ ಎಳೆದೊಯ್ಯುತ್ತದೆ. ಆತ್ಮಜ್ಞಾನಕ್ಕಾಗಿ ವಿರಕ್ತಿ ಮಾರ್ಗದಲ್ಲೇ ಮುನ್ನಡೆಯುತ್ತ, ಆವಶ್ಯಕವಾದ ಲೌಕಿಕ ಕರ್ಮಗಳನ್ನು ಮರೆತರೆ, ಮತ್ತಷ್ಟು ಘೋರಾಂಧಕಾರದಲ್ಲಿ ಬೀಳಬೇಕಾಗುತ್ತದೆ. ಮಾನವನು ಜಗತ್ತಿನಲ್ಲಿ ಹುಟ್ಟಿದ ಬಳಿಕ ಬದುಕಬೇಕಾದರೆ ಕರ್ಮ ಮಾಡಲೇಬೇಕು. ಕರ್ಮವನ್ನು ತ್ಯಜಿಸಿ, ಆತ್ಮಜ್ಞಾನಿಯಾಗುವೆನೆಂದು ಹಂಬಲಿಸಿದರೆ, ಬದುಕಲು ಆವಶ್ಯಕವಾದ ಅರ್ಥದ ಉತ್ಪತ್ತಿಯನ್ನು ನಿರಾಕರಿಸಿದಂತಾಗುತ್ತದೆ. ಅರ್ಥವಿಲ್ಲದಿದ್ದರೆ ಆಹಾರ ಹಾಗೂ ವಸತಿಗಳ ಕೊರತೆ. ಈ ಕೊರತೆಗಳಿಂದ ಶರೀರದ ರಕ್ಷಣೆಯೂ ಅಸಾಧ್ಯವಾಗುತ್ತದೆ. ಆತ್ಮಜ್ಞಾನಸಾಧಕನೂ ಆವಶ್ಯಕವಾದ ಲೌಕಿಕ ಕರ್ಮವನ್ನು ಮಾಡಲೇ ಬೇಕಾಗುತ್ತದೆ. ಲೌಕಿಕ ಕರ್ಮದಲ್ಲಿ ನಿರತರಾದವರು ಆತ್ಮಜ್ಞಾನಕ್ಕಾಗಿ ಯತ್ನಿಸದಿದ್ದರೆ ಅವರು ಮಾಡುವ ಕರ್ಮಕ್ಕೆ ಬೆಲೆ ಬರುವುದಿಲ್ಲ. ಕೇವಲ ಎತ್ತಿನಂತೆ ದುಡಿಯುವುದು ಜೀವನದ ಗುರಿಯಲ್ಲ. ಕರ್ಮದೊಡನೆ ಜ್ಞಾನವೂ ಸೇರಿದಾಗ ಜೀವನಕ್ಕೆ ಬೆಲೆ.

ಮೃತ್ಯುವಿಂದ ಆಚ್ಛಾದಿತವಾದ ಈ ಲೋಕದಲ್ಲಿ ಕ್ಷಣ ಕ್ಷಣವೂ ದೇಹಕ್ಕೆ ವಿಪತ್ತುಗಳು ಬರಬಹುದು. ಆ ವಿಪತ್ತುಗಳಿಂದ ಪಾರಾಗಲು ಕರ್ಮ ಅವಶ್ಯಕ. ರೋಗ ಬಂದರೆ ಔಷಧಬೇಕು. ಔಷಧ ತಯಾರಿಸಲು ಕೆಲಸ ಮಾಡಲೇ ಬೇಕು. ಪ್ರಚಂಡ ಕ್ರಿಯಾಶಕ್ತಿ ಇದ್ದರೆ ಮಾತ್ರ ಮೃತ್ಯುವಿಂದ ಮನುಷ್ಯ ಪಾರಾಗಬಹುದು. ಸಿಡುಬು, ಕಾಲರಾ, ಪ್ಲೇಗ್ ಮೊದಲಾದ ಭಯಂಕರ ರೋಗಗಳು ಮಾನವ ಕುಲವನ್ನೇ ಕಬಳಿಸಲು ಆರಂಭಿಸಿದಾಗ, ವಿಜ್ಞಾನಿಗಳ ಕ್ರಿಯಾಶೀಲ

ಸಂಶೋಧನೆಗಳಿಂದ ಮೃತ್ಯುವನ್ನು ದಾಟುವುದು ಸಾಧ್ಯವಾಯಿತು. ನೂರು ವರ್ಷ ಬದುಕಲು ಇಚ್ಛಿಸಬೇಕು. ಅದು ಸಹಜ. ಅದಕ್ಕಿಂತ ಮೊದಲೇ ಸಾಯುವುದು ಅಸ್ವಾಭಾವಿಕ. ಕೇವಲ ಕರ್ಮ ಅವಿದ್ಯೆಯಾದರೂ ಮೃತ್ಯುವನ್ನು ದಾಟಲು ಸಹಾಯಮಾಡುತ್ತದೆ. ಮನೆ ಕಸದಿಂದ ತುಂಬಿದಾಗ ಅದನ್ನು ಶುಚಿಗೊಳಿಸಬೇಕು. ಶುಚಿಗೊಳಿಸದಿದ್ದರೆ ರೋಗಕ್ಕೆ ಕಾರಣವಾಗುತ್ತದೆ. ರೋಗದಿಂದ ಮೃತ್ಯು ಸನ್ನಿಹಿತ. ಮೃತ್ಯುವನ್ನು ದಾಟಲು ಕರ್ಮ ಆವಶ್ಯಕ. ಕರ್ಮದಿಂದಲೆ ಜೀವನದಲ್ಲಿ ಆರೋಗ್ಯ ಮತ್ತು ಸಂತೋಷ. ಕರ್ಮದಿಂದ ಉತ್ಪತ್ತಿ; ಉತ್ಪತ್ತಿಯಿಂದ ಅರ್ಥಸಂಗ್ರಹ; ಲೌಕಿಕ ಕ್ಷೇಮ; ಲೌಕಿಕ ಕ್ಷೇಮದಿಂದ ಸಂತೋಷ; ಸಂತೋಷದಿಂದ ಆತ್ಮಸಾಧನೆ; ಆತ್ಮಸಾಧನೆಯಿಂದ ಮನಶ್ಶಾಂತಿ. ಹೀಗೆ ಸಿದ್ಧಿಗೆ ಬುನಾದಿ ಸತ್ಕರ್ಮ. ಬದುಕಲು, ಮಳೆ ಚಳಿಗಳಿಂದ ಪಾರಾಗಲು ಮನೆಬೇಕು. ಮನೆಯಾಗಬೇಕಾದರೆ ಅರ್ಥ ಬೇಕು. ಅರ್ಥ ಬೇಕಾದರೆ ದುಡಿಮೆ ಅವಶ್ಯಕ. ದುಡಿಮೆ ಎಂದರೆ ಕರ್ಮ. ಅವಿದ್ಯಾ ರೂಪವಾದ ಕರ್ಮದಿಂದ ಮೃತ್ಯುವನ್ನು ದಾಟಿ, ವಿದ್ಯೆಯ ಮೂಲಕ ಆತ್ಮಜ್ಞಾನಿಯಾಗಬೇಕು.

ಜೀವನ ಸುಂದರವಾಗಬೇಕಾದರೆ, ಆನಂದಮಯವಾಗಬೇಕಾದರೆ, ಪ್ರಚಂಡ ಕ್ರಿಯಾಶಕ್ತಿಯೊಡನೆ ಜ್ಞಾನದ ಸಂಗಮವಾಗಬೇಕು. ಕರ್ಮಜ್ಞಾನಗಳ ಸಂಗಮವೇ ಜೀವನಕ್ಕೆ ಶ್ರೇಯಸ್ಕರ. ಉಪನಿಷತ್ತು ನಾಲ್ಕು ಪ್ರಾರ್ಥನಾ ಮಂತ್ರಗಳೊಡನೆ ಮುಕ್ತಾಯವಾಗುತ್ತದೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥ ೧೫ ॥

"ವಿಶ್ವಪೋಷಕ ಪರಬ್ರಹ್ಮನೆ, ಚಿನ್ನದ ಮುಚ್ಚಳದಿಂದ ಸತ್ಯದ ಮುಖವು ಮುಚ್ಚಿದೆ. ಸತ್ಯಧರ್ಮಾಪೇಕ್ಷಿಯಾದ ನನಗೆ ಆ ಸತ್ಯ ಸಾಕ್ಷಾತ್ಕಾರವಾಗಲು, ಆ ಮುಚ್ಚಳವನ್ನು ತೆಗೆದುಹಾಕು."

ಈ ಲೋಕದ ಹಣ, ಕಾಮನೆ, ಸ್ತ್ರೀಪುರುಷರು, ಭೋಗೋಪಕರಣಗಳು – ಇವೆಲ್ಲ ಚಿನ್ನದ ಮುಚ್ಚಳದಂತೆ ಆಕರ್ಷಣೀಯ. ಪರಮ ಸತ್ಯವನ್ನು ಈ ಆಕರ್ಷಣೆ ಮುಚ್ಚಿದೆ. ಸಾಧಕರು ಆ ಮುಚ್ಚಳದ ಆಚೆಗಿರುವ ಸತ್ಯದರ್ಶನ ಮಾಡಿಕೊಳ್ಳಬೇಕು. ಅದು ಪರಬ್ರಹ್ಮನ ಕೃಪೆಯಿಂದ ಸಾಧ್ಯ. ಅದಕ್ಕಾಗಿ

ಪ್ರಾರ್ಥನೆ. ಪರಮಾತ್ಮ, ಆತ್ಮ ಇವೆರಡರ ತಾದಾತ್ಮ್ಯವೆ ಸತ್ಯ ಸಾಕ್ಷಾತ್ಕಾರ. ಆ ಸಾಕ್ಷಾತ್ಕಾರದಿಂದ ತಿಳಿಯುತ್ತದೆ, 'ಸೋಽಹಮಸ್ಮಿ' – 'ಅವನೇ ನಾನು' ಎಂಬ ಪರಮ ರಹಸ್ಯ !

ಪೂಷನ್ನೇಕರ್ಷೇ ಯಮ ಸೂರ್ಯ
ಪ್ರಾಜಾಪತ್ಯ ವ್ಯೂಹ ರಶ್ಮೀನ್ ಸಮೂಹ
ತೇಜೋ ಯತ್ತೇ ರೂಪಂ ಕಲ್ಯಾಣತಮಂ
ತತ್ತೇ ಪಶ್ಯಾಮಿ ಯೋಽಸಾವಸೌ ಪುರುಷಃ ಸೋಽಹಮಸ್ಮಿ ||೧೬||

"ವಿಶ್ವಪೋಷಕ ಪರಬ್ರಹ್ಮನೆ, ಏಕಾಂಗಿಯಾಗಿ ಸಂಚರಿಸುವವನೆ, ಯಮನೆ, ಪಿತಾಶಕ್ತಿಯೆ, ಸೂರ್ಯನೆ, ನಿನ್ನ ಕಿರಣಗಳನ್ನು ಸುವಿನ್ಯಾಸಗೊಳಿಸು, ನಿನ್ನ ತೇಜಸ್ಸನ್ನು ಸೆಳೆದುಕೋ. ನಿನ್ನ ಕಲ್ಯಾಣತಮ ರೂಪವನ್ನು ನಿನ್ನ ಅನುಗ್ರಹದಿಂದ ನೋಡುತ್ತೇನೆ. ಅದೋ ! ಆದೋ ಪುರುಷ ! ಅವನೇ ನಾನು !"

ಈ ಮಂತ್ರದಲ್ಲಿ ಉಪನಿಷತ್ತಿನ ಋಷಿ ಪರಮಸಾಕ್ಷಾತ್ಕಾರದ ಅನುಭೂತಿಯನ್ನು ವಿವರಿಸಲು ಯತ್ನಿಸಿದ್ದಾರೆ. ಪರಬ್ರಹ್ಮನನ್ನು ವಿಶ್ವಪೋಷಕ, ಏಕಾಂಗಿ, ಸಂಚಾರಿ, ವಿಶ್ವನಿಯಂತ್ರಕನಾದ ಯಮ, ಸೃಷ್ಟಿಶಕ್ತಿಯಾದ ಪ್ರಾಜಪತ್ಯ, ಜ್ಯೋತಿ ಸ್ವರೂಪನಾದ ಸೂರ್ಯ ಎಂದು ಹಲವು ಪ್ರತಿಮೆಗಳ ಮೂಲಕ ಸಂಬೋಧಿಸಿ, ಪರಮಾತ್ಮನು ಸರ್ವಶಕ್ತಿವಾನ್ ಎಂಬುದನ್ನು ಸುಪ್ರಕಟಗೊಳಿಸಲು ಉಪನಿಷತ್ತಿನ ಋಷಿ ಯತ್ನಿಸಿದ್ದಾರೆ. ಪ್ರಾಜಾಪತ್ಯ ಎಂದರೆ ಜೀವರಾಶಿಗಳ ತಂದೆಯಾದ ಪರಬ್ರಹ್ಮನ ಸೃಷ್ಟಿಸುವ ಶಕ್ತಿ. ಯಮನೆಂದರೆ ಮೃತ್ಯುದೇವತೆ ಎಂದು ಸಾಮಾನ್ಯ ಅರ್ಥ. ಯಮನೆಂದರೆ ಜಗನ್ನಿಯಂತ್ರಕ ಶಕ್ತಿ. ಸೂರ್ಯನೆಂದರೆ ಜ್ಞಾನಜ್ಯೋತಿ. ಪರಬ್ರಹ್ಮನ ಸಾಕ್ಷಾತ್ಕಾರವಾದೊಡನೆ ತಿಳಿಯುತ್ತದೆ 'ಪರಬ್ರಹ್ಮನೇ ನಾನು' ಎಂಬ ಪರಮ ರಹಸ್ಯ.

ವಿವೇಕಿಗಳು ತಮ್ಮ ತಮ್ಮ ಪರೀಕ್ಷೆಯನ್ನು ಆಗಾಗ ಮಾಡಿಕೊಳ್ಳುತ್ತಿರಬೇಕು. ಸಂಕಲ್ಪ ಸಾಮರ್ಥ್ಯವುಳ್ಳ ಕ್ರತುಶಕ್ತಿಯಿಂದ ಮತ್ತೆ ಮತ್ತೆ ಸನ್ಮಾರ್ಗದೆಡೆಗೆ ಮುನ್ನಡೆಯಲು ಯತ್ನಿಸಬೇಕು.

ವಾಯುರನಿಲಮಮೃತಮಥೇದಂ ಭಸ್ಮಾಂತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಗ್ಂ ಸ್ಮರ ಕ್ರತೋ ಸ್ಮರ ಕೃತಗ್ಂ ಸ್ಮರ ||೧೭||

"ಪ್ರಾಣವಾಯುವು ಅಮೃತಸ್ವರೂಪ. ಭಸ್ಮವಾಗುವುದೇ ಈ ಶರೀರ. ಸಂಕಲ್ಪ ಸಾಮರ್ಥ್ಯವುಳ್ಳ ಇಚ್ಛಾಶಕ್ತಿಯೇ, ಸ್ಮರಿಸು ಇದುವರೆಗೆ ನಡೆದುದನ್ನು ಸ್ಮರಿಸು ಇಚ್ಛಾಶಕ್ತಿಯೇ, ಸ್ಮರಿಸು ಇದುವರೆಗೆ ನಡೆದುದನ್ನು ಸ್ಮರಿಸು."

ವಾಯು ಎಂದರೆ ಮಾತರಿಶ್ವಾ. ಮಾತರಿಶ್ವಾ ಎಂದರೆ ವಿಶ್ವಕ್ರಿಯೆಯ ಕೇಂದ್ರವಾದ ದಿವ್ಯ ಜೀವನಶಕ್ತಿ. ಅದು ಅಮೃತ. ಅದಕ್ಕೆ ಸಾವಿಲ್ಲ ಅದೇ ಆತ್ಮ. ಸಾವಿರುವುದು ಶರೀರಕ್ಕೆ. ಶರೀರ ಭಸ್ಮವಾಗಿ ಅಂತ್ಯವಾಗುತ್ತದೆ. ಸಂಕಲ್ಪ ಸಾಮರ್ಥ್ಯವುಳ್ಳ ಇಚ್ಛಾಶಕ್ತಿಯನ್ನು ಸಂಬೋಧಿಸಿ, ಉಪನಿಷತ್ತಿನ ಋಷಿ ಅಂತರಾವಲೋಕನದ ಆವಶ್ಯಕತೆಯನ್ನು ಹೇಳಿದ್ದಾರೆ. ನಮ್ಮ ಪರೀಕ್ಷೆಯನ್ನು ಆಗಾಗ ಮಾಡಿಕೊಂಡು ಮುಂದೆ ಆಗಬೇಕಾದುದನ್ನು ಇಚ್ಛಿಸಬೇಕು. ನಮ್ಮಲ್ಲಿ ಅಂತರ್ಗತವಾಗಿರುವ ಕ್ರತುಶಕ್ತಿ ಇಚ್ಛಿಸಿದ್ದು ನಡೆದು ಹೋಗುತ್ತದೆ. ಅಂಥ ಪ್ರಚಂಡ ಶಕ್ತಿ ಕ್ರತು. ಉಪನಿಷತ್ತಿನ ಋಷಿಗಳು, ಸಮಸ್ತ ಜೀವನದ ಕಾರ್ಯಗಳನ್ನು ಅಂತರಾವಲೋಕನ ಮಾಡಿ, ಮುಂದೆ ಮಾಡಬೇಕಾದುದನ್ನು ನೆನೆದು ಕೃತ ಸಂಕಲ್ಪರಾಗಬೇಕೆಂದು ಎಚ್ಚರಿಸಿದ್ದಾರೆ. ಉಪನಿಷತ್ತು ಮುಕ್ತಾಯವಾಗುವುದು ಪ್ರಾರ್ಥನಾ ಮಂತ್ರದಿಂದ.

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನಃ
ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥ ೧೮ ॥

"ದೇವದೇವನಾದ ಸಕಲ ಕರ್ಮರಹಸ್ಯವನ್ನು ತಿಳಿದ ಅಗ್ನಿಯೆ, ನಮ್ಮನ್ನು ಪರಮ ಆನಂದದ ಕಡೆಗೆ, ಒಳ್ಳೆಯ ಮಾರ್ಗದಲ್ಲಿ ಕರೆದುಕೊಂಡು ಹೋಗು. ಕುಟಿಲ ಪಾಪದಿಂದ ನಮ್ಮನ್ನು ಬಿಡುಗಡೆ ಮಾಡು. ನಿನಗೆ ಅನಂತ ನಮಸ್ಕಾರಗಳನ್ನು ಹೇಳುತ್ತೇವೆ."

ಅಗ್ನಿಗೆ ವೇದದಲ್ಲಿ ವಿಶೇಷ ಸ್ಥಾನ. ಅವನು ದಿವ್ಯದೃಷ್ಟಿಯುಳ್ಳವನು, ಸಂಕಲ್ಪ ಸಾಮರ್ಥ್ಯವುಳ್ಳ ಕ್ರತು ಹಾಗೂ ಸತ್ಯಸ್ವರೂಪ. ನಮ್ಮ ಚಿದಗ್ನಿ ಪ್ರಜ್ವಲಿಸದಿದ್ದರೆ, ಕಣ್ಣಿದ್ದೂ ಕತ್ತಲಲ್ಲಿ ಬದುಕಬೇಕಾಗುತ್ತದೆ. ಜ್ಞಾನ ಮತ್ತು ಶಕ್ತಿಗಳ ಪ್ರತಿನಿಧಿ ಅಗ್ನಿ. ಅಂಥ ಶಕ್ತಿಯನ್ನು ಆಹ್ವಾನಿಸಿ ಮಾಡಿದ ಪ್ರಾರ್ಥನೆ

ಈ ಮಂತ್ರ. ಈ ಅಗ್ನಿ ನಮ್ಮಲ್ಲಿ ಪ್ರಜ್ವಲಿಸಿದರೆ, ಪಾಪದಿಂದ ಮುಕ್ತರಾಗಿ, ಸನ್ಮಾರ್ಗದಲ್ಲಿ ಮುನ್ನಡೆದು ಆನಂದಮಯರಾಗುತ್ತೇವೆ. ವ್ಯಕ್ತಿಯನ್ನು ಅಧಃ ಪತನಕ್ಕೆ ತಳ್ಳುತ್ತದೆ ಪಾಪಕರ್ಮ. ಪುಣ್ಯಕ್ಕೆ ಪ್ರೇರಕ ಋಜುಕರ್ಮ. ಕುಟಿಲ ಪಥವನ್ನು ತ್ಯಜಿಸಿ, ಸತ್ಪಥದಲ್ಲಿ ನಡೆಯಬೇಕಾದುದು ಮಾನವನ ಕರ್ತವ್ಯ.

ಈಶೋಪನಿಷತ್ತನ್ನು ರಚಿಸಿದ ಕಾಲದಲ್ಲಿ ಪ್ರಧಾನವಾಗಿ ಎರಡು ಜೀವನ ಮಾರ್ಗಗಳಿದ್ದು ಅವು ಪ್ರವೃತ್ತಿಮಾರ್ಗ ಮತ್ತು ನಿವೃತ್ತಿಮಾರ್ಗ.

ನಿವೃತ್ತಿಮಾರ್ಗ	ಪ್ರವೃತ್ತಿಮಾರ್ಗ
ಪರಬ್ರಹ್ಮ	ಲೋಕ
ವೈರಾಗ್ಯ	ಭೋಗ
ಶಮ	ಕರ್ಮ
ಏಕತೆ	ಅನೇಕತೆ
ಮೋಕ್ಷ	ಜನ್ಮ
ಜ್ಞಾನ	ಅಜ್ಞಾನ

ನಿವೃತ್ತಿ ಮಾರ್ಗದಲ್ಲಿ ನಡೆವವರು ಪರಬ್ರಹ್ಮನ ಸಾಕ್ಷಾತ್ಕಾರವೆ ಗುರಿ ಯೆಂದು ಭಾವಿಸಿ, ವೈರಾಗ್ಯದಿಂದ ಶಮವನ್ನು ಸಾಧಿಸುತ್ತ ಜ್ಞಾನಮಾರ್ಗದ ಮೂಲಕ ಮೋಕ್ಷವನ್ನು ಪಡೆಯಬೇಕೆಂಬ ಏಕಮಾರ್ಗವನ್ನು ದೃಷ್ಟಿಯನ್ನಿಟ್ಟು ಕೊಂಡರು. ಪ್ರವೃತ್ತಿಮಾರ್ಗದಲ್ಲಿ ನಡೆವವರು ಲೋಕದ ಭೋಗವನು ಗುರಿಯಾಗಿಟ್ಟುಕೊಂಡು, ಅಜ್ಞಾನದಲ್ಲಿರುತ್ತ ಕರ್ಮಮಾರ್ಗಾವಲಂಬನೆಯಲ್ಲಿ ತೊಡಗಿ ಅನೇಕ ಕಡೆಯಲ್ಲಿ ಮನಸ್ಸನ್ನು ಹರಿಸಿದರು. ಉಪನಿಷತ್ತು ಈ ಎರಡು ಮಾರ್ಗಗಳನ್ನು ಸಮನ್ವಯ ಮಾಡಿ, ಜೀವನಕ್ಕೆ ಹೊಸ ಬೆಳಕು ನೀಡಿದೆ. ಜಗತ್ತನ್ನು ಉಪೇಕ್ಷೆ ಮಾಡುತ್ತ ಜೀವನದ ಸುಖ ಸಂತೋಷಗಳನ್ನು ಅಲ್ಲಗಳೆ ಯುವುದು ಸರ್ವಥಾ ಸಾಧುವಲ್ಲ. ಜಗತ್ತು ಕೂಡ ಈಶ್ವರನ ಅವಾಸಸ್ಥಾನ. ಈ ರಹಸ್ಯವನ್ನು ತಿಳಿದು ಸತ್ಕರ್ಮ ಮಾಡುತ್ತ ನೂರುವರ್ಷಗಳ ಕಾಲ ಬದು ಕಲು ಇಚ್ಛಿಸಬೇಕು. ಪರರ ವಸ್ತುವಿಗೆ ಆಶೆಪಡಬಾರದು. ಹಾಗೆ ಆಶೆ ಪಡುವವರು ಸೋಮಾರಿಗಳಾಗಿ ಪರೋಪಜೀವಿಗಳಾಗುತ್ತಾರೆ, ಆತ್ಮದ ವಿಕಾಸಕ್ಕೆ ವಿಘ್ನತರುತ್ತಾರೆ. ಇಂಥವರು ಘೋರಾಂಧಕಾರದಲ್ಲಿ ಬಿದ್ದು ಪರಿತಪಿಸ ಬೇಕಾಗುತ್ತದೆ.

ಆತ್ಮವು ಅಂತರ್ಯಾಮಿಯಾಗಿ ಒಳಗಿರಬಹುದು, ಹೊರಗೂ ಇರಬಹುದು. ಅದು ಸ್ಥಾಣುವಾಗಿರಬಹುದು, ಚಲಿಸಲೂಬಹುದು. ಎಲ್ಲ ಜೀವರಾಶಿಗಳನ್ನು ತನ್ನ ಆತ್ಮದಲ್ಲಿಯೂ, ಆತ್ಮವನ್ನು ಎಲ್ಲ ಜೀವರಾಶಿಗಳಲ್ಲಿಯೂ ಕಾಣುವ ಶಕ್ತಿ ಬಂದರೆ, ಜೀವನದಲ್ಲಿ ಜುಗುಪ್ಸೆ ಬರುವುದಿಲ್ಲ. ಅಂಥವರಿಗೆ ಬೇಜಾರಿಲ್ಲ, ಅಶಾಂತಿ ಇಲ್ಲ. ಎಲ್ಲೆಲ್ಲಿಯೂ ಇರುವುದು ಆತ್ಮವೊಂದೇ ಎಂಬ ಭಾವನೆ ಮೂಡಿದಾಗ ಶೋಕವೂ ಇರುವುದಿಲ್ಲ, ಮೋಹವೂ ಇರುವುದಿಲ್ಲ.

ಪರಮಾತ್ಮನು ಜ್ಯೋತಿರೂಪ, ತಾನೇ ತಾನಾದ ಸ್ವಯಂಭು, ಅವನಿಗೆ ಅಂಗಗಳಿಲ್ಲ, ಅವನು ದ್ರಷ್ಟಾರ, ಸರ್ವಜ್ಞ, ಸರ್ವವ್ಯಾಪಿ ಮತ್ತು ಜಗತ್ತಿನ ಸಕಲ ಗತಿವಿಧಿಗಳನ್ನು ನಿಯಾಮಕ ಮಾಡುವವನು. ಆತ್ಮವು ಅವನ ಅಂಶ. ಪರಬ್ರಹ್ಮನ ಸಾಕ್ಷಾತ್ಕಾರವಾದಾಗ ಆತ್ಮವು ಅವನಲ್ಲಿ ಲೀನ. ಆಗ ದ್ವೈತ ಭಾವನೆ ಮಾಯವಾಗಿ ಅದ್ವೈತಸಿದ್ಧಿ.

ಈ ಲೋಕದಲ್ಲಿ ವಿದ್ಯೆಯೂ ಇದೆ, ಅವಿದ್ಯೆಯೂ ಇದೆ. ವಿದ್ಯೆ ಎಂದರೆ ಬ್ರಹ್ಮವಿದ್ಯೆ, ಅವಿದ್ಯೆ ಎಂದರೆ ಲೌಕಿಕ ಕರ್ಮ. ಲೌಕಿಕ ಕರ್ಮ ಮಾಡುತ್ತಲೆ ಬ್ರಹ್ಮನನ್ನು ಅರಿಯಬೇಕು. ಜಗತ್ತೆಂಬುದು ಪರಬ್ರಹ್ಮನನ್ನು ಮುಚ್ಚಿರುವ ಚಿನ್ನದ ಮುಚ್ಚಳ. ಆ ಮುಚ್ಚಳದ ಹಿಂದೆ ಇರುವವನೇ ಪರಬ್ರಹ್ಮ. ಚಿನ್ನದ ಮುಚ್ಚಳದ ಸೊಬಗಿಗೆ ಮಾರುಹೋಗಿ, ಅದರ ಹಿಂದಿರುವ ಪರಬ್ರಹ್ಮನನ್ನು ಮರೆಯಬಾರದು. ಪರಬ್ರಹ್ಮನನ್ನು ತಿಳಿದಾಗ ಪರಬ್ರಹ್ಮನೂ ಆತ್ಮನೂ ಬೇರೆಯಲ್ಲ ಎಂಬ ಜ್ಞಾನೋದಯವಾಗುತ್ತದೆ.

ಮಾನವರು ಪ್ರತಿದಿನವೂ ತಾವು ಮಾಡಿದುದನ್ನು ಸಮೀಕ್ಷೆ ಮಾಡಿಕೊಳ್ಳಬೇಕು. ಆತ್ಮಕ್ಕೆ ಸಾವಿಲ್ಲ. ಶರೀರ ಭಸ್ಮವಾಗುವಂಥದು. ಆದುದರಿಂದ ಪ್ರತಿಯೊಬ್ಬರೂ ತಮ್ಮ ಕರ್ಮಗಳನ್ನು ಸಮೀಕ್ಷೆ ಮಾಡಿಕೊಳ್ಳುತ್ತ ಉತ್ತಮ ಮಾರ್ಗದಲ್ಲಿ ಮುನ್ನಡೆದು ಆನಂದಾನುಭೂತಿ ಮಾಡಿಕೊಳ್ಳಬೇಕು. ಈ ಲೋಕ ಭಗವಂತನಿಂದ ವ್ಯಾಪ್ತವಾದುದರಿಂದ ಮಹತ್ವಪೂರ್ಣ. ಲೌಕಿಕದೊಡನೆ ಆಧ್ಯಾತ್ಮದ ಸೇರ್ಪಡೆಯಾದರೆ, ಜೀವನಕ್ಕೆ ಹೊಸ ಬೆಳಕು. ಆಧ್ಯಾತ್ಮವೆಂದರೆ ಕೌಪೀನಧಾರಿಯಾಗಿ ಮರದ ಕೆಳಗಡೆ ಬಿದ್ದಿರುವುದೆಂದಲ್ಲ. ಲೌಕಿಕವೆಂದರೆ ಕಾಮಕಾಂಚನದಲ್ಲಿಯೆ ಮುಳುಗಿರುವುದೆಂದಲ್ಲ. ಸಮತ್ವ ದೃಷ್ಟಿಯಿಂದ ಸಾಮರಸ್ಯವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕುವುದೇ ನಿಜವಾದ ಜೀವನ. ಆ ಮಹತ್ವಪೂರ್ಣ ಜೀವನಕ್ಕೆ ದಾರಿ ದೀಪ ಈಶೋಪನಿಷತ್ತು. ★

೯

ವಿದ್ಯಾಲಂಕಾರ, ಅಧ್ವರ್ಯುಶಿರೋಮಣಿ
ವಿಶ್ವಕರ್ಮಜ್ಞಾನಧುರೀಣ, ವಿದ್ಯಾಭೂಷಣ

● ನಾ. ಭಾ. ಚಂದ್ರಶೇಖರಾಚಾರ್ಯ

ಈಶಾವಾಸ್ಯವು ವಿಶ್ವಕರ್ಮೋಪನಿಷತ್ತು

ಉಪನಿಷತ್ತುಗಳಲ್ಲಿ ಗಾತ್ರದಲ್ಲಿ ಅತ್ಯಂತ ಕಿರಿಯದೂ, ವಿಷಯ ವ್ಯಾಪ್ತಿಯಲ್ಲಿ ಅತ್ಯಂತ ಮಹತ್ತರವಾದದ್ದೂ ಆಗಿದ್ದು ಎಲ್ಲಾ ಆಚಾರ್ಯರ ಗಮನವನ್ನು ಸೆಳೆದು ಹಲವು ಭಾಷ್ಯಗಳನ್ನು ಪಡೆದಿರುವ ಈಶಾವಾಸ್ಯೋಪನಿಷತ್ ವಿಶ್ವಕರ್ಮ ಪಾರಮ್ಯವನ್ನು ಚೊಕ್ಕವಾಗಿ ನಿರೂಪಿಸುವ ಶ್ರೇಷ್ಠ ಉಪನಿಷತ್ತು. ಈಶಾವಾಸ್ಯೋಪನಿಷತ್ತು ಶುಕ್ಲಾಯಜುರ್ವೇದದ ಅಂತಿಮ ಭಾಗದಲ್ಲಿ ದೊರೆಯುತ್ತದೆ. ಉಪನಿಷತ್ತಿನ ಪ್ರವರ್ತಕ ದಧ್ಯಙ್‌ಆಥರ್ವಣ ಮಹರ್ಷಿ. ಈ ಮಹರ್ಷಿಯು ತ್ವಾಷ್ಟ್ರ ವಿದ್ಯೆ ಎಂದು ಪ್ರಖ್ಯಾತವಾದ ಮಧುವಿದ್ಯೆಯ ಜ್ಞಾನವನ್ನು ಜಗತ್ತಿಗೆ ಹಂಚಿದವನು ಮಧುವಿದ್ಯೆ ಅಥವ ಬ್ರಹ್ಮವಿದ್ಯೆ ಎಂದು ಹೆಸರಾಗಿರುವ ಈ ಜ್ಞಾನ ನಿಕ್ಷೇಪವನ್ನು ಪರಂಪರಾನುಗತವಾಗಿ ಪಡೆದು ರೂಢಿಸಿಕೊಂಡು ಜಗತ್ಕಲ್ಯಾಣವನ್ನು ಸಾಧಿಸಿದವರ ಪರಂಪರೆಯನ್ನು ಶುಕ್ಲಯಜುರ್ವೇದದ ಉಪನಿಷತ್ತುಗಳಲ್ಲಿ ಒಂದಾದ ಬೃಹದಾರಣ್ಯಕೋಪನಿಷತ್ತು ಮಧುಕಾಂಡದಲ್ಲಿ ನೀಡುತ್ತದೆ. ಆ ಪರಂಪರೆಯಲ್ಲಿ ಶಿಲ್ಪರ್ಷಿಗಳು ಹಲವು ಮಂದಿ ಕಂಡು ಬರುತ್ತಾರೆ. ಇನ್ನೂ ನಿಖರವಾಗಿ ಹೇಳಬೇಕೆಂದರೆ ಪ್ರಾರಂಭದಿಂದ ಹದಿನಾರನೆಯ ತಲೆಮೂರಿನವರೆವಿಗೂ ಸ್ಪಷ್ಟವಾಗಿ ಶಿಲ್ಪರ್ಷಿಗಳೇ ಕಾಣಿಸುತ್ತಾರೆ. ಎಂದರೆ ಈ ವಿದ್ಯೆಯು ಪ್ರಾರಂಭವಾದುದು ತ್ವಷ್ಟ್ರವಿನಲ್ಲಿ. ನಂತರ ವಿಕಸಿತಗೊಂಡದ್ದು ಅದೇ ಪರಂಪರೆಯ ಶಿಲ್ಪರ್ಷಿಗಳಲ್ಲಿ. ದಧ್ಯಙ್ ಆಥರ್ವಣ ಮಹರ್ಷಿಯೂ ಈ ಸಂಪ್ರದಾಯಕ್ಕೆ ಸೇರಿದ ಮಹರ್ಷಿಗಳಲ್ಲಿ ಒಬ್ಬ.

ಈಶಾವಾಸ್ಯವು ಶುಕ್ಲಯಜುರ್ವೇದದ ಉಪನಿಷತ್ತಾದುದರಿಂದ ಶುಕ್ಲ ಯಜುರ್ವೇದಕ್ಕೆ ವಿಶ್ವಕರ್ಮ ಬ್ರಾಹ್ಮಣ ಸಂಪ್ರದಾಯದವರು ನೀಡಿರುವ ಪ್ರಾಶಸ್ತ್ಯವನ್ನು ವಿಶ್ಲೇಷಿಸುವುದು ಆವಶ್ಯಕ. ವಿಶ್ವಕರ್ಮರು ಪಂಚವೇದಗಳ ವಿಭಜನೆ ಇರಿಸಿಕೊಂಡಿರುವುದು ಅನೇಕರಿಗೆ ಸಮಸ್ಯಾತ್ಮಕವಾಗಿಯೇ ಕಾಣಿಸು ತ್ತಿದೆ. ಐದನೆಯ ವೇದವೆಂದರೆ 'ಪ್ರಣವ ವೇದ' ವೆಂದೂ ಹೇಳುತ್ತಾ ಬಂದಿ ದ್ದಾರೆ. "ಈ ವೇದ ಎಲ್ಲಿದೆ?" ಎಂದು ಪ್ರಶ್ನಿಸುವವರ ಸಂಖ್ಯೆಯೂ ಕಡಿಮೆ ಯಾಗಿಲ್ಲ. ಶುಕ್ಲಯಜುರ್ವೇದವನ್ನೆ ಈ ಸಂಪ್ರದಾಯಸ್ಥರು ಪ್ರಣವವೇದವೆಂದು ಅಂಗೀಕರಿಸಿದ್ದಾರೆ. ಸಂಸ್ಕೃತ **ವಿಶ್ವಕರ್ಮ ಪುರಾಣವು** ಈ ಸಂಗತಿಯನ್ನು ಜಗಜ್ಜಾಹಿರಗೊಳಿಸುವಂತೆ ಐದನೆಯ ಶಾಖಾಪುರುಷನಾದ ವಿಶ್ವಜ್ಞನು 'ಪ್ರಥಮ ಶಾಖೆ'ಯವನೆಂದು ಸಾರಿದೆ. ಪ್ರಥಮ ಶಾಖೆ ಎಂದರೆ ಶುಕ್ಲ ಯಜುರ್ವೇದವೆಂಬುದನ್ನು ಬೇರೆಯಾಗಿ ಹೇಳುವ ಆವಶ್ಯಕತೆ ಇಲ್ಲ. ಈ ಶಾಖಾ ಪ್ರವರ್ತಕ ವಿಶ್ವಜ್ಞ. ಇವನಿಗೆ ಸೂರ್ಯನೆಂಬ ಪರ್ಯಾಯ ನಾಮವೂ ಇದೆ. ಸೂರ್ಯನು (ವಿವಸ್ವಾನ್) ತ್ವಷ್ಟೃವಿನ ಅಳಿಯ [ತ್ವಷ್ಟೃವಿಶ್ವಕರ್ಮನ ಮಗ ಳಾದ ಸಂಜ್ಞಾ ದೇವಿಯನ್ನು ಸೂರ್ಯನು ವಿವಾಹ ಮಾಡಿಕೊಂಡದ್ದನ್ನು ಹಲವು ಪುರಾಣಗಳೂ ವಿವರಿಸಿವೆ ಎಂಬ ಸಂಗತಿಯನ್ನು ಇಲ್ಲಿ ನೆನಪು ಮಾಡ ಬಹುದು.] ಶುಕ್ಲಯಜುರ್ವೇದದ ದ್ರಷ್ಟಾರನಾದ ಯಜ್ಞವಲ್ಕ್ಯನಿಗೆ ಸೂರ್ಯನೆ ಕುದುರೆಯ ರೂಪದಲ್ಲಿ ಈ ಸಂಹಿತೆಯನ್ನು ನೀಡಿದನೆಂದು ಪ್ರತೀತಿ. ಆದ್ದ ರಿಂದಲೇ ಈ ಸಂಹಿತೆಯನ್ನು ವಾಜಸನೇಯವೆಂದೂ ಕರೆಯಲಾಗುತ್ತದೆ. ಈಶಾ ವಾಸ್ಯೋಪನಿಷತ್ತನ್ನೂ ವಾಜಸನೇಯೋಪನಿಷತ್ತು ಎಂದು ಕರೆಯಲಾಗು ತ್ತದೆ. ಯಾಜ್ಞವಲ್ಕ್ಯ ಮಹರ್ಷಿಯು ಜನಕಮಹಾರಾಜನಿಗೆ ಕರ್ಮಯೋಗವನ್ನು ಭೋಧಿಸಿದನೆಂಬುದು ಕರ್ಮಯೋಗಿಗಳಾಗಿ ಜ್ಞಾನಯೋಗವನ್ನು ರೂಢಿಸಿ ಕೊಂಡ ಶಿಲ್ಪಪರಂಪರೆಯ ಮಹತ್ವವನ್ನು ಸೂಚಿಸುತ್ತದೆ. ಕರ್ಮಜ್ಞಾನ ಸಮುಚ್ಚಯಾತ್ಮಕವಾದ ಶುಕ್ಲ ಯಜುರ್ವೇದದ ಮಹತ್ತ್ವವನ್ನು ಗುರುತಿಸಿದ ಶಿಲ್ಪ ಪರಂಪರೆಯವರು ಅದನ್ನು ಪ್ರಣವವೇದವೆಂದು ಸರ್ವವೇದಗಳ ಮೂಲ ತತ್ತ್ವವೆಂದು ಗೌರವಿಸಿ ಅದಕ್ಕೆ ವಿಶೇಷ ಸ್ಥಾನವನ್ನು ನೀಡಿದರು. ಈ ವೇದದ ಉಪನಿಷತ್ತಾದ ಈಶಾವಾಸ್ಯೋಪನಿಷತ್ತಿಗೆ ಭಾಷ್ಯವೇ ಬೃಹದಾರಣ್ಯ ಕೋಪನಿಷತ್ತು ಎಂದೂ ಪರಿಗಣಿಸಲಾಗುತ್ತದೆ.

ಪುರುಷಸೂಕ್ತವನ್ನು ಪೂರ್ಣರೂಪದಲ್ಲಿ ಕೊಟ್ಟಿರುವ ಗೌರವಕ್ಕೆ ಯಜುರ್ವೇದವು ಅರ್ಹವಾಗಿರುವುದರಿಂದ ಪುರುಷನೆಂದರೆ ಯಾರೆಂಬುದನ್ನೂ ಅದೇ ಸ್ಪಷ್ಟೀಕರಿಸುತ್ತಾ ಆತ ವಿಶ್ವಕರ್ಮನಲ್ಲದೆ ಬೇರೆಯಲ್ಲವೆಂದು ನಿಖರಗೊಳಿಸುತ್ತದೆ. ಪುರುಷ ಎನ್ನುವ ಶಬ್ದವೇ ವಿಶ್ವಕರ್ಮ ಸೂಕ್ತದ ಅರ್ಥವನ್ನು ಪ್ರತಿನಿಧಿಸುತ್ತದೆ. **ಪುರಾಃ ಅವಿಶತ್ ಇತಿ ಪುರುಷಃ** (ಬೃಹದಾರಣ್ಯಕ ೨:೬:೧೮) ಎಂದು ಹೇಳಿ ವಿಶ್ವಕರ್ಮ ಸೂಕ್ತದ ಅನುಪ್ರವೇಶ ತತ್ತ್ವವನ್ನು ಪುನರುಚ್ಚರಿಸಿದೆ. ಅನುಪ್ರವೇಶದಿಂದ ರೂಪುಗೊಂಡ ಪುರುಷನೇ ವಿಶ್ವಕರ್ಮನೂ ಹೌದು ಎಂದು ಪುರುಷ ಸೂಕ್ತವೇ ಹೇಳುತ್ತದೆ.

ಹಾಗಿದ್ದರೆ **'ಈಶ'** ಯಾರು?

ಈಶನೆಂದರೆ ಒಡೆಯ; ನಿಯಂತ್ರಕ; ಆದೇಶ ನೀಡುವವ; ಆಡಳಿತ ಸೂತ್ರಗಳನ್ನು ನಿರ್ವಹಿಸುವುವವ; ಸರ್ವಶಕ್ತ; ಸರ್ವಶ್ರೇಷ್ಠನಾಗಿ ಸಕಲರ ಅಧಿಷ್ಠಾತೃವಾಗಿರುವ ಪ್ರಪಂಚ, ಅಷ್ಟೇ ಏನು ಸರ್ವ ಜಗತ್ತುಗಳೂ ಅವನದೇ ಸೃಷ್ಟಿ. ಅವನೇ ಜಗತ್ತಿನ ರೂಪವನ್ನು ಧಾರಣ ಮಾಡಿರುವವನು. ಈ ರೀತಿ ಜಗದ್ರೂಪಧಾರಣಾಧಾರಿಯು ವೇದ ಮತದಲ್ಲಿ ವಿಶ್ವಕರ್ಮನಲ್ಲದೆ ಅನ್ಯನಿಲ್ಲ. ಜಗತ್ತೇ ಅವನ ವಾಸಸ್ಥಾನ. ಆದ್ದರಿಂದ ಜಗತ್ತೆಲ್ಲವೂ ಈಶನಿಂದ ಆವರಿಸಲ್ಪಟ್ಟು ಈಶಾವಾಸ್ಯವಾಗಿದೆ. ಅದನ್ನು ಸೃಷ್ಟಿಸಿದ ಆ ಈಶನು ತಾನೇ ಅದರಲ್ಲಿ ಪ್ರವೇಶಿಸಿ ಅದಕ್ಕೆ ಜೀವದ ತೇಜವನ್ನು ತಂದು ಕೊಟ್ಟಿದ್ದಾನೆ. ವೇದಗಳಲ್ಲಿ [ಋಗ್ವೇದ ೧೦ : ೮೧ ಮತ್ತು ೮೨ ಹಾಗೂ ಕೃಷ್ಣ ಯಜುರ್ವೇದ ४: ೬:೨] ಉಪಲಬ್ಧವಾಗುವ ವಿಶ್ವಕರ್ಮ ಸೂಕ್ತದ ಮೊದಲ ಮಂತ್ರದಲ್ಲಿಯೇ ವಿವರಿಸಲ್ಪಟ್ಟಿರುವ ಅನುಪ್ರವೇಶ ತತ್ತ್ವವು ಈ ಸಂಗತಿಯನ್ನು ಸ್ಪಷ್ಟೀಕರಿಸುತ್ತದೆ. ಪ್ರಪಂಚದ ಚರ-ಅಚರ ವಸ್ತುಗಳೆಲ್ಲವು ಅವನಿಂದ ಆವರಿಸಲ್ಪಟ್ಟು, ಅವನಿಂದ ನಿರ್ವಹಿಸಲ್ಪಟ್ಟು, ಅವನ ಆಳ್ವಿಕೆಗೇ ಒಳಗಾಗಿವೆ. ಜಗತ್ತು ಗತಿಶೀಲವಾದುದು. ಈ ನಿಯಮಕ್ಕೆ ಬಾಹಿರವಾದ ವಸ್ತುವೇ ಯಾವುದೂ ಇಲ್ಲ. ಜಗತ್ತಿನ ಎಲ್ಲಾ ವಸ್ತುಗಳು ಅಣುಗಳಿಂದ ಮಾಡಲ್ಪಟ್ಟಿವೆ ಎಂಬುದನ್ನು ತಾವು ಬಲ್ಲಿರಿ. ಅದರ ಅಣುಗಳಲ್ಲಿ ಎಲೆಕ್ಟ್ರಾನ್‌ಗಳಿವೆ. ಈ ಎಲೆಕ್ಟ್ರಾನ್‌ಗಳ ಸ್ವಭಾವವೇ ಚಲನೆ. ಆದ್ದರಿಂದ ಪ್ರತಿ ವಸ್ತುವಿನಲ್ಲೂ ಚಲನೆ ಅದರ ಸ್ವಾಭಾವಿಕ ಕ್ರಿಯೆಗಳಲ್ಲಿ ಸೇರಿರುತ್ತದೆ. ಈ ಚಲನೆಯೂ ಕರ್ಮವೇ. ವಿಶ್ವವು ಈ ರೀತಿ ಸದಾ

ಕರ್ಮರತವಾಗಿರುವುದೇ ವಿಶ್ವಕರ್ಮ. ಆದ್ದರಿಂದಲೇ ವೈದಿಕ ಮಂತ್ರ ದ್ರಷ್ಟಾರರು ಜಗತ್ಕಾರಣ ಪುರುಷನನ್ನು ವಿಶ್ವಕರ್ಮ ಎಂದು ಹೇಳಿದರು.

ಸರ್ವಕಾಲಿಕನೂ, ಸರ್ವಾಂತರ್ಯಾಮಿಯೂ, ಸನಾತನನೂ ಆದ ವಿಶ್ವ ಕರ್ಮನ ಕ್ರಿಯಾ ವ್ಯಾಪಾರವೇ ಈ ವಿಶ್ವ. ಎಂದರೆ ಈ ವಿಶ್ವದ ಸೃಷ್ಟಿಗೆ ಅವನ ಚಿದ್ವ್ಯಾಪಾರ ಮೂಲ ಕಾರಣ. ಚಿತ್ ಎಂಬುದು ಸತ್‌ನ ಕ್ರಿಯಾ ರೂಪ. ಸತ್ತಿನಲ್ಲಿಯೇ ಚಿತ್ ಅಂತರ್ನಿಹಿತವಾಗಿರುತ್ತದೆ. ಅದರ ಶಕ್ತಿಯೇ 'ಶಕ್ತಿ' ಚಿತ್. ಎಂದರೆ ಮನಸ್ಸು. ಈ ಸೃಷ್ಟಿಯಲ್ಲಿ ಸಕಲ ವ್ಯಾಪಿಯಾಗಿರುವ ಮನಸ್ಸೇ ಎಲ್ಲಾ ಕ್ರಿಯೆಗಳ ಮೂಲ. ಅದೂ ಆಕಾಶ ಜನ್ಯವೇ. ಸಕಲೈಕನಾಥನಿಂದ ಸೃಷ್ಟಿ ಕಾರಣ ಹೇತುವಾಗಿ ಹೊರ ಹೊಮ್ಮಿದ ಮೊದಲ ತತ್ತ್ವವೇ ಆಕಾಶ. ಆ ಆಕಾಶದಿಂದ ಶಬ್ದ ಅಥವ ವಾಕ್ ಹೊರಬಂದಿದೆ. ಈ ವಾಕ್ಕನು ಸರಸ್ವತಿ ಎಂದೂ ಕರೆಯಲಾಗುತ್ತದೆ. ವಿಶ್ವಕರ್ಮನನ್ನು **ವಾಚಸ್ಪತಿ** ಎಂದು ಸಂಬೋಧಿಸ ಲಾಗಿದೆ **[ವಾಚಸ್ಪತಿಂ ವಿಶ್ವಕರ್ಮಾಣಮೂತಯೇ].** ಮನಸ್ಸಿನ ಅಭಿವ್ಯಕ್ತ ರೂಪವೇ ವಾಕ್ಕೆಂಬುದು ಸ್ಪಷ್ಟವಾದ್ದರಿಂದ ವಿಶ್ವಕರ್ಮನು ಮನಸ್ಸಿನ ಒಡೆಯನು. ವಿಶ್ವಕರ್ಮನ ಸೃಷ್ಟಿಕರ್ಮದ ಪ್ರಥಮ ಸೃಷ್ಟಿಯಾದ ಪಂಚ ಭೂತ ಗಳಲ್ಲಿ ಆಕಾಶವು ಮೊದಲಿನದು. ಇಂತು 'ಸರ್ವೇಶನ ಕರ್ಮವ್ಯಾಪಾರ ಫಲವಾಗಿಯೇ ಜಗತ್ತು ರೂಪುಗೊಂಡು ಅವನ ನಿಯಂತ್ರಣಕ್ಕೆ ಒಳಪಟ್ಟಿದೆ ಅದೇ ಅವನ ನಿವಾಸವೂ ಆಗಿದೆ' ಎಂಬುದೇ ಈಶಾವಾಸ್ಯೋಪನಿಷತ್ತಿನ ಮೊದಲ ಮಂತ್ರದ ಪೂರ್ವಾರ್ಧ ಭಾಗದ ಸಾರಾಂಶ.

ಆ ಮಂತ್ರದ ಉತ್ತರ ಭಾಗವು ಈ ಜಗತ್ತೆಲ್ಲವು ನನ್ನದಲ್ಲವೆಂದು ತ್ಯಾಗ ಮನೋಭಾವದಿಂದ ದಾನ ಮಾಡುವುದು ಮತ್ತು ಅನುಭವಿಸಿದ್ದನ್ನು ಅದು ಈಶ್ವರ ಪ್ರಸಾದವೆಂದು ಭಾವಿಸುವುದು **(ತೇನ ತ್ಯಕ್ತೇನ ಭುಂಜೀಥಾಃ)** ಈ ಭಾವಕ್ಕೆ ಮೂಲ ಆಕರವು ವಿಶ್ವಕರ್ಮ ಸೂಕ್ತವೇ. ಜಗತ್ತೆಲ್ಲಾ ಸರ್ವಾಂತರ್ಯಾಮಿಯದೇ ಆದ್ದರಿಂದ ಇಲ್ಲಿಯದು ಯಾವದೂ ಅಲ್ಲ. ಲಭಿಸಿದ್ದು ವಿಶ್ವಕರ್ಮನ ಪ್ರಸಾದವೆಂದು ಅನುಭವಿಸಬೇಕು. ಈ ಸೃಷ್ಟಿಯೆಲ್ಲವೂ ಅವನ ಸಂಕಲ್ಪದ ಫಲ. ಅದನ್ನು ೧೭ನೇ ಮಂತ್ರದಲ್ಲಿ 'ಕ್ರತು' ಎಂದು ಇದೇ ಉಪನಿಷದ್‌ನಲ್ಲಿ ಹೇಳಲಾಗಿದೆ. ಕ್ರತುವೆಂದರೆ ವಿಶ್ವಕರ್ಮನು ಸೃಷ್ಟಿಕಾಮನಾ

ನಡೆಸಿದ ಮೊದಲ ಯಜ್ಞವೇ. ಈ ಕ್ರತುವಿನ ಫಲವಾಗಿ ಆತನು ಕಾರುಣ್ಯ ಸಿಂಧುವಾಗಿ ನಮ್ಮ ಸೌಖ್ಯಾರ್ಥವಾಗಿ ಸೃಷ್ಟಿಸಿಗೊಳ್ಳುವುದನ್ನು ಸ್ಮರಿಸಬೇಕು.

[ಕ್ರತೋ ಸರ್ಮ ಕೃತಗ್ಂ ಸ್ಮರ]

ಈಶಾವಾಸ್ಯೋಪನಿಷತ್ತು ಈ ರೀತಿಯಲ್ಲಿ ವಿಶ್ವಕರ್ಮ ಸೂಕ್ತದಲ್ಲಿ ಅಭಿವ್ಯಕ್ತವಾಗಿರುವ ಭಾವಗಳನ್ನು ಮಾತ್ರ ತೆಗೆದುಕೊಂಡಿದೆಯಾದರಿಂದ ಅದು ವಿಶ್ವಕರ್ಮ ಉಪನಿಷತ್ ಎಂದು ಹೇಳುತ್ತಿಲ್ಲ. ಈ ಉಪನಿಷತ್ತು ಪ್ರತಿಪಾದಿಸುವ ತತ್ವವು ವಿಶ್ವಕರ್ಮ ಸೂಕ್ತದಿಂದ ಮೊದಲ ಬಾರಿಗೆ ವ್ಯಕ್ತವಾಗಿರುವ ದರ್ಶನವೇ ಆದ್ದರಿಂದ ಇದು ವಿಶ್ವಕರ್ಮೋಪನಿಷತ್ ಎಂದು ಹೇಳಿದ್ದು. ಕರ್ಮ ಎಂದರೆ ಕೇವಲ ಯಾಜ್ಞಿಕ ಕ್ರಿಯೆ ಅಥವ ಆಚಾರವೆಂದು ಅರ್ಥವಲ್ಲ. ತನ್ನ ಜೀವನಕ್ಕಾಗಿ ಅನ್ಯರ ಹಿತಕ್ಕೆ ಧಕ್ಕೆಯುಂಟು ಮಾಡದಂತೆ ನಡೆಸುವ ಎಲ್ಲಾ ಕ್ರಿಯೆಗಳೂ ಕರ್ಮ ಎಂದೇ ಕರೆಯಲ್ಪಡುತ್ತವೆ. ಸ್ವಾರ್ಥ ಮನೋಭಾವದಿಂದ ನೆರವೇರಿಸುವ ಕರ್ಮಗಳು ಬಂಧನವಾದರೆ ನಿಸ್ವಾರ್ಥಭಾವದಿಂದ ನಡೆಸುವ ಕರ್ಮಗಳು ಮುಕ್ತಿಯತ್ತ ಕೊಂಡೊಯ್ಯುತ್ತವೆ. ಕರ್ಮ ಎಂಬುದು ಮಾನವನು ತನ್ನ ಬುದ್ಧಿ ಶಕ್ತಿಯನ್ನು ಜಗತ್ತಿನ ಸೇವೆಗಾಗಿ ಬಳಸಿಕೊಂಡು. ಅವನು ಹಾಗೂ ಅವನೊಂದಿಗೆ ಇತರರೂ ಶ್ರೇಯಸ್ಸನ್ನು ಸಾಧಿಸುವುದಕ್ಕಾಗಿಯೇ ದೇವರು ನೀಡಿರುವ ಅಸ್ತ್ರ. ಕರ್ಮವು ಲೌಕಿಕದಲ್ಲಿ ಕಲೆ-ವಿಜ್ಞಾನವಾಗಿ ಅರಳುತ್ತದೆ. ಅದು ಸರ್ವರ ಹಿತಕಾಮನೆಗಾಗಿಯೇ ಮುಡುಪಾದುದು. ಕರ್ಮ ವಿಮುಖತೆಗೆ ಇಲ್ಲಿ ಎಡೆಯೇ ಇಲ್ಲ. ಕರ್ಮದಿಂದ ಬಂಧಿತರಾಗಿರುವವರೆಲ್ಲರೂ ಕರ್ಮಯೋಗಿಗಳಲ್ಲ. ಸದಾ ಕಾಲದಲ್ಲೂ ನಿರ್ವಿರಾಮನಾಗಿ ಕರ್ಮರತನಾಗಿರುವ ವಿಶ್ವಕರ್ಮನ ಈ ವಿಶ್ವಕರ್ಮಾಗಾರದ ಕಾರ್ಯಾಂಬುಧಿಯಲ್ಲಿ ಆಳಕ್ಕೆ ಇಳಿಯುವ ಸಾಹಸೀ ಯೋಗಿಯಾದವನು ಮಾತ್ರವೇ ನೈಷ್ಕರ್ಮ್ಯವನ್ನು ಸಿದ್ಧಿಸಿಕೊಂಡು, ತನ್ನ ನಿರ್ಲಿಪ್ತ ಕರ್ಮತಪದಿಂದ ಸಕಲರ ಶ್ರೇಯಸ್ಸನ್ನು ಸಾಧಿಸುತ್ತಾ, ಈ ಜಗತ್ತಿನಿಂದ ದೂರವಾಗಿ ವಿಶ್ವಕರ್ಮನ ಪಾದಾರವಿಂದವನ್ನು ಕಂಡುಕೊಳ್ಳುತ್ತಾನೆ. ಈ ಜಗತ್ತಿನಲ್ಲಿಯೇ ಸರ್ವ ವ್ಯಾಪಕನಾಗಿರುವ ಅವನ ಸೇವೆ ಎಂದರೆ ಜಗತ್ತಿನ ಸೇವೆಯೇ ಎಂಬುದನ್ನೂ ಅವನು ಚೆನ್ನಾಗಿ ಕಂಡುಕೊಂಡಿರುತ್ತಾನೆ.

ಈ ರೀತಿಯ ಕರ್ಮಯೋಗವನ್ನು ಅಲ್ಲಗಳೆದು, ಇದು ಬಂಧನಕಾರಿ ಎಂದುಭ್ರಮಿಸಿ, ಕೇವಲ ಪ್ರಾರ್ಥನೆ ಆಚಾರಾದಿಗಳು, ಜಿಜ್ಞಾಸೆ-ಮೀಮಾಂಸೆ

ನ್ನಾಕ್ಷೀಗಪ್ರಧಾನವನ್ನಾಗಿರಿಸಿಕೊಂಡು, ಸರ್ವಸಂಗ ಪರಿತ್ಯಾಗದಿಂದಲೇ ಮಾತ್ರ ಜೀವನದ ಪರಮೋದ್ದೇಶವನ್ನು ಸಾಧಿಸಲು ಸಾಧ್ಯವೆಂದು ಅನ್ಯರ ಖರ್ಚಿನಲ್ಲಿ ತಮ್ಮ ಬಾಳನ್ನು ನಿರ್ವಹಿಸುವಂತಹ ವೈಗಳ್ಳರ ಗುಂಪೊಂದು ಹೇಗೋ ಪ್ರಾರಂಭವಾಯಿತು. ಅವರು ಈ ಜಗತ್ತಿನ ಕರ್ಮ – ವಿಶ್ವಕರ್ಮವನ್ನು– ಅವಿದ್ಯೆಯೆಂದೂ, ಕೇವಲ ಜ್ಞಾನವನ್ನು ಸಂನ್ಯಾಸವನ್ನು ವಿದ್ಯೆ ಎಂದು ಕರೆದರು. ಈ ವಿಭಜನೆಯಿಂದ ಎಲ್ಲಾ ಕಲೆಗಳು, ವಿಜ್ಞಾನಗಳು, ವ್ಯವಹಾರಗಳು ಅವಿದ್ಯೆಯ ಅಂಗಗಳೇ ಆದವು. ಈ ಭಾವನೆಯಿಂದ ಮನುಷ್ಯನಲ್ಲಿದ್ದ ಪೌರುಷವು ಕರಗಿ, ಅವರಲ್ಲಿ ಕರ್ಮನಿರ್ವಹಣೆಯ ಬಗ್ಗೆ ಇದ್ದ ಗೌರವ ಭಾವವನ್ನು ಇಲ್ಲ ದಂತೆ ಮಾಡಿ, ಜನಸಂಕುಲದ ಉಳಿವಿಗಾಗಿ, ಬಳಕೆಗಾಗಿ ಲಭ್ಯವಾಗುತ್ತಿದ್ದ ಅನೇಕ ವಸ್ತು ಸಾಮಾಗ್ರಿಗಳನ್ನು ಇಲ್ಲದಂತೆ ಮಾಡಿ ರಾಷ್ಟ್ರವನ್ನೇ ಬಡತನದ ಭೂತದ ಬಾಯಿಗೆ ಸಿಲುಕಿಸುವಂತಾಯಿತು. ಸುಖ ಸಮೃದ್ಧಿಗಳು ಯಾರ ಶತೃ ಗಳೂ ಅಲ್ಲ ಎಂಬುದೇ ಮರೆತು ಹೋಯಿತು. ಬದಲಾಗಿ ಅವು ಜೀವನದ ಶ್ರೇಷ್ಠದಾರ್ಶನಿಕ ಮೌಲ್ಯವನ್ನು ಪಡೆಯಲು ಇರುವ ಬಲವಾದ ತಡೆಗಳೆಂಬ ಭಾವನೆ ಬೇರೂರಿತು. ಆದ್ದರಿಂದಲೇ 'ಕರತಲಭಿಕ್ಷಾ ತರುತಲವಾಸವೇ' ಜೀವನದ ಪರಮ ಧ್ಯೇಯವೆನ್ನುವಂತೆ ಪ್ರಚಾರ ಸಾಗಿತು.

ಆದರೆ ವೇದ ಕಾಲದಲ್ಲಿದ್ದ ಋಷಿಗಳಾರೂ ಈ ರೀತಿಯಲ್ಲಿ ಅನ್ಯರಿಗೆ ಭಾರವಾಗುವ ಜೀವನವನ್ನು 'ಬಾಳು' ಎಂದು ಸಂಕಲ್ಪಿಸಿಕೊಂಡಿರಲಿಲ್ಲ. ಬದ ಲಾಗಿ 'ಇತರರು ಸಂಪಾದಿಸಿದ ಧನದಿಂದ ನಾನು ಸೌಖ್ಯವನ್ನು ಅನುಭವಿಸ ಬೇಕಾದ ಸ್ಥಿತಿಯಲ್ಲಿ ನನ್ನನ್ನು ಇಡಬೇಡ' (**ಮಾಹಂ ರಾಜನ್ನನ್ಯಕೃತೇನ ಭೋಜನಮ್** – ಋ ೨:೨೮:೯) ಎಂಬುದು ಅವರ ಅನುದಿನದ ಪ್ರಾರ್ಥನೆ ಯಾಗಿತ್ತು. ಮಾನವ ಲೋಕೋಪಕಾರಿಯಾಗುವಂತೆ ಬಾಳ ಬೇಕೆಂಬುದೇ ಭೃಗು, ಅಥರ್ವಣ, ಅಂಗೀರಸ ಋಷಿಗಳ ಉತ್ಕಟೇಚ್ಛೆಯಾಗಿತ್ತು. ಸಕಲ ಜನ ಕಲ್ಯಾಣಕರವಾದ ಕರ್ಮಮಾರ್ಗವೇ ವಿಶ್ವಕರ್ಮನ ಸಿದ್ಧಾಂತ. ಅದನ್ನು ಅಪಾರ್ಥಕ್ಕೆ ಗುರಿಮಾಡಿ ಅದನ್ನು ಅಪಚಾರಕ್ಕೆ ಗುರಿಮಾಡಲಾಯಿತು. ಈ ಭಾವನೆಯನ್ನು ಬೇರುಸಹಿತ ಕಿತ್ತು ಜನಕಲ್ಯಾಣಕಾರಿಯಾದ ಭಾವನೆಯನ್ನು ಮೂಡಿಸುವುದು ಆವಶ್ಯವಾಗಿತ್ತು. ಈ ಕಾರ್ಯವನ್ನು ಮಾಡಲೆಂದೇ ಈಶಾ ವಾಸ್ಯೋಪನಿಷತ್ತು ರೂಪುಗೊಂಡು 'ಅವಿದ್ಯೆ-ವಿದ್ಯೆಗಳೆರಡೂ ಮಾನ್ಯವಾದವು ;

ಆಚರಿಸಬೇಕಾದವು. ಆದ್ದರಿಂದ ಸಂಭೂತಿಯನ್ನು (ವ್ಯಕ್ತವಾದುದನ್ನು) ಆರಾಧಿಸುವಂತೆಯೇ ಅಸಂಭೂತಿ (ಅವ್ಯಕ್ತವಾದುದು) ಯನ್ನೂ ಆರಾಧಿಸಬೇಕು. ಆದ್ದರಿಂದ ಪ್ರಾಪಂಚಿಕ ಕರ್ಮವನ್ನು ಅವಿದ್ಯೆ ಎನ್ನುವುದು ಅಸಮರ್ಪಕ. ಅದು ವಿದ್ಯೆಯಿಂದ ಬೇರೆ ಎನ್ನುವುದು ಮೂರ್ಖತನ. ಎರಡರಿಂದಲೂ ಅಮೃತತ್ವವನ್ನು ಪಡೆಯುವುದು ಸಾಧ್ಯವಿದೆ. ಸಾರ್ಥಕವಾದ ಸಕಲ ಜನೋಪಯೋಗಿ ಬಾಳನ್ನು ನೂರ್ಕಾಲ ಸಾಗಿಸುತ್ತಾ ಮರಣವನ್ನು ಗೆಲ್ಲುವುದೇ ಕರ್ಮ-ಜ್ಞಾನಗಳ ಸಂಯೋಜಿತ ಜೀವನ ಮಾರ್ಗ' (ಮಂತ್ರ ೧೧) ಎಂದು ಸಾರಿತು. ನಂತರ ಕಾಲದಲ್ಲಿ ಭಗವದ್ಗೀತೆಯೂ ಇದೇ ತತ್ತ್ವವನ್ನು ಸಾರಲೆಂದೇ ಹೊರಬಂದ ಕೃತಿ.

ಈಶಾವ್ಯಾಸೋಪನಿಷತ್ತಿನ ಈಶನನ್ನು ಮಾತರಿಶ್ವ, ಕವಿ, ಮನೀಷಿ, ಪರಿಭೂಃ, ಸ್ವಯಂಭೂಃ, ಪೂಷನ್, ಏಕಃ, ಋಷಿ, ಯಮ, ಸೂರ್ಯ, ಪ್ರಜಾಪತಿ, ಅಗ್ನಿ (ಮಂತ್ರ ೮) ಮುಂತಾಗಿ ಸಂಬೋಧಿಸಿರುವುದೂ ಕೂಡ ವಿಶ್ವಕರ್ಮ ಸೂಕ್ತದ ರೀತಿಯಲ್ಲಿಯೇ ಇದೆ. ವಿಶ್ವಕರ್ಮನನ್ನೂ ಇದೇ ರೀತಿ ವರ್ಣಿಸಿ ಕೊನೆಗೆ **ದೇವಾನಾಂ ನಾಮಧಾ ಏಕ ಏವ** ಎಂದು ಹೇಳಿ ಎಲ್ಲಾ ದೇವರುಗಳ ಹೆಸರು ಈತನೊಬ್ಬನಿಗೇ ಸಲ್ಲುತ್ತದೆ ಎಂದು ಸ್ಪಷ್ಟಗೊಳಿಸಲಾಗಿದೆ. ಜಗತ್ ಸೃಷ್ಟಿಕಾಲದಲ್ಲಿ ಪ್ರಥಮ ಗರ್ಭವನ್ನು ಜಲದಲ್ಲಿ ಈಶನೇ ನಿಕ್ಷೇಪಿಸಿದನೆಂಬ ಹೇಳಿಕೆಯೂ ಕೂಡ ವಿಶ್ವಕರ್ಮ ಸೂಕ್ತದಿಂದ ಪಡೆದಿರುವುದೇ **(ತಮಿದ್ಗರ್ಭಂ ಪ್ರಥಮಂ ದಧ್ರ ಆಪೋ....)**

ಈ ರೀತಿಯಲ್ಲಿ ಈಶಾವಾಸ್ಯೋಪನಿಷತ್ತು ವಿಶ್ವಕರ್ಮ ಸೂಕ್ತದಲ್ಲಿಯ ಸಿದ್ಧಾಂತಗಳನ್ನೇ ಮತ್ತಷ್ಟು ಸ್ಪಷ್ಟವಾಗಿ ನಿರೂಪಿಸುವುದರಿಂದ ಇದು ವಿಶ್ವಕರ್ಮೋಪನಿಷತ್ತೆಂದು ಸ್ಪಷ್ಟವಾಗಿ ಸಾಧಿತವಾಗುತ್ತದೆ.

ಇಂಗ್ಲೀಷಿನಿಂದ ಅನುವಾದ :

ಶ್ರೀಮತಿ ಸರಿತಾ ಜ್ಞಾನಾನಂದ, ಬಿ.ಎ., ಬಿ.ಎಡ್.,

★

ದ್ವಿತೀಯಾವರಣ
—ಸಂಶೋಧನಾಂಕ

※ ಡಾ. ಬುದ್ಧ ಪ್ರಕಾಶ್

೧

ಸಿಂಧೂ ಕಣಿವೆಯ
ತ್ರಿಶೀರ್ಷಮೂರ್ತಿ ಮುದ್ರಿಕೆ

ಪಂಚನದ ಪ್ರದೇಶ(ಪಂಜಾಬ್)ಮತ್ತು ಸಪ್ತಸಿಂಧು ಪ್ರದೇಶ(ವಾಯುವ್ಯ ಸರಹದ್ದು)ಗಳಲ್ಲಿಯ ಜನಾಂಗದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ಋಗ್ವೇದದಲ್ಲಿ ಉಪಲಬ್ಧವಾಗುವ ಮಾಹಿತಿಯ ಬೆಳಕಿನಲ್ಲಿ, ಸಿಂಧೂ ಕಣಿವೆ ಯಲ್ಲಿ ವಾಸವಾಗಿದ್ದವರ ನಾಗರೀಕತೆ, ನಿಜಗುಣಲಕ್ಷಣಗಳನ್ನು ಪರಿಶೀಲಿಸು ವುದು ಉಪಯೋಗಕಾರಿ ಅಧ್ಯಯನ. ಇದಕ್ಕಾಗಿ ನಮಗೆ ದೊರೆತಿರುವ ಮುಖ್ಯ ಸಾಮಗ್ರಿಯಿಂದ ಸಿಂಧೂ ಕಣಿವೆಯ ಜನರ ನಾಗರೀಕತೆ, ಸಂಸ್ಕೃತಿಗಳನ್ನು ತಿಳಿಯಲು ಸಾಧ್ಯವಿದೆ. ಈ ದಿಶೆಯಲ್ಲಿ ನಮಗೆ ಆ ಪ್ರದೇಶಗಳಲ್ಲಿ ದೊರ ತಿರುವ ಅನೇಕ ಮುದ್ರಿಕೆಗಳು ಇದುವರೆವಿಗೂ ನಮಗೆ ತಿಳಿಯದಿರುವ ಲಿಪಿ ಯಲ್ಲಿ ಸಂಕ್ಷಿಪ್ತ ಲೇಖವನ್ನು ಹೊಂದಿದ್ದು, ಇವುಗಳಲ್ಲಿ ಮಾನವ ಹಾಗೂ ಪಶುಗಳ ಚಿತ್ರಗಳಿದ್ದು, ಅವು ಅವರ ಧರ್ಮದ ದ್ಯೋತಕವೇನೋ ಎನಿಸುತ್ತವೆ. ಅವುಗಳಲ್ಲಿ ನಿರೂಪಿಸಿರುವ ಕೆಲವು ಚಿತ್ರಣಗಳು ಋಗ್ವೇದದಲ್ಲಿ ಹೇಳಲಾಗಿರುವ ಕೆಲವು ಭಾವನೆಗಳೊಂದಿಗೆ ಸಾಮ್ಯ ಹೊಂದಿರುವಂತೆ ತೋರುತ್ತದೆ. ಅವ

ವನ್ನೂ ಅಭ್ಯಸಿಸಿದ ನಂತರ ಸುಸಂಬದ್ಧ ರೀತಿಯಲ್ಲಿ ಸಿಂಧೂ ಕಣಿವೆಯ ಜನರ ಜೀವನ, ರೀತಿ-ನೀತಿಗಳ ಬಗ್ಗೆ ನಾವು ಒಂದು ನಿರ್ಣಯಕ್ಕೆ ಬರುವುದು ಸಾಧ್ಯವಿದೆ.

ತ್ರಿಶೀರ್ಷ ಮೂರ್ತಿ ಮುದ್ರಿಕೆ

ಈ ದಿಶೆಯಲ್ಲಿ ಮೊದಲಿಗೆ ಮೂರು ತಲೆಗಳುಳ್ಳ ಮೂರ್ತಿಯನ್ನು ಹೊಂದಿರುವ ಮುದ್ರಿಕೆಯ[1] ಬಗ್ಗೆ ವಿವೇಚನೆ ನಡೆಸೋಣ. ಮುದ್ರಿಕೆಯಲ್ಲಿರುವ ಚಿತ್ರದಲ್ಲಿ ಮೂರು ಚೂಪಾದ ಕೊನೆಗಳುಳ್ಳ ಕಿರೀಟದಿಂದ ತಲೆಯನ್ನು ಅಲಂಕರಿಸಿದ್ದು ಅದರಲ್ಲಿ ಇಕ್ಕೆಲಗಳಲ್ಲಿ ಕೋಡುಗಳಂತೆ, ಮಧ್ಯದಲ್ಲಿ ಬೀಸಣಿಗೆಯ ಆಕಾರದ ಕೋಡು ಇವೆ. ಅದರ ತೋಳುಗಳು ಬಳೆಗಳಿಂದ ಅಲಂಕೃತಗೊಂಡಿದೆ. ಚಾಚಿದ ಕೈಗಳು ಮಡಚಿದ ಮೊಣಕಾಲಿನ ಮೇಲಿದೆ. ಕೊರಳ ಸುತ್ತಲೂ ಹಾಗೂ ಎದೆಯ ಮೇಲೆಲ್ಲಾ ತ್ರಿಕೋಣಾಕೃತಿಯ ಅಥವ ತಿರುಚು ಲೋಹದ ಕೊರಳ ಸರ ಮಾಲೆಗಳಿವೆ. ನಡುವಿನ ಸುತ್ತಲು ಒಡ್ಯಾಣವಿದೆ. ಅದರ ಹಿಂದೆ ಉದ್ದಿಪ್ತ ಲಿಂಗದಂತಹ ಅಂಗವಿದೆ. ಈ ಚಿತ್ರದ ಸುತ್ತಲೂ ಮೃಗಗಳಿವೆ – ಆನೆ, ಹುಲಿ, ಘೇಂಡಾ ಮತ್ತು ಕೋಣ. ಆಸನದ ಕೆಳಗೆ ಎರಡು ಜಿಂಕೆಗಳಿವೆ. ಮಾರ್ಷಲ್ ಈ ಚಿತ್ರವನ್ನು ಶಿವನೆಂದು ಗುರುತಿಸಿದ್ದಾರೆ[2]. ಈ ಅನಿಸಿಕೆಗೆ ಕಾರಣಗಳು ಇವು : (೧) ಚಿತ್ರದಲ್ಲಿ ಮೂರು ಮುಖಗಳಿವೆ ಶಿವನಿಗೆ **ತ್ರಿಶಿರ**[3]ನೆಂದು ಹೆಸರಿದೆ ; **ತ್ರಿವಕ್ತ್ರ**ನೆಂದೂ[4] ಉಲ್ಲೇಖಿತನಾಗಿದ್ದಾನೆ. (೨) ಯೋಗ ಮುದ್ರೆಯಲ್ಲಿ ಕುಳಿತಿರುವನು. ಶಿವನು **ಯೋಗಾ**

---

1 John Marshal : Mohenjodaro And the Indus Valley Civilization Vol 1 plate XII, 17; E.Macay: Further Excavations at Mohenjodaro, Vol II plate XCIV, 420.

2 John Marshal : op.cit. Vol I, p 53-56.

3 ಮಹಾಭಾರತ, ೧೨ : ೨೮೪ : ೧೨

4 ಅದೇ, ೧೩ : ೧೪ : ೧೬೫

ಧ್ಯಕ್ಷನೆಂದು[5] ಖ್ಯಾತನಾಗಿದ್ದಾನೆ. (೩) ಉದ್ದೀಪನಗೊಂಡ ಲಿಂಗ–ಶಿವನನ್ನು **ಊರ್ಧ್ವಲಿಂಗಿ**[6] ಎಂದೇ ವರ್ಣಿಸಲಾಗಿದೆ. (೪) ಚಿತ್ರದಲ್ಲಿ ಹುಲಿ, ಆನೆ, ಘೇಂಡಾಗಳ ಸಾಂಗತ್ಯ ತೋರಿಸಲಾಗಿದೆ – ಶಿವನನ್ನು **ಶಾರ್ದೂಲ ರೂಪ**ನೆಂದು[7], **ನಾಗಚರ್ಮೋತ್ತರಾಚ್ಛಾದ**ನೆಂದೂ[8] ಮತ್ತು **ಗಂಡಾಲಿನ**ನೆಂದು[9] ಹೇಳಿದ್ದರೂ ಸಾಮಾನ್ಯನಾಗಿ **ಪಶುಪತಿ**[10] ಎಂದೂ ಉಲ್ಲೇಖಿತನಾಗಿದ್ದಾನೆ. (೫) ಕೊಂಬುಗಳು, ಕಿರೀಟಗಳು ಶಿವನ ಸಂಕೇತವಾದ ತ್ರಿಶೂಲದ ಪ್ರತಿರೂಪ. ಬೇರೆಯ ಎರಡು ಮುದ್ರಿಕೆಗಳಲ್ಲೂ ಇದೇ ರೀತಿಯ ಚಿತ್ರವನ್ನು ಕಾಣುತ್ತೇವೆ. ಒಂದರಲ್ಲಿ ಮೂರು ಮುಖಗಳು ಸ್ಪಷ್ಟವಾಗಿವೆ. ಮತ್ತೊಂದರಲ್ಲಿ ಕೇವಲ ಒಂದು ಮುಖವನ್ನು ಮಾತ್ರವೇ ಪಕ್ಕಕ್ಕೆ ನೋಡುತ್ತಿರುವಂತೆ ಕೊಡಲಾಗಿದೆ. ದೇಹವು ನಡುವಿನಲ್ಲಿ ಧರಿಸಿರುವ ಒಡ್ಯಾಣದ ವಿನಾ ಬೆತ್ತಲೆಯಾಗಿಯೇ ಇದೆ. ಇದು ಶಿವನನ್ನು **ದಿಗ್ವಸನ**ನೆಂದು[11] ಸಂಬೋಧಿಸುವುದನ್ನು ನೆನಪು ಮಾಡುತ್ತದೆ. ಈ ಸಾಮ್ಯಗಳಿದ್ದರೂ ವೃಷಭವು ಶಿವನೊಂದಿಗೆ ಅತಿ ನಿಕಟ ಸಂಬಂಧ ಇರಿಸಿಕೊಂಡಿರುವ ಪ್ರಾಣಿ. ಅದು ಇಲ್ಲಿ ಇಲ್ಲದೆ ಇರುವುದರಿಂದ ಈ ಚಿತ್ರವು ಶಿವನದೇ ಎಂದು ನಿಖರವಾಗಿ ಗುರ್ತಿಸುವುದು ಸಾಧ್ಯವಿಲ್ಲ.

ಕೆ. ಎನ್. ಶಾಸ್ತ್ರಿ ಅವರ ಪ್ರಕಾರ : 'ಈ ದೇವತೆಯ ಸ್ವರೂಪವೇ ತುಂಬಾ ಜಾಣ್ಮೆಯಿಂದ ಹಲವಾರು ಪ್ರಾಣಿಗಳ ಸಂಯೋಜಿತ ರೂಪವೆನ್ನುವಂತೆ ಯೋಜಿಸಲಾಗಿದೆ. ಕೋಣನ ಮುಖ. ಕಿರೀಟದಲ್ಲಿ ಏಕಶೃಂಗಿಯ ಕೊಂಬುಗಳು. ಅಶ್ವತ್ಥ ವೃಕ್ಷದ ಎಲೆಗಳು, ಜರಿಯ ಕೈಗಳು. ಕೊರಳ ಕೆಳಭಾಗವು ಎರಡು ಸರ್ಪಗಳ ಸಂಯೋಗದಿಂದ

ತ್ರಿಶೀರ್ಷ ಮೂರ್ತಿ ಮುದ್ರಿಕೆಯ ಸಂಬಂಧದಲ್ಲಿ ವಿದ್ವಾಂಸರ ದೃಷ್ಟಿ

5 ಅದೇ, ೧೩ : ೧೭ : ೭೭
6 ಅದೇ, ೧೩ : ೧೭ : ४೬
7 ಅದೇ, ೧೩ : ೧೪ : ೩೪೭
8 ಅದೇ, ೧೩ : ೧೪ : ೧೫೫
9 ಅದೇ, ೧೩ : ೧೭ : ೯೧
10 ಅದೇ, ೧೩ : ೧೭ : ೯೧
11 ಅದೇ, ೧೩ : ೧೪ : ೧೬೨

ಆಗಿದ್ದು ಅವೆರಡರ ತಲೆಗಳು ವಕ್ಷಸ್ಥಲದಲ್ಲಿದ್ದು, ಅವುಗಳ ಪೈ ಸೊಂಟದಿಂದ ಕೆಳಭಾಗದಲ್ಲಿ ಎರಡಾಗಿ ಕಾಲುಗಳ ರೂಪವನ್ನು ಕೊಟ್ಟಿದೆ. ಎದೆಯು ಹುಲಿಯದಲ್ಲವಾದರೂ ಹುಲಿಯ ಚರ್ಮದಿಂದ ಸ್ವಲ್ಪವಾದರೂ ಮುಚ್ಚಲ್ಪಟ್ಟಿದ್ದು ಆಸನವು ಏಡಿಗಳಿಂದ ಏರ್ಪಟ್ಟಿದೆ. ಐತರೇಯ ಬ್ರಾಹ್ಮಣದಲ್ಲಿ ಅನೇಕ ಭಯಂಕರ ವಸ್ತುಗಳಿಂದ ರೂಪಿಸಲ್ಪಟ್ಟವನೆಂದು ವರ್ಣಿತವಾಗಿರುವ ವೇದದ ರುದ್ರನ ಸನಿಹಕ್ಕೆ ಬರುತ್ತಾನೆ ಈತ. ಕೋಣನ ತಲೆಯು ಈ ದೇವನನ್ನು ವೈದಿಕ ರುದ್ರನೊಂದಿಗೆ ಸಂಬಂಧ ಕಲ್ಪಿಸುವ ಹಲವು ಸಾಮ್ಯಗಳು ಇದ್ದರೂ ಇನ್ನೊಂದು ಕಡೆಯಿಂದ ಇತಿಹಾಸದ ಶಿವನೊಂದಿಗೆ ಸಾಮ್ಯಗಳೂ ಇವೆ. ಇಷ್ಟೇ ಅಲ್ಲದೆ ಪುರಾಣ ಕಾಲೀನ ಮಹಿಷಾಸುರನ ಪ್ರಸಂಗದೊಂದಿಗೆ ಸಂಬಂಧವಿರಿಸಿ ಕೊಂಡಿರುವವ ಈತನೆಂದು ಹೇಳಲಾಗುತ್ತದೆ.'[12] ರುದ್ರನೇ ಶಿವನಾದನೆಂಬುದು, ಮಹಿಷಾಸುರನಾದನೆಂಬುದು ಅಸ್ಪಷ್ಟವಾಗಿದ್ದು ರುದ್ರನ ಮೂರ್ತರೂಪು ಇತರ ರೂಪಗಳಿಂದಾಗಲಿ ಅಥವಾ ಆ ರೀತಿಯ ವರ್ಣನೆಗಳಿಂದಾಗಲಿ ಸಾಧಿತವಾಗದೆ ಕೇವಲ ಅನಿಸಿಕೆಗಳು ಮಾತ್ರವೇ ಆಗಿವೆ.

ಋಗ್ವೇದದಲ್ಲಿ ಸೋಮವನ್ನು 'ದೇವತೆಗಳಲ್ಲಿ ಬ್ರಹ್ಮನು, ಕವಿಗಳ ನಾಯಕನೂ, ವಿಪ್ರರಲ್ಲಿ ಋಷಿಯೂ, ಪ್ರಾಣಿಗಳಲ್ಲಿ ಕೋಣವೂ, ಪಕ್ಷಿಗಳಲ್ಲಿ ಗರುಡನೂ, ಆಯುಧಗಳಲ್ಲಿ ಕೊಡಲಿಯು ಆಗಿರುವ ಸೋಮವು ಶೋಧಕದ ಮೇಲೆ ಘರ್ಜಿಸುತ್ತಾ ಬರುತ್ತಿದೆ'[13] ಎಂದು ವರ್ಣಿಸಿರುವುದನ್ನು ಉಲ್ಲೇಖಿಸುತ್ತಾ ಟಿ. ಎನ್. ರಾಮಚಂದ್ರನ್ ಅವರು ಪೂರ್ವೋಕ್ತ ಮುದ್ರಿಕೆಯಲ್ಲಿ

---

12 K. N Shastri : New Light on the Indus Civilization, p 12-13 ; : Harappa, p 76-84.

13 ೧೯೫೬ರಲ್ಲಿ ಆಗ್ರದಲ್ಲಿ ನಡೆದ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸಿನ ಅಧ್ಯಕ್ಷ ಭಾಷಣದ ಪ್ರಥಮ ಭಾಗದಲ್ಲಿ (ಪುಟ ೭) ಟಿ. ಎನ್. ರಾಮಚಂದ್ರನ್ ಅವರು ಈ ಮಂತ್ರ ಉಲ್ಲೇಖಿಸಿದ್ದಾರೆ :

ಬ್ರಹ್ಮಾ ದೇವಾನಾಂ ಪದವೀಃ ಕವೀನಾಂ
ಋಷಿರ್ವಿಪ್ರಾಣಾಂ ಮಹಿಷೋ ಮೃಗಾಣಾಮ್ ।
ಶ್ಯೇನೋ ಗೃಧ್ರಾಣಾಂ ಸ್ವಧಿತಿರ್ವನಾನಾಂ ಸೋಮಃ ಪವಿತ್ರಮತ್ಯೇತಿ ರೇಭನ್ ॥


ಮೊಹೆಂಜದಾರೋವಿನಲ್ಲಿ ಲಭಿಸಿರುವ ಕೆಲವು ತ್ರಿಶೀರ್ಷ ಮೂರ್ತಿ ಮತ್ತು ವೃಷಭ ಮುದ್ರಿಕೆಗಳ ಪ್ರತಿಕೃಗಳು



ತ್ರಿಶೀರ್ಷಮೂರ್ತಿ ಮುದ್ರಿಕೆ-೧



ತ್ರಿಶೀರ್ಷಮೂರ್ತಿ ಮುದ್ರಿಕೆ-೨



ತ್ರಿಶೀರ್ಷಮೂರ್ತಿ ಮುದ್ರಿಕೆ-೩



ವೃಷಭ ಮುದ್ರಿಕೆ

ರುವ ದೈವವು ಗರುಡ, ಮಹಿಷ ಕೊಂಬುಗಳನ್ನು ಹೊಂದಿರುವ ಸಂಯುಕ್ತ ಚಿತ್ರವೆಂದು ಹೇಳಿ ಈ ಮೂರ್ತಿಯು ವೇದವಲ್ಲಿ ಬೇರೆಡೆಯಲ್ಲಿ **ರುದ್ರಃ ಪಶೂನಾಂ ಅಧಿಪತಿಃ** ಎಂದು ವರ್ಣಿತನಾಗಿರುವ ದೇವನೊಂದಿಗೆ ಯಾವ ರೀತಿಯ ಸಂಬಂಧವನ್ನೂ ಇರಿಸಿಕೊಂಡಿಲ್ಲ ಎನ್ನುತ್ತಾರೆ.

ಹರ್ಬರ್ಟ್ ಸುಲ್ಲಿವನ್ ಅವರ ಪ್ರಕಾರ 'ಈ ಮೂರ್ತಿ ಪುರುಷನಲ್ಲ — ಸ್ತ್ರೀ ದೇವತೆ. ಮೂರು ಶಿಖರಗಳ ಕಿರೀಟವನ್ನು ಧರಿಸಿ, ಪವಿತ್ರ ವೃಕ್ಷದಲ್ಲಿ ಸಂತಾನ ಪ್ರದಾಯಿನಿಯಾಗಿ ಕಾಣಿಸಿಕೊಳ್ಳುವ ವನ ದೇವತೆಯೇ ಇದು. ಪ್ರಾಣಿಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಪ್ರಾಣಿ ವರ್ಗದ ಮಾತೆಯು ನ್ನಾಗಿ ಆಕೆಯ ಮತ್ತೊಂದು ಮುಖವನ್ನು ಇಲ್ಲಿ ಚಿತ್ರಿಸಲಾಗಿದೆ'[14]. ಸಿಂಧೂ ನಾಗರೀಕತೆಯ ಎಲ್ಲಾ ವಿಗ್ರಹಗಳೂ ಸ್ತ್ರೀ ದೇವತೆಗಳದೇ ಎಂದು ಹೇಳುತ್ತಾ ಕೆ. ಎನ್. ಶಾಸ್ತ್ರಿಗಳ ಹೇಳಿಕೆಗೆ ವಿರೋಧವಾದ ವಾದವನ್ನು ಮಂಡಿಸುತ್ತಾರೆ. ಈ ವಾದಕ್ಕೆ ಮೂಲಭೂತವಾದ ಬಲವಿರುವುದು ಸಿಂಧೂ ಕಣಿವೆಯಲ್ಲಿ ದೊರೆತಿರುವ ಹಲವಾರು ವಿಗ್ರಹಗಳಲ್ಲಿ ಪುರುಷ ಇಂದ್ರಿಯವು ಚಿತ್ರಿತವಾಗಿಲ್ಲ ಎಂಬುದೇ. ಆದರೆ ಅದೇ ರೀತಿಯಲ್ಲಿ ಸ್ತ್ರೀ ದೇಹದ ಪ್ರಮುಖ ಉಬ್ಬು ತಗ್ಗುಗಳೂ ನಿರೂಪಿತವಾಗಿಲ್ಲ ಎಂಬುದನ್ನು ಈ ವಿದ್ವಾಂಸರು ವಿಸ್ಮರಿಸಿದ್ದಾರೆ. ಸಿಂಧೂ ಕಣಿವೆಯ ಕಲಾವಿದರು ತಮ್ಮ ಚಿತ್ರಗಳನ್ನು ನಿರೂಪಿಸುವಾಗ ಒಂದು ಶೈಲಿಯನ್ನು ಅನುಸರಿಸಿದ್ದಾರೆ ಎಂಬುದನ್ನು ನಾವು ಗಮನಿಸಿ ನೆನಪಿನಲ್ಲಿರಿಸಿ ಕೊಳ್ಳಬೇಕಾದುದು ಅವಶ್ಯಕ.

ಪಿ. ಆರ್. ದೇಶಮುಖರ[15] ಪ್ರಕಾರ ಈ ಮುದ್ರಿಕೆಯಲ್ಲಿ ಚಿತ್ರಿತವಾಗಿರುವ ದೇವನು ಋಗ್ವೇದದ ೧೦ : ೯೯ : ೬ ರಲ್ಲಿ ಚಿತ್ರಿತನಾಗಿರುವ ಮೂರ ತಲೆಗಳ, ಆರು ಕಣ್ಣುಗಳ ದೇವನು —

14 Herbert P. Sullivan: 'A Re-examination of the Religion of the Indus Civilization' — History of Religions, Vol IV No. 1 (1964) p 115-25.

15 P. R. Deshmukh : The Indus Civilization in the Rgveda, p 41.

ತ್ರಿಶೀರ್ಷಾ ವಿಶ್ವರೂಪ ತ್ವಾಷ್ಟ್ರ

ಮೂರು ತಲೆಗಳು, ಆರು ಕಣ್ಣುಗಳು ಇದ್ದು ಭಯಂಕರವಾಗಿ ಘರ್ಜಿಸಿದ ಅಸುರನನ್ನು ಸುರಾಧಿಪತಿ ನಿಯಂತ್ರಿಸಿದ. ತನ್ನ ದತ್ತ ಬಲದಿಂದ ಶಕ್ತವಂತನಾಗಿದ್ದ ತ್ರಿತನು ಕಬ್ಬಿಣದ ಅಲುಗಿನ ಕೊನೆಯನ್ನು ಹೊಂದಿದ್ದ ಅಂಬಿನಿಂದ ಹಂದಿಯನ್ನು ಹೊಡೆದ[16].

—ಇಲ್ಲಿ ಮೂರುತಲೆಗಳ ದೇವನನ್ನು . ದಾಸ ಎಂದು ಕರೆದಿದ್ದಾರೆ. ಈತನು ತ್ವಷ್ಟೃ ಪುತ್ರನೆಂದು ಋಗ್ವೇದ ೧೦ : ೮ : ೮-೯ರಲ್ಲಿ ತಿಳಿಸಿದೆ .

ತನ್ನ ತಂದೆಯ ಆಯುಧವನ್ನು ಪ್ರಯೋಗಿಸುವುದರಲ್ಲಿ ನಿಷ್ಣಾತನಾಗಿದ್ದ ಆಪ್ತ್ಯನನ್ನು (ತ್ರಿತನನ್ನು) ಇಂದ್ರನು ಯುದ್ಧ ಮಾಡಲು ಪ್ರೇರೇಪಿಸಿದನು. ನಂತರ ತ್ರಿತ ಆಪ್ತ್ಯನು ತನ್ನ ಶತೃವಾಗಿದ್ದ ತ್ರಿಶೀರ್ಷನೂ, ಸಪ್ತರಶ್ಮಿಯುವನೂ ಆದ ತೃಷ್ಟೃ ಪುತ್ರನನ್ನು ಕೊಂದು ಅವನ ದನಗಳನ್ನು ಮುಕ್ತಗೊಳಿಸಿದ. ಶೂರರ ಒಡೆಯನಾದ ಇಂದ್ರನು ಹೆಚ್ಚು ಶಕ್ತಿ ತಾನೇ ಸಂಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವನನ್ನು ಸೀಳಿ ಅವನ ಮೂರು ತಲೆಗಳನ್ನು ದೇಹದಿಂದ ಬೇರ್ಪಡಿಸಿ ತ್ವಷ್ಟೃ ಪುತ್ರನಾದ ವಿಶ್ವರೂಪನ ಗೋವುಗಳನ್ನು ಸೆರೆ ಹಿಡಿದನು[17].

---

16 ಸ ಇದ್ದಾಸಂ ತುವೀರವಂ ಪತಿರ್ದನ್ ಷಳಕ್ಷಂ ತ್ರಿಶೀರ್ಷಾಣಂ ದಮನ್ಯತ್ । ಅಸ್ಯ ತ್ರಿತೋ ನ್ವೋಜಸಾ ವೃಧಾನೋ ವಿಪಾ ವರಾಹಮಯೋಅಗ್ರಯಾ ಹನ್ ॥

17 ಸ ಪಿತ್ರ್ಯಾಣ್ಯಾಯುಧಾನಿ ವಿದ್ವಾನಿಂದ್ರೇಷಿತ ಆಪ್ತ್ಯೋ ಅಭ್ಯಯುಧ್ಯತ್ ತ್ರಿಶೀರ್ಷಾಣಂ ಸಪ್ತರಶ್ಮಿಂ ಜಘನ್ವಾನ್ ತ್ವಾಷ್ಟ್ರಸ್ಯ ಚಿನ್ನಿಃ ಸಸೃಜೇ ತ್ರಿತೋ ಗಾಃ ।

ಭೂರೀದಿಂದ್ರ ಉದಿನಕ್ಷಂತಮೋಜೋಽವಾಭಿನತ್ ಸತ್ಪತಿರ್ಮನ್ಯಮಾನವರ್ ।
ತ್ವಾಷ್ಟ್ರಸ್ಯ ಚಿದ್ವಿಶ್ವರೂಪಸ್ಯ ಗೋನಾಮಾಚಕ್ರಾಣಸ್ತ್ರೀಣಿ ಶೀರ್ಷಾ ಪರಾ ವರ್ಕ್ ॥

ಇಲ್ಲಿ ಹಾಗೂ ಋಗ್ವೇದದ ೨ : ೧೧ : ೧೯ನೇ ಋಚೆಯಲ್ಲಿ ತ್ವಷ್ಟೃವಿನ ಮೂರು ತಲೆಗಳ ಮಗನನ್ನು ವಿಶ್ವರೂಪನೆಂದು ಕರೆಯಲಾಗಿದೆ —

ನಮ್ಮ ಶತೃಗಳಾದ ದಸ್ಯುಗಳನ್ನು ನಿನ್ನ ಆರ್ಯ ಮತ್ತು ಸುಧೆಗಳಿಂದ ನಿಗ್ರಹಿಸಿ ನಾವು ಸಂಪತ್ತನ್ನು ಲಾಭವಾಗಿ ಪಡೆಯುವಂತಾಗಲಿ. ತ್ವಷ್ಟೃವಿನ ಮಗನಾದ ವಿಶ್ವರೂಪನನ್ನು ನೀನೇ ಕೊಟ್ಟ ನಮ್ಮ ಗುಂಪಿನ ತ್ರಿತನು ಗೆದ್ದದ್ದೇ ನಮ್ಮ ಜಯ[18].

ತ್ವಷ್ಟೃವು ವಿಶ್ವದ ನಿರ್ಮಾಣ ಕರ್ತೃ. ಸುಂದರ ವಸ್ತುಗಳ ಸೃಷ್ಟಿ ಕರ್ತ. ಅಗ್ನಿಯನ್ನು ಸೃಷ್ಟಿಸಿದವನು (ಋ, ೧೦ : ೨ : ೭[19]. ಕರುಣೆಯನ್ನು ತೋರಿ ಆಯುಷ್ಯವನ್ನು ಹೆಚ್ಚಿಸಬೇಕೆಂದು ಆತನನ್ನು ಪ್ರಾರ್ಥಿಸಲಾಗಿದೆ (ಋ, ೧೦ : ೧೮ : ೫)[20]. ಆತನೇ ಎಲ್ಲಾ ರೂಪಗಳ ರೂವಾರಿ. ಹೊಲ-ಗದ್ದೆಗಳಲ್ಲಿರುವ ಪಶುಗಳೂ ಆತನ ಸೃಷ್ಟಿಯೇ. ಅಷ್ಟೇ ಅಲ್ಲ ನಮ್ಮ ಒಳಿತಿಗಾಗಿ ಅವುಗಳ ಸಂಖ್ಯೆಯನ್ನು ವೃದ್ಧಿಗೊಳಿಸುವಂತೆಯೂ ಪ್ರಾರ್ಥಿಸಲಾಗಿದೆ (ಋ, ೧ : ೧೮೮ : ೯)[21]. ಆತನು ತುಂಬಾ ಶಾಂತ ಸ್ವಭಾವದ ವೀರ. ತುಂಬಾ ಸೂಕ್ಷ್ಮವಾದ ಕಿವಿಯುಳ್ಳವ. ಚಿನ್ನದ ಮೈಬಣ್ಣದವ.

---

18 ಸನೇಮ ಯೇ ತ ಊತಿಭಿಸ್ತರಂತೋ ವಿಶ್ವಾಃ ಸ್ಪೃಧ ಆರ್ಯೇಣ ದಸ್ಯೂನ್ ।
ಅಸ್ಮಭ್ಯಂ ತತ್ ತ್ವಾಷ್ಟ್ರಂ ವಿಶ್ವರೂಪಮರಂಧಯಃ ಸಾಖ್ಯಸ್ಯ ತ್ರಿತಾಯ ॥

19 ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ ।
ಪಂಥಾಮನು ಪ್ರವಿದ್ವಾನ್ ಪಿತೃಯಾಣಂ ದ್ಯುಮದಗ್ನೇ ಸಮಿಧಾನೋ ವಿ ಭಾಹಿ ॥

20 ಯಥಾ ನ ಪೂರ್ವಮಪರೋ ಜಹಾತ್ಯೇವಾ ಧಾತರಾಯೂಂಷಿ ಕಲ್ಪಯೈಷಾಮ್ ।
ಆ ರೋಹತಾಯುರ್ಜರಸಂ ವೃಣಾನಾ ಅನುಪೂರ್ವಂ ಯತಮಾನಾಂ ಯತಿಷ್ಠ ॥

21 ತ್ವಷ್ಟಾ ರೂಪಾಣಿ ಹಿ ಪ್ರಭುಃ ಪಶೂನ್ ವಿಶ್ವಾನ್ ತ್ಸಮಾನಜೇ ।
ತೇಷಾಂ ನಃ ಸ್ಫಾತಿಮಾ ಯಜ ॥

ಸ್ಫುರದ್ರೂಪಿ. ಅಪ್ರತಿಮ ಬಲಶಾಲಿ (ಋ ೨ : ೩ : ೯)[22]. ಆತನು ಅನೇಕ ಬಗೆಗಳಲ್ಲಿ ಮಾನವ ಕುಲವನ್ನು ಉತ್ಪಾದಿಸಿ ಪೋಷಿಸುತ್ತಾನೆ. ಎಲ್ಲಾ ಸ್ಥಾವರ ಜಂಗಮ ಪ್ರಾಣಿಗಳು ಆತನವೇ. ಆ ದೇವನ ಅಧಿಕಾರವ್ಯಾಪ್ತಿ ಅತ್ಯಂತ ವಿಶಾಲವಾದುದು (ಋ, ೩ : ೫೫ : ೧೯)[23]. ಇಂತು ಈತನು ವಿಶ್ವಕರ್ಮ ಪ್ರಜಾಪತಿಯೊಂದಿಗೆ ಸಾಮ್ಯವನ್ನು ಹೊಂದಿದ್ದಾನೆ — ವಿಶ್ವಕರ್ಮನು ವಿಶೇಷವಾದ ಪ್ರಜ್ಞೆಯುಳ್ಳವನು ; ಅತ್ಯಂತ ಶಕ್ತಿಶಾಲಿ ; ಮಹಾತ್ಮ. ಸಕಲ ಲೋಕಗಳನ್ನೂ ನಿರ್ಮಿಸಿ ಪೋಷಿಸಿ ಲಯದತ್ತ ಸೆಳೆಯುತ್ತಿರುವವನು. ಶ್ರೇಷ್ಠನೂ ಮತ್ತು ಸಕಲವನ್ನೂ ಸೂಕ್ಷ್ಮವಾಗಿ ನೋಡಬಲ್ಲವನು (ಋ, ೧೦ : ೮೨ : ೨)[24]. ಅಷ್ಟು ಮಾತ್ರವೇ ಅಲ್ಲ ಆತ ಋಷಿ, ಹೋತೃ ಮತ್ತು ಪಿತೃವೂ ಹೌದು (ಋ, ೧೦ : ೮೧ ; ೧)[25]. ಸೃಷ್ಟಿ ಮೀಮಾಂಸಾ ದೃಷ್ಟಿಯಲ್ಲಿ ಇವೆಲ್ಲವನ್ನೂ ಪರಿಶೀಲಿಸಿದಾಗ ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ **ಮಹತ್ ಆತ್ಮ** ದೊಂದಿಗೆ ಈತನನ್ನು ಸಮೀಕರಿಸಬಹುದು. ಈ ಜಗತ್ತು ಆತನ ಅಭಿವ್ಯಕ್ತಿ. ಅದರ ಸೃಷ್ಟಿಯೇ ಆತನ ವಿಕಾಸ. 'ಆತನು ಬಲ್ಲ : ಈ ಸರ್ವ ಸೃಷ್ಟಿಯು ನಾನೇ. ಏಕೆಂದರೆ ಇದೆಲ್ಲವನ್ನೂ ಸೃಷ್ಟಿಸಿದ್ದು ನಾನೇ. ಅಂದಿನಿಂದಲೇ ಸೃಷ್ಟಿಯ ಅಸ್ತಿತ್ವವಿರುವುದೂ ಕೂಡ'[26]. ಇಲ್ಲಿ ಆತನು

---

22 ಪ್ರಜಾಂ ತ್ವಷ್ಟಾ ವಿ ಷ್ಯತು ನಾಭಿಮಸ್ಮೇ ಅಥಾ ದೇವಾನಾಮಪ್ಯೇತು ಪಾಥಃ ।
ವನಸ್ಪತಿರವಸೃಜನ್ನುಪ ಸ್ಥಾದಗ್ನಿರ್ಹವಿಃ ಸೂದಯಾತಿ ಪ್ರ ಧೀಭಿಃ ॥

23 ದೇವಸ್ತ್ವಷ್ಟಾ ಸವಿತಾ ವಿಶ್ವರೂಪಃ ಪುಪೋಷ ಪ್ರಜಾಃ ಪುರುಧಾ ಜಜಾನ ।
ಇಮಾ ಚ ವಿಶ್ವಾ ಭುವನಾನ್ಯಸ್ಯ ಮಹದ್ ದೇವಾನಾಮಸುರತ್ವ-ಮೇಕಮ್ ॥

24 ವಿಶ್ವಕರ್ಮಾ ವಿಮನಾ ಆದ್ವಿಹಾಯಾ ಧಾತಾ ವಿಧಾತಾ ಪರಮೋತ ಸಂದೃಕ್ ।

25 ಯ ಇಮಾ ವಿಶ್ವಾ ಭುವನಾನಿ ಜುಹ್ವದೃಷಿರ್ಹೋತಾ ನ್ಯಸೀದತ್ ಪಿತಾ ನಃ ।

26 ಸೋಽವೇತ್, ಅಹಂ ವಾವ ಸೃಷ್ಟಿರಸ್ಮಿ । ಅಹಂ ಹೀದಂ ಸರ್ವಂ ಅಸೃಕ್ಷಿ । ತತಃ ಸೃಷ್ಟಿರಭವತ್ । (ಬೃಹದಾರಣ್ಯಕ ಉಪನಿಷದ್, ೧.೪:೫.)

ನಖಾಗ್ರದ ತನಕ ಇಳಿದು ಆವರಿಸಿದ್ದಾನೆ[27]. ಆತನಿಂದಲೇ ಸರ್ವವೂ ಆವಿರ್ಭಾವಗೊಳ್ಳುತ್ತದೆ[28]. ಸರ್ವ ಲೋಕಗಳ ಮೂರ್ತೀಕೃತ ರೂಪವಾದ ಆತನು ಅದರ ಅಗಣಿತ ವಿವಿಧತೆಯಿಂದ ವಿಶ್ವರೂಪನಾಗಿ ಅವತರಿಸುತ್ತಾನೆ. ಈ ವಿಶ್ವರೂಪನನ್ನು ಆತನ ಮಗನೆಂದೂ ವರ್ಣಿಸಲಾಗಿದೆ. ಸತ್ಯ ಸಂಗತಿ ಎಂದರೆ ತಂದೆಯೇ ಮಗನಾಗುತ್ತಾನೆ. ಸೃಷ್ಟಿಯ ನಿರ್ಮಾಣಕ್ಕೆ ಮನ-ಪ್ರಾಣ-ವಾಕ್ ತ್ರಯವೇ ಅವಶ್ಯಕ ಸಾಧನ ಸಂಪತ್ತಾದುದರಿಂದ[29] ಅವೇ ಅವನ ಮೂರು ಶಿರಗಳು.

ಸೃಷ್ಟಿಯಲ್ಲಿ ಬಹುವಾಗಿ ಕಾಣುವ ಮೂರರಪ್ರಾಚುರ್ಯ ಎಲ್ಲವನ್ನೂ ಮೂರಾಗಿಯೇ ಯೋಚಿಸುವ, ಮೂರಾಗಿಯೇ ಕಾಣುವ ಪ್ರವೃತ್ತಿಗೆ ದಾರಿ ಮಾಡುತ್ತದೆ. ವೇದಗಳು ಮೂರು : **ಋಗ್**, **ಯಜುಸ್** ಮತ್ತು **ಸಾಮ.** ದೇವತೆಗಳು ಮುವ್ವರು : **ಅಗ್ನಿ, ವಾಯು** ಮತ್ತು **ಆದಿತ್ಯ.** ಅಗ್ನಿಗಳು ಮೂರು : **ಗಾರ್ಹಪತ್ಯ, ದಕ್ಷಿಣ** ಮತ್ತು **ಆಹವನೀಯ.** ಪ್ರಪಂಚಗಳು ಮೂರು : **ಪೃಥ್ವಿ, ಅಂತರಿಕ್ಷ** ಮತ್ತು **ದ್ಯೌಃ.**

ಮೂರರ ಮಹತ್ತರ ಪ್ರಾಚುರ್ಯ

ಸೃಷ್ಟಿತತ್ತ್ವಗಳು ಮೂರು : **ವಾಮ-ಪಲಿತ, ಅಶ್ನ,** ಮತ್ತು **ಘೃತಪೃಷ್ಠ**[30] ಇದನ್ನೇ **ಅಜ, ಅಕ್ಷರ** ಮತ್ತು **ಕ್ಷರ**[31] ಎನ್ನುತ್ತಾರೆ. ಇದಕ್ಕೆ ಹೊಂದಿಕೊಳ್ಳುವಂತೆ

---

27 ಸ ಏಷ ಇಹ ಪ್ರವಿಷ್ಟ ಆ ನಖಾಗ್ರೇಭ್ಯಃ । (ಅದೇ ೧:೪:೬)

28 ತಸ್ಮಾತ್ ತತ್ ಸರ್ವಮಭವತ್ । (ಅದೇ ೧:೪:೧೦)

29 ಏತನ್ಮಯೋ ವಾ ಅಯಮ್ ಆತ್ಮಾ ವಾಙ್ಮಯೋ ಮನೋಮಯಃ ಪ್ರಾಣಮಯಃ । (ಶತಪಥ ಬ್ರಾಹ್ಮಣ, ೧೪:೪:೩:೧೦)

30 ಅಸ್ಯ ವಾಮಸ್ಯ ಪಲಿತಸ್ಯ ಹೋತುಸ್ತಸ್ಯ ಭ್ರಾತಾ ಮಧ್ಯಮೋ ಅಸ್ತ್ಯಶ್ನಃ ।
ತೃತೀಯೋ ಭ್ರಾತಾ ಘೃತಪೃಷ್ಠೋ ಅಸ್ಯಾತ್ರಾಪಶ್ಯಂ ವಿಶ್ಪತಿಂ
ಸಪ್ತಪುತ್ರಮ್ ॥
(ಋ ೧:೧೬೪ (ಅಸ್ಯವಾಮೀಯ ಸೂಕ್ತ) : ೧)

31 ತಸ್ಮಾತ್ ಸಮುದ್ರಾ ಅಧಿ ವಿ ಕ್ಷರಂತಿ ತೇನ ಜೀವಂತಿ ಪ್ರದಿಶಶ್ಚತಸ್ರಃ ।
ತತಃ ಕ್ಷರತ್ಯಕ್ಷರ ತದ್ವಿಶ್ವಮುಪ ಜೀವತಿ ॥ (ಅದೇ ೧:೧೬೪:೪೨)

ಪುರಾಣಗಳಲ್ಲಿ ದೇವತೆಗಳು ಮೂವರು : ವಿಷ್ಣು, ಬ್ರಹ್ಮ ಮತ್ತು ಶಿವ. **ಪ್ರಕೃತಿ ದೇವ** ಮತ್ತು **ಜೀವ**ಗಳಲ್ಲಿ ಕಂಡುಬರುವ ಮೂರು ವಿಭಾಗಗಳ ಪ್ರಾಚುರ್ಯ ಸಮಾಜದಲ್ಲಿ ಮೂಡಿ **ಪುರೋಹಿತರು, ಅರಸರು** ಮತ್ತು **ಪ್ರಜೆಗಳು** ಎಂದು ಮೂರು ವರ್ಗಗಳಾಗಿದ್ದನ್ನು ಡುಮೆಜಿಲ್ ಚೆನ್ನಾಗಿ ವಿವರಿಸಿದ್ದಾರೆ[32]. ಪ್ರಕೃತಿಯ ಈ ಮೂರರ ಪ್ರಾಚುರ್ಯ ಭಾರತೀಯ ದರ್ಶನವನ್ನು ತನ್ನ ವಿಕಾಸದ ಕಾಲದಿಂದಲೂ ಪ್ರಭಾವ ಬೀರಿದ್ದು, ವೇದದಿಂದ ಪುರಾಣಗಳ ತನಕ ಹರಡಿಕೊಂಡಿದ್ದು ದರ್ಶನದ ಎಲ್ಲಾ ಶಾಖೆಗಳನ್ನೂ, ಹಿಂದೂಗಳ ಎಲ್ಲಾ ಭಾವನೆ-ಆಚಾರಗಳನ್ನು ಹಬ್ಬಿಕೊಂಡಿದೆ[33]. ಅಧ್ಯಯನಕ್ಕೆ ಪ್ರಸ್ತುತದಲ್ಲಿ ಒಳಪಟ್ಟಿರುವ ಮುದ್ರಿಕೆಯಲ್ಲಿರುವ ಮೂರು ತಲೆಗಳ ಚಿತ್ರಣವು ಭಾರತೀಯರಲ್ಲಿ ಮೂರರ ಕಲ್ಪನೆ ಸಿಂಧೂ ಕಣಿವೆಯ ನಾಗರೀಕತೆಯಲ್ಲೂ ಮನೆ ಮಾಡಿತ್ತು ಎಂಬುದು ತೋರಿಸುತ್ತದೆ.

‘ಮೂರು ತಲೆಗಳೊಂದಿಗೆ ಆ ದೇವನು ಕೊಂಬುಗಳನ್ನು ಪಡೆದಿರುವ. ಉಳಿದ ಎರಡು ಮುದ್ರಿಕೆಗಳ ಮೇಲೂ ಅದೇ ರೀತಿಯ ಶಿರಸ್ತ್ರಾಣ ಕಂಡು ಬರುತ್ತದೆ. ಮುದ್ರಿಕೆ ೨೨೨ರಲ್ಲಿ ಯೋಗಿಗಳಂತೆ ಬದ್ಧಕೋಣ ಆಸನದಲ್ಲಿ

ಕೊಂಬುಳ್ಳ ಕಿರೀಟ

ಹಿಮ್ಮಡಿಗಳನ್ನು ಪರಸ್ಪರ ಒತ್ತಿ, ಎತ್ತರ ಕಡಿಮೆ ಇರುವ ಆಸನದ ಮೇಲೆ ಮಂಡಿಸಿರುವ ದೇವನ ಕಾಲುಗಳು ಗೂಳಿಯ ಕಾಲುಗಳಂತಿವೆ. ಅರಳಿ ಮರದ ಎಲೆಗಳಂತಹವನ್ನು ಪಡೆದಿರುವ ಕೊಂಬೆಯೊಂದು ಶಿರಸ್ತ್ರಾಣವಾಗಿದೆ. ಅವನ್ನು ಕೊಂಬುಗಳೆಂದು ಕರೆದರೂ ತಲೆಯಿಂದ ಪ್ರತ್ಯೇಕವಾಗಿಯೇ ಇವೆ. ಆ ಕೊಂಬುಗಳು ಕೊಂಬೆಯ ತಳಭಾಗಕ್ಕೆ ಕಟ್ಟಿರುವಂತೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮೂರು ತಲೆಗಳಲ್ಲಿ

---

32 George Dumezil . L’ideologie tripartite des Indo-Europeens (Brussels, 1958).

33 ಏತ ಏವ ತ್ರಯೋ ದೇವಾ ಏತ ಏವ ತ್ರಯೋ ಗುಣಾಃ ।
ಏತ ಏವ ತ್ರಯೋ ಲೋಕಾ ಏತ ಏವ ತ್ರಯೋಽಗ್ನಯಃ ॥
(ಲಿಂಗಪುರಾಣ, ೧:೭೦:೭೮)

ಒಂದು ಎದುರಾಗಿದ್ದು ಉಳಿದ ಎರಡು ಪಕ್ಕಕ್ಕೆ ತಿರುಗಿವೆ. ಮುದ್ರಿಕೆ ೨೩೫ರಲ್ಲಿಯೂ ಅದೇ ರೀತಿಯ ಚಿತ್ರವಿದೆ. ಮಂಡಿಸಿದ್ದ ಆಸನ ಇಲ್ಲವಾಗಿ ನೆಲದ ಮೇಲೆಯೇ ಕುಳಿತಂತಿದೆ. ಶಿರಸ್ತ್ರಾಣವಲ್ಲಿ ಎರಡು ಕೊಂಬುಗಳಂತಹವು ಅವುಗಳ ಮಧ್ಯೆ ಕದಿರು ಗೊಂಚಲ ಹೂ ರೆಂಬೆಯೊಂದಿದೆ. ಬಲಬದಿಗೆ ತಿರುಗಿಸಿರುವ ಒಂದೇ ಮುಖವಿರುವ ಮುದ್ರಿಕೆಯಲ್ಲಿ ಪಕ್ಕದಲ್ಲಿ ಒಂದು ಜಡೆ ಇಳಿಬಿದ್ದಿದೆ[34]. ಇದು ಮ್ಯಾಕೆ ಅವರ ವಿವರಣೆ. ಮಾರ್ಷಲ್ ಅವರು ಹೀಗೆ ಹೇಳುತ್ತಾರೆ. 'ಕೊಂಬುಗಳು ವಿಶೇಷವಾದ ಪವಿತ್ರ ಅರ್ಥವನ್ನು ಸಂಕೇತಿಸುತ್ತವೆ ಎನ್ನುವುದರ ಬಗ್ಗೆ ಅನುಮಾನವೇ ಇಲ್ಲ. ಮುದ್ರಿಕೆ xii : ೧೮ ಮತ್ತು ೨೨ರಲ್ಲಿ ಅವು ಆ ದೇವತೆಯ ಸಂಕೇತಗಳೇ ಆಗಿವೆ. ಬೇರೆಯ ಸಂದರ್ಭಗಳಲ್ಲಿ ಈ ಕೊಂಬುಳ್ಳ ಕಿರೀಟವನ್ನು ಪುರೋಹಿತನಿಗೆ ಅಥವ ಭಕ್ತನಿಗೆ ಬದಲಿಸಿರುವಂತೆ ತೋರುತ್ತದೆ[35]. ಶುಷ್ಣ ನಾಯಕನನ್ನು ಋಗ್ವೇದದಲ್ಲಿ (೧ : ೩೩ : ೧೨) **ಶೃಂಗಿನ್** (ಕೊಂಬುಳ್ಳವ) ಎಂದು ಕರೆಯಲಾಗಿದೆ. ಹತ್ತು ಅರಸರ ಯುದ್ಧದಲ್ಲಿ ಪಾಲ್ಗೊಂಡ ಒಂದು ಜನಾಂಗದ ಹೆಸರು **ವಿಷಾಣಿನ್** ಎಂದು ಹೇಳಲು ಮುಖ್ಯ ಕಾರಣ ಆ ವೀರರೆಲ್ಲರೂ ತಮ್ಮ ತಲೆಯ ಮೇಲೆ ಕೊಂಬುಗಳುಳ್ಳ ಶಿರಸ್ತ್ರಾಣವನ್ನು ಧರಿಸುತ್ತಿದ್ದರು ಎಂಬುದೇ. **ವೃಷಶಿಪ್ರ** (ಗೂಳಿಯನ್ನು ಹೋಲುವಂತೆ ರೂಪಿಸಿದ ಶಿರಸ್ತ್ರಾಣ) ಎಂದು ಋಗ್ವೇದದಲ್ಲಿ (೭ : ೯೯ : ೪)

---

34 E Macay : Further Excavations at Mohenjodaro Vol I ; p 335, Vol II plate LXXXVII Nos. 222, 235.

35 John Marshall : Mohenjodaro and Indus Civilization Vol I p 54. ಅನೇಕ ಪ್ರಾರಂಭಿಕ ಪುರಾಣಕಥೆಗಳಲ್ಲಿ ಕೊಂಬುಗಳ ಶಿರಸ್ತ್ರಾಣವು ದೈವಿಕ ಶಕ್ತಿಯ ಸಂಕೇತವೆಂದು ನಂಬುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ನೋಡಿ — J. G. Frazer : Adonis, Attis, Osiris (London 1907) p 20-30 & M. P. Nilsson : The Minoan -Mycenaean Religion and its Survival in Greek Religion (London 1950) p 185 ff.

ಹೇಳಿರುವುದರಿಂದ ಶಿರಸ್ತ್ರಾಣದಲ್ಲಿ ಇರುತ್ತಿದ್ದ ಕೊಂಬುಗಳು ಕೋಣನವು ಎಂದು ನಾವು ಊಹಿಸಬಹುದು[36].

ವೃಷಭದ ಕೊಂಬುಗಳು ವೃಷಭವನ್ನೇ ಸಂಕೇತಿಸುತ್ತದೆ ಎಂದು ಹೇಳುವಾಗ ಸಿಂಧೂ ಕಣಿವೆಯಲ್ಲಿ ದೊರೆತಿರುವ ಅವಶೇಷಗಳಲ್ಲಿ ವೃಷಭದ ಚಿತ್ರ ಅನೇಕ ಮುದ್ರಿಕೆಗಳ ಮೇಲೆ ದೊರೆತಿದೆ ಎಂಬುದನ್ನು ಆಗಲೇ ಹೇಳುತ್ತಿದ್ದೇವೆ. ೩೮೮ ಮುದ್ರಿಕೆಗಳಲ್ಲಿ ವೃಷಭವು ಚಿತ್ರಿತವಾಗಿದ್ದು ಒಂದೇ ಕೊಂಬನ್ನು ಪಡೆದಿರುವಂತೆ ಚಿತ್ರಿತವಾಗಿದೆ. ಮುದ್ರಿಕೆಗಳಲ್ಲಿ ಕಾಲ್ಪನಿಕ ರೂಪವನ್ನು ಚಿತ್ರಿಸುವ ಕಷ್ಟಸಾಧ್ಯದ ಕಾರ್ಯದಿಂದ ಇನ್ನೊಂದು ಕೊಂಬು ಇನ್ನೊಂದು ಬದಿಗೆ ಇರುವುದು ಎಂಬ ಸಾಮಾನ್ಯ ಕಲ್ಪನೆಗೆ ಅವಕಾಶ ಇರುವುದರಿಂದ ಒಂದೇ ಕೊಂಬು ಚಿತ್ರಿತವಾಗಿದೆ ಎನಿಸುತ್ತದೆ. ಎರಡು ಮುದ್ರಿಕೆಗಳಲ್ಲಿ (೨೩೪ ಮತ್ತು ೩೫೯) ಇದೇ ಪ್ರಾಣಿ ಎರಡು ಕೊಂಬುಗಳನ್ನು ಹೊಂದಿರುವಂತೆ ಚಿತ್ರಿತವಾಗಿದೆ. ಅನೇಕ ಇತರ ಮುದ್ರಿಕೆಗಳ ಮೇಲೆ (ಮ್ಯಾಕೆ, ಸಂಪುಟ ೧, ಚಿತ್ರ lxxii ೬೮೯, ೭೦೧) ಮೋಟುಕೊಂಬಿನ ವೃಷಭ ತನ್ನ ತಲೆಯನ್ನು ತಗ್ಗಿಸಿದ್ದು ಕೊಂಬಿನಿಂದ ಪೆಟ್ಟು ನೀಡಲು ಸಿದ್ಧವಾಗಿರುವಂತೆ ತೋರುತ್ತದೆ. ಅದರ ತಲೆಯ ಅಡಿಭಾಗದಲ್ಲಿ ಗೊಂದಣಿಗೆಯೊಂದು ಚಿತ್ರಿತವಾಗಿದೆ. (೩೩೫ ಮತ್ತು

ಕೊಂಬುಗಳು ಮತ್ತು ವೃಷಭ

---

36 ದಾಸಸ್ಯ ಚಿದ್ ವೃಷಶಿಪ್ರಸ್ಯ ಮಾಯಾ ಜಘ್ನಥುರ್ನರಾ ಪೃತನಾಜ್ಯೇಷು ।
ಇಂದ್ರಾವಿಷ್ಣೂ ದೃಂಹಿತಾಃ ಶಂಬರಸ್ಯ ನವ ಪುರೋ ನವತಿಂ ಚ
ಶ್ನಥಿಷ್ಟಮ್ ॥

ಗ್ರಿಫಿತ್ (ಸಂಪುಟ 2, ಪು ೯೮) ವೃಷಶಿಪ್ರ ಎಂಬ ಪದಕ್ಕೆ 'ಗೂಳಿಯಂತೆ ಬಲವಾದ ದವಡೆ' ಎಂದು ಅರ್ಥಕೊಟ್ಟು ಅದು ದಾಸನೊಬ್ಬನ ಹೆಸರೆಂದು ಸೂಚಿಸಿದ್ದಾರೆ. ಆದರೆ ಆಚಾರ್ಯ ಸಾಯಣರು ಋ. ೮:೧:೨೬ರ ಬಗ್ಗೆ ಭಾಷ್ಯ ಬರೆಯುತ್ತಾ ಶಿಪ್ರ ಎಂಬುದನ್ನು ಕೆನ್ನೆ ಮತ್ತು ಮೂಗುಗಳ (ಹನೂನಾಸಿಕೆ)ನ್ನು ಬಿಟ್ಟ ಶಿರಸ್ತ್ರಾಣವೆಂದು ಹೇಳುತ್ತಾರೆ. ೫:೫೪:೧೧ರಲ್ಲಿ ಶಿಪ್ರ ಎಂಬುದಕ್ಕೆ ಶಿರಸ್ತ್ರಾಣ ಎಂಬುದರ ಅರ್ಥವು ತುಂಬಾ ಸ್ಪಷ್ಟವಾಗಿದೆ—ಶಿಪ್ರಾಃ ಶೀರ್ಷಸು ವಿತತಾ ಹಿರಣ್ಮಯೀಃ. ಇದರೊಂದಿಗೆ ನೋಡಿ — ಋ ೬:೨೫:೩; ೮:೨:೨೮; ೮:೭:೪.

೬೫೫ ಹಾಗೂ ಅಸಾಧಾರಣ ಆಕೃತಿಯ ಮುದ್ರಿಕೆಯ ಸಂಖ್ಯೆ ೨೭೯ರಲ್ಲಿ ಈ ಗೊಂದಣಿಯೂ ಇಲ್ಲ. ಸುಮಾರು ಇಪ್ಪತ್ತೈದು ಮುದ್ರಿಕೆಗಳ ಮೇಲೆ ಕಟ್ಟುಮಸ್ತಾಗಿರುವ ಗೂಳಿಯ ಚಿತ್ರವೇ (ಮ್ಯಾಕೆ ಚಿತ್ರ xcix, C : ಮಾರ್ಷಲ್ ಚಿತ್ರ cxi, ೩೩೭) ಇದೆ—ಬಲವಾದ ಮೈ, ಎತ್ತರವಾದ ಗುಪ್ಪೆ, ತುಂಬಿ ತೂಗಾಡುವ ಚರ್ಮ, ಬಲವಾದ ಕಾಲು, ಸುರಳಿ ಸುತ್ತಿದ ಕೊಂಬುಗಳು.

ವೃಷಭವು ಋಗ್ವೇದದಲ್ಲಿ ಹಲವಾರು ದೇವತೆಗಳನ್ನು ಸಂಕೇತಿಸುತ್ತದೆ. ಉದಾಹರಣೆಗೆ ಋಗ್ವೇದದ ೧೦ : ೩೧ : ೮ ರಲ್ಲಿ ಸೂರ್ಯನು ವೃಷಭವಾಗಿ ದ್ಯಾವಾ-ಪೃಥಿವಿಗಳನ್ನು ಹಿಡಿದಿರಿಸಿರುವುದಾಗಿ ವರ್ಣಿತವಾಗಿದೆ. ೧ : ೩೩ : ೧೩ ರಲ್ಲಿ ಇಂದ್ರನ ವಜ್ರವನ್ನು ಚುರುಕಾದ ವೃಷಭವೆಂದು ಹೇಳಿದ್ದರೆ, ೧೦ : ೨೮ : ೨ ರಲ್ಲಿ ಇಂದ್ರನೇ ಮೊನಚಾದ ಕೊಂಬುಗಳುಳ್ಳ ಗುಟುರು ಹಾಕುತ್ತಿರುವ ಗೂಳಿ ಎಂದು ವರ್ಣಿಸಲ್ಪಟ್ಟಿದ್ದಾನೆ. ಪರ್ಜನ್ಯನನ್ನು ಘರ್ಜಿಸುತ್ತಿರುವ ಗೂಳಿ ಎಂದು ೩ : ೫೫ : ೧೭ರಲ್ಲಿ ಹೋಲಿಸಲಾಗಿದೆ. ಅಗ್ನಿಯನ್ನು 'ನವಜಾತ ವೃಷಭ' ಎಂದು ೭ : ೩ : ೩ ರಲ್ಲಿ ಹೇಳಲಾಗಿದೆ. ಕಂದು ವರ್ಣದ ಗೂಳಿ ಎಂದು ರುದ್ರನನ್ನು ೨ : ೩೩ : ೧೫ರಲ್ಲಿ ಸಂಬೋಧಿಸಲಾಗಿದೆ. ದ್ಯೌಸ್‌ಗೆ ಗುಟುರುಹಾಕುವ ಗೂಳಿಯೆಂಬ ಪ್ರತಿನಾಮವು ೧:೧೬೦:೩ ರಲ್ಲಿ ಕೊಡಲಾಗಿದೆ. ವೃಷಭದ ಈ ಮಹತ್ವಕ್ಕೆ ಕಾರಣವೆಂದರೆ ಅದರ ಸಂತಾನೋತ್ಪಾದನಾ ಶಕ್ತಿ. ಈ ಶಕ್ತಿಯ ಫಲವಾಗಿ ಪ್ರಕೃತಿಯಲ್ಲಿ ನಡೆಯುತ್ತಿರುವ ಜೀವನಚಕ್ರ. ಆದ್ದರಿಂದ ವೃಷಭವು ಸಂತಾನಶಕ್ತಿಯ ಸಂಕೇತವಾಗಿ ಪ್ರಕೃತಿಯ ಹಲವಾರು ಶಕ್ತಿಗಳ ಸಂಕೇತಗಳಾದ ದೇವತೆಗಳಲ್ಲೂ ಇದು ಅವರ ಶಕ್ತಿಯ ಅಂಶಗಳನ್ನೂ ನಿರೂಪಿಸುವುದಕ್ಕಾಗಿ ಉಪಯೋಗವಾಗಿರಬೇಕು.

ಸಿಂಧೂ ಕಣಿವೆಯಲ್ಲಿ ದೊರೆತಿರುವ ವೃಷಭ ಮುದ್ರಿಕೆಗಳಲ್ಲಿ ಬಹುಪಾಲಿನ ಮುದ್ರಿಕೆಗಳಲ್ಲಿ ವೃಷಭದ ಮುಂಗಾಲಿನ ಪ್ರಾರಂಭಭಾಗದ ಮೇಲೆ

ಕಲೆಯುಳ್ಳ ವೃಷಭ

ಅಥವ ವೃಷಭದ ಕೊರಳಿನ ಮೇಲೆ ಹೃದಯಾಕಾರದ ಚಿತ್ತಾರ ತಲೆಕೆಳಗಾಗಿರುವಂತೆ ಚಿತ್ರಿತವಾಗಿದೆ. ಝೂಬ್‌ನಲ್ಲಿ ದೊರೆತಿರುವ ವೃಷಭ

ಮುದ್ರಿಕೆಯಲ್ಲಿ ಕೊಂಬುಗಳ ಮಧ್ಯೆ ಮೊಟ್ಟೆಯಾಕಾರದ ಆಕೃತಿಯನ್ನು ಚಿತ್ರಿಸಲಾಗಿದೆ[37]. ಋಗ್ವೇದಲ್ಲಿ (೧ : ೧೬೪ : ೪೩) ಹೇಳಲಾಗಿರುವ ಕಲೆಯುಳ್ಳ ವೃಷಭವು ಸೂರ್ಯನೆಂದು ಅರ್ಥೈಸಿ (ಋಗ್ವೇದ ೧೦ : ೧೮೯ : ೧) ಅಮೃತತ್ವ ಮತ್ತು ಮರಣಗಳೆಂಬ ಎರಡು ತತ್ವಗಳನ್ನು ಸಮಾವಿಷ್ಟಗೊಳಿಸಲಾಗಿದೆ[38].

ತ್ರಿಶಿರಸ್ ದೇವನ ಶಿರಸ್ತ್ರಾಣದಲ್ಲಿರುವ ಮೂರು ಕೊಂಬುಗಳಿಗೆ ಜೊತೆಯಾಗಿ ಮೂರು ತಲೆಗಳ ವೃಷಭವು (ಈ ತಲೆಗಳು ಹಿಂದು, ಮುಂದೆ ಹಾಗೂ ಕೆಳಗೆ ನೋಡುತ್ತಿರುವಂತೆ ಇವೆ) ದೊರೆಯುತ್ತದೆ. ಈ ಚಿತ್ರದಲ್ಲಿರುವ ತಲೆಗಳು ಒಂದು ಏಕಶೃಂಗಿಯದು, ಮತ್ತೊಂದು ಕಾಡು ಮೇಕೆಯದು, ಇನ್ನೊಂದು ಕಾಡುಕೋಣದು (ಮ್ಯಾಕೆ II, ಚಿತ್ರ xcix B) ಋಗ್ವೇದದ ೩:೫೬:೩ ರಲ್ಲಿ ವರ್ಣಿತವಾಗಿರುವುದರ ರೂಪವೇ ಇದು. ಆ ಮಂತ್ರಾರ್ಥ ಇಂತಿದೆ :'ವಿಶ್ವರೂಪ ಸಾಮರ್ಥ್ಯವನ್ನು ಪಡೆದಿರುವ, ಮೂರು ಕೆಚ್ಚಲನ್ನು ಹೊಂದಿರುವ, ಹಲವು ಎಡೆಗಳಲ್ಲಿ ತನ್ನ ಸಂತಾನವನ್ನು ಪಡೆದಿರುವ, ಸೃಷ್ಟಿಯನ್ನು ಮುಂದುವರಿಸಲು ಶಾಶ್ವತವಾಗಿ ತೇಜಸ್ಸನ್ನು ದಾನ ಮಾಡಿ ಗರ್ಭವನ್ನುಂಟುಮಾಡುವ ವೃಷಭವು ತನ್ನ ತ್ರಿಮೂರ್ತಿ ರೂಪದಿಂದ ಸರ್ವವನ್ನೂ ನಿಯಂತ್ರಿಸುತ್ತದೆ'[39]. ಇಲ್ಲಿ ಹೇಳಿರುವ ತ್ರಿಮೂರ್ತಿ ರೂಪವು

ಮೂರು ತಲೆಗಳ ವೃಷಭ

---

37 W. A. Fairservis : The Harappan Civilzation—New Evidence and More theory p 20-24.

38 V. S. Agrawala : The Thousand — Syllabled Speech. I. Vision in Long Darkness p 164.

39 ತ್ರಿಪಾಜಸ್ಯೋ ವೃಷಭೋ ವಿಶ್ವರೂಪ ಉತ ತ್ರ್ಯುಧಾ ಪುರುಧ ಪ್ರಜಾವಾನ್। ತ್ರ್ಯನೀಕಃ ಪತ್ಯತೇ ಮಾಹಿನಾವಾನ್ತ್ಸ ರೇತೋಧಾ ವೃಷಭಃ ಶಶ್ವತೀನಾಮ್ ॥

ಋಗ್ವೇದದ ೪:೫೮:೩[40] ರಲ್ಲಿ ಉಲ್ಲೇಖಿತವಾಗಿರುವ ವೃಷಭದ ಮೂರು ಬಂಧನಗಳು. ಈ ವೃಷಭ ವಿಶ್ವರೂಪನು ಈ ಮೊದಲೇ ಹೇಳಿರುವ ಮುದ್ರಿಕೆಯ ಮೇಲೆ ಕೆತ್ತಲಾಗಿರುವ ತ್ವಾಷ್ಟ್ರ ವಿಶ್ವರೂಪನ ಮತ್ತೊಂದು ರೂಪ ಎಂಬುದು ಸ್ಪಷ್ಟವಾಗಿ ಭಾಸವಾಗುತ್ತದೆ.

ಮುದ್ರಿಕೆಯಲ್ಲಿರುವ **ಊರ್ಧ್ವ ಮೇಢ್ರ**(ಉದ್ದೀಪನಗೊಂಡ ಲಿಂಗ)ವು ಸಂತಾನೋತ್ಪತ್ತಿಯ ಶಕ್ತಿಯನ್ನು ಸಂಕೇತಿಸುತ್ತದೆ [ಸ್ಮರಿಸಿ: ಊರ್ಧ್ವರೇತಸ್ಕ ಋಷಿಗಳೆಂದೇ ಹೆಸರಾಗಿರುವ ಋಷಿಗಣವು ಸಂತಾನೋತ್ಪತ್ತಿಗಾಗಿಯೇ ಇದ್ದರು ಎಂಬುದು]. ತ್ವಷ್ಟೃವು ಸಂತಾನೋತ್ಪತ್ತಿಗೆ ಅಧಿಷ್ಠಾತೃವಾಗಿದ್ದು ಸುತರನ್ನು ಪ್ರಸಾದಿಸುವ ದೇವನೆಂದು ವರ್ಣಿಸಲ್ಪಟ್ಟಿದ್ದಾನೆ: "ಎಲೈ ತ್ವಷ್ಟೃ ದೇವನೇ, ನಮ್ಮ ಬಗ್ಗೆ ಸಂಪ್ರೀತನಾಗಿ ನಮ್ಮಲ್ಲಿ ಸಂತಾನೋತ್ಪಾದನಾ ಶಕ್ತಿಯನ್ನು ತುಂಬಿ ಸುತರನ್ನು

ಊರ್ಧ್ವ ಮೇಢ್ರ

40 ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ ।
ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಁ ಆ ವಿವೇಶ ॥

ಈ ಮುದ್ರಿಕೆ ಹಾಗೂ ಇತರ ಮುದ್ರಿಕೆಗಳ ರಚನಾ ವೈವಿಧ್ಯವನ್ನು ಅವುಗಳಲ್ಲಿಯ ಚಿತ್ರಗಳ ಸಂಕೇತಾರ್ಥಗಳ ಬಗ್ಗೆ ಟಿ. ಎನ್. ರಾಮಚಂದ್ರನ್ ಅವರ ಈ ಅಭಿಪ್ರಾಯವು ಗಮನಾರ್ಹ: ''ಋಗ್ವೇದದ ಕವಿಗಳು ಕಲ್ಪಿಸಿದ ಜೀವಿಗಳ ವಿಚಿತ್ರರೂಪು, ಪ್ರಾಕೃತ ಹಾಗೂ ಅವರ ಕಲ್ಪನಾ ಲೋಕದ ಚಿತ್ರಗಳಲ್ಲಿ ಮನುಷ್ಯ ಮತ್ತು ಪ್ರಾಣಿಗಳ ಸಂಯೋಜಿತ ನಿರೂಪಣೆಯನ್ನು ಸಿಂಧೂ ಕಣಿವೆಯಲ್ಲಿ ದೊರೆತಿರುವ ಬಹುಪ್ರಾಣಿ ಸಂಯೋಜಿತ ಮುದ್ರಿಕೆಗಳನ್ನು ನಿರ್ಮಿಸಿದಂತಹ ಕೆತ್ತನೆಗಾರರು, ರೂಪಶಿಲ್ಪಿಗಳು, ಶಿಲ್ಪಿಗಳಿಂದ ಅವನ್ನೇ ತಮ್ಮ ಸೂಕ್ತಗಳನ್ನಾಗಿ ರೂಪಿಸಿದ್ದಾರೆ. ಋಗ್ವೇದದ ಋಷಿಗಳು, ಸಿಂಧೂಕಣಿವೆಯ ಶಿಲ್ಪಿಗಳು ಇಬ್ಬರೂ ಪ್ರಾಣಿಗಳನ್ನು, ಹಕ್ಕಿಗಳನ್ನು, ಮನುಷ್ಯಾಕೃತಿಗಳನ್ನು ಪ್ರಕೃತಿಯಲ್ಲಿ ಕಂಡುಬರುವಂತೆ ನೈಜರೂಪಲ್ಲಿ ಅಂಗೀಕರಿಸಿ ಅಭ್ಯಸಿರುವಂತೆಯೇ ಅವನ್ನು ಮಿಶ್ರಣ ಮಾಡಿ ಸಂಕೇತಗಳನ್ನು ರೂಪಿಸಿ 'ಆವೇಷ'ಗಳನ್ನು ನಿರ್ಮಿಸುವುದರಲ್ಲೂ ಒಂದೇ ರೀತಿಯಲ್ಲಿ ಅವರು ಯೋಚಿಸುತ್ತಿದ್ದಂತೆ ಕಂಡುಬರುತ್ತದೆ."

ಪ್ರವೃದ್ಧಿಸುವಂತಹವನಾಗು'[41] ಜಗತ್ತನ್ನೆಲ್ಲಾ ಸೃಷ್ಟಿಸಿದ ಜಗತ್ಪಿತೃವು ಈತನೇ[42]; ಈತನೇ ಇಂದ್ರನ ಹಾಗೂ ವೃತ್ರರ ತಂದೆ [ಋಗ್ವೇದ ೪:೧೮:೧೨; ೩:೪೮:೨ ಮಂತ್ರಗಳನ್ನು ೪:೧೮:೩ರೊಂದಿಗೆ ಓದಿ]. ಈತನು ಸುರನಾರಿಯರೊಂದಿಗೆ (ಎಂದರೆ ದೇವತೆಗಳ ಪತ್ನಿಯರೊಂದಿಗೆ) ತುಂಬಾ ಹತ್ತಿರದ ಸಂಬಂಧ ಹೊಂದಿರುವವನು (ಋ ೧:೨೨:೯). ಈ ಎಲ್ಲಾ ವಿವರಣೆಗಳ ನಂತರ ಉದ್ದೀಪನಗೊಂಡ ಲಿಂಗದಂತೆ ಕಾಣಿಸುವುದನ್ನು ನಡುಕಟ್ಟಿನ ಅಥವಾ ವಸ್ತ್ರಾಣದ ಕೊನೆಯೆಂದು ಅರ್ಥಮಾಡುವುದು ಆಧಾರಶೂನ್ಯವಾದ ವಾದ.

'ಪಶುಪತಿ' ಮುದ್ರಿಕೆಯೆಂದು ಹೆಸರಾಗಿರುವ ಈ ತ್ರಿಶೀರ್ಷ ಮೂರ್ತಿಯ ಮುದ್ರಿಕೆಯಲ್ಲಿ ಚಿತ್ರಿತವಾಗಿರುವ ದೇವನ ತೋಳುಗಳು ಮಣಿಕಟ್ಟಿನಿಂದ ಭುಜದ ತನಕ ಬಳೆಗಳಿಂದ ತುಂಬಿದೆ. ಮೊಹೆಂಜದಾರೋವಿನಲ್ಲಿ ದೊರೆತಿರುವ ನರ್ತಕಿಯ ವಿಗ್ರಹದಲ್ಲೂ ಕೂಡ ಅವಳ ಕೈ ತುಂಬಾ ಬಳೆಗಳು ಇವೆ. ಆದ್ದರಿಂದ ಈ ರೀತಿ ಬಳೆಗಳಿಂದ ಅಲಂಕರಿಸುವುದು ಆಗಿನ ಪದ್ಧತಿ ಎನಿಸುತ್ತದೆ.

ಬಳೆಗಳಿಂದ ಅಲಂಕರಿಸಿದ ತೋಳು

ಈ ಸಂದರ್ಭದಲ್ಲಿ ತ್ವಷ್ಟೃವನ್ನು ಋಗ್ವೇದದ ೬:೪೯:೯ರಲ್ಲಿ ಸುಂದರ ತೋಳಿನವ (**ಸುಗಭಸ್ತಿ**) ಅಥವಾ ಸುಂದರ ಅಂಗೈಯುಳ್ಳವ (**ಸುಪಾಣಿ**) ಎಂದು ವರ್ಣಿಸಿರುವುದನ್ನು ಅವಶ್ಯಕವಾಗಿ ಗಮನಿಸಬೇಕು. ಇದೇ ಭಾವವನ್ನು ಆಗಿನ ಕಾಲದಲ್ಲಿದ್ದ ಸೌಂದರ್ಯದ ಪ್ರಜ್ಞೆಯ ಅನುಸಾರವಾಗಿ ತೋಳಿನ ತುಂಬಾ ಬಳೆಗಳನ್ನು ತುಂಬಿ ಅದನ್ನು ಸುಂದರಗೊಳಿಸಲಾಗಿದೆ.

ಮುದ್ರಿಕೆಯಲ್ಲಿ ರೂಪಿತವಾಗಿರುವ ದೇವನ ಪೀಠದ ಅಡಿಯಲ್ಲಿ ಎರಡು ಜಿಂಕೆಗಳನ್ನು ತೋರಿಸಲಾಗಿದೆ. ಒಂದು ಆಖ್ಯಾಯಿಕೆಯ ಪ್ರಕಾರ ಪ್ರಜಾ

---

41 ತನ್ನಸ್ತುರೀಪಮಧ ಪೋಷಯಿತ್ನು ದೇವ ತ್ವಷ್ಟರ್ವಿ ರರಾಣಃ ಸ್ಯಸ್ವ ।
ಯತೋ ವೀರಃ ಕರ್ಮಣ್ಯಃ ಸುದಕ್ಷೋ ಯುಕ್ತಗ್ರಾವಾ ಜಾಯತೇ ದೇವಕಾಮಃ ॥

42 ವಾಜಸನೇಯಿ ಸಂಹಿತಾ ೨೯:೯

ಜಿಂಕೆಯ ಮಿಥುನ

ಪತಿಯು ಜಿಂಕೆಯ ರೂಪವನ್ನು ತಳೆದು ಹೆಣ್ಣು ಜಿಂಕೆಯ ರೂಪವನ್ನು ಪಡೆದಿದ್ದ ತನ್ನ ಮಗಳಾದ ಉಷಸ್ಸನ್ನು ಕೂಡಿದ. ರುದ್ರನು ತನ್ನ ಬಾಣವನ್ನು ಅವರ ಮೇಲೆ ಪ್ರಯೋಗಿಸಲು ಸನ್ನದ್ಧನಾಗಿದನ್ನು ಕಂಡು ಆತನಿಗೆ 'ಪಶುಪತಿ' ಸ್ಥಾನವನ್ನು ಕೊಡುವ ಆಸೆ ತೋರಿ ಆ ಬಾಣವನ್ನು ಪಕ್ಕಕ್ಕೆ ಸರಿಸುವಂತೆ ಮಾಡಲಾಯಿತು[43]. **ಮೃಗ, ಮೃಗವ್ಯಾಧ,** ಮೂರು ಮೊನೆಗಳುಳ್ಳ ಬಾಣವಾದ **ಇಷು ತ್ರಿಕಾಂಡವು** ಈ ಆಖ್ಯಾಯಿಕೆಯಿಂದ ಖಗೋಳ ವಿಜ್ಞಾನವನ್ನು ಸೇರಿ ಆಕಾಶದಲ್ಲಿಯ ನಕ್ಷತ್ರ ಪುಂಜಗಳಾದವು[44]. ಪೀಠದ ಅಡಿಯಲ್ಲಿ ಇರುವ ಎರಡು ಜಿಂಕೆಗಳನ್ನು ಈ ಆಖ್ಯಾಯಿಕೆಯ ಬೆಳಕಿನಲ್ಲಿ ಅರ್ಥ ಮಾಡಿಕೊಳ್ಳುವುದರಲ್ಲಿ ಕಷ್ಟವೇನೂ ಇಲ್ಲ.

ಮುದ್ರಿಕೆಯಲ್ಲಿರುವ ತ್ರಿಶೀರ್ಷಮೂರ್ತಿಯು ಅನೇಕ ಕಾಡು ಪ್ರಾಣಿಗಳಿಂದ ಸುತ್ತುವರಿಯಲ್ಪಟ್ಟಿರುವಂತಿದೆ– ಕಾಡುಕೋಣ ಮತ್ತು ಘೇಂಡಾಮೃಗ ಬಲಭಾಗದಲ್ಲಿದ್ದರೆ ಆನೆ ಮತ್ತು ಹುಲಿ, ಅವುಗಳ ಮಧ್ಯೆ ಒಬ್ಬ ವ್ಯಕ್ತಿ ಎಡಭಾಗದಲ್ಲಿದ್ದಾರೆ. ಋಗ್ವೇದದ ೩:೫೫:೧೯ರಲ್ಲಿ

ಪಶುಪತಿ

ಸೃಷ್ಟಿಯ ಎಲ್ಲಾ ಜೀವಿಗಳು ತ್ವಷ್ಟೃದೇವನವೇ ಎಂದು ಹೇಳಿರುವುದು ಶತಪಥ ಬ್ರಾಹ್ಮಣದ ೩:೭:೩:೧೧; ೮:೮:೧೧ ರಲ್ಲೂ ಪುನರುಕ್ತವಾಗಿ ಬಲಗೊಂಡಿದೆ.

ಆದ್ದರಿಂದ ಇದುವರೆವಿಗೂ ನೀಡಿರುವ ಮಾಹಿತಿಯಿಂದ ಸಿಂಧು ಕಣಿವೆಯಲ್ಲಿ ದೊರೆತಿರುವ ಈ ತ್ರಿಶೀರ್ಷಮೂರ್ತಿಯ ಮುದ್ರಿಕೆಯಲ್ಲಿ ಚಿತ್ರಿತವಾಗಿರುವುದು ಋಗ್ವೇದದಲ್ಲಿ ವರ್ಣಿತವಾಗಿರುವ ವಿಶ್ವರೂಪ ತ್ವಾಷ್ಟ್ರನೆಂದು ಬಹು ಅಂಶಗಳಲ್ಲಿ ಸ್ಪಷ್ಟವಾದ ಸಾಮ್ಯವನ್ನು ಹೊಂದಿದ್ದು ಈ ತ್ರಿಶೀರ್ಷ ದೇವನು ವಿಶ್ವರೂಪ ತ್ವಾಷ್ಟ್ರನೇ ಎಂಬುದರ ಬಗ್ಗೆ ಸಂಶಯವೇ ಇಲ್ಲವೆಂದು ನಿರೂಪಿಸುತ್ತದೆ.

---

43 ಮೈತ್ರಾಯಿಣಿ ಸಂಹಿತಾ, ೪:೨:೧೨; ಐತರೇಯ ಬ್ರಾಹ್ಮಣ, ३:३३

44 A. B. Keith : Religion and Philosophy of the Veda, p 203

❋ ಡಾ. ಶಂ. ಬಾ. ಜೋಶಿ

೨

ವಿಶ್ವಬ್ರಾಹ್ಮಣರು —ಒಂದು ವೈದಿಕ ವಿಶ್ಲೇಷಣೆ

ತಕ್ಷ(ಕ) : ವಿಶ್ವರೂಪ : ತ್ವಷ್ಟಾ (ವಿಶ್ವಕರ್ಮ)

ತಕ್ಷ ಎಂದರೆ ಬಡಿಗ, ತಕ್ಷ ಆಖ್ಯಾತದ ಮುಖ್ಯಾರ್ಥ: ಮಾಡು ನಿರ್ಮಿಸು, ರೂಪಿಸು. ತಕ್ಷಕನು ಎಂದರೆ ಬಡಿಗನು ಮಾತ್ರವಲ್ಲ ಕುಶಲ ಕಲಾವಿದನು ಎಂಬರ್ಥವಾಗುತ್ತದೆ. ನಾಟಕದ ಸೂತ್ರಧಾರನೆಂದೂ ಅರ್ಥ ವಿದೆ. ಸೃಷ್ಟಿಕರ್ತ ವಿಶ್ವಕರ್ಮನಿಗೆ ತಕ್ಷಕ ಎಂದು ಹೆಸರಿದ್ದುದಾಗಿ ತಿಳಿಯು ತ್ತದೆ. ತಕ್ಷಕ ನಾಗರಾಜಕುಮಾರನಿದ್ದುದಾಗಿ ವೈದಿಕ ಸಾಹಿತ್ಯದಲ್ಲಿದೆ. ನಾಗರಲ್ಲಿ ತಕ್ಷಕರು ಮೇಧಾವಿಗಳು ಆಗಿರಬೇಕು.

ನಾಗರು ಇಂದ್ರ ವಿರೋಧಿಗಳು. ತಕ್ಷಕನು ನಾಗನೆಂಬುದು ಒಂದು ಸಂಕೇತವಿರಬೇಕು. ಇಂದ್ರ ಸಂಪ್ರದಾಯಗಳಲ್ಲಿ ನಾಗರ ದ್ವೇಷ ಬಹುಕಾಲದ ವರೆಗೆ ಉಳಿದಂತೆ ತೋರುತ್ತದೆ ವಿಷ್ಣು ಸಂಪ್ರದಾಯವು ಈ ಹಗೆತನವನ್ನು ಮುಂದುವರಿಸಿದಂತಿದೆ. ಅರ್ಜುನ ಖಾಂಡವವನ ದಹನ ಮಾಡಿದನು. ನಾಗರನ್ನು ಹಿಂಸಿಸಿದನು. ಅರ್ಜುನನು ಇಂದ್ರಪುತ್ರನೆಂಬ ಸಂಕೇತವಿದೆ. ಪಾಂಡವಕುಲದ ಪರೀಕ್ಷಿತನನ್ನು ಒಬ್ಬ ತಕ್ಷಕನು ಕೊಲ್ಲುತ್ತಾನೆ. ಪರೀಕ್ಷಿತನು ಸರ್ಪಯಾಗ ಮಾಡುತ್ತಾನೆ.

ತಕ್ಷಕನು ಇಂದ್ರನ ಮೊರೆಹೊಕ್ಕನು. ಆ ಯಾಗದಲ್ಲಿ ತಕ್ಷಕನೊಡನೆ ಇಂದ್ರನೂ ಆಹುತಿಯಾಗಲಿ (**ಇಂದ್ರಾಯ ತಕ್ಷಕಾಯ ಸ್ವಾಹಾ**) ಎಂದು

ವಿಧಿಸಲಾಯಿತು. ಆಸ್ತಿಕ ಋಷಿಯು ಪರೀಕ್ಷಿತನ ಈ ಯಾಗದಲ್ಲಿ ಋತ್ವಿಜನಾಗಿದ್ದನು. ಆಸ್ತಿಕನ ತಾಯಿ ಒಬ್ಬ ನಾಗಪುತ್ರಿ. ಇವನ ತಂದೆ ಭೃಗುವಂಶದವನು. ತಾಯಿಯ ಮನೆತನ ನಾಶವಾಗಬಾರದೆಂದು ಚಾತುರ್ಯದಿಂದ ಯಜ್ಞವನ್ನು ಮುಕ್ತಾಯಗೊಳಿಸಿದಾಗ ನಾಗಾವಂಶದ ಶೇಷವು ಉಳಿಯಿತು.

ಪ್ರಾರಂಭದಲ್ಲಿ ಇಂದ್ರ ಸಂಪ್ರದಾಯ ಮತ್ತು ಜಲ ಸಂಪ್ರದಾಯದ ನಾಗ–ತಕ್ಷಕ ಶಾಖೆ ಇವರಲ್ಲಿ ವೈರವಿದ್ದಿತು. ಆದರೆ ಮುಂದೆ ಅಗ್ನಿಪೂಜಕ ಇಂದ್ರ ಸಂಪ್ರದಾಯಗಳಲ್ಲಿ ಮತ್ತು ಜಲಸಂಪ್ರದಾಯಿ ನಾಗರಲ್ಲಿ ಹಲ-ಕೆಲವು ಶಾಖೆಗಳಲ್ಲಿ ಸಖ್ಯವು ಬೆಳೆದು ವಿವಾಹಾದಿಗಳು ಆಗತೊಡಗಿದವು ಎಂದು ಈ ಕಥೆಯಿಂದ ಧ್ವನಿತಪಡಿಸಲಾಗಿದೆ.

ವಿಶ್ವರೂಪನ ಕಥಾಭಾಗವು ಬ್ರಾಹ್ಮಣಗಳಲ್ಲಿ ಬರುತ್ತದೆ. ವಿಶ್ವರೂಪನು ತ್ವಷ್ಟಾರನ ಮಗನು. ದೇವಾಸುರರಿಬ್ಬರನ್ನೂ ಸಮನಾಗಿ ನೋಡುವವನು. ಯಜ್ಞಕಾಲದಲ್ಲಿ ದೇವತೆಗಳೊಡನೆ ಅಸುರರಿಗೂ ಗುಪ್ತವಾಗಿ ಹವಿಸ್ಸನ್ನು ಸಲ್ಲಿಸುತ್ತಿದ್ದನು. ಇದನ್ನು ತಿಳಿದು ಇಂದ್ರನು ವಿಶ್ವರೂಪನ ಮೂರು ಶಿರಗಳನ್ನು ಕಡಿದನು. ಇಂದ್ರನಿಗೆ ಬ್ರಹ್ಮಹತ್ಯಾ ಪಾತಕವು ಅಂಟಿತು. ತಕ್ಷಕ ನಾಗರು ಬ್ರಾಹ್ಮಣರು ವೇದಜ್ಞರು ಆಗಿರಬೇಕೆಂದು ಈ ಕಥೆ ಹೇಳುತ್ತಿದೆ.

ತ್ವಷ್ಟಾ (ಪ್ರಜಾಪತಿ : ವಿಶ್ವಕರ್ಮನು) ದೇವತೆಗಳ ಶಿಲ್ಪಿ ಎಂದು ಅಥರ್ವಣ ವೇದದಲ್ಲಿದೆ. ಈತನ ಮಗ ವಿಶ್ವರೂಪನು ತನ್ನನ್ನು ಪದಭ್ರಷ್ಟ ಮಾಡಬಹುದೆಂದು ಹೆದರಿ ಇಂದ್ರನು ಆತನನ್ನು ಕೊಂದನು. ಶತಪಥ ಬ್ರಾಹ್ಮಣದಿಂದ ಇನ್ನೊಂದು ಅಂಶವು ತಿಳಿಯುತ್ತದೆ. ತ್ವಷ್ಟಾರನ ಯಜ್ಞದಲ್ಲಿ ಆಗಂತುಕನಾಗಿ ಹೋಗಿ ಸೋಮಪಾನ ಮಾಡಿದನು. ಅದನ್ನು ಕಕ್ಕಬೇಕಾಯಿತು. ಇಂದ್ರನು ಕುಡಿದುಳಿದ ಸೋಮಭಾಗವನ್ನು ಇಂದ್ರ ಶತ್ರು ವೃತ್ರನಿಗೆ ಕೊಟ್ಟು ಬಲಶಾಲಿಯನ್ನಾಗಿ ಮಾಡಿದನು.

ವಿಶ್ವಕರ್ಮನಿಂದ ರಚಿತವಾದ ಒಂದು ಸೂಕ್ತವು ಋಗ್ವೇದದ ಹತ್ತನೆಯ ಮಂಡಲದಲ್ಲಿದೆ. ವಿಶ್ವಕರ್ಮನು ಸೃಷ್ಟಿಕರ್ತನೆಂದು ವರ್ಣಿಸಲ್ಪಟ್ಟಿದ್ದಾನೆ. ಇವನು

ವಿಶ್ವತೋಮುಖನು. ಕಾಲಿನಿಂದ ಸ್ವರ್ಗವನ್ನೂ, ಕೈಯಿಂದ ಭೂಲೋಕವನ್ನೂ ನಿರ್ಮಿಸುತ್ತಾನೆ. ವಿಶ್ವಕರ್ಮನಿಗಾಗಿ ಯಾಗಗಳು ಆಗುತ್ತಿದ್ದವು.

ಋಗ್ವೇದದ ೧ನೆಯ ಮತ್ತು ೧೦ನೆಯ ಮಂಡಲದಲ್ಲಿ ಅನೇಕ ಹೊಸ ಮಾತುಗಳು ಬರುತ್ತವೆ. '**ಕಂ**' ದೇವರ ಸೂಕ್ತದಂತೆ ವಿಶ್ವಕರ್ಮನ ಕುರಿತ ವರ್ಣನೆಯೂ ಹೊಸದು. ವಿಶ್ವನಿರ್ಮಾಣ ಮತ್ತು ಸಂರಕ್ಷಣದ ಏಕಮೇವ ಅಧಿಕಾರಿ ಯಾರು, ಎಂಬ ವಿವಾದಗಳ ಪ್ರತಿಧ್ವನಿ ಇಂತಹ ಕೆಲವು ಸೂಕ್ತಗಳಲ್ಲಿ ಕೇಳಿಬರುತ್ತದೆ. ಇಂದ್ರನ ಅದ್ವಿತೀಯತ್ವದ ಕಾಲವು ಮುಗಿದು ಆ ಸ್ಥಳವನ್ನು ತಮ್ಮ ತಮ್ಮ ಇಷ್ಟದೇವರಿಗೆ ದೊರಕಿಸಿ ಕೊಡುವಲ್ಲಿ ಋಷಿವರ್ಗದಲ್ಲಿ ಸ್ಪರ್ಧೆ ನಡೆದಂತೆ ತೋರುತ್ತದೆ. ಇಂದ್ರ ಸಂಪ್ರದಾಯದಲ್ಲಿ ನೂತನ ಪಂಥಪಕ್ಷಪಾತಿಗಳ ಸಂಖ್ಯೆ ಹೆಚ್ಚುತ್ತ ಹೋಗಿ ಯಜ್ಞಸಂಸ್ಥೆಯ ಪ್ರಭಾವವು ಕ್ಷೀಣವಾಗುತ್ತ ಹೋಗಿರಬೇಕೆಂದು ಮುಂದಿನ ಕಾಲದ ಘಟನೆಗಳಿಂದ ಅರ್ಥವಾಗುತ್ತದೆ.

ವಿಶ್ವಕರ್ಮ : ಕಂ

ಈ ವಿಶ್ವವನ್ನು ನಿರ್ಮಿಸಲು ಯಾವ ಹೆಮ್ಮರವನ್ನು ಉಪಯೋಗಿಸಬಹುದು? ರಸ (: ಆಪ,)ವು ಸೃಷ್ಟಿಯ ಮೂಲ ತತ್ವವೆಂಬುದನ್ನು ಈ ಪ್ರಶ್ನೆಯು ಹೇಳುತ್ತದೆ. ಆ ರಸವು ವೃಕ್ಷವಾಗಿದ್ದರೆ ಆ ವೃಕ್ಷವು ಎಷ್ಟು ಮಹಾನ್ ಇರಬೇಡ ! ಅಂದಿನ ಕವಿಗಳ ಪ್ರತಿಭೆಯು ನಿರಾತಂಕವಾಗಿ ನೇರವಾಗಿ ಈ ಬಗೆಯಲ್ಲಿ ಮೂಲತತ್ವದ ಕಡೆಗೆ ಓಡುತ್ತಿತ್ತು. ವಿಶ್ವ ಮಂದಿರಕ್ಕೆ ಕಟ್ಟಿಗೆ ಬಳಸಿದ ಉಪಮೆಯು ಕರ್ತೃ ಆ ಕಾಲದ ವಾಸ್ತು ಶಿಲ್ಪಿಗೆ ಸಲ್ಲಬೇಕು.

ಋಗ್ವೇದ ಕಾಲದಲ್ಲಿ ಶಿಲ್ಪವಿದ್ಯೆ ಸಾಕಷ್ಟು ಉನ್ನತಸ್ಥಿತಿಯಲ್ಲಿ ಇತ್ತು. ಅಂದಿನ ಪ್ರಕಾರದ ಅಲಂಕಾರಗಳು, ಪಾತ್ರೆಗಳು, ನಿವಸನಗಳು, ಯಜ್ಞವೇದಿಕೆಯ ಪ್ರಕಾರಗಳು ಇವೆಲ್ಲವುಗಳ ರಚನೆ ತಜ್ಞರಿಂದಲ್ಲದೆ ಬೀದಿ ಹೋಕರಿಂದ ಆಗದು. ದೇವತೆಗಳೂ ರಾಜರೂ ರಥಗಳಲ್ಲಿ ತಿರುಗುತ್ತಿದ್ದರು. ಯುದ್ಧದಲ್ಲಿ ಬಂಡಿಗಳು ಮೊದಲು ಬೇಕು. ಉಭಯ ಪಕ್ಷದವರ ರಥಕಾರರು ಆಯುಧ ಸಿದ್ಧಪಡಿಸುವವರು ಇರಲೇಬೇಕು. **ರಥೇ ಭ್ಯೋ ರಥಕಾರೇ ಭ್ಯೋ ನಮಃ** ಎಂಬ ವಂದನೆಯ ಮಂತ್ರವುಂಟು. ಈ ಮಂತ್ರವು ರುದ್ರಾಧ್ಯಾಯ

ದಲ್ಲಿ ಬರುತ್ತದೆ. ಶೈವ ಸಂಪ್ರದಾಯಕ್ಕೆ ಸೇರಿದ ಜನರಿರಬೇಕೆಂದು ಎನಿಸುತ್ತದೆ. ಪಾಂಚಾಲರು ಇಂದು ವಿಶ್ವಬಾಹ್ಮಣರು ಎನಿಸುತ್ತಾರೆ.

ವಿಶ್ವಕರ್ಮ ಹೆಸರಿನ ಪ್ರಜಾಪತಿ ಇದ್ದುದು ಋಗ್ವೇದದಿಂದ ತಿಳಿಯುತ್ತದೆ. ದಕ್ಷಪ್ರಜಾಪತಿ, ಕರ್ದಮ ಪ್ರಜಾಪತಿ, ಬ್ರಹ್ಮಾಂಡದ ಪ್ರಜಾಪತಿ ಹೀಗೆ ಇಂತಹ ಹೆಸರುಗಳು ಪ್ರಾಚೀನ ಕಾಲದಲ್ಲಿ ಪುರಾಣಕಥೆಗಳಲ್ಲಿವೆ. ಪ್ರಜಾಪತಿಯ ಸ್ಥಳದಲ್ಲಿ ಬ್ರಹ್ಮ ಸಂಕೇತವು ಆ ಮೇಲೆ ವಾಡಿಕೆಗೆ ಬರುತ್ತದೆ, **ಪುರುಷ** ಸಂಜ್ಞೆಯೂ ಈ ಸ್ಪರ್ಧೆಯಲ್ಲಿ ಕಾಣಿಸಿಕೊಂಡಿತ್ತು. ವಿಶ್ವದ ಮೂಲತತ್ವ ಹೆಸರಿಸುವ ಈ ಪ್ರಯತ್ನಗಳಲ್ಲಿ ಆಯಾ ಕವಿಗಳ ಪ್ರತಿಮಾ ನಿರ್ಮಾಣದ ಮಾನದಂಡವು ಯಾವುದು ಎಂಬುದನ್ನು ಊಹಿಸಿಕೊಳ್ಳಲು ಶಕ್ಯವಿದೆ. ಕವಿಗಳಿಗೆ ಹೊಳೆವ ಉಪಮಾನೋಪಮೇಯಗಳ ಪ್ರೇರಣೆಗೆ ಸುತ್ತಲಿನ ವಾಸ್ತವ ಘಟನೆಗಳಿಂದ ಸ್ಫೂರ್ತಿ ದೊರೆಯುತ್ತದೆ. ವಿಶ್ವಕರ್ಮ–ವಿಶ್ವರೂಪ ಈ ಭವ್ಯೋಪಮೆಯನ್ನು ಇಂತಹ ಕಲೆಯ ಸಂಪ್ರದಾಯದ ಉತ್ತರಾಧಿಕಾರಿಗಳು, ಕರ್ಣಾಟಕ–ಮಹಾರಾಷ್ಟ್ರಗಳ ಮಟ್ಟಿಗಂತೂ, ಇಂದಿಗೂ ವೇದಕಾಲದ ವಿಶ್ವಕರ್ಮನ ಸ್ಮೃತಿಯನ್ನು ಜಾಗೃತವಾಗಿ ಇಟ್ಟುಕೊಂಡಿದ್ದಾರೆ.

ವಿಶ್ವಕರ್ಮ ಸಂಪ್ರದಾಯದವರು ಪ್ರಾಮುಖ್ಯದಿಂದ ಶೈವ ಸಂಪ್ರದಾಯದವರಾಗಿರುವಂತೆ ತೋರುತ್ತದೆ. ವೈದಿಕ ಹಾಗೂ ಆಚಾರ್ಯ (ರಿ) ಎಂಬ ಹೆಸರಿನೊಡನೆ ಉಪಪದವು ಇರುವುದುಂಟು. ಶೈವರಾದರೂ ಇವರು ಶಕ್ತಿ ದೇವಿಯ ಉಪಾಸಕರು. ಇವಳು ಮೇಧಾದೇವಿಯಾಗಿರಬೇಕು. ನಿಜವಾಗಿ ಕಾಳಮ್ಮ ಹೆಸರಿನ ಕುಲದೈವತವು ಇರುವುದು ಕಂಡು ಬರುವುದು. ಮಂತ್ರ-ತಂತ್ರ, ಯಂತ್ರವಿದ್ಯೆಯಲ್ಲಿ ವಿಖ್ಯಾತರಾಗಿದ್ದರು (ಕ. ಕಥೆ ಪು. ೧೯೨-೨೦೪ .

ವಿಶ್ವಕರ್ಮನು, ದೇವರಿಗಾಗಿ ವಿಮಾನಗಳನ್ನು ನಿರ್ಮಿಸಿದನು ; ನಗರ ರಚನೆ ಮಾಡಿದನು, ಇತ್ಯಾದಿ ವರ್ಣನೆಗಳು ದೊರೆಯುತ್ತವೆ. ವಿಷ್ಣುವಿನ ಶಂಖ, ಶಿವನ ತ್ರಿಶೂಲ, ಇಂದ್ರನ ವಜ್ರ ಸಿದ್ಧಪಡಿಸಿದನು . . . . ತಿಲೋತ್ತಮೆ ಎಂಬ ಅಪ್ಸರೆಯನ್ನು ಸೃಷ್ಟಿಸಿದ ಕಥೆಯಿದೆ. ಸುಂದೋಪಸುಂದರು ಇವಳಿಗಾಗಿ ಸ್ಪರ್ಧಿಸಿ ಕಾದಾಡಿ ಮಡಿದರು. ಮಂತ್ರ ಮಾಟ ವಿದ್ಯೆಗಳಲ್ಲೂ ಇವರು

ಹೆಸರಾಗಿದ್ದರು. ಕಾಂಚೀಪುರದ್ವಾರ ಕವಾಟ ಪುಟ ಭೇದನಾಭಿಚಾರ ಹೋಮ ಸಾಧಕರು. ಹೋಮಕುಂಡಲ ಜ್ವಾಯಿನೇ ದೇವ್ಯಾಕರ್ಷಣರುಂ ಆಗಿರುವರೆಂದು ಆಧುನಿಕ ಶಾಸನಗಳಿಂದ ತಿಳಿಯುತ್ತದೆ.

ವಿಶ್ವಕರ್ಮನ ಪುರಾಣಕಥೆಯ ಸಂಕೇತಗಳು ಅಭ್ಯಸನೀಯವಾಗಿವೆ. ಪ್ರಭಾಸವಸು ತಂದೆ, ಭುವನಾ ತಾಯಿ, ವಿಶ್ವಕರ್ಮ ದೇವತೆಯ ಹೆಸರಿನ ಹಿಂದೆ ಭೌವನ ಎಂಬ ವಿಶೇಷಣವು ಋಗ್ವೇದದಲ್ಲಿ ಇದೆ. ವಿಶ್ವಕರ್ಮನ ಸೋದರಿ ವಿವಸ್ವತಿ. [ಪ್ರಭಾಸವಸು; ವಸು = ಆದಿತ್ಯ ಸ್ವರೂಪರು ವಸುಪುತ್ರಿ ವಿವ ಸ್ವತಿ = ಸೂರ್ಯನಂತಹ ತೇಜಸ್ವಿನಿ]. ತೈತ್ತಿರೀಯ ಸಂಹಿತೆಯ ವಿಶ್ವರೂಪನು ತ್ವಷ್ಟೃ (ಪ್ರಜಾಪತಿ) ಪುತ್ರನು. ದೇವರ ಪುರೋಹಿತನು. ವಿರೋಚನೆ ಈತನ ತಾಯಿ. ವಿರೋಚನೆಗೆ **ರಚನೆ** ಎಂಬ ಪರ್ಯಾಯನಾಮವಿದ್ದಿತಾಗಿ ಪುರಾಣ ವಿದೆ. ಈತನನ್ನು ಸಂಹರಿಸಿದ್ದರಿಂದ ಇಂದ್ರನು ಬ್ರಹ್ಮಹತ್ಯಾಪಾತಕಿ ಯಾದನು.

ವಿಶ್ವಕರ್ಮನ ಸಂಪ್ರದಾಯದ ಬ್ರಾಹ್ಮಣರಲ್ಲಿ ಮಂತ್ರಸಿದ್ಧರೂ, ಬ್ರಹ್ಮ ಜ್ಞರೂ ಆಗಿದ್ದುಂಟು. ದೇವಾಸುರರಿಬ್ಬರಿಗೂ ಇವರ ಜ್ಞಾನಶಕ್ತಿಯ ಆವಶ್ಯ ಕತೆಯಿತ್ತು. ಆದ್ದರಿಂದ ಹಿಂದಿನ ಕಾಲದಲ್ಲಿ ಸಮಾಜಧಾರಣೆಯ ಕಾರ್ಯದಲ್ಲಿ ಮಹತ್ವವು ಇವರಿಗೆ ಮೀಸಲಾಗಿದ್ದಿತು. ಆರ್ಯಭಾಷಿಕರು ವಿಜಿಗೀಷುಗಳಾಗಿ ಇಲ್ಲಿ ಬಂದವರು. ಸೈಂಧವ ಸಂಸ್ಕೃತಿಯು ವೇದ ಪೂರ್ವಕಾಲದ್ದು ಎಂಬುದು ನಿಜವಿದ್ದರೆ ಅಲ್ಲಿಯ ವಾಸ್ತುಶಿಲ್ಪ, ಕುಶಲಕಲೆಗಳನ್ನು ಸೃಜಿಸಿದ ಆ ವಿಶ್ವಕರ್ಮರು ಈ ದೇಶೀಯರು ಆಗಿರಬೇಕು. ಇಂದ್ರನು (ವಿಶ್ವರೂಪ ನಿರ್ಮಾಣ ಶಕ್ತಿಯ ಪ್ರತೀಕವಾದ) ವಿಶ್ವರೂಪನ ದ್ವೇಷಿಯಾಗಿದ್ದನು; ಎಂಬ ಕಥೆಯಿಂದ ಯಂತ್ರ-ಮಂತ್ರಗಳಲ್ಲಿ ಸಿದ್ಧಹಸ್ತರಾದ ಈ ವಿಶ್ವಕರ್ಮ ಸಂಪ್ರದಾಯದವರ ಪೂರ್ವ ಜರು ಆರ್ಯರಿಗಿಂತಲೂ ಮುಂಚಿನಿಂದಲೇ ಈ ದೇಶದಲ್ಲಿ ಇದ್ದರೆಂಬ ಊಹೆಗೆ ಅವಕಾಶ ದೊರೆಯುತ್ತದೆ. ವಿಶ್ವರೂಪನು ಅಸುರರ ಪಕ್ಷಪಾತಿಯೂ ಆಗಿದ್ದ ನೆಂಬ ಕಥಾಭಾಗವು ಈ ಊಹೆಯನ್ನು ಪುಷ್ಟೀಕರಿಸುತ್ತಿದೆ.

ಇಂದ್ರ ವಿರೋಧಿಗಳು ವೃತ್ರಾದಿಗಳಲ್ಲಿ ಮುಖ್ಯ ಜಲದೊಡನೆ ಇವರ ನಿಕಟ ಸಂಬಂಧವನ್ನು ಗಮನಕ್ಕೆ ತರುವ ಸಂಕೇತಗಳು ಆ ವರ್ಣನೆಗಳಲ್ಲಿ ಉಂಟು. ತಕ್ಷಕನನ್ನು ನಾಗರಲ್ಲಿ ಬಗೆದ ಓರ್ವ ವಸುವು ಈ ಜನದ ಮೂಲ ಪುರುಷನು ಎಂದು ಹೇಳುವ, ಕಶ್ಯಪ ವಂಶಕ್ಕೆ ಸೇರಿದವರು ಎಂದು ವಿವರಿಸುವ ಪುರಾಣಗಳು ಇವೆ. ಇವರ ತಾಯಿ ಭುವನಾದೇವಿ. ಈ ಸಂಕೇತಗಳ ಅನುಸ್ಯೂತವಾದ ಸೂತ್ರವು ಉಂಟೇ, ಇಲ್ಲವೇ ? ಹೆಚ್ಚಿನ ಸಂಶೋಧನ ಮತ್ತು ವಿಮರ್ಶೆಗಳು ಅವಶ್ಯವಾಗಿವೆ ಎಂಬುದನ್ನು ಮಾತ್ರ ಯಾರೂ ಅಲ್ಲಗಳೆಯಲಾರರೆಂದು ತೋರುತ್ತದೆ.

ಸೃಷ್ಟಿ ನಿರ್ಮಾಣ ಮಾಡಿದ ಪ್ರಜಾಪತಿಗೆ ವಿಶ್ವಕರ್ಮನೆಂದು ಹೆಸರಿಸಿದರೂ ಪ್ರಜಾಪತಿಯ ಪ್ರತಿಮೆ ಜಲಸಂಪ್ರದಾಯಕ್ಕೆ ಸೇರಿದ್ದು. 'ಕಂ' ದೇವರ ಸೂಕ್ತದಲ್ಲಿ ಈ ಮಾತು ಸ್ಪಷ್ಟವಾಗಿದೆ. ಪ್ರಜಾಪತಿಯನ್ನೇ ಸ್ವರೂಪದಲ್ಲಿ ಕಾಣುವ ಒಂದು ಪಂಥ ವೇದಕಾಲದಲ್ಲಿ ಶಿಷ್ಟಮಾನ್ಯವಾಗಿ ಪ್ರತಿಷ್ಠಿತವಾಗಿತ್ತು ಎಂದು ಕಂಡುಬರುತ್ತದೆ. ವಿಶ್ವಕರ್ಮ ಬ್ರಾಹ್ಮಣರ ಉಪಾಸನಾ ದೇವತಾ 'ಕಾಲಿ,' ದೇವಿ. ಇವೆರಡೂ ಶೈವ ಸಂಪ್ರದಾಯದ ಶಾಖೆಗಳು ಆಗಿರಬೇಕು. ಗಂಡು ದೇವರ ಭಕ್ತರು, ಹೆಣ್ಣುದೇವರ ಭಕ್ತರು ಎಂಬ ಭೇದವು ಇಂದಿಗೂ ಉಳಿದುಕೊಂಡಿದೆ. ★

ಸರಸ್ವತೀ ಪ್ರಾರ್ಥನೆ

ವಾಗಕ್ಷರಂ ಪ್ರಥಮಜಾ ಋತಸ್ಯ ವೇದಾನಾಂ ಮಾತಾಮೃತಸ್ಯ ನಾಭಿಃ ।
ಸಾನೋ ಜುಷಾಣೋಪಯಜ್ಞ ಮಾಗಾತ್ ಅವಂತೀ ದೇವೀ ಸುಹವಾ ಮೇ ಅಸ್ತು ॥

— ತೈತ್ತಿರೀಯ ರುಜುರ್ಬ್ರಾಹ್ಮಣ

ಅಕ್ಷರ ಎಂದರೆ ಅವಿನಾಶಿಯಾದ ಆಕಾರ. ಇದರಿಂದ ರೂಪಿಸಲ್ಪಟ್ಟಿರುವ ವಾಗ್ದೇವತೆಯು ಕಾಲಕ್ಕೂ ಮೊದಲು ಜನಿಸಿದವಳು. ವೇದಗಳಿಗೆ ತಾಯಿಯಾಗಿರುವಳು. ಮರಣವಿಲ್ಲದ ಮೋಕ್ಷಕ್ಕೆ ಕಾರಣಳು. ಆಕೆಯನ್ನು ಈ ಯಜ್ಞದಲ್ಲಿ ಸಮಸ್ತ ಜಗತ್ತಿನ ಶ್ರೇಯಸ್ಸಿಗಾಗಿಯೂ ಆಹ್ವಾನಿಸಿ ಪ್ರಾರ್ಥಿಸುತ್ತೇನೆ. ಜ್ಞಾನಮಯಿಯಾದ ಈ ದೇವಿಯು ನಮಗೆ ಸಕಲ ಶ್ರೇಯೋದಾಯಿನಿಯಾಗಲಿ.

ವಿದ್ಯಾಲಂಕಾರ

ಹೊಸಬೆಟ್ಟು ನಾರಾಯಣ ರಾವ್

೩

ವೈಶ್ವಕರ್ಮಣ ಧರ್ಮ

ವ್ಯಕ್ತಿ-ಧರ್ಮಗಳ ಸಂಬಂಧ ಅವಿಭಾಜ್ಯವಾದ್ದದ್ದು. ಜಗತ್ತಿನ ವಿವಿಧ ಮಾನವ ಜನಾಂಗಗಳ ಉಪಲಬ್ಧ ಇತಿಹಾಸದುದ್ದಕ್ಕೂ ನಿಚ್ಚಳವಾಗಿ ಈ ಸತ್ಯವನ್ನು ನಾವು ಕಾಣಬಹುದು. ನವಯುಗ ಧರ್ಮಪ್ರವರ್ತಕ, ಸರ್ವ ಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರು ಮಾನವ ಲೋಕದ ಉತ್ಕ್ರಾಂತಿಯ ರಹಸ್ಯ ಮನುಷ್ಯನ ಭೂಮಾಪೇಕ್ಷೆಯಲ್ಲಡಗಿದೆ ಎಂಬುದನ್ನು 'ಜೀವಚ್ಛೈತನ್ಯ ನದಿಯು ತಿಳಿದೋ, ತಿಳಿಯದೆಯೋ ಸಚ್ಚಿದಾನಂದ ಸಾಗರದ ಕಡೆಗೆ ಯಾತ್ರೆ ಹೊರಟಿದೆ; ಅಗ್ನಿಶಿಖೆಯು ಊರ್ಧ್ವಮುಖವಾಗಿ ಸವಿತೃದೇವನೆಡೆಗೆ ಧೀಂಕಿಡಲು ಯತ್ನಿಸುತ್ತಿದೆ' ಎಂಬ ಅಮರ ವಾಕ್ಯಗಳಲ್ಲಿ ಪ್ರಕಟಿಸಿದ್ದಾರೆ. ವ್ಯಕ್ತಿ-ಧರ್ಮಗಳ ಅವಿಭಾಜ್ಯ ಸಂಬಂಧದ ರಹಸ್ಯ ಇಲ್ಲಿ ಅಡಗಿದೆ. ಸಾಂತವು ಅನಂತವನ್ನು ಸೇರುವ ಬಯಕೆಯೇ ಧರ್ಮ. ಅಥವಾ ಬೇರೊಂದು ಮಾತಿನಲ್ಲಿ ಹೇಳುವುದಾದರೆ ಸಾಂತ-ಅನಂತಗಳ ನಡುವಣ ಗುರುತ್ವಾಕರ್ಷಣೆಯೇ ಧರ್ಮ. ಆದ್ದರಿಂದಲೇ ಆಹಾರ, ನಿದ್ರಾ, ಭಯ, ಮೈಥುನಾದಿ ಪಶು ಸಹಜ ಪ್ರವೃತ್ತಿಗಳು ಮಾನವನನ್ನು ಬಿಟ್ಟಿಲ್ಲವಾದರೂ, ದೈವೀಆವಿರ್ಭಾವವಾದ ಧರ್ಮದ ಅವಲಂಬನದಿಂದ ವಿಶ್ವದ ಎಲ್ಲೆಡೆಯಲ್ಲೂ ನಾಗರಿಕತೆ ಕಣ್ತೆರೆದಿದೆ; ಸಂಸ್ಕೃತಿ ಅರಳಿದೆ; ಸತ್ಯಸಾಕ್ಷಾತ್ಕಾರದ ಮೋಕ್ಷ ಮಂಟಪದ ಉದ್ಘಾಟನೆಯಾಗಿದೆ. ಇದು ಇತಿಹಾಸ ಕಂಡ ಸತ್ಯ. ನೂರು, ಸಾವಿರ ಪ್ರಮಾಣಗಳನ್ನು ಬಲ್ಲವರು ಇದನ್ನು ಸಾಧಿಸಬಹುದಾದರೂ, ಸಧ್ಯ ನಾನದನ್ನು ಕೈಕೊಳ್ಳು

ವುದಿಲ್ಲ. ಏಕೆಂದರೆ ಆ ಇತಿಹಾಸ ಸಾಗರೋಲ್ಲಂಘನಕ್ಕೆ ಬೇಕಾದ ಹನೂಮತ್ ಶಕ್ತಿ, ಭೀಮಬಲ ನನ್ನದಲ್ಲ.

ವೈಶ್ವಕರ್ಮಣ ಧರ್ಮವು ವಿಶ್ವಧರ್ಮಕ್ಕೆ ಸಂವಾದಿಯಾದ ಧರ್ಮ. ಅತಿಶಯೋಕ್ತಿಯ ಬಣ್ಣ ಬಳಿದು, ಈ ಮಾತನ್ನು ಇಲ್ಲಿ ನಾನು ಹೇಳುತ್ತಿಲ್ಲ. ವಿಶ್ವಪೂಜೆಯೇ ವಿಶ್ವಕರ್ಮಪೂಜೆ; ವಿಶ್ವಸಮುದ್ಧರಣ ಕರ್ಮಕ್ರಿಯಾಕಲಾಪವೇ ವಿಶ್ವಕರ್ಮಪೂಜೆ ಎಂಬ ಕರ್ಮಯೋಗದ ಸೈದ್ಧಾಂತಿಕ ನೆಲೆಯಲ್ಲಿ ಈ ಧರ್ಮ ಬೆಳೆದು ಬಂದಿದೆ. **ವಿಶ್ವಮೇವ ಸ ಈಶ್ವರಃ, ವಿಶ್ವವಿಶ್ವೇಶ್ವರಮಯಂ, ಈಶ್ವರಂ ವಿಶ್ವಮಯಂ, ವಿಶ್ವರೂಪಿಯೆ ವಿರಾಟ್ ವಿಶ್ವಕರ್ಮ** ಎಂಬ ಅದ್ವೈತದ ಪೂರ್ಣದರ್ಶನವನ್ನು ಮೈಗೂಡಿಸಿಕೊಂಡ ಈ ಧರ್ಮದ ತತ್ತ್ವಪ್ರಣಾಳಿಯನ್ನು ಸೂಕ್ಷ್ಮವಾಗಿಯಾದರೂ ಅರಿಯದೆ, ಈ ಧರ್ಮದೊಳಗಣ ವ್ಯಕ್ತಿ ಹಾಗೂ ಧರ್ಮಗಳ ಪಾರಸ್ಪರಿಕ ಸಂಬಂಧದ ವೈಶಿಷ್ಟ್ಯವನ್ನು ಅರಿಯಲಾಗುವುದಿಲ್ಲ. ಆದ್ದರಿಂದ ಆ ಬಗೆಗೆ ಸ್ವಲ್ಪ ವಿಚಾರವನ್ನು ಇಲ್ಲಿ ಮಾಡುವುದು ಅಗತ್ಯವಾಗಿದೆ.

ವೇದಪ್ರಾಮಾಣ್ಯಾವಲಂಬನದಿಂದ ಬೆಳೆದು ಬಂದ ಈ ವಿಶ್ವಕರ್ಮತತ್ತ್ವ ಸಂಪ್ರದಾಯವು ವಿಶ್ವಕರ್ಮನೇ ಜಗದುತ್ಪತ್ತಿಕಾರಣನೆಂದು ದೃಢವಾಗಿ ನಂಬುತ್ತದೆ. ಈ ಸರ್ವವೇದೇಷು ಪ್ರತಿಪಾದ್ಯನಾದ, ಏಕಮೇವಾದ್ವಿತೀಯನಾದ ವಿಶ್ವಕರ್ಮ ಸ್ವಾಮಿಯ ಭವ್ಯೋದಾತ್ತವರ್ಣನೆ ಋಗ್ವೇದೋಕ್ತ ವಿಶ್ವಕರ್ಮ ಸೂಕ್ತದಲ್ಲಿ ವೈದಿಕ ಋಷಿಗಳ ಋತಪರಿಭಾಷೆಯಲ್ಲಿ ವರ್ಣಿಸಲ್ಪಟ್ಟಿದೆ :

ಯೋ ನಃ ಪಿತಾ ಜನಿತಾ ಯೋ ವಿಧಾತಾ
ಧಾಮಾನಿ ವೇದ ಭುವನಾನಿ ವಿಶ್ವಾ ।
ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂ ಪ್ರಶ್ನಂ ಭುವನಾಯಂತ್ಯನ್ಯಾ ॥ (ಋ, ೧೦ : ೮೨ : ೩)

'ಯಾವಾತನು ನಮಗೆ ಪೋಷಕನೂ, ಜನಕನೂ ಆಗಿದ್ದು, ಎಲ್ಲರಿಗೂ ನಿಯಾಮಕನಾಗಿರುವನೋ, ಯಾವನು ತೇಜೋರೂಪಿಯಾದ ಎಲ್ಲ ಲೋಕಗಳನ್ನೂ ಚೆನ್ನಾಗಿಬಲ್ಲನೋ, ತಾನೊಬ್ಬನೇ ಎಲ್ಲ ದೇವತೆಗಳಿಗೂ ವಿವಿಧ ಹೆಸರುಗಳನ್ನು ಕೊಟ್ಟು. ಅವಕ್ಕೆ ತಾನೂ ಪ್ರತಿಪಾದ್ಯನಾಗಿರುವನೋ, ಜಗತ್ತಿನ ಜನರಿಗೆ

ದೇವನು ಯಾರು ? ಎಂಬ ಜಿಜ್ಞಾಸೆಗೆ ವಿಷಯನಾಗಿರುವ ಆತನನ್ನು ಎಲ್ಲ ಪ್ರಾಣಿಗಳೂ ಸಮೀಪಿಸಿರುತ್ತಾರೆ.'

ವಿಶ್ವತಶ್ಚಕ್ಷುರುತ ವಿಶ್ವತೋಮುಖೋ
ವಿಶ್ವತೋ ಬಾಹುರುತ ವಿಶ್ವತಸ್ಪಾತ್ । (ಋ ೧೦ : ೮೧ : ೩)

ಎಂದು ಜಗದ್ಭರಿತನೂ, ಅತ್ಯತಿಷ್ಠದ್ದಶಾಂಗುಲನೂ ಆದ ವಿಶ್ವಕರ್ಮನನ್ನು ಅತ್ಯದ್ಭುತ ಕಾವ್ಯಭಾಷೆಯಲ್ಲಿ ವರ್ಣಿಸಿದ ಶ್ವೇತಾಶ್ವತರೋಪನಿಷತ್ತು ಮುಂದೆ

ವಿಶ್ವಸ್ಯೈಕಂ ಪರಿವೇಷ್ಟಿತಾರಂ
ಜ್ಞಾತ್ವಾದೇವಮುಚ್ಯತೇ ಸರ್ವಪಾಶೈಃ ।
—ಎಂದು ಸರ್ವಜೀವರ ಗಂತವ್ಯ ಸ್ಥಾನವನ್ನು ನಿರ್ದೇಶಿಸಿ,
ಏಷ ದೇವೋ ವಿಶ್ವಕರ್ಮಾ ಮಹಾತ್ಮಾ
ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ॥

— ಎಂಬಲ್ಲಿ ಅವಾಙ್ಮನಸ ಗೋಚರನಾದ ವಿಶ್ವಕರ್ಮನು ಸರ್ವಜೀವರ ಹೃದಯದಲ್ಲಿ ಸದಾ ಸಂನಿವಿಷ್ಟನೆಂಬುದನ್ನು ಅಸಂದಿಗ್ಧವಾಗಿ ನಿರೂಪಿಸಿದೆ. ಸಮಾನಾಧಿಕ ವರ್ಜಿತನೂ, ನಿಷ್ಪ್ರಪಂಚ ನಿರಾಕಾರನೂ ಆದ ಏಕಮೇವತತ್ತ್ವ ಸ್ವರೂಪಿ ವಿಶ್ವಕರ್ಮನೇ ವೈದಿಕವಾಙ್ಮಯದುದ್ದಕ್ಕೂ ಪ್ರತಿಪಾದ್ಯನೆಂಬುದನ್ನು ವಿಪುಲ ವೇದಾಂತ ವಾಕ್ಯ ಪ್ರಾಮಾಣ್ಯಗಳಿಂದ ಸಮರ್ಥಿಸಬಹುದು. ಏಕೆಂದರೆ ವೈಶ್ವಕರ್ಮಣ ಧರ್ಮನಿಷ್ಠನು ಮೂಲಸ್ತಂಭಾದಿ ಶಾಸ್ತ್ರತುಲ್ಯ ಪ್ರಮಾಣತಮ ಗ್ರಂಥಗಳಲ್ಲಿ ಹೇಳಿದಂತೆ

ಇದಂ ಸತ್ಯಂ ಇದಂ ಸತ್ಯಂ ಇದಂ ಸತ್ಯಂ ನ ಸಂಶಯಃ ।
ಬಾಹುಮುದ್ಧೃತ್ಯ ವಕ್ಷ್ಯಾಮಿ ವಿಶ್ವಕರ್ಮಾಪರಾಗತಿಃ ॥

ಎಂದು ಅಚಂಚಲ, ಅಸಂದಿಗ್ಧ ದೃಢವಾಣಿಯಲ್ಲಿ ಹೇಳಲು ಎಂದೂ ಹಿಂಜರಿಯನು; ಅವ್ಯಭಿಚಾರೀ ಭಕ್ತಿಯಿಂದ ಅನನ್ಯ ಶರಣಾಗತನಾಗಲು ಹಿಂದಾಗನು.

ಅಶಬ್ದಮಸ್ಪರ್ಶಮರೂಪಮವ್ಯಯವಾದ ವಿಶ್ವಕರ್ಮತತ್ತ್ವವನ್ನು ವಿಷಯೀಕರಿಸಲಾಗದು. **ನತತ್ರಚಕ್ಷುರ್ಗಚ್ಛತಿ, ನವಾಗ್ಗಚ್ಛತಿ, ನೋಮನಃ** ಹಾಗಾಗಿ ನಿರ್ಗುಣ ನಿರಾಕಾರವಾದ ಆ ಅಮರ್ಯಾದಿತ ಪರಬ್ರಹ್ಮತತ್ತ್ವವನ್ನು ಸಾಕಾರ ಸಗುಣ ವಿಶ್ವಕರ್ಮನನ್ನಾಗಿ ಶಿಲ್ಪಾಗಮಗಳು ಬಹಳ ಸುಂದರವಾಗಿ

ವರ್ಣಿಸಿವೆ. ಸಾನಗ ಸನಾತನಾದಿ ಪಂಚಬ್ರಹ್ಮರ್ಷಿಗಳ ಚಿತ್ತಭೂಮಿಕೆಯಲ್ಲಿ ಆವಿರ್ಭವಿಸಿ, ಬಹಿರಂಗ ಸಾಕಾರಾಭಿವ್ಯಕ್ತಿಯನ್ನು ಹೊಂದಿದ ಶ್ರೀ ವಿಶ್ವಕರ್ಮ ಸ್ವಾಮಿಯ ವರ್ಣನೆ ಇಂತಿದೆ:

ಪಂಚವಕ್ತ್ರಂ ಜಟಾಧಾರಂ ಪಂಚಾದಶ ವಿಲೋಚನಂ ।
ಸದ್ಯೋಜಾತಾನನಂ ಶ್ವೇತಂ ವಾಮ ದೇವಂತು ಕೃಷ್ಣಕಂ ॥
ಅಘೋರಂ ರಕ್ತವರ್ಣಂಚ ತತ್ಪುರುಷಂ ಪೀತವರ್ಣಕಂ ।
ಈಶಾನಂ ಶ್ಯಾಮವರ್ಣಂ ಚ ಶರೀರಂ ಹೇಮವರ್ಣಕಂ ॥
ದಶಬಾಹುಂ ಮಹಾಕಾಯಂ ಕರ್ಣಕುಂಡಲ ಶೋಭಿತಂ ।
ಪೀತಾಂಬರಧರಂ ದೇವಂ ನಾಗಯಜ್ಞೋಪವೀತಿನಂ ॥
ರುದ್ರಾಕ್ಷಹಾರ ಸಂಯುಕ್ತಂ ವ್ಯಾಘ್ರ ಚರ್ಮೋತ್ತರೀಯಕಂ ।
ಅಕ್ಷಮಾಲಾಬ್ಜ ನಾಗೇಂದ್ರ ಶೂಲಾಯುಧ ಪಿನಾಕಿನಂ ।
ದೇವದೇವಂ ಮಹಾದೇವಂ ವಿಶ್ವಕರ್ಮಾಣಮವ್ಯಯಂ ॥

— ದಿವ್ಯ ಸೌಂದರ್ಯ ಕಲ್ಪನೆಗಳಿಂದ ಸಮಾಯುಕ್ತವಾದ ವಿಶ್ವಕರ್ಮನ ಸಗುಣ ಮೂರ್ತ ಕಲ್ಪನೆಗೆ ನಾನಾರ್ಥಗಳಿವೆಯಾದರೂ ಸದ್ಯ ನಾನದನ್ನು ಪ್ರಸ್ತಾಪಿಸ ಬಯಸುವುದಿಲ್ಲ. ಏಕೆಂದರೆ ಅಲ್ಪಕಾಲಾವಧಿಯಲ್ಲಿ ಅದು ಆಗದ ಮಾತು.

ವಿರಾಡ್ವಿಶ್ವಕರ್ಮ ಧರ್ಮವು ಜ್ಞಾನ—ವಿಜ್ಞಾನ ಸಮಾಯುಕ್ತವಾದುದು. ವಿಶ್ವಕರ್ಮಾಂಶ ಸಂಭೂತರಾದ ಜೀವಾತ್ಮರು ಜ್ಞಾನ – ಕರ್ಮ ಸಮುಚ್ಚಯಾತ್ಮಕವಾದ 'ಬಾಳಬಟ್ಟೆಯ ಪರಮಾಗಮ'ದಲ್ಲಿ ನಡೆದು ವಿಶ್ವಕರ್ಮ ಕೈವಲ್ಯ ಪದವನ್ನು ಹೊಂದಬೇಕೆಂಬುದು ಈ ಧರ್ಮದ ಹೆಚ್ಚುಗಾರಿಕೆಯಾಗಿದೆ. ಕೇವಲ ಜ್ಞಾನವೆನ್ನುವ ನಿಷ್ಕ್ರಿಯ ಅಕರ್ಮಣ್ಯತೆಯನ್ನಾಗಲೀ, ಕೇವಲ ಕರ್ಮವೆನ್ನುವ ಕಂದಾಚಾರವನ್ನಾಗಲೀ ಈ ಧರ್ಮ ಮನ್ನಿಸುವುದಿಲ್ಲ. **ಸರ್ವೋತ್ಕೃಷ್ಟಂ ಪರಂ ಜ್ಞಾನಂ ಜ್ಞಾನಂ ತ್ರೈಲೋಕ್ಯದುರ್ಲಭಂ। ತಸ್ಮಾತ್ಸರ್ವಪ್ರಯತ್ನೇನ ಜ್ಞಾನಮೇವಹಿ ಸಾಧಯೇತ್॥** ಎಂದು ಜ್ಞಾನಯೋಗವನ್ನು ಈ ಧರ್ಮವು ಮನ್ನಿಸುವುದಾದರೂ ಜಗಚ್ಛಿಲ್ಪಿ ವಿಶ್ವಕರ್ಮನನ್ನು ಶಿಲ್ಪಕರ್ಮಾರಾಧನೆಯ ಮೂಲಕವೇ ಅರ್ಚಿಸಬೇಕೆನ್ನುವುದು ಈ ಧರ್ಮದ ಹೆಚ್ಚಳ (**ಮೋಕ್ಷೇಧೀ ಜ್ಞಾನಮನ್ಯತ್ರ ವಿಜ್ಞಾನಂ ಶಿಲ್ಪಶಾಸ್ತ್ರಯೋಃ**).

ವಿರಾಡ್ವಿಶ್ವಕರ್ಮನ ಪಂಚಮಾನಸ ಪುತ್ರರೇ ಮನ್ವಾದಿ ಪಂಚಬ್ರಹ್ಮರು. ಮನು, ಮಯ, ತ್ವಷ್ಟೃ, ಶಿಲ್ಪಿ ಮತ್ತು ವಿಶ್ವಜ್ಞರೆಂಬ ಈ ಪಂಚಬ್ರಹ್ಮರು ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚಕೃತ್ಯಾಭಿಮಾನಿ ದೇವತೆಗಳೂ, ಪಂಚಭೂತಾಭಿಮಾನಿ ದೇವತೆಗಳೂ, ಶಿಲ್ಪಶಾಸ್ತ್ರಾಭಿಮಾನಿ ದೇವತೆಗಳೂ ಆಗಿದ್ದು, ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಓತಪ್ರೋತವಾಗಿ ವ್ಯಾಪಿಸಿರುವರು. ಹೇಗೆ ಜಗಚ್ಛಿಲ್ಪಿ ವಿಶ್ವಕರ್ಮನ ಅತ್ಯದ್ಭುತ ಕಲಾಕೌಶಲ್ಯವೇ ಬ್ರಹ್ಮಾಂಡವಾಗಿದೆಯೋ, ಹಾಗೆಯೇ ಈ ಪಿಂಡಾಂಡವೂ ವಿಶ್ವಕರ್ಮಾನುಗ್ರಹಪ್ರಾಪ್ತಿ ಹೇತುಕವಾದ ಭವ್ಯ ಶಿಲ್ಪಕೃತಿಯೇ ಹೌದು. ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಸಮಾನವಾಗಿರುವ, ಜ್ಞಾನ ವಿಜ್ಞಾನಗಳೆರಡಕ್ಕೂ ಸಾಧನವಾದ, ಪಂಚಶಕ್ತಿಗಳಿಂದ ವಿಶ್ವಸಮುದ್ಧರಣ ಶಿಲ್ಪಯೋಗರೂಪಿ ವಿಜ್ಞಾನ ಮಾರ್ಗೇಣ ಪಂಚಬ್ರಹ್ಮಾನುಗ್ರಹವನ್ನು ಹೊಂದಿ, ತನ್ಮೂಲಕ ವಿಶ್ವಕರ್ಮನ ಪರಮಪದವನ್ನು ಹೊಂದಬೇಕೆಂಬುದು ಈ ತತ್ತ್ವ ಸಂಪ್ರದಾಯದ ಜೀವ ಬಿಂದು.

ವಿಶ್ವಕರ್ಮ ತತ್ತ್ವ ಪ್ರಣಾಳಿಕೆಯಲ್ಲಿ ವಿಶ್ವ-ವಿಶ್ವಕರ್ಮ ಅಭೇದತ್ವವು ಜೀವ ಜೀವಾಳವಾಗಿದೆ. ಜಗದ್ರೂಪದಿಂದ ಅಭಿವ್ಯಕ್ತವಾದ ತತ್ತ್ವವು ವಿಶ್ವಕರ್ಮನಲ್ಲದೆ ಬೇರಲ್ಲವೆಂಬುದು ಈ ತತ್ತ್ವಪರಂಪರೆಯ ಕೇಂದ್ರ ಬಿಂದು. ಇದು ಮೇಲೆ ಮೇಲೆ ಜಗನ್ಮಿಥ್ಯಾವಾದಿಗಳಾದ ಆಚಾರ್ಯ ಶಂಕರರ ಅದ್ವೈತ ಸಂಪ್ರದಾಯಕ್ಕೆ ವಿರೋಧವೆಂದು ಕಂಡರೂ, ಖಂಡಿತಕ್ಕೂ ಹಾಗಿಲ್ಲ. ಬ್ರಹ್ಮವೊಂದೇ ಏಕಮೇವ ಸತ್ಯವಸ್ತುವೆಂದೂ, ಜಗತ್ತು ಮಿಥ್ಯವೆಂದೂ ಪ್ರಬಲವಾಗಿ ವಾದಿಸಿದ ಆಚಾರ್ಯರೂ ಪರಮಾರ್ಥತಃ ಈ ಜಗತ್ತು ಬ್ರಹ್ಮರೂಪವೆಂಬುದನ್ನು **ಬ್ರಹ್ಮೈವೇದಂ ವಿಶ್ವಂ, ಪುರುಷ ಏವೇದಂ ವಿಶ್ವಂ** ಇತ್ಯಾದಿ ಶ್ರುತಿವಾಕ್ಯಗಳನ್ನು ಉದಾಹರಿಸಿ, ತಮ್ಮ ಭಾಷ್ಯ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ವಿಶ್ವ-ವಿಶ್ವಕರ್ಮ ಅಭೇದತ್ವವನ್ನು ಹೇಳುವ **ಸರ್ವಮೀಶಮಯಂ ವಿಶ್ವಂ ವಿಶ್ವಮೇವ ಸ ಈಶ್ವರಃ** ಎಂಬ ವಿಶ್ವಕರ್ಮ ಪುರಾಣ ವಾಕ್ಯವು ಉಪನಿಷತ್ತುಗಳಿಗೂ, ಅದ್ವೈತ ವೇದಾಂತಕ್ಕೂ ಸಮ್ಮತವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಈ ವಿಶ್ವಕರ್ಮ ತತ್ತ್ವಸಮುದ್ರವು ಅಗಾಧವಾದುದು. ಸದ್ಯ ಈ ಧರ್ಮದ ತಾತ್ತ್ವಿಕ ಭೂಮಿಕೆಯ ನಾಲ್ಕು ಮುಖ್ಯ ಹೆಗ್ಗುರುತುಗಳನ್ನು ಹೀಗೆ ಗುರುತಿಸಬಹುದು :

೧ ಸರ್ವವೇದೇಷು ಪ್ರತಿಪಾದ್ಯ ವಿಶ್ವಕರ್ಮನೇ ಉಪಾದೇಯ; ಈತನೇ ಜಗದ್ರೂಪದಿಂದ ವ್ಯಕ್ತನಾದವನು.

೨ **ತ್ವಂ ಬ್ರಹ್ಮಾ ತ್ವಂಚ ವಿಷ್ಣುಶ್ಚ ತ್ವಂ ರುದ್ರಸ್ತಥೈವಚ ತ್ವಂ ವಿಶ್ವಕರ್ಮನಾಮೇತಿ ವೇದವಾಕ್ಯಂ ಯಥಾಸ್ಮೃತಿ** ಎಂಬಿತ್ಯಾದಿ ಪ್ರಮಾಣಗಳಂತೆ ಬ್ರಹ್ಮ ವಿಷ್ಣು ರುದ್ರಾದಿ ಸಮಸ್ತ ದೇವತೆಗಳ ಪೂಜೆಯೂ ಭಗವಾನ್ ವಿಶ್ವಕರ್ಮನ ಪೂಜೆಯೇ

೩ ಜೀವರು ವಿಶ್ವಕರ್ಮಾಂಶ ಸಂಭೂತರು; ವಿಶ್ವಕರ್ಮ ಕೈವಲ್ಯ ಪದವೇ ಸರ್ವಜೀವರಗಂತವ್ಯ ಶ್ರೀ.

೪ ತತ್ಸಾಧನವೇ ಜ್ಞಾನ-ಕರ್ಮ ಸಮುಚ್ಚಯಾತ್ಮಕವಾದ ಧರ್ಮ.

ಈ ನಾಲ್ಕು ಮುಖ್ಯ ಹೆಗ್ಗುರುತುಗಳನ್ನು ವಿಶ್ವಕರ್ಮ ಧರ್ಮ ಮಂದಿರದ ನಾಲ್ಕು ಹೆಗ್ಗಂಬಗಳೆಂದು ಕರೆಯಬಹುದಲ್ಲದೆ ವ್ಯಕ್ತಿ ಹಾಗೂ ವಿಶ್ವಕರ್ಮ ಧರ್ಮಗಳೊಗಣ ಪಾರಸ್ಪರಿಕ ಸಂಬಂಧವನ್ನು ತಿಳಿಯಲು ಸಹಾಯಕವಾಗಬಲ್ಲುದು.

ವ್ಯಕ್ತಿ-ಧರ್ಮ

ವ್ಯಕ್ತಿಯ ಸರ್ವಾಂಗೀಣ ಸಮುನ್ನತಿಯನ್ನು ಅಥವಾ ಶಾಸ್ತ್ರ ಪರಿಭಾಷೆಯಲ್ಲಿ ಹೇಳುವುದಾದರೆ ವ್ಯಕ್ತಿಯ ಅಭ್ಯುದಯ-ನಿಶ್ರೇಯಸಗಳನ್ನು ಸಾಧಿಸಬಹುದಾದುದೇ ಧರ್ಮ. ಮೂಲಸ್ತಂಭಾದಿಶಾಸ್ತ್ರ ಗ್ರಂಥಗಳಲ್ಲಿ ವಿಶ್ವಕರ್ಮ ಧರ್ಮನಿಷ್ಠನ ವ್ಯಕ್ತಿತ್ವದ ಅನಿವಾರ್ಯ ಅಂಗಗಳನ್ನು ಶ್ಲೋಕರೂಪದಲ್ಲಿ ಸುಂದರವಾಗಿ ಹೇಳಿದೆ :

ಸತ್ಯವಾನ್ ಬ್ರಹ್ಮಚಾರೀ ಚ ಶುದ್ಧಾತ್ಮಾ ವಿಜಿತೇಂದ್ರಿಯಃ।
ಸರ್ವಜೀವ ದಯಾಳುರ್ಯಸ್ಸ ವಿಶ್ವಬ್ರಾಹ್ಮಣೋಭವೇತ್ ॥

ಸತ್ಯಸಂಧತೆ, ಬ್ರಹ್ಮಚರ್ಯ, ಶುದ್ಧ ನಿರ್ಮಲಚಾರಿತ್ರ್ಯ. ಇಂದ್ರಿಯ

ನಿಗ್ರಹ, ಸರ್ವಜೀವ ದಯಾಳುತ್ವಗಳೆಂಬ ಪಂಚಶೀಲಗಳಿಂದ ವ್ಯಕ್ತಿತ್ವದ ಪರಿಪೂರ್ಣ ವಿಕಸನವಾಗುವುದರಲ್ಲಿ ಅನುಮಾನವಿಲ್ಲ. ಜೊತೆಗೆ ಈ ಪಂಚಶೀಲಗಳನ್ನು ತನ್ನ ವ್ಯಕ್ತಿತ್ವದ ಅನಿವಾರ್ಯ ಅಂಗಗಳನ್ನಾಗಿ ಮಾಡಿಕೊಂಡ ವೈಶ್ವಕರ್ಮಣ ಧರ್ಮಾವಲಂಬಿಯು ಸರ್ವಜೀವ ದಯಾಳುತ್ವ ಅಥವಾ ಜೀವಕಾರುಣ್ಯದಿಂದ ಪ್ರೇರಿತನಾಗಿ ಭಾರತೀಯ ಸಂಸ್ಕೃತಿಗೆ ಸಲ್ಲಿಸಿದ ಸೇವೆ ವಿಶ್ವ ಜೀವನದಲ್ಲಿ ಮರೆಯಲಾಗದ್ದು; ಮರೆಯಬಾರದ್ದು. ಯಾರು ಎಷ್ಟೇ ನಿರಾಕರಿಸಿದರೂ ಭಾರತೀಯ ಸಂಸ್ಕೃತಿಯ ಅಡಿಯಲ್ಲಿ ಬಾಳಿಬದುಕುವ ಪ್ರತಿಯೊಬ್ಬ ವ್ಯಕ್ತಿಯ ಆಧ್ಯಾತ್ಮಿಕ ಬದುಕಿನಲ್ಲಿ ವಿಶ್ವಕರ್ಮ ಧರ್ಮದ ಪ್ರಭಾವ ಇದ್ದೇ ಇದೆ. ಭಾರತೀಯ ಸಂಸ್ಕೃತಿಯ ಜೀವಾಳವೇ ಶಿಲ್ಪ. ಶಿಲ್ಪವಿಲ್ಲದ ವೈದಿಕ ಸಂಸ್ಕೃತಿ ಅರ್ಥಹೀನ. ಹಿಂದೂ ಧರ್ಮ ಅನುಸ್ಯೂತವಾಗಿ ಬೆಳೆದು ಬಂದಿರುವುದೇ ಶಿಲ್ಪದಿಂದ. ವಿಶ್ವಕರ್ಮಾಂಶವಿಲ್ಲದ ಹಿಂದೂಧರ್ಮವನ್ನು ಊಹಿಸಿಕೊಳ್ಳುವುದೇ ಸಾಧ್ಯವಾಗದು. ಅಂತೆಯೇ ಅಮೂರ್ತವಾದ ಭಗವತ್ತತ್ತ್ವವನ್ನು ವಿಗ್ರಹಗಳ ಮೂಲಕ ಮೂರ್ತ ಸ್ವರೂಪಗೊಳಿಸಿ, ಕೋಟ್ಯಾನುಕೋಟಿ ಭಕ್ತರ, ಅನುಭಾವಿಗಳ, ದಾರ್ಶನೀಕರ ಆಧ್ಯಾತ್ಮಿಕ ಪ್ರಜ್ಞೆಗೆ ಕೇಂದ್ರ ಸ್ಥಾನಗಳನ್ನು ನಿರ್ಮಿಸಿದ ವಿಶ್ವಕರ್ಮ ಧರ್ಮದ ಹೆಚ್ಚುಗಾರಿಕೆಯನ್ನು ವರ್ಣಿಸುವುದಕ್ಕೆ ಶಬ್ದಗಳೇ ಸಿಕ್ಕದು. ೨೧ನೇ ಅಕ್ಟೋಬರ್ ೧೯೭೩ರಲ್ಲಿ ಜರುಗಿದ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ, ಮಂಗಳೂರು ಇದರ ಸ್ವರ್ಣ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಭಾಷಣ ಮಾಡುತ್ತಾ ಮೈಸೂರು ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಎಲ್. ಜಿ. ಹಾವನೂರ್ ಅವರು "ಹಿಂದೂ ಧರ್ಮವನ್ನು ಇಂದಿನವರೆಗೆ ರಕ್ಷಿಸಿಕೊಂಡು ಬಂದವರು ಮನೆಮನೆಗಳಲ್ಲಿಯ ವಿಗ್ರಹಗಳಿಗೆ, ದೇವಸ್ಥಾನಗಳಿಗೆ, ಮೂರ್ತಿಗಳಿಗೆ, ಶಿಲ್ಪಗಳಿಗೆ, ಸಾಲದ್ದಕ್ಕೆ ಹೆಣ್ಣುಮಕ್ಕಳ ಕಂಠಾಭರಣಗಳಿಗೆ ಕಾರಣರಾದ ವಿಶ್ವಕರ್ಮರಲ್ಲದೆ ಅನ್ಯಬ್ರಾಹ್ಮಣರೂ ಅಲ್ಲ, ಕ್ಷತ್ರಿಯರೂ ಅಲ್ಲ!" ಎಂದು ಅಪ್ಪಣೆ ಕೊಡಿಸಿದರು. ವಿಶ್ವಕರ್ಮ ಧರ್ಮಕ್ಕೂ ಭಾರತೀಯ ಸಂಸ್ಕೃತಿಯ ಅಡಿಯಲ್ಲಿ ಬಾಳುವ ವ್ಯಕ್ತಿಗೂ ಇರುವ ಅವಿಭಾಜ್ಯ ಸಂಬಂಧಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕಾಗಿಲ್ಲ.

★

✻ ಡಾ. ಗೋವಿಂದ ಕೃಷ್ಣ ಪಿಳ್ಳೈ

೪

ಮಾಪನ ವಿಜ್ಞಾನಕ್ಕೆ ಭಾರತೀಯ ಶಿಲ್ಪಿಯ ಕೊಡುಗೆ

ಶಿಲ್ಪಿ ಎನ್ನುವುದನ್ನು ರೂಢಿಯಲ್ಲಿ ವಾಸ್ತುಶಿಲ್ಪಿ ಅಥವ ಮೂರ್ತಿಶಿಲ್ಪಿ ಎಂದು ವಿಶ್ಲೇಷಿಸಿ ಅರ್ಥೈಸುವುದುಂಟಾದರೂ ಇದು 'ಶಿಲ್ಪಿ' ಎನ್ನುವ ಪದಕ್ಕೆ ನ್ಯಾಯವನ್ನು ದೊರಕಿಸಿ ಕೊಡುವ ಅರ್ಥವಲ್ಲ. ಶಿಲ್ಪಶಾಸ್ತ್ರದಷ್ಟೇ ಶಿಲ್ಪಿ ಎಂಬ ಪದವು ಬಹುವ್ಯಾಪಕ ಅರ್ಥವನ್ನು ಪಡೆದಿರುವ ಪದ. ಶಿಲ್ಪವಿಲ್ಲದೆ ಶಿಲ್ಪಿಯಾಗಲಿ, ಶಿಲ್ಪಿ ಇಲ್ಲದೆ ಶಿಲ್ಪವಾಗಲಿ ಇರುವುದು ಸಾಧ್ಯವಿಲ್ಲವಾದುದರಿಂದ ಈ ಎರಡೂ ಪದಗಳೂ ಏಕಕಾಲೀನ ಅಸ್ತಿತ್ವವುಳ್ಳ ಶಬ್ದಗಳು. 'ಶಿಲ್ಪವಿಜ್ಞಾನವು ಗಂಗೆಯನ್ನು ಶಿರದಲ್ಲಿ ಹೊತ್ತಾತನಿಂದ ಪ್ರವರ್ತನಗೊಂಡು, ನಂತರದ ಶಿಲ್ಪರ್ಷಿಗಳಿಂದ ಪ್ರವರ್ಧನಗೊಂಡು, ಮಾನಸಾರ ಶಿಲ್ಪರ್ಷಿಯಿಂದ ವಿವರಿಸಲ್ಪಟ್ಟು ಬೃಹತ್ತಾಗಿ ವಿಸ್ತರಿಸಲ್ಪಟ್ಟಿದೆ' ಎಂದು ಮಾನಸಾರ ಶಿಲ್ಪಶಾಸ್ತ್ರದಲ್ಲಿ ಹೇಳಿ, ಶಿವನು ಶಿಲ್ಪಶಾಸ್ತ್ರವನ್ನು ರೂಪಿಸಿದನೆಂದು ಮುಂದೆ 'ವಿಶ್ವ ನಿರ್ಮಾಣ ಮಾಡಿದ ಅದ್ಭುತ ಶಿಲ್ಪಿ ತಾನೆಂದು ಆತನೇ (ಶಿವನೇ) ಘೋಷಿಸಿದ್ದಾನೆ. ವಿಶ್ವಶಿಲ್ಪಿಯಾಗಿ ವಿಶ್ವದ ಪುನಃಸೃಷ್ಟಿಯನ್ನು ಆತನೇ ನಡೆಸುತ್ತಾನೆ. ಆದ್ದರಿಂದ ಈ ವಿಶ್ವಶಿಲ್ಪಿಯು ವಿಶ್ವಕರ್ಮ ಎನಿಸಿಕೊಳ್ಳುತ್ತಾನೆ. 'ಈತನಿಗೆ ನಾಲ್ಕು ಮುಖಗಳು.[1] ಪೂರ್ವದಿಶೆಯ ಮುಖವೂ ವಿಶ್ವಭೂ, ದಕ್ಷಿಣ ದಿಶೆಯ ಮುಖವು

---

1. ವಿಶ್ವಕರ್ಮ ವೇದದ ದೃಷ್ಟಿಯಲ್ಲಿ ನಿರ್ಗುಣನೂ, ನಿರಾಕಾರಿಯೂ ಆಗಿರುವ ಜಗದಾದಿಸ್ಥತತ್ತ್ವ; ವಿಶ್ವ ನಿರ್ಮಾಣಾತ್ಮಶಕ್ತಿ. ಈ ಶಕ್ತಿಯು ವ್ಯಕ್ತಿಯಾಗಿ ಅವತರಿಸಿತೆಂಬ ಮಾತು ಋಷಿಗಳದು. ಈ ಅಮೂರ್ತ ಶಕ್ತಿಗೆ ಮೂರ್ತಿರೂಪು ಕೊಡುವುದರಲ್ಲಿ

ವಿಶ್ವವಿತ್, ಉತ್ತರ ಮತ್ತು ಪಶ್ಚಿಮ ದಿಶೆಯ ಮುಖಗಳು ವಿಶ್ವಸ್ಥ ಮತ್ತು ವಿಶ್ವಸ್ರಷ್ಟ ಎಂದು ಹೆಸರಾಗಿದ್ದವು. ಈ ನಾಲ್ಕೂ ಮುಖಗಳಿಂದ ನಾಲ್ವರು ಶಿಲ್ಪರ್ಷಿಗಳು ಆವಿರ್ಭಾವಗೊಂಡರು. ವಿಶ್ವಕರ್ಮನು—ಜಗತ್ ಶಿಲ್ಪಿಯು – ಪೂರ್ವ ದಿಶೆಯ ಮುಖದಿಂದ ಬಂದವನು. ದಕ್ಷಿಣದಿಶೆಯ ಮುಖದಿಂದ ಮಯನು, ಪಶ್ಚಿಮ ದಿಶೆಯ ಮುಖದಿಂದ ಮನುವು, ಉತ್ತರ ದಿಶೆಯ ಮುಖದಿಂದ ತ್ವಷ್ಟೃವು ಹೊರಬಂದರು. ಇವರಿಂದಲೇ ನಾಲ್ಕು ಬಗೆಯ ಶಿಲ್ಪಿಗಳು ಅಸ್ತಿತ್ವಕ್ಕೆ ಬಂದರು. ಇಂದ್ರನ ಮಗಳೊಂದಿಗೆ ವಿಶ್ವಕರ್ಮನ ವಿವಾಹ ನಡೆದು 'ಸ್ಥಪತಿ'ಯೂ, ಸುರೇಂದ್ರನ ಮಗಳಲ್ಲಿ ಮಯನಿಂದ 'ಸೂತ್ರಗ್ರಾಹಿ'ಯೂ, ನಳನ ಸುತೆಯಲ್ಲಿ ಮನುವಿನಿಂದ 'ತಕ್ಷಕ'ನೂ, ವೈಶ್ವಾನರನ ಮಗಳಲ್ಲಿ ತ್ವಷ್ಟೃವಿನಿಂದ 'ವರ್ಧಕಿ'ಯೂ ಜನಿಸಿದರು. ಈ ವೃತ್ತಿಗಳವರ ಪ್ರಾಮುಖ್ಯತೆಯೊಂದಿಗೆ ಅವರ ಅರ್ಹತೆಗಳು ಈ ರೀತಿಯಾಗಿವೆ :

೧. **ಸ್ಥಪತಿ:** ಈತನು ಸಕಲವೇದ-ಶಾಸ್ತ್ರಗಳಲ್ಲಿ ಪಾರಂಗತನಾಗಿರಬೇಕು. ಈತನ ಅಧ್ಯಯನದ ಪರಿಧಿಯಲ್ಲಿ ಎಲ್ಲಾ ಶಾಸ್ತ್ರ-ವಿಜ್ಞಾನಗಳು ಸೇರುತ್ತವೆ. ಆಚಾರ್ಯನ (ಗುರುವಿನ) ಎಲ್ಲಾ ಗುಣಲಕ್ಷಣಗಳನ್ನೂ ಈತ ಪಡೆದಿರಬೇಕು. ಇತರ ಎಲ್ಲಾ ಶಿಲ್ಪಿಗಳ ಮೇಲ್ವಿಚಾರಣೆ ನೋಡಿಕೊಂಡು ಅವರಿಗೆ ಮಾರ್ಗದರ್ಶನ ನಡೆಸುವಂತಹ ಪ್ರಜ್ಞಾವಂತನಾಗಿರುವುದು ಮಾತ್ರವಲ್ಲ ಅವರಿಂದ ಕೆಲಸವನ್ನು ಮಾಡಿಸುವಂತಹ ಚಾಣಾಕ್ಷತೆಯನ್ನೂ ಪಡೆದವನಾಗಿರಬೇಕು.

ಪೌರಾಣಿಕರು ಹಲವು ರೂಪಗಳನ್ನು ಅನುಸರಿಸಿದ್ದಾರೆ. ಅವುಗಳ ಪಂಚಮುಖ ಕಲ್ಪನೆ ಹೆಚ್ಚು ಪ್ರಾಚುರ್ಯವುಳ್ಳದ್ದು. ಆದೇ ರೀತಿಯಾಗಿ ದ್ವಿಭುಜ ವಿಶ್ವಕರ್ಮನ ರೂಪವು ಮೂಲ ಸ್ತಂಭಾದಿ ಶಾಸ್ತ್ರ ಗ್ರಂಥಗಳಲ್ಲೂ ವರ್ಣಿತವಾಗಿದೆ. 'ಮಾನಸಾರ'ದಲ್ಲಿ ವಿವರಿಸಲ್ಪಟ್ಟಿರುವ ರೂಪವು ಚತುರ್ಮುಖ ಸಂಪ್ರದಾಯದ್ದು ಎನ್ನಿಸುತ್ತದೆ [ಸ್ಮರಿಸಿ: ಬ್ರಹ್ಮನ ಪಂಚ ಮುಖಗಳು ಚತುರ್ಮುಖವಾದ ಪುರಾಣ ಪ್ರಸಂಗ]. ಇಲ್ಲಿ ಶಿವನಿಗೆ 'ನಾಲ್ಕು' ಮುಖಗಳೆಂದಿದ್ದರೂ, ಸದಾಶಿವನಿಗೆ ಐದು ಮುಖಗಳೆಂಬುದು ಸರ್ವವಿದಿತ. ಈ ವಿಚಾರವನ್ನು ಕೇವಲ ಒಂದು ವೈವಿಧ್ಯವೆಂದು ಪರಿಗಣಿಸಬಹುದು. ಇಲ್ಲಿಯ ಮೂಲ ಉದ್ದೇಶ ತತ್ತ್ವಾರ್ಥ ಜಿಜ್ಞಾಸೆಗಿಂತಲೂ ಶಿಲ್ಪಿಗಳಲ್ಲಿಯ ನಾಲ್ಕು ವಿಭಾಗಗಳನ್ನು ವಿವರಿಸುವುದೇ. ಮುಖ್ಯ ಆದ್ದರಿಂದ ನಾವೂ ಅಷ್ಟೇ ಸೀಮಿತಾರ್ಥವನ್ನು ಮಾತ್ರವೇ ಪರಿಗ್ರಹಿಸುವುದು ಸಾಧು.

—ಸಂಪಾದಕರು

೨ **ಸೂತ್ರಗ್ರಾಹಿ:** ಎಲ್ಲಾ ವೇದಶಾಸ್ತ್ರಗಳಲ್ಲಿ ಪಾರಂಗತನಾಗಿದ್ದು ವಿನ್ಯಾಸ ನಿರೂಪಣೆ, ಚಿತ್ರಕಲೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದಿರಬೇಕು. ಸೂತ್ರಗ್ರಾಹಿ ಎಂದರೆ ಪದಶಃ 'ಸೂತ್ರವನ್ನು (ಎಂದರೆ ಅಳತೆಯ ಪಟ್ಟಿಯನ್ನು) ಹಿಡಿಯುವವವನು' ಎಂದು ಅರ್ಥೈಸುವುದು ತಿಳಿಗೇಡಿತನದ ಪರಮಾವಧಿಯ ಮಾತು. ದಾರವನ್ನು ಹಿಡಿಯಲು ಯಾವ ಕೂಲಿಯ ಆಳಾದರೂ ಸಾಕು. ಇದಕ್ಕಾಗಿ ವೇದ-ಶಾಸ್ತ್ರಗಳ ವೈದುಷ್ಯ ಅಥವ ವಿಜ್ಞಾನದ ಜ್ಞಾನ ಅನಾವಶ್ಯಕ. ಇಲ್ಲಿ ಸೂತ್ರವೆಂದರೆ ರಹಸ್ಯ ಸಂಗತಿಗಳು ಎಂದು ಗ್ರಹಿಸಬೇಕು. ಗುಹ್ಯತರ ವಿಷಯಗಳನ್ನು ಅರಿತಿರಬೇಕಾದರೆ ತಿಳಿವು ಆವಶ್ಯಕ. ಆದ್ದರಿಂದ ರಹಸ್ಯ ಸೂತ್ರ ಗಳನ್ನು ಗ್ರಹಿಸಿರುವಂತಹವನು 'ಸೂತ್ರಗ್ರಾಹಿ'.

೩. **ವರ್ಧಕಿ:** ಈತನಿಗೆ ವೈದಿಕ ಸಾಹಿತ್ಯದ ಪರಿಚಯವಿರಬೇಕು. ಮಾಪನವಿಜ್ಞಾನ ಶಾಸ್ತ್ರದಲ್ಲಿ ಅತ್ಯಂತ ನಿಪುಣನಾಗಿರಬೇಕು. ಮಾಪನ ಎಂದರೆ ಸೂಕ್ತ ಅಳತೆಗಳ ಆಯ್ಕೆ ಮತ್ತು ತೀರ್ಮಾನ; ಯಾವುದೇ ನಿರ್ಮಾಣ ಕಾರ್ಯದಲ್ಲಿ ಅದರ ಎಲ್ಲಾ ಅಳತೆಗಳ ನಿರ್ಣಯದೊಂದಿಗೆ ಅದರ ವಿನ್ಯಾಸ ಮತ್ತು ರಚನಾ ವಿಧಾನದ ತಂತ್ರವನ್ನು ತಿಳಿಸಬಲ್ಲ ಕೌಶಲ್ಯ. ಚಿತ್ರಕಲೆಯಲ್ಲಿ ಪರಿಣಿತನಾಗಿದ್ದು ತುಲನಾತ್ಮಕವಾಗಿ ಪರಿಶೀಲಿಸಿ ತೀರ್ಮಾನಿಸಬಲ್ಲ ಪ್ರಜ್ಞಾ ವಂತನಾಗಿರಬೇಕು.

೪. **ತಕ್ಷಕ:** ವೇದಾಧ್ಯಯನ ಮಾಡಬೇಕು. ಅವಕಾಶವಿದ್ದರೆ ಶಾಸ್ತ್ರಾಧ್ಯಾಯನವೂ ನಡೆಸಬೇಕು. ತನ್ನ ಕೆಲಸವನ್ನು ಸಂಪೂರ್ಣವಾಗಿ ಅರಿತಿರಬೇಕು. ಜನರಲ್ಲಿ ಬೆರೆಯುವಂತಹವನಾಗಿರಬೇಕು. ಅವರ ನಂಬಿಕೆಗೆ ಪಾತ್ರನಾಗಿದ್ದು ತುಂಬಾ ದಯಾವಂತನಾಗಿರಬೇಕು. ತಕ್ಷಕನೆಂದರೆ ಬಡಗಿ ಎಂದು ಕೆಲವರು ಅರ್ಥ ಹೇಳುವುದುಂಟು. ಆದರೆ ಅದು ತಪ್ಪು. ಈತನು ಅನೇಕ ಕೌಶಲ್ಯಗಳನ್ನು ಕೇಳುವ ಬಡಗಿ. ಕಟ್ಟಡದ ಶಿಲ್ಪ, ಶಿಲಾ ಶಿಲ್ಪ, ಕಮ್ಮಾರಿಕೆ, ಚಿತ್ರಶಿಲ್ಪ ಇತ್ಯಾದಿ ಹಲವು ವೃತ್ತಿಗಳನ್ನು ಅರಿತಿದ್ದು ಮಾಡುವಂತಿರ ಬೇಕು. ವಸ್ತು ಸಮುಚ್ಚಯದಿಂದ ನವೀನ ಆಕಾರ ನಿರ್ಮಾಣ ನಡೆಸಬಲ್ಲ ರೂವಾರಿ ಈತ.

'ಸ್ಥಪತಿಯಾದವನು ಸಕಲ ಶಾಸ್ತ್ರಗಳ ಪಾಂಡಿತ್ಯದೊಂದಿಗೆ ತನ್ನ ಶಾಸ್ತ್ರದ ತಿಳಿವನ್ನು ರೂಢಿಗೆ ಇಳಿಸುವಂತಹ ಕಾರ್ಯಕೌಶಲ್ಯದಲ್ಲೂ ಪ್ರಾವೀಣ್ಯತೆಯನ್ನು ಗಳಿಸಿದ್ದು ಧೀಮಂತನೂ, ಪರಿಸರಗಳನ್ನು ವಿಶ್ಲೇಷಿಸಿ ಅದಕ್ಕನುಗುಣವಾಗಿ ಹೊಂದಿಕೊಳ್ಳುವಂತಹ ಬುದ್ಧಿಯನ್ನು ಪಡೆದಿದ್ದು, ಸತ್ಯಪ್ರಿಯನೂ, ಸತ್ಯವಂತನೂ ಆಗಿದ್ದು, ಯಾರಬಗ್ಗೆಯೂ ದ್ವೇಷಾಸೂಯೆಗಳನ್ನು ಹೊಂದಿರುವವನಾಗಿರಬಾರದು. ಸೂತ್ರಗ್ರಾಹಿಯು ಇತರ ಶಿಲ್ಪಿಗಳ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಾ ಸ್ಥಪತಿಯ ನಿರ್ದೇಶನದ ಪ್ರಕಾರ ಕಾರ್ಯ ಸಾಗುವಂತೆ ನೆರವಾಗಬೇಕು' ಎಂದು 'ಮನುಷ್ಯಾಲಯ ಚಂದ್ರಿಕೆ'ಯು ತನ್ನ ವಿವರಣೆಯನ್ನು ಸೇರಿಸುತ್ತದೆ.

ಇಲ್ಲಿ ಶಿಲ್ಪಿಗಳ ಈ ನಾಲ್ಕು ಪಂಗಡಗಳು, ಅವರ ಸಾಧನೆಗಳು 'ಐರೋಪ್ಯ ಗುಪ್ತ ಭ್ರಾತೃ ವರ್ಗ' (ಫ್ರೀಮೇಸನ್ರಿ) ದೊಂದಿಗೆ ಸಾಮ್ಯವನ್ನು ಪಡೆದಿದ್ದು ಅದರೊಳಗಿನ ನಾಲ್ಕು ವರ್ಗಗಳೊಂದಿಗೆ ಕಾರ್ಯ ನಿರ್ವಹಣೆಯಲ್ಲೂ ಹೋಲಿಕೆಯನ್ನು ಪಡೆದಿದೆ. ಹಾಗಿದ್ದರೆ ಸವಿಸ್ತಾರವಾಗಿದ್ದು, ವಿಭಿನ್ನ ಸಂಸ್ಕಾರಗಳಿಂದ ಕೂಡಿದ್ದು, ಗುಪ್ತ ಸಂಕೇತ ಪದ್ಧತಿಯನ್ನು ಅಳವಡಿಸಿಕೊಂಡಿರುವ ಸಹಕಾರ ಸೌಭ್ರಾತೃ ಮಂಡಲಿಗಳಾಗಿರುವ 'ಪಾಶ್ಚಿಮಾತ್ಯ ಗುಪ್ತ ಭ್ರಾತೃ ವರ್ಗ'ಕ್ಕೂ ಭಾರತಿಯ ಹೈಂದವ ಶಿಲ್ಪಿಯ ಪರಂಪರಾನುಗತ ಶಿಲ್ಪಕರ್ಮಕ್ಕೂ ಸಂಬಂಧವಿದೆಯೇ?

ಎರಡೂ ಸಂಪ್ರದಾಯಗಳಲ್ಲೂ ಹಿರಿಯನೂ, ಜಗದಾದಿಪ್ರವರ್ತಕನೂ ಆದ ವಿಶ್ವಶಿಲ್ಪಿಯೊಬ್ಬನುಂಟು. ಭಾರತೀಯ ಶಿಲ್ಪಿಯ ಪಾಲಿಗೆ ಅವನು ಶಿವ. ಶಿವನು ದ್ರಾವಿಡರ ದೇವತೆ. ಶಿವನ ಆರಾಧನೆಯನ್ನು ಕ್ರಿಸ್ತಪೂರ್ವ ನಾಲ್ಕು ಸಾವಿರ ವರ್ಷಗಳಷ್ಟು ಮೊದಲೇ ಮೊಹೆಂಜದಾರೋವಿನಲ್ಲಿ ರೂಢಿಯಲ್ಲಿತ್ತೆಂದು ಹೇಳುತ್ತಾರೆ ಸರ್ ಜಾನ್ ಮಾರ್ಷಲ್ಲರು : "ಭೂದೇವಿ ಅಥವಾ ಮಾತೃ ದೇವಿಯೊಂದಿಗೇ ಮೊಹೆಂಜದಾರೋವಿನಲ್ಲಿ ಪುರುಷ ದೇವನೂ ಆರಾಧನೆಯನು ಪಡೆಯುತ್ತಿದ್ದ ಎಂದು ಗುರುತಿಸಬಲ್ಲೆವು. ಈ ಪುರುಷ ದೇವನು ಪ್ರಾದುರ್ಭಾವ ಕಾಲದವನಾಗಿದ್ದು ಚರಿತ್ರೆಯ ಗರ್ಭದಲ್ಲಿ ಶಿವನಾಗಿ ಅರಳಿನಿಂತವನು." ಸಿಂಧೂ ಕಣಿವೆಯ ನಾಗರೀಕತೆಯ ಅವಶೇಷಗಳಲ್ಲಿ ಮೂರು ಮುಖಗಳುಳ್ಳ

ಶಿವನ ಚಿತ್ರಗಳುಳ್ಳ ಮುದ್ರಿಕೆಗಳು ದೊರೆತಿವೆ. ಅವುಗಳಲ್ಲಿ ನಾಲ್ಕನೆಯ ಮುಖವು ಹಿಂಭಾಗದಲ್ಲಿ ಅಡಗಿದೆ ಎಂಬ ಕಲ್ಪನೆಯೂ ಇದ್ದಿರಬಹುದು – ಏಕೆಂದರೆ ಶಿವನ ನಾಲ್ಕು ಮುಖಗಳಿಂದ ತಾನೇ ಶಿಲ್ಪಿಗಳ ನಾಲ್ಕು ಗುಂಪುಗಳು ಜನಿಸಿದ್ದು ? ಈ ಗುಂಪುಗಳು ಪ್ರತ್ಯೇಕವಾದ ಜಾತಿಗಳಲ್ಲಿ ಅವರು ತಮ್ಮ ಕಾರ್ಯದಲ್ಲಿ ಸಾಧಿಸಿರುವ ಪ್ರಾವೀಣ್ಯತೆಗೆ ಅನುಗುಣವಾಗಿ ರೂಪುಗೊಂಡಿರುವ ಗುಂಪುಗಳು ಮಾತ್ರವೆಂದು ಸ್ಪಷ್ಟವಾಗಿ ಈ ಮೊದಲೇ ನೀಡಿರುವ ವಿವರಣೆಯಿಂದ ತಿಳಿಯುತ್ತದೆ.

ಶಿಲ್ಪಿಗಳನ್ನು ಶಿವನೊಂದಿಗೆ (ವಿಶ್ವಕರ್ಮನೊಂದಿಗೆ) ಸಂಬಂಧ ತೋರಿಸಲು ಹೇಳಲಾಗುವ ಅವರ ಪೂರ್ವಜರ ಹೆಸರುಗಳೆಲ್ಲಾ ವೈದಿಕ/ಪೌರಾಣಿಕವಾದವು. ಅವುಗಳ ಐತಿಹಾಸಿಕತೆ ಗುರುತಿಸುವುದು ಸುಲಭವಲ್ಲ. ವಿಶ್ವಕರ್ಮ ಶಿಲ್ಪದ ಪ್ರಧಾನ ಪ್ರವರ್ತಕನೆಂದು ಈಗ ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿದ್ದಾನೆ. ವೈದಿಕ ಮತದ ಅನುಯಾಯಿಗಳಾಗಿದ್ದವರ ದೇವನಾಗಿದ್ದ ಇಂದ್ರನು, ಮಹಾಬ್ರಾಹ್ಮಣ ಅಸುರನಾದ ವೃತ್ರನ ವಿರೋಧಿಯಾಗಿ ಕಾದು, ನೀರಿಗಾಗಿ ಪರಿತಪಿಸುತ್ತಿದ್ದ ಭೂಮಿಗೆ ನೀರನ್ನು ತಂದು ಕೊಟ್ಟ. ಇದೇ ಇಂದ್ರನೇ ಪ್ರೇಮಿಗಳಿಬ್ಬರ ಮಧ್ಯೆ ತಲೆಹಾಕಿ ಅನ್ಯರ ಬೈಗುಳಕ್ಕೆ ತುತ್ತಾಗುವ ಅಭ್ಯಾಸವನ್ನು ರೂಢಿಸಿಕೊಳ್ಳುವುದಕ್ಕೂ ಮೊದಲೇ ಈ ಘಟನೆ ನಡೆದದ್ದು. ಈಗಂತೂ ಬಿಹಾರದ ಕಾಡಿನಲ್ಲಿ ವಾಸಿಸುವ ಕೆಲವು ಗುಂಪುಗಳ ವಿನಾ ಬೇರಾರೂ ಇಂದ್ರನ ಆರಾಧನೆಯನ್ನೇ ಮಾಡುವುದಿಲ್ಲ. ಆರ್ಯರ ನಾಗರಿಕ ಸಮಾಜವು 'ಸುರ' ರೆಂದೇ ಹೆಸರಾಗಿದ್ದರಿಂದ ಅವರು ಇಂದ್ರನನ್ನು ಆರಾಧಿಸಲು ಪ್ರಾರಂಭಿಸಿದ ನಂತರ ಈ ಇಂದ್ರನೇ ಸುರೇಂದ್ರನಾಗಿರಬೇಕು (ಸುರ + ಇಂದ್ರ). ಉತ್ತರ ದಿಕ್ಕಿನ ರಕ್ಷಕನಾದ ವೈಶ್ವಾನರನು ಸಂಪತ್ತಿಗೆ ಅಧಿಪತಿ. ಮನುವು ತುಂಬಾ ಧೀಮಂತ ವ್ಯಕ್ತಿ. ಆತನೇ ಮೊದಲ ಚಕ್ರವರ್ತಿ. ಆತನ ಸಂತತಿಯಲ್ಲಿ ಹಲವಾರು ಆರ್ಯ ಮತ್ತು ಅನಾರ್ಯ ರಾಜಮನೆತನಗಳ ಪರಂಪರೆಯೇ ಉಂಟು. ಅನೇಕ ಬಾರಿ ಈತನನ್ನೇ 'ಮನುಸ್ಮೃತಿ'ಯ ಕರ್ತೃವೆಂದು ತಪ್ಪಾಗಿ ಗ್ರಹಿಸಿರುವುದೂ ಉಂಟು. ಮನುವು ನಳನ ಮಗಳನ್ನು ಮದುವೆಯಾದ ಎಂಬುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತದೆ. ಇಲ್ಲಿ ಉಲ್ಲೇಖಿತವಾಗಿರುವ ನಳ ಅಯೋಧ್ಯೆಯ ಅರಸನಾಗಿದ್ದ ನಳನೇ ಆಗಿದ್ದರೆ, ಈ ನಳನಿಗೂ ಮನುವಿಗೂ ಸುಮಾರು ೯೦೦

ರಿಂದ ೧೦೦೦ ವರ್ಷಗಳ ಅಂತರ ಗೋಚರಿಸುತ್ತದೆ. ಅಥವಾ ಈ ನಳನು ನಳ-ದಮಯಂತಿ ಕಥೆಯ ನಿಷಧ ರಾಜನಾದ ನಳನೇ ಎಂದರೆ ಈ ಅಂತರಕ್ಕೆ ೧೩೦ ವರ್ಷಗಳನ್ನು ಸೇರಿಸಬೇಕಾಗುತ್ತದೆ. ಆದ್ದರಿಂದ ಈ ಇಬ್ಬರು ನಳರೂ ಶಿಲ್ಪಿಗಳ ಪೂರ್ವಜರಾಗಿರಲು ಸಾಧ್ಯವಿಲ್ಲ. ಈ ನಳನೇ ಬೇರೆ. ಈತನು ಪ್ರಸಿದ್ಧ ಶಿಲ್ಪಿಯಾಗಿದ್ದಿರಬೇಕು[2]. ಶಿಲ್ಪಿಗಳ ಪೂರ್ವಜರಲ್ಲಿ ಮಯ ಮತ್ತು ತ್ವಷ್ಟೃವಿನ ಉಲ್ಲೇಖವಿದೆ. ಮಯನು ಶಿಲ್ಪ ವಿದ್ಯೆಯಲ್ಲಿ ಪರಮ ನಿಸ್ಸೀಮ. ದಕ್ಷಿಣಭಾರತದಲ್ಲೂ ಆತನ ಖ್ಯಾತಿ, ಆತನ ಕೃತಿಗಳು ತುಂಬಾ ಪ್ರಚಾರದಲ್ಲಿದ್ದವು. 'ಮಯಮತ' ಎಂಬ ಶಿಲ್ಪ ಶಾಸ್ತ್ರವು ಇಂದೂ ತುಂಬಾ ಪ್ರಚಲಿತದಲ್ಲಿರುವ ಕೃತಿ. ಮಯನ ವಿನಾ ಪೌರಾಣಿಕ ಆಖ್ಯಾಯಿಕೆಗಳಲ್ಲಿ ಅನ್ಯರನ್ನು ಗುರುತಿಸುವುದು ಕಷ್ಟಸಾಧ್ಯ. ಶಿಲ್ಪಶಾಸ್ತ್ರ ಕೋವಿದನೂ ಆಚಾರ್ಯನೂ ಆದ

---

2 ಮಾನಸಾರದಲ್ಲಿ ಸ್ಮರಿಸಲಾಗಿರುವ ಶಿಲ್ಪಶಾಸ್ತ್ರ ಕರ್ತೃಗಳಲ್ಲಿ ನಳನೂ ಒಬ್ಬ (ತ್ವಷ್ಟಾಚೈವ ಮನುರ್ನಲಃ). ಈತ ತುಂಬಾ ಪ್ರಾಚೀನ ಶಿಲ್ಪಿಯೆಂದು ತಿಳಿದು ಬರುತ್ತದೆ. ಈತನಿಂದ ವಿಶ್ವಬ್ರಾಹ್ಮಣರಿಗೆ ಗರುಡಧ್ವಜವು ಲಭಿಸಿತೆಂದು ಪುರಾಣಗಳಲ್ಲಿ ಉಕ್ತವಾಗಿದೆ. ಈ ಸಂದರ್ಭದಲ್ಲಿ 'ಕಂಚಿ ಪುರಾಣ' ಎಂಬ ಪ್ರಾಚೀನ ಕನ್ನಡ ಕಾವ್ಯದಲ್ಲಿ ಒಂದು ಉದಂತವಿದೆ: ಮಯವಿಶ್ವಕರ್ಮನ ಮಕ್ಕಳಾದ ನಳ, ನೀಲರು ಅಗಸ್ತ್ಯರೊಂದಿಗೆ ಬರುತ್ತಿರುವಾಗ ಸಂಧ್ಯಾಕರ್ಮಕ್ಕಾಗಿ ಕಡಲಿಗೆ ಹೋಗಲು, ಅವರು ಬಿಟ್ಟು ಹೋಗಿದ್ದ ಸಂಪುಟದಲ್ಲಿದ್ದ ಸಾಲಿಗ್ರಾಮಾದಿಗಳನ್ನು ಬಾಲ ಬುದ್ಧಿಗನುಸಾರವಾಗಿ ನೀರು ಪಾಲು ಮಾಡಿದರು. ಇದರಿಂದ ಕೋಪಗೊಂಡ ಅಗಸ್ತ್ಯರು ಇವರಿಗೆ ಕಪಿಗಳಾಗುವಂತೆ ಶಾಪಕೊಟ್ಟರು. ವಿಶಾಪಕ್ಕಾಗಿ ಇವರು ಮುಟ್ಟಿದ ಪದಾರ್ಥಗಳು ನೀರಿನ ಮೇಲೆ ತೇಲುವಂತೆ ವರ ನೀಡಿದರು. ಇದರಿಂದ ನಳನೇ ಶ್ರೀರಾಮಚಂದ್ರನ ಸ್ಥಪತ್ಯಾಚಾರ್ಯನಾಗಿದ್ದು 'ನಳ ಸೇತು' ಅಥವಾ 'ರಾಮ ಸೇತು' ನಿರ್ಮಿಸಿದ. ಇದರಿಂದ ಹರ್ಷಿತನಾದ ಶ್ರೀರಾಮ ಗರುಡಧ್ವಜವನ್ನು ನಳನಿಗೆ ನೀಡಿದ (ಅಧ್ಯಾಯ ೪:೪೪-೪೯). ಇದೇ ಸಂಗತಿ ಸ್ವಲ್ಪ ಬದಲಾವಣೆಯೊಂದಿಗೆ ಅನ್ಯ ಪುರಾಣಗಳಲ್ಲೂ ದೊರೆಯುತ್ತದೆ. ವಾಮನ ಪುರಾಣದ ಪ್ರಕಾರ ಶಾಪ ನೀಡಿದ ಋಷಿ ಋತುಧ್ವಜ. ಈತನ ಕಾಲ ಕ್ರಿಸ್ತಪೂರ್ವ ೫೪೦೦ ಎಂದು ಅಂದಾಜು ಮಾಡಬಹುದು. ರಾಮಾಯಣದಲ್ಲಿ ಈತ ಕಲಿಯಾಗಿ ಹೋರಾಡಿದ್ದಾನೆ ಎಂಬುದನ್ನು ನೀಡಿ ಈತನು ಶಿಲ್ಪಿಯೇ ಎಂಬುದನ್ನು ನಿಖರಗೊಳಿಸಲಾಗಿದೆ (ವೈದಿಕಶಿಲ್ಪಿ ತ್ರಿತನು ರಣರಂಗದಲ್ಲಿ ಹೋರಾಡಿದನೆಂಬ ಉಲ್ಲೇಖ ಸ್ಮರಿಸಿ).

—ಸಂಪಾದಕರು

ಶುಕ್ರನ ಮಗನಾದುದರಿಂದ ತ್ವಷ್ಟೃವು ಕ್ರಿಸ್ತಪೂರ್ವ ಆರು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದೆ ಇದ್ದಿರಬಹುದು. ಈತನಿಗೆ ವಿಶ್ವಕರ್ಮನೆಂಬ ಒಬ್ಬ ಮಗನೂ ಇದ್ದ. ಈತನೇ ಶಿಲ್ಪಿಗಳ ಕೂಟಸ್ಥನಾದ ವಿಶ್ವಕರ್ಮನಾಗಿದ್ದರೆ ಶಿಲ್ಪವು ಶ್ರೇಷ್ಠ ಶಿಲ್ಪಿಗಳಿಂದ ಪ್ರಾರಂಭವಾದುದರೊಂದಿಗೆ ಶುಕ್ರಾಚಾರ್ಯರಂಥ ಮೇಧಾವಿಗಳ ಪರಂಪರೆಯೂ ಈ ವಂಶಕ್ಕೆ ಲಭಿಸುತ್ತದೆ.

ಪಾಶ್ಚಾತ್ಯ ಗುಪ್ತ ಭ್ರಾತೃವರ್ಗದವರೂ ಇದೇ ರೀತಿಯಲ್ಲಿ ಸಾಲೋಮನ್ ದೊರೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡುತ್ತಾರೆ. ಶಿಲ್ಪಿಗಳ ಹುಟ್ಟು ತ್ವಷ್ಟೃವಿನಿಂದ ಪ್ರಾರಂಭವಾಯಿತು ಎಂದು ಹೇಳುವಾಗ ಅದಕ್ಕೆ ಮೊದಲೇ ಶಿಲ್ಪಿವಂಶ ಇರಲಿಲ್ಲ ಎಂಬುದು ತೀರ್ಮಾನವಾದಂತಾಗುತ್ತದೆ. ಆದ್ದರಿಂದ ಕ್ರಿಸ್ತಪೂರ್ವ ಎರಡು ಸಾವಿರ ವರ್ಷಗಳಿಗೂ ಮೊದಲೇ ಶಿಲ್ಪವು ವೃತ್ತಿಯಾಗಿ ಅಭ್ಯಾಸವಲ್ಲಿತ್ತು ಎಂಬುದು ಸಾಬೀತಾಗುತ್ತದೆ. ಸಾಲೋಮನ್ ದೊರೆಯು ಕಟ್ಟಿಸಿದ ದೇವಾಲಯವು ಕ್ರಿ. ಪೂ. ೧೦೦೪ರಲ್ಲಿ ಪೂರ್ಣಗೊಂಡಿದ್ದರಿಂದ ಗುಪ್ತ ಭ್ರಾತೃವರ್ಗವು ಈ ಕಾಲದ ನಂತರವೇ ರೂಪುಗೊಂಡಿರಬೇಕು. ಶಿಲ್ಪ ಸಂಪ್ರದಾಯಕ್ಕೂ ಈ ಗುಪ್ತಭ್ರಾತೃ ವರ್ಗಕ್ಕೂ ಯಾವುದಾದರೂ ರೀತಿಯಲ್ಲಿ ಸಂಬಂಧ ಅಥವ ಸಾಮ್ಯ ಇರುವುದೇ ಎಂಬುದನ್ನು ಪರಿಶೀಲಿಸುವುದು ತುಂಬಾ ಕುತೂಹಲಕರವಾದ ವಿಷಯ.

ಬಬಿಲೋನಿಯಾದ ಶಿಲ್ಪ ಮತ್ತು ಸಂಸ್ಕೃತಿಗಳನ್ನು ಬಹುವಾಗಿ ಮೆಚ್ಚಿ ಅವುಗಳನ್ನು ಸಾಧ್ಯವಿರುವಷ್ಟು ಅನುಕರಣೆ ಮಾಡಿದವರು ಗ್ರೀಕರು ಮತ್ತು ಹೀಬ್ರುಗಳು. ಹೆಚ್. ಡಬ್ಲ್ಯು. ವಾನ್‌ಲೂನ್ ಅವರು ಹೀಬ್ರುಗಳ ಮತ್ತು ಜ್ಯೂಗಳ (ಯಹೂದಿಗಳ) ಬಗ್ಗೆ ಹೀಗೆ ಬರೆಯುತ್ತಾರೆ :

ಯಹೂದಿಗಳು ಪ್ರಾರಂಭದಲ್ಲಿ ಕೇವಲ ತುರುಗಾಹಿಗಳಾಗಿ ಹಳ್ಳಿಗಾಡಿನ ಬಾಳನ್ನು ನಡೆಸುವಂತಹವರಾಗಿದ್ದು ತಮ್ಮದೇ ಆದ ಸಂಪ್ರದಾಯ, ವಿಚಾರ, ಪದ್ಧತಿ, ಕಲೆಗಳಿಂದ ವಂಚಿತರಾಗಿದ್ದು, ಬಹುಕಾಲ ಬಬಿಲೋನಿಯನ್ನರ ಸೆರೆಯಾಳುಗಳಾಗಿ ಅವರ ನಗರಗಳಲ್ಲಿ ಗುಲಾಮರಾಗಿ ಬದುಕನ್ನು ಸವೆಸುತ್ತಾ, ತಾವೇ ರೂಪಿಸಬಹುದಾದ ಶಿಲ್ಪ ಸಂಸ್ಕೃತಿಗಿಂತಲೂ ಬಹುಪಾಲು ಉಚ್ಚ ಮಟ್ಟದಲ್ಲಿದ್ದ ಬಬಿಲೋನಿಯನ್ನರ ಶಿಲ್ಪ ನಾಗರೀಕತೆಗಳ ಪ್ರಭಾವವಕ್ಕೆ ಒಳಗಾದ

ವರು. ಅವರು ತಮ್ಮದೇ ಆದ ರಾಜ್ಯವನ್ನು ಸ್ಥಾಪಿಸಿದ ನಂತರವೂ ಬಬಿಲೋನಿಯನ್ನರ ಪ್ರಭಾವದ ಮುದ್ರೆ ಅಳಿಯದಂತೆ ಅವರಲ್ಲಿ ಕಾಣಿಸುತ್ತಿತ್ತು, ಅದರ ಫಲವಾಗಿಯೇ ಸಾಲೋಮನ್ ದೊರೆಯು ನಿರ್ಮಿಸಿದ ಪ್ರಖ್ಯಾತ ದೇವಾಲಯವು ಪ್ರಾಚೀನ ಚಾಲ್ಡಿಯನ್ ಕಟ್ಟಡದ ಪ್ರತಿಕೃತಿಯೇ ಆಗಿದೆ!

ಈ ಮಾತಿನ ಬೆಳಕಿನಲ್ಲಿ ನಾವು ಸಾಲೋಮನ್ ಅರಸ ಬಬಿಲೋನಿಯಾದಿಂದ 'ಗುಪ್ತ ಭ್ರಾತೃವರ್ಗ' (ಫ್ರೀಮೆಸನ್ರಿ) ವನ್ನೂ ಎರವಲಾಗಿ ಪಡೆದ ಎಂದು ಭಾವಿಸುವುದರಲ್ಲಿ ತಪ್ಪೇನಿದೆ? ಇದರೊಂದಿಗೆ 'ಬಬಿಲೋನಿಯಾದಲ್ಲಿ ಗುಪ್ತಭ್ರಾತೃ ವರ್ಗ ವ್ಯವಸ್ಥೆ ಇತ್ತೇ? ಮತ್ತು ಭಾರತೀಯ ಗುಪ್ತಭ್ರಾತೃವರ್ಗ ಅಥವ ಶಿಲ್ಪಿ ವಂಶ ಪರಂಪರೆಯು ಬಬಿಲೋನಿಯಾವನ್ನು ಪ್ರವೇಶಿಸಿ ಅಲ್ಲಿಂದ ಹರಡಿತೇ?' ಎಂಬ ಸಂಗತಿಯನ್ನು ಪರಿಶೀಲಿಸ ಬೇಕಾಗುತ್ತದೆ. ಈಗ ನಾವು ಉಲ್ಲೇಖಿಸುತ್ತಿರುವುದು ಉತ್ತರಕಾಲೀನ ಬಬಿಲೋನಿಯಾ. ಇದನ್ನೇ ವಾನ್ ಲೂನ್ ಅವರ ಮಾತಿನಲ್ಲೇ ಹೇಳಬೇಕಾದರೆ: 'ಯಾವ ಕಾರಣವೂ ಕಾಣಿಸದೆ ಪೂರ್ವ ಬಬಿಲೋನಿಯಾದ ಚಿತಾಭಸ್ಮದ ಮೇಲೆ ಒಂದೇ ಬಾರಿಗೆ ಅರಳಿದ ಈ ಉತ್ತರ ಬಬಿಲೋನಿಯಾದವರು ತಮ್ಮ ಪೂರ್ವಜರಿಗಿಂತಲೂ ಅಥವ ಸಮಕಾಲೀನ ಅಸ್ಸಿರಿಯನ್ನರಿಗಿಂತಲೂ ತುಂಬಾ ಶ್ರೇಷ್ಠ ಶ್ರೇಣಿಯ ನಾಗರೀಕತೆಯನ್ನು ಹೊಂದಿದ್ದು, ತಮ್ಮ ರಾಜಧಾನಿಯನ್ನು ಬೃಹತ್ ವಿದ್ಯಾಕೇಂದ್ರವನ್ನಾಗಿ, ಶಿಲ್ಪ-ವಿಜ್ಞಾನ-ಸಂಸ್ಕೃತಿಗಳ ಕೇಂದ್ರ ಸ್ಥಾನವನ್ನಾಗಿ ಪರಿವರ್ತಿಸಿದ ಮಹಾಮಹಿಮರು. ಪಾಶ್ಚಾತ್ಯರಲ್ಲಿ ಗಣಿತ, ಖಗೋಳ ವಿಜ್ಞಾನ ಮುಂತಾದ ಶಾಸ್ತ್ರಗಳ ಬೆಳವಣಿಗೆಗೆ ಅಡಿಗಲ್ಲನ್ನು ಹಾಕಿದವರೂ ಇವರೇ! ಇವರ ಈ ವಿದ್ಯೆಗಳಿಗೆ ಮಾರು ಹೋದ ಗ್ರೀಕರು ಬಬಿಲೋನಿಯಾದವರನ್ನು 'ಸರ್ವವಿದ್ಯೆಗಳ ತೌರು' ಎಂದು ಸ್ತುತಿಸುತ್ತಾ, ತಮ್ಮ ಬಬಿಲೋನಿಯಾದ ಗುರುಗಳಿಂದ ಧಾರಾಳವಾಗಿ ಈ ವಿದ್ಯೆಗಳನ್ನು ಅಭ್ಯಸಿಸಿ, ಅವರ ಗಳಿಕೆಗಳನ್ನು ಎರವಲಾಗಿ ಪಡೆದು, ಆ ವಿಷಯಗಳಲ್ಲಿ ತಮ್ಮ ಆಸಕ್ತಿಯನ್ನು ಬೆಳಸಿಕೊಂಡರು. ವಿಜ್ಞಾನ, ಶಿಲ್ಪ, ಗಣಿತ, ಖಗೋಳ ಮುಂತಾದ ಶಾಸ್ತ್ರಗಳ ಬೆಳವಣಿಗೆಯಲ್ಲಿ ಈ ರೀತಿಯ ಅದ್ಭುತವಾದ ಪ್ರಗತಿ ನಡೆದಿದ್ದಾಗ ಅದೂ ಅಡಿಯೇ ಇಲ್ಲದೆ-ಪರಂಪರೆಯನ್ನು ಹೊಂದಿ ಅದೇ ಪಥದಲ್ಲಿ ಅಭ್ಯಾಸ ಅನ್ವೇಷಣೆಗಳನ್ನು ಸಾಗಿಸುವುದೇ ತಮ್ಮ ವೃತ್ತಿಯನ್ನಾಗಿರಿಸಿಕೊಂಡಿದ್ದ ಭಾರತೀಯ ಶಿಲ್ಪಿಗಳು, ವಿಜ್ಞಾನಿಗಳು

ಬಬಿಲೋನಿಯಾವನ್ನು ಪ್ರವೇಶಿಸಿದ್ದರು ಎಂಬುದು ಅಸಾಧ್ಯವಾದ ಊಹೆಯೇ? ಮೊಹೆನ್‌ಜದಾರೊ, ಹರಪ್ಪಾ ನಾಗರೀಕತೆಗಳನ್ನು ನಿರ್ಮಿಸಿದಂತಹ ಶಿಲ್ಪಿಗಳು ಅಥವ ಅವರ ವಂಶಜರು ಬಬಿಲೋನಿಯಾದಿಂದ ತುಂಬಾ ದೂರವೇನೂ ಇರಲಿಲ್ಲ. ಐತಿಹಾಸಿಕವಾಗಿ ಕ್ರಿಸ್ತಪೂರ್ವ ೩,೫೦೦ಕ್ಕೂ ಮೊದಲೇ ಸಿಂಧೂ ಕಣಿವೆಯವರಿಗೂ ಬಬಿಲೋನಿಯನ್ನರಿಗೂ ಸಂಪರ್ಕವಿತ್ತು ಎಂಬುದನ್ನು ಈಗ ಎಲ್ಲರೂ ಒಪ್ಪುತ್ತಾರೆ. ಕ್ರಿಸ್ತಪೂರ್ವ ೧೭೫೦ರಲ್ಲಿ ಬಬಿಲೋನಿಯಾದ ಕಸ್ಸೈಟ್ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಇರಾನ್ ಅಥವ ಉತ್ತರ ಭಾಗದಿಂದ ಬಂದ ಕ್ರೂರಿಗಳು, ಒರಟರು, ಅನಾಗರೀಕರು ಎನ್ನಿಸಿಕೊಂಡ ಜನಾಂಗದವರ ವಂಶಜರೇ ಅಲ್ಲವೇ ? ಪರ್ಷಿಯಾದ ಈ ಒರಟರು ತಮ್ಮೊಂದಿಗೆ ಶಿಲ್ಪ ವೃತ್ತಿಯನ್ನು ವಿಜ್ಞಾನದ ಬಳ್ಳಿಯನ್ನು ಕೊಂಡು ಬಂದು ಕಾಲಕ್ರಮದಲ್ಲಿ ಬಬಿಲೋನಿಯಾದಲ್ಲೂ ಅದ್ಭುತವಾದ ವಿಕಾಸಕ್ಕೆ ಕಾರಣರಾದರು ಎಂಬುದು ಅಸಾಧ್ಯದ ಮಾತೇ ? ಇದೆಲ್ಲಾ ಒತ್ತಟ್ಟಿಗಿಟ್ಟರೂ ಮೆಸೋನಿಕ್ ಉಪಕರಣಗಳಿಗೂ, ಭಾರತೀಯ ಶಿಲ್ಪಿಯ ಉಪಕರಣಗಳಿಗೂ ಇರುವ ಸಾಮ್ಯವು ಯಾರ ಮನವನ್ನಾದರೂ ಮೊದಲ ಬಾರಿಗೇ ಆಕರ್ಷಿಸುತ್ತದೆ.

ಮೆಸೋನಿಕ್ ಅಳತೆಯ ಪಟ್ಟಿಯನ್ನು ೨೪ ಸಮಭಾಗಗಳಾಗಿ ವಿಭಾಗಿಸಿದ್ದಾರೆ. ಅದೇ ರೀತಿಯಲ್ಲಿ ಶಿಲ್ಪಿಯ ಅಳತೆಗೋಲನ್ನು ಕೋಲು ಎನ್ನುತ್ತಾರೆ. ಅದರಲ್ಲೂ ೨೪ ಭಾಗಗಳಿವೆ. ಇಂಗ್ಲೀಷರ ಅಡಿಕೋಲು ಕೂಡ ೨೪ ಭಾಗಗಳಾಗಿ ವಿಭಾಗಿತವಾಗಿದೆ. ಶಿಲ್ಪಿಯ ಅಳತೆಯ ಅಂಗುಲವು ಇಂಗ್ಲೀಷ್ ಇಂಚಿನ ಮುಕ್ಕಾಲು ಭಾಗ ವಿರುತ್ತದೆ. ಅಥವ ಇಂಗ್ಲೀಷ್ ಇಂಚು ೧.೩೩೩೩ ಅಂಗುಲದ ೧, ೨, ೩, ೪, ೫, ೬ ಇತ್ಯಾದಿಗಳು ನಾಜೂಕಾದ ಕೆಲಸಕ್ಕೆ ಸೂಕ್ತವಾದುವಲ್ಲ ಎಂಬುದು ನಿರ್ಣಯವಾದ ಸಂಗತಿಯಾದುದರಿಂದ ಸಹಜವಾಗಿ ಅಂತ್ಯವೇ ಕಾಣದಂತಹ ೧.೩೩೩ ಅಳತೆಯನ್ನು ಬಯಸುವುದು ಸಾಮಾನ್ಯ. ಈಗ ಇಂಚಿನ ಮಹತ್ವವನ್ನು ಮರೆತಿದ್ದರೂ ನಾವು ಹೇಳುತ್ತಿರುವುದು ಇಂಚಿನ ಪ್ರಾದುರ್ಭಾವ ಕಾಲ. ಭೂಮಿಯನ್ನು ಅಳೆಯಲು ಅಳತೆಯಾದ ಎಕರೆಯನ್ನು ನಿರ್ಣಯಿಸುವಾಗಲೂ ಇಂಗ್ಲೀಷರು ಇದೇ ರೀತಿಯ ಪದ್ಧತಿಯನ್ನು ಅನುಸರಿಸಿದ್ದಾರೆ. ಎಕರೆಯ ಮೌಲ್ಯವನ್ನು ಕರ್ನಲ್

ಜೆ.ಡಬ್ಲ್ಯು. ಎಸ್. ಸ್ಪೈಲ್ ಶೋಧಿಸುತ್ತಾ ಇಂಗ್ಲೆಂಡಿನ ಕಾರ್ನ್‌ವಾಲ್ ತವರದ ಗಣಿಗಳಲ್ಲಿ ಕೆಲಸಮಾಡಲು ಪೋನೀಷಿನಿಯನ್ನರನ್ನು ಅನುಸರಿಸಿ ಬಂದ ಮಾಲ್ಟೀಸಿಯನ್ ಗಣಿ ಕೆಲಸಗಾರರು ಬಳಸುತ್ತಿದ್ದ ವೈಬ ಅಳತೆಯಿಂದ ರೂಪುಗೊಂಡಿದೆ ಎಂದು ತೀರ್ಮಾನಿಸಿದ್ದಾರೆ. ಅವರೇ ಒಂದು ವೈಬವು ಎಕರೆಯ ೯/೧೦ ಪಾಲು ಅಥವಾ ಒಂದು ಏಕರೆಯು ೧೦/೯ ವೈಬಕ್ಕೆ ಸಮ. ಅಥವಾ (೧+೧/೯) ವೈಬ. ಹಿಂದೂ ಶಿಲ್ಪಿಯು ತಾನು ಆಯ-ವ್ಯಯಗಳನ್ನು ನಿರ್ಣಯಿಸುವಾಗ ವ್ಯಯದ ಮಾಪನವನ್ನು ಸಿದ್ಧಪಡಿಸಲು ೧/೯ ಕೋಲನ್ನು ತನ್ನ ಅಳತೆಯ ದಂಡವಾದ ಕೋಲಿಗೆ ಸೇರಿಸುವುದು ಸಿದ್ಧ ಸಂಗತಿ. ಕ್ರಿಸ್ತಶಕೆಯ ಪ್ರಾರಂಭಕ್ಕೂ ಮೂರು ಸಾವಿರ ವರ್ಷ ಮೊದಲೇ ಭಾರತೀಯ ಶಿಲ್ಪಿ ಈ ಅಳತೆಯನ್ನು ರೂಪಿಸಿಕೊಂಡು ಬಳಸದೆ ಇದ್ದಿದ್ದರೆ ಭಾರತವು ಈಗ ಇದನ್ನು ಇಂಗ್ಲೆಂಡಿನಿಂದ ಪಡೆಯಿತು ಎಂದು ಹೇಳುವುದು ಸಾಧ್ಯವಿತ್ತು. ಮೇಲ್ಮೈಯನ್ನು ಅಳೆಯುವ ಇತರ ಮಾಲ್ಟೀಸಿಯನ್ ಅಳತೆಗಳೊಂದಿಗೆ ವೈಬದ ಸಂಬಂಧವು ಈ ರೀತಿಯಾಗಿದೆ:

೧ ಸಲ್ಮ = ೪ ವೈಬ = ೮ ಪಲ್ಮಿ = ೧೬ ತುಮೊಲಿ = ೧೬ × ೨೫೬ ಕನ್ನೆ

ಕನ್ನೆಯನ್ನು ಅತ್ಯಂತ ಕಿರಿಯ ಚೌಕವನ್ನಾಗಿಸಿಕೊಂಡು ಈ ಅಳತೆಗಳನ್ನು ಗ್ರಾಫ್ ಕಾಗದದ ಮೇಲೆ ಗುರುತಿಸಿದಾಗ ಇದು ಮೂಲ ಭೂತವಾಗಿ ಶಿಲ್ಪಿಯು ತನ್ನ ಪದ್ಧತಿಯ ಪ್ರಕಾರ ರೂಪಿಸಿಕೊಂಡಿರುವ ಅಳತೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸಲ್ಮ ದೊಡ್ಡದಾದ ಸಮಭುಜ ಚತುಷ್ಕೋಣ. ಅದನ್ನು ನಾಲ್ಕು ಸಮ ಅಳತೆಯ ಚದುರಗಳನ್ನಾಗಿ ವಿಭಾಗಿಸಿ ಮತ್ತೆ ಪ್ರತಿಯೊಂದನ್ನೂ ನಾಲ್ಕು ಸಮ ಅಳತೆಯ ಚದುರ ತುಮೊಲಿಗಳನ್ನಾಗಿ ವಿಭಜಿಸಿ. ಹೀಗೇ ವೈಬದ ಒಂದು ಭುಜವನ್ನು ೩೨ ಸಮ ಭಾಗಗಳನ್ನಾಗಿ ಭಾಗಿಸಿ ಒಂದು ವೈಬಾವನ್ನು ೧೦೨೪ ಕನ್ನೆ ಸಮ ಚತುರ್ಭುಜಗಳನ್ನಾಗಿ ಮಾಡಬೇಕು. ಮಾಲ್ಟೀಸಿಯನ್ನರ ಈ ಮಾರ್ಗವು ಶಿಲ್ಪಿಗಳ ಪದ್ಧತಿಯನ್ನೇ ಹೋಲುತ್ತದೆ. ಈ ಎರಡು ಪದ್ಧತಿಗಳ ಅಳತೆಗಳ ಸಂಬಂಧವನ್ನು ಹೀಗೆ ಪಟ್ಟಿ ಮಾಡಬಹುದು :–

ಹಿಂದು ಶಿಲ್ಪಿ ಬಳಸುವ ಅಳತೆ	ಮಾಲ್ತೀಸಿಯನ್ ಅಳತೆ	ಸಮ ಚತುರ್ಭುಜಗಳ ಸಂಖ್ಯೆ
ಸಕಳ	ಸಲ್ಮ	೧ × ೧ = ೧
ಪೆಚ್ಚಕ (ಬೀಜಕ)	ವೈಬ	೨ × ೨ = ೪
ಮಹಾಪೀಠ	ತುಮೊಲಿ	೪ × ೪ = ೧೬
ಚಂಡಿತ	—	೮ × ೮ = ೬೪
ಪದ್ಮಗರ್ಭ	—	೧೬ × ೧೬ = ೨೫೬
ಚಂದ್ರಕಾಂತ	—	೩೨ × ೩೨ = ೧೦೨೪
	ಕನ್ನೆ	೬೪ × ೬೪ = ೪೦೯೬

ವೈಬ ಮತ್ತು ಎಕರೆಯ ಪರಸ್ಪರ ಸಂಬಂಧ ಹಾಗೂ ಅಂಗುಲ ಮತ್ತು ಇಂಚಿನ ಮಧ್ಯೆಯ ಬಾಂಧವ್ಯಗಳಿಂದ ಮಾಲ್ತೀಸಿಯನ್, ಇಂಗ್ಲಿಷ್ ಮತ್ತು ಭಾರತೀಯ ಅಳತೆಗಳ ಮಧ್ಯೆ ಇರುವ ಗಮನಾರ್ಹ ಸಂಬಂಧವನ್ನು ಹೀಗೆ ಪಟ್ಟಿ ಮಾಡಬಹುದು:

(i) ೧.೧/೯ ವೈಬ = ೧ ಎಕರೆ = ೪೮೪೦ ಚದರ ಗಜಗಳು
ಆದ್ದರಿಂದ ೧ ವೈಬ = ೪೮೪ × ೯ ಚದರಗಜಗಳು
= ೨೨ × ೩ × ೨೨ × ೩ ಚ. ಗ.
= ೪೩೫೬ ಚ. ಗ.
= ೬೬ ಚದರ ಗಜಗಳ ಚದರಗಳು

(ii) ೩/೪ ಇಂಚು = ೧ ಅಂಗುಲ
ಆದ್ದರಿಂದ ೧ ಗಜ = ೪೮ ಅಂಗುಲ
= ೨ ಕೋಲುಗಳು

(iii) ೧ ವೈಬ = ೪ × ೨೫೬ ಕನ್ನೆ
= ೩೨ × ೩೨ ಕನ್ನೆ
= ೩೨ ಚದರ ಕನ್ನೆ

ಆದ್ದರಿಂದ ಒಂದು ಕನ್ನೆ (ತಮಿಳು : ಕನ್ನಂ) ಭುಜದ ಅಳತೆ
= ೧೩೨/೩೨ ಕೋಲುಗಳು
= ೪.೧/೮ ಕೋಲುಗಳು = ೪ ಕೋಲು ೩ ಅಂಗುಲ

ಮೇಲಿನ (ii) ರಿಂದ ಇಂಗ್ಲೀಷ್ ಗಜವು (ಯಾರ್ಡ್) ಭಾರತೀಯ ೨ ಕೋಲು (ಗಜ) ಎರಡು ಒಂದೇ. ಅದನ್ನೇ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಇಂಗ್ಲೀಷ್ ಗಜವು (ಯಾರ್ಡ್) ಶಿಲ್ಪಿಯ ಕೋಲಿನ ಎರಡರಷ್ಟು. ಭಾರತದ ಮಾರುಕಟ್ಟೆಯಲ್ಲಿ ಇಂಗ್ಲೀಷ್ ಬಟ್ಟೆಯು ಸುಲಭವಾಗಿ ಹೆಚ್ಚಾಗಿ ಮಾರಾಟವಾಗಲು, ಅಳತೆಯ ಬಗ್ಗೆ ಹೆಚ್ಚಿನ ತೊಂದರೆ ಇಲ್ಲದೆ ಜನ ಸಾಮಾನ್ಯರೂ ನಂಬಿ ವ್ಯವಹಾರ ಸಾಗಿಸುತ್ತಿದ್ದರು ಎನ್ನುವುದಕ್ಕೆ, ಕಾರಣ ಈ ಅಳತೆ ಅವರಿಗೆ ಪರಿಚಿತವಾದುದು ಎಂಬುದೇ. ಆದರೆ ತೂಕದ ಬಗ್ಗೆ ಈ ರೀತಿ ವ್ಯಾಪಕ ಸ್ವೀಕೃತಿ ಇಲ್ಲದೆ, ತೂಕಗಳಲ್ಲಿ ಬೇರೆ ಬೇರೆ ಮಾನಗಳಿಗೆ ಕಾರಣವಾಗಿದೆ.

ಇಂಗ್ಲೀಷ್ ಶಿಲ್ಪಿಯು ೧.೧/೯ ಪೈಬವನ್ನು ಎಕರೆಯನ್ನಾಗಿ ಸ್ವೀಕರಿಸಿದರೂ ಆತನ ಪೈಬದ ಅಂತರಂಗದ ಅಳತೆಗಳನ್ನು ಬದಲಿಸಲಿಲ್ಲ. ಕೇವಲ ೧/೯ ರಷ್ಟನ್ನು ಮಾತ್ರ ಅದಕ್ಕೆ ಸೇರಿಸಿದೆಯಷ್ಟೆ (ಎಂದರೆ ೪೩೫೬ ಚದರಗಜಗಳುಳ್ಳ ಒಂದು ಪೈಬಕ್ಕೆ ಅದರ ೧/೯ ನೇ ಭಾಗವಾದ ೪೮೪ ಚದರ ಗಜಗಳನ್ನು ಕೂಡಿಸಿ ೪೮೪೦ ಚದರ ಗಜಗಳುಳ್ಳ ಎಕರೆ ರೂಪಿಸಲಾಗಿದೆ). ೪೮೪೦ ಚದರ ಗಜಗಳ ವರ್ಗಮೂಲ ಸಂಖ್ಯೆಯನ್ನು ಅದರ ಭುಜಗಳನ್ನಾಗಿರಿಸುವ ಪ್ರಯತ್ನ ಅವರು ಮಾಡಲಿಲ್ಲ. ಏಕೆಂದರೆ ಅದು ಶುದ್ಧ ವರ್ಗ ಸಂಖ್ಯೆಯಲ್ಲ. ಅದರ ವರ್ಗ ಮೂಲವು ೬೯. ೫೭ ಪ್ರಾರಂಭದಲ್ಲಿ ಎಕರೆಯನ್ನು ಚದರಗಳಾಗಿ ವಿಂಗಡಿಸುವ ಪ್ರಯತ್ನ ಮಾಡಿದರು. ನಂತರದಲ್ಲಿ ಕೈ ಬಿಟ್ಟರು. ಅನ್ಯಥಾ ಅವರು ವರ್ಗ ಮೂಲವೇ ದೊರೆಯದ ೫೭,೧ ಸಂಖ್ಯೆಗಳನ್ನು ಎದುರಿಸುವ ಪರಿಸ್ಥಿತಿ ಬರುತ್ತಿತ್ತು. ಇದಿಷ್ಟೂ ನಮಗೆ (ii) ರಿಂದ ತಿಳಿದು ಬರುತ್ತದೆ.

(iii) ರಿಂದ ನಮಗೆ ಕಂಡು ಬರುವುದು ಮಾಲ್ತೀಸಿಯನ್ನರೇ ಅಥವ ಬೇರೆ ಇನ್ಯಾರೋ ೩ ಅಂಗುಲಗಳನ್ನು ಅಥವ ೧/೮ ಕೋಲನ್ನು ೪ ಕೋಲುಗಳಿಗೆ ಕೂಡಿಸಿ ಕನ್ನೆಯನ್ನು ರೂಪಿಸಿದ್ದಾರೆ. ಇದಕ್ಕೂ ಮೊದಲೇ ವಿಭಾಗಿಸುವುದರಲ್ಲಿ ಸೂಕ್ಷ್ಮ ಅಳತೆ ಕಂಡು ಕೊಳ್ಳಲು ಅವರು ಪಟ್ಟಿರುವ ಶ್ರಮವು ಇದರಿಂದ ತಿಳಿದು ಬರುತ್ತದೆ. ನಾಲ್ಕು ಕೋಲುಗಳನ್ನು ಮೊದಲೇ ೩೨ ಭಾಗಗಳಾಗಿ ವಿಭಾಗಿಸಿದ್ದರು. ಮರು ವಿಭಜನೆಗೆ ಸುಲಭವಾಗಲೆಂದು ಒಂದು

ಕೋಲಿನ ೧/೩೨ ಭಾಗವನ್ನು ಮತ್ತೆ ಸೇರಿಸಿದರು. ಮಾಲ್ಟೀಸಿಯನ್ನರು ನಾಲ್ಕು ಕೋಲುಗಳನ್ನು ತಮ್ಮ ಕನ್ನೆ ಅಳತೆಗೆ ಮೂಲವಾಗಿ ತೆಗೆದು ಕೊಂಡಾಗ ಹಿಂದೂ ಶಿಲ್ಪಿಯ ಇನ್ನೊಂದು ಅಳತೆಯಾದ ದಂಡ (= ೧೯೨ ಅಂಗುಲ)ದ ಎರಡರಷ್ಟನ್ನು ಸ್ವೀಕರಿಸಿದ್ದಾರೆ ಎಂದು ತೋರುತ್ತದೆ. ಕೌಟಿಲ್ಯನ ಅರ್ಥ ಶಾಸ್ತ್ರದ ಪ್ರಕಾರ ಕ್ರಿ. ಪೂ. ನಾಲ್ಕನೆಯ ಶತಮಾನಕ್ಕೂ ಮೊದಲಲ್ಲಿ 'ಬ್ರಾಹ್ಮಣ ರಿಗೆ ದಾನವಾಗಿ ಕೊಡಲಾಗುವ ನೆಲವನ್ನು ಅಳೆಯುವಾಗ ಬಳಸುವ ಮಾನ'ವೇ **ದಂಡ.**

ಇಂಗ್ಲೀಷ್ ಶಿಲ್ಪಿಯು ಪೈಬ ಮತ್ತು ಯಾರ್ಡ್ (ಗಜ) ಮಾಲ್ಟೀಸಿ ಯನ್ ಶಿಲ್ಪಿಯಿಂದ ಪಡೆದಿದ್ದರೆ, ಮಾಲ್ಟೀಸಿಯನ್ ಶಿಲ್ಪಿಯು ಹಿಂದೂ ಶಿಲ್ಪಿ ಯಿಂದ ಪಡೆದಿರುವನು [ಮಾಲ್ಟೀಸಿಯನ್ನರು ದ್ರಾವಿಡ ಬುಡಕಟ್ಟಿಗೆ ಸೇರಿದ ಜನಾಂಗವೆಂಬುದನ್ನು ಇಲ್ಲಿ ಗಮನಿಸಬೇಕಾದ ಅಂಶ. ಇದರಿಂದ ಈ ಕೊಳ್ಗೆ ನಂಬಲರ್ಹವೆನಿಸುತ್ತದೆ]. ಇಂಗ್ಲೀಷ್ ಶಿಲ್ಪಿಯು ಈ ಗಜವನ್ನು (ಯಾರ್ಡ್) ಮೂರು ಭಾಗವಾಗಿ ವಿಭಜಿಸಿ ಅದನ್ನು ಅಡಿ (ಫುಟ್) ಎಂದು ಕರೆದ. ಹಿಂದೂ ಶಿಲ್ಪಿಯೂ ತನ್ನ ಕೋಲನ್ನು ಮೂರು ಭಾಗಗಳಾಗಿ ವಿಂಗಡಿಸಿ ಪ್ರತಿಭಾಗವನ್ನೂ ಯೋನಿ ಎಂದು ಕರೆಯುತ್ತಿದ್ದ. ಈ ರೀತಿಯಲ್ಲಿ ಅಳತೆಯನ್ನು ಹಿಂದೂಗಳು 'ಕೈ'ಯಿಂದ ಪ್ರಾರಂಭಿಸಿದ್ದು, ಇಂಗ್ಲೆಂಡಿನಲ್ಲಿ ಅದು 'ಅಡಿ' (ಫುಟ್) ಎಂದು ಮುಕ್ತಾಯಗೊಂಡಿತು! ಯಾರ್ಡನ್ನು ಮೂರು 'ಫುಟ್'ಗಳಾಗಿ ವಿಭಾಗಿಸು ವಾಗಲು ಇಂಗ್ಲೀಷ್ ಶಿಲ್ಪಿಯು ಯಾವ ಕಲ್ಪನೆಯು ಇಲ್ಲದವನಾಗಿರಲಿಲ್ಲ ಎನ್ನುವಂತಿಲ್ಲ. ಒಂದು ಯೋನಿಯು ಆರು ಇಂಚುಗಳಿಗೆ ಸಮವಾದ್ದರಿಂದ ಆತ ತನ್ನ ಪುಟ್ ಹನ್ನೆರಡು ಇಂಚುಗಳನ್ನು ಪಡೆದಿದೆ ಎಂದ. ಅದು ಎರಡು ಯೋನಿಗಳಿಗೆ ಸಮವೆಂಬುದು ಅವನಿಗೆ ಗೊತ್ತಿತ್ತು. ಪುಟ್ (ಅಡಿ)ಯನ್ನು ಹನ್ನೆರಡು ಭಾಗಗಳನ್ನಾಗಿ ವಿಭಾಗಿಸುವಾಗಲೂ ತಾನು ಮಾಡುತ್ತಿರುವುದೇನು ಎಂಬುವರ ಕಲ್ಪನೆ ಆತನಿಗಿತ್ತು. ಅವನು ಅಂಗುಲದ ೧.೩೩೩೩....ರಷ್ಟಿದ್ದ ಸಂಸ್ಕರಿತ ಇಂಚನ್ನು ಸ್ವೀಕರಿಸಿದ್ದು ಅದನ್ನು ಸುಲಭವಾಗಿ ಗುರುತಿಸಲು ಅಡಿಯ ೧/೧೨ ಪಾಲನ್ನಾಗಿಸಿಕೊಂಡ. ಈ ರೀತಿಯ ಅಳತೆಯನ್ನು ರೂಪಿಸಿದ್ದರಿಂದ ಇಂದಿಗೂ ಸರ್ವೇಯರ್‌ಗಳು, ಇಂಜನಿಯರ್‌ಗಳು ಆ ಶಿಲ್ಪಿಗೆ ಕೃತಜ್ಞರಾಗಿರ ಬೇಕಾಗಿದೆ. ಅವರ ಲೆಕ್ಕಗಳಲ್ಲಿ ಬಹುಪಾಲು ಈ ಅಳತೆಯ ಸಾಧಾರಣೆಯ

ಮೇಲೆ ನಿರ್ಭರಗೊಂಡಿದೆ. ಹಿಂದೂ ಶಿಲ್ಪಿಯೂ ಕೂಡ ಮಾಪನಕ್ಕೆ ಅನು ಕೂಲವಾಗುವಂತೆ ಹನ್ನೆರಡು ಭಾಗಗಳುಳ್ಳ ಒಂದು ಮೂಲ ಅಳತೆಯನ್ನು ಹೊಂದಿದ್ದ. ಅತನ ಪ್ರತಿಯೊಂದು ಭಾಗವು ಮೂರು ಅಂಗುಲ ಅಥವ ೨.೧/೪ ಇಂಚಿನಷ್ಟಿತ್ತು.

ಇಂಗ್ಲಿಷ್ ಮತ್ತು ಹಿಂದೂ ಅಳತೆಗಳ ಮಧ್ಯೆ ಇರುವ ಸಾಮ್ಯದ ಬಗ್ಗೆ ಸಾಕಷ್ಟು ಹೇಳಲಾಗಿದೆ. ಇಂಗ್ಲೀಷ್ ಅಳತೆಗಳು ಹಿಂದೂ ಅಳತೆಗಳಿಂದ ರೂಪುಗೊಂಡಿವೆ ಎಂಬುದನ್ನು ಸಾಬೀತು ಮಾಡಲು, ಇಂಗ್ಲೀಷ್ ಮತ್ತು ಹಿಂದೂ ಶಿಲ್ಪಿಗಳಿಬ್ಬರೂ ಒಂದೇ ಅಳತೆಗಳನ್ನೇ ಬಳಸುತ್ತಿರುವರು ಎಂಬದನ್ನು ಸಾಧಿಸಲು ಮತ್ತೆಷ್ಟು ಬೇಕಾದರೂ ಹೇಳಲು ಸಾಧ್ಯ. ಇದೆಲ್ಲಾ ಕಾಕತಾಳೀಯ ನ್ಯಾಯದಂತೆ ಕಂಡುಬರುವ ಸಾಮ್ಯವೇ? ಅಥವಾ ಇಂಗ್ಲೀಷ್ ಶಿಲ್ಪಿಯು ಹಿಂದು ಶಿಲ್ಪಿಯಿಂದ ಪಡೆದ ಅಳತೆಗಳೇನೇ? ಭಾರತೀಯ ಶಿಲ್ಪಿಯ ಕೊಡುಗೆಯೇ ಇದಾಗಿದ್ದರೆ ಈ ಅಳತೆಗಳು 'ಗುಪ್ತ ಭ್ರಾತೃ ವರ್ಗ'ದ ಶಿಲ್ಪಿಗಳಿಂದಲೇ ಇಂಗ್ಲೆಂಡ್ ಸೇರಿರಬೇಕು.

ಈ ಮಾಪನ ಜ್ಞಾನವು ಭಾರತದಿಂದ ಮಾಲ್ಟ ನಂತರ ಇಂಗ್ಲೆಂಡ್ ಹೀಗೆ ಪ್ರಯಾಣ ಬೆಳಸಿತೇ? ಅಥವಾ ಭಾರತದಿಂದ ಬಬಿಲೋನಿಯ, ಬಬಿಲೋನಿಯಾದಿಂದ ಪ್ಯಾಲೆಸ್ಟೈನ್, ಪ್ಯಾಲೆಸ್ಟೈನಿನಿಂದ ಸ್ಕಾಟ್‌ಲೆಂಡ್ ಹೀಗೆ ತನ್ನ ಯಾತ್ರೆ ಬೆಳಸಿತೋ? ಎರಡನೆಯ ಹಾದಿಯೇ ಸರಿಯಾಗಿ ಕಂಡು ಬರುತ್ತದೆ. ಕ್ರಿಸ್ತಶಕ ೭೦ರಲ್ಲಿ ಟೈಟಸ್‌ನ ಎರಡನೆಯ ದೇವಾಲಯದ ನಾಶ ಮಾಡಿದ ನಂತರ ಶಿಲ್ಪಿಗಳ ಒಂದು ಗುಂಪು ಪವಿತ್ರ ನಗರವಾದ ಪ್ಯಾಲೆಸ್ಟೈನನ್ನು ತುಂಬಾ ದುಃಖದಿಂದ ತ್ಯಜಿಸಿ ಸ್ಕಾಟ್‌ಲೆಂಡಿನಲ್ಲಿ ನೆಲೆಸಿ ಅಲ್ಲಿಯ ಕಿಲ್‌ವಿನ್ನಿಂಗ್ ನಲ್ಲಿ 'ಏನ್ಷಿಯಂಟ್ ಲಾಡ್ಜ್'ನ್ನು ಸ್ಥಾಪಿಸಿದರಂತೆ.

ಭಾರತದಲ್ಲಿ ನಿಸ್ಸಂಶಯವಾಗಿ ಶಿಲ್ಪಿಗಳು ಅತ್ಯಂತ ಶ್ರೇಷ್ಠ ವಿಜ್ಞಾನಿಗಳಾ ಗಿದ್ದರು. ವೇದಾಧ್ಯಯನ ಮತ್ತು ಅವುಗಳನ್ನು ಆಚಾರದಲ್ಲಿ ಅಳವಡಿಸುವುದು ಶಿಲ್ಪಿಯ ಆದ್ಯಕರ್ತವ್ಯಗಳಲ್ಲಿ ಒಂದೆಂದು 'ಮಾನಸಾರ' ಅಭ್ಯಸಿಸಿದ ಯಾರಾ ನಿರ್ಣಯಿಸಬಹುದು. ಆದರೆ 'ಮನುಷ್ಯಾಲಯ ಚಂದ್ರಿಕಾ'ದಲ್ಲಿ ಶಿಲ್ಪಿಗೆ ವೇದಾಧ್ಯಯನದ ಅವಶ್ಯಕತೆಯನ್ನು ಉಲ್ಲೇಖಿಸಿಲ್ಲ. ಇದನ್ನು ವಿಸ್ಮರಿತ

ಸಂಗತಿ ಎನ್ನುವುದಕ್ಕಿಂತಲೂ, ಆಗ್ಗೇ ಶಿಲ್ಪಿಯ ಸ್ಥಿತಿಯಲ್ಲಿ ಅಪಾರ ವ್ಯತ್ಯಾಸ ವಿತ್ತು ಎಂಬುದೇ ಸೂಕ್ತವೆನಿಸುತ್ತದೆ. ಆದರೂ ಆಚಾರ್ಯ (ಗುರು) ಎಂಬ ಹೆಗ್ಗಳಿಕೆ ಮಾತ್ರ ಅವರಿಂದ ದೂರವಾಗಲಿಲ್ಲ. ಶಿಲ್ಪಿಗಳ ಈ ಪತನವನ್ನು ವಿವರಿಸುವುದು ಕಷ್ಟವಾದರೂ, ಸಂಪೂರ್ಣವಾಗಿ ಪರಾವಲಂಬಿಗಳಾಗಿ ಸೇವಾ ವೃತ್ತಿ ನಡೆಸುತ್ತಿದ್ದ (ಸಪ್ತಾರ್ಷೇಯ) ಬ್ರಾಹ್ಮಣರು, ತಮ್ಮ ಆಧ್ಯಾತ್ಮ ಶಕ್ತಿಯನ್ನು ಮುಂದು ಮಾಡಿ ಅರಸರ ಮೇಲೂ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ನಿರಂಕುಶ ಪ್ರಭುಗಳಾಗಿ ಮೆರೆದಿದ್ದೇ ಪ್ರಧಾನ ಕಾರಣವೆಂದು ತೋರುತ್ತದೆ. ವೇದಯುಗದ ಪ್ರಾರಂಭದಲ್ಲಿ ಈ ಸಪ್ತಾರ್ಷೇಯರು ಕೇವಲ ಮಂತ್ರಪಾಠಕರಾಗಿದ್ದರು. ನಂತರದಲ್ಲಿ ಅಯೋಧ್ಯೆಯ ಅರಸನೂ ವಸಿಷ್ಠರ ಮುಂದೆ ತಲೆಬಾಗಿ ನಿಲ್ಲುವಷ್ಟು ಶಕ್ತಿವಂತರಾಗಿ ಬೆಳದರು. ಭಾರ್ಗವರು ಯುದ್ಧವಿದ್ಯೆಯಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದರು. ಪರಶುರಾಮನು ಕ್ಷತ್ರಿಯ ರನ್ನೆಲ್ಲಾ ತನ್ನ ಪರಶುವಿನಿಂದ (ತಪೋಬಲದಿಂದ ಅಲ್ಲ !) ನಾಶಗೊಳಿಸಿದನಂತೆ. ಮೊದಲಲ್ಲಿ ವೇದಾಧ್ಯಯನವು ಯಾವ ಪಂಗಡಕ್ಕೂ ವಿಶೇಷವಾದುದಾಗಿರಲಿಲ್ಲ. ಅಭಿರುಚಿ, ಆಸಕ್ತಿ ಇರುವ ಯಾರಾದರೂ ಅಧ್ಯಯನ ಸಾಗಿಸಬಹುದಾಗಿತ್ತು (ಸ್ಮರಿಸಿ: ಸತ್ಯಕಾಮ ಜಾಬಾಲಿ, ಮಹೀದಾಸ ಐತರೇಯ ಇತ್ಯಾದಿ). ಶಿಲ್ಪಿ ಗಳಿಗಂತೂ ವೇದಾಧ್ಯಯನ ಅವರ ಶಿಲ್ಪದಷ್ಟೇ ಆವಶ್ಯಕವಾಗಿತ್ತು. ಶಿಲ್ಪಿ ಯನ್ನು ಮೂಲೆಗುಂಪು ಮಾಡಲು ಪ್ರಾರಂಭವಾದುದು ಬಹುಶಃ ವ್ಯಾಸರ ಪ್ರಖ್ಯಾತಿಯ ನಂತರ. ವೇದವನ್ನು ನಾಲ್ಕಾಗಿ ಭಾಗಿಸಿ ಪ್ರತಿಯೊಂದು ಭಾಗ ವನ್ನು ತನ್ನ ನಾಲ್ಕು ಶಿಷ್ಯರ ವಶಕ್ಕೆ ಒಪ್ಪಿಸಿದ -- ಪೈಲನಿಗೆ ಋಗ್ವೇದ, ವೈಶಂಪಾಯನಿಗೆ ಯಜುರ್ವೇದ, ಜೈಮಿನಿಗೆ ಸಾಮವೇದ, ಸುಮಂತುವಿಗೆ ಅಥರ್ವವೇದ. ಇದರ ನಂತರವೂ ಸಂಪಾದಿತವಾಗದೆ ಬಹಳ ಸಾಹಿತ್ಯವು ಉಳಿ ದಿತ್ತು. ಪರಂಪರೆಯಿಂದ ಉಳಿದು ಬಂದಿದ್ದ ಕಥೆಗಳು, ಪ್ರಸಂಗಗಳು, ಹಾಡು ಗಳು, ಇವನ್ನೆಲ್ಲಾ ಪುರಾಣ-ಇತಿಹಾಸಗಳೆಂದು ಕರೆಯುತ್ತಿದ್ದರು. ಇವನ್ನೆಲ್ಲಾ ಸೂತ ರೋಮಹರ್ಷಣ ಅಥವ ಲೋಮಹರ್ಷಣರಿಗೆ ಕೊಟ್ಟರು. ವ್ಯಾಸರು ಅರಸ ವಿಚಿತ್ರವೀರ್ಯನ ರಾಣಿಯರಲ್ಲಿ ಪಾಂಡು ಮತ್ತು ಧೃತರಾಷ್ಟ್ರರನ್ನು ಪಡೆ ದಿದ್ದು, ಮುಂದೆ ಈ ಪಾಂಡವರು ಮತ್ತು ಕೌರವರು ಮಹಾಭಾರತ ಯುದ್ಧ

ನಡೆಸಿದ್ದು ಇತ್ಯಾದಿಗಳ ಬೆಳಕಿನಲ್ಲಿ ವ್ಯಾಸರು ಕ್ರಿಸ್ತಶಕೆಗೆ ಒಂದು ಸಾವಿರ ವರ್ಷಗಳು ಮೊದಲು ಇದ್ದಿರಬೇಕೆಂದು ತೀರ್ಮಾನಿಸಬಹುದು.

ವೇದ ವಿಭಜನೆಯನ್ನು ನಡೆಸಿದವರಲ್ಲಿ ವ್ಯಾಸರೇ ಮೊದಲಿಗರಲ್ಲ. ಅದಕ್ಕೂ ಮೊದಲಲ್ಲಿ ಅರಸರಿಂದ ನಿಯುಮಿತರಾಗಿದ್ದ ಹಲವಾರು ಪಂಡಿತರು ಈ ಕಾರ್ಯವನ್ನು ನಡೆಸಿದ್ದರು. ವ್ಯಾಸರಿಗೆ ಒಂದು ನೂರು ವರ್ಷಗಳ ಹಿಂದೆಯೇ ಹಿರಣ್ಯಗರ್ಭನೆಂಬ ಅರಸನ ಕಾಲದಲ್ಲಿ ವೇದಗಳನ್ನು ಮೂರಾಗಿ ವಿಭಾಗಿಸಿ ಋಗ್, ಯಜುಸ್ ಮತ್ತು ಸಾಮವೇದಗಳು ಸ್ಪಷ್ಟವಾಗಿ ರೂಪುಗೊಂಡಿತ್ತು. ಯಜ್ಞಯಾಗಾದಿ ಕ್ರತುಗಳಲ್ಲಿ ತುಂಬಾ ಆಸಕ್ತಿಯನ್ನು ಇರಿಸಿಕೊಂಡು, ಸ್ವಯಂ ಅನೇಕ ಯಜ್ಞಗಳನ್ನು ಮಾಡಿದ ದುಷ್ಯಂತನ ಮಗನಾದ ಭರತನ ಕಾಲಕ್ಕೆ ಅಥರ್ವವೇದವು ಇತರ ವೇದ ಸಂಹಿತೆಗಳಿಂದ ಬೇರ್ಪಟ್ಟಿತ್ತು. ಇದು ಕ್ರಿಸ್ತಪೂರ್ವ ಆರನೆಯ ಶತಮಾನದ ಸಮಯ ಇರಬಹುದು. ವೇದಗಳನ್ನು ಸಂಪಾದಿಸಿ ವಿಭಜಿಸಿದ್ದಕ್ಕಾಗಿ ವ್ಯಾಸ ಎಂಬ ಬಿರುದನ್ನು ಪಡೆದ ಶ್ರೀಕೃಷ್ಣ ದ್ವೈಪಾಯನ ವ್ಯಾಸರು, ವೇದ ಪುರಾಣಾದಿಗಳನ್ನು ತಮ್ಮ ಐದು ಮಂದಿ ಶಿಷ್ಯರಿಗೆ ಅವನ್ನು ವಹಿಸಿಕೊಟ್ಟನಂತರ ಆ ಶಿಷ್ಯರು, ಅವರ ಶಿಷ್ಯರು ತಮ್ಮ ಪ್ರತ್ಯೇಕತೆಯನ್ನು, ಪ್ರಭಾವವನ್ನು ಸ್ಥಾಯಿಯಾಗಿ ಇತರರ ಮೇಲೆ ಇರುವಂತೆ ಮಾಡಲು ತಮಗೆ ಅನುಕೂಲಕರ ರೀತಿಯಲ್ಲಿ, ತಮ್ಮ ಸರ್ವಸ್ವಾಮ್ಯವನ್ನು ಸಾರುವ ತೆರನಾಗಿ, ತಮ್ಮ ಹಕ್ಕುದಾರಿಯನ್ನು ನಿರೂಪಿಸಲು ಸಾಧ್ಯವಾಗುವಂತೆ ಸೇರ್ಪಡೆ, ಮಾರ್ಪಾಡುಗಳನ್ನು ನಡೆಸಿದರೆಂದು ತೋರುತ್ತದೆ. ಅಂದಿನಿಂದ ವೇದವು ಬ್ರಾಹ್ಮಣರಿಗೂ ದೂರವಾಗಿಯೇ ಉಳಿಯಿತೆಂದರೆ ತಪ್ಪಲ್ಲ. ಈಗಂತೂ ವೇದಗಳ ಬಗ್ಗೆ ಭಾರತೀಯ ಬ್ರಾಹ್ಮಣರಿಗಿಂತಲೂ ಐರೋಪ್ಯ ವಿದ್ವಾಂಸರಿಗೇ ಹೆಚ್ಚು ತಿಳಿದಿದೆ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ.

ಈ ದುರದೃಷ್ಟಕರ ಬದಲಾವಣೆಗಳಿಂದ ಶಿಲ್ಪಿಯ ಸ್ಥಾನವು ಲುಪ್ತವಾಗಲು ಕಾರಣವಾದಂತೆ ತೋರುತ್ತದೆ. ಮಂತ್ರಾಂಗದ ಪೂರ್ಣಸ್ವಾಮ್ಯವು ಒಬ್ಬರಲ್ಲಿ ಕೇಂದ್ರೀಕೃತವಾಯಿತು. ಶಿಲ್ಪಿಗಳು ಕಾರ್ಯಾಂಗಕ್ಕೆ ಸೀಮಿತವಾಗಬೇಕಾ

ಯಿತು[3]. ಯಜುರ್ವೇದ ಮತ್ತು ಅಥರ್ವವೇದಗಳು ಸಂಪೂರ್ಣವಾಗಿ ಅವುಗಳ ಟೀಕೆಗಳೊಂದಿಗೆ ಶಿಲ್ಪಶಾಸ್ತ್ರಗಳ ತಂತ್ರ ಮತ್ತು ತತ್ತ್ವ ಶಾಸ್ತ್ರಗಳಾಗಿದ್ದವು. ಅವುಗಳಲ್ಲಿ ಅನೇಕ ಶಿಲ್ಪ ರಹಸ್ಯಗಳು ಅಡಗಿದ್ದವು. ಈ ಪರಿಸ್ಥಿತಿಯ ಫಲವಾಗಿ ಮಂತ್ರಾಂಗದ ಒಡೆಯರಿಗೆ ಅವುಗಳ ರೂಢ ಪರಿಣಾಮಗಳು, ರಚನೆಗಳು ಗೊತ್ತಿಲ್ಲದೆ, ರಹಸ್ಯಗಳು ಅವರಿಂದ ಗೋಪ್ಯವಾಗಿಯೇ ಉಳಿದವು. ಶಿಲ್ಪಾಂಗವನ್ನು ಅನುಸರಿಸುತ್ತಿದ್ದವರು ಮಂತ್ರಾಂಗ ಬಿಟ್ಟು, ಪರಂಪರೆಯಿಂದ ಬರುತ್ತಿದ್ದ ರಹಸ್ಯಗಳನ್ನು, ಕೌಶಲಗಳನ್ನು ಮಾತ್ರವೇ ಕಾಪಾಡುವ ಸ್ಥಿತಿಗೆ ನೂಕಲ್ಪಟ್ಟು, ಹಿಂದಿನ ಪರಂಪರೆಯ ಜ್ಞಾನವನ್ನು ಮಾತ್ರವೇ ಕಾಪಾಡುವಂತಹ ಸಾಮಾನ್ಯರಾದರು. ತಮ್ಮ ವೃತ್ತಿಯಲ್ಲಿ ಪ್ರಾವಿಣ್ಯತೆಗಳಿಸಿದ್ದರೂ ಒಡೆತನ ಅವರದಾಗಿರಲಿಲ್ಲ. ಮಂತ್ರಾಂಗವನ್ನು ಹಿಡಿದಿದ್ದ (ಸಪ್ತಾರ್ಷೇಯ) ಬ್ರಾಹ್ಮಣರಿಗೆ ತತ್ತ್ವಗಳು ಮತ್ತು ಸೂತ್ರಗಳು (ರಹಸ್ಯಗಳು) ಯಾವ ಪ್ರಯೋಜನಕ್ಕೂ ಒದಗುವಂತಿರಲಿಲ್ಲ. ಅವನ್ನು ರೂಢಿಯಲ್ಲಿ ರೂಪಿಸುವ ಅವಕಾಶ ಅವರಿಗಿರಲಿಲ್ಲ. ಇಂತಾಗಿ ಅದು ಅವರ ಪಾಲಿಗೆ ಕಗ್ಗಂಟಾಯಿತು. ಆದರೂ ಸಾರ್ವಜನಿಕರಿಂದ ಹಣ ಸುಲಿಗೆ ಮಾಡಲು ಸಾಧ್ಯವಾಗುವಂತಹ ಹಲವಾರು ಗಣಿತದ ಚಿತ್ರಗಳನ್ನು, ಮಂತ್ರ-ತಂತ್ರಗಳನ್ನು ರೂಢಿಸಿಕೊಂಡಿದ್ದು ಉಂಟು.

ಶಿಲ್ಪಿಯು ಈ ರೀತಿಯ ಪರಿಸ್ಥಿತಿಗೆ ಬಲವಂತದಿಂದ ತಳ್ಳಲ್ಪಟ್ಟಿದ್ದರೂ ಆತನ ಸಾಧನೆಯನ್ನು ಭಾರತದ ಉದ್ದ-ಅಗಲಕ್ಕೂ ನಾವು ಇಂದೂ ಕಾಣಬಹುದು. ಅಷ್ಟು ಮಾತ್ರವೇ ಅಲ್ಲದೆ ಭಾರತೀಯ ಪ್ರಾಚೀನ ವಸಾಹತುಗಳಲ್ಲೂ ಅವರ ಸಾಧನೆಯನ್ನು ಕಾಣಬಹುದು. ಅವರ ಅದ್ಭುತ ಸಾಧನೆಗಳು, ನಿರ್ಮಾಣಗಳು

---

3. ಶಿಲ್ಪಿಗಳು ಮಂತ್ರಾಂಗದಿಂದ ಸಂಪೂರ್ಣವಾಗಿ ದೂರವಾದರು ಎಂಬುದು ಸತ್ಯವಲ್ಲ. ಶಿಲ್ಪಿಗಳಲ್ಲಿ ಇಂದೂ ಶಿಲ್ಪ-ಮಂತ್ರಗಳೆರಡನ್ನೂ ಪರಂಪರೆಯಿಂದ ಅನುಸರಿಸುತ್ತಾ ಬಂದಿರುವ ಸಂಪ್ರದಾಯಿಕ ಕುಟುಂಬಗಳು ಅನೇಕವಿವೆ. ಶಿಲ್ಪಿಗಳಲ್ಲಿ ತಮ್ಮವರದೇ ಆದ ವೈದಿಕ ಪರಂಪರೆಗಳು, ವೇದಾಗಮ ಪಂಡಿತರು ಇದ್ದಾರೆ. ಆದರೆ ಇವುಗಳಿಂದ ದೂರವಾಗಿ ಉಳಿದಿರುವ ಶಿಲ್ಪಿಗಳ ಸಂಖ್ಯೆಯು ಹೆಚ್ಚಾಗಿದೆ ಎಂಬುದು ಮಾತ್ರ ಸುಳ್ಳಲ್ಲ. ಈ ಜ್ಞಾನ ನಿಕ್ಷೇಪ ಬಹುಭಾಗ ನಷ್ಟವಾಗಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಇಂದೂ ಇನ್ನೂ ಉಳಿದುಕೊಂಡಿದೆ ಎಂಬುದು ಇತ್ತೀಚಿನ ಶಿಲ್ಪಕೃತಿಗಳಿಂದ ನಾವು ತಿಳಿಯಬಹುದು.

—ಸಂಪಾದಕರು

ಅವರ ಶಾಸ್ತ್ರದ ನಿಖರತೆಯನ್ನು, ಅವರು ತಮ್ಮ ವೃತ್ತಿಯಲ್ಲಿ ಇರಿಸಿರುವ ಅನನ್ಯ ಶ್ರದ್ಧೆ, ಸಮರ್ಪಣಾಭಾವಗಳನ್ನು ಸ್ಪಷ್ಟವಾಗಿ ತೋರುತ್ತವೆ. ಅವರ ಈ ಸಾಧನೆಗಳನ್ನು ಮೀರಿಸುವ ಸಾಧನೆಗಳು ಬೇರೆ ಇಲ್ಲ. ಈಗ ನಮಗೆ ಅನುಪಲಬ್ಧವಾಗಿರುವ ಎಲ್ಲಾ ಕಲಾ ಸಂಪತ್ತು ನಮಗೆ ಲಭಿಸಿದ್ದೇ ಆದರೆ ಜಗತ್ತಿನಲ್ಲೆಲ್ಲಾ ಈ ಶಿಲ್ಪಿಗಳ ಖ್ಯಾತಿ ಮತ್ತಷ್ಟು ತೇಜೋವಂತವಾಗಿ ಬೆಳಗುವುದರಲ್ಲಿ ಸಂಶಯವೇ ಇಲ್ಲ.

ಈ ರೀತಿಯಲ್ಲಿ ಮೂಲಭೂತವಾದ ತತ್ತ್ವಶಾಸ್ತ್ರ ಬೇರ್ಪಟ್ಟೂ ಇಂತಹ ಅಪೂರ್ವ ಸಾಧನೆಯನ್ನು ಗಳಿಸಿರುವ ಈ ಶಿಲ್ಪಿ ಅದರೊಂದಿಗೇ ಇದ್ದಿದ್ದರೆ ಆಗಿನ ಭಾರತದ ಸಾಧನೆಯ ಕಲ್ಪನೆಯೇ ನಮ್ಮನ್ನು ಅಚ್ಚರಿಗೊಳಿಸುತ್ತದೆ.

'ಇಂತಹ ಅದ್ಭುತಗಳನ್ನು ಸೃಷ್ಟಿಸಿದ ಶಿಲ್ಪಿಗಳು ಈಗ ಎಲ್ಲಿದ್ದಾರೆ?' ಎಂದು ಪ್ರಶ್ನಿಸಿ ಕೊಳ್ಳುವವರು ಆ ಶಿಲ್ಪಿಗಳ ಸಂತಾನದವರನ್ನು ಭಾರತದ ಎಲ್ಲಾ ಮೂಲೆಗಳಲ್ಲೂ ಕಾಣುವುದು ಸಾಧ್ಯವಿದೆ. ಅವರು ಅದೇ ರೀತಿಯ ಸೃಷ್ಟಿಗಳನ್ನು ಮಾಡಬಲ್ಲವರು[4]. ಇತರ ಅನೇಕ ಕೆಲಸಗಾರರೊಂದಿಗೆ ಅವರೂ ಬೆರೆತು ಹೋಗಿದ್ದಾರೆ. ಅವರಲ್ಲಿ ಕೆಲವರಿಗೆ ಎಂಜನಿಯರ್‌ಗಳಿಂದ ಮತ್ತು ಸರ್ಕಾರಿ ಕಂಟ್ರಾಕ್ಟರ್‌ಗಳಿಂದ ಅತೃಪ್ತಿಕರ ಕೆಲಸ ಮಾಡಲೆಂದು ಹಣ ಕೊಡಲಾಗುತ್ತಿದೆ.

---

4. ಕನ್ಯಾಕುಮಾರಿಯಲ್ಲಿ ಸಾಗರದಲ್ಲಿ ನಿರ್ಮಿಸಿರುವ 'ವಿವೇಕಾನಂದ ಸ್ಮಾರಕ'ದ ರೂವಾರಿ ಸ್ಥಪತಿ ಶ್ರೀ ಎಸ್. ಕೆ. ಆಚಾರ್ಯ (ತಿರುಪತಿ), ಮದರಾಸಿನಲ್ಲಿ ನಿರ್ಮಿಸಿರುವ 'ಅಷ್ಟಲಕ್ಷ್ಮಿ ದೇವಾಲಯ'ದ ನಿರ್ಮಾತೃ ಶ್ರೀ ಎಂ. ಗಣಪತಿ ಸ್ಥಪತಿ (ಮಹಾಬಲಿಪುರಂ), ಗುಜರಾತಿನ ಸೋಮನಾಥ ದೇವಾಲಯವನ್ನು ನವೀಕರಿಸಿ ಪ್ರಾಚೀನ ಶಿಲ್ಪಕ್ಕೆ ಸಮನಾದ ನೂತನ ಕೆತ್ತನೆಗಳಿಂದ ದೇವಾಲಯದ ಜೀರ್ಣೋದ್ಧಾರ ನಡೆಸಿದ ಪದ್ಮಶ್ರೀ ಪ್ರಭಾಶಂಕರ ಸೋಂಪುರೆ, ಶ್ರೀಶೈಲದ ಹಲವಾರು ದೇವಾಲಯಗಳ ಜೀರ್ಣೋದ್ಧಾರದಲ್ಲಿ ಪ್ರಾಚೀನ ಶಿಲ್ಪಗಳ ಸೊಬಗು ವೈಶಿಷ್ಟ್ಯತೆಯನ್ನು ಅದೇ ಜಾತಿಯ ಕಲ್ಲುಗಳಲ್ಲಿ ಬಿಡಿಸಿರುವ ಆಳ್ಳಗಡ್ಡದ ಶಿಲ್ಪಿಗಳು, ಜಕ್ಕಣಶೈಲಿಯ ಶಿಲ್ಪ ಪರಂಪರೆಯನ್ನು ಇಂದಿಗೂ ಉಳಿಸಿರುವ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರ ಕೃತಿಗಳು, ಅವರ ಶಿಷ್ಯರ ಕೃತಿಗಳು ಹೀಗೆಯೇ ಇನ್ನೂ ಅನೇಕ ಶಿಲ್ಪಿಗಳ ಶಿಲ್ಪಕಲಾ ಕೌಶಲ್ಯವನ್ನು ನಾವು ಇಂದೂ ಕಾಣಬಹುದು ಎಂಬುದನ್ನು ಇಲ್ಲಿ ನೆನಪು ಮಾಡಿಕೊಡುತ್ತೇವೆ.

—ಸಂಪಾದಕರು

ಮತ್ತೆ ಕೆಲವರು ಸಾರ್ವಜನಿಕರಿಗೆ ಉಪಯೋಗಕರ ಕೆಲಸಗಳನ್ನು ಮಾಡಿ ಕೊಟ್ಟು ತಮ್ಮ ಜೀವನದ ಅವಶ್ಯಕತೆಗಳನ್ನು ಪೂರೈಸಲು ಹಣಗಳಿಸುತ್ತಿದ್ದಾರೆ. ಪಾಶ್ಚಾತ್ಯರ ಪ್ರಭಾವಕ್ಕೆ ಸಿಕ್ಕಿ ಭಾರತೀಯರು ತಮಗೆ ಸೂಕ್ತವಲ್ಲದ ರೀತಿಯ ಮನೆಗಳನ್ನು, ಆಕರ್ಷಣೆ ಇಲ್ಲದ ಶಿಲ್ಪ-ಚಿತ್ರಗಳನ್ನು ತಮ್ಮವನ್ನಾಗಿಕೊಳ್ಳುತ್ತಾ ಈ ಶಿಲ್ಪಿಗಳನ್ನು ಕೆಲಸಗಾರರನ್ನಾಗಿ ಮಾಡಿದ್ದಾರೆ. ಆದರೂ ಕೆಲಸಗಾರ, ಕಲಾ ವಿದ ಮತ್ತು ವಿಜ್ಞಾನಿ ಈ ಮೂರೂ ಒಬ್ಬನೇ ಆಗಿದ್ದ ಕಾಲವು ಒಂದಿತ್ತು. ಆದ್ದ ರಿಂದಲೇ 'ದುಡುಮೆಗಾರನಾಗಿ ತನ್ನ ಕಾಲದ ಸ್ಪಷ್ಟ ಚಿತ್ರಣವನ್ನು ಆತ ಕೊಡ ಬಲ್ಲವನಾಗಿದ್ದ' ಎಂದು ವಾನ್ ಲೂನ್ ಬರೆದದ್ದು. ಇದು ಹಿಂದೂ ಶಿಲ್ಪಿಯ ಪಾಲಿಗೆ ಅಕ್ಷರಶಃ ಸತ್ಯ. ಈ ಶಿಲ್ಪಿಯು ಅಗಣಿತ ಕಾಲದಿಂದ ಭಾರತದ ಆತ್ಮವನ್ನು ಎಲ್ಲರ ಮುಂದೆ ಹರವುದರಲ್ಲಿ ಯಶಸ್ವಿಯಾಗಿರುವನು. ಹಿಂದೂ ಗಳೇ ಪ್ರಧಾನವಾಗಿದ್ದಾಗ ಸುಂದರ ಮೂರ್ತಿಗಳನ್ನು, ಅಭೂತಪೂರ್ವ ದೇವಾ ಲಯಗಳನ್ನು ಈ ಶಿಲ್ಪಿಗಳು ನೀಡಿದರು. ಬೌದ್ಧರ ಪ್ರಾಬಲ್ಯ ಬೆಳದಂತೆ ಸುಂದರ ಚಿತ್ರಗಳನ್ನು ಸ್ತೂಪಗಳನ್ನು ನಿರ್ಮಿಸಿದರು. ಮುಸ್ಲಿಮರ ಆಳ್ವಿ ಕೆಯ ಕಾಲದಲ್ಲೂ ಮಸೀದಿಯ ನಯವಾದ ಕುಸುರಿ ಕೆಲಸದಲ್ಲಿ, ಅದರ ಸಂವೇ ದನಾ ಶೀಲ ಸೌಂದರ್ಯ ಸೃಷ್ಟಿಯಲ್ಲಿ ಅನ್ಯರಿಗಿಂತಲೂ ಹಿಂದೂ ಶಿಲ್ಪಿಯೇ ಪ್ರಧಾನ ಕಾರಣನಾಗಿದ್ದಾನೆ. ಆದರೆ ಇಂಗ್ಲಿಷರ ಆಳ್ವಿಕೆಯಲ್ಲಿ ಈ ಶಿಲ್ಪಿಗಳಿಗೆ ಸೂಕ್ತ ಅವಕಾಶವೇ ಇಲ್ಲವಾಗಿತ್ತು.

ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಧೀಮಂತ ಲೇಖಕರು ಹಿಂದೂ, ಬೌದ್ಧ, ಜೈನ, ಮಹಮದೀಯ ವಾಸ್ತುಶಿಲ್ಪವೆಂದು ಅವನ್ನು ಪ್ರತ್ಯೇಕವಾಗಿ ಪರಿಗಣಿಸುತ್ತಾರೆ. ಈ ಶಿಲ್ಪಗಳಲ್ಲಿ ಆಯಾ ಕಾಲದ ಧರ್ಮಗಳ ವಿಶೇಷ ಚಿಹ್ನೆ ಗಳು ಆ ಶಿಲ್ಪಗಳಲ್ಲಿ ಸ್ಪಷ್ಟವಾಗಿ ಚಿತ್ರಣವಾಗಿದ್ದರೂ, ಅವೆಲ್ಲವೂ ಜನಾಂಗಗಳ, ಬುಡಕಟ್ಟುಗಳ, ಧರ್ಮಗಳ ಅಂತರ ಪರಿಗಣಿಸದ ಭಾರತೀಯ ಶಿಲ್ಪಿಯ ಸೃಷ್ಟಿಗಳೇ ಎಂಬುದನ್ನು ಮರೆಯಲಾಗದು. ಭಾರತದಲ್ಲಿ ಕಟ್ಟಲಾಗಿರುವ ಪ್ರಾಚೀನ ಕ್ರಿಶ್ಚಿಯನ್ ಚರ್ಚುಗಳು ಎಂದರೆ ಸಿರಿಯನ್ ಕ್ರಿಶ್ಚಿನ್ನರಿಗೆ ಸೇರಿ ದವು. ಅವನ್ನು ನಿರ್ಮಿಸಿದವನು ಭಾರತದ ಶಿಲ್ಪಿಯೇ. ಅಲಂಕರಣದಲ್ಲಿ ಕ್ರಿಶ್ಚಿನ್ ಧರ್ಮದ ವಿಶೇಷ ಚಿಹ್ನೆಗಳನ್ನು ಅದರಲ್ಲಿ ಸೇರ್ಪಡೆ ಮಾಡಿದ್ದಾನೆ. ಈ ರೀತಿಯದು ಆತನಿಗೆ ಹೊಸದಾದುದೇನೂ ಅಲ್ಲ. ವೈಷ್ಣವ ದೇವಾಲಯಗಳಲ್ಲಿ

ತತ್ಸಂಬಂಧ ಲಾಂಛನಗಳನ್ನು ಬಿಡಿಸುವಂತೆಯೇ ಶೈವದೇವಾಲಯಗಳಲ್ಲೂ ಅದಕ್ಕೆ ಅನುಗುಣವಾದ ಕೆತ್ತನೆಗಳನ್ನು ನೊಪಲಿಂದಲೂ ಮಾಡುತ್ತಿರಲಿಲ್ಲವೇ ? ಅದೇ ರೀತಿಯಲ್ಲಿ ಈ ಕಾರ್ಯವನ್ನೂ ನಿರ್ವಹಿಸಿದ್ದಾನೆ. ಅಲಂಕರಣಗಳು, ಚಿಹ್ನೆಗಳು ಬೇರ್ಪಡಿಸಿ, ವಾಸ್ತುವಿಜ್ಞಾನ, ಅಳತೆಗಳು, ಮಾನಗಳನ್ನು ಪರಿಗಣಿಸಿದಾಗ ಎಲ್ಲವೂ ಹಿಂದೂ ಶಿಲ್ಪಶಾಸ್ತ್ರದ ಅಳತೆಗಳನ್ನೇ ಹೋಲುತ್ತವೆ. ತಾಜ ಮಹಲ್, ಫತೇಪುರ್ ಸಿಕ್ರಿಗಳ ನಿರ್ಮಾಣದಲ್ಲಿ ಪ್ರಧಾನವಾಗಿರುವ ಚದರಗಳು, ಅಷ್ಟ ಭುಜಗಳು ಈ ಕಟ್ಟಡಗಳಿಂತಲೂ ಅತಿ ಪ್ರಾಚೀನವಾದ ದಕ್ಷಿಣ ಭಾರತದ ದೇವಾಲಯಗಳ ರಚನಾ ವಿನ್ಯಾಸದಲ್ಲೂ ಅಷ್ಟೇ ವಿಪುಲವಾಗಿ ಬಳಸಿರುವುದನ್ನು ನಾವು ಕಾಣುತ್ತೇನೆ.

ಚರ್ಚುಗಳ ವಿನ್ಯಾಸವನ್ನು ಹೋಲಿಸಿ, ದೇವಾಲಯಗಳ ವಿನ್ಯಾಸ ತೀರ ಕೆಟ್ಟದ್ದಾಗಿದೆ ಎಂದು ಹೇಳುವವರೂ ಇಲ್ಲದೆ ಇಲ್ಲ. ಈ ಮಾತಿಗೆ ಮೂಲ ಕಾರಣ, ಹೇಳುವವರಲ್ಲಿ ಆ ಕಾಲದ ಅವಶ್ಯಕತೆಯ ಪ್ರಜ್ಞೆ ಶೂನ್ಯವಾಗಿರುವುದೇ. ಹೊರಗಿನ ಶೀತಲ ವಾತಾವರಣ ಹಿಮ ಗಾಳಿಗಳ ತಾಡನದ ಫಲವಾಗಿ ಚರ್ಚಿನ ಎಲ್ಲಾ ವ್ಯವಹಾರಗಳೂ ನಾಲ್ಕು ಗೋಡೆಗಳ ನಡುವೆಯೇ ನಡೆಯುವುದು ಆವಶ್ಯಕವಾಗಿತ್ತು. ಅದ್ದರಿಂದ ಸಾಮೂಹಿಕ ಆರಾಧನೆಗೆ ಅನುವಾಗುವಂತೆ ದೊಡ್ಡ ಸಭಾಂಗಣಗಳನ್ನು ನಿರ್ಮಿಸುವುದು ಆವಶ್ಯಕವಾಗಿತ್ತು. ಈ ರೀತಿಯ ಸಂಗತಿ ಹಿಂದೂಗಳಿಗೆ ಹೊಸದಾಗಿತ್ತು. ಚರ್ಚಿನ ಎತ್ತರದ ಗೋಡೆಗಳಿಗೆ ನೆರವು ಬೇಕೆಂದು ಪಕ್ಕದ ಗೋಡೆಗಳು ನಿರ್ಮಾಣಗೊಂಡವು. ಇವರಿಂದ ಹೆಚ್ಚು ಸ್ಥಳ ದೊರಕಿತು. ವಿದ್ಯುತ್ ದೀಪಗಳಿಲ್ಲದ ಆ ಕಾಲದಲ್ಲಿ ಬೆಳಕು ದೊರಕಿಸಿಕೊಳ್ಳುವ ಉದ್ದೇಶದಿಂದ ಎತ್ತರವಾದ ಕಿಟಕಿಗಳು, ಅವಕ್ಕೆ ಗಾಜಿನ ಕನ್ನಡಿಗಳುಳ್ಳ ಬಾಗಿಲುಗಳು ನಿರ್ಮಿಸಿದ. ಖಾಲಿಯಾಗಿ ತೋರುತ್ತಿದ್ದ ಸ್ಥಳ ತುಂಬಲು ಬಣ್ಣಗಳನ್ನು ಪ್ರಾರಂಭಿಸಿದ. ಈ ಚರ್ಚುಗಳ ಸೌಂದರ್ಯ ಅಡಗಿರುವುದೇ ಈ ಗಾಜಿನ ಚಿತ್ರಗಳು ಮತ್ತು ಎತ್ತರದಲ್ಲಿ. ಹಿಂದೂ ದೇವಾಲಯಗಳು ಹೀಗಲ್ಲ. ಅರ್ಚಕನಾದವನೂ ಕೂಡ ದೇವಾಲಯದಲ್ಲಿಯೇ ಸದಾ ಇರುವುದಿಲ್ಲ. ಭಕ್ತರು ತಮ್ಮ ವ್ಯವಹಾರಗಳನ್ನು ಸಾಗಿಸುವುದು ದೇವಾಲಯದ ಹೊರಗೆ. ಆದ್ದರಿಂದಲೇ ದೇವಾಲಯದ ಹೊರಭಾಗ ಅಲಂಕರಿಸುತ್ತಿದ್ದದ್ದು. ಗರ್ಭಗುಡಿ ಅದರ ಮುಂದಿನ ಮುಖ ಮಂಟಪ ಸುಮಾರು ಎತ್ತರದ್ದಾಗಿರುತ್ತಿ

ದ್ದವು. ನಂತರದ ಗೋಪುರ ಹಲವಾರು ಜ್ಯಾಮಿತಿಯ ಆಕಾರಗಳನ್ನು ಹೊಂದಿದ್ದು ಅಲಂಕರಿಸಲ್ಪಡುತ್ತಿದ್ದವು. ಇವುಗಳೊಂದಿಗೆ ಹಲವಾರು ಚಿತ್ರಗಳು ಕೆತ್ತಲ್ಪಡುತ್ತಿದ್ದವು. ಈ ರೀತಿಯ ಕೆತ್ತನೆಗಳಿಂದ ಪರಂಪರಾನುಗತ ಸಂಸ್ಕೃತಿ ಮತ್ತು ಇತಿಹಾಸವನ್ನು ಸಾಮಾನ್ಯರಿಗೆ ಶಿಲ್ಪಿಗಳು ಬೋಧಿಸುತ್ತಿದ್ದರು. ಜನರು ಅನೇಕ ಕಥೆಗಳನ್ನು ಕೇಳುತ್ತಿದ್ದರು. ಶಿಲ್ಪಿಗಳು ಅವನ್ನು ತಮ್ಮ ಶಿಲ್ಪ ಮಾಧ್ಯಮದಿಂದ ವ್ಯಕ್ತಗೊಳಿಸಿದರು. ದೇವಾಲಯಗಳ ಗೋಡೆಗಳ ಮೇಲಿನ ಚಿತ್ರಗಳಲ್ಲಿ ಇತಿಹಾಸ ಮತ್ತು ಪುರಾಣಗಳಲ್ಲಿಯ ಅನೇಕ ಕಥೆಗಳು ದೊರೆಯುತ್ತವೆ.

ಒಳಭಾಗದ ಅಲಂಕರಣವನ್ನು ಹಿಂದೂ ಶಿಲ್ಪಿ ವಿಸ್ಮರಿಸಿಲ್ಲ. ಅವಶ್ಯಕತೆ ಇರುವ ಎಡೆಗಳಲ್ಲೆಲ್ಲಾ ಅಲಂಕರಣ ನಡೆಸಿದ್ದಾನೆ. ಗುಹಾಂತರ್ದೇವಾಲಯಗಳನ್ನು ಆತನು ನಿರ್ಮಿಸಿದಾಗ ತನ್ನ ಕಲೆಯ ಔನ್ನತ್ಯವನ್ನು ಅಭಿವ್ಯಕ್ತಗೊಳಿಸಿದ್ದಾನೆ. ತನ್ನ ವೃತ್ತಿಯ ಅಧಿನೇತೃವಾದ ಆತನ ಕಲಾಕೋವಿದತ್ವವನ್ನು ನಾವು ಕಾಣಬಹುದು. ತನ್ನ ಚಿತ್ರಪಟಕಥಾನಿರೂಪಣೆಯಲ್ಲಿ ಕ್ಷೀರ ಸಾಗರದ ಮಧ್ಯೆ ಶೇಷನಮೇಲೆ ಲಕ್ಷ್ಮಿಯೊಂದಿಗೆ ಮಂಡಿಸಿರುವಾಗ ವಿಷ್ಣುವಿನಲ್ಲಿ ಮಾಧುರ್ಯ, ಪ್ರೇಮಗಳು ಉಕ್ಕಿ ಹರಿಯುತ್ತಿರುವಂತೆಯೇ ಕಂಡು ಬಂದರೆ, ಅತ್ಯಂತ ಬಲಶಾಲಿಯೂ, ಅಹಂಕಾರಿಯೂ ಆಗಿದ್ದ ಹಿರಣ್ಯಕಶಪುವನ್ನು ಕೊಲ್ಲುವಾಗ ಅದೇ ವಿಷ್ಣುವು ನರ ದೇಹವನ್ನು ಸಿಂಹದ ತಲೆಯನ್ನು ಪಡೆದಿರುತ್ತಾನೆ. ಏಕೆಂದರೆ ಸಿಂಹಶಕ್ತಿ, ನರನ ಜಾಣತನವನ್ನು ಕೂಡಿಸಿಯೇ ಆ ಅಸುರನನ್ನು ಕೊಲ್ಲಬೇಕಾಯಿತು. ಹೀಗೆ ದೇವ, ದಾನವ, ಯಕ್ಷ, ಕಿನ್ನರ ಮುಂತಾದ ಎಲ್ಲಾ ನಿರೂಪಣೆಗಳಲ್ಲೂ ಶಿಲ್ಪಿಯು ಭಾವ, ಪರಿಸರ, ಗುಣಗಳನ್ನು ಗಮನಿಸಿ, ಸೂಕ್ಷ್ಮಾತಿಸೂಕ್ಷ್ಮತೆಯನ್ನು ಪರಿಶೀಲಿಸಿಯೇ ಚಿತ್ರಿಸಿದ್ದಾನೆ. ಶಿಲ್ಪಿಯು ಜನರನ್ನು, ಕಾಲವನ್ನು ಗಮನಿಸಿ-ಗುರುತಿಸಿಯೇ ತನ್ನ ಕಾರ್ಯ ನಡೆಸಿದ್ದಾನೆ. ಆತನಿಗೆ ಮತ್ತೆ ಅವಕಾಶ ಕಲ್ಪಿಸಿಕೊಟ್ಟರೆ ಮತ್ತಷ್ಟು ಯಶಸ್ವಿಯಾಗಿ ತನ್ನ ಚಾತುರ್ಯ, ಕೌಶಲ್ಯಗಳನ್ನು ಮೆರೆಸುತ್ತಾನೆ ಎಂಬುದರಲ್ಲಿ ಸಂಶಯವೇ ಇಲ್ಲ.

ಇಂಗ್ಲೀಷಿನಿಂದ ಅನುವಾದ:

ನಾಗೇಶ್ ಎಸ್. ಶಿಲ್ಪಿ

★

ವೈದಿಕ ವಿದ್ಯಾಭೂಷಣ
* ವೇ. ಗಂಗಾಧರಮೂರ್ತಿ

೫

ಶಿಲ್ಪವೂ, ವೇದವೂ

‘ಸಕಲ ಪ್ರಾಣಿಗಳಲ್ಲಿಯೂ ಮನುಷ್ಯನು ಜ್ಞಾನಯುಕ್ತನಾದುದರಿಂದ ತನ್ನ ಜ್ಞಾನದ ಪ್ರಭಾವದಿಂದ ತನ್ನ ಉಪಯೋಗಕ್ಕೆ ಅನುಗುಣವಾದ ವಸ್ತುಗಳನ್ನು ನಿರ್ಮಾಣಮಾಡಲು ಉಪಕ್ರಮಿಸಿದನು. ಆ ವಸ್ತುನಿರ್ಮಾಣವು ಶಿಲ್ಪವೆನ್ನಿಸಿ ಕೊಳ್ಳುತ್ತದೆ. ಆದುದರಿಂದ ಶಿಲ್ಪವು ಮಾನವಜಾತಿಯು ಈ ಜಗತ್ತಿನಲ್ಲಿ ಉತ್ಪನ್ನವಾದ ಕಾಲದಲ್ಲಿಯೇ ಜನ್ಮತಾಳಿದೆ’ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಸತ್ಯಕ್ಕೆ ಇದು ಸಮೀಪವಾದರೂ ಸತ್ಯಸಂಗತಿ ಇದಲ್ಲ. ಜಗತ್ತಿನ ಮಾನವ ಜನ್ಮೋತ್ಪತ್ತಿಗಿಂತ ಹಿಂದಿನ ಪ್ರಾಣ್ಯುತ್ಪತ್ತಿ, ಅದಕ್ಕೂ ಹಿಂದಿನ ಪಂಚಭೂತೋತ್ಪತ್ತಿ, ಅದಕ್ಕೂ ಬಹಳ ಹಿಂದೆ ಎಂದರೆ ಜಗತ್ಸೃಷ್ಟಿಗೆ ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಜನ್ಮತಾಳಿದೆಯೆಂದು ವೇದವು ಘಂಟಾ ಘೋಷವಾಗಿ ಸಾರಿದೆ. ಜಗತ್ಸೃಷ್ಟಿಯೆಂದರೆ ಶಿಲ್ಪ. ಮಾನವನು ಜ್ಞಾನಯುಕ್ತನಾದುದರಿಂದ ವಸ್ತು ನಿರ್ಮಾಣವನ್ನು ಮಾಡಲು ಹೇಗೆ ಉಪಕ್ರಮಿಸುವನೋ ಹಾಗೇ ಅವನು ಜ್ಞಾನಯುಕ್ತನಾಗಿ ಈ ಜಗತ್ತಿನಲ್ಲಿ ಜನಿಸಿರುವುದಕ್ಕೂ ಶಿಲ್ಪವೇ ಮುಖ್ಯ ಕಾರಣ. ಜ್ಞಾನವೆಂದರೆ ಶಿಲ್ಪದ ಒಂದು ರೂಪ. ಜಗತ್ಸೃಷ್ಟಿಯ ಶಿಲ್ಪ ಕ್ರಮವಾಗಿ ಅಭಿವೃದ್ಧಿಗೊಂಡು ಬಂದುದರಿಂದಲೇ ಸೃಷ್ಟಿಯಲ್ಲಿ ಮಹಾಭೂತಗಳೂ, ಸಸ್ಯಗಳೂ, ಪ್ರಾಣಿಗಳೂ, ಮನುಷ್ಯನೂ ಕ್ರಮವಾಗಿ ಜನ್ಮತಾಳಿದರು. ಆ ಶಿಲ್ಪಕ್ರಮದಂತೆಯೇ, ಮನುಷ್ಯನು ಜ್ಞಾನಿಯಾಗಿ ವಿಶ್ವರಹಸ್ಯವನ್ನು ಅರ್ಥಾತ್ ಆ ಶಿಲ್ಪವನ್ನು ಭೇದಿಸಿ ತಿಳಿದುಕೊಂಡು ವಸ್ತು ನಿರ್ಮಾಣಮಾಡಿ, ಸಮಸ್ತ ಜಗತ್ತನ್ನೂ ತನ್ನಧೀನಪಡಿಸಿಕೊಂಡು,

ತನ್ನನ್ನು ತಾನು ತಿಳಿದು, ತನ್ನನ್ನೇ ಗೆದ್ದು, ಸರ್ವೋತ್ತಮನಾಗಿದ್ದಾನೆ. ಇಂದು ಮಾನವನು ಸರ್ವೋತ್ತಮನೆನಿಸಲು ಆತನಿಗೆ ಆ ವಿಶ್ವಶಿಲ್ಪವು ಸಾಕ್ಷಾತ್ಕಾರವಾಗಲು ಎಂತಹ ಸಾಧನೆಯನ್ನು ಆತನು ಕೈಗೊಂಡನು, ಎಂತಹ ತಪಸ್ಸನ್ನಾಚರಿಸಿದನು ಎಂಬುದು ಜ್ಞಾನದ ಇತಿಹಾಸದಲ್ಲಿಯೇ ಒಂದು ರೋಮಾಂಚನಕಾರಿಯಾದ ಪ್ರಕರಣವಾಗಿದೆ.

ಆ ವಿಶ್ವಶಿಲ್ಪವನ್ನು ಅರಿಯಲು ಪ್ರಾಚೀನ ಕಾಲದ ಮಹಾಋಷಿವರ್ಯರು ಮೊದಲು ಸಕಲ ಜಗತ್ತಿನ ಮೂಲಕಾರಣವನ್ನೂ, ಆ ಕಾರಣವಸ್ತುವನ್ನೂ ತಿಳಿಯಲು ಪ್ರಯತ್ನಿಸಿ **ಕಿಗ್ಂಸ್ವಿದಾಸೀತ್ ಅಧಿಷ್ಠಾನಂ ಆರಂಭಣಂ ಕತಮತ್ಸ್ವಿತ್ ಕಿಮಾಸೀತ್ (ಯಜುಃ ೪:೬:೨)**. ಆದಿಯಲ್ಲಿ ಜಗತ್ತು ಏನಾಗಿತ್ತು? ಹೇಗಿತ್ತು? ಕಾರಣಪುರುಷನಾರು? ಎಂದು ಪ್ರಶ್ನಿಸಿ, ತಮ್ಮ ಸಂಶೋಧನಾ ತಪೋನುಷ್ಠಾನ ಬಲದಿಂದ ಪ್ರಪಂಚವೆಲ್ಲವನ್ನೂ ವಿಭಜಿಸಿ, ಪಂಚಮಹಾಭೂತಗಳನ್ನು ಶೋಧಿಸಿ, ಪೃಥಕ್ಕರಿಸಿ, ಕೊನೆಗೆ ಅಂತರ್ಮುಖರಾಗಿ, ಪ್ರಾಣ ಇಂದ್ರಿಯ ಮನಸ್ಸು ಬುದ್ಧಿ ಇವೆಲ್ಲವನ್ನೂ **ನೇತಿ ನೇತಿ** (ಇದಲ್ಲ ಇದಲ್ಲ) ಎಂದು ಅಲ್ಲಗಳೆದು, **ಏತಸ್ಮಾತ್ಪರಮಸ್ತಿ (ಬೃ. ಉ. ೩:೬)** ಅದಕ್ಕೂ ಆಚೆಗೆ ಹೃನ್ಮಧ್ಯದಲ್ಲಿ **ಮನೀಷಿಣೋ ಮನಸಾ ಪೃಚ್ಛತ ಇದು ತದ್ಯದಧ್ಯತಿಷ್ಠದ್ಭುವನಾನಿ ಧಾರಯನ್ (ಯಜುಃ ೪:೬:೨**, ಸಕಲ ಜಗತ್ತನ್ನೂ ಧಾರಣ ಮಾಡಿರುವ ತ್ರಿಗುಣಾತೀತವಾದ ಅತೀಂದ್ರಿಯವಾದ ಪರತತ್ತ್ವವನ್ನು ಸ್ವಾನುಭವಪೂರ್ವಕ ಅರಿತು, ಅದರಲ್ಲಿ ಬೆರೆತು, ಆನಂದ ಪೂರ್ಣರಾಗಿ, ಆ ತತ್ತ್ವಜ್ಞಾನಸಿದ್ಧಿಯ ಪರಮ ದೃಷ್ಟಿಯಿಂದ ಜಗತ್ತಿನಲ್ಲೆಲ್ಲೆಲ್ಲಿಯೂ ಆ ಪರತತ್ತ್ವವೇ ತುಂಬಿರುವುದನ್ನು ನೋಡಿ **ಅಧಸ್ವಿದಾಸೀದುಪರಿಸ್ವಿದಾಸೀತ್, ಸ್ವಧಾಅವಸ್ತಾತ್ ಪ್ರಯತಿಃ ಪರಸ್ತಾತ್ (ಋಕ್ ೧೪:೨೧** ಕೆಳಗೆ ಇದೆ, ಮೇಲೆ ಇದೆ, ಅಲ್ಲಿ ಇದೆ, ಇಲ್ಲಿ ಇದೆ, ಎಲ್ಲೆಲ್ಲಿಯೂ ಇದೆ, ಇಷ್ಟೇ ಅಲ್ಲ **ಅತ್ಯತಿಷ್ಠದ್ದಶಾಂಗುಲಂ (ಋಕ್ ಪು.ಸೂ)** ಎಲ್ಲವನ್ನೂ ಆಕ್ರಮಿಸಿ ತಾನೇ ತಾನಾಗಿ ಅದಕ್ಕೂ ಆಚೆಗೆ ಹರಡಿದೆ. **ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಹಸ್ತ ಉತ ವಿಶ್ವತಸ್ಪಾತ್ (ಯಜುಃ ೪:೬:೨)** ಅಖಿಲ ವಿಶ್ವವೇ ಆದರ ಕಣ್ಣು ಮುಖ ಹಸ್ತ ಪಾದಗಳಾಗಿವೆ

ಎಂಬುದಾಗಿ ಅನುಪಮ ರೀತಿಯಲ್ಲಿ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡು ತಮ ಈ ಅನುಭವವನ್ನು ಬೃಹದ್ಜ್ಞಾನ ಅರ್ಥಾತ್ ಬ್ರಹ್ಮಜ್ಞಾನ ಎಂದು ನಿರೂಪಿಸಿರುತ್ತಾರೆ.

ಈ ರೀತಿ ತ್ರಿಗುಣಾತೀತವಾದ ಅತೀಂದ್ರಿಯವಾದ ಆ ಪರತತ್ತ್ವದ ಸಾಕ್ಷಾತ್ಕಾರಹೊಂದಿದ ಋಷಿವರ್ಯರು ಆ ನಿರ್ಗುಣ ನಿರಾಮಯ ತತ್ತ್ವವು **ಯದೀ ಭೂಮಿಂಜನರ್ಯವಿಶ್ವಕರ್ಮಾವಿದ್ಯಾಮೌರ್ಣೋನ್ಮಹಿನಾ ವಿಶ್ವಚಕ್ಷಾಃ॥ (ಯಜುಃ ೪:೬:೨)** ಈ ಸಮಸ್ತ ಜಗತ್ತಿನ ಜನಕನೂ ನಿರ್ಮಾತೃವೂ ಕಾರಣ ರೂಪನೂ ಸಮಸ್ತ ಕಾರ್ಯಗಳಿಗೂ ಅಂತರ್ಯಾಮಿಯಾಗಿದ್ದು ಚೈತನ್ಯ ಕೊಡುವವನೂ ಸರ್ವಾರ್ಥತಃ ವಿಶ್ವಕರ್ಮ ಶಬ್ದವಾಚ್ಯನೇ ಸರಿಯೆಂದು ಸಿದ್ಧಾಂತೀಕರಿಸಿ, **ಏಷದೇವೋ ವಿಶ್ವಕರ್ಮಾ ಮಹಾತ್ಮಾ ಸದಾ ಜನಾನಾಗ್ಂ ಹೃದಯೇ ಸನ್ನಿವಿಷ್ಟಃ (ಶ್ವೇತಾ. ಉಪ. ೪:೧೭)** ಆ ವಿಶ್ವಕರ್ಮನು ಸಕಲ ಜನರಲ್ಲಿಯೂ (ಪ್ರಾಣಿ ವಸ್ತುಗಳಲ್ಲಿಯೂ, ಹೃದಯ ದೇಶದಲ್ಲಿ ಸದಾಕಾಲ ವಾಸಿಸುತ್ತಿರುತ್ತಾನೆ, **ಹೃದಾಮನೀಷಾ ಮನಸಾಭಿಕ್ಲೃಪ್ತೋ ಯಏನಂ ವಿದುರಮೃತಾಸ್ತೇ ಭವಂತಿ (ಶ್ವೇತಾ. ಉಪ. ೪:೧೭)** ಯಾರು ಆ ವಿಶ್ವಕರ್ಮಸರ್ವೇಶ್ವರನನ್ನು ತನ್ನಲ್ಲಿಯೇ ತಿಳಿಯುತ್ತಾರೋ ಅವರು ಅಂತ್ಯವಿಲ್ಲದ ಪೂರ್ಣತಮವಾದ ಅಮೃತತ್ವವನ್ನು ಹೊಂದುತ್ತಾರೆ ಎಂದು ತಮ್ಮ ಆನಂದಾನುಭವವನ್ನು ಹಾಡಿ, ಆದಿಯಲ್ಲಿ ವಿಶ್ವಕರ್ಮನು ಈ ಜಗತ್ತನ್ನು ಸೃಷ್ಟಿಸಿ ಅದರಲ್ಲಿ ಹೇಗೆ ಅಂತರ್ಭೂತನಾದನು ಎಂಬುವನ್ನು **ಯ ಇಮಾ ವಿಶ್ವಾ ಭುವನಾನಿ ಜುಹ್ವದೃಷಿರ್ಹೋತಾ ನಿಷಸಾದಾ ಪಿತಾನಃ। ಸಆಶಿಷಾ ದ್ರವಿಣಮಿಚ್ಛಮಾನಃ ಪರಮಚ್ಛದೋ ವರ ಆ ವಿವೇಶ (ಯಜುಃ ೪:೬:೨)** ವಿಶ್ವಕರ್ಮನು ಸೃಷ್ಟಿಗೆ ಪೂರ್ವದಲ್ಲಿ ಎಂದರೆ ಪ್ರಳಯ ಕಾಲದಲ್ಲಿ ಏನೊಂದೂ ಇಲ್ಲದಿದ್ದಾಗ ಎಲ್ಲ ಲೋಕಗಳನ್ನೂ — ಸಮಸ್ತ ಮಹಾಭೂತತತ್ತ್ವಗಳನ್ನೂ ತನ್ನಲ್ಲಿ ಅಡಗಿಸಿಕೊಂಡವನಾಗಿದ್ದನು. ಹೀಗಿದ್ದರೂ ಆತನಿಗೆ ಸರ್ವಸೃಷ್ಟಿಕರ್ತೃತ್ವ ಸರ್ವಸಂಹಾರಕರ್ತೃತ್ವ ಸರ್ವಪೋಷಣಕರ್ತೃತ್ವಗಳೂ ಇದ್ದು, ಎಲ್ಲಾಕಾಲದಲ್ಲಿಯೂ ಎಲ್ಲವನ್ನೂ ತಿಳಿಯುವ ಅತೀಂದ್ರಿಯ ದ್ರಷ್ಟನೂ ಆತನೇ ಆಗಿರುತ್ತಾನೆ. ತನ್ನ ಸಂಕಲ್ಪದಂತೆ ಇಚ್ಛಾಮಾತ್ರದಿಂದ

ಈ ಜಗತ್ತನ್ನು ಕ್ರಮವಾಗಿ ಸೃಷ್ಟಿಸಿ, ತನ್ನ ಸ್ವರೂಪ ಚೈತನ್ಯದಿಂದಲೇ ಸರ್ವ ಶರೀರಗಳ ಹೃನ್ಮಧ್ಯಸ್ಥಾನದಲ್ಲಿ ವಾಸಿಸುತ್ತಾ ಎಲ್ಲವನ್ನೂ ಬೆಳಗುತ್ತಿದ್ದಾನೆ ಎಂಬುದಾಗಿ ನಿರೂಪಣ ಮಾಡಿ, ಆ ನಿರ್ಗುಣ ಪರತತ್ತ್ವದಿಂದ ಸಗುಣ ಪ್ರಪಂಚವು, ಏಕಪದಾರ್ಥದಿಂದ ಬಹುಪದಾರ್ಥಗಳು ಉಂಟಾದ ಕ್ರಮವನ್ನು **ವಿಶ್ವಕರ್ಮಾ ಹ್ಯಜನಿಷ್ಟದೇವ ಆದಿದ್ಗಂಧರ್ವೋ ಅಭವದ್ದ್ವಿತೀಯಃ। ತೃತೀಯಃ ಪಿತಾ ಜನಿತೌಷಧೀನಾಂ ಅಪಾಂ ಗರ್ಭಂ ವ್ಯದಧಾತ್ಪುರುತ್ರಾ॥ (ಯಜುಃ ೪:೬:೨)** ಬ್ರಹ್ಮಾಂಡ ಮಧ್ಯದಲ್ಲಿ ದೇವ ತಿರ್ಯಗಾದಿ ವಿವಿಧ ಭೇದವನ್ನುಂಟುಮಾಡಿರುವ ವಿಶ್ವಕರ್ಮನು ಮೊದಲು ತಾನೇ ಬ್ರಹ್ಮನಾಗಿಯೂ, ಅನಂತರ ಗಂಧರ್ವನಾಗಿಯೂ, ತರುವಾಯ ಸೋಮನಾಗಿಯೂ ಬಹುವಿಧವಾದ ರೂಪಿನಿಂದ ತಾನೇ ಕಾಣಿಸಿ ಕೊಂಡವನಾದವನು. ಶುದ್ಧ ಸತ್ವಗುಣಯುತವಾದ ಪರಮಾತ್ಮಸಾಕ್ಷಾತ್ಕಾರ ವೆಂಬ ತನ್ನ ದಿವ್ಯದರ್ಶನವನ್ನು ಪ್ರತಿಯೊಬ್ಬನಲ್ಲಿಯೂ ಉಂಟುಮಾಡುವ ರೀತಿ ಯಾಗಿ ತಾನೇ ಸರ್ವರೂಪನಾಗಿರುತ್ತಾನೆ ಎಂಬುದಾಗಿ ಆ ದೈವಿಕ ಕ್ರಮದಿಂದ ಜಗತ್ತು ಶುದ್ಧ ಸತ್ವಗುಣಯುತವಾಗುವಂತೆಯೂ, ಪರಮಾತ್ಮಸಾಕ್ಷಾತ್ಕಾರ ದಿವ್ಯದರ್ಶನವು ಪ್ರತಿಯೊಬ್ಬರಲ್ಲಿಯೂ ಉಂಟಾಗುವಂತೆಯೂ ರೂಪಿಸಲ್ಪಟ್ಟಿ ರುವ ಈ ಜಗತ್ಸೃಷ್ಟಿ ಜ್ಞಾನವೇ ಶಿಲ್ಪಜ್ಞಾನವೆಂಬುದಾಗಿಯೂ ನಿರೂಪಿಸಿರು ತ್ತಾರೆ.

ಇಂತಹ ಮಹೋನ್ನತ ಶಿಲ್ಪವನ್ನು ಮೊಟ್ಟಮೊದಲು ತಮ್ಮ ತಪೋನು ಷ್ಠಾನದಿಂದ ತಿಳಿದು ಜಗತ್ತಿಗೆ ಅದರ ಆದ್ಯ ಪ್ರವರ್ತಕರಾದವರು ಭಗವಾನ್ ಭೌವನ ಮಹಾಋುಷಿಗಳು. **ಏತೇನ ಹವಾ ಐಂದ್ರೇಣ ಮಹಾಭಿಷೇಕೇಣ ಕಶ್ಯಪೋ ವಿಶ್ವಕರ್ಮಾಣಂ ಭೌವನ ಮಭಿಷಿಷೇಚ। ತಸ್ಮಾದು ವಿಶ್ವ ಕರ್ಮಾಭೌವನಸ್ಸಮಗ್ರಂ ಸರ್ವತಃ ಪೃಥಿವೀಂ ಜಯನ್ ಪರಿಯಾಶ್ವೈ ರುಜಮೇಧ್ಯೈರೀಜೇ॥ (ಐತ. ಬ್ರಾ. ೮:೨೧:೪)** ಈ ಪರಮ ಜ್ಞಾನ ವನ್ನು ಲೋಕಕ್ಕೆ ಉಪದೇಶಿಸಿದ ಮಹಾತ್ಮರಾದ ಭೌವನ ಋುಷಿಗಳನ್ನು ಸರ್ವ ಋುಷಿಗಳೂ, ಜಗತ್ತೂ ವಿಶ್ವಕರ್ಮನೇ ಪ್ರತ್ಯಕ್ಷ ರೂಪದಿಂದ ಬಂದಿದ್ದಾ ರೆಂದು ತಿಳಿದು ಭಕ್ತಿಯಿಂದ ನಮಸ್ಕರಿಸಿ, ಅವರಿಗೆ ಮಹಾಭಿಷೇಕವನು ಮಾಡಿ, ಋುಷಿಮಹಾಸಂಘಕ್ಕೆ ಅಧ್ಯಕ್ಷರನ್ನಾಗಿ ಮಾಡಿಕೊಂಡು ಗೌರವಿಸಿದರು.

ಅವರಿಂದ ಭಗವಾನ್ ಕಶ್ಯಪರು ಆ ಶಿಲ್ಪವನ್ನು ಪರಿಗ್ರಹಿಸಿ ಅದನ್ನು ರಚಿಸಿದರು. ಅವರ ಆ ಪ್ರಪ್ರಥಮ ಶಿಲ್ಪವು **ಯತ್ತೇ ಶಿಲ್ಪಂ ಕಶ್ಯಪರೋಚನಾವತ್ (ಯಜುಃ. ಆರ. ೧:೭:೩)** 'ಎಲೈ ಕಶ್ಯಪರೇ! ತಮ್ಮಿಂದ ಸುಂದರವೂ ಬಲಿಷ್ಠವೂ ವಿಸ್ತೃತವೂ ತೇಜೋಮಯವೂ ಆದ ಈ ಶಿಲ್ಪವು ಜಗತ್ಸೃಷ್ಟಿಕ್ರಮ ದಂತೆಯೇ ನಿರ್ಮಿಸಲ್ಪಟ್ಟಿದೆ' ಎಂದು ಗೌರವಿಸಲ್ಪಟ್ಟಿತು. **ತೇ ಅಸ್ಮೈಸರ್ವೇ ಕಶ್ಯಪಾಜ್ಜ್ಯೋತಿರ್ಲಭಂತೇ (ಯಜುಃ ಆರ. ೧:೭:೩)** ಮಹಾಜ್ಞಾನಿ ಗಳಾದ ಕಶ್ಯಪರಿಂದ ಜ್ಞಾನಜ್ಯೋತಿ ರೂಪವಾದ ಶಿಲ್ಪವನ್ನು ಎಲ್ಲರೂ ಅರಿತು ಹೊಂದಿದವರಾದರು. ಈ ಕಾರಣದಿಂದಲೇ ಕಶ್ಯಪರಿಂದಲೇ ಈ ಸಮಸ್ತ ಪ್ರಪಂಚವೂ ನಿರ್ಮಿಸಲ್ಪಟ್ಟಿತೆಂಬುದಾಗಿಯೂ, ಕಶ್ಯಪರಿಗೆ ೧೩ ಜನ ಪತ್ನಿಯರಿದ್ದು ಅವರುಗಳ ಗರ್ಭದಿಂದ ದೈತ್ಯದಾನವ ಮನುಷ್ಯೋರಗ ಪಕ್ಷ್ಯಾದಿ ಸಮಸ್ತ ಪ್ರಾಣಿವರ್ಗಗಳೂ ಜನಿಸಿದುವೆಂಬುದಾಗಿಯೂ ಪುರಾಣ ವಾಕ್ಯಗಳು ಕಾವ್ಯರೀತಿಯಾಗಿ ಸಾರುತ್ತಿವೆ. ಕಶ್ಯಪಾದಿ ಸರ್ವ ಮಹರ್ಷಿಗಳೂ ಶಿಲ್ಪಜ್ಞಾನಿಗಳಾಗಿದ್ದು ಶಿಲ್ಪಿಗಳೆನಿಸಿರುತ್ತಾರೆ. ಅವರೆಲ್ಲರೂ ಈ ಶಿಲ್ಪಜ್ಞಾನ ವನ್ನು ವೇದದ ಮೂಲಕ ಲೋಕಕ್ಕೆ ಅನುಗ್ರಹಿಸಿರುತ್ತಾರೆ. ವೇದವೆಂದರೆ ಶಿಲ್ಪವೇ. ಏಕೆಂದರೆ ಶಿಲ್ಪದ ವ್ಯಕ್ತರೂಪವೇ ಜ್ಞಾನವಾಗಿದ್ದು ಆ ಜ್ಞಾನವೇ ವೇದವಾಗಿದೆ. ಜ್ಞಾನವು ಮನಸ್ಸಿನಲ್ಲಿ-ಬುದ್ಧಿಯಲ್ಲಿ ಬಿಂಬಿಸಬೇಕಾದರೆ ಅದಕ್ಕೆ ಶಿಲ್ಪವೇ ಮೂಲಕಾರಣವು. ವೇದವು ತಾನೇ ಶಿಲ್ಪವನ್ನು ಬಹುವಾಗಿ ಪ್ರಶಂಸಿಸುತ್ತದೆ. **ಶಿಲ್ಪಾನಿ ಶಂಸಂತಿ ದೇವ ಶಿಲ್ಪಾನ್ಯೇತೇಷಾಂ ವೈ ಶಿಲ್ಪಾನಾ ಮನುಕೃತೀಹ ಶಿಲ್ಪ ಮಧಿಗಮ್ಯತೇ ಹಸ್ತೀ ಕಂಸೋ ವಾಸೋ ಹಿರಣ್ಯ ಮಶ್ವತರೀ ರಥ ಶ್ಶಿಲ್ಪಂ ಹಾಸ್ಮಿನ್ನಧಿಗಮ್ಯತೇ ಯ ಏವಂ ವೇದ ಯದೇವ ಶಿಲ್ಪಾನಿ ಆತ್ಮ ಸಂಸ್ಕೃತಿ ರ್ವಾವ ಶಿಲ್ಪಾನಿ ಛಂದೋಮಯಂ ವಾ ಏತೈ ರ್ಯಜಮಾನ ಆತ್ಮಾನಂ ಸಂಸ್ಕುರುತೇ (ಐತ. ಬ್ರಾ. ೬:೨೦:೫)** ಶಿಲ್ಪವು ಸಕಲ ಜಗತ್ತಿನಲ್ಲಿಯೂ ಏಕಮಾತ್ರ ಪ್ರಶಂಸೆಗೆ ಕಾರಣವಾಗಿರುತ್ತದೆ. ಏಕೆಂದರೆ ಜಗತ್ಸೃಷ್ಟಿ ಕ್ರಮರೂಪವಾದ ದೈವ ಶಿಲ್ಪವೇ ಇತರ ಎಲ್ಲಾ ಮಾನುಷ ಶಿಲ್ಪಗಳಿಗೂ ಕಾರಣರೂಪವಾಗಿರುವುದ ರಿಂದ ಮನುಷ್ಯಶಿಲ್ಪವೂ ದೈವಶಿಲ್ಪದಂತೆಯೇ ಮಹತ್ವ ಪೂರ್ಣವಾಗಿದೆ. ಶಿಲೆ, ಲೋಹ, ಗೃಹ (ಮರ), ಹಿರಣ್ಯ, ರಥ (ಕಬ್ಬಿಣ) ಈ ಐದು ವಿಧ ಕರ್ಮ

ಗಳೂ ಶಿಲ್ಪಗಳೆನಿಸಿವೆ. ಯಾವನು ಈ ಶಿಲ್ಪವನ್ನು ತಿಳಿಯುವನೋ ಅವನಿಗೆ ಆತ್ಮ ಸಂಸ್ಕಾರ ಉಂಟಾಗುತ್ತದೆ. ಈ ಶಿಲ್ಪವೆಂಬ ವಸ್ತುನಿರ್ಮಾಣ ಜ್ಞಾನವೂ ಛಂದೋಮಯವಾದ ವೇದವೂ ಸಮಾನವಾದವು. ಅಥವ ಎರಡೂ ಒಂದೇ. ಶಿಲ್ಪವೇ ಛಂದೋಮಯವಾದ ವೇದವು. ಇವುಗಳಿಂದ ವೇದ ಮತ್ತು ಶಿಲ್ಪಗಳಿಂದ (ಎರಡನ್ನೂ ಎರಡು ಅರ್ಥವನ್ನೂ ತಿಳಿಯುವುದರಿಂದ) ಆತ್ಮನು ಸಂಸ್ಕಾರ ಹೊಂದಿ ಪೂರ್ಣನಾಗುತ್ತಾನೆ — ಎಂಬುದಾಗಿ ಹೇಳಲ್ಪಟ್ಟದೆ. ಈ ವೇದ ವಾಕ್ಯದಿಂದ ವೇದವೂ ಶಿಲ್ಪವೂ ಸಮಾನವಾಗಿ ಪ್ರತಿಯೊಬ್ಬರಿಂದಲೂ ತಿಳಿದು ಅನುಷ್ಠಿಸಲ್ಪಡುತ್ತಿತ್ತೆಂಬುದು ತಿಳಿದುಬರುತ್ತದೆ.

ಶಿಲ್ಪ ಶಬ್ದವು ಶೀಲ-ಸಮಾಧೌ ಎಂಬ ಧಾತುವ್ಯುತ್ಪತ್ತಿ ರೀತಿಯಾಗಿ ತಪೋರೂಪವಾದ ಮನಸ್ಸಮಾಧಿ ಸ್ಥಿತಿಯಲ್ಲಿ ಉಂಟಾಗುವ ಯಾವ ಶುದ್ಧ ಜ್ಞಾನವಿದೆಯೋ ಅದೇ ಶಿಲ್ಪಜ್ಞಾನ ಎಂಬುದಾಗಿ ಹೇಳಲ್ಪಟ್ಟದೆ. ಅಂತಹ ಯೋಗ್ಯವಾದ ಮನಸ್ಸು ಮನುಷ್ಯೇತರ ಪ್ರಾಣಿಗಳಲ್ಲಿ ಇರುವುಲ್ಲದಿವೆಂಬುದಕ್ಕೆ ಮನುಷ್ಯ ಶಬ್ದವೇ ಅರ್ಥ ಪ್ರಚೋದನೆಯನ್ನು ಉಂಟುಮಾಡುತ್ತದೆ. ಮನಸಃ–ವಿಚಾರಶಕ್ತೇಃ,ಉಷ್ಯಂ-ವಸತಿಯೋಗ್ಯಂ ಸ್ಥಾನಂ ಎಂಬ ನಿರುಕ್ತ ವಾಕ್ಯಾನುಸಾರವಾಗಿ ಶೀಲ-ಸಮಾಧಿಗೆ ಅರ್ಹವಾದ ಮನಸ್ಸಿನ ವಾಸಾರ್ಹಸ್ಥಾನ ಮನುಷ್ಯ ಎಂದಾಗುತ್ತದೆ. ಆದುದರಿಂದ ವಿಚಾರಶಕ್ತಿಯನ್ನು ಬೆಳೆಸಿಕೊಂಡು ಸಮಾಧಿಯೋಗವನ್ನು ಸಾಧಿಸಿದ ಜ್ಞಾನಿಯಾದ ಮನುಷ್ಯನೇ ಶಿಲ್ಪಜ್ಞಾನಕ್ಕೆ ಅಧಿಕಾರಿಯೂ, ಶಿಲ್ಪ ನಿರ್ಮಾಣಕ್ಕೆ ಯೋಗ್ಯನೂ ಆಗಿ ಆತನಿಂದ ನಿರ್ಮಿಸಲ್ಪಟ್ಟ ವಸ್ತು ನಿರ್ಮಾಣವೇ ಶಿಲ್ಪವೆಂದು ಹೇಳಲ್ಪಟ್ಟಿರುತ್ತದೆ.

ಇತಂಹ ಶಿಲ್ಪದಲ್ಲಿ ಕುಟುಂಬೋಪಯುಕ್ತಗಳಾದ ಗೃಹ ಪಾತ್ರೆ ಆಭರಣ ವಾಹನಾದಿಗಳ ನಿರ್ಮಾಣ ಕ್ರಮಗಳು ಮಾತ್ರವಲ್ಲದೆ ದೇಶೋಪಯುಕ್ತಗಳಾದ ನೌಕಾ ಜಲವಿದ್ಯುತ್ ಸೈನ್ಯಾಯುಧ ವಿಮಾನ ಪ್ರಾಕಾರ ನಗರ ಯಂತ್ರಾದಿಗಳ ರಚನಾಕ್ರಮಗಳೂ ಹೇಳಲ್ಪಟ್ಟಿರುತ್ತದೆ. ವೇದದಲ್ಲಿ ಈ ಬಹು ವಿಷಯಗಳು ಹೇಳಲ್ಪಡುವುದರಿಂದ ವೇದವು ಶಿಲ್ಪಜ್ಞಾನವೇ ಎಂದು ಮೇಲೆ ಹೇಳಲ್ಪಟ್ಟಿರುವ ಐತರೇಯ ಬ್ರಾಹ್ಮಣ ವಾಕ್ಯದಿಂದ ಮತ್ತಷ್ಟು ಸಮರ್ಥಿತವಾಗುತ್ತದೆ.

ಯಮೇನ ತತಂ ಪರಿಧಿಂ ವಯಂತೋಽಪ್ಸರಸ ಉಪಸೇದುರ್ವಸಿಷ್ಠಾಃ (ಋಕ್ ೭:೩:೩೯). ನಾವಿಕನ ವಶದಲ್ಲಿ ಇರುವ ನೀರಿನಲ್ಲಿ

ನೌಕಾ ಶಿಲ್ಪ

ಸಂಚರಿಸುವ ನೌಕೆಗಳು ಬುದ್ಧಿವಂತನಾದ ನೌಕಾ ಯಜಮಾನನಿಂದ ಸಮುದ್ರಗಳ ಆಚೆಯ ತೀರವನ್ನು ತಲುಪುವಂತೆ ಸಂಚರಿಸುತ್ತಿವೆ. ಮತ್ಸ್ಯಾದಿಗಳಿಂದ ಅಪಾಯವಾಗದಿರಲು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸಂಚರಿಸಲು ಅಪಕ್ಕೆ ಶಕ್ತಿಯು ನೌಕಾ ನಿರ್ಮಾಣಮಾಡಿದ ಸ್ಥಪತಿ (ಶಿಲ್ಪಿ)ಯಿಂದ ಕೊಡಲ್ಪಟ್ಟಿದೆ (ಪೂರ್ವದಲ್ಲಿ ಗಾಳಿಯ ಪಟಗಳ ಸಹಾಯವಿಲ್ಲದೆ ಯಂತ್ರ ಶಕ್ತಿಯಿಂದ ನಡೆಯುತ್ತಿದ್ದ ಜಹಜುಗಳು ಇದ್ದುವೆಂಬುದನ್ನು ಇದು ದೃಢಪಡಿಸುತ್ತದೆ). **ಸುತ್ರಾಮಾಣಂ ಪೃಥಿವೀಂ ದ್ಯಾಮನೇಹಸಂ ಸುಶರ್ಮಾಣ ಮದಿತಿಂ ಸುಪ್ರಣೀತಿಂ। ದೈವೀಂ ನಾವಂ ಸ್ವರಿತ್ರಾಮನಾಗಸ ಮಸ್ರವಂತೀ ಮಾರುಹೇಮಾ ಸ್ವಸ್ತಯೇ (ಋಕ್. ೧೦:೬೩:೧೦)** ನಡೆಸುವ ಸಾಧನಗಳಿಂದ ಯುಕ್ತವಾದ, ನೀರಿನಲ್ಲಿರುವ ಪೃಥ್ವಿಯಂತೆಯೂ, ಆಕಾಶದಲ್ಲಿರುವ ಗ್ರಹದಂತೆಯೂ ಮನೋಹರವಾದ ವಿಸ್ತಾರವಾದ, ನೀರನ್ನು ಒಳಕ್ಕೆ ಬರಗೊಡಿಸದ, ಧ್ವಜಾದಿಗಳಿಂದ ಶೋಭಿಸುವ, ಶಿಲ್ಪಿಯಿಂದ ಕೊಡಲ್ಪಟ್ಟ ಸಂಪೂರ್ಣ ಶಕ್ತಿಯಿಂದ ದೃಢವಾದ ನೌಕೆಯನ್ನು ನಾವು ಹತ್ತಿ ನಮ್ಮ (ದೇಶ) ಹಿತಾರ್ಥವಾಗಿ ನಡೆಸುತ್ತೇವೆ (ಅಂತರಿಕ್ಷದಲ್ಲಿಯೂ, ನೀರಿನಲ್ಲಿಯೂ ಯಂತ್ರಶಕ್ತಿಯಿಂದ ಸಂಚರಿಸಬಲ್ಲ ಏರ್‌ಬೋಟುಗಳೂ ಇದ್ದುವೆಂಬುದಕ್ಕೆ ಈ ವಾಕ್ಯವೇ ಸಾಕ್ಷಿಯಾಗಿದೆ).

ರಥ ಶಿಲ್ಪ

ರಥಂ ಯೇಚಕ್ರುಃ ಸುವೃತಂ ಸುಚೇತಸೋಽವಿಹ್ವರಂತಂ ಮನಸ್ಪರಿಧ್ಯಯಾ (ಋಕ್ ೩:೭:೨೮) ಅಶ್ವಿನೀ ಕುಮಾರರೆಂಬ ಶಿಲ್ಪಿಗಳು ಸ್ವಬುದ್ಧಿ ಸಾಮರ್ಥ್ಯದಿಂದ ಸುಂದರವೂ ಯಥೇಷ್ಟಗಮನವೂ ಶಕ್ತಿಯುತವೂ ಆದ ರಥವನ್ನು ನಿರ್ಮಿಸಿರುತ್ತಾರೆ. ಆ ರಥಕ್ಕೆ ದುಂಡಾಕೃತಿಯಾದ ಚಕ್ರಗಳನ್ನು ಜೋಡಿಸಿ ಆನಂದಕರಗಳಾಗಿ ತಯಾರಿಸಿರುತ್ತಾರೆ.

ವಿಮಾನ ಶಿಲ್ಪ

ಆ ವಿದ್ಯುನ್ಮದ್ಭಿ ರ್ಮರುತಃ ಸ್ವರ್ಕೈ ರಥೇಭಿ ರ್ಯಾತ ಋಷ್ಟಿಮದ್ಭಿ ರಶ್ವಪರ್ಣೈಃ (ಋಕ್ ೧:೧೮:೮) ವಿದ್ಯುತ್ತಿನಿಂದ ಸಂಶೋಧಿಸಿ ತೆಗೆಯಲ್ಪಟ್ಟ 'ಉದಾನ' ಎಂಬ ಹೆಸರಿನ ವಾಯುವಿನಿಂದ ತುಂಬಲ್ಪಟ್ಟ ಎಕ್ಕದ ಹಣ್ಣಿನ ಆಕೃತಿಯಂತಿರುವ ಕುಡಿಕೆಗಳಿಂದ ನಿರ್ಮಿಸಲ್ಪಟ್ಟಿರುವ ಈ ರಥದಲ್ಲಿ ಕುಳಿತು ನೀವು

ಊರ್ಧ್ವಗಾಮಿಗಳಾಗಿ ಕುದುರೆಗಳ ವೇಗಕ್ಕಿಂತಲೂ ಹೆಚ್ಚು ವೇಗವಾಗಿ ಸಂಚರಿಸಿ ಬರುವವರಾಗಿ.

ಇಹೈವಧ್ರುವಾಂ ನಿಮಿನೋಮಿಶಾಲಾಂ ಕ್ಷೇಮೇ ತಿಷ್ಠತು ಘೃತಮುಕ್ಷಮಾಣಾ। ಅಶ್ವಾವತೀ ಗೋಮತೀಸೂನೃತಾವರೀ ಉಚ್ಛ್ರಯಸ್ವಮಹತೇ ಸೌಭಗಾಯ॥ (ಋಕ್ ೫೦:೭:೧) ಈ ಶುಭವಾದ ಸ್ಥಳದಲ್ಲಿ ನನ್ನ ಮನೆಯನ್ನು ಕಟ್ಟುತ್ತೇನೆ. ಅದರಲ್ಲಿ ಹಸುಗಳೂ ಕುದುರೆಗಳೂ ಮಕ್ಕಳೂ ಐಶ್ವರ್ಯವೂ ಎಲ್ಲ ಕಾರ್ಯಗಳೂ ಅತಿಥಿಸತ್ಕಾರವೂ ವಾಸಮಾಡಲು ತಕ್ಕಂತೆ ಕಟ್ಟುವ ಈ ಮನೆಯು ಅಭಿವೃದ್ಧಿ ಹೊಂದಲಿ.

ವಾಸ್ತು ಶಿಲ್ಪ

ಯತ್ತೇ ಶಿಲ್ಪಂ ಕಶ್ಯಪರೋಚನಾವತ್। ಇಂದ್ರಿಯಾವತ್ಪುಷ್ಕಲಂ ಚಿತ್ರಭಾನು। ತಸ್ಮಿನ್ಸೂರ್ಯಾ ಅರ್ಪಿತಾಸ್ಸಪ್ತಸಾಕಂ। ತಸ್ಮಿನ್ ರಾಜಾನಮಧಿವಿಶ್ರಯೈನಂ॥ (ಯಜು: ಆರ. ೧:೭:೩) ಸುಂದರವೂ ಬಲಿಷ್ಠವೂ ವಿಸ್ತೃತವೂ ತೇಜೋಮಯವೂ ಆದ ಈ ಶಿಲ್ಪವು ನಿರ್ಮಿಸಲ್ಪಟ್ಟಿರುತ್ತದೆ. ಈ ಶಿಲ್ಪವು ಸೂರ್ಯನು ಪೃಥ್ವಿಯನ್ನು ರಕ್ಷಿಸುವಂತೆ ನಮ್ಮ ರಾಜನನ್ನು ಕ್ಷೇಮದಿಂದ ಕಾಪಾಡಲಿ. ಈ ಶಿಲ್ಪದಲ್ಲಿ (ಪ್ರಾಕಾರ-ದುರ್ಗ) ರಾಜನಿಗೆ ಆಶ್ರಯವನ್ನು ಎಲೈ ಕಶ್ಯಪರೇ ನೀವು ಕೊಡುವವರಾಗಿ (ಮಂತ್ರಿಗಳು ರಾಜನ ಪರವಾಗಿ ಶಿಲ್ಪಿಯನ್ನು ಈ ರೀತಿ ಪ್ರಾರ್ಥಿಸುತ್ತಾರೆ).

ಪ್ರಾಕಾರ ಶಿಲ್ಪ

ಯೇಪಂಥಾನೋ ಬಹವೋ ದೇವಾಯಾನಾ ಅಂತರಾದ್ಯಾವಾಪೃಥಿವೀಂಸಂಚರಂತಿ। ತೇಮಾ ಜುಷಂತಾಂ ಪಯಸಾಘೃತೇನ ಯಥಾ ಕ್ರೀತ್ವಾ ಧನಮಾಹರಾಣಿ॥ (ಅಥ ೩:೧೫:೨) ಭೂಮಿಯಲ್ಲೂ ಅಂತರಿಕ್ಷದಲ್ಲೂ ರಥಗಳು ಸಂಚರಿಸುವಂಥಾ ಬೀದಿಗಳಿಂದಲೂ ಮನುಷ್ಯರಿಂದಲೂ ಕೂಡಿ ಈ ಸಮೂಹ ಸ್ಥಾನವು ಪ್ರಕಾಶಿಸುತ್ತದೆ. ಇದರಿಂದ ಸರ್ವರೂ ತೃಪ್ತಿಪಡಲಿ. ಹಾಲು ಮೊಸರು ತುಪ್ಪಗಳು ಯಥೇಷ್ಟವಾಗಿ ಮಾರಾಟವಾಗಿ ಎಲ್ಲರಿಗೂ ಜೀವನಾನುಕೂಲ ಸಂಪತ್ತು ಸಮವಾಗಿ ದೊರಕುವಂತಾಗಲಿ (ವಿಮಾನ ನಿಲ್ದಾಣಗಳೂ ನೌಕಾಬಂದರುಗಳೂ ಆ ನಗರಗಳಲ್ಲಿದ್ದಿರಬೇಕು).

ನಗರ ಶಿಲ್ಪ

ತಕ್ಷನ್ ಧೇನುಂ ಕಾಮದುಘಾಂ॥ (ಋಗ್ವೇದ) 'ಎಲೈ ಶಿಲ್ಪಜ್ಞರೇ, ಯಾವುದು ನಮಗೆ ಅತ್ಯವಶ್ಯಕವಾಗಿ ಬೇಕಾಗಿದೆಯೋ ಅದೆಲ್ಲವೂ ದೊರಕಲು ಸಮರ್ಥವಾದ ಕಾಮಧೇನುವನ್ನು ನಿರ್ಮಿಸಿ ಕೊಡಿ'

ಯಂತ್ರ ಶಿಲ್ಪ

(ಈ ಮಂತ್ರಾರ್ಥದಿಂದ ಕಾಮಧೇನುವೆಂಬ ಪ್ರಸಿದ್ಧವಾದ ಮಹಾಯಂತ್ರವನ್ನು ಶಿಲ್ಪಿಗಳು ನಿರ್ಮಿಸಿ ಲೋಕಕ್ಕೆ ಅನುಪಮವಾದ ಕ್ಷೇಮವನ್ನು ಸಾಧಿಸಿದ್ದರು ಎಂಬುದನ್ನು ನಂಬಬಹುದು. **ತಕ್ಷನ್** ಶಬ್ದಾರ್ಥದಿಂದ ಕಾಮಧೇನುವೆಂಬುದು ಯಂತ್ರ ವಿಶೇಷವೆಂಬುದಾಗಿಯೇ ಸಿದ್ಧವಾಗುತ್ತದೆ. ವಸಿಷ್ಠನಲ್ಲಿ ಇಂತಹ ಕಾಮಧೇನುವೊಂದು ಇತ್ತೆಂಬುದೂ, ವಿಶ್ವಾಮಿತ್ರನು ಅದನ್ನು ತೆಗೆದುಕೊಂಡು ಹೋಗಬೇಕೆಂದು ವಸಿಷ್ಠನೊಡನೆ ಯುದ್ಧ ಮಾಡಿದನೆಂಬುದೂ ಜನಜನಿತವಾದ ಕಥೆಯೇ ಇರುತ್ತದೆ). **ಪುನರ್ಯೇಚಕ್ರುಃ ಪಿತರಾಯುವಾನಾ ಸನಾಯುಪೇವ ಜರಣಾ ಶಯನಾ। (ಋಕ್ ೪:೫:೧)** ಯಾವ ಶಿಲ್ಪಿಗಳು ಮುಪ್ಪಿನಿಂದ ಜರ್ಜರಿತರಾದ ಹಿರಿಯರನ್ನು ಪುನರ್ಯೌವನ ಸಂಪನ್ನರಾಗಿ ಮಾಡಲು ಪ್ರಯತ್ನಪಟ್ಟು ಸಾಧನಗಳನ್ನು ನಿರ್ಮಿಸಿದರೋ ಅವರು ಎಲ್ಲರಿಗೂ ಅತ್ಯಂತ ಹಿರಿಯರು (ಪೂಜ್ಯರು). **ತ್ವಷ್ಟಾದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ। (ಋಕ್ ೧೦:೨:೧)** ತ್ವಷ್ಟೃವು ತನ್ನ ಮಗಳಿಗೆ ತಾಪವನ್ನು ಕೊಡುತ್ತಿದ್ದ ಸೂರ್ಯನನ್ನು ತಕ್ಷಿಸಿನನು (ಆಯುಧ ಪ್ರಯೋಗದಿಂದ ಆತನ ತಾಪಶಕ್ತಿಯನ್ನು ಕಡಿಮೆಮಾಡಿದನು). ಲೋಕಕ್ಕೆ ಉಪಯೋಗವಾಗುವಷ್ಟು ಮಾತ್ರ ಕಿರಣಗಳನ್ನು ನಿಲ್ಲಿಸಿದನು. ಇದರಿಂದ ಸೂರ್ಯನು ಲೋಕ ಕಲ್ಯಾಣಕಾರಕನಾಗಿರುತ್ತಾನೆ.

ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ॥ (ಋಕ್ ೧:೪೮:೩) ಇಂದ್ರನು ಹೇಳುತ್ತಾನೆ: 'ಎಲೈ ತ್ವಷ್ಟೃವೇ, ನಮಗಾಗಿ ಒಳ್ಳೆಯ ಉಕ್ಕಿನಿಂದ ವಜ್ರಾಯುಧವನ್ನು ನಿರ್ಮಿಸಿಕೊಡು. ಅದು ಪರ್ವತಗಳನ್ನು ಭೇದಿಸುವಷ್ಟು ಶಕ್ತಿಯುತವಾಗಿರಲಿ.'

ಸೈನ್ಯಾಯುಧ ಶಿಲ್ಪ

ರಾಜನ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ರಾಜನನ್ನು ಆಶೀರ್ವಾದ ಮಾಡುವ ಕಾಲದಲ್ಲಿ ಶಿಲ್ಪಿಗಳಿಂದ

ಹೇಳಲ್ಪಡುವ **ಯೇಭಿಶ್ಶಿಲ್ಪೈಃ ಪಪ್ರಥಾನಾ ಮದೃಗಂಹತ್। ಯೇಭಿರ್ದ್ಯಾಮಭ್ಯಪಿಗ್‍ಂಶತ್ಪ್ರಜಾಪತಿಃ। ಯೇಭಿರ್ವಾಚಂ ವಿಶ್ವ ರೂಪಾಗ್‍ಂ ಸಮವ್ಯಯತ್। ತೇನೇಮಮಗ್ನ ಇಹವರ್ಚಸಾ ಸಮಂಗ್ಧಿ ॥ (ತೈ. ಬ್ರಾ. ೨:೮:೨೫)** ಎಲೈ ಅಗ್ನಿ ಪ್ರಕಾಶಸ್ವರೂಪನಾದ ಪರಮಾತ್ಮನೇ, ಯಾವ ಪ್ರಜಾಪತಿ ಶಿಲ್ಪಿಯು ತನ್ನ ಜ್ಞಾನಕೌಶಲ್ಯಯುಕ್ತ ರಾದ ಕಲಾವಿದರಾದ ಶಿಲ್ಪಿಗಳಿಂದ ಮಾಡಲ್ಪಟ್ಟ ಶಿಲ್ಪಕಾರ್ಯಗಳಿಂದ ವಿಸ್ತಾರ ವಾದ ಈ ಪೃಥ್ವಿಯನ್ನು ಸಂಪತ್ಸಮೃದ್ಧವನ್ನಾಗಿಯೂ, ಪ್ರಜೋಪಯುಕ್ತವಾದ ಶಿಲ್ಪ ನಿರ್ಮಾಣಗಳಿಂದ ಅಂತರಿಕ್ಷವನ್ನು ಪ್ರಕಾಶಯುತವನ್ನಾಗಿಯೂ ಮನೋ ಹರವನ್ನಾಗಿಯೂ, ವಾಕ್ ಎಂದರೆ ವಿಜ್ಞಾನಜ್ಞಾನಬೋಧಕಗಳಾದ ಗ್ರಂಥ ಗಳನ್ನೂ ವೇದಸಮೂಹವನ್ನೂ ವಿಶೇಷಾರ್ಥಗಳಿಂದ ಕೂಡಿದ ಮಹಿಮಾವಿಶೇಷ ವುಳ್ಳ ವಿಶ್ವವಿಶಾಲರೂಪವನ್ನಾಗಿಯೂ ಮಾಡಿರುವನೋ ಆತನ ಅನುಗ್ರಹಬಲ ದಿಂದ (ಅಂತಹ ಶಿಲ್ಪಿಗಳ ಅನುಗ್ರಹ ವಿಶೇಷ ಬಲದಿಂದ) ಈ ರಾಜನನ್ನು ಸಂಪತ್ಸಮೃದ್ಧನನ್ನಾಗಿ ಮಾಡು — ಎಂಬ ಈ ಮಂತ್ರವು ಶಿಲ್ಪಿಗಳ ಜ್ಞಾನ ಕರ್ಮಗಳ ಸಾಮರ್ಥ್ಯವನ್ನೂ, ರಾಜ್ಯವ್ಯವಸ್ಥೆಯಲ್ಲಿನ ಶಿಲ್ಪಿಗಳ ಪಾತ್ರವನ್ನೂ ನಿರೂಪಿಸುತ್ತದೆ.

ಹೀಗೆ ವೇದಗಳಲ್ಲಿ ಸಕಲವಿಧ ಶಿಲ್ಪವೂ ಹೇಳಲ್ಪಟ್ಟಿರುತ್ತದೆ. ಆದುದ ರಿಂದಲೇ ವೇದವು ಶಿಲ್ಪಮಯವಾದುದು ಎಂಬುದು ಪ್ರಮಾಣ ವಾಕ್ಯವಾಗಿರು ತ್ತದೆ. ಶಿಲ್ಪ ನಿರ್ಮಾಣ ಸಮರ್ಥರಾದ ತ್ವಷ್ಟೃ, ಋಭುಗಳು, ನಾಭಾನೇ ದಿಷ್ಟ, ವಾಲಖಿಲ್ಯ, ವಿಪ್ರಚಿತ್ತಿ, ದಧ್ಯಙ್ಙಥರ್ವಣ, ನಾರಾಶಂಸೀಃ, ವಾರ್ಷಾ ಕಪ, ಐತಿಶಪ್ರಲಾಪ, ಸುಕೀರ್ತಿ, ಶಿಲ್ಪಃ ಕಶ್ಯಪ, ಆಭೂತಿಸ್ತ್ವಾಷ್ಟ್ರ, ವೃಷ್ಟಿ, ಸನಾರು, ಸನಾತನ, ಸನಕ ಮೊದಲಾದ ಶಿಲ್ಪಿಗಳು ಸಮಸ್ತ ಲೋಕ ಗಳಿಗೂ ಕಲ್ಯಾಣಕಾರಕವಾಗುವಂತೆ ಶಿಲ್ಪ ಕಾರ್ಯಗಳನ್ನು ನಡೆಸಿ ವೇದಗಳಲ್ಲಿ ಶಿಲ್ಪ ಮಂತ್ರಗಳ ದ್ರಷ್ಟಾರರಾಗಿರುತ್ತಾರೆ.

ಈ ಶಿಲ್ಪವು ಗುರುಮುಖದಿಂದ ಶಿಷ್ಯರಿಗೆ ಪ್ರವಚನ ರೂಪವಾಗಿಯೂ, ಕರ್ಮ ಕೌಶಲ ರೂಪವಾಗಿಯೂ ಉಪದೇಶಿಸಲ್ಪಟ್ಟು ಶಿಷ್ಯ-ಪ್ರಶಿಷ್ಯಪರಂಪರೆ ಯಿಂದ ಪ್ರಾಚೀನಕಾಲದಲ್ಲಿ ಬಹು ಅಭಿವೃದ್ಧಿಯನ್ನು ಹೊಂದಿತ್ತು. ವೇದದಿಂದ ಕೂಡಿದ ಶಿಲ್ಪ ಪ್ರವಚನಾಧ್ಯಯನ ಕರ್ಮಗಳು ದೇಶದ ಎಲ್ಲೆಡೆಯಲ್ಲಿಯೂ

ಆಶ್ರಮ ಸಂಸ್ಥೆಗಳಲ್ಲಿ ನಡೆಯುತ್ತಿದ್ದವು. ಆದುದರಿಂದಲೇ ವೇದಾಧ್ಯಯನ ಗುರುಪರಂಪರೆಯಲ್ಲಿ ವೇದೋಕ್ತವಾದ ಪ್ರಸಿದ್ಧ ಶಿಲ್ಪಿ ಗುರುಗಳು ಪ್ರಕಾಶಿಸುತ್ತಿರುವುದು. ಬೃಹದಾರಣ್ಯಕದಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ.

ಆಸಿತೋವಾರ್ಷಗಣೋ ಹರಿತಾತ್ಕಶ್ಯಪಾತ್ ಹರಿತಃ ಕಶ್ಯಪಶ್ಶಿಲ್ಪಾತ್ ಕಶ್ಯಪಾತ್ ಶಿಲ್ಪಃಕಶ್ಯಪಃ ಕಶ್ಯಪಾನ್ನೈಧ್ರುವೇಃ ಕಶ್ಯಪೋನೈಧ್ರುವಿರ್ವಾಚಃ ವಾಗಂಭೀಣ್ಯಾ ಅಂಭಿಣ್ಯಾದಿತ್ಯಾತ್ ಆದಿತ್ಯ ಏತಾನೀವಾನೀತಿ॥ ಪಂಥಾಸೌಭರೋಽಯಾಸ್ಯಾದಾಂಗಿರಸ್ಯಾತ್ ಅಯಾಸ್ಯ ಆಂಗಿರಸಆಭೂತೇಸ್ತ್ವಾಷ್ಟ್ರಾತ್ ಆಭೂತಿಸ್ತ್ವಾಷ್ಟ್ರೋ ವಿಶ್ವರೂಪಾತ್ತ್ವಾಷ್ಟ್ರಾತ್ ವಿಶ್ವರೂಪಸ್ತ್ವಾಷ್ಟ್ರೋಽಶ್ವಿಭ್ಯಾಂ ಅಶ್ವಿನೌದಧೀಚ ಆಥರ್ವಣಾತ್ ದಧ್ಯಙ್ಙಾಥರ್ವಣೋಽಥರ್ವಣೋದೈವಾತ್ ಅಥರ್ವಾದೈವೋ ಮೃತ್ಯೋಃಪ್ರಾಧ್ವಗ್ಂಸನಾತ್ ಮೃತ್ಯುಃ ಪ್ರಾಧ್ವಗ್ಂಸನಃ ಪ್ರಧ್ವಗ್ಂಸನಾತ್ ಪ್ರಧ್ವಗ್ಂಸನ ಏಕ ಋಷೇಃ ಏಕ ಋಷಿರ್ವಿಪ್ರಚಿತ್ತೇಃ ವಿಪ್ರಚಿತ್ತಿರ್ವ್ಯಷ್ಟೇಃ ವ್ಯಷ್ಟಿಸ್ಸನಾರೋಃ ಸನಾರುಸ್ಸನಾತನಾತ್ ಸನಾತನಸ್ಸನಕಾತ್ ಸನಕಃ ಪರಮೇಷ್ಠಿನಃ ಪರಮೇಷ್ಠೀ ಬಹ್ಮಣೋ ಬ್ರಹ್ಮ ಸ್ವಯಂಭು ಬ್ರಹ್ಮಣೇನಮಃ॥ (ಬೃ. ಉ. ೬:೫:೩, ೪:೬:೩)

ಹೀಗೆ ಬೃಹದಾರಣ್ಯಕದಲ್ಲಿ ಕಂಡುಬರುವ ಈ ಮೇಲ್ಕಂಡ ಗುರುಪರಂಪರೆಯು ಶಿಲ್ಪಿಗಳದು ಎಂಬುದರಲ್ಲಿ ಸಂದೇಹವೇ ಇರುವುದಿಲ್ಲವೆಂಬುದು ಐತರೇಯ ಬ್ರಾಹ್ಮಣದ ೫:೨:೯ ರಲ್ಲಿ ಕಂಡುಬರುವ ಶಿಲ್ಪಿಗಳ ಮತ್ತು ಶಿಲ್ಪಿಮಾಹಾತ್ಮ್ಯದ ವರ್ಣನೆಯಲ್ಲಿ ಕಂಡುಬರುತ್ತದೆ. ಶಿಲ್ಪಿಗಳು ಶಿಲ್ಪವನ್ನು ತಮ್ಮ ತಪಸ್ಸಾಮರ್ಥ್ಯದಿಂದ ಸಂಶೋಧಿಸಿ ತೆಗೆಯುವುದಕ್ಕೆ ಅವರ ತತ್ತ್ವಜ್ಞಾನವೇ ಅವರಿಗೆ ಅಡಿಗಲ್ಲಾಗಿತ್ತು ಎಂಬುದು ಹಿಂದೆಯೇ ವಿವರಿಸಲ್ಪಟ್ಟಿದೆ. ಶಿಲ್ಪಜ್ಞಾನ ತತ್ತ್ವಜ್ಞಾನಗಳೆರಡರಲ್ಲೂ ಪೂರ್ಣವಿದರಾದ ಪೂರ್ವೋಕ್ತ ಶಿಲ್ಪಿಗಳು ಹೇಗೆ ಈ ಗುರುಪರಂಪರೆಯಲ್ಲಿ ಪ್ರಕಾಶಿಸಿದರೋ ಅದರಂತೆಯೇ ಕೇವಲ ತತ್ತ್ವಜ್ಞಾನವೊಂದರಲ್ಲಿಯೇ ಉದ್ದಾಮವಿದ್ವದ್ವಿರಾದ ಶಿಲ್ಪಿಗಳು ಇದ್ದರೆಂಬುದು ತೈತ್ತರೀಯ ಸಂಹಿತೆಯ ೪:೩:೩ ರಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಅನುವಾಕದಲ್ಲಿ ಹೇಳಲ್ಪಡುವ ಸಾನಗ, ಸನಾತನ, ಅಹಭೂನ, ಪ್ರತ್ನ, ಸುಪರ್ಣರೆಂಬ ಋಷಿಗಳು ಶಿಲ್ಪಿ ಕುಲಕ್ಕೆ ಗೋತ್ರಪ್ರವರ್ತಕರಾಗಿರುತ್ತಾರೆ ಎಂಬುದು ಸರ್ವತ್ರ ವಿದಿತವೇ

ಆಗಿರುತ್ತದೆ. ಈ ಶಿಷ್ಯ ಪ್ರಶಿಷ್ಯ ವಂಶ ಪರಂಪರೆಯಿಂದ ಶಿಲ್ಪವೂ ವೇದವೂ ಸರ್ವತೋಮುಖವಾಗಿ ಸಮಾನವಾಗಿ ಪ್ರಾಚೀನಕಾಲದಲ್ಲಿಯೇ ಅಭಿವೃದ್ಧಿಯನ್ನು ಹೊಂದಿ ಪೂರ್ಣತೆಯನ್ನು ಪಡೆದಿತ್ತು.

ವೇದಕಾಲದಿಂದೀಚೆಗೆ ಉಪನಿಷತ್ಕಾಲಕ್ಕೆ ಪೂರ್ವದಲ್ಲಿ ವೇದವು ಶಿಲ್ಪ ಮತ್ತು ವೇದಾಂತ ಅಥವಾ ಕರ್ಮ ಮತ್ತು ಜ್ಞಾನ ಎಂದು ಎರಡಾಗಿ ಕವಲೊಡೆಯಿತು. ಉಪನಿಷತ್ತುಗಳಲ್ಲಿ ಬಹು ಪ್ರಾಚೀನತಮವಾದ ಮೊಟ್ಟಮೊದಲನೆಯದೆಂದು ತಿಳಿಯಲ್ಪಟ್ಟಿರುವ ಈಶಾವಾಸ್ಯೋಪನಿಷತ್ತು ಕರ್ಮ ಜ್ಞಾನ ಎಂಬ ಈ ಶಿಲ್ಪ-ವೇದಾಂತಗಳ ಸಾಮರಸ್ಯವನ್ನು ಉಂಟುಮಾಡುವುದಕ್ಕಾಗಿಯೇ ಜನಿಸಿತು ಎಂಬುದು ಆ ಉಪನಿಷತ್ತನ್ನು ಓದುವವರು ಎಲ್ಲರೂ ತಿಳಿಯಬಲ್ಲರು. ಆ ಉಪನಿಷತ್ತಿನ ವ್ಯಾಖ್ಯಾನಕಾರರು ಕರ್ಮ ಎಂಬುದಕ್ಕೆ ಶಿಲ್ಪವೆಂದು ಅರ್ಥ ಮಾಡುವುದಕ್ಕೆ ಬದಲಾಗಿ ಕರ್ಮವೆಂದರೆ ಕೇವಲ ಯಜ್ಞಕರ್ಮ ಅಥವಾ ಅದಕ್ಕೂ ಈಚಿನ ಅರ್ಥವಾದ ನಿತ್ಯನೈಮಿತ್ತಿಕ ಕರ್ಮಗಳೆಂದು ವಾಖ್ಯಾನ ಮಾಡಿರುತ್ತಾರೆ ಎಂಬುದನ್ನು ಲಕ್ಷ್ಯದಲ್ಲಿಟ್ಟು ನೋಡಬೇಕು. **ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ॥ (ಈಶಾ, ೨)** ಎಂಬ ವಾಕ್ಯದಲ್ಲಿನ ಕರ್ಮ ಶಬ್ದಕ್ಕೆ ಯಜ್ಞ ಕರ್ಮ ಅಥವಾ ನಿತ್ಯನೈಮಿತ್ತಿಕ ಕರ್ಮ ಎಂಬ ಸಂಕುಚಿತಾರ್ಥವನ್ನು ಬಿಟ್ಟು ಶಿಲ್ಪವೆಂಬ ವಿಶಾಲವ್ಯಾಪಕಾರ್ಥವನ್ನು ಹಚ್ಚಿದರೆ ಅದು ಹೇಗೆ ಪೂರ್ಣವಾದ ಅರ್ಥವಾಗಬಲ್ಲದು ಎಂಬುದು ತಿಳಿಯಬರುತ್ತದೆ. ಹೀಗೆ ಶಿಲ್ಪ ವೇದಾಂತಗಳು ಬೇರೆ ಬೇರೆಯಾಗಿ ಕವಲೊಡೆದರೂ ವೇದಾಂತಜ್ಞಾನದ ಮೂಲವು ವೇದದ ವಿಶ್ವಕರ್ಮಸೂಕ್ತದಲ್ಲಿದೆಯೆಂಬುದು ಶಿಲ್ಪವು ವೇದಾಂತ ಜ್ಞಾನಕ್ಕೂ ಕೂಡ ಮಾತೃಕಾರೂಪದಲ್ಲಿದೆಯೆಂಬುದನ್ನು ವ್ಯಕ್ತಪಡಿಸುತ್ತದೆ. ವಿಶ್ವಕರ್ಮ ಸೂಕ್ತವು ಪರಮಾತ್ಮಜ್ಞಾನ ನಿಶ್ಚಯವನ್ನು ನಿಸ್ಸಂಧಿಗ್ಧ ರೀತಿಯಲ್ಲಿ ತೋರಿಸುತ್ತಿದ್ದು ಸಕಲ ವೇದ ಸಮೂಹಕ್ಕೂ ಶಿರೋಮಣಿಯಂತಿರುವುದಲ್ಲದೆ, ವೇದಾಂತ ಜ್ಞಾನವು ಶಿಲ್ಪಜ್ಞಾನದಿಂದ ಬೇರೆಂಸೆನಿಸಿ ಕವಲೊಡೆದನಂತರ ಪ್ರಖರವಾಗಿ ಬೆಳೆದು ರಮ್ಯವಾಗಿರುವ ಸಕಲ ಉಪನಿಷದ್ಜ್ಞಾನಕ್ಕೂ ತಳಹದಿಯಂತಿರುತ್ತದೆ. ವಿಶ್ವಕರ್ಮ ಸೂಕ್ತದಿಂದ ಬೆಳೆದುದು ವೇದಾಂತ ಜ್ಞಾನವಾದರೂ ಶಿಲ್ಪಿಗಳಿಂದ ಭಿನ್ನರಾದ ಕೇವಲ ಜ್ಞಾನಿಗಳೆಂಬುವರು ಮಾತ್ರ ಅದನ್ನು ಶಿಷ್ಯ ಪರಂಪರೆಯಿಂದ ಬೆಳೆಸಿದರು, ಎಂದು

ಈಗಿನ ಜನರು ತಿಳಿಯುತ್ತಾರೆಂಬುದು ಅವರ ಜ್ಞಾನಸಂಕೋಚಕ್ಕೆ ನಿದರ್ಶನ ವೆಂದೇ ಹೇಳಬೇಕು. ಶಿಲ್ಪಿಗಳು ವೇದ ವೇದಾಂತ ಜ್ಞಾನದಲ್ಲಿಯೂ, ಶಿಲ್ಪಿ ಗಳಲ್ಲದ ಕೇವಲ ತತ್ತ್ವ ಶೋಧನೆಯ ಜ್ಞಾನಿಗಳು ಶಿಲ್ಪದಲ್ಲಿಯೂ ನಿಷ್ಣಾತ ರಾಗಿದ್ದು ಈ ಎರಡು ಗುಂಪೂ ಕವಲೊಡೆದಿದ್ದರೂ ಸಮಾನಸಾಮರಸ್ಯದಿಂದಿ ದ್ದರು ಎಂಬುವಕ್ಕೆ ಬೃಹದಾರಣ್ಯಕದ ಗುರುಪರಂಪರೆಯೂ **ವಿಶ್ವರೂಪೋ ವೈ ತ್ವಾಷ್ಟ್ರಃ ಪುರೋಹಿತೋ ದೇವಾನಾಮಾಸೀತ್ (ತೈ ಸಂ. ೨:೫:೧)** ತ್ವಷ್ಟೃಪುತ್ರನಾದ ವಿಶ್ವರೂಪಶಿಲ್ಪಿಯು ದೇವತೆಗಳಿಗೆ ಪುರೋಹಿತ ನಾಗಿ ಯಜ್ಞಯಾಗಾದಿಗಳನ್ನು ಮಾಡಿಸುತ್ತಿದ್ದನು ಎಂಬ ಯಜುರ್ವಾಕ್ಯವೂ, ಅಲ್ಲದೆ ಈ ಎರಡು ಗುಂಪುಗಳಿಗೂ ಬಾಂಧವ್ಯವಿತ್ತು ಎಂಬುದಕ್ಕೆ —

ಬೃಹಸ್ಪತೇಸ್ತು ಭಗಿನೀ ವರಸ್ತ್ರೀ ಬ್ರಹ್ಮವಾದಿನೀ ।
ಪ್ರಭಾಸಸ್ಯತು ಸಾ ಭಾರ್ಯಾ ವಸೂನಾಮಷ್ಟಮಸ್ಯ ಹ ।
ವಿಶ್ವಕರ್ಮಾ ಮಹಾಭಾಗ ಸ್ತಸ್ಯಾಂಜಜ್ಞೇ ಪ್ರಜಾಪತಿಃ ॥
(ವಿಷ್ಣು ಪು ೧:೩೫)

ಪ್ರಜಾಪತಿ ಶಿಲ್ಪಿಯ ತಂದೆಯೂ ಅಷ್ಟವಸುಗಳಲ್ಲೊಬ್ಬನೂ ಆದ ಪ್ರಭಾಸ ಶಿಲ್ಪಿಯು ಬೃಹಸ್ಪತಿಯ ಭಾವನಾಗಿದ್ದನು ಎಂಬ ವಿಷ್ಣುಪುರಾಣ ವಾಕ್ಯವೂ ನಿದರ್ಶನಗಳಾಗಿವೆ. ಅಲ್ಲದೆ ಶಿಲ್ಪಶಾಸ್ತ್ರಕ್ಕೆ ಶಿಲ್ಪಿಗಳೇ ಅಲ್ಲದೆ ಬ್ರಹ್ಮಜ್ಞಾನಿ ಗಳಾದ ಇತರರೂ ಕೆಲವರು ಪ್ರವರ್ತಕರಾಗಿದ್ದರು ಎಂಬುದಕ್ಕೆ —

ಭೃಗುರತ್ರಿರ್ವಸಿಷ್ಠಶ್ಚ ವಿಶ್ವಕರ್ಮಾಮಯಸ್ತಥಾ ।
ನಾರದೋ ನಗ್ನಜಿಚ್ಚೈವ ವಿಶಾಲಾಕ್ಷಃ ಪುರಂದರಃ ॥
ಬ್ರಹ್ಮಾ ಕುಮಾರೋ ನಂದೀಶಃ ಶೌನಕೋ ಭರ್ಗ ಏವಚ ।
ವಾಸುದೇವೋ ಅನಿರುದ್ಧಶ್ಚ ತಥಾ ಶುಕ್ರ ಬೃಹಸ್ಪತೀ ॥
ಅಷ್ಟಾದಶೈತೇ ವಿಖ್ಯಾತಾಃ ಶಿಲ್ಪಶಾಸ್ತ್ರೋಪದೇಶಕಾಃ । (ಮತ್ಸ್ಯ ಪು.)

——ಈ ವಾಕ್ಯವೂ ಬಲವನ್ನು ಕೊಡುತ್ತದೆ.

ಕಶ್ಯಪ ನಾಭಾನೇದಿಷ್ಟ ವಾಲಖಿಲ್ಯ ಮಯಾದಿ ಶಿಲ್ಪಜ್ಞಾನಿಗಳೂ, ವಸಿಷ್ಠ ವಿಶ್ವಾಮಿತ್ರ ಗೌತಮಾದಿ ತತ್ತ್ವಜ್ಞಾನಿಗಳೂ ವೇದಕಾಲದಲ್ಲಿ ಸಮಾನ ಸಾಮರಸ್ಯದಿಂದಿದ್ದು ವೇದವನ್ನು ಬೆಳೆಸಿ, ಅದನ್ನು ಒಂದು ಪೂರ್ಣ ರೂಪಕ್ಕೆ

ವೈದಿಕ ಶಿಲ್ಪದ ಹ್ರಾಸ, ದೇವತಾಮೂರ್ತಿಗಳ ಉದಯ

ತಂದು, ಅದು ಜಗದುಪಯೋಗವಾಗುವಂತೆಯೂ ಅದರ ಅನುಷ್ಠಾನದಿಂದ ಜಗತ್ತು ಸನ್ಮಾರ್ಗಗಾಮಿಯಾಗಿ ಸಂಪೂರ್ಣ ಸುಖಶಾಂತಿಯನ್ನು ಅನುಭವಿಸುವಂತೆಯೂ ಮಾಡಿದ್ದರು. ಈಚೆಗೆ, ಶಿಲ್ಪಜ್ಞಾನ ತತ್ವಜ್ಞಾನಗಳು ಎರಡಾಗಿ ಒಡೆದ ಕಾಲದಿಂದೀಚೆಗೆ, ವೇದದ ಬೆಳವಣಿಗೆಯೂ ನಿಂತಿತಲ್ಲದೆ ವೇದವು ಕೇವಲ ತತ್ತ್ವಜ್ಞಾನವನ್ನು ನಿರೂಪಿಸುವುದಕ್ಕೇ ಹೊರಟಿದೆಯೆಂಬಂತೆ ಪ್ರಚಾರ ನಡೆದು ಶಿಲ್ಪಜ್ಞಾನವನ್ನು ಅವಿದ್ಯೆಯೆಂಬುದಾಗಿ, ಪುರಾಣ ಕಾವ್ಯ ನಿಘಂಟುಗಳೆಲ್ಲದರಿಂದಲೂ ಜಗತ್ತಿನ ಕಿವಿ ಕಿವುಡಾಗುವಂತೆಯೂ, ಜಗತ್ತಿನ ಕಣ್ಣು ಕಾಣದಂತೆಯೂ ಅಸತ್ಯ ಡಂಗುರವು ಹೊಡೆಯಲ್ಪಟ್ಟು ಶಿಲ್ಪವು ಮೂಲೆಗುಂಪಾಯಿತು. ಇದರಿಂದ ಪುಷ್ಪಕ ವಿಮಾನ, ಕಾಮಧೇನು, ಕಲ್ಪವೃಕ್ಷಗಳನ್ನು ನಿರ್ಮಿಸುತ್ತಿದ್ದಂಥಾ ಶಿಲ್ಪಿಗಳು ಕಾಣದಂತಾದರು; ಅಲ್ಲಿಂದ ಮುಂದೆ ಹುಟ್ಟದಂತಾದರು. ವೇದವು ಪೂರ್ಣಜ್ಞಾನಿಗಳ ಅಮೃತವಾಣಿ ಎಂಬುದು ಮರೆಯಲ್ಪಟ್ಟು, ಅದು ಅಪೌರುಷೇಯವೆಂಬುದಾಗಿ ತಿಳುವಳಿಕೆ ಬಂದ ನಂತರ ಉತ್ತಮ ತತ್ತ್ವಜ್ಞಾನಿಗಳೂ ಕೂಡ ಇಲ್ಲದಂತಾಗಿ ಋಷಿಸಮೂಹವೇ ಭರತಖಂಡದಿಂದ ಅದೃಶ್ಯವಾದಂತಾಯಿತು. ಮುಂದೆ ಹುಟ್ಟಿದ ಪ್ರತಿಭಾಶಾಲಿ ತತ್ತ್ವಜ್ಞಾನಿಗಳೆಲ್ಲಾ ತಮ್ಮ ಸತ್ಯಶೋಧನೆಯನ್ನು ಸ್ವತಂತ್ರವಾಗಿ ನಡೆಸಲಾರದವರಾಗಿ ಕೇವಲ ವೇದಗಳಿಗೆ ವ್ಯಾಖ್ಯಾನ ಬರೆಯುವರಲ್ಲಿಯೇ ಅವರ ತತ್ತ್ವಜ್ಞಾನದ ಮಿತಿ ನಿಂತುಬಿಟ್ಟಿತು. ಅಲ್ಲದೆ ವೇದವು ವಿಭಾಗವಾದನಂತರ ವೇದ ಮಂತ್ರಗಳನ್ನು ಕೇವಲ ಯಜ್ಞ ಯಾಗಾದಿಗಳಿಗಾಗಿಯೇ ವಿನಿಯೋಗಿಸಬೇಕೆಂದು ವೇದ ಮಂತ್ರಗಳ ಪ್ರಯೋಜನವನ್ನು ವಿವರಿಸಿ, ಅನೇಕ ವಿಧ ಯಜ್ಞ ಯಾಗಾದಿಗಳನ್ನು ಮಾಡಲು ಉಪಕ್ರಮಿಸಿ, ಅವುಗಳನ್ನು ನಡೆಸುವ ಮಾರ್ಗವೇ ಕರ್ಮ ಮಾರ್ಗವೆಂತಲೂ ಅದನ್ನು ವಿವರಿಸುವ ಮೀಮಾಂಸಾ ಶಾಸ್ತ್ರವೇ ವೈದಿಕ ಕರ್ಮಶಾಸ್ತ್ರವೆಂತಲೂ ನಿರೂಪಿಸಿ, ವೇದದ ನಿಜವಾದ ಕರ್ಮದ ಅರ್ಥವನ್ನು ವಿಪರ್ಯಾಸಗೊಳಿಸಿಬಿಟ್ಟರು. ಇನ್ನು ಶಿಲ್ಪಿಗಳಾದರೋ ತಮಗೆ ವಿರುದ್ಧ ಧಾಳಿ ಎದ್ದ ಋಷಿವಂಶಜರನ್ನು ಎದುರಿಸಿ, ತಾವೂ ಅವರಷ್ಟೇ ಸಮರ್ಥರೆಂಬುದನ್ನು ತಮ್ಮ ಶಿಲ್ಪ ಸಾಮರ್ಥ್ಯದಿಂದಲೂ, ವೇದಗಳಲ್ಲಿ ಕಾಣಬರುವ ಶಿಲ್ಪಜ್ಞಾನಿಗಳ ಪರಂಪರೆಯಿಂದಲೂ ತೋರಿಸಲು ಸಮರ್ಥರಾದರೇ ಹೊರತು, ಹೊಸ ಹೊಸ

ಸಂಶೋಧನೆಗಳನ್ನು ನಡೆಸಿ ನೂತನ ರಚನೆಗಳನ್ನು ಸಾಧಿಸಲು ರಾಜ್ಯದ - ರಾಜರ ಬೆಂಬಲವಿಲ್ಲದೆ ಅವುಗಳನ್ನು ತಮ್ಮ ಸ್ವಂತ ಬಲದಿಂದಲೇ ನಡೆಸಲಾರದೆ ನಿಂತುಬಿಟ್ಟರು. ಆಗಿನ ಕಾಲದ ರಾಜರಾದರೋ ಕೇವಲ ಋಷಿವಂಶಜರ ಬೆಂಬಲಕ್ಕೆ ನಿಂತು ಅವರ ಒಂದೊಂದು ಕವಿತಾ ಚಮತ್ಕಾರಕ್ಕೂ ಲಕ್ಷಾಂತರ ಹೊನ್ನುಗಳನ್ನು ಸಮರ್ಪಿಸಲು ಸಿದ್ಧರಾದರೇ ಹೊರತು, ದೇಶಾಭ್ಯುದಯವನ್ನು ಸಾಧಿಸುವ ಶಿಲ್ಪಕಾರ್ಯಕ್ಕೆ ಬೆಂಬಲ ಕೊಡದೇ ಹೋದರು ಎಂಬುದು ಅತ್ಯಂತ ವಿಷಾದದಿಂದ ಲಿಖಿಸಲ್ಪಡಬೇಕಾಗಿದೆ. ಇದರಿಂದ ಶಿಲ್ಪಿಗಳ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿ ಸರ್ವಜನಾಭ್ಯುದಯಕ್ಕೆ ಬೇಕಾದ ವಸ್ತುಗಳ ನಿರ್ಮಾಣವು ನಿಂತುಹೋಯಿತಾದರೂ, ಅವರ ಆ ಜ್ಞಾನ ವಿಕಾಸದ ಹಂಬಲವು ಇಂಗಿ ಹೋಗದುದರಿಂದ, ಆ ಶಿಲ್ಪಿಗಳು ಆಗಿನ ಕಾಲದಲ್ಲಿ ವಿಶೇಷವಾಗಿ ನಡೆಯುತ್ತಿದ್ದ ಯಜ್ಞಕಾರ್ಯಗಳಿಗೆ ಉಪಯುಕ್ತಗಳಾದ ವೇದಿಕೆಗಳು, ಹೋಮಕುಂಡಗಳು, ಸ್ರುಕ್ಸ್ರುವಕಪಾಲಾಗ್ನಿಹೋತ್ರಹವಣೀತ್ಯಾದಿ ಯಜ್ಞಪಾತ್ರೆಗಳನ್ನು ನಿರ್ಮಿಸಿ ಕೊಡುವ ಮೂಲಕವೂ, ಅವುಗಳ ನಿರ್ಮಾಣಕ್ರಮ ಉಪಯೋಗಕ್ರಮಗಳನ್ನು ನಿರೂಪಿಸುವ ಶುಲ್ಬಶಾಸ್ತ್ರಗಳನ್ನು ರಚಿಸಿಯೂ ಸಹಾಯ ಮಾಡಿದರು. ಅಲ್ಲದೆ ದೇಶದಲ್ಲಿ ಆಗಿನ ಕಾಲದಲ್ಲಿ ಭರದಿಂದ ಪ್ರಚಾರವಾಗುತ್ತಿದ್ದ ಪುರಾಣಗಳನ್ನೇ ಅನುಸರಿಸಿ ಮೂರ್ತಿನಿರ್ಮಾಣ ದೇವಾಲಯ ನಿರ್ಮಾಣಗಳನ್ನು ಮಾಡಲು ಉಪಕ್ರಮಿಸಿದರು. ಈ ದೇವಾಲಯ ನಿರ್ಮಾಣಗಳ ಕಾಲಕ್ಕೂ ಹಿಂದಿನ ವೇದಕಾಲದ ಶಿಲ್ಪ ನಿರ್ಮಾಣಗಳ ಕಾಲಕ್ಕೂ ಮಧ್ಯೆ ಬಹಳ ಅಂತರವೇ ಇದ್ದು ವೇದಕಾಲದ ಶಿಲ್ಪಕೃತಿಗಳು ಇಂದು ಭರತಭೂಮಿಯಲ್ಲೆಲ್ಲಿಯೂ ಕಾಣಸಿಕ್ಕದಂತಾಗಿದೆ. ಆ ಕೃತಿಗಳು ಕಾಣಸಿಕ್ಕದಿದ್ದರೂ ಪುರಾಣಗಳು ಆ ಶಿಲ್ಪಕೃತಿಗಳ ಅನೇಕ ಮಹತ್ವಗಳನ್ನು ವರ್ಣಿಸುವುದರಿಂದಲೂ, ವೇದಗಳು ನಿಸ್ಸಂಧಿಗ್ಧವಾಗಿ ಅವುಗಳನ್ನು ವಿವರಿಸುವುದರಿಂದಲೂ, ವೇದಕಾಲದಲ್ಲಿದ್ದ ಶಿಲ್ಪಜ್ಞಾನದ ಮಹತ್ವದ ಬಗ್ಗೆ ನಾವು ಸಂಪೂರ್ಣ ನಂಬಿಕೆಯನ್ನಿಟ್ಟು ಅದರ ಯಶೋವೈಭವದ ಬಗ್ಗೆ ಹೆಮ್ಮೆಪಡಬಹುದಾಗಿದೆ.

ಶಿಲ್ಪಿಗಳು ದೇವತಾಮೂರ್ತಿ ನಿರ್ಮಾಣ, ದೇವಾಲಯ ನಿರ್ಮಾಣಗಳನ್ನು ಕೈಗೊಂಡ ನಂತರ ಮೂರ್ತಿ ನಿರ್ಮಾಣ ಶಾಸ್ತ್ರಗಳು ವಿಫುಲವಾಗಿ ಬೆಳೆದವೆ.

ಶಿಲ್ಪಶಾಸ್ತ್ರ, ದೇವತಾ ಮೂರ್ತಿನಿರ್ಮಾಣವೂ ಪುರಾಣ ಕಾಲಕ್ಕೂ ಈಚೆಗೆ ಶೈವ ವೈಷ್ಣವ ಶಾಕ್ತೇಯಾದಿ ಮತಗಳು ಪ್ರಬಲವಾಗಿ ಬೆಳೆದು ವೇದದೇವತೆಗಳಾದ ಇಂದ್ರ ತ್ವಷ್ಟಾ ಸೋಮ ವರುಣ ಪರ್ಜನ್ಯ ಅಗ್ನಿ ಮೊದಲಾದವುಗಳಿಂದ ಪುರಾಣ ದೇವತೆಗಳಾದ ಶಿವ ವಿಷ್ಣು ಕಾಲೀ ಇತ್ಯಾದಿ ಮತೀಯ ದೇವತೆಗಳು ಉತ್ತಮೋತ್ತಮಗಳೆಂದು ವರ್ಣಿತಗಳಾಗಿ ಇವೇ ಪ್ರಧಾನ ದೇವತೆಗಳೆಂತಲೂ, ವೈದಿಕ ದೇವತೆಗಳು ಅಪ್ರಧಾನ ದೇವತೆಗಳೆಂತಲೂ ಪರಿಗಣಿಸಲ್ಪಟ್ಟು, ವೇದದ ಭಾವನೆಗಳೂ, ವೈದಿಕ ಜ್ಞಾನವೂ ಬಹುವಾಗಿ ಮಾರ್ಪಾಟು ಹೊಂದಿದುದರಿಂದ, ದೇವಾಲಯಾದಿ ನಿರ್ಮಾಣ ಕ್ರಮಗಳೂ ಕ್ರಮೇಣ ರೂಪುಗೊಂಡವು. ಭರತ ಖಂಡದ ಏಕಮಾತ್ರ ಭಾಷೆಯಾಗಿದ್ದ ಸಂಸ್ಕೃತವು ಕಾಲಕ್ರಮದಲ್ಲಿ ಪರಿವರ್ತನಗೊಂಡು ಅನೇಕ ಭಾಷೆಗಳುದಯಿಸಿ ಪುರಾಣಭೇದ ಮತಭೇದಗಳಂತೆ ಭಾಷಾ ಭೇದಗಳೂ ಉಂಟಾಗಿ ಈ ಭೇದಗಳಿಂದ ಭರತಖಂಡವು ಮೂರು ಮುಖ್ಯ ಭೇದಗಳಾಗಿ ವಿಭಾಗಗೊಂಡಿತು :

ಹಿಮಾದ್ರಿ ಕನ್ಯಯೋರಂತರ್ಗತೋ ದೇಶಸ್ತು ಭಾರತಃ।
ಸೋಪಿದೇಶಸ್ತ್ರಿಧಾ ಭಿನ್ನಾಸ್ತತ್ತದ್ದೇಶಭವೈರ್ಗುಣೈಃ।
ಹಿಮವದ್ವಿಂಧ್ಯಯೋರ್ಮಧ್ಯಂ ಸಾತ್ವಿಕಂ ಭೂತಲಂ ಸ್ಮೃತಂ।
ವಿಂಧ್ಯ ಶೈಲಾದಿ ಕೃಷ್ಣಾಂತಂ ರಾಜಸಂ ಪರಿಕೀರ್ತಿತಂ।
ಪುನಃ ಕೃಷ್ಣಾದಿ ಕನ್ಯಾಂತಂ ತಾಮಸಂ ಭೂತಲಂ ಭವೇತ್।
ನಾಗರ ಸ್ಸಾತ್ವಿಕೋ ದೇಶೋ ದ್ರಾವಿಡೋ ರಾಜಸೋ ಭವೇತ್।
ವೇಸರ ಸ್ತಾಮಸೋ ದೇಶಃ ಕ್ರಮೇಣ ಪರಿಕೀರ್ತಿತಾಃ॥

(ಶಿಲ್ಪರತ್ನ ಅ. ೧೬.)

ಹಿಮಾಲಯ ಪರ್ವತದಿಂದ ವಿಂಧ್ಯ ಪ್ರದೇಶದವರೆಗೆ **ನಾಗರ** ದೇಶವೆಂತಲೂ, ವಿಂಧ್ಯದಿಂದ ಕೃಷ್ಣಾ ತುಂಗಭದ್ರೆಯವರೆಗೆ **ವೇಸರ** ದೇಶವೆಂತಲೂ, ಅಲ್ಲಿಂದ ಕನ್ಯಾಕುಮಾರಿಯವರೆಗೆ **ದ್ರಾವಿಡ** ದೇಶವೆಂತಲೂ ಹೆಸರಾಯಿತು. ಆಯಾ ದೇಶ ಭಾಗದ ಶಿಲ್ಪವೂ ಕೂಡ ಆಯಾ ದೇಶನಾಮದಿಂದಲೇ ನಿರ್ದೇಶಿತವಾಗಿ ನಾಗರ ಶಿಲ್ಪ, ವೇಸರ ಶಿಲ್ಪ, ದ್ರಾವಿಡ ಶಿಲ್ಪವೆಂಬುದಾಗಿ ಮೂರು ಮುಖ್ಯ ಭೇದಗಳು ದೇವತಾಲಯನಿರ್ಮಾಣಗಳಲ್ಲೂ ಕಂಡು ಬರುವಂತಾಯಿತು. ಕ್ರಮೇಣ ಜೈನರು ಬೌದ್ಧರು ಪ್ರಬಲರಾದಾಗಲೂ, ಮುಸಲ್ಮಾನರು

ಈ ದೇಶವನ್ನು ಆಳಿದಾಗಲೂ, ಶಿಲ್ಪನಿರ್ಮಾಣಕ್ರಮಗಳು ಅವುಗಳಂತೆಯೇ ಮಾರ್ಪಾಡಾಗಿ, ಶಿಲ್ಪವು ಈಚೆಗೆ ಅನೇಕ ವೈಲಕ್ಷಣ್ಯಗಳನ್ನು ಹೊಂದಿದೆ. ಈ ವಿಲಕ್ಷಣಗಳೆಲ್ಲವೂ ಇತ್ತೀಚೆಗೆ ರಚಿತಗಳಾದ ಶಿಲ್ಪಶಾಸ್ತ್ರಗಳಲ್ಲಿ ಕಾಲಕ್ರಮದಿಂದ ತೋರಿಬರುತ್ತಿವೆ.

ಶಿಲ್ಪಶಾಸ್ತ್ರಗಳನ್ನು ಒತ್ತಟ್ಟಿಗಿಟ್ಟು ಭರತಖಂಡದಲ್ಲಿ ಈಗ ಕಂಡುಬರುವ ಶಿಲ್ಪಕೃತಿಗಳನ್ನು ಸ್ಥೂಲವಾಗಿ ಪರೀಕ್ಷಿಸಿದರೆ ಅವನ್ನು ಐದು ಮುಖ್ಯ ರೀತಿಯಾಗಿ ವಿಂಗಡಿಸಬಹುದು. (೧) ಸ್ತೂಪ, ಸ್ತಂಭ, ಚೈತ್ಯ, ವಿಹಾರಾದಿಗಳಿಂದ ಕೂಡಿದ ಗಯಾ ರೀತಿಯ ಬೌದ್ಧ ಶಿಲ್ಪ. (೨) ಎತ್ತರ ಜಗುಲಿಗಳ ಮೇಲೆ ಎತ್ತರವಾದ ವಿಮಾನಗಳಿಂದಲೂ ಶಿಖರಗಳಿಂದಲೂ ಕೂಡಿದ ಕಾಶೀ ರೀತಿಯ ಔತ್ತರೇಯ ಶಿಲ್ಪ (೩) ಚದುರ ಆಕೃತಿಗಳಿಂದ ಅನೇಕ ಅಂತಸ್ತುಗಳಾಗಿ ಗಾತ್ರಕ್ಕೆ ಸಮನಾದ ಎತ್ತರದಿಂದ ಕೂಡಿ ಗೋಪುರ ಶಿಖರ ಕಲಶಗಳಿಂದಿರುವ ಶ್ರೀರಂಗ, ಮಧುರೆ ರೀತಿಯ ದ್ರಾವಿಡ ಶಿಲ್ಪ (೪) ದ್ರಾವಿಡ ಶಿಲ್ಪಕ್ಕಿಂತ ಸ್ವಲ್ಪ ಭಿನ್ನವಾಗಿ ಕಾಣುವ ಕರ್ಣಾಟಕ ರೀತಿಯ ಹೊಯ್ಸಳ, ಚಾಲುಕ್ಯ ಶಿಲ್ಪ (೫) ತಾಜ್ ಮಹಲ್, ಗೋಲ್ ಗುಂಬಜ್ ಮೊದಲಾದ ಮುಸ್ಲಿಂ ರೀತಿಯ ಮಿಶ್ರ ಶಿಲ್ಪ. ಇವುಗಳಲ್ಲಿ ಮಿಶ್ರ ಶಿಲ್ಪವನ್ನು ಬಿಟ್ಟರೆ ಮಿಕ್ಕ ಶಿಲ್ಪಗಳು ದೇವತಾಮೂರ್ತಿಯನ್ನೇ ಪ್ರಧಾನವಾಗಿ ಉಳ್ಳ ದೇವಾಲಯಗಳು. ಬೌದ್ಧರೀತಿಯ ವಿಗ್ರಹಗಳ ತಾಲಮಾನ ಪ್ರಮಾಣಗಳು ಒಂದು ಸಂಘಟಿತ ರೀತಿಯಲ್ಲಿ ಒಂದೇ ಪ್ರಮಾಣಕ್ಕೆ ಒಳಪಟ್ಟಂತೆ ಇರುತ್ತವೆ. ಮಿಕ್ಕ ಔತ್ತರೇಯ, ದ್ರಾವಿಡ, ಕರ್ಣಾಟಕ ಶಿಲ್ಪಗಳಲ್ಲಿ ದೇವತಾಮೂರ್ತಿಗಳು ಒಂದೇ ದೇವಾಲಯದಲ್ಲಿಯೇ ಭಿನ್ನ ಭಿನ್ನ ತಾಲಪ್ರಮಾಣಗಳುಳ್ಳವುಗಳಾಗಿ ಕಾಣ ಸಿಕ್ಕುತ್ತವೆ. ಏಕ ತಾಲದಿಂದ ದಶತಾಲಗಳವರೆಗೂ ಉತ್ತಮ, ಮಧ್ಯಮ, ಅಧಮಗಳಾಗಿ ಸುಮಾರು ೩೦ ವಿಧ ತಾಲಪ್ರಮಾಣಗಳು ಈ ಮೂರ್ತಿ ನಿರ್ಮಾಣಕ್ಕೆ ಆಧಾರವಾಗಿವೆ. ಕನ್ನಡ ನಾಡಿನಲ್ಲಿ ದೊರೆಯುವ ಚಾಲುಕ್ಯ ಶಿಲ್ಪವು, ಔತರೇಯಕ್ಕೂ ದ್ರಾವಿಡಕ್ಕೂ ಮಧ್ಯಮವೆನಿಸಬಹುದಾದ ಅದರೂ ದ್ರಾವಿಡ ಶಿಲ್ಪವನ್ನೇ ಸ್ವಲ್ಪ ಭಿನ್ನರೀತಿಯಿಂದ ಹೋಲುವ ಜಕ್ಕಣಾಚಾರ್ಯ (ದಕ್ಷಿಣಾಚಾರ್ಯ) ಶಿಲ್ಪವೆಂದು ಪರಿಗಣಿಸಲ್ಪಟ್ಟಿದೆ. ಮೇಲ್ಕಂಡ ಮುಖ್ಯ ಐದು ವಿಧಗಳಲ್ಲದೆ ಗುಹಾಶಿಲ್ಪವೆಂದು ಮತ್ತೊಂದು ವಿಧವನ್ನು ಕಲ್ಪಿಸಬಹುದು. ಇದು ಬೌದ್ಧ ಹಿಂದೂ ಮತಗಳಿಗೆ

ಮಾಧ್ಯಮಿಕವಾದ ಅಂಶಗಳನ್ನೊಳಗೊಂಡದ್ದು. ಕಲ್ಲಿನಲ್ಲಿ ಕೊರೆದು ಮಾಡಿರುವ ಆ ರೀತಿಯ ಅನೇಕ ದೇವಾಲಯಗಳು ಬಾದಾಮಿ, ಅಜಂತ, ಎಲ್ಲೋರ, ಮೇಲುಕೋಟೆ ಇತ್ಯಾದಿ ಸ್ಥಳಗಳಲ್ಲಿ ಇವೆ. ಬೌದ್ಧ ರೀತಿಗಿಂತ ಭಿನ್ನವಾದ ಆದರೆ ಬೌದ್ಧ ರೀತಿಯಂತೆಯೇ ತೋರಿಬರುವ ಜೈನ ದೇವಾಲಯಗಳೂ ಇರುತ್ತವೆ. ಈ ವಿಧದ ಎಲ್ಲ ಶಿಲ್ಪಗಳನ್ನೂ ಶಾಸ್ತ್ರೀಯವಾಗಿ ನಿರೂಪಿಸುವ ಶಿಲ್ಪಶಾಸ್ತ್ರಗಳು ಬಹುಶಃ ಅಪರೂಪ. ಆದರೂ ಔತ್ತರೇಯ, ಕರ್ಣಾಟಕ, ದ್ರಾವಿಡ ರೀತಿಯ ಶಿಲ್ಪಗಳನ್ನು ವಿವರಿಸುವ ಶಿಲ್ಪ ಶಾಸ್ತ್ರಗಳು ಈಗ ಹೆಚ್ಚು ಕಾಣಸಿಕ್ಕುವುವು. ಅವುಗಳಲ್ಲಿಯೂ ಈಗ ಪ್ರಾಚೀನ ಶಿಲ್ಪಶಾಸ್ತ್ರಗಳೆಂದು ತಿಳಿದಿರುವುವವೇ ಸುಮಾರು ೧೦೦೦ ಅಥವಾ ೧೫೦೦ ವರ್ಷಗಳಿಗಿಂತ ಈಚೆಗೆ ರಚಿತವಾದವುಗಳು. ಅವು ಔತ್ತರೇಯ, ಕರ್ಣಾಟಕ, ದ್ರಾವಿಡವೆಂಬ ಬೇರೆ ಬೇರೆ ರೀತಿಯನ್ನು ಸಮರ್ಥಿಸದೆ ಕೇವಲ ತಾಲಮಾನ ಪ್ರಮಾಣ ರೀತಿಗಳನ್ನು ವಿವರಿಸುವುದರಿಂದ ಎಲ್ಲ ದೇಶಿಯ ಶಿಲ್ಪಗಳಿಗೂ ಆ ಶಿಲ್ಪಶಾಸ್ತ್ರಗಳನ್ನು ಅನ್ವಯಿಸಬಹುದಾಗಿದೆ.

ಈಗ ನಮಗೆ ದೊರೆತಿರುವ ಶಿಲ್ಪಶಾಸ್ತ್ರಗ್ರಂಥಗಳು ಸುಮಾರು ೩೦೦. ಇವು ಸಂಖ್ಯೆಯಲ್ಲಿ ಇಷ್ಟು ಹೆಚ್ಚಾಗಿ ತೋರಿದರೂ ಗುಣದಲ್ಲಿಯೂ, ಶಿಲ್ಪರಚನಾ ವಿಧಾನದಲ್ಲಿಯೂ ಸುಮಾರು ೩೦ ರಿಂದ ೪೫ ವರೆಗೆ ಹೆಚ್ಚು ಯೋಗ್ಯತೆ ಯುಳ್ಳವು. ಅವುಗಳಲ್ಲಿಯೂ ಕಾಶ್ಯಪ ಶಿಲ್ಪ, ಮಾನಸಾರ, ಸಮರಾಂಗಣ ಸೂತ್ರಧಾರ, ಶಿಲ್ಪರತ್ನ, ಮಯಶಾಸ್ತ್ರ, ವಾಸ್ತುಶಾಸ್ತ್ರ, ವಿಶ್ವಕರ್ಮಸಂಹಿತಾ, ಶಿಲ್ಪಸಕಲಾಧಿಕಾರ, ಕಾಶ್ಯಪ ಸಂಹಿತಾ, ರಾಜವಲ್ಲಭ ಇತ್ಯಾದಿ ಪ್ರಾಚೀನ ಗ್ರಂಥ ಗಳು ಗೃಹ ನಿರ್ಮಾಣ, ರಾಜಗೃಹ ನಿರ್ಮಾಣ, ಯಂತ್ರಶಾಲಾ ನಿರ್ಮಾಣ, ನಗರ ನಿರ್ಮಾಣ, ದೇವಾಲಯ ದೇವತಾಮೂರ್ತಿ ನಿರ್ಮಾಣ, ಇತ್ಯಾದಿ ವಿಷಯಗಳನ್ನು ಆಮೂಲಾಗ್ರವಾಗಿ ತಿಳಿಸುತ್ತವೆ. ಮಿಕ್ಕವುಗಳು ನೃತ್ಸಂಗ್ರಹ, ರತ್ನಪರೀಕ್ಷಾ, ಸ್ವರ್ಣಪರೀಕ್ಷಾ ಇತ್ಯಾದಿ ಸಾಮಾನ್ಯ ವಿಷಯಗಳನ್ನು ಹೇಳುವುದರಲ್ಲಿಯೇ ಕೃತಕೃತ್ಯವಾಗಿವೆಯಾದರೂ ಶಿಲ್ಪಶಾಸ್ತ್ರಾನುಯಾಯಿಗೆ ಅವೂ ಅವಶ್ಯಕವೇ ಆಗಿವೆ. ಹೀಗೆ ಶಿಲ್ಪಶಾಸ್ತ್ರಗಳು ಬಹುಮುಖವಾಗಿ ಪ್ರವರ್ಧಮಾನಕ್ಕೆ ಬಂದು ದೇವತಾಮೂರ್ತಿ ನಿರ್ಮಾಣವನ್ನು ಒಂದು ವ್ಯವಸ್ಥಿತಮಟ್ಟಕ್ಕೆ ನಿಲ್ಲಿಸಿವೆ.

ಹೀಗೆ ದೇವತಾಮೂರ್ತಿ ನಿರ್ಮಾಣ, ದೇವಾಲಯನಿರ್ಮಾಣಗಳು ನಡೆದ ನಂತರ ಆ ದೇವಾಲಯದಲ್ಲಿ ಪ್ರತಿಷ್ಠಿತವಾದ ದೇವತಾಮೂರ್ತಿಯ ಪೂಜಾ ಕಾರ್ಯಗಳನ್ನು ನಡೆಸಲು ಮೊದಮೊದಲು ಶಿಲ್ಪಿಗಳೇ ನಿಯೋಜಿತರಾಗಿದ್ದರು.

ಶಿಲ್ಪಿನಾ ನಿರ್ಮಿತೋ ದೇವೋ ಸ್ಥಾಪಿತೋ ತೇನ ವೈಪುನಃ ।
ಪೂಜಿತಶ್ಶಿಲ್ಪಿನಾ ಚೈವ ತಸ್ಮಾತ್ತದ್ದೇವತಾಂಗತಃ ॥
ದೇವರೂಪಧರಶ್ಶಿಲೀ ಶಿಲ್ಪೀದೇವೇತಿಚೋಚ್ಯತೇ ।
ವಿಜ್ಞೇಯಾದೇವತಾಮೂರ್ತಿಃ ಶಿಲ್ಪಕಾರ್ಯೇಣ ಶಿಲ್ಪಿನಾ ॥

(ಶಿಲ್ಪರತ್ನಾಕರ)

ಕಾಲಾನಂತರ ಶಿಲ್ಪಿಗಳು ಶಿಲ್ಪನಿರ್ಮಾಣ ಕಾರ್ಯಭಾರದಿಂದ ಆ ಕೆಲಸವನ್ನು ಇತರರಿಗೆ ವಹಿಸಿದರು. ಆ ಪೂಜಾಕಾರ್ಯಗಳನ್ನು ವಹಿಸಿಕೊಂಡವರು ಅರ್ಚಕರೆನಿಸಿಕೊಂಡು ಆಯಾ ದೇವತೆಗಳ ನಿತ್ಯಪೂಜಾವಿಧಿ, ಶಿಲ್ಪಶಾಸ್ತ್ರ, ಆಗಮ-ಶಾಸ್ತ್ರ ವಿಶೇಷಪೂಜಾವಿಧಿ, ಉತ್ಸವವಿಧಿ ಮುಂತಾದು ಪ್ರತಿಷ್ಠಾಶಾಸ್ತ್ರವೂ ವನ್ನು ವಿವರಿಸುವ ಆಗಮಶಾಸ್ತ್ರಗಳನ್ನು ರಚಿಸಿಕೊಂಡರು. ಇತ್ತೀಚಿಗೆ ಪ್ರತಿಯೊಂದು ಮತದವರೂ ಶಿಲ್ಪಿಗಳಿಂದ ತಮಗಾಗಿ ದೇವಾಲಯಗಳನ್ನು ಕಲ್ಪಿಸಿಕೊಂಡು ಮೂರ್ತಿಗಳನ್ನು ನಿರ್ಮಿಸಿಕೊಂಡು ಪೂಜೆಯನ್ನು ಮಾಡಿಕೊಳ್ಳಲು ಪ್ರಾರಂಭಿಸಿದರು. ಇದರಿಂದ ಆಗಮಶಾಸ್ತ್ರಗಳಲ್ಲಿ ಕೂಡ ಶೈವ, ವೈಷ್ಣವ, ಶಾಕ್ತೇಯಾದಿ ಭೇದಗಳುಂಟಾದವು. ಹೀಗೆ ಆಗಮಶಾಸ್ತ್ರಗಳನ್ನು ರಚಿಸಿದವರು ಕೆಲವರು, ತಮ್ಮ ಅಧಿಕಾರವ್ಯಾಪ್ತಿಯನ್ನು ಮೀರಿ ತಮ್ಮ ತಮ್ಮ ದೇವತೆಗಳು ಹೀಗೆ ಹೀಗೇ ಇರಬೇಕೆಂಬುದಾಗಿ ತಾವೇ ನಿರ್ಧರಿಸಿಕೊಂಡೂ, ಅವುಗಳ ಪ್ರತಿಷ್ಠಾಪನೆಯನ್ನೂ ತಾವೇ ನಡೆಸಿಕೊಳ್ಳಬೇಕೆಂದೂ, ಪ್ರಯೋಗಾನುಭವಕ್ಕೆ ಹೊಂದದ ಶಿಲ್ಪಶಾಸ್ತ್ರಗಳನ್ನು ರಚಿಸಿಕೊಂಡರು. ಇಂತಹ ಶಿಲ್ಪಶಾಸ್ತ್ರಗಳು ಮೂರ್ತಿನಿರ್ಮಾಣ ಕ್ರಮಕ್ಕೆ ಅಯೋಗ್ಯವೆನಿಸಿವೆ. ಪ್ರತಿಷ್ಠಾಪನಾ ವಿಧಿಯಲ್ಲಿ ಕಂಡುಬರುವ ಇತರ ಹೋಮಾದಿಕಾರ್ಯಗಳನ್ನು ತಾವು ನಡೆಸಿಕೊಳ್ಳಬಲ್ಲವರಾದವರೂ ಅಷ್ಟಬಂಧನ, ಪ್ರಾಣಪ್ರತಿಷ್ಠಾಪನ, ನೇತ್ರೋನ್ಮೀಲನಾದಿ ಕಾರ್ಯಗಳನ್ನು ಶಿಲ್ಪಿಗಳಿಂದಲ್ಲದೆ ಇತರರಿಂದ ನಡೆಸಲು ಸಾಧ್ಯವಿಲ್ಲವಾಗಿ ಈವರ ಆ ವಾಕ್ಯಗಳು ಅಸಾರ್ಥಕಗಳಾಗಿವೆ. ಕಾಶ್ಯಪಶಿಲ್ಪ

ಕಾರರೂ ವಾತುಲಾಗಮಕರೂ ಈ ವಿಷಯದಲ್ಲಿ ನಿಸ್ಸಂದಿಗ್ಧವಾಗಿ ವಿಶ್ವಕರ್ಮ ಬ್ರಹ್ಮಕುಲೋತ್ಪನ್ನರಾದ ಶಿಲ್ಪಿಗಳೇ ದೇವತಾಮೂರ್ತಿನಿರ್ಮಾಣಕ್ಕೂ, ಮೂರ್ತಿ ಪ್ರತಿಷ್ಠಾಕಾರ್ಯಕ್ಕೂ ಅರ್ಹರೆಂಬುದಾಗಿ ತೀರ್ಮಾನಿಸಿ, ಇತರರು ಆ ಕಾರ್ಯಕ್ಕೆ ಅನರ್ಹರೆಂದೂ ಸೂಚಿಸಿರುತ್ತಾರೆ. ಹೀಗೆ ಶಿಲ್ಪಿಗಳು ದೇವಾಲಯ ನಿರ್ಮಾಣ, ದೇವಾತಾಮೂರ್ತಿ ನಿರ್ಮಾಣ, ಅವುಗಳ ಪ್ರತಿಷ್ಠಾಕಾರ್ಯಗಳು ಇವುಗಳನ್ನು ನಡೆಸಿ ಲೋಕದಲ್ಲಿ ಈ ವಿಧ ಕಾರ್ಯಕ್ರಮಗಳಿಂದ ಜನತೆಗೆ ಸಾತ್ವಿಕ ಮನೋ ಭಾವವು ಬೆಳೆಯಲು ಶ್ರಮಿಸಿರುತ್ತಾರಲ್ಲದೆ ಶಿಲ್ಪಕರ್ಮವು ಅಭಿವೃದ್ಧಿ ಹೊಂದಲು ಶಿಲ್ಪಶಾಸ್ತ್ರಗಳನ್ನು ರಚಿಸಿ ಲೋಕೋಪಕಾರವನ್ನು ಮಾಡಿರುತ್ತಾರೆ.

ಈ ಶಿಲ್ಪಶಾಸ್ತ್ರಗಳು ಪ್ರಯೋಗ ನಿಪುಣರಾದ ಪ್ರಾಚೀನ ಶಿಲ್ಪ ವಿದ್ವಾಂಸರುಗಳಿಂದಲೇ ರಚಿತಗಳಾಗಿದ್ದರೂ ಅವುಗಳಲ್ಲಿ ಕೆಲವನ್ನು ಮುದ್ರಿಸಿ ಪ್ರಕಾಶಕ್ಕೆ ತಂದವರು ಕೆಲವರು ಶಿಲ್ಪಿಗಳಲ್ಲದ ಇತರರು. ಆ ಇತರರು ವಿದ್ವಾಂಸರಾಗಿದ್ದರೂ ಕೇವಲ ಭಾಷಾವಿದರಾಗಿ ಶಿಲ್ಪಶಾಸ್ತ್ರಾನಭಿಜ್ಞರೂ, ಶಿಲ್ಪಪಾರಿಭಾಷಿಕನಿಪುಣರಲ್ಲದವರೂ ಆದುದರಿಂದ ಕೇವಲ ಭಾಷಾಶುದ್ಧಿ ಯನ್ನು ಮಾಡುತ್ತೇವೆಂದು ಆ ಗ್ರಂಥಗಳನ್ನು ಪರಿಷ್ಕರಿಸ ಹೋಗಿ ತಮಗೆ ತಿಳಿದ ರೀತಿಯಲ್ಲಿ ಪರಿಷ್ಕರಿಸಿಬಿಟ್ಟು, ಪ್ರಯೋಗವಿದರಾದ ಶಿಲ್ಪಿಗಳ ಸಹಾಯ ವನ್ನು ತೆಗೆದುಕೊಳ್ಳದೆ ಅವರನ್ನು ಗೀರ್ವಾಣಭಾಷಾವಿದರಲ್ಲವೆಂದೂ ವಿಸ್ಮರಿಸಿ, ಒಂದೊಂದು ಶಬ್ದಕ್ಕೆ ಒಂದು ಅಥವಾ ಎರಡು ಮೂರು ಅರ್ಥಗಳನ್ನು ಕೊಡುತ್ತಿದ್ದ ಶಬ್ದಗಳನ್ನು ವ್ಯಾಕರಣ ಶುದ್ಧವಾಗಿ ಮಾಡುತ್ತೇವೆಂದು ಬದಲಾಯಿಸಿ, ಶಿಲ್ಪಪಾರಿಷಿಕ ಶಬ್ದಗಳ ವೈಜ್ಞಾನಿಕ ಅರ್ಥವನ್ನು ತಿಳಿಯ ಲಾರದೆ ಶಿಲ್ಪಶಬ್ದಗಳನ್ನೇ ಕೆಡಿಸಿಬಿಟ್ಟು ಪ್ರಯೋಗಕ್ಕೂ ಅರ್ಥವಿವರಣೆಗೂ ಅನುಪಯುಕ್ತವಾಗುವಂತೆ ಮಾಡಿರುತ್ತಾರೆ. ಶಿಲ್ಪಶಾಸ್ತ್ರಗಳನ್ನುದ್ಧರಿಸುತ್ತೇ ವೆಂದು ಹೇಳಿಕೊಂಡು ಸರ್ಕಾರದ ಸಹಾಯ ದ್ರವ್ಯಗಳ ಆರ್ಜನೆಗಾಗಿ ಶಿಲ್ಪ ಶಾಸ್ತ್ರಗಳನ್ನು ಪ್ರಕಟಿಸಿದ ಅವರು ಲೋಕೋಪಕಾರಕ್ಕೆ ಬದಲಾಗಿ ಲೋಕಾಪ ಕಾರವನ್ನೇ ಮಾಡಿರುವರೆಂದರೆ ಅದೇನೂ ಕಟುವಾದ ಟೀಕೆಯಾಗಲಾರದು.

ಇನ್ನು ಶಿಲ್ಪಿಗಳು ತಮ್ಮಲ್ಲಿರುವ ಅನೇಕ ಶಿಲ್ಪ ಗ್ರಂಥಗಳನ್ನು ಹೊರತೆಗೆ ಯದೆ, ಸರ್ಕಾರದ ಸಹಾಯ ದ್ರವ್ಯವನ್ನು ಹೊಂದಿಯಾದರೂ ಪ್ರಕಟಿಸಬೇಕೆಂದು

ಅಪೇಕ್ಷೆಪಡದೆ ಹೋಗಿ ಶಿಲ್ಪಶಾಸ್ತ್ರಗಳನ್ನು ಹಾಳು ಮಾಡಿರುತ್ತಾರೆ. ಶಿಲ್ಪವಂಶಜರಾದ ಕೆಲವರು ತಮ್ಮಲ್ಲಿದ್ದ ಉದ್ಧಾಮ ಗ್ರಂಥಗಳ ಯೋಗ್ಯತೆಯನ್ನರಿಯದೆ ಅವುಗಳನ್ನು ವಿದ್ವಾಂಸರಾದ ಶಿಲ್ಪಿಗಳಿಗೆ ತೋರಿಸದೆ ನಾಲ್ಕಾರು ಕಾಸುಗಳಿಗೆ ಮಾರಿಬಿಟ್ಟು ಹಲವು ಶಿಲ್ಪಶಾಸ್ತ್ರಗಳನ್ನು ಕೊಂದುಬಿಟ್ಟಿರುತ್ತಾರೆಂದು ಹೇಳಲು ದುಃಖವಾಗುತ್ತದೆ. ಪ್ರಯೋಗಾನುಭವ, ಶಾಸ್ತ್ರಾನುಭವಗಳನ್ನು ಹೊಂದಿರುವ ಶಿಲ್ಪಿಗಳಾದರೋ ತಮ್ಮ ಮಕ್ಕಳು ಅಥವ ಸಂಬಂಧಿಕರುಗಳಿಗೆ ಮಾತ್ರವೇ ಕಲಿಸಹೋಗಿ ಅವರು ಬುದ್ಧಿವಂತರಾಗದೇ ಹೋದರೂ ಅವರ ಜತೆಯಲ್ಲಾದರೂ ಮೇಧಾವಂತರಾದ ಇತರ ಸ್ವಮತೀಯರಿಗಾದರೂ ಕಲಿಸಬೇಕೆಂಬ ಅಪೇಕ್ಷೆಯಿಂದ ದೂರರಾಗಿ ಶಿಲ್ಪಶಾಸ್ತ್ರಗಳನ್ನು ಬೆಳೆಯಗೊಡಿಸದೇ ಹೋಗಿರುತ್ತಾರೆ. ಸರ್ಕಾರದ ಸಹಾಯ ಸೌಲಭ್ಯ, ಸ್ವಯಮೇವ ಶಿಲ್ಪಶಾಸ್ತ್ರಾಭಿರುಚಿ—ಪಾಂಡಿತ್ಯಗಳನ್ನು ದೈವಕೃಪೆಯಿಂದ ಹೊಂದಿದ್ದರೂ ಕೆಲವು ಅಹಂಮಾನ್ಯ ಶಿಲ್ಪಿಗಳು ಇತರ ವೇದಶಾಸ್ತ್ರ ಪುರಾಣಗಳನ್ನು ಪ್ರಕಟಿಸುವ, ಅದರಿಂದ ಗೌರವ ಸಂಪಾದಿಸುವ ಹವ್ಯಾಸಕ್ಕೆ ಬಲಿಬಿದ್ದು, ಶಿಲ್ಪಿಶಾಸ್ತ್ರಗಳ ಪ್ರಕಟನೆಯನ್ನು ಕಡೆಗಣಿಸಿರುತ್ತಾರೆಂದರೆ, ವೇದಶಾಸ್ತ್ರ ಪುರಾಣಗಳಲ್ಲಿ ಕಂಡುಬರುವ ಶಿಲ್ಪ ವಿಷಯಗಳನ್ನಾದರೂ ಪ್ರಕಟಿಸಲು ಅವರಿಗೆ ಮನಸ್ಸು ಬಾರದೆಂದರೆ, 'ಯೇನಕೇನ ಪ್ರಕಾರೇಣ'ವಾದರೂ ಶಿಲ್ಪಶಾಸ್ತ್ರಗಳನ್ನು ಹೊರಗಿಟ್ಟ ಆ ಇತರ ವಿದ್ವಾಂಸರೇ ಶಿಲ್ಪಿಗಳ ಕೃತಜ್ಞತೆಗೆ ಪಾತ್ರರೆಂದು ಕೊಂಡಾಡಬೇಕಾಗಿದೆ.

ಶಿಲ್ಪಿಗಳೂ ಶಿಲ್ಪ ಶಾಸ್ತ್ರಗಳನ್ನು ಪರಿಷ್ಕರಿಸಿರುತ್ತಾರೆ. ಸರ್ಕಾರದವರೂ ಮಾಡಬೇಕಾಗಿದೆ. ಶಿಲ್ಪಶಾಸ್ತ್ರಗಳನ್ನು ಪ್ರಸಿದ್ಧ ಶಿಲ್ಪಿಗಳಿಂದ ಪರಿಷ್ಕರಿಸಿ ಪ್ರಕಟಿಸುವ ವ್ಯವಸ್ಥೆ ಆಗಬೇಕಾಗಿದೆ. ಇನ್ನೂ ಪ್ರಕಟಿಸಬೇಕಾದ ಗ್ರಂಥಗಳು ತಾಳಪತ್ರಗಳಲ್ಲಿ ಬೇಕಾದಷ್ಟಿವೆ. ಶಿಲ್ಪ ವಿದ್ವಾಂಸರೂ ಶಿಲ್ಪಿಗಳೂ, ಈ ಕಡೆ ಗಮನ ಕೊಟ್ಟು ಶಿಲ್ಪ ಸಂಘಗಳನ್ನೇರ್ಪಡಿಸಿ, ಆ ಮೂಲಕ ಶಿಲ್ಪಗ್ರಂಥಗಳನ್ನು ಪ್ರಕಟಿಸಲು ಮನಸ್ಸು ಮಾಡಿದರೆ ನಿಜವಾಗಿಯೂ ಶಿಲ್ಪಶಾಸ್ತ್ರವು ಅಭಿವೃದ್ಧಿಯನ್ನು ಹೊಂದುವುದು.

ಜ್ಞಾನ-ಕರ್ಮಗಳ, ಬ್ರಹ್ಮಜ್ಞಾನ-ಶಿಲ್ಪಜ್ಞಾನಗಳ ಸಮನ್ವಯ ಸಂಗಮಗಳಿಂದ ಭಾರತದೇಶವು ಪೂರ್ವಕಾಲದಲ್ಲಿ ಭೌತಿಕವಸ್ತು ಸಮೃದ್ಧಿಯಿಂದಲೂ

ಆಧ್ಯಾತ್ಮ ಜ್ಞಾನ ಸಂಪನ್ನತೆಯಿಂದಲೂ ಈ ಲೋಕದ ಇತರ ಎಲ್ಲ ದೇಶಗಳಿಗಿಂತಲೂ, ಸಕಲ ವಿಧದಲ್ಲೂ ಮುಂದಿದ್ದು ಲೋಕಕ್ಕೆ ಉಪದೇಶಮಾಡುವ, ಅದರಂತೆ ನಡೆದು ತೋರುವ ಆಚಾರ್ಯನ ಸ್ಥಾನದಲ್ಲಿ ಇತ್ತು. ಇಂದು ಈ ದೇಶವು ಹೀನಸ್ಥಿತಿಯಲ್ಲಿರಬೇಕಾದರೆ ಆತ್ಮಜ್ಞಾನನನ್ನು ಕೇವಲ ಅಟ್ಟಕ್ಕೇರಿಸಿ, ಶಿಲ್ಪಜ್ಞಾನವನ್ನು ಅವಿದ್ಯೆಯೆಂದು ಅಲ್ಲಗಳೆದುದರ ಫಲವೇ. ಸ್ವಾತಂತ್ರ್ಯ ಸಾಧಿತವಾಗಿರುವ ಈ ಕಾಲದಲ್ಲಿ ವೇದಕಾಲದಲ್ಲಿಯೂ ಉಪನಿಷತ್ಕಾಲದಲ್ಲಿಯೂ ಇದ್ದಂತೆ ಶಿಲ್ಪವೂ ಆತ್ಮವಿದ್ಯೆಯೂ ಸಮಾನ ಸಮಾನವಾಗಿ ಕೈಜತೆಗೆ ಕೈಗೂಡಿಸಿ ಶ್ರಮಿಸಿದಲ್ಲದೆ ದೇಶಾಭಿವೃದ್ಧಿಯಾಗದು. ಒಬ್ಬರನ್ನೊಬ್ಬರು ಹೀಗಳೆಯುವ, ನಿಂದಿಸುವ ನಾವೇ ಶ್ರೇಷ್ಠರೆಂದು ದುರಹಂಕಾರದ ಕುತ್ಸಿತ ದೃಷ್ಟಿಯನ್ನು ಬಿಟ್ಟು, ಶಿಲ್ಪವೂ ಆತ್ಮವಿದ್ಯೆಯೂ ಒಂದಕ್ಕೊಂದು ಹೊಂದಿಕೊಂಡಿರುವ ಸಂಬಂಧವನ್ನು ವೇದದ ಮೂಲಕ ತಿಳಿದುಕೊಂಡು ದೇಶಾಭಿವೃದಿಗಾಗಿ ಸರ್ವರೂ ಕರ್ಮಪ್ರವೃತ್ತರಾಗಬೇಕು.

ಆ ವೇದಶಿಲ್ಪಿಗಳ ವಂಶಜರು ತಾವೆಂದೆನಿಸಿಕೊಂಡ ಇಂದಿನ ಶಿಲ್ಪಿಗಳು ಎಷ್ಟು ಜನ ವಿರಾಟ್ ಶಿಲ್ಪದ ಜ್ಞಾನವನ್ನು ಪಡೆದವರಾಗಿದ್ದಾರೆ? ಅಂದು ನಡೆಸಿದಂತಹ ಕೃತಿಗಳನ್ನು ನಿರ್ಮಿಸಿ ಲೋಕವನ್ನು—ಬೇಡ ಭಾರತವನ್ನು—ಮುನ್ನಡೆಯಿಸುವವರಾಗಿದ್ದಾರೆ? ಆದರೂ ಈ ಹೊತ್ತೂ ವೈಶ್ವಕರ್ಮಣ ಶಿಲ್ಪಿಗಳ ಸಹಕಾರವಿಲ್ಲದೆ ದೇಶದ ಕೈಗಾರಿಕೆಗಳೂ, ಕಲಾಕೃತಿಗಳೂ ಅಭಿವರ್ಧಿಸಲಾರವು. ಆ ವೇದೋಕ್ತಶಿಲ್ಪದ ಪಾಂಡಿತ್ಯದ ಅಭಾವವಿದ್ದರೂ ಇಂದೂ ಆ ಮಹಾಮಹಿಮರ ರಕ್ತದಪರಂಪರೆಯನ್ನು ತಮ್ಮ ಧಮನಿಗಳಲ್ಲಿ ತುಂಬಿಕೊಂಡು ಅವಕಾಶ ಸಿಕ್ಕಿದರೆ, ಪ್ರೋತ್ಸಾಹ ದೊರೆತರೆ, ವಿದ್ಯಾಭ್ಯಾಸ ಕೊಡಿಸಿದರೆ, ವಾತಾವರಣ ಕಲ್ಪಿಸಿದರೆ ಆ ಕೌಶಲ್ಯವನ್ನು ತೋರಿಸಿ ವಸ್ತುಗಳನ್ನು ನಿರ್ಮಿಸಬಲ್ಲ ಕೆಲಸಗಾರರೂ, ಮೇಧಾವಿಗಳೂ ಇಂದೂ ದೊರೆಯುವರು. ಸರ್ಕಾರದವರು ತಮ್ಮ ದೇಶಾಭಿವೃದ್ಧಿಕಾರಕ ವಿದ್ಯಾಗಾರಗಳಲ್ಲಿ ಪರಂಪರಾನುಗತ ಶಿಲ್ಪಿಗಳಿಗೆ ಪ್ರೋತ್ಸಾಹಕೊಡದೇ ಹೋದರೆ, ಪ್ರಾಚೀನ ಶಿಲ್ಪಗ್ರಂಥಗಳನ್ನು ಬೆಳಕಿಗೆ ತರದೇ ಹೋದರೆ, ಸಂಸ್ಕೃತ ಶಾಲೆಗಳಲ್ಲಿ ಶಿಲ್ಪಶಾಸ್ತ್ರಾಧ್ಯಯನಗಳಿಗೆ ಅವಕಾಶ ಕಲ್ಪಿಸದೇ ಹೋದರೆ, ಸ್ವಾತಂತ್ರ್ಯ ಪ್ರಾಪ್ತಿಗಾಗಿ ಶ್ರಮಿಸಿದ ಹೋರಾಟವು

ವ್ಯರ್ಥವಾಗಿ, ದೇಶವು ತನ್ನ ಹೆಜ್ಜೆ ಹಿಂದಕ್ಕಿಟ್ಟಂತಾಗುವುದು. ಸರಕಾರದ ಮನಸ್ಸನ್ನು ತಿರುಗಿಸಲು ಶಿಲ್ಪಿಗಳಿಗೆ ರಾಜಕೀಯ ವರ್ಚಸ್ಸು ಸಾಲದಿರಬಹುದು. ದೇಶದ ಜನತೆಯು ಪಕ್ಷಪಂಗಡ ಜಾತಿ ಕೋಮುಗಳ ರಾಜಕೀಯ ಕೈವಾಡ ವನ್ನು ಮಾತ್ರ ಲಕ್ಷಿಸುವುದನ್ನು ಬಿಟ್ಟು, ದೇಶ ಹಿತಕ್ಕೆ ಅವಸರವಾದ ಶಿಲ್ಪಾಭ್ಯುದಯಕ್ಕೆ ತಕ್ಕ ಚಳುವಳಿಯನ್ನು ನಡೆಸಿದರೆ ದೇಶೋನ್ನತಿಯು ಮುಂಬೆ ಳಗು ಕಾಣುವಂತಾಗುವುದು. ಇದನ್ನು ಎಲ್ಲರೂ ಮನನ ಮಾಡಬೇಕು. ☆

ಜಗತ್ಪೂಜ್ಯ ಭೌವನ ಮಹರ್ಷಿಗಳು

ಏತೇನ ಹವಾ ಐಂದ್ರೇಣ ಮಹಾಭಿಷೇಕೇಣ ಕಶ್ಯಪೋ ವಿಶ್ವ ಕರ್ಮಾಣಂ ಭೌವನ ಮಭಿಷಿಷೇಚ। ತಸ್ಮಾದು ವಿಶ್ವಕರ್ಮಾ ಭೌವನಸ್ಸಮಗ್ರಂ ಸರ್ವತಃ ಪೃಥಿವೀಂ ಜಯನ್ ಪರಿಯಾಶ್ವೈ ರುಚ ಮೇಧ್ಯೈರೀಜೇ ॥

— ಐತರೇಯ ಬ್ರಾಹ್ಮಣ ೮:೨೧:೨

'ವಿಶ್ವಕ್ಕೆಲ್ಲಾ ದೇವನೊಬ್ಬನೇ. ಎಲ್ಲರ ಹೃದಯಗಳಲ್ಲೂ ಆತನೊಬ್ಬನೇ ಪ್ರಕಾಶಿಸುತ್ತಾನೆ. ಸೃಷ್ಟಿ-ಸ್ಥಿತಿ-ಲಯ ತಿರೋಧಾನ-ಅನುಗ್ರಹಗಳೆಲ್ಲವೂ ಆತನ ಇಚ್ಛಾಮಾತ್ರದಿಂದ ನಡೆಯುತ್ತವೆ. ಆತನೊಬ್ಬನೇ ಸರ್ವೋತ್ತಮನೂ, ಸರ್ವಶಕ್ತನೂ, ಸರ್ವಪಿತನೂ ಆಗಿರುತ್ತಾನೆ. ಆತನೇ ವಿಶ್ವಕರ್ಮನು' ಎಂದು ಘೋಷಿಸಿ ವೈಶ್ವಕರ್ಮ್ಯ ಸಿದ್ಧಾಂತವನ್ನು ಉಪದೇಶಿಸುವ ವಿಶ್ವಕರ್ಮ ಸೂಕ್ತದ ದ್ರಷ್ಟಾರರಾದ ಮಹಾತ್ಮಾ ಭೌವನ ಋಷಿಗಳನ್ನು ಸರ್ವಋಷಿಗಳೂ ವಿಶ್ವಕರ್ಮ ಶಬ್ದಾರ್ಥದಿಂದ ಪ್ರತಿಪಾದಿತನಾದ ಭಗವಂತನೇ ಪ್ರತ್ಯಕ್ಷರೂಪದಿಂದ ಬಂದಿದ್ದಾ ನೆಂದು ತಿಳಿದು ಭಕ್ತಿಯಿಂದ ನಮಸ್ಕರಿಸಿ ಅವರಿಗೆ ಮಹಾಭಿಷೇಕವನ್ನು ಮಾಡಿ, ಋಷಿ ಮಹಾಸಂಘಕ್ಕೆ ಅಧ್ಯಕ್ಷರನ್ನಾಗಿ ಮಾಡಿಕೊಂಡು ಗೌರವಿಸಿದರು. ಅನಂತರ ಭೌವನ ಮಹರ್ಷಿಗಳು ಈ ವಿಶ್ವವನ್ನು ಸಮಗ್ರ ಪರ್ಯಟನಮಾಡಿ ಅನೇಕ ದೇವತಾ ಪೂಜಕರಾದ ಇತರ ವಿರುದ್ಧ ವಾದಗಳನ್ನೆಲ್ಲಾ ಜಯಿಸಿ ವೇದಸೂಕ್ತ ಗಳಿಗೆ ಸಮನ್ವಯಾರ್ಥವನ್ನುಂಟುಮಾಡಿ, ವೈಶ್ವಕರ್ಮಣ ತತ್ತ್ವಜ್ಞಾನದರ್ಶನ ವನ್ನು ಸ್ಥಾಪಿಸಿ, ಜ್ಞಾನಯಜ್ಞರೂಪವಾದ ವೈಶ್ವಕರ್ಮ್ಯ ಮಹಾಯಾಗವನ್ನು ವೈಭವಪೂರ್ಣವಾಗಿ ಅನುಷ್ಠಿಸಿದರು.

※ ಕಾ. ವಾ. ಆಚಾರ್ಯ

೬

ಶಿಲ್ಪ, ಚಿತ್ರಕಲೆ

ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆಗಳಂತಹ ಪಳಿಯುಳಿಕೆಗಳ ರಾಷ್ಟ್ರದ ಇತಿಹಾಸ ನಿರ್ಮಾಣ, ಸಂಸ್ಕೃತಿಯ ಅಧ್ಯಯನಗಳಿಗೆ ಪ್ರಧಾನ ಸಾಧನ ಸಾಮಾಗ್ರಿಗಳು. ಈ ಪಳಿಯುಳಿಕೆಗಳಿಲ್ಲದ ರಾಷ್ಟ್ರದ ಇತಿಹಾಸ, ಸಂಸ್ಕೃತಿಯ ವೈಭವಗಳು ಶೂನ್ಯದಲ್ಲಿರುತ್ತವೆ. ಈ ದೃಷ್ಟಿಯಿಂದ ಭಾರತ ಸಂಪದ್ಭರಿತ. ವಿಶ್ವದಲ್ಲೇ ಸರಿಸಾಟಿ ಇಲ್ಲದಷ್ಟು ಭಾರತೀಯ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆಗಳು ವೈಭವೋಪೇತ.

ಭಾರತೀಯ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆಗಳಿಗೆ ಹುಟ್ಟುಕಲಾಕಾರರಾದ ವಿಶ್ವಬ್ರಾಹ್ಮಣರ ಮಹತ್ವಪೂರ್ಣ ಕೊಡುಗೆ ಏನು ?

ಭಾರತೀಯ ಇತಿಹಾಸದ ಪ್ರಥಮಘಟ್ಟ ಸಿಂಧೂ ಸಂಸ್ಕೃತಿಯ ಮೊಹೆಂಜದಾರೋ, ಹರಪ್ಪ, ರೂಪರ್, ಲೋತಾಲ್‌ಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಗಳ ಕಲಾಕಾರರನ್ನು ಇತಿಹಾಸಕಾರರು ಗಮನಿಸಿಲ್ಲ.

ವಾಸ್ತುಶಿಲ್ಪ

ಆದರೆ ಕರ್ನಾಟಕ ಖ್ಯಾತ ಸಂಶೋಧಕ ಶಂ. ಬಾ. ಜೋಶಿ ಅವರ—ಸೈಂಧವ ಸಂಸ್ಕೃತಿ ವೇದ ಪೂರ್ವ ಕಾಲದ್ದು ಎಂಬುದು ನಿಜವಿದ್ದರೆ ಅಲ್ಲಿಯ ವಾಸ್ತುಶಿಲ್ಪ, ಕುಶಲಕಲೆಗಳನ್ನು ಸೃಜಿಸಿದ ಆ ವಿಶ್ವಕರ್ಮರು ಈ ದೇಶಿಯರು ಆಗಿರಬೇಕು' (ಹಾಲುಮತದರ್ಶನ) — ಈ ಮಾತು ಸಂಶೋಧಕರಿಗೊಂದು ದಿಕ್ಸೂಚಿ.

ಪುರಾಣ-ಇತಿಹಾಸ ಪ್ರಸಿದ್ಧ ತಕ್ಷಶಿಲಾ ಹೆಸರೇ (ತಕ್ಷ=ಬಡಗಿ, ಶಿಲೆ=ಕಲ್ಲು) ವಿಶ್ವಬ್ರಾಹ್ಮಣರಿಗೆ ಸಂಬಂಧಿಸಿದಂತಿದೆ. ಈ ಊಹೆಯನ್ನು 'ಅಂಗಿರಾ

ಋಷಿ ಬಿತ್ತಿದ ವಿದ್ಯಾಂಕುರದ ಬೀಜ ಮುಂದೆ ತಕ್ಷಶಿಲೆಯಲ್ಲಿ ವಿಶ್ವವಿದ್ಯಾಲಯದ ರೂಪದಲ್ಲಿ ಬೃಹತ್ ವೃಕ್ಷವಾಗಿ ಬೆಳೆಯಿತು'—ಮಹಾಪಂಡಿತ ರಾಹುಲ ಸಾಂಕೃಂತ್ಯಾಯನರ ಈ ಮಾತು ಪುಷ್ಟೀಕರಿಸುತ್ತದೆ (ನೋಡಿ: ಓಲ್ಗಾ-ಗಂಗಾ). ಭೃಗು-ಆಂಗಿರಸರೆಲ್ಲ ವಿಶ್ವಬ್ರಾಹ್ಮಣ ಮಹಾಶಿಲ್ಪಿಗಳು ಎಂಬುದು ವೇದದ ಮಾತು.

'ವಿಶ್ವಬ್ರಾಹ್ಮಣ ಶಿಲ್ಪಿ (ಪ್ರತ್ನಸ ಗೋತ್ರದವರು) ಸಂತಾನ ಗ್ರೀಸ್ ದೇಶದಲ್ಲಿ ತಂಗಿ, ಗ್ರೀಕ್ ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆ, ಸಂಸ್ಕೃತಿಗೆ ಕಾರಣ ಪುರುಷರಾದರು' ಇದು ಆಲ್ಫ್ರೆಡ್ ಎಡ್ವರ್ಡ್ ರಾಬರ್ಟ್ಸನ್‌ರ ವಿಚಾರಧಾರೆ.

ಅಜಂತಾ, ಎಲ್ಲೋರ, ಎಲಿಫೆಂಟಾದಿಂದ ಭುಬನೇಶ್ವರ, ಕೊಣಾರ್ಕ, ಖಜುರಹೋ, ದ್ವಾರಕಾ, ಪುರಿ, ಜಯಪುರ, ಅಮರಾವತಿ, ತಂಜಾವೂರು, ಮಹಾಬಲಿಪುರಂಗಳ ಮಹಾ ವಾಸ್ತುಶಿಲ್ಪ ಕೇಂದ್ರಗಳ ಕರ್ತೃಗಳನ್ನು ಶೋಧಿಸುತ್ತ ಸಾಗಬೇಕು. ಆಗ, ಶಿಲ್ಪಿಗಳ ದರ್ಶನವಾದೀತು. ಎಲ್ಲೋರದಲ್ಲಿ 'ವಿಶ್ವಕರ್ಮ' ಗುಹೆಯೇ ಒಂದು ಪ್ರತ್ಯೇಕವಾಗಿವೆ. ಎಲ್ಲೋರದ ಕೈಲಾಸನಾಥ ದೇವಾಲಯ 'ವಿಶ್ವಕರ್ಮ' ನಿರ್ಮಿತ ಎಂಬ ಶಾಸನವಿದೆ. ಭಾರತದಲ್ಲಿರುವ ಎಲ್ಲಾ ದೇವಾಲಯ ಶಿಲ್ಪವೂ ವಿಶ್ವಬ್ರಾಹ್ಮಣ ಶಿಲ್ಪಿಗಳ ಕಾಣಿಕೆ. ಈ ವಿಷಯದಲ್ಲಿ ಸಂಶಯಕ್ಕೆ ಅವಕಾಶವೇ ಇಲ್ಲ. ಪುರಿಯ ಜಗನ್ನಾಥ ದೇವಾಲಯ, ಕಾಶಿಯ ವಿಶ್ವೇಶ್ವರ ದೇವಾಲಯ 'ವಿಶ್ವಕರ್ಮ' ನಿರ್ಮಿತ. ಜಯಪುರ ಮಹಾನಗರ ನಿರ್ಮಾಣದ ವಾಸ್ತುಶಿಲ್ಪಿ ವಿಶ್ವಬ್ರಾಹ್ಮಣ ದಲಾರಾಂಜೀ . ಹೀಗೆ ಅನೇಕ ಶಿಲ್ಪಿಗಳು ಇತಿಹಾಸದಲ್ಲಿ ಅಡಗಿದ್ದಾರೆ.

ಕರ್ನಾಟಕದಲ್ಲಂತೂ ಸಾಕಷ್ಟು ಸಂಶೋಧನಾಕಾರ್ಯ ನಡೆದು, ಹಲವು ಶಿಲ್ಪಾಚಾರ್ಯರ ಹೆಸರುಗಳು ಬೆಳಕಿಗೆ ಬಂದಿವೆ. ಕರ್ನಾಟಕದ ವಾಸ್ತುಶಿಲ್ಪ, ಶಿಲ್ಪ; ಚಿತ್ರ ಇತ್ಯಾದಿ ಕಲೆಗಳೆಲ್ಲ ವಿಶ್ವಕರ್ಮ ಬ್ರಾಹ್ಮಣ ಶಿಲ್ಪಿಗಳ ನಿರ್ಮಾಣ ಎಂಬ ನಿರ್ಧಾರಕ್ಕೆ ಬಂದಿದ್ದಾರೆ ಡಾ. ಸಾಲೆತ್ತೊರೆ, ಡಾ. ಶಂ. ಬಾ. ಜೋಶಿ, ಡಾ. ಎಂ. ಚಿದಾನಂದ ಮೂರ್ತಿ, ಹುಲ್ಲೂರು ಶ್ರೀನಿವಾಸ ಜೋಯಿಸರು ಮುಂತಾದ ಸಂಶೋಧಕರು.

ಐಹೊಳೆ, ಪಟ್ಟದಕಲ್ಲುಗಳಲ್ಲಿ ನರಸೊಬ್ಬ (ಇಂತಹ ವಾಸ್ತುವಿದ್ಯಾಕುಶಲಿ ಹಿಂದೆಯೂ ಇರಲಿಲ್ಲ ; ಮುಂದೆಯೂ ಇರಲಾರರು ಐಹೊಳೆ ಶಾಸನ), ಗುಂಡ (ವಿಕ್ರಮಾದಿತ್ಯ ಸತ್ಯಾಶ್ರಯನ ರಾಣಿ ಲೋಕಮಹಾದೇವಿಯು ಕಟ್ಟಿಸಿದ ಪಟ್ಟದ ಕಲ್ಲಿನ ಲೋಕೇಶ್ವರ ದೇವಾಲಯದ ಈ ಮಹಾಶಿಲ್ಪಿಗೆ ಮೂರು ಬಾರಿ ಉತ್ಸವ ಮಾಡಿಸಿ, ಪಟ್ಟಕಟ್ಟಿ 'ತ್ರಿಭುವನಾಚಾರಿ' ಎಂಬ ಬಿರುದು ಕೊಟ್ಟರು-ಪಟ್ಟದಕಲ್ಲು ಶಾಸನ), ಸರ್ವಸಿದ್ಧಿ ಆಚಾರ್ಯ (ವಾಸ್ತುಶಿಲ್ಪ, ಪುರ ನಿರ್ಮಾಣದಲ್ಲಿ ಮಹಾನಿಪುಣ —ಈ ಮೂವರು ಮಹಾಶಿಲ್ಪಿಗಳ ಹೆಸರುಗಳು ಬರುತ್ತವೆ. ಜಕ್ಕ (ಕರ್ನಾಟಕದೊಳಗಿನ ಅಮರ ಶಿಲ್ಪಿ ಜಕ್ಕಣ - ಶಂ. ಬಾ. ಜೋಶಿ) ಡಂಕಣ ಹೆಸರೇ ಇಲ್ಲ. ಶಿಲಾಶಾಸನಗಳಲ್ಲೂ ಇಲ್ಲ ಎನ್ನುತ್ತಾರೆ ಕೆಲವರು. ಶಿಲ್ಪಿ ಜಕ್ಕಣಾಚಾರ್ಯರ ಕುರಿತಾಗಿಯೇ ಸುಮಾರು ಮುನ್ನೂರರಷ್ಟು ವೈವಿಧ್ಯಮಯ ರಂಜಕ ಕಥೆಗಳು ಕರ್ನಾಟಕದಲ್ಲಿ ಪ್ರಚಾರದಲ್ಲಿವೆ-ಎಂದೊಮ್ಮೆ ಡಾ. ಮುದ್ದಾಚಾರ್ಯರು ಹೇಳಿರುವುದುಂಟು. ವ್ಯಕ್ತಿ ಇಲ್ಲದೆ ಇಷ್ಟೊಂದು ಕಥೆಗಳು ಹೇಗೆ ಹುಟ್ಟಿಕೊಂಡವು ? ತುರುವೇಕೆರೆಯ ಮೂಲಸಂಕೇಶ್ವರ ದೇವಾಲಯದ ತಳ ಹದಿಯ ಮೇಲಿರುವ ಒಂದು ಶಾಸನದಲ್ಲಿ ಜಕ್ಕಣ್ಣ ಮತ್ತು ಈಶ್ವರ ಎಂಬ ಹೆಸರು ಕಂಡುಬರುತ್ತದೆ. ಬಹುಶಃ ಜಗತ್ಪ್ರಸಿದ್ಧನಾದ ಜಕಣಾಚಾರಿಯು ಈತನೇ ಇರಬಹುದು ಎನ್ನುತ್ತಾರೆ ಡಾ. ಎನ್. ಅನಂತಗಾರಂಚಾರ್, ಶ್ರೀ ಸಿ. ಕೆ. ವೆಂಕಟರಾಮಯ್ಯ ಹಾಗೂ ಡಾ|| ಎಂ. ವಿ. ಶೇಷಾದ್ರಿ ಅವರು. ರಾಮಾನುಜಾಚಾರ್ಯರನ್ನು ರಕ್ಷಿಸಿದ ಮಹಾರಾಜನೀತಿಜ್ಞ. ಮಹಾ ಶಿಲ್ಪಿ ಜಕ್ಕಣಾಚಾರ್ಯರ ಜೀವನವನ್ನು ಆಧರಿಸಿದ ಕೃತಿಗಳೂ ಸಿ. ಕೆ. ನಾಗರಾಜಾರಾವ್, ಡಾ|| ಸಾ. ಶಿ. ಮರುಳಯ್ಯ, ಡಾ|| ಕೊಂಡೂರು ವೀರರಾಘವಾಚಾರ್ಯರು ಅವರ ಲೇಖನಿಗಳಿಂದ ಮೂಡಿಬಂದು ಜನಪ್ರಿಯವಾಗಿವೆ.

ಅಪೂರ್ವ ಮೇಧಾಸಂಪತ್ತಿನ ವಾಸ್ತುಶಿಲ್ಪಿಗಳನ್ನು ಕಾಲಗರ್ಭದಿಂದ ಎತ್ತಿ ಅವರ ಚರಿತ್ರೆಯನ್ನು ಇನ್ನೂ ಬೆಳಕಿಗೆ ತರಬೇಕಾಗಿದೆ.

ವಿಶ್ವ ಬ್ರಾಹ್ಮಣರಲ್ಲಿ ಶಿಲ್ಪ ಪ್ರತಿಭೆ ಇಂದಿಗೂ ಬತ್ತದೆ ಉಳಿದಿರುವುದಕ್ಕೆ ಇವರು ದೃಷ್ಟಾಂತ ಗುಜರಾತದ ವಿಶ್ವ ವಿಖ್ಯಾತ ಸೋಮನಾಥ ದೇವಾಲಯ,

ಗುಜರಾತದ ಇತರ ದೇವಾಲಯಗಳ ಪುನರ್ನಿರ್ಮಾಣ ಕರ್ತೃ ಮಹಾಶಿಲ್ಪಿ ಪದ್ಮಶ್ರೀ ಪ್ರಭಾಶಂಕರ ಸೋಮಪುರ್, ಕಾವ್ಯ, ನೃತ್ಯ, ಸಂಗೀತ, ಶಿಲ್ಪ ಹೀಗೆ ಸಕಲಕಲಾ ಪ್ರವೀಣ, ಪ್ರಾಚೀನ ಸ್ಥಪತಿಗಳನ್ನು ಸ್ಮರಣೆಗೆ ತರುವ ವಯೋವೃದ್ಧ ಗೌರೀಶಂಕರ ಸ್ಥಪತಿ, ವಿವೇಕಾನಂದ ದೇವಾಲಯದ ವಾಸ್ತುಶಿಲ್ಪಿ, ತಮಿಳು ನಾಡಿನ ಹಲವು ದೇವಾಲಯಗಳ ಪುನರ್‌ನಿರ್ಮಾಣಗಳ ಕರ್ತೃ (ಬೆಂಕಿಯಿಂದ ಸುಟ್ಟು ಹೋದ ಕೇರಳದ ಗುರುವಾಯೂರು ದೇವಾಲಯವನ್ನು ಪುನಃ ನಿರ್ಮಿಸಿದವರು) ಎಸ್. ಕೆ. ಆಚಾರ್ಯ, ಕೆನ್ಯಾದ ಸುಪ್ರಸಿದ್ಧ ಆಧುನಿಕ ವಾಸ್ತುಶಿಲ್ಪಿ ಭಾರತದ ರಾಮುಗರ್ಯಾ ವಿಶ್ವಕರ್ಮ. ಆಂಧ್ರದ ಆಸ್ಥಾನ ಶಿಲ್ಪಿಗಳಾದ ಶ್ರೀಗಣಪತಿಸ್ಥಪತಿ, ಮಹಾಬಲಿಪುರಂನ ಶಿಲ್ಪಕಲಾಶಾಲೆಯ ಶ್ರೀಗಣಪತಿ ಸ್ಥಪತಿ ಇತ್ಯಾದಿ.

'ದೇವಾಲಯ - ದೇವ ಪ್ರತಿಮೆಯ ನಿರ್ಮಾಣ, ಪ್ರತಿಮಾ ಪ್ರತಿಷ್ಠೆ, ಅರ್ಚನೆ-ಇವೆಲ್ಲ ವಿಶ್ವಬ್ರಾಹ್ಮಣರ ಪಾಲಿನ ಕರ್ತವ್ಯ. ಸ್ಥಪತಿ, ರಥಕಾರ,

ಮೂರ್ತಿ ಶಿಲ್ಪ

ವಿಶ್ವಕರ್ಮ ಮತ್ತು ಕಮ್ಮಾಲರು ಎಂದು ಕರೆದುಕೊಳ್ಳುವ ಈ ವಿಶಿಷ್ಟ ಜಾತಿಯವರೇ ಮೂರ್ತಿಶಿಲ್ಪ ಮಾಡುವುದು ಪರಂಪರಾಗತ ದಂಧೆಯಾಗಿದ್ದು ಶಾಸ್ತ್ರಗಳೂ ಇದನ್ನೇ ಸಾರುತ್ತವೆ'—ಇದು ಓ. ಸಿ. ಗಂಗೂಲಿಯವರು ಅಭಿಪ್ರಾಯ.

ಶಿಲ್ಪಗಳನ್ನು ಹಿಂದೂ, ಬೌದ್ಧ, ಜೈನ, ಕ್ರೈಸ್ತ, ಮುಸ್ಲಿಂ ಎಂದು ಇತಿಹಾಸಕಾರರು ಪ್ರತ್ಯೇಕಿಸಿದರೂ ಅವೆಲ್ಲದರ ನಿರ್ಮಾಣ ಶಕ್ತಿಯಾಗಿ ನಿಂತದ್ದು ಭಾರತೀಯ ಶಿಲ್ಪಿಯಾದ ವಿಶ್ವಬ್ರಾಹ್ಮಣ ಶಿಲ್ಪಿಯೇ. ಈ ಶಿಲ್ಪಗಳ ಸಂಖ್ಯೆ ಅಗಣಿತ. ಅವುಗಳ ಮನಮೋಹಕ ಸೌಂದರ್ಯವನ್ನು ವರ್ಣಿಸುವುದರಲ್ಲಿ ಕವಿ ಕೋಗಿಲೆಗಳು, ಸೌಂದರ್ಯ ರಸಾಸ್ವಾದನಾಪ್ರಿಯರು ತಣಿದಿಲ್ಲ; ದಣಿದಿಲ್ಲ. ಕರುಣೆ, ತ್ಯಾಗ, ಪ್ರೇಮ ತೇಜಸ್ಸುಗಳ ಮಹಾಪೂರದ ಮೂರ್ತಿರೂಪಗಳಾಗಿ ಈ ಶಿಲ್ಪಿಗಳು ರೂಪಿಸಿರುವ ಮೂರ್ತಿಶಿಲ್ಪಗಳು ಕಂಗೊಳಿಸುತ್ತಾ ಮಾನವತೆಯಿಂದ ದೇವತ್ವಕ್ಕೆ ಏರಿಸುವ ಮಹಾಚೈತನ್ಯಗಳಾಗಿ ಇಂದಿಗೂ ಎಲ್ಲರ ಆದರ್ಶ ಆರಾಧ್ಯಗಳಾಗಿವೆ.

ಭಾರತದ ಪ್ರತಿಮಾ ಶಿಲ್ಪಿಗಳು ಹೆಸರುಗಳು ಬಹಳಷ್ಟು ಬೆಳಕಿಗೆ ಬಂದಿಲ್ಲ. ಕರ್ನಾಟಕದ ಕೆಲವು ಪ್ರತಿಮಾ ಶಿಲ್ಪಿಗಳನ್ನು ಇಲ್ಲಿ ಸ್ಮರಿಸಬಹುದು : ಬೇಲೂರು ಶಿಲಾಬಾಲಿಕೆಯರ ಶಿಲ್ಪಿಗಳು ರೂವಾರಿ ಚಿಕ್ಕ ಹಂಪ (ಕೃತಿ: ವಸಂತ ಕುಮಾರಿ) ಬಳ್ಳಿಗಾವೆ ರೂವಾರಿ ದಾಸೋಜ (ಕೃತಿ : ಸುಂದರಿ ಮತ್ತು ಕಪಿ) ದಾಸೋಜನ ಮಗ ಚಾವಣ (ಬೇಡತಿ), ನಾಗೋಜ (ಕೃತಿ : ಲಾಸ್ಯ ನೃತ್ಯ), ಹಳೇಬೀಡಿನ ಶಿಲ್ಪಿಗಳು ಕೇದಾರೋಜ, ಕಾಳಿದಾಸ, ರೇವೋಜ, ಕಾರ್ಕಳ ಗೋಮಟ ಶಿಲ್ಪಿ ಶಂಭುಕಲ್ಕುಡ ಮತ್ತಿತರರು.

ಗಡಿಯಾರ, ದೂರದರ್ಶಕ ಯಂತ್ರ (ಶಿಲ್ಪ ಸಂಹಿತಾ), ವಿಮಾನ (ರಾಮಾಯಣ, ಶಿಲ್ಪಸಂಹಿತಾ, ಭೋಜ ಪ್ರಬಂಧ), ಹಡಗು (ರಾಮಾಯಣ, ಮಹಾಭಾರತ)ಗಳ ವಿಶ್ವದಲ್ಲೆ ಪ್ರಥಮ ಸಂಶೋಧಕರು ವಿಶ್ವಬ್ರಾಹ್ಮಣರು. ಜಹಜುಗಳನ್ನು, ನೌಕೆಗಳನ್ನು ನಿರ್ಮಿಸಿ ನಡೆಸುತ್ತಿದ್ದ **ಧೀಮಾನ್** ಬ್ರಾಹ್ಮಣರು ಇಂದೂ ಇರುವರು. ಇವರು ವಿಶ್ವಬ್ರಾಹ್ಮಣರಾಗಿದ್ದು ಈ ವೃತ್ತಿಯ ಉಲ್ಲೇಖ ವೇದಗಳಲ್ಲೂ ದೊರೆಯುತ್ತದೆ. ಸಿಂಧೂ ಸಂಸ್ಕೃತಿಯ ಕಾಲದಲ್ಲಿ ಸೃಷ್ಟಿಗೊಂಡ ಎತ್ತಿನಗಾಡಿ, ಏತ ಎಷ್ಟೊಂದು ಸರಳ ಯತ್ರಗಳು ! ಎತ್ತಿನಗಾಡಿ ಯಂತೂ ಯಾವ ರೀತಿಯಲ್ಲೂ ನವೀಕರಿಸಲಾಗದಷ್ಟು ಪರಿಪೂರ್ಣ ಯಂತ್ರ ಶಿಲ್ಪ. ಸರಳ ಯಂತ್ರಗಳ ಸೃಷ್ಟಿ ಅದ್ಭುತ ಪ್ರತಿಭಾವಂತರಿಂದ ಮಾತ್ರವೇ ಸಾಧ್ಯ.

ಕೀರ್ತಿಶೇಷ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರು, ಶ್ರೀ ಕರಸ್ಥಲ ನಾಗಾಲಿಂಗ ಸ್ವಾಮಿಮಠದ ಪೀಠಾಧ್ಯಕ್ಷರಾಗಿರುವ ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಮಹಾದೇವ ಸ್ವಾಮಿಗಳವರು, ರಾಷ್ಟ್ರಪ್ರಶಸ್ತಿ ವಿಜೇತರಾದ ಶಿಲ್ಪಿ ಶ್ರೀನಿವಾಸಾಚಾರ್ಯರು, ಶಿಲ್ಪಿ ಎನ್. ಜಿ. ನೀಲಕಂಠಾಚಾರ್ಯರು, ಪರಮೇಶ್ವರಾ ಚಾರ್ಯರು, ಮೈಸೂರು ಶ್ರೀ ಬಸವಣ್ಣನವರು, ಅಪ್ಪುಕುಟ್ಟನ್ ಅಚಾರ್, ವಿಶ್ವಂ, ನರಸಿಂಹಾಚಾರ್ಯ, ವಿಧಾನಸೌಧದ ಕಲಶ, ಸಿಂಹದ ಲೋಹಶಿಲ್ಪಿ ಶಿಲ್ಪಿ ಶ್ಯಾಮಾ ಚಾರ್ಯರು, ಅಣ್ಣಾಮಲೈ ಆಚಾರ್ಯರು, ಕನ್ಯಾಕುಮಾರಿಯಲ್ಲಿರುವ ವಿವೇಕಾ ನಂದರ ಬೃಹತ್ ಮೂರ್ತಿಯ ಶಿಲ್ಪಿ ಪ್ರೊ. ಲಕ್ಷಣ ನಾರಾಯಣ ಸೋನಾ

ಪಡೇಕರ್, ಆನಂದ ಶಿಲ್ಪಕಲಾನಿಕೇತನದ ನಾಗೇಶ್ ಎಸ್. ಶಿಲ್ಪಿ (ಪೂನಾ), ಗದಗದ ಸೋಮಣ್ಣ ಶಿಲ್ಪಿಗಳು, ಬಾಗಲಕೋಟೆಯ ಜಿ. ಡಿ. ಮಯಾಚಾರ್ಯರು ಹೀಗೆ ಪಟ್ಟಿ ಬೆಳೆಯುತ್ತದೆ. ಇವರೆಲ್ಲಾ ಸಮಕಾಲೀನ ಪ್ರತಿಭಾವಂತ ಕಲಾ ಪುಂಜಗಳು.

ಚಿತ್ರಕಲೆ

ವಿಶ್ವದಲ್ಲೇ ಎಣೆ ಇಲ್ಲದ ಸೌಂದರ್ಯದ ಖನಿ ಎಂದು ಇತಿಹಾಸಕಾರರ ಮುಕ್ತ ಪ್ರಶಂಸೆಗೆ ಪಾತ್ರವಾದ ಪ್ರಬುದ್ಧ ಅಜಂತಾ ಕೃತಿಗಳು, ಅಜಂತಾ ಶೈಲಿಯ ಸಿಂಹಳದ ಸೈಗೀರಿಯ ಕೃತಿಗಳು ವಿಶ್ವ ಬ್ರಾಹ್ಮಣ ಶಿಲ್ಪಿಗಳಿಂದ ರಚಿತವಾದ ಕೃತಿಗಳು ಸುಪರ್ಣಸ ಗೊತ್ರದ ಶಿಲ್ಪಿಗಳದು. ಬಹು ಕಲಾಕೌಶಲ್ಯಗಳಿಂದೊಡಗೂಡಿದ ಚಿನ್ನ, ಬೆಳ್ಳಿ, ಆಭರಣ, ಕಿರೀಟ, ಸಿಂಹಾಸನ ತಯಾರಿ, ದೇಗುಲಗಳ ಭಿತ್ತಿ ಚಿತ್ರ ಅಲಂಕಾರ ಕಾರ್ಯ. ಹತ್ತಾರು ಕಲಾಕಾರರು ಜೊತೆಗೂಡಿ ನಿರ್ಮಿಸುವ ಚಿತ್ರಗಳಲ್ಲಿ ತಮ್ಮ ಹೆಸರುಗಳನ್ನು ಕಲಾವಿದರು ಲೇಖಿಸದೆ ಉಳಿದರು. ಮೊಗಲರ ಕಾಲದಲ್ಲಿ ಪರ್ಷಿಯನ್ ಚಿತ್ರಗಾರರಿಗೇ ಹೆಚ್ಚಿನ ಗೌರವ ಸಂದಾಯವಾಗಿದ್ದರೂ, ಬಹುಸಂಖ್ಯಾತರಾಗಿ ಅವರ ಕೆಲಸ ಸುಲಲಿತ ಗೊಳಿಸಿ ಪಾಲುದಾರರಾಗಿದ್ದವರು ಭಾರತೀಯ ಶಿಲ್ಪಿಗಳೇ. ಜೈನ, ಬೌದ್ಧ (ಓಲೆಗರಿ ಗ್ರಂಥದ ಚಿತ್ರಗಳು), ರಜಪೂತ, ಕಾಂಗ್ರಾ, ಬಸ್ಲೋಲಿ, ದೋಗ್ರಾ, ಕೃಷ್ಣಗಾರ್, ಕರ್ನಾಟಕ, ದಕ್ಖಣ ಹೀಗೆ ಹಲವು ಪ್ರೌಢ ಶೈಲಿಯ ಲಕ್ಷಗಟ್ಟಲೆ ಕೃತಿಗಳಿದ್ದರೂ, ಕಲಾವಿದರ ಹೆಸರು ಕೇವಲ ಕೆಲವು ಮಾತ್ರ ಕಂಡು ಬರುತ್ತವೆ. ಸ್ವರ್ಣ ಶಿಲ್ಪಿ-ಚಿತ್ರಗಾರರ ಹೆಸರುಗಳು ಅಲ್ಲೊಂದು, ಇಲ್ಲೊಂದು ಸಿಗುತ್ತವೆ.

ಚಂಬಾ ಶೈಲಿಯಲ್ಲಿ 'ಭಾಗವತ ಪುರಾಣ'ಕ್ಕೆ ಚಿತ್ರಗಳನ್ನು ರಚಿಸಿದ ಕಲಾಕಾರ ತ್ರಕಾನ್ ಲಹರು. ಪರ್ವತ ಪ್ರದೇಶದಲ್ಲಿ ಚಿತ್ರಕಲೆ, ಶಿಲಾಶಿಲ್ಪ, ಕಾಷ್ಠಶಿಲ್ಪದಲ್ಲಿ ನಿರತ ಕಲಾಕಾರ 'ತ್ರಕಾನ್'. 'ತಕ್ಷನ್' ಎಂಬ ಶಬ್ದದ ಪ್ರಾದೇಶಿಕ ರೂಪ 'ತ್ರಕಾನ್' ಇರಬೇಕು.

ಪ್ರಾಚೀನ ಚಿತ್ರಕಲಾ ಪ್ರತಿಭೆಗೆ ಸಾಕ್ಷಿ ಭೂತರಾಗಿ ಆಧುನಿಕ ಕಾಲದ ಪದ್ಮಶ್ರೀ ಎಸ್. ಎನ್. ಸ್ವಾಮಿ, ಎಸ್. ಎನ್. ಸ್ವಾಮಿ, ಕ್ಯಾಲೆಂಡರ್ ಕಲೆಯ

ಕ್ರಾಂತಿಪುರುಷ ಎಸ್. ಎಂ. ಪಂಡಿತ್, ವಿ. ಕೆ.ಬರಾಸ್ಕರ್, ಕಾಳಿದಾಸ ಡಿ. ಪತ್ತಾರ್, ಆಧುನಿಕ ಶೈಲಿಯಲ್ಲೂ ಉನ್ನತ ಪಟ್ಟವನ್ನೇರುತ್ತಿರುವ 'ಸುಧಾ'ದ ಚಂದ್ರನಾಥ ಆಚಾರ್ಯ, ಎನ್. ಮರಿಶಾಮಚಾರ್ ಇಲ್ಲಿ ಸ್ಮರಣೆಗೆ ಯೋಗ್ಯರು. ಮಾನವೀಯ ಮೌಲ್ಯಗಳ ಪರಮೋಚ್ಚ ಕೃತಿಗಳು ಇವರವು.

ಇಷ್ಟೇ ಅಲ್ಲ, ಭಾರತೀಯ ಚಲನಚಿತ್ರರಂಗದ ದಾದಾಪಾಲ್ಕೆಯ ಸಮಕಾಲೀನ, 'ಹಲವು ಪ್ರಥಮ'ಗಳಿಗೆ ಪ್ರಸಿದ್ಧರಾದ ವಿ. ಶಾಂತರಾಮರಂತಹ ನಿರ್ದೇಶಕರನ್ನು ಸಿದ್ಧಗೊಳಿಸಿದ, ಚಲನಚಿತ್ರ ನಿರ್ದೇಶಕ, ಛಾಯಾ ಚಿತ್ರಗ್ರಾಹಕ ಬಾಬುರಾವ್ ಪೈಂಟರ್, ಸಂಗೀತಗಾರರು (ಚಲನಚಿತ್ರನಟ-ಎಂ.ಕೆ ತ್ಯಾಗರಾಜ ಭಾಗವತರ್, ಹೊನ್ನಪ್ಪ ಭಾಗವತರರ ಗುರು ಸಂಬಂಧ ಮೂರ್ತಿ ಭಾಗವತರು, ಪದ್ಮಶ್ರೀ ಜೈಕಿಶನ್), ನಟರು (ಅದ್ಭುತ ಪ್ರತಿಭಾವಂತ ಚಲನಚಿತ್ರನಟಿ ಪಿ. ಕನ್ನಾಂಬ, ಎಂ. ವಿ. ರಾಜಮ್ಮ, ಎಸ್. ವಿ. ಸುಬ್ಬಯ್ಯ, ಹಾಸ್ಯನಟ ತಂಗವೇಲು), ಸಾಹಿತಿಗಳು (ಶಿಲ್ಪ ಜ್ಯೋತಿಷ್ಯ, ಖಗೋಳ ಶಾಸ್ತ್ರ, ಧರ್ಮ, ತತ್ತ್ವ ಶಾಸ್ತ್ರದ ಪ್ರಾಚೀನ ಗ್ರಂಥಕಾರರು, ಕರಸ್ಥಲನಾಗಲಿಂಗಸ್ವಾಮಿ, ಪಾಶ್ಚಾತ್ಯ ರಾಷ್ಟ್ರಗಳಿಗೆ ಭಾರತೀಯ ಕಲೆ, ಧರ್ಮ, ಸಂಸ್ಕೃತಿಗಳ ಔನ್ನತ್ಯವನ್ನು ತಮ್ಮ ಉದ್ಗ್ರಂಥಗಳ ಮೂಲಕ ತೋರಿದ ವಿಶ್ವಜ್ಞಾನ, ವಿಶ್ವಕಲೆ, ವಿಶ್ವಧರ್ಮ, ವಿಶ್ವಸಂಸ್ಕೃತಿಗಳ ಜ್ಞಾನ ಕುಂಡ ವಿಶ್ವದ ಮಹಾಮೇಧಾವಿ ಡಾ. ಆನಂದ ಕುಮಾರಸ್ವಾಮಿ, ಮಹಾವಿದ್ವಾಂಸ ಬಾಳಾಶಾಸ್ತ್ರಿ, ಹಲವು ಶಿಲ್ಪ ಗ್ರಂಥಗಳ ಕರ್ತೃ ರಾವ್‌ಸಾಹೇಬ್ ಕೆ. ವಿ. ವಾಜೆ, ಹಲವು ಅಜ್ಞಾತ ಕವಿಗಳನ್ನೂ, ಬ್ರಹ್ಮಪುರಿಯ ಸಂಸ್ಕೃತಿಯನ್ನು ಬೆಳಕಿಗೆ ತಂದ, ಪ್ರೊ. ಕೆ. ಜಿ. ಕುಂದಣಗಾರ್) — ಹೀಗೆ ನಾನಾರೂಪದಿಂದ ವಿಶ್ವಬ್ರಾಹ್ಮಣರು ಸಲ್ಲಿಸಿರುವ ಸೇವೆ ಅಪಾರ; ಅಪೂರ್ವ.

ವಿಶ್ವಬ್ರಾಹ್ಮಣರ ಬಹುಮುಖ ಪ್ರತಿಭೆಯ ಬಗ್ಗೆ ಆಳವಾದ ಸಂಶೋಧನೆ, ಅಧ್ಯಯನ, ಗ್ರಂಥರಚನಾ ಕಾರ್ಯ ತೀವ್ರ ಗತಿಯಿಂದಾಗ ಬೇಕಷ್ಟೆ.

★

ಸ್ಥಾಪತ್ಯ ವೇದಾಚಾರ್ಯ
❋ ಪೆದಪಾಟಿ ನಾಗೇಶ್ವರರಾವ್, ಎಂ.ಎ.,

೭

ನಮ್ಮ ಶಿಲ್ಪ

ಶೀಲ ಸಮಾಧೌ ಎಂಬ ಧಾತುವಿನಿಂದ ಶಿಲ್ಪಂ ಎಂಬ ಪದವು ನಿಷ್ಪನ್ನಗೊಂಡಿದೆ. ನೈಪುಣ್ಯದೊಂದಿಗೆ ಮಾಡುವ ಕೆಲಸ ಎಂದು ಅದರ ಅರ್ಥವಾಗಿರುವುದರಿಂದ ಸಾಹಿತ್ಯದಲ್ಲಿ ಇದನ್ನು ಪರಿಪರಿವಿಧಗಳಲ್ಲಿ ಬಳಸಲಾಗುವುದು—ಕವಿತಾ ಶಿಲ್ಪ, ವಾಕ್ ಶಿಲ್ಪ ಇಲ್ಲಿಯ ಮುಖ್ಯ ಉದ್ದೇಶವು ಆಯಾ ವ್ಯಾಪಾರಗಳಲ್ಲಿಯ ನೈಪುಣ್ಯತೆಯನ್ನು ಸೂಚಿಸುವುದು. ಆದರೂ 'ಶಿಲ್ಪ' ಎಂದೊಡನೆಯೇ ಶಿಲೆಗಳಲ್ಲಿ ಬಿಡಿಸಿದ—ಮಹಾನೈಪುಣ್ಯದ ಕಾರ್ಯವೇ ಎಲ್ಲರ ಕಣ್ಮುಂದೆಯೂ ಪ್ರತ್ಯಕ್ಷಗೊಳ್ಳುತ್ತದೆ. ಆದ್ದರಿಂದ ಪ್ರಾರಂಭದಲ್ಲಿ ಮಾನವ ಮಾಡಿದ ಕೆಲಸಗಳಲ್ಲೆಲ್ಲಾ ಕಲ್ಲಿನಲ್ಲಿ ಬಿಡಿಸಿದ ಶಿಲ್ಪವನ್ನೇ ಹಿರಿಯ ಕೆಲಸವೆಂದು ಭಾವಿಸಿದ್ದ. ಇತಿಹಾಸಕಾರರ ದೃಷ್ಟಿಯಿಂದ ಮನುಷ್ಯನ ಮೊದಲ ಆಯುಧ ಶಿಲೆ. ಹಳೆ ಶಿಲಾಯುಗ, ಹೊಸ ಶಿಲಾಯುಗ ಎಂದು ತಾನೇ ಅವರು ಯುಗ ವಿಭಜನೆ ಮಾಡುವುದು ? ನಮ್ಮ ಪ್ರಾಚೀನ ಶಾಸ್ತ್ರಗಳಲ್ಲೂ ಕೂಡ ಪರಮೇಶ್ವರನ ಮೊದಲ ಮುಖದಿಂದ ಈ ಶಿಲ್ಪವಿದ್ಯಾ ವೇದವು ಹುಟ್ಟಿತೆಂದೇ ಹೇಳಲಾಗಿದೆ: **ಸ್ಥಾಪತ್ಯಂ ಚಾಸೃಜದ್ ವೇದಂ ಕ್ರಮಾದ್‌ಃ ಪೂರ್ವಾದಿಭಿರ್ಮುಖೈಃ** (ಶ್ರೀಮದ್ಭಾಗವತ ೩: ೧೨). ಪೂರ್ವಕಾಲದಲ್ಲಿ ಮಹಾತ್ಮರು ಇದನ್ನು ಹೀಗೇ ಆಚರಿಸುತ್ತಿದ್ದರೆಂದು ಹೇಳುವ ವಾಲ್ಮೀಕಿಯ ಈ ಮಾತನ್ನು ಆಲಿಸಿ—

ತತೋಬ್ರವೀದ್ ದ್ವಿಜಾನ್ ವೃದ್ಧಾನ್ ಯಜ್ಞಕರ್ಮಸುನಿಷ್ಠಿತಾನ್ ।
ಸ್ಥಾಪತ್ಯೇ ನಿಷ್ಠಿತೋಶ್ಚೈವ ವೃದ್ಧಾನ್ ಪರಮ ಧಾರ್ಮಿಕಾನ್ ॥
(ವಾಲ್ಮೀಕಿ ರಾಮಾಯಣ, ಬಾಲಕಾಂಡ ೧೩)

ಆದರೆ ಇದರ ಚರಿತ್ರೆ ಇಂದಿಗೂ ಗ್ರಂಥಸ್ಥವಾಗಿಲ್ಲ. ಇದು ಕೇವಲ ಶಾಸ್ತ್ರವಾಗಿಯಲ್ಲದೆ ಪ್ರಕೃತಿಗೆ ಅಲಂಕಾರಪ್ರಾಯವಾಗಿ ನಿಂತಿದೆ. ಮಾನವನ ಮೇಧಾಸಂಪತ್ತಿಗೆ ಸವಾಲಾಗಿ ನಿಂತಿದೆ. ಮಾನವನು ಪ್ರಕೃತಿಯಲ್ಲಿಯೇ ಬದುಕುತ್ತಾ, ಅದನ್ನು ಪ್ರೇಮಿಸುತ್ತಾ ಆನಂದಿಸುತ್ತಾನೆ. ಆದ್ದರಿಂದ ತನ್ನಲ್ಲಿ ಪ್ರಕೃತಿಯನ್ನೂ, ಪ್ರಕೃತಿಯಲ್ಲಿ ತನ್ನನ್ನೂ ಅನುಭವಿಸುತ್ತಾ ಇರುತ್ತಾನೆ. ತಾನು ಮಾಡುವ ಕರ್ಮಗಳಲ್ಲಿ ಈ ಪ್ರಕೃತಿಯನ್ನು ಅನುಕರಿಸುವುದು, ಅದರ ರೂಪವನ್ನು ಕಂಡುಕೊಳ್ಳುವುದು ಹೀಗೇ. ಅದರೊಂದಿಗೆ ಆನಂದಿಸುವುದು ಮಾನವನ ನಿತ್ಯವ್ಯವಹಾರವಾಗಿದೆ. ಆದ್ದರಿಂದ ಪ್ರಯತ್ನಪೂರ್ವಕವಾಗಿಯೋ, ವಿನಾ ಪ್ರಯತ್ನದಿಂದಲೋ ಮಾನವನು ಸೃಷ್ಟಿಸಿದ ಕಲೆಗಳಲ್ಲಿ ಭಗವತ್ ಸೃಷ್ಟಿಗೆ, ಪ್ರತಿಬಿಂಬ ಕಾಣಿಸುತ್ತದೆ. ಪ್ರಕೃತಿಯಲ್ಲಿ ಇರುವ ತರು-ಲತಾ-ಗುಲ್ಮ-ಪುಷ್ಪಗಳು ಸ್ತ್ರೀಯರು, ಪಶು-ಪಕ್ಷಿಗಳು ಈ ಕಲಾ ಸಂಪತ್ತಿನ ಅಂಶಗಳು. ಹಂಸ, ತಿತ್ತಿರ್ಯಾದಿ ಪಕ್ಷಿಗಳು ಈ ಕಾಲದ ಪ್ರಜೆಗಳಿಗೆ ಅಪರಿಚಿತವಾಗಿದ್ದರೂ ಭಾರತೀಯ ಶಿಲ್ಪಿ ಕಲ್ಪಿಸಿದ ರೂಪಗಳಿಂದ ಅವುಗಳನ್ನು ನಾವು ಕಾಣುವುದು ಸಾಧ್ಯವಿದೆ. ಕವಿಗಳ ಭಾವನೆಗಳು, ಶಿಲ್ಪಿಗಳ ಚತುರ ಅಭಿವ್ಯಕ್ತಿ ಕಲಾಜಗತ್ತಿನ ಮೂಲಸ್ತಂಭ. ಆದ್ದರಿಂದ ಶಿಲ್ಪವು ಕೇವಲ ಕಲಾವಿದನ ಭಾವನಾ ಸೃಷ್ಟಿ, ಆಹ್ಲಾದ ಪುಷ್ಟೀ ಮಾತ್ರವೇ ಅಲ್ಲದೆ ದೇಶ - ಕಾಲ – ಸ್ಥಿತಿ, ಸಂಸ್ಕೃತಿ ಇವುಗಳಿಗೆ ದರ್ಪಣಗಳು. ಆದ್ದರಿಂದ ಶಿಲ್ಪವು ಧರ್ಮಪ್ರಾಯ ಮಾತ್ರವೇ ಅಲ್ಲದೆ ಸಂಸ್ಕೃತಿಗೆ ಭುಜಪ್ರಾಯವಾಗಿದೆ ಎಂದು ಹೇಳಲೇ ಬೇಕು.

ಶಿಲ್ಪವೆಂಬುದು ಅನೇಕ ಮುನಿ ಮಹನೀಯರಿಂದ ಪ್ರವರ್ಧಿಸಲ್ಪಟ್ಟಿರುವ ಶಾಸ್ತ್ರವಾದ್ದರಿಂದ ಇದರ ಇತಿಹಾಸವೂ ಭಾರತದ ಉದ್ದ ಅಗಲಕ್ಕೂ ವ್ಯಾಪಿಸಿದ್ದು, ವೇದಕಾಲದಿಂದ ಈಗಿನ ಕಾಲದವರೆವಿಗಿನ ನಮ್ಮ ಚರಿತ್ರೆಯಲ್ಲಿ ಇದಕ್ಕೆ ಪಾಲಿದೆ. ಎಲ್ಲಾ ರೀತಿಗಳಲ್ಲೂ ಭಾರತೀಯ ವಿಜ್ಞಾನಕ್ಕೆ ಪರಮೇಶ್ವನೇ ಮೂಲವಾಗಿರ

ನಂತೆ ಶಿಲ್ಪಕ್ಕೂ ಪರಮೇಶ್ವರನೇ ಗುರುವು. ವೇದದಲ್ಲೇ ಇದರ ಭಾಗವಿದೆ. ಆದ್ದರಿಂದಲೇ 'ಚರಣವ್ಯೂಹಂ' ಎಂಬ ವೈದಿಕ ಗ್ರಂಥದಲ್ಲಿ –

ಆಯುರ್ವೇದಶ್ಚಿಕಿತ್ಸಾಶಾಸ್ತ್ರಂ ಋಗ್ವೇದಸ್ಯೋಪವೇದಃ
ಧನುರ್ವೇದೋ ಯುದ್ಧಶಾಸ್ತ್ರಂ ಯಜುರ್ವೇದಸ್ಯೋಪವೇದಃ
ಗಾಂಧರ್ವವೇದಸ್ಸಂಗಿತಶಾಸ್ತ್ರಂ ಸಾಮವೇದಸ್ಯೋಪವೇದಃ
ಸ್ಥಾಪತ್ಯವೇದೋ ವಿಶ್ವಕರ್ಮಾದಿ ಶಿಲ್ಪಶಾಸ್ತ್ರಂ ಅಥರ್ವವೇದಸ್ಯೋಪವೇದಃ

— ಎಂದು ಹೇಳಲ್ಪಟ್ಟಿದೆ. ಪ್ರಾಚೀನವಾದ ವೈದಿಕ ಸಾಹಿತ್ಯದಲ್ಲಿ ಪುರಾಣ-ಇತಿಹಾಸ-ಗ್ರಂಥಗಳಲ್ಲಿ ಕಂಡುಬರುವ ಅಸ್ತ್ರ-ಶಸ್ತ್ರಗಳು, ರಥ-ಪುಷ್ಪಕವಿಮಾನಗಳು ಈ ಶಾಸ್ತ್ರದ ಅತಿ ಶ್ರೇಷ್ಠತೆಗೆ ಕುರುಹುಗಳು. ವಾಲ್ಮೀಕಿ ರಾಮಾಯಣದಲ್ಲಿ ಸುಧನ್ವಾಚಾರ್ಯನೆಂಬ ಶಿಲ್ಪಾಚಾರ್ಯನು ರಾಮ, ಲಕ್ಷ್ಮಣರಿಗೆ ಧನುರ್ವಿದ್ಯೆಯನ್ನು ಉಪದೇಶಿಸಿದ ಎಂದು ವಿಶ್ವಾಮಿತ್ರ ತಿಳಿಸುತ್ತಾನೆ. ಋಗ್ವೇದದಲ್ಲಿ ಋಭುಗಳೆಂದು ಹೆಸರಾಗಿದ್ದ ಮುವ್ವರು ಚಮಸಾದಿ ಪಾತ್ರೆಗಳನ್ನು ನಿರ್ಮಿಸಿದ್ದು, ಕಾಶೀಖಂಡದಲ್ಲಿ ಒಬ್ಬ ಪ್ರಜಾಪತಿ ಗುರುಕುಲವಾಸವನ್ನು ಮಾಡಿ ವಿದ್ಯೆಯನ್ನು ಅಭ್ಯಸಿಸಿದ್ದೂ, ಭಾರತದಲ್ಲಿ ಬೃಹಸ್ಪತಿಯ ತಂಗಿಗೆ ಒಬ್ಬ ಪ್ರಜಾಪತಿ ಜನ್ಮಿಸಿ ಶಿಲ್ಪವಿದ್ಯೆಯನ್ನು ಆತನು ಪ್ರಚಾರಕ್ಕೆ ತಂದದ್ದೂ ಮುಂತಾದ ಆಖ್ಯಾಯಿಕೆಗಳು, ಪ್ರಸಂಗಗಳು ಭಾರತೀಯರಾದ ನಮಗೆ ವಿಶಿಷ್ಟವಾದ ಈ ಅವಿಚ್ಛಿನ್ನ ಶಿಲ್ಪ ಪರಂಪರೆಯ ಪಾರಮ್ಯವನ್ನು ತೋರುತ್ತದೆ. ಆದ್ದರಿಂದ ಮತ್ಸ್ಯಪುರಾಣದಲ್ಲಿ ಶಿಲ್ಪ ಶಾಸ್ತ್ರಜ್ಞರ ಪರಂಪರೆಯನ್ನು ಲಕ್ಷಿಸುತ್ತಾ ಈ ರೀತಿ ಹೇಳಲಾಗಿದೆ: –

ಭೃಗುರತ್ರಿರ್ವಸಿಷ್ಠಶ್ಚ ವಿಶ್ವಕರ್ಮಾ ಮಯಸ್ತಥಾ
ನಾರದೋ ನಗ್ನಜಿಚ್ಚೈವ ವಿಶಾಲಾಕ್ಷಃಪುರಂದರಃ
ಬ್ರಹ್ಮಕುಮಾರೋ ನಂದೀಶಃ ಶೌನಕೋ ಭರ್ಗ ಏವಚ
ವಾಸುದೇವೋಽನಿರುದ್ಧಶ್ಚ ತಥಾ ಶುಕ್ರ ಬೃಹಸ್ಪತೀ
ಅಷ್ಟಾದಶೈತೇ ವಿಖ್ಯಾತಾಃ ಶಿಲ್ಪಶಾಸ್ತ್ರೋಪದೇಶಕಾಃ

— ಈ ರೀತಿಯಾಗಿ ಹದಿನೆಂಟು ಮಂದಿ ಶಿಲ್ಪಶಾಸ್ತ್ರೋಪದೇಶಕರನ್ನು ಸ್ಮರಿಸಲಾಗಿದೆ. ಮಾನಸಾರದಲ್ಲಿ ಸ್ಮರಿಸಲ್ಪಟ್ಟಿರುವ ಶಿಲ್ಪಿಗಳ ಉಲ್ಲೇಖ ಹೀಗಿದೆ:

ವಿಶ್ವಕರ್ಮಾ ಚ ವಿಶ್ವೇಶಃ ವಿಶ್ವಸಾರಃ ಪ್ರಭೋಧಕಃ
ವೃತಶ್ಚೈವ ಮಯಶ್ಚೈವ ತ್ವಷ್ಟಾಚೈವ ಮನುರ್ನಲಃ
ಮಾನವಿನ್ಮಾನ ಕಲ್ಪಶ್ಚ ಮಾನಸಾರೋ ಬಹುಶ್ರುತಃ
ಪ್ರಷ್ಟಾ ಚ ಮಾನಬೋಧಶ್ಚ ವಿಶ್ವಬೋಧೋ ನಯಸ್ತಥಾ
ಆದಿಸಾರೋ ವಿಶಾಲಾಕ್ಷಃ ವಿಶ್ವಕಾಶ್ಯಪ ಏವಚ
ವಾಸ್ತುಬೋಧೋ ಮಹಾತಂತ್ರೋ ವಾಸ್ತುವಿದ್ಯಾಪತಿಸ್ತಥಾ
ಪಾರಾಶರೀಯಕಶ್ಚೈವ ಕಾಲಯೂಪೋ ಮಹಾಋಷಿಃ
ಚೈತ್ಯಾಖ್ಯಾಃ ಚಿತ್ರಕಃ ಆವರ್ಯಃ ಸಾಧಕ ಸಾರ ಸಹಿತಃ
ಭಾನುಶ್ಚಂದ್ರಶ್ಚ ಲೋಕಜ್ಞಃ ಸೌರಾಖ್ಯ ಶಿಲ್ಪ ವಿತ್ತಮಃ
ತೇ ಏವ ಋಷಯಃ ಪ್ರೋಕ್ತಂ ದ್ವಾತ್ರಿಂಶದ್ ಶಿಲ್ಪಿಸಂಖ್ಯಯಾ ||

ಇದೇ ರೀತಿಯಲ್ಲಿ 'ಗಾರ್ಗೇಯಾಗಮಮ್'ನಲ್ಲೂ ಶಿಲ್ಪಶಾಸ್ತ್ರಕರ್ತೃಗಳಾದ ಮಹರ್ಷಿಗಳ ಹೆಸರುಗಳು ದೊರೆಯುತ್ತವೆ. ದುರಾದೃಷ್ಟವಶಾತ್ ನಮಗೆ ಅವರ ಶಾಸ್ತ್ರಕೃತಿಗಳೆಲ್ಲವೂ ದೊರೆತಿಲ್ಲ. ಇತ್ತೀಚೆಗೆ ಮದರಾಸ್ ಸರ್ಕಾರದವರು ಹಲವು ಶಿಲ್ಪಶಾಸ್ತ್ರಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವೆಲ್ಲವೂ ಪ್ರಾಚೀನ ಋಷಿಗಳ ಹೆಸರಿನಲ್ಲೇ ಇದ್ದರೂ ಕೃತಿಯ ಭಾಷೆ, ನಿರೂಪಣೆಗಳನ್ನು ಗಮನಿಸಿದರೆ ಅವು ಮಧ್ಯಕಾಲದಲ್ಲಿ ತಯಾರಾಗಿರುವ ಕೃತಿಗಳೆಂದು ಹೇಳಬೇಕಾಗುತ್ತದೆ. ಇದರಿಂದ ಅತಿ ಪ್ರಾಚೀನ ಗ್ರಂಥಗಳು ದೊರೆಯದೇ ಇದ್ದರೂ ಅವನ್ನು ಆಧರಿಸಿ ರೂಪುಗೊಂಡಿರುವ ಗ್ರಂಥ ಸಮುದಾಯವಿದೆಂದು ನಾವು ಭಾವಿಸಬಹುದು. ಈ ದಿನ ಕಾಣಿಸುವ, ತಪ್ಪುಗಳ ಕುಪ್ಪೆಯಾಗಿ ಲಭಿಸುವ, ಶಿಲ್ಪ ಶಾಸ್ತ್ರ ಪುಸ್ತಕಗಳು ದೊರೆಯಲು ಕಾರಣ ಅವುಗಳ ಸಂಪಾದಕರು ಶಿಲ್ಪಿಗಳಾಗಿದ್ದು ಪರಂಪರೆಯಿಂದ ಸಂಕೇತ ಪದಗಳ ನೈಜ ಅರ್ಥವನ್ನು ನಿಷ್ಕರ್ಷವಾಗಿ ಅರಿಯದೆ ಇರುವುದು, ಸುಶೀಕ್ಷಿತರೂ ವಿದ್ಯಾವಂತರೂ ಆದ ಶಿಲ್ಪಿಗಳಿಗೆ ಈ ಗ್ರಂಥ ಸಂಪಾದನಾ ಕಾರ್ಯವನ್ನು ವಹಿಸದೆ ಇರುವುದೇ. ಈಗಲೂ ಸಂಸ್ಕೃತ ವಿದ್ವಾಂಸರು ಶಿಲ್ಪಶಾಸ್ತ್ರಗಳ ಸಂಪಾದನೆ ಮಾಡಬಲ್ಲರು ಎಂಬ ತಪ್ಪು ಕಲ್ಪನೆ ಇದೆ. ಸಂಸ್ಕೃತ ಪಾಂಡಿತ್ಯದೊಂದಿಗೆ ಶಿಲ್ಪದಲ್ಲೂ ಪರಿಣತಿ ಅತ್ಯಾವಶ್ಯಕವಾದುದು ಎಂಬುದನ್ನು ಗಮನಿಸದೆ ಇರುವುದೇ ಈ ಅನ್ಯಾಯಕ್ಕೆ ಕಾರಣವಾಗಿದೆ.

ಶಿಲ್ಪಿಗಳು ಕೇವಲ ಪಾರಂಪರ್ಯ ಕೌಶಲ್ಯವನ್ನು ನಂಬಿ ತಮ್ಮ ವಿದ್ಯಾಭಾಸ್ಯ ವನ್ನು ಆ ರಾಜ್ಯದಲ್ಲಿ ಕಡೆಗಣಿಸಿರುವುದೂ ಇದಕ್ಕೆ ಮತ್ತೊಂದು ಕಾರಣ. ಈಗ ನಮಗೆ ಉಪಲಬ್ಧವಾಗಿರುವ ಕೆಲವು ಶಿಲ್ಪಗ್ರಂಥಗಳು—

೧ ಕಾಶ್ಯಪಂ
೨ ಮನುಸಾರಂ
೩ ಮಾನಸಾರಂ
೪ ವಿಶ್ವಕರ್ಮೀಯಂ
೫ ಮಹಾವಿಶ್ವಕರ್ಮೀಯಂ
೬ ಮಯಮತಂ
೭ ನಾರದೀಯಂ
೮ ನಾರಾಯಣೀಯಂ
೯ ಇಂದ್ರಮತಂ
೧೦ ಸಕಲಾಧಿಕಾರಂ
೧೧ ಮಾರ್ಕಂಡೇಯಂ
೧೨ ಸನತ್ಕುಮಾರ ವಾಸ್ತು
೧೩ ವಿಶ್ವಕರ್ಮ ವಾಸ್ತು
೧೪ ವಿಶ್ವಕರ್ಮ ಪ್ರಕಾಶಿಕ
೧೫ ಅಪರಾಚಿತ ಪೃಚ್ಛಾ
೧೬ ಜಯಪೃಚ್ಛಾ
೧೭ ಸಮರಾಂಗಣ ಸೂತ್ರಧಾರ
೧೮ ಪ್ರಾಸಾದ ಮಂಡನ
೧೯ ರೂಪಮಂಡನ
೨೦ ಪ್ರಾಸಾದ ಮಂಜರಿ
೨೧ ಕ್ಷೀರಾರ್ಣವ
೨೨ ದ್ವೀಪಾರ್ಣವ
೨೩ ಶಿಲ್ಪಪ್ರಕಾಶಿಕಾ
೨೪ ಶಿಲ್ಪಸಂಹಿತಾ
೨೫ ಯಂತ್ರಸರ್ವಸ್ವ
೨೬ ರಥಶಿಲ್ಪ
೨೭ ಶಿಲ್ಪಸಂಹಿತಾ
೨೮ ಜಲಾರ್ಗಳ
೨೯ ಬ್ರಾಹ್ಮೀಯ ಚಿತ್ರಕರ್ಮ
೩೦ ಸರಸ್ವತೀಯ ಚಿತ್ರಕರ್ಮ
೩೧ ನಿರ್ದೋಷ ವಾಸ್ತು
೩೨ ಚಿತ್ರಲಕ್ಷ್ಮ
೩೩ ಮನುಷ್ಯಾಲಯ ಚಂದ್ರಿಕಾ
೩೪ ಪ್ರಾಸಾದ ವಾಸ್ತು
೩೫ ಶ್ರೀತತ್ತ್ವನಿಧಿ
೩೬ ವಿಷ್ಣುಧರ್ಮೋತ್ತರ ಪುರಾಣಂ
೩೭ ಅಭಿಲಷಿತಾರ್ಥ ಚಿಂತಾಮಣಿ
೩೮ ಮಾನಸೋಲ್ಲಾಸ
೩೯ ತಂತ್ರ ಸಮುಚ್ಚಯ
೪೦ ವೈಖಾನಸಂ

ಆಗಮ ಶಾಸ್ತ್ರದ ಈ ಗ್ರಂಥಗಳಲ್ಲೂ ಶಿಲ್ಪಶಾಸ್ತ್ರ ವಿಶೇಷಗಳು ಇರುವ ಸಾಧ್ಯತೆ ಇದೆ—

೧ ಕಾಶ್ಯಪ ಜ್ಞಾನಕಾಂಡ	೯ ಜಯಾಖ್ಯ	೧೭ ನಾರದ
೨ ಮರಿಚಿ	೧೦ ಕಾಮಿಕ	೧೮ ಹಯಗ್ರೀವ
೩ ಅತ್ರಿ	೧೧ ಅಜಿತ	೧೯ ಆನಂದ
೪ ಭೃಗು	೧೨ ರೌರವ	೨೦ ಸಾತ್ವತ
೫ ಭರದ್ವಾಜ	೧೩ ಸುಪ್ರಭೇಧ	೨೧ ಕದ್ರು
೬ ಕಪಿಂಜಲ	೧೪ ದೀಪ್ತ	೨೨ ವೀರ
೭ ಶ್ರೀಪ್ರಶ್ನ	೧೫ ಚಂದ್ರಜ್ಞಾನ	೨೩ ಪುರುಷೋತ್ತಮ
೮ ಪದ್ಮ	೧೬ ವಿಷ್ವಕ್ಸೇನ	೨೪ ಪರಮಪುರುಷ

ಈ ಗ್ರಂಥಗಳನ್ನು ಪರಿಶೋಧಿಸಿ ಪ್ರಜಾ ಸೇವೆಯನ್ನು ಮಾಡಿರುವ ಮಹನೀಯರಲ್ಲಿ ಮುಖ್ಯರು — ಪ್ರಸನ್ನಕುಮಾರಾಚಾರ್ಯ, ಸಿದ್ಧಲಿಂಗಸ್ವಾಮಿ, ಗಣಪತಿಶಾಸ್ತ್ರಿ, ಪ್ರಭಾಶಂಕರ ಸೊಂಪುರೆ, ವಾರೆಸು, ಗೋವಿಂದಕೃಷ್ಣಪಿಳ್ಳೈ, ಗೋಪಿನಾಥರಾವ್, ಡಿ. ಎನ್. ಶುಕ್ಲ, ಸ್ಮಿತ್, ಮಲ್ಯ, ಆಪ್ಟೇ, ಮಜುಂದಾರ್, ಫಿಲಿಯೋಜಾ, ಐಯಂಗಾರ್, ಅಗ್ರವಾಲ, ಭಟ್ಟಾಚಾರ್ಯ, ಸ್ಟೆಲ್ಲಾ ಕ್ರಿಮಿಷ್, ಆಲಿಸ್ ಬೋನರ್, ಗೋಡ್ರಿಯಾನ್ ಮುಂತಾದವರು. ಇವರೇ ಅಲ್ಲದೇ ಅತ್ಯಂತ ಪ್ರಖ್ಯಾತ ಕಲಾ[illegible]ವರೂ, ವಿಮರ್ಶಕರೂ, ಕಲಾವಿಜ್ಞಾನಧರರೂ ಆದ ಡಾ. ಆನಂದಕು[illegible]ರಸ್ವಾಮಿ, ಗಂಗೂಲಿ, ಠಾಕೂರ್ ಇವರ ಸೇವೆಯೂ ಚಿರಸ್ಮರಣೀಯವಾದದ್ದು.

ನಮ್ಮ ನಾಗರೀಕತೆ - ಸಂಸ್ಕೃತಿ, ನಿರ್ಮಾಣ ಕೌಶಲ್ಯಗಳು, [illegible]ಪ್ಪುರಿಗೊಂಡಿರುವುದು ಈ ಕಳಾಸಾಮ್ರಾಜ್ಯದ ನೆರವಿನಿಂದ. ಕೇವಲ ಕಲಾ[illegible]ಯನ್ನು ಕಣ್ಣಿಂದ ಕಾಣವುದಲ್ಲ - ಜನಜೀವನದೊಂದಿಗೆ ಹೊಂದಿಕೊಂಡು ನಮ್ಮ ಕಲಾ ಸಂಪ್ರದಾಯಗಳು, ನೀತಿ - ನಿಯಮಗಳು, ಕಷ್ಟಸಹಿಷ್ಣುತೆಗಳನ್ನು ಮತ್ತಷ್ಟು ಶೋಭಾಯಮಾನಗೊಳಿಸುತ್ತದೆ; ಸಾಮಾಜಿಕ ಐಕ್ಯತೆಗೆ ತುಂಬಾ ಸಹಾಯಕರವಾಗುತ್ತದೆ. ಸೃಜನಾತ್ಮಕ ಶಕ್ತಿಗೆ ಭಾವಸಂಪತ್ತಿಗೆ ಪ್ರತೀಕವಾಗಿ ನಿಲ್ಲುತ್ತವೆ. ಅದೇ ಕಾರಣಕ್ಕಾಗಿಯೇ ವಿದೇಶೀಯರು ನಮ್ಮ ಕಲಾಸೃಷ್ಟಿಗಳನ್ನು ಒಂದೇ ಸಮನೆ ಕೊಳ್ಳುತ್ತಿರುವುದು; ಕೊಂಡು ಹರ್ಷಿಸುತ್ತಿರುವುದು. ಈ ಸಾಮ್ರಾಜ್ಯವು ಸಾವಿರಾರು ವರ್ಷಗಳು ನಿಲ್ಲುವಂತಹದು. ರಾಜ್ಯದ ಎಲ್ಲೆ

ಗಳು ಬದಲಾದರೂ, ರಾಜರು ಬದಲಿಸಿದರೂ ಅಜಂತಾ-ಎಲ್ಲೋರಾಗಳಿಗೆ, ದೇವಾಲಯಗಳಿಗೆ ಪ್ರಾಶಸ್ತ್ಯ ಏರುತ್ತಲೇ ಇದೆ. ಅದು ಮುಂದೆಯೂ ಇಳಿಯುವುದು ಸಾಧ್ಯವಿಲ್ಲ. ಆ ಕಲೆಯಲ್ಲಿರುವ ಆಕರ್ಷಣೆಯ ವಿಶೇಷವೇ ಅದು. ಆ ಕಲಾಸಂಪದದ ಆರ್ಜನೆಯಲ್ಲಿ ಎಷ್ಟು ಜೀವಗಳು ತಮ್ಮ ಬೆವರನ್ನು, ಬಾಳನ್ನು ಸುರಿದು ಅಲ್ಲಿಯೇ ತಮ್ಮ ಆತ್ಮಗಳನ್ನೂ ಪ್ರತಿಷ್ಠಿಸಿವೆಯೋ! ಅಲ್ಲವೇ? ಅದನ್ನು ಗುರುತಿಸುವುದೇ ಒಂದು ಹಿರಿಯ ವಿಶೇಷ. **ಜ್ಞಾನಂ ವಿಜ್ಞಾನ ಮಾಸ್ತಿಕ್ಯಂ ಬ್ರಹ್ಮಕರ್ಮಂ ಸ್ವಭಾವಜಂ** ಎಂದು ತಾನೇ! ಈ ಕಲಾಸಂದೇಶವನ್ನು ಅರ್ಥ ಮಾಡಿಕೊಂಡು, ಅನುಭೂತಿಯನ್ನು ಪಡೆದು, ಪರಬ್ರಹ್ಮಸಾಮ್ರಾಜ್ಯವನ್ನು ಪ್ರವೇಶಿಸಬೇಕೆಂದು ನಮ್ಮ ಶಿಲ್ಪಶಾಸ್ತ್ರವು ಘೋಷಿಸುತ್ತದೆ. ಆದರೆ ಅದನ್ನು ಆಲಿಸುವ ಮಂದಿ ಎಷ್ಟು? ಹಾಗೆಂದು ನಾವು ಸುಮ್ಮನೆ ಕೂರುವುದು ಸರಿಯಲ್ಲ. ಜನಸಾಮಾನ್ಯರಿಗೆ ಇದನ್ನು ತಿಳಿಸಬೇಕಾದ ಹೊಣೆಗಾರಿಕೆ ನಮ್ಮದೇ. ನಮ್ಮ ಸಂಸ್ಕೃತಿಯನ್ನು ಚಿರಸ್ಥಾಯಿಯಾಗಿ ಉಳಿಸಿಕೊಳ್ಳಬೇಕಾಗಿರುವ ಆವಶ್ಯಕತೆಯೂ ನಮ್ಮದೇ ತಾನೇ?

ತೆಲುಗಿನಿಂದ ಅನುವಾದ :

ಎನ್. ವಿಶ್ವರೂಪಾಚಾರ್ಯ 'ಬಾಲಬಂಧು'

★

ಉತ್ಪತ್ತಿ ರಕ್ಷಣ ಲಯಾನ್ ಜಗತಾಂ ಪ್ರಕುರ್ವನ್
ಭೂವಾರಿ ವಹ್ನಿಮರುತೋ ಗಗನಂ ಚ ಸೂತೇ ।
ನಾನಾ ಸುರೇಶ್ವರ ಕಿರೀಟ ವಿಲೋಲಮಾಲಾ
ಭೃಂಗಾ ವಲೀಢ ಚರಣಾಂಬುರುಹಂ ನಮಾಮಿ ॥

—ಮಾನಸಾರ ಮಹರ್ಷಿ

ಯಾರ ಸಕಲ ಜಗತ್ತುಗಳ ಸೃಷ್ಟಿ ರಕ್ಷಣೆ ವಿನಾಶ ಕಾರ್ಯಗಳಿಂದ, ನೆಲ ನೀರು ಬೆಂಕಿ ಗಾಳಿ ಮತ್ತು ಆಕಾಶಗಳು ಉಂಟಾಗುತ್ತವೆಯೋ, ಸಕಲ ದೇವತೆಗಳ ಕಿರೀಟಗಳು ಯಾರ ಪದಕಮಲಗಳನ್ನು ದುಂಬಿಗಳ ಪಂಕ್ತಿಯು ಸುತ್ತುಗಟ್ಟಿದಂತೆ ಮುತ್ತಿರುವುವೋ ಆ ವಿಶ್ವಕರ್ಮಪರಮೇಶ್ವರನ ಪಾದಕಮಲ ಗಳಿಗೆ ನಮಸ್ಕರಿಸುತ್ತೇನೆ.

೮

ಜಿ. ಜ್ಞಾನಾನಂದ, ಎಂ.ಎ.,

ಪ್ರಾಚೀನ ಭಾರತದಲ್ಲಿ ಯಂತ್ರ ಶಿಲ್ಪ

ಮಾನವನ ಉಗಮದಿಂದಲೇ ರಕ್ಷಣೆ ಅವನ ಮೂಲಭೂತ ಕಾರ್ಯಗಳಲ್ಲೊಂದಾಗಿದೆ. ಮೃಗಗಳಿಂದ, ದರೋಡೆಕೋರರಿಂದ, ಶತೃಗಳಿಂದ ರಕ್ಷಣೆಗಾಗಿ ಹೋರಾಟ ಅವಶ್ಯಕವಾಗಿತ್ತು. ಗುಂಪುಗಳ ಮಧ್ಯೆಯ ಘರ್ಷಣೆಯೂ ಸಾಮಾನ್ಯವಾಗಿತ್ತು. ಇದರಿಂದ ಆಯುಧಗಳನ್ನು ಬಳಸುವುದು ಅವಶ್ಯಕವಾಗಿ, ಕಾಲಗರ್ಭದಲ್ಲಿ ಅವು ರೂಪುಗೊಂಡವು. ದೇವತೆಗಳೆಲ್ಲರೂ ಒಂದೊಂದು ಆಯುಧಧಾರಿಗಳೇ. ಆಯುಧ ಶಿಲ್ಪವು ಶಿಲ್ಪಶಾಸ್ತ್ರದ ಒಂದು ಪ್ರಮುಖ ಅಂಗ. ಪ್ರಾಚೀನರು ಬಳಸುತ್ತಿದ್ದ ಆಯುಧಗಳನ್ನು ಅರಿತರೆ ಅವನ್ನು ರೂಪಿಸಿದ ಶಿಲ್ಪಿಗಳ ತಂತ್ರವಿದ್ಯಾ ನೈಪುಣ್ಯದ ಅರಿವು ಮೂಡೀತು. ಪ್ರಾಚೀನ ಕೃತಿಗಳಲ್ಲಿ ದೊರೆಯುವ ಹಲವು ವಿವರಗಳನ್ನು ಪರಿಶೀಲಿಸೋಣ.

ಆಯುಧಗಳನ್ನು ಸಾಮಾನ್ಯವಾಗಿ ಯಂತ್ರವೆಂದು ಕರೆಯುತ್ತಿದ್ದಂತೆ ತೋರುತ್ತದೆ. ಯಂತ್ರ **ಯಮ್**–ನಿಯಂತ್ರಿಸು–ಎಂಬ ಧಾತುವಿನಿಂದ ಜನಿಸಿರುವ ಪದ. ಈ ಪದದ ಬಳಕೆಯು ಪ್ರಾಚೀನ ಸಾಹಿತ್ಯದಲ್ಲಿ ವಿಪರೀತವಾಗಿದೆ. ನೀರು ಸೆಳೆಯುವಾಗ ಉಪಯೋಗಕ್ಕೆ ಬರುವ ಗಾಲಿಗೆ **ಘಟಿಯಂತ್ರ**ವೆಂದು, ಎಣ್ಣೆಯ ಗಾಣವನ್ನು **ತೈಲ ಯಂತ್ರ**ವೆಂದು, ಕಬ್ಬಿನ ಗಾಣವನ್ನು **ಇಕ್ಷು ಯಂತ್ರ**ವೆಂದು ಉಲ್ಲೇಖಿಸಲಾಗಿದೆ. ಕೊನೆಗೆ ತಕ್ಕಡಿಯನ್ನೂ ಒಂದು ಯಂತ್ರವೆಂದೇ ಪರಿಗಣಿಸಲಾಗಿದೆ[1]. ರಾಮಾಯಣದಲ್ಲಿ

---

1 ಕೌಟಿಲ್ಯನ ಅರ್ಥಶಾಸ್ತ್ರ, ೨ : ೧೯ ಮತ್ತು ೨೪

ಭರತ ಕುಸಿದುರುಳುವುದನ್ನು ಇಂದ್ರನ **ಯಂತ್ರ ಧ್ವಜದ** ಇಳಿತಕ್ಕೆ ಹೋಲಿಸಲಾಗಿದೆ[2]. ಇಂದ್ರಧ್ವಜದ ಪೂರ್ಣ ತಾಂತ್ರಿಕ ವಿವರಣೆಗಳು 'ಸಮರಾಂಗಣ ಸೂತ್ರಧಾರ'ದಲ್ಲಿ ವಿಸ್ತಾರವಾಗಿ ಇನ್ನೂರು ಶ್ಲೋಕಗಳಲ್ಲಿ ದೊರೆಯುತ್ತದೆ. ಅಯೋಧ್ಯಾನಗರವು ಅನೇಕ ರೀತಿಯ ಯಂತ್ರಗಳನ್ನು ಪಡೆದಿತ್ತು **[ಸರ್ವಯಂತ್ರಾಯುಧವತೀಂ]** ಎಂದು ವರ್ಣಿಸಲಾಗಿದೆ[3]. ಮಯ ನಿರ್ಮಿಸಿದ ಲಂಕಾನಗರದಲ್ಲಿ ಇನ್ನೂ ಹೆಚ್ಚು ಯಂತ್ರಗಳಿದ್ದವು ಎಂಬುದು **ಯಂತ್ರಾಗಾರ ಸ್ತನೀ**[4] ಎಂಬ ಉಪಮಾನದಿಂದ ಹೇಳಲಾಗಿದೆ. ಲಂಕಾನಗರದ ಕೋಟೆಯ ನಾಲ್ಕು ಬಾಗಿಲುಗಳಿಗೂ ಬೃಹತ್ತರವೂ, ಬಲವತ್ತರವೂ ಆದ **ಉಪಲ** ಯಂತ್ರಗಳನ್ನು ಅಳವಡಿಸಿ ಅವುಗಳಿಂದ ಕಲ್ಲುಗಳನ್ನೂ, ಬಾಣಗಳನ್ನೂ ಎಸೆಯಲಾಗುತ್ತಿತ್ತು[5] ಎಂದು ಹನುಮಂತ ಹೇಳುತ್ತಾನೆ. **ಹರಿವಂಶ**ದಲ್ಲಿ ನಾನಾ ರೀತಿಯ ಯಾಂತ್ರಿಕ ಹಕ್ಕಿಗಳು, ಮೀನುಗಳು ಈಜುಗಾರರಿಗೆ ನೆರವಾಗುವಂತೆ ಇದ್ದವೆಂದು ವಿವರಣೆ ದೊರೆಯುತ್ತದೆ[6]. **ಜಲಯಂತ್ರ**ದಿಂದ ಜಲಕೇಳಿ ನಡೆಯುತ್ತಿತ್ತು ಎಂದು ವರ್ಣಿಸಲಾಗಿದೆ[7]. ಕೌಟಿಲ್ಯ ತನ್ನ 'ಅರ್ಥಶಾಸ್ತ್ರ' ದಲ್ಲಿ ಭೂಮಿಗೃಹದ ಬಗ್ಗೆ ಹೇಳುತ್ತಾ ಅದಕ್ಕೆ **ಯಂತ್ರಯುಕ್ತ ಸೋಪಾನ**ವಿದ್ದು, ಬೇಕೆನಿಸಿದಾಗ ಅದನ್ನು ಹೊರಕ್ಕೆ ಎಸೆಯುವ, ಉಳಿದ ಸಮಯಗಳಲ್ಲಿ ಒಳಗೆ ಅಡಗಿಸಿಕೊಳ್ಳಬಲ್ಲ ವ್ಯವಸ್ಥೆಯನ್ನು ವಿವರಿಸುತ್ತಾನೆ. ಶತೃಗಳನ್ನು, ಅನಾವಶ್ಯಕರಾದವರನ್ನು ಕೊಲ್ಲಲೂ ಕೂಡ ಈ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ[8].

---

2 ಸ ತು ದೃಷ್ಟ್ವಾ ರುದನ್ ದೀನಃ ಪಪಾತ ಧರಣೀತಲೇ |
ಉತ್ಥಾಪ್ಯಮಾನಃ ಶಕ್ರಸ್ಯ ಯಂತ್ರ ಧ್ವಜ ಇವೋಚ್ಛ್ರಿತಃ||
(ವಾಲ್ಮೀಕಿ ರಾಮಾಯಣ, ಅಯೋಧ್ಯಾಕಾಂಡ ೭೭ : ೯)

3 ಅದೇ, ಬಾಲಕಾಂಡ, ೫ : ೧೦

4 ಅದೇ, ಸುಂದರಕಾಂಡ, ೩ : ೧೮

5 ತತ್ರೇಷು ಪಲಯಂತ್ರಾಣಿ ಬಲವಂತಿ ಮಹಾಂತಿ ಚ

6 ಹರಿವಂಶ, ವಿಷ್ಣುಪರ್ವ, ೮೮ : ೨೭–೨೮

7 ಅದೇ, ೮೯ : ೫೦

8 ಕೌಟಿಲ್ಯನ ಅರ್ಥಶಾಸ್ತ್ರ, ೨ : ೫ ಮತ್ತು ೧೨ : ೫

ಕೋಟೆ ಕೊತ್ತಲಗಳು ಯಂತ್ರಯುಕ್ತವಾಗಿರುತ್ತಿದ್ದವು. ಸಮರರಂಗದಲ್ಲಿ ಯಂತ್ರಗಳನ್ನು ವಿಶೇಷ ವ್ಯಕ್ತಿಗಳೇ ನೋಡಿಕೊಳ್ಳುತ್ತಿದ್ದರು[೯]. ಶತೃಸೈನ್ಯವನ್ನು ಹಿಂದೋಡಿಸಲು ಅನುಸರಿಸಬೇಕಾದ ಮಾರ್ಗಗಳನ್ನೂ ಕೌಟಿಲ್ಯನು ವಿವರಿಸುತ್ತಾನೆ. ಆನೆಗಳನ್ನು ಹೆದರಿಸಲೆಂದೇ **ಹಸ್ತಿಯಂತ್ರ**ಗಳು ಇದ್ದವು. 'ಸಮರಾಂಗಣ ಸೂತ್ರಧಾರ'ದಲ್ಲಿ ಅಪಾರವಾದ ಸದ್ದು ಮಾಡುತ್ತಾ ಆನೆಗಳನ್ನು ಹೆದರಿಸುವಂತಹ ಹಾರುವ ಯಂತ್ರಗಳ ವಿವರಣೆ ದೊರೆಯುತ್ತದೆ. ಕೌಟಿಲ್ಯನು ಉಲ್ಲೇಖಿಸುವ ಯಂತ್ರಗಳಲ್ಲಿ ಕೆಲವನ್ನು ಅವಲೋಕಿಸೋಣ. ಕೋಟೆಯ ಗೋಡೆಯ ಮೇಲಿಂದ ಮೊನಚಾದ ಚಕ್ರವನ್ನು ಸುತ್ತುತ್ತಾ ದೊಡ್ಡ ಕಲ್ಲುಗಳನ್ನು ದೂರಕ್ಕೆ ಎಸೆಯುವಂತಹ **ಸರ್ವತೋಭದ್ರ ಯಂತ್ರ, ಜಮದಗ್ನೀಯ** ಎಂಬ ಯಂತ್ರವು ಬಾಣವನ್ನು ಎಸೆಯುವುದಕ್ಕೆ ಹೆಸರಾದುದು. ಇದನ್ನು ಕೋಟೆಯ ಗೋಡೆಯಲ್ಲಿ ಅಡಗಿಸಿ ಗೋಡೆಯ ಮಧ್ಯದ ಬಿರುಕುಗಳಿಂದ ಬಾಣಗಳನ್ನು ಎಸೆಯಲಾಗುತ್ತಿತ್ತು. **ವಿಶ್ವಾಸಘಾತಿ (ಯಂತ್ರ ತೋರಣ)** ಎನ್ನುವುದು ಮಾರ್ಗದಲ್ಲಿಯ ಕಬ್ಬಿಣದ ಸರಳಿನಂತಿದ್ದು ಅವಶ್ಯವೆನಿಸಿದಾಗ ಯಂತ್ರ ಪ್ರಯೋಗದಿಂದ ಹಾದಿಯಲ್ಲಿರುವವನನ್ನು ಅಪ್ಪಳಿಸುತ್ತಿತು. ಈ ಯಂತ್ರ ಪ್ರಯೋಗವು 'ಮುದ್ರಾರಾಕ್ಷಸ' ನಾಟಕದಲ್ಲಿ ಬರುತ್ತದೆ. ಶತೃವಿನ ಗುಂಪಿನಲ್ಲಿ ಬೆಂಕಿ ಹರಡಲು **ಸಂಘಾಟಿ (ಅಗ್ನಿಯಂತ್ರ)** ಉಪಯೋಗಿಸುತ್ತಿದ್ದರು. **ಪರ್ಜನ್ಯಕ (ಉದಕ ಯಂತ್ರ)** ಬೆಂಕಿಯನು ಆರಿಸಲು ಪ್ರಯೋಗಿಸಲಾಗುತ್ತಿತ್ತು. **ಬಾಹು** ಎನ್ನಲಾಗುವ ಯಂತ್ರದ ಮಧ್ಯೆ ಸಿಕ್ಕಿಕೊಂಡ ಪ್ರಾಣಿಯನ್ನು ಅದುಮಿ ಹಿಂಸಿಸಿ ಕೊಲ್ಲಲು ಬಳಸುತ್ತಿದ್ದರು. ಇವೆಲ್ಲವೂ 'ಸ್ಥಿರ ಯಂತ್ರ'ಗಳು.

'ಚಲ ಯಂತ್ರ'ಗಳಲ್ಲಿ **ಪಾಂಚಾಲಿಕ** ಎಂಬುದು ಕೋಟೆಯ ಗೋಡೆಯ ಹೊರಗೆ ಇರುತ್ತಿದ್ದ ನೀರಿನಲ್ಲಿದ್ದು ತನ್ನ ಮೊನಚಾದ ಚುಚ್ಚು ಮೊನೆಗಳಿಂದ ಶತೃವಿನ ಪ್ರಗತಿಗೆ ಅಡ್ಡಿಯೊಡ್ಡುತ್ತಿತ್ತು. **ಮೂಸಲ** ಮತ್ತು **ಯಷ್ಠಿ** ತುಂಬಾ ಪ್ರಚಲಿತವಾಗಿದ್ದ ಯಂತ್ರಗಳು, ಆನೆಗಳನ್ನು ಹೆದರಿಸಿ ಓಡಿಸಲು ಭಾರವಾದ ಕಬ್ಬಿಣದ ಸರಳುಗಳನ್ನು ಎಸೆಯುವ **ಹಸ್ತಿ ಪರಿಗ್ರಹವು** ದಂಡಿಯ 'ಅವಂತಿ ಸುಂದರಿ'ಯಲ್ಲಿ ಉಲ್ಲೇಖಿತವಾಗಿದೆ. **ತಾಲವೃಂತ(ವಾಟಚಕ್ರ)**ವು ವಾಯು-

---

9 ಅದೇ, ೨ : ೩ ಮತ್ತು ೧೦ : ೪

ವ್ಯಾಸ್ತ್ರವೆಂದು ಡಾ. ರಾಘವನ್ ಅವರು ಅಭಿಪ್ರಾಯಪಡುತ್ತಾರೆ. 'ನಿಜವಾದ ಬಿರುಗಾಳಿ; ಗುಡುಗುಗಳೇ ಬಂದವೇನೋ ಎಂಬುವಂತೆ ಹೆದರಿಸಿ ಅಲೆಕ್ಸಾಂಡರನ ಸೈನ್ಯವನ್ನು ಹಿಮ್ಮೆಟ್ಟಿಸಿದರು'[10] ಎಂಬುದು ಈ ಅಸ್ತ್ರದ ಐತಿಹಾಸಿಕತೆಗೆ ಸಾಕ್ಷಿ ಹೇಳುವಂತಿದೆ. ನಾಲ್ಕು ಕಾಲುಗಳಿದ್ದು ಕಲ್ಲುಗಳನ್ನು ಹೆಚ್ಚು ದೂರಕ್ಕೆ ಎಸೆಯುವ ಸಾಮರ್ಥ್ಯವುಳ್ಳ **ಆಸ್ಫೋಟಿಮಾ**, ಗೋಡೆಗಳನ್ನು ಉರುಳಿಸಬಲ್ಲ **ಉದ್ಘಾತಿಮಾ**, ಗುರಿಯನ್ನು ತಲೆಕೆಳಗಾಗಿ ಮಾಡಿ ಸಿಗಿದುಹಾಕಬಲ್ಲ **ಉತ್ಪಾತಿಮಾ (ಶ್ಯೇನ ಯಂತ್ರ), ತ್ರಿಶೂಲ, ಚಕ್ರ, ಶತಘ್ನಿ** ಇತ್ಯಾದಿಗಳು.

ಇದೇ ರೀತಿಯ ವಿವರಗಳು 'ಕಾಮಸೂತ್ರ'ದಲ್ಲಿಯೂ ದೊರೆಯುತ್ತವೆ. ಯಂತ್ರಗಳ ಬಗ್ಗೆ ತಿಳುವಳಿಕೆ ಸಾಮಾನ್ಯನಲ್ಲೂ ಇರುತ್ತಿತ್ತು. **ಯಂತ್ರ ಮಾತೃಕಾ** ಅರವತ್ನಾಲ್ಕು ಕಲೆಗಳಲ್ಲಿ ಒಂದೆಂದು ಉಲ್ಲೇಖಿಸಲಾಗಿದೆ. ವಿವಿಧ ಯಂತ್ರ ಜಾಲಗಳನ್ನು ರಚಿಸಲು ಮಹಾಶಿಲ್ಪಿ ವಿಶ್ವಕರ್ಮ ವಿರಚಿತ ಶಾಸ್ತ್ರವೇ ಇದಕ್ಕೆ ಆಧಾರ. ಯಂತ್ರಗಳಲ್ಲಿ ಸಜೀವ-ನಿರ್ಜೀವವೆಂದು ಎರಡು ಬಗೆ. ಯಂತ್ರಗಳನ್ನು ಯಾನ, ಉದಕ ಮತ್ತು ಸಂಗ್ರಾಮಗಳಲ್ಲಿ ಬಳಸಲಾಗುತ್ತದೆ. **[ಯಂತ್ರ ಮಾತೃಕೇತಿ । ಸಜೀವಾನಾಂ ನಿರ್ಜೀವಾನಾಂ ಯಂತ್ರಾಣಾಂ ಯಾನೋದಕ ಸಂಗ್ರಾಮಾರ್ಥಂ ಘಟನಾಶಾಸ್ತ್ರಂ ವಿಶ್ವಕರ್ಮ ಪ್ರೋಕ್ತಮ್ ।]** ಎಂದು ವಿವರಿಸಲಾಗಿದೆ[11].

ಭಗವತೀ ಸೂತ್ರದಲ್ಲಿ 'ಮಹಾಶಿಲಾ ಕಂಟಕ' ಸಂಗ್ರಾಮ ಮತ್ತು 'ರಥ ಮೂಸಲ' ಸಂಗ್ರಾಮಗಳು ಹೇಳಲ್ಪಟ್ಟಿವೆ. ಮಹಾಶಿಲಾ ಕಂಟಕ ಸಂಗ್ರಾಮದಲ್ಲಿ ಕಲ್ಲುಗಳ ಸುರಿಮಳೆ ನಡೆಯುತ್ತಿತ್ತು. ಹುಲ್ಲುಕಡ್ಡಿಯೂ ಕಲ್ಲಿನ ತಾಡನದಿಂದ ಉಳಿಯುವುದು ಸಾಧ್ಯವಿಲ್ಲದಂತಹ ಸುರಿಮಳೆ! ರಥ ಮೂಸಲ ಸಂಗ್ರಾಮದಲ್ಲಿ ಕುದುರೆಗಳಾಗಲಿ, ಸಾರಥಿಯಾಗಲಿ ಇಲ್ಲದ ರಥ ಶತೃಗಳತ್ತ ಶಸ್ತ್ರಾಸ್ತ್ರಗಳನ್ನು ಸುರಿಸುತ್ತಾ ಹೋರಾಡುವುದು. ರೋಜರ್ ಬೇಕನ್ ಹದಿಮೂರನೆಯ

10 H. M. Elliot : History of India, Vol VI (p 471)
11 ಕಾಮಸೂತ್ರಕ್ಕೆ ಜಯಮಂಗಲ ಟೀಕೆ

ಶತಮಾನದಲ್ಲಿ ಇದೇ ರೀತಿಯ ಆದರೆ ಕೊಡಲಿಗಳನ್ನು ಪ್ರಯೋಗಿಸುತ್ತಿದ್ದ ರಥದ ಉಲ್ಲೇಖ ಮಾಡುತ್ತಾನೆ. ಪರ್ಷಿಯನ್ನರಲ್ಲೂ ಇದೇ ರೀತಿಯ ರಥದ ಬಳಕೆ ಇತ್ತೆಂದು ಹೊರ್ನ್ಲೀ ಅವರು ಹೇಳುತ್ತಾರೆ[12]. ಋಗ್ವೇದದಲ್ಲಿ ಇದೇ ರೀತಿಯ ರಥದ ವರ್ಣನೆ ಕೇಳಿ :

> ಅನೇನೋ ವೋ ಮರುತೋ ಯಾಮೋ ಅಸ್ತು ಅನಶ್ವಶ್ಚಿದ್ ಯಮಜತ್ಯರಥೀಃ।
> ಅನವಸೋ ಅನಭೀಶೂ ರಜಸ್ತೂರ್ವಿ ರೋದಸೀ ಪಥ್ಯಾ ಯಾತಿ ಸಾಧನ್॥ [13].

[ಕುದುರೆಗಳಿಲ್ಲದೆ ರಥ ಓಡುತ್ತಿದೆ. ಸಾರಥಿಯೂ ಅದರಲ್ಲಿ ಇಲ್ಲ. ಆದರೂ ಅದರ ವೇಗಕ್ಕೆ ಚ್ಯುತಿಯಿಲ್ಲ. ಕಡಿವಾಣವೇ ಇಲ್ಲದ ರಥ. ಆದರೂ ದೋಷರಹಿತ ರಥವಿದು. ಧೂಳೆಬ್ಬಿಸುತ್ತಾ ಓಡುತ್ತದೆ.]

ಈ ರೀತಿಯ ಯಂತ್ರಗಳೆಲ್ಲಾ ಇದ್ದಮೇಲೆ ಅಗ್ನ್ಯಾಸ್ತ್ರಗಳು ಬಳಸುತ್ತಿರಲಿಲ್ಲವೇ ಎಂಬ ಸಂಶಯ ಬರಬಹುದು. 'ಕೌಟಿಲ್ಯ ಉಲ್ಲೇಖಿಸಿರುವ ಹಲವಾರು ಯಂತ್ರಗಳು ಅಗ್ನ್ಯಾಸ್ತ್ರಗಳೆಂದೇ ತೋರುತ್ತದೆ' ಎಂದು ಡಾ. ವಿ. ರಾಘವನ್ ಹೇಳುತ್ತಾರೆ. ಎಲಿಯಟ್ ಮತ್ತು ಓಪರ್ಟ್ ಅವರ ಅಭಿಮತದಂತೆ ಅಗ್ನ್ಯಾಸ್ತ್ರಗಳು ಬಳಕೆಯಲ್ಲಿದ್ದುದು ಮಾತ್ರವಲ್ಲ ಈ ಅಸ್ತ್ರಗಳ ತೌರೇ ಭಾರತ !

ಯುದ್ಧರಂಗದಲ್ಲಿ ಬಳಸಲ್ಪಡುತ್ತಿದ್ದ ಯಂತ್ರಗಳ ವಿವರಗಳನ್ನು ಕೇಳಿದ್ದೀರಿ. ಯಂತ್ರ ಗುಣಗಳನ್ನೂ 'ಸಮರಾಂಗಣ ಸೂತ್ರಧಾರ'ದಲ್ಲಿ ವಿವರವಾಗಿ ಕೊಡಲಾಗಿದೆ. ಯಂತ್ರದ ಕಾರ್ಯವ್ಯಾಪ್ತಿ, ತಯಾರಿಕಾ ವಿಧಾನ ಮುಂತಾದವುಗಳ ಬಗ್ಗೆ ವಿವರವಾದ ಮಾಹಿತಿ ದೊರೆಯುತ್ತದೆ. ಯಂತ್ರದ ಕೆಲಸ, ಕೆಲಸದ ಕಾಲ, ಅದರ ಪ್ರತ್ಯೇಕತೆ ಮುಂತಾದವುಗಳನ್ನೆಲ್ಲಾ ಧೀರ್ಘವಾಗಿ ಕೊಟ್ಟಿದ್ದಾರೆ. ಇದರಿಂದ ಯಂತ್ರಗಳ ಕಲ್ಪನೆ ಪೂರ್ವಿಕರಿಗೆ ಹೊಸದಾಗಿರುವುದಲ್ಲ ಎಂಬುದು ಸ್ಪಷ್ಟ. ಆ ಯಂತ್ರ ಸೃಜಕರು ವೈಶ್ವಕರ್ಮಣ ಸಂಪ್ರದಾಯದ ಶಿಲ್ಪಿಗಳೇ ಎಂಬುದು ಈಗಾಗಲೇ ವಿದಿತವಾಗಿರಬೇಕು.

---

12 A.F.R Hoernle : Bibliotheca Indica App III (p 59-60)

13 ಋಗ್ವೇದ, ೬ : ೬೬ : ೭

ಇದಕ್ಕಿಂತಲೂ ಕೌತುಕವಾದ ಮತ್ತೊಂದು ಸಂಗತಿಯನ್ನು ಉಲ್ಲೇಖಿಸುವುದು ಅನಿವಾರ್ಯವೆನಿಸುತ್ತಿದೆ.

ತಿಸ್ರಃ ಕ್ಷಪಃ ತ್ರಿರಹಾತಿ ವ್ರಜದ್ಭಿಃ ನಾಸತ್ಯಾ ಭುಜ್ಯುಂ ಊಹಥುಃ ಪತಂಗೈಃ ।
ತಮೂಹಥುಃ ನೌಭಿರಾತ್ಮನ್ವತೀಭಿಃ ಅಂತರಿಕ್ಷಪ್ರುದ್ಭಿರಪೋದಕಾಭಿಃ ॥ 14

[ಅತಿ ವೇಗದಿಂದ ಪಕ್ಷಿಯಂತೆ ಚಲಿಸುವ ವಾಹನದಲ್ಲಿ ಮೂರು ರಾತ್ರಿ ಮತ್ತು ಹಗಲುಗಳ ಕಾಲ ಪ್ರಯಾಣ ಮಾಡಿದ ನಂತರ ನಾಸತ್ಯರು ಭುಜ್ಯುವನ್ನು ತಮ್ಮ ಸ್ಥಾನಕ್ಕೆ ತಂದರು. ಈ ವಾಹನ ಅಂತರಿಕ್ಷದಲ್ಲಿ ಮೇಘಮಂಡಲಕ್ಕಿಂತಲೂ ಎತ್ತರದಲ್ಲಿ ತನ್ನ ನಿಯಂತ್ರಣವನ್ನು ತಾನೇ ಮಾಡಿಕೊಳ್ಳುವ ನಾವೆಯಂತೇ ಚಲಿಸುತ್ತಿತ್ತು. ಈ ರೀತಿಯವು ಮೂರು ಇದ್ದವು.]

ಇದನ್ನು 'ಆಕಾಶ ಯಂತ್ರ'ವೆಂದು ಕರೆಯೋಣ. ಈ ರೀತಿಯ ಯಂತ್ರಗಳ ಉಲ್ಲೇಖ ಸಂಸ್ಕೃತ ಸಾಹಿತ್ಯದಲ್ಲಿ ಬಹಳವಾಗಿ ದೊರೆಯುತ್ತದೆ. ಬಾಣನ **ಹರ್ಷ ಚರಿತ್ರೆ**ಯಲ್ಲಿ ಶತೃರಾಜರು ಅರಸರಿಗೆ ಒಡ್ಡುತ್ತಿದ್ದ ಅಪಾಯಗಳಲ್ಲಿ ಆಕಾಶಯಂತ್ರಗಳನ್ನು ಉಲ್ಲೇಖಿಸುತ್ತಾನೆ. ಚಂಡೀಪತಿ ಎಂಬ ಅರಸನಿಗೆ ವಿಚಿತ್ರವೆನಿಸುವುದರಲ್ಲೆಲ್ಲಾ ಕುತೂಹಲ. ಯವನ ಶಿಲ್ಪಿಯೊಬ್ಬ ತಯಾರಿಸಿದ ಆಕಾಶ ಯಂತ್ರವನ್ನು ಪರೀಕ್ಷಿಸಲು ಏರಿದಂತೆಯೇ ಅವನನ್ನು ಹೊತ್ತು ಯಂತ್ರ ಮಾಯವಾಯಿತು[15]. ಇದರಲ್ಲಿ ಆಕಾಶ ಯಂತ್ರದ ಶಿಲ್ಪಿ ಯವನ ಎಂಬುದು ಸ್ಪಷ್ಟಗೊಳಿಸಲಾಗಿದೆ. **ಬೃಹತ್ ಕಥೆ**ಯಲ್ಲಿ ಆಕಾಶ ಯಂತ್ರಗಳ ಉಲ್ಲೇಖವಿದೆ. ಅದನ್ನು ಯವನರ ಶಿಲ್ಪವೆಂದೇ ಹೇಳಲಾಗಿದೆ. **ಮಣಿಮೇಖಲೈ** ತಮಿಳು ಕಾವ್ಯದಲ್ಲಿಯೂ ಯವನ ಶಿಲ್ಪಿಗಳ ಉಲ್ಲೇಖವಿದೆ[16]. ಸೋಮದೇವನ **ಕಥಾಸರಿತ್ಸಾಗರ**ದಲ್ಲಿ ಗರ್ಭಿಣಿ ವಾಸವದತ್ತೆಯ ಬಯಕೆ ಆಕಾಶ ಯಂತ್ರದಿಂದ ಭೂಮಿಯನ್ನೆಲ್ಲಾ ನೋಡಬೇಕೆಂಬುದು[17] ಎಂಬುದು ತಿಳಿಯುತ್ತಲೇ ಸೇನಾಪತಿ ರುಮಣ್ವಾನ್

14 ಋವೇ, ೧ : ೧೧೬ : ೩-೪

15 ಆಶ್ಚರ್ಯ ಕುತೂಹಲೀ ಚ ಚಂಡೀಪತಿಃ ದಂಡೋಪನತಯವನನಿರ್ಮಿತೇನ । ನಭಸ್ಥಲಯಾಯಿನಾ ಯಂತ್ರಯಾನೇನ ಅನೀಯತ ಕ್ವಾಪಿ ॥

16 ಮಣಿಮೇಖಲೈ ೧೯ : ೧೦೮

17 ಕಥಾಸರಿತ್ಸಾಗರ, ೫ : ೧೯೦

ಒಡನೆಯೇ ಕಾಷ್ಠ ಶಿಲ್ಪಿಯನ್ನು ಕರೆಯಿಸುತ್ತಾನೆ. ಹಾರುವ ಯಂತ್ರಗಳನ್ನು ತಯಾರಿಸಲು ಹೇಳಿದ. ಆಗ ಆ ಶಿಲ್ಪಿ 'ನನಗೆ ಶಿಲಾ, ಜಲ, ಮೃತಿಕಾ ಮತ್ತು ದಾರು ಯಂತ್ರಗಳ ಶಿಲ್ಪ ಮಾತ್ರ ತಿಳಿದಿದೆ. ಆಕಾಶ ಯಂತ್ರ ಯವನ ಶಿಲ್ಪಿಗಳಿಗೇ ತಿಳಿದಿರುವ ರಹಸ್ಯ. ಆ ಶಿಲ್ಪವನ್ನು ನಾನು ಕಣ್ಣಿಂದ ಕಂಡದ್ದೂ ಇಲ್ಲ'[18] ಎಂದು ಹೇಳಿದ. ಯವನ ಶಿಲ್ಪಿಗಳು ಈ ವಿದ್ಯೆಯನ್ನು ತಾವು ಅರಿತಿದ್ದರೂ ಗೋಪ್ಯವಾಗಿ ಇರಿಸುವುದನ್ನು ಒಬ್ಬ ಬ್ರಾಹ್ಮಣನು ವಿವರಿಸಿದ:

ವಾಸವದತ್ತೆಯ ತಂದೆ ಮಹಾಸೇನ ಉಜ್ಜಯನಿಯ ಅರಸ. ಪುಕ್ಕಶಕ ಆತನ ಆಸ್ಥಾನದ ಶಿಲ್ಪಿ. ಒಮ್ಮೆ ಅರಸನೊಂದಿಗೆ ಸೌರಾಷ್ಟ್ರಕ್ಕೆ ಹೋದ. ಅಲ್ಲಿ ವಿಶ್ವಿಲನೆಂಬ ಶಿಲ್ಪಿಯ ಪರಿಚಯವಾಯಿತು. ಕೌಶಲ್ಯದಲ್ಲಿ ವಿಶ್ವಕರ್ಮನಿಗೆ ಸಮನೆನಿಸಿದವ. ಅವನ ತಂದೆ ಮಯ. ತನ್ನ ಮಗಳಾದ ರತ್ನಾವಳಿಯನ್ನು ವಿಶ್ವಿಲನಿಗೆ ಮದುವೆ ಮಾಡಿಕೊಡಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ. ಈ ಸಂಬಂಧ ಇತ್ಯರ್ಥವಾಯಿತು. ಅಲ್ಲಿಂದ ಹಿಂತಿರುಗಿ ತನ್ನ ಅಳಿಯನಿಗಾಗಿ ಪುಕ್ಕಶಕ ಕಾಯುತ್ತಿದ್ದ. ಒಮ್ಮೆ ತನ್ನ ಕರ್ಮಾಗಾರದಿಂದ ತುಂಬಾ ತಡವಾಗಿ ಹಿಂತಿರುಗಿ ಬಂದರೂ ಮನೆಯವರ್ಯಾರೂ ಅವನ ಸ್ನಾನ ಸಂಧ್ಯಾದಿಗಳತ್ತ ಗಮನ ಹರಿಸಲಿಲ್ಲ. ವಿಚಾರಿಸಿದಾಗ ತಿಳಿಯಿತು. ಯಾರೋ ಅಭ್ಯಾಗತನೊಬ್ಬ ಸ್ವಲ್ಪ ಅಕ್ಕಿಯನ್ನು ಬೇಯಿಸಲು ಕೊಟ್ಟಿರುವ. ಎಷ್ಟು ಬೇಯಿಸಿದರೂ ಅದು ಬೇಯುತ್ತಲೇ ಇಲ್ಲ. ಕೊನೆಗೆ ಆ ಅಕ್ಕಿ ನೆನೆದು ಇಲ್ಲ! ಇದೇ ಅವರ ಸಮಸ್ಯೆಯಾಗಿತ್ತು. ತನ್ನ ಅಳಿಯ ಬಂದಿರಬೇಕೆನಿಸಿತು. ಅಭ್ಯಾಗತವನನ್ನು ನೋಡಬಯಸಿದಾಗ ವಿಶ್ವಿಲ ಕಾಣಿಸಿಕೊಂಡ. ಆ ಅಕ್ಕಿ ನಿಜವಾದುದಲ್ಲ. ಕರಘಾಟಿ ಮರದಲ್ಲಿ ಕೊರೆದಿರುವ ಕೃತಕ ಅಕ್ಕಿ ಕಾಳುಗಳು ಎಂಬುದನ್ನು ಅವನೇ ನಂತರ ತಿಳಿಸಿದ. ಮಗಳ ವಿವಾಹ ಮಹೋತ್ಸವ ವೈಭವವಾಗಿ ನಡೆಯಿತು. ತನ್ನ ಜೀವನದ ಖರ್ಚು ತಾನೇ ಭರಿಸಬೇಕೆಂದು ಬಳಿಯ ಕಾಡಿನಿಂದ ಮರ ತಂದು ವಿಶ್ವಿಲ ಅನೇಕ ಯವನ ಯಂತ್ರಗಳನ್ನು, ಗೃಹಕೃತ್ಯದ ಪಾತ್ರೆಗಳನ್ನು[19] ವೃಕ್ಷಾಯು-

18 ಆಕಾಶ ಯಂತ್ರಾಣಿ ಪುನರ್ಯವನಾಃ ಕಿಲ ಜಾನತೇ। ಅಸ್ಮಾಕಂ ತು ನ ಯಾತಾನಿ ಗೋಚರಂ ಚಕ್ಷುಷಾಮಪಿ॥ (ಅದೇ ೪ : ೧೯೬)

19 ಯಂತ್ರಾಣಿ ಘಟಯಾಮಾಸ ಯಾವನಾನ್ಯಥ ವಿಶ್ವಿಲಃ।(ಅದೇ ೫ : ೨೨೪)

ವೇದದ[20] ಪ್ರಕಾರ ತಯಾರಿಸಿ, ಮಾರಾಟಮಾಡಿ ಬಂದ ಸಾವಿರಾರು ಹಣವನ್ನು ಮಾವನಿಗೆ ಒಪ್ಪಿಸಿದ.

ಒಮ್ಮೆ ಕಾಶಿಯ ಅರಸ ಬ್ರಹ್ಮದತ್ತನಿಗಾಗಿ ಒಂದು ದೇವಾಲಯವನ್ನು ಕಟ್ಟಲು ಪುಕ್ಕಶಕ ಹೋಗಬೇಕಾಯಿತು. ಆತನಿಗೆ ಬದಲಾಗಿ ವಿಶ್ವಿಲನೇ ಹೋಗುವಂತೆ ಅರಸನನ್ನು ಒಪ್ಪಿಸಿದ. ದಿನದ ಕೊನೆಯಲ್ಲಿ ವಿಶ್ವಿಲ ಹೇಗಾದರೂ ತಪ್ಪಿಸಿಕೊಳ್ಳುತ್ತಿದ್ದ. ಮತ್ತೆ ಬೆಳಿಗ್ಗೆ ಬರುತ್ತಿದ್ದ. ಇತ್ತ ರತ್ನಾವಳಿ ಗರ್ಭವತಿಯಾದಳು. ಇದು ಆವಳ ತಾಯಿ-ತಂದೆಗಳಿಗೆ ದೊಡ್ಡ ಸಮಸ್ಯೆಯಾಯಿತು. ಅರಸನೇ ಈ ವಿಷಯ ಕೇಳಿ ತನ್ನ ಚಾರರು ಹೇಳಿದ ಸಂಗತಿಯಿಂದ ಈ ಸಮಸ್ಯೆ ಬಿಡಿಸಿದ. ವಿಶ್ವಿಲ ಯಾರಿಗೂ ಕಾಣದಂತೆ ಯಂತ್ರಕುಕ್ಕುಟವನ್ನೇರಿ ಕಳ್ಳತನದಿಂದ ಎಲ್ಲಿಗೋ ಹೋಗುತ್ತಿದ್ದ. ಮತ್ತೆ ಮುಂಜಾನೆಯಲ್ಲಿ ಮುಖ ಮುಚ್ಚಿಕೊಂಡು ಬಿಡಾರ ಸೇರುತ್ತಿದ್ದನಂತೆ. ತನ್ನ ಕೆಲವು ಮಿತ್ರರಿಗೆ ಅಕಾಶ ಯಂತ್ರದ ಮೂಲಕ ತನ್ನ ಹೆಂಡತಿಯನ್ನು ಪ್ರತಿನಿತ್ಯವೂ ಭೇಟಿಯಾಗುತ್ತಿರುವುದಾಗಿ ತಿಳಿಸಿದ್ದರೂ ಈ ರಹಸ್ಯವನ್ನು ಯಾರಿಗೂ ತಿಳಿಸಬಾರದೆಂದು ಕೋರಿದ್ದನಂತೆ. ಆಕಾಶ ಯಂತ್ರದ ರಹಸ್ಯ ಅನ್ಯರಿಗೆ ತಿಳಿಯಬಾರದು. ತಿಳಿದಲ್ಲಿ ಅದೂ ಮಂಚದಂತೆ ತುಂಬಾ ಅಗ್ಗವಾದೀತೆಂದು ಅವರ ಭಯ. ದೇವಾಲಯ ಕಟ್ಟಿದ ನಂತರ ವಿಶ್ವಿಲ ಹಿಂತಿರುಗಿದ. ಮಗುವೂ ಆಯಿತು.

ಮಹಾಸೇನ ಈಗ ತನ್ನ ಆಸ್ಥಾನ ಶಿಲ್ಪಿಯಾದ ಪುಕ್ಕಶಕನನ್ನು ಆಕಾಶ ಯಂತ್ರಕ್ಕಾಗಿ ಒತ್ತಾಯ ಮಾಡಿದ. ಅದು ಯವನರ ವಿಶಿಷ್ಟ ಶಿಲ್ಪ[21]ವೆಂದು ಆತ ಹೇಳಿದ. ಆದರೆ ಅರಸ ಒಪ್ಪಬೇಕಲ್ಲ! ಅದಕ್ಕೆಂದು ವಿಶ್ವಿಲನನ್ನು ಒತ್ತಾಯಪಡಿಸಲಾಯಿತು. ರಹಸ್ಯವನ್ನು ತಿಳಿಸುವವನಂತೆಯೇ ಮಾತನಾಡುತ್ತಿದ್ದು ಅಂದಿನ ರಾತ್ರಿಯೇ 'ತಂದೆ-ಗಂಡ ಇಬ್ಬರಲ್ಲಿ ಒಬ್ಬರನ್ನು ಆಯ್ದುಕೊಳ್ಳು'ವಂತೆ ರತ್ನಾವಳಿಗೆ ಹೇಳಿದ. 'ಮಾವನ ಬಲವಂತ ತನ್ನನ್ನು ತನ್ನ ಊರಿಗೆ ಓಡಿಸುತ್ತಿದೆ' ಎಂದು ಹೇಳುತ್ತಾ ಅಂದಿನ ರಾತ್ರಿಯೇ ಇಬ್ಬರೂ ಆಕಾಶ ಯಂತ್ರದಲ್ಲಿ ರಹಸ್ಯವಾಗಿ ಪ್ರಯಾಣ ಮಾಡಿದರು.

---

20 ಅದೇ, ೩ : ೨೨೫

21 ಅದೇ, ೫ : ೨೬೧

—ಬ್ರಾಹ್ಮಣನ ಈ ವಿವರದಿಂದ ಶಿಲ್ಪಿಗಳನ್ನು ರುಮಣ್ವಾನ್ ಒತ್ತಾಯಕ್ಕೆ ಸಿಲುಕಿಸಿದ. ಆಗ ಹೊಸ ಶಿಲ್ಪಿಯೊಬ್ಬ ಆಕಾಶ ಯಂತ್ರ ತಯಾರಿಸಿ ಕೊಡಲು ಮುಂದೆ ಬಂದ. ಗರುಡನ ಆಕಾರದಲ್ಲಿದ್ದ ಅದರಿಂದ ವಾಸವದತ್ತೆಯ ಬಯಕೆ ತೀರಿತು.

ನಂತರದ ಜೈನ ಕಾವ್ಯದಲ್ಲಿ (ವಾಡೀಭಸಿಂಹನ ಗದ್ಯ ಚಿಂತಾಮಣಿ ಮತ್ತು ಕ್ಷತ್ರ ಚೂಡಾಮಣಿ) ರಾಣಿ ವಿಜಯಳಿಗಾಗಿ ಮಯೂರ ಯಂತ್ರವನ್ನು ಶಿಲ್ಪಿಗಳು ಸಿದ್ಧಗೊಳಿಸಿದರೆಂದು ಹೇಳಲಾಗಿದೆ.

ಸೋಮದೇವನ ಕಥಾಸರಿತ್ಸಾಗರದಲ್ಲಿ ಮಯನ ಮಗಳಾದ ಸೋಮಪ್ರಭೆಯು ಮದನಮಂಚುಕೆಯಲ್ಲಿ ಸ್ನೇಹ ಬೆಳೆಸಿದಳೆಂದು ಹೇಳುವಕಥೆ ಇದೆ. ಅಸುರರ ಶಿಲ್ಪಿಯಾದ ಮಯನಿಗೆ ಸ್ವಯಂಪ್ರಭೆ ಮತ್ತು ಸೋಮಪ್ರಭೆ ಎಂಬ ಇಬ್ಬರು ಪುತ್ರಿಯರು. ಒಂದು ದಿನ ಬೆಳಿಗ್ಗೆ ಅನೇಕ ರೀತಿಯ ವಿಚಿತ್ರ ಯಂತ್ರಗಳಿದ್ದ ತನ್ನ ಆಟಿಕೆಗಳ ಪೆಟ್ಟಿಗೆ ತೋರಿಸುತ್ತಾಳೆ. ಮಯನೇ ಅವನ್ನು ಮಗಳಿಗಾಗಿ ಮಾಡಿಕೊಟ್ಟಿದ್ದ. ಅವನ್ನು ಆಡಿಸುವುದೂ ಸೋಮಪ್ರಭೆ ತಿಳಿದಿದ್ದಳು. ಒಂದು ಗುಂಡಿಯನ್ನು ಮುಟ್ಟುತ್ತಲೇ ಆಕಾಶಕ್ಕೆ ನೆಗೆದು ಮಾಲೆಯೊಂದಿಗ ಬರುವ ಆಟಿಕೆಯೂ ಅವುಗಳಲ್ಲಿಯ ಒಂದು. ಇಲ್ಲಿ ಆಟಿಕೆಗಳ ತತ್ವವನ್ನು ವಿವರಿಸುತ್ತಾ 'ಸಮರಾಂಗಣ ಸೂತ್ರಧಾರ' ಕಾರನು ಯಂತ್ರಗಳ ಬಗ್ಗೆ ಕೊಟ್ಟಿರುವುದೇ ಪುನರಾವರ್ತನಗೊಳ್ಳುವಂತೆ ತೋರುತ್ತದೆ.

ಸಮರಾಂಗಣ ಸೂತ್ರಧಾರಕಾರನು ಅನೇಕ ಯಂತ್ರಗಳನ್ನು ವಿವರಿಸಿದ ನಂತರ ಅವೆಲ್ಲವನ್ನು ತಾನೇ ನೋಡಿದ್ದೇನೆ ಎಂದೂ ಹೇಳುತ್ತಾನೆ. ಪೂರ್ವ ಶಿಲ್ಪಿಗಳಿಂದ ಕೊಡಲ್ಪಟ್ಟಿರುವ **[ಅಗ್ರತಶ್ಚ ಪುನರ್ ಬ್ರೂಮಃ ಕಥಿಥಂ ಯತ್ಪುರಾತನೈಃ]** ಯಂತ್ರಗಳನ್ನು ತಯಾರಿಸುವ ಸೂತ್ರಧಾರರ ಬಗ್ಗೆ ಹೇಳುತ್ತಾ ಅವರಿಗೆ ವಂಶಪಾರಂಪರ್ಯವಾಗಿ ಈ ಜ್ಞಾನ ಸಂದಾಯವಾಗಿರಬೇಕು, ಸ್ವಶಕ್ತಿಯೊಂದಿಗೆ ಗುರುವಿನ ಮಾರ್ಗದರ್ಶನವೂ ಬೇಕು. ಅನುಭವಜನ್ಯ ಜ್ಞಾನ ಅತ್ಯಾವಶ್ಯಕ. ಕಲ್ಪನೆಯ ಪ್ರಮಾಣವು ಅಧಿಕವಾಗಿರಬೇಕು[22] ಎಂದು ವಿವರಿಸುತ್ತಾನೆ. ಯಂತ್ರಗಳಲ್ಲಿ ಐದುವಿಧಗಳೆಂದು ಹೇಳಿ ಆ ಐದುಶಾಖೆಗಳನ್ನೂ

22 ಅದೇ, ೫ : ೮೫ – ೮೭

ವಿವರಿಸುತ್ತಾನೆ. 'ಆದರೆ ಅತ್ಯಾಶ್ಚರ್ಯಕರವಾದ ಈ ಯಂತ್ರಗಳ ನಿರ್ಮಾಣ ರಹಸ್ಯವನ್ನು ಮಾತ್ರ **ಸಮರಾಂಗಣ ಸೂತ್ರಧಾರಕಾರನು** ವಿವರಿಸಿಲ್ಲ. ಇದಕ್ಕೆ ಕಾರಣ ತನಗೆ ಆ ರಹಸ್ಯಗಳು ತಿಳಿದಿಲ್ಲ ಎಂಬುದಲ್ಲವೆಂಬುದನ್ನೂ[23] ತಾನೇ ಹೇಳಿ, ತಿಳಿಸುವ ವಿದ್ಯೆ ಇದಲ್ಲ ಅನುಭವದಿಂದ ಅವಗತ ಮಾಡಿಕೊಳ್ಳಬೇಕಾದ ವಿದ್ಯೆ, ಆದ್ದರಿಂದ ಈ ಯಂತ್ರ ರಚನಾ ಸಾಮರ್ಥ್ಯವುಳ್ಳ ಶಿಲ್ಪಿಯನ್ನು ಇಂತು ವರ್ಣಿಸಿದ್ದಾನೆ —

ಪಾರಂಪರ್ಯಂ ಕೌಶಲಂ ಸೋಪದೇಶಂ ಶಾಸ್ತ್ರಾಭ್ಯಾಸೋ ವಾಸ್ತುಕರ್ಮೋದ್ಯಮೋ ಧೀಃ | ಸಾಮಗ್ರೀಯಂ ನಿರ್ಮಲಾ ಯಸ್ಯ ಸೋಽಸ್ಮಿಂಶ್ಚಿತ್ರಾಣ್ಯೇವಂ ವೇತ್ತಿ ಯಂತ್ರಾಣಿ ಕರ್ತುಮ್ ||

[ಯಾರಿಗೆ ಸದಾಚಾರೋಪದೇಶದಿಂದ ಕೂಡಿದ ಪರಂಪರೆ ಇದೆಯೋ, ಯಾರಲ್ಲಿ ಕೌಶಲ, ಶಾಸ್ತ್ರ ವಿಜ್ಞಾನ, ವಾಸ್ತುಕರ್ಮಗಳನ್ನು ಗ್ರಹಿಸುವ ಸಾಮರ್ಥ್ಯ, ಶಿಲ್ಪ ಪ್ರತಿಭೆಗಳೆಂಬ ನಿರ್ಮಲ ಸಾಮಗ್ರಿಗಳಿರುವವೋ ಅಂತಹ ಶಿಲ್ಪಿಯೇ ವಿಚಿತ್ರವಾದ ಈ ಯಂತ್ರಗಳನ್ನು ನಿರ್ಮಾಣ ಮಾಡಲು ಸಮರ್ಥನಾಗಿರುತ್ತಾನೆ.] ಈ ವಿದ್ಯೆಯ ರಹಸ್ಯಗಳು ಶಿಲ್ಪಿಗಳ ವಂಶಕ್ಕೆ ಅನೂಚಾನವಾಗಿ ಸೀಮಿತವಾಗಿದ್ದವೆಂಬುದು ಸ್ಪಷ್ಟವಾಗುತ್ತದೆ[24].

ಸಾಕಷ್ಟು ವಿವರವಾಗಿಯೇ ಪ್ರಾಚೀನ ಯಂತ್ರಗಳ ಪರಿಚಯ ಮಾಡಿಕೊಂಡಿದ್ದೇವೆ. ಇದರಲ್ಲಿ ಯವನ ಎಂಬ ಪದಕ್ಕೆ ಶತಮಾನಗಳೊಂದಿಗೆ ಅರ್ಥವೂ ಬದಲಾವಣೆಯಾಗಿದೆ ಎಂಬುದನ್ನು ನಮ್ಮ ಅನೇಕ ಪಂಡಿತರು ಗಮನಿಸಿದಂತೆ ತೋರುವುದಿಲ್ಲ. ಗ್ರೀಕರನ್ನು ಅಥವ ಅರಬ್ಬರನ್ನು ಈ ಪದದಿಂದ ಗುರುತಿಸುವುದು ಹತ್ತನೆಯ ಶತಮಾನದ ವಾಡಿಕೆ. ಏಳನೆಯ ಶತಮಾನದಲ್ಲಿ ಪರ್ಷಿಯ ಅಥವ ಇರಾನಿನವರನ್ನು ಈ ಪದದಿಂದ ಗುರುತಿಸುತ್ತಿದ್ದರು. ಇದಕ್ಕೂ ಮೊದಲು 'ಯಂತ್ರಗಳನ್ನು ದಾನವರ ಕೃತಿಯೆಂದು ಉಲ್ಲೇಖಿಸಲಾಗುತ್ತಿತ್ತು. ಇದು ಗಮನಿಸಬೇಕಾದ ಅಂಶ. ನಂತರ ಯಂತ್ರಶಾಸ್ತ್ರ ಯವನರದೆಂದು ಉಲ್ಲೇಖಿತವಾಗುತ್ತದೆ. ಮಯ ಅಸುರನ

23 ಯನ್ತ್ರಾಣಾಂ ಘಟನಾನೋಕ್ತಾ ಗುಪ್ತ್ಯರ್ಥಂ ನಾಜ್ಞತಾವಶಾತ್ | ತತ್ರ ಹೇತುರಯಂ ಜ್ಞೇಯೋ ವ್ಯಕ್ತಾ ನೈತೇ ಫಲಪ್ರದಾಃ || (ಸಮರಾಂಗಣ ಸೂತ್ರಧಾರ)

24 ಡಾ. ಕೊಂಡೂರು ವೀರರಾಘವಾಚಾರ್ಯ : ಶಿಲ್ಪ ದರ್ಶನಮು (ಪು ೧೮೩)

ಸಂಬಂಧ ಇರಾನಿನ ಅಸುರರೊಂದಿಗೆ ಇರುವುದನ್ನು ನೆನಪಿನಲ್ಲಿರಿಸಿಕೊಂಡರೆ ಈ ಉಲ್ಲೇಖಕ್ಕೆ ಅರ್ಥ ಸ್ಫುರಿಸುತ್ತದೆ. ಇರಾನ್ ಭಾರತದೊಂದಿಗೆ ಪ್ರಾಚೀನ ಕಾಲದಿಂದಲೂ ಸಂಬಂಧವಿರಿಸಿಕೊಂಡೇ ಬಂದಿದೆ'[25] 'ವಿಶ್ವಕರ್ಮ ದೇವತೆಗಳ, ದಾನವರ, ದೈತ್ಯರ ಮನ್ನಣೆ ಗಳಿಸಿದ್ದ ಶಿಲ್ಪಿ. ವಿಶ್ವಕರ್ಮ ದೇವತೆಗಳ ಶಿಲ್ಪಿಯಾಗಿದ್ದಂತೆಯೇ ಮಯ ಅಸುರರ ಶಿಲ್ಪಿಯಾಗಿದ್ದ[26]. ಮಹಾಭಾರತದಲ್ಲಿ ದಾನವರ ವಿಶ್ವಕರ್ಮ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ[27]. ತನ್ನನ್ನು ಮಹಾಕವಿ ಎಂದೂ ಕರೆದುಕೊಳ್ಳುತ್ತಾನೆ. 'ಮಾನಸಾರ'ದಂತೆ ಮಯ ವಿಶ್ವಕರ್ಮ ಪರಬ್ರಹ್ಮನ ನಾಲ್ಕು ಮುಖಗಳಿಂದ ಆವಿರ್ಭವಿಸಿದವರಲ್ಲಿ ಒಬ್ಬ[28]. ಇವುಗಳಿಂದ ಮಯ ವಿಶ್ವಕರ್ಮ ವಂಶಜನೆಂಬುದು ಸ್ಪಷ್ಟ. ಋಗ್ವೇದದ ಒಂದು ಸೂಕ್ತದಲ್ಲಿ[29] **ಮಹತ್ ದೇವಾನಾಮಸುರತ್ವಮೇಕಂ** ಎಂದು ದೇವಾಸುರರ ಏಕತ್ತ್ವವನ್ನು ಸಾರಲಾಗಿದೆ. ಅಸುರ ಎಂಬುದು ಗೌರವ ವಾಚಕವಾದಂತೆ ಹೆಸರಿನೊಂದಿಗೆ ಪ್ರಯೋಗವಾಗುತ್ತಿತ್ತು.

ಯುದ್ಧಗಳಲ್ಲಿ ಮಹತ್ತ್ವ ಸ್ಥಾನ ಗಳಿಸಿದ್ದ ಯಂತ್ರಗಳ ರೂವಾರಿಗಳು ಶಿಲ್ಪಿಗಳೇ. ಅದಕ್ಕಾಗಿಯೇ ವೇದರ್ಷಿಗಳು **ರಥೇಭ್ಯೋನಮಃ ರಥ ಕಾರೇಭ್ಯೋ ನಮಃ** ಎಂದು ನಮಸ್ಕರಿಸಿದ್ದು. ಧೀರ, ಮನೀಷೀ ಎಂದು ಕರೆಯಿಸಿಕೊಂಡ ಕಾರು(ಶಿಲ್ಪಿ)ವನ್ನು ಮಯನೆಂದು, ಮಹಾಕವಿಯೆಂದು ಮಹಾ ಕಾವ್ಯಗಳಲ್ಲಿ ಸಂಬೋಧಿಸಲಾಗಿದೆ. ಧನುರ್ವೇದ ಕ್ಷತ್ರಿಯರ ವಿದ್ಯೆಯಾಗಿದೆಯೆಂದು ಹೇಳಿದರೂ, ಕ್ಷತ್ರಿಯರ ವೀರ್ಯವಾಗಿ ನಿಂತವರು ಶಿಲ್ಪಿಗಳು.★

---

25 Dr. V. Raghavan : Yantras or Mechanical Contrivances in Ancient India (p. 5)

26 P. N. Bose(Ed) : Silpa Shastra, Introduction (p ix)

27 ಅಹಂ ಹಿ ವಿಶ್ವಕರ್ಮಾ ವೈ ದಾನವಾನಾಂ ಮಹಾಕವಿಃ ||

(ಮಹಾಭಾರತ, ಸಭಾಪರ್ವ, ಸಂಧಿ ೫)

28 Dr. P K. Acharya : A Summary of the Manasara (p 2)

ಮತ್ತು ವರಾಹನರಸಿಂಹಾಚಾರ್ಯ : ಶ್ರೀ ವಿಶ್ವಕರ್ಮಾನ್ವಯ ಪ್ರದೀಪಿಕಾ (ಪುಟ ೮೨-೧೦೩)

29 ಋ ೩ : ೫೫ ; ೧೯

೯

❋ ಡಾ. ಎ. ಸುಂದರ ಎಂ.ಎ.,

ಬಳ್ಳಿಗಾವೆಯ ಕಾಳಿಕಾದೇವಾಲಯ ಮತ್ತು ಅಲ್ಲಿಯ ಶಿಲಾಲೇಖಗಳು

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ತಾಲ್ಲೂಕಿನಲ್ಲಿರುವ ಬಳ್ಳಿಗಾವೆ ಗ್ರಾಮದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದು, ವೇಸರ ಶೈಲಿಯ ಶ್ರೇಷ್ಠ ದೇವಾಲಯ ನಿರ್ಮಾಣದ ಮಾದರಿಗಳು ಹಲವಾರು ದೊರೆಯುತ್ತವೆ. ಇಲ್ಲಿಯ ಸುಮಾರು ಇಪ್ಪತ್ತು ದೇವಾಲಯಗಳು ಜೀರ್ಣಾವಸ್ಥೆಯ ವಿವಿಧ ಹಂತಗಳಲ್ಲಿದ್ದು ಅವುಗಳಲ್ಲಿ ಕೇದಾರೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳು ಮಾತ್ರವೇ ಭದ್ರವಾಗಿವೆ. ಅವೇ ಈ ಶೈಲಿಯ ಅತ್ಯುತ್ತಮ ಮಾದರಿಗಳು. ಉಳಿದ ದೇವಾಲಯಗಳಲ್ಲಿ ಪದ್ಮ ಸರೋವರದ ದಡದಲ್ಲಿ ಇರುವ, ಪಾಳುಬಿದ್ದಿರುವ ಕಲ್ಲು ಕಟ್ಟಡದ ದೇವಾಲಯವೊಂದು ಅದರ ಕಟ್ಟಡ ರಚಾನಾಕ್ರಮ ಮತ್ತು ಗರ್ಭಗೃಹದಲ್ಲಿಯ ವಿಶಿಷ್ಟ ವಿಗ್ರಹಕ್ಕಾಗಿ ಗಮನಾರ್ಹವಾದದು. ಇವುಗಳೊಂದಿಗೆ ಇಲ್ಲಿ ಮೂರು ಶಿಲಾ ಲೇಖಗಳಿವೆ: ಮೊದಲಿನದು ಒಳಭಾಗದ ಬಲಗೋಡೆಯ ಮೇಲೆ. ಎರಡನೆಯದು ಪಿಠದ ಮೇಲೆ. ಮೂರನೆಯದು ಗರ್ಭಗುಡಿಯ ಬಾಗಿಲ ಚೌಕಟ್ಟಿನ ಮೇಲ್ಭಾಗದ ಹಾಸುಗಲ್ಲಿನ ಮೇಲೆ. ಮೊದಲಿನದು ಓದಲು ಅಸಾಧ್ಯವಾಗುವಷ್ಟು ಸವೆದಿದೆ. ನನಗೆ ತಿಳಿದ ಮಟ್ಟಿಗೆ ಇದು ಶಿವಮೊಗ್ಗ ಜಿಲ್ಲೆಗೆ ಸೇರಿದ ಎಪಿಗ್ರಾಫಿಯಾ ಕರ್ನಾಟಿಕಾ (ಭಾಗ ೭)ರಲ್ಲಿ ಕೊಟ್ಟಿಲ್ಲ. ಎರಡು ಮತ್ತು ಮೂರನೆಯ ಶಿಲಾಲೇಖಗಳ ಪಾಠಗಳನ್ನು ಇಲ್ಲಿ ಕೊಡಲಾಗಿದೆ. ಅವುಗಳಿಂದ ದೇವಾಲಯದ ನಿರ್ಮಾಣ ಸ್ಥಳ, ಕಲ್ಲಿನಲ್ಲಿ ಪುನರ್ನಿರ್ಮಾಣವಾದ ಸಂಗತಿಗಳು ತಿಳಿದು ಬರುವುದರಿಂದ ಅವು ತುಂಬಾ

ಮುಖ್ಯವಾದವು. ಆದ್ದರಿಂದ ಆ ದೇವಾಲಯ ಮತ್ತು ಶಿಲಾ ಲೇಖಗಳ ಬಗ್ಗೆ ಮುಂದೆ ವಿವೇಚನೆ ನಡೆಸಲಾಗಿದೆ.

ದೇವಾಲಯ

ದೇವಾಲಯವು ತುಂಬಾ ಸಾಮಾನ್ಯ ವಿನ್ಯಾಸದ್ದಾಗಿದ್ದು ಅದರಲ್ಲಿ ಒಂದು ಗರ್ಭಗೃಹ ಮತ್ತು ಒಂದು ಸಭಾಮಂಟಪವಿದೆ. ಅಧಿಷ್ಠಾನವು ಸುತ್ತಮುತ್ತಣ ಗೋಡೆಗಳ ಕುಸಿತದ ಮಣ್ಣಲ್ಲಿ ಹೂತು ಹೋಗಿದೆ. ಸಭಾಮಂಟಪದ ಬಲ ಗೋಡೆಯು ಬಿದ್ದು ಮಂಟಪದ ಒಳಗಿನ ಕಂಬಗಳು ಹೊರಕ್ಕೆ ಕಾಣುವಷ್ಟು ಹಿರಿದಾದ ಕಂದರ ವೇರ್ಪಟ್ಟಿದೆ. ಗರ್ಭಗೃಹದ ಮೇಲ್ಕಟ್ಟಡವು ನಂತರ ಕಾಲದಲ್ಲಿ ಜೀರ್ಣೋದ್ಧಾರಗೊಂಡು, ಈಗ ಉಳಿದಿರುವ ಕಿರಿದು ಗೊಳ್ಳುತ್ತಾ ಹೋಗುವ ಚದುರದ ಮೇಲ್ಗೋಪುರವು ಜೀರ್ಣಾವಸ್ಥೆಯಲ್ಲಿದೆ. ಸಭಾಮಂಟಪದ ಮೇಲ್ಛಾವಣಿಯ ಮೇಲ್ಭಾಗದಲ್ಲಿ ಇತ್ತೀಚೆಗೆ ನಿರ್ಮಿತವಾದ ಹೆಂಚಿನ



ಮೇಲ್ಛಾವಣಿಯನ್ನು ನಿರ್ಮಿಸಿ ಮಳೆಯ ನೀರು ದೇವಾಲಯದ ಒಳಕ್ಕೆ ಸೋರದಂತೆ ತಡೆಯುವ ಪ್ರಯತ್ನ ಮಾಡಲಾಗಿದೆ. ಅಧಿಷ್ಠಾನದಿಂದ ನಿಯಮಿತ ಅಂತರದಲ್ಲಿ ಇರುವ ಅರೆಗೋಳವಿ ಆಕಾರದ ಉದ್ದನೆಯ ಗಾಡಿಯುಳ್ಳ ಎತ್ತರ ಕಡಿಮೆಯುಳ್ಳ ಕಂಬಗಳು ಇಲ್ಲಿಯ ವಿಶೇಷ. ಅಧಿಷ್ಠಾನವು ಮಂಚಬಂಧ ರೀತಿಯದೆನಿಸುತ್ತದೆ.

ಸಭಾಮಂಟಪದ ಮಧ್ಯಸ್ಥಂಭವು ಕ್ರಿಸ್ತಶಕ ೧೧-೧೨ನೆಯ ಶತಮಾನದ ಶೈಲಿಯಲ್ಲಿದ್ದರೂ ಮತ್ತೆಲ್ಲೂ ಕಾಣಸಿಗದ ರೀತಿಯಲ್ಲಿ ಈ ಸ್ತಂಭದ ಪೀಠವು ಅಲಂಕರಣರಹಿತವಾಗಿದೆ.

ಬಾಗಿಲ ಚೌಕಟ್ಟು ಮೂರು ಶಾಖೆಗಳಲ್ಲಿ ಹರಡಿದ್ದು ಮಧ್ಯಭಾಗದ್ದು ಗೋಡೆಯಿಂದ ಚಾಚಿಕೊಂಡಿರುವ ಲಂಬ ಚತುರಸ್ರ ಆಕಾರದಲ್ಲಿದೆ. ಶಾಖಾಂತ್ಯದಲ್ಲಿ ಅಡಿಯಲ್ಲಿ ದ್ವಾರಪಾಲರಿಲ್ಲ. ಗರ್ಭಗೃಹದಲ್ಲಿರುವ ಮೂರ್ತಿಯನ್ನೇ ಹೋಲುವ ಶಿಲ್ಪವು ಲಲಾಟಬಿಂಬದಲ್ಲಿ ಬಿಡಿಸಲಾಗಿರುವುದು ಒಂದು ವೈಶಿಷ್ಟ್ಯ. ಆ ಕಾಲದ ದೇವಾಲಯಗಳಲ್ಲಿ ಈ ಪದ್ಧತಿ ಕಂಡುಬರದಾದುದರಿಂದ ಇದು ಗಮನಾರ್ಹವಾದ ಸಂಗತಿ. ಗರ್ಭಗೃಹ ಮತ್ತು ಸಭಾಮಂಟಪದ ಮಧ್ಯೆ ಆ ಕಾಲದ ಎಲ್ಲಾ ದೇವಾಲಯಗಳಲ್ಲೂ ಕಂಡುಬರುವ ಅಂತರಾಳವು ಈ ದೇವಾಲಯದಲ್ಲಿ ಕಂಡುಬರುವುದಿಲ್ಲ. ಇದೂ ಗಮನಿಸಬೇಕಾದ ಅಂಶ.

ಗರ್ಭಗೃಹದಲ್ಲಿರುವ ದೇವತೆಯು ಅಸಮರೂಪದ ಅರ್ಧವೃತ್ತಾಕಾರದ ಕಲ್ಲಿನ ಮೇಲೆ ಕೆತ್ತಲ್ಪಟ್ಟಿದ್ದು ಮೇಲೆ ಅರ್ಧವೃತ್ತದ ಒಂದು ಸಣ್ಣ ಚಾಚು ಭಾಗವು ಇದೆ. ಆದ್ದರಿಂದ ಇದು ಉಬ್ಬುಕೆತ್ತನೆಯಾಗಿದ್ದು ವಿಶಿಷ್ಟತೆರನಾಗಿರುವಂತೆ ತೋರುತ್ತದೆ. ಶಾಸನದಲ್ಲಿ ಕಾಳಿಕಾ ದೇವಿ ಎಂದು ವರ್ಣಿಸಲ್ಪಟ್ಟಿರುವ ಈ ದೇವತೆಯು ಎರಡು ಭುಜಗಳನ್ನು ಹೊಂದಿದ್ದು ಸಾಧಾರಣ ಆಭರಣಗಳಿಂದ ಅಲಂಕರಣಗೊಂಡಿದ್ದು ಸವ್ಯಲಲಿತಾಸನದಲ್ಲಿ ಪದ್ಮ ಪೀಠದ ಮೇಲೆ ಮಂಡಿಸಿದೆ. ಆಕೆಯ ಕೈಗಳಲ್ಲಿ ಕತ್ತಿ (ಮತ್ತು ಗುರಾಣಿಯೂ ಸಹ), ಬಹುಬೀಜಫಲ (?)

ಮೂಲ ವಿಗ್ರಹ

ಇದೆ. ಪ್ರಾಚೀನ ಶಿಲ್ಪಗಳಲ್ಲೆಲ್ಲಾ ಕಂಡುಬರುವಂತೆ ಎಡಭುಜದ ಮೇಲಿಂದ ಯಜ್ಞೋಪವೀತವು ಬಲಗಡೆಗೆ ಬಂದಿದೆ.

ದೇವಿಯ ಎಡಗಡೆಗೆ ದ್ವಿಭುಜ ಗಣಪತಿಯು ರಾಜಲಲಿತಾಸನದಲ್ಲಿ ಮಂಡಿಸಿದ್ದು ಬಲಹಸ್ತದಲ್ಲಿ ಗುರುತಿಸಲಾಗದ ವಸ್ತುವನ್ನು, ಎಡಹಸ್ತದಲ್ಲಿ ಮೋದಕ ಪಾತ್ರೆಯನ್ನು ಹಿಡಿದಿದ್ದಾನೆ. ಬಲಗಡೆಗೆ ಒಂದು ಸಾಲಿನಲ್ಲಿ ಮೂರು ಕಿರೀಟ



ಕುಂಡಲಗಳನ್ನು ಧರಿಸಿರುವ ತಲೆಗಳು ಮಾತ್ರವೇ ಕೆತ್ತಲ್ಪಟ್ಟಿವೆ. ಬಹುಶಃ ಇವು ದೇವತೆಗಳಾಗಿರಬಹುದು*. ಮೇಲ್ಭಾಗದ ಮೂಲೆಗಳಲ್ಲಿ ಚೌರಿವಾಹಕ

---

* ಇವರು ಕಂಚಿವೀರರೆಂದು ಹೆಸರಾಗಿರುವ ಇಂದ್ರಸೇನ, ರುದ್ರಸೇನ, ಭದ್ರಸೇನರೆಂಬ ಶಿಲ್ಪತ್ರಯವು. —ಸಂಪಾದಕರು

ಸೇವಕಿಯರಿದ್ದಾರೆ. ಸಾಮಾನ್ಯವಾಗಿ ಈ ರೀತಿಯ ಚೌರಿವಾಹಕರು ದೇವ ದೇವತೆಗಳ ಪಾದಗಳ ಬಳಿ ಇರುವಂತೆ ಚಿತ್ರಿಸುವುದು ಪದ್ಧತಿ. ದೇವತೆಯ ಬಲಗಾಲ ಅಡಿಭಾಗದಲ್ಲಿ ಎಂದರೆ ಅಡಿಭಾಗದ ಬಲ ಮೂಲೆಗೆ ಆನೆಯ ಮೇಲೆ ಸವಾರಿ ಮಾಡುತ್ತಿರುವವ ಕಾಣಿಸುತ್ತಾನೆ. ಆನೆಯ ತಲೆ ಅದರ ಶರೀರದಿಂದ ಬೇರ್ಪಟ್ಟಿದೆ. ಪಕ್ಕದಲ್ಲಿ ಗಣೇಶನು ಪ್ರಾಣಿ-ಮಾನವ ರೂಪವನ್ನು ಪಡೆಯುತ್ತಿರುವುದರ ಚಿತ್ರಣ ಇಲ್ಲಿ ಕೆತ್ತಲ್ಪಟ್ಟಿದೆ.

ಈ ಕೆತ್ತನೆಯ ಎಡಭಾಗದ ಮೇಲೆ ಕೆತ್ತನೆಗಾಗಿ ಖಾಲಿಯಾಗಿರುವಂತೆ ತೋರುವುದರಿಂದ ಈ ಕೆತ್ತನೆ ಅಪೂರ್ಣವಾಗಿಯೇ ಇರುವಂತೆ ತೋರುತ್ತದೆ.

ಈ ಶಿಲ್ಪವು ವಿನ್ಯಾಸದ ದೃಷ್ಟಿಯಲ್ಲಿ ಅಪೂರ್ವವಾದದ್ದು. 'ಕಾಳಿಕಾ ದೇವಿ' ಎಂದು ಗರ್ಭಗುಡಿಯ ಬಾಗಿಲ ಚೌಕಟ್ಟಿನ ಮೇಲಣ ಹಾಸುಗಲ್ಲಿನ ಮೇಲೆ ಕೊರೆದಿರುವ ಶಾಸನದಲ್ಲಿ ವರ್ಣಿತವಾಗಿರುವ ಮೂರ್ತಿಯನ್ನು ತತ್ಸಮವಾದ ಶಿಲ್ಪಗಳನ್ನು ಹೋಲಿಸದೆ ಗುರುತಿಸುವುದು ಕಷ್ಟವೇ. ಈ ಶಿಲ್ಪದಲ್ಲಿ

ವಿಶ್ಲೇಷಣೆ

ಪಾರ್ವತಿಯ ಬಯಕೆಯ ಮೇರೆಗೆ ಗಣಪತಿಯನ್ನು ಸೃಷ್ಟಿಸಿದ ವಿಷಯವು ಶಿವಪುರಾಣ ಮತ್ತು ಸ್ಕಾಂದಪುರಾಣಗಳಲ್ಲಿ ನಿರೂಪಿಸಲ್ಪಟ್ಟಿರುವಂತೆ ನಿರೂಪಿತವಾಗಿದೆ.

ಶಿವಪುರಾಣದಲ್ಲಿ ಪಾರ್ವತಿಯ ದ್ವಾರಪಾಲನೊಬ್ಬ ಶಿವನನ್ನೇ ತಡೆದು ಬಾಗಿಲ ಬಳಿ ನಿಲ್ಲಿಸಿದ. ಶಕ್ತಿಶಾಲಿಯೂ ಹಟವಾದಿಯೂ ಆಗಿದ್ದವನನ್ನು ಶಿವನು ತನ್ನ ಇತರ ಗಣಗಳಿಂದ ಅವನ ತಲೆಯನ್ನು ಕತ್ತರಿಸಿದ. ಅನಂತರದಲ್ಲಿ ದುಃಖಿತಳಾದ ಪಾರ್ವತಿಯನ್ನು ಸಂತೃಪ್ತಗೊಳಿಸಲು ಆಕೆಯಿಂದ ಸೃಷ್ಟಿಯಾಗಿದ್ದ ದ್ವಾರಪಾಲನ ತಲೆ ತರಿಯಲು ಕಾರಣರಾದ ದೇವತೆಗಳ ಮೇಲೆ ಅಪಾರವಾದ ಕೋಪ ಬಂದಿತ್ತು. ಆದ್ದರಿಂದ ಅವರೆಲ್ಲರೂ ಕೂಡಿ ಒಂದು ದಂತವಿದ್ದ ಆನೆಯ ತಲೆಯನ್ನು ದ್ವಾರಪಾಲನ ಮುಂಡಕ್ಕೆ ಸೇರಿಸಿದರು. ಆಗ ಈ ಗಜವದನ ದೇವನು ಎರಡು ಕೈಗಳನ್ನೇ ಪಡೆದಿರಬೇಕು. ಈ ಚಿತ್ರಣವನ್ನು ತೋರುವುದೇ ಈ ಕೆತ್ತನೆಯಲ್ಲಿರುವ ದೇವತೆಗಳ ಉದ್ದೇಶವಿರಬೇಕು.

ಸ್ಕಾಂದ ಪುರಾಣದ ಪ್ರಕಾರ ಇಂದ್ರಾದಿ ದೇವತೆಗಳ ಪ್ರಾರ್ಥನೆಯ ಪ್ರಕಾರ, ಶಿವನ ಇಷ್ಟವನ್ನು ಅನುಸರಿಸಿ ಪಾರ್ವತಿಯೇ ಗಜಮುಖವನ್ನು ನಾಲ್ಕು ಬಾಹುಗಳನ್ನು ಹೊಂದಿದ್ದ ಗಣಪತಿಯನ್ನು ಸೃಷ್ಟಿಸಿದಳು. ಆಕೆಯನ್ನು ದೇವತೆಗಳು ಕಾಳರಾತ್ರಿ, ದುರ್ಗಾ ಇತ್ಯಾದಿ ನಾಮಗಳಿಂದ ಸ್ತುತಿಸಿದರು. ಚಾಮರವಾಹಕರು, ದೇವತೆಗಳು*, ದ್ವಿಬಾಹು ಗಣಪತಿ ಇವರೆಲ್ಲರ ಮಧ್ಯೆ ಪ್ರಧಾನವಾಗಿ ರೂಪಿಸಲ್ಪಟ್ಟಿರುವ ಕಾಳಿಕಾದೇವಿಯ ಪುರಾಣದ ಈ ಕಥೆಯನ್ನು ಸೂಕ್ಷ್ಮವಾಗಿ ಹೇಳುವಂತಿದೆ.

ಎರಡು ಕಥೆಗಳು ಪುರಾಣಗಳಲ್ಲಿ ಸೇರುವುದಕ್ಕೂ ಮೊದಲ ಕಾಲದಲ್ಲಿ ಪರಂಪರೆಯಿಂದ ಪ್ರಚಲಿತವಾಗಿದ್ದ ಕಥೆಯು ಶಿಲ್ಪಿಯ ಮುಂದಿದ್ದಿರಬೇಕು.

---

*ಇವರು ವಿಶ್ವಬ್ರಾಹ್ಮಣರಲ್ಲಿ ಸಾಂಪ್ರದಾಯಿಕವಾಗಿ ಪೂಜೆಗೊಳ್ಳುತ್ತಾ ಬಂದಿರುವ ಕಂಚಿವೀರರೆಂದು ಹೆಸರಾಗಿರುವ ಇಂದ್ರಸೇನ, ರುದ್ರಸೇನ ಮತ್ತು ಭದ್ರಸೇನ ರೆಂಬ ಶಿಲ್ಪಿತ್ರಯರು. ಕನ್ನಡದ ಪ್ರಾಚೀನ ಕಾವ್ಯವಾದ 'ಕಂಚಿ ಪುರಾಣ'ವು ಈ ಉಪಕಥನವನ್ನು ವಿಶದೀಕರಿಸುತ್ತದೆ. ಸಾಮಾನ್ಯವಾಗಿ ಪೀಠದ ಮೇಲೆ ಈ ತಲೆಗಳಿದ್ದು ಇಲ್ಲಿ ಪಕ್ಕದಲ್ಲಿರುವುದು ವಿಶೇಷ. ಅಲಂಪುರದಲ್ಲಿ ೧೨೫೪ ರಲ್ಲಿ ಸ್ಥಾಪಿಸಲ್ಪಟ್ಟಿರುವ ಕಂಚಿ ಕಾಮಾಕ್ಷೀದೇವಿ ಎಂದು ಹೆಸರಿಸಲ್ಪಟ್ಟಿರುವ (ಕಾಳಿಕಾ ದೇವಿಯನ್ನೇ ತಮಿಳು ನಾಡು, ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಾಮಾಕ್ಷೀದೇವಿ ಎಂದೂ ಕರೆಯುತ್ತಾರೆ. ಕಂಚಿಪುರಾಣದಲ್ಲೂ ಕೂಡ ಕಾಮಾಕ್ಷೀದೇವಿ ಎಂದೇ ಹೆಸರಿಸಲಾಗಿದೆ) ದೇವಿಯ ಪಾದಗಳ ಬಳಿ ಈ ರೀತಿಯ ಶಿರತ್ರಯಗಳು ಇವೆ. ಇಂದಿನ ಕಂಚಿ ನಗರದಲ್ಲೂ ಕಾಮಾಕ್ಷೀದೇವಿಯ ಆಲಯದ ಹಿಂಭಾಗದಲ್ಲಿರುವ ಕಾಳಿಕಾದೇವಿಯ ಪಾದದ ಬಳಿ ಮೂರು ಶಿರಗಳು ಇವೆ. ಈ ಘಟನೆಯು ವಿಕ್ರಮ ಚೋಳನ ಕಾಲದಲ್ಲಿ ನಡೆಯಿತು (ಕ್ರಿ.ಶ ೧೧ನೇ ಶತಮಾನ) ಎಂದು ಹಲವು ಮೂಲಗಳಿಂದ ತಿಳಿದು ಬರುತ್ತದೆ. ಶಾಸನದಲ್ಲಿ ಪಂಚಲೋಹಾಧಿಪತಿಗಳುಂ ತತ್ಸುಂಕ ಪರಿರಕ್ಷಿತರುಂ (ಸುಂಕದಿಂದ ವಿನಾಯತಿಯನ್ನು ಗಳಿಸಿರುವ ಕಂಚುಗಾರ ಶಿಲ್ಪಿಗಳು) ಎಂದು ಹೇಳಿ ಶಿಲ್ಪಿಗಳಿಗೆ ಸಂದಾಯವಾಗುತ್ತಿದ್ದ ವಿಶೇಷ ಸವಲತ್ತುಗಳನ್ನು ಇದು ಸ್ಪಷ್ಟಪಡಿಸುತ್ತದೆ. ಕಂಚಿಪುರಾಣದ ಘಟನೆಗಳು ನಡೆದಿದ್ದೇ ವಿಕ್ರಮಚೋಳನು ಶಿಲ್ಪಿಗಳಿಗೆ ಸುಂಕ ವಿಧಿಸಿದ್ದರಿಂದ ಎಂಬುದು ಇಲ್ಲಿ ಸ್ಮರಿಸಬಹುದು. ಈ ದೃಷ್ಟಿಯಿಂದಲೂ ಈ ಶಾಸನ ಹಾಗೂ ಮೂರ್ತಿ ಬಹು ವಿಶಿಷ್ಟವಾದವು.

ಸಂಪಾದಕರು

ಅದನ್ನೇ ತನ್ನ ಶಿಲ್ಪದಲ್ಲಿ ಚಿಡಿಸಿದ್ದಾನೆ. ಈ ಊಹೆಯೂ ಸರಿಯಾದರೆ ಇಲ್ಲಿ ಸ್ಕಾಂದ ಪುರಾಣದ ಚತುರ್ಭುಜ ಗಣಪತಿಗೆ ಬದಲಾದ ದ್ವಿಭುಜಗಣಪತಿಯನ್ನು ಚಿತ್ರಿಸಿರುವುದರ ಕಾರಣ ಸ್ಪಷ್ಟವಾಗುತ್ತದೆ. ಈ ಶಿಲ್ಪವು ಪ್ರಾಚೀನ ಸಂಪ್ರದಾಯವನ್ನು ನಿರೂಪಿಸುತ್ತದೆ. ಇದು ನಂತರದ ಪೌರಾಣಿಕ ಸಂಪ್ರದಾಯಕ್ಕೂ ಪ್ರಾಚೀನವಾದುದು. ಪ್ರತಿಮಾ ನಿರ್ಮಾಣ ರೀತಿ, ಶಿಲ್ಪಶೈಲಿ, ಉಬ್ಬುಕೆತ್ತನೆಯ ರೀತಿ ಇತ್ಯಾದಿಗಳ ಆಧಾರದಿಂದ ಈ ಶಿಲ್ಪವು ಸುಮಾರು ಕ್ರಿಸ್ತಶಕ ೫ ಅಥವ ೬ನೆಯ ಶತಮಾನಕ್ಕೆ ಸೇರಿದ್ದು ಎಂದು ಊಹಿಸಬಹುದು.

ಆದರೆ ವಾಸ್ತುಶಿಲ್ಪ ಶೈಲಿ, ಬಾಗಿಲ ಚೌಕಟ್ಟು, ಸಭಾಮಂಟಪದ ಮಧ್ಯದ ಕಂಭಗಳು ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿರುವಂತೆ ಕ್ರಿಸ್ತಶಕ ೧೨ನೇಯ ಶತಮಾನದ ಮೊದಲ ಭಾಗದ್ದು. ಇದ್ದರಿಂದ ದೇವಾಲಯದ ನಿರ್ಮಾಣಕಾಲ ಮತ್ತು ಮೂರ್ತಿಯಕಾಲ ಎರಡರಲ್ಲೂ ತುಂಬಾ ಅಂತರ ಕಂಡುಬರುತ್ತದೆ. ಶಾಸನವು ಈ ವಿಷಯದಲ್ಲಿ ಸ್ಪಷ್ಟವಾಗಿ ಕಂಚುಗಾರ ಮಲ್ಲೋಜನು ತಾವರೆಗೆರೆಯ ತಟದ ಮೇಲಿನ ಕಾಳಿಕಾ ದೇವಾಲಯವನ್ನು ಕಲ್ಲಿನಲ್ಲಿ ಪುನರ್ನಿರ್ಮಾಣ ಮಾಡಿದನು ಎಂದು ಹೇಳಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆ. ಇದರಿಂದ ಹನ್ನೆರಡನೆಯ ಶತಮಾನಕ್ಕೂ ಮೊದಲೇ ಕಾಳಿಕಾ ದೇವಾಲಯವು ಅಲ್ಲಿತ್ತು. ಕ್ರಿಸ್ತಶಕ ೫–೬ನೇ ಶತಮಾನದ ಬದಾಮಿ, ಪಟ್ಟದಕಲ್ಲು, ಐಹೊಳೆ ಮುಂತಾದ ಕಡೆಗಳಲ್ಲಿರುವ ದೇವಾಲಯಗಳಲ್ಲಿ ಕಂಡುಬರುವ ಅಂತರಾಳವು ಈ ದೇವಾಲಯದಲ್ಲಿ ಇರಲಿಲ್ಲ ಎಂದು ತಿಳಿಯುತ್ತದೆ. ಪ್ರಾಚೀನ ದೇವಾಲಯವನ್ನು ಕಲ್ಲಿನಲ್ಲಿ ಪುನರ್ನಿಮಿಸುವಾಗ ಅದೇ ವಿನ್ಯಾಸವನ್ನೇ ಅನುಸರಿಸಲಾಗಿದೆ. ದೇವಾಲಯದ ವಿನ್ಯಾಸವು ಶಿಲ್ಪದ ಅಂದಾಜು ಕಾಲವನ್ನೇ ಸರಿ ಎಂದುಹೇಳುತ್ತದೆ.

ಈ ಆರಾಧನಾ ಮೂರ್ತಿಯು ಆನುಷಂಗಿಕವಾಗಿ ಗಣಪತಿಯ ಹುಟ್ಟನ್ನು ನಿರೂಪಿಸುವ ಈ ಶಿಲ್ಪವು ನನಗೆ ತಿಳಿದಿರುವಂತೆ ಕರ್ನಾಟಕದಲ್ಲೆಲ್ಲಾ ಇದೊಂದೆ.

ಬಾಗಿಲ ಚೌಕಟ್ಟಿನ ಮೇಲಣ ಹಾಸುಗಲ್ಲಿನ ಮೇಲೆ ಕೊರೆದಿರುವ ಶಿಲಾಲೇಖವು ಚಾಲುಕ್ಯ ವಿಕ್ರಮ ಶಕೆಯ ಐವತ್ತಾರನೆಯ ವಿರೋಧಿಕೃತ ನಾಮ

ಸಂವತ್ಸರ ಆಷಾಢ ಮಾಸ ಅಮಾವಾಸ್ಯೆ ಬೃಹಸ್ಪತಿವಾರ (ಎಂದರೆ ಕ್ರಿಸ್ತಶಕ ಜೂನ್ ೧೪, ೧೧೩೧) ದಂದು ಆ ಮಹಾನಗರದ ವರ್ತಕರು, ಪಂಚಲೋಹದ ಶಿಲ್ಪಿಗಳು ಮತ್ತು ಸುಂಕದ ಅಧಿಕಾರಿಗಳು ಬಳ್ಳಿಗಾವೆಯ ಕಾಳಿಕಾದೇವಿಯ ನಿತ್ಯಾರಾಧನೆಗೆ ಅನುಕೂಲವಾಗುವಂತೆ ತಾವರೆಗೆರೆಗೆ ಹೋಗುವ ಹಾದಿಯ ಬಲತುದಿಯ ಮೊದಲ ಅಂಗಡಿಯನ್ನು ದಾನವಾಗಿ ಕೊಟ್ಟಿದ್ದಾರೆ. ಈ ದಾನ ವನ್ನು ಇಬ್ಬರು ಶಟ್ಟಿಗಳು ಮತ್ತು ಬಲಿಪುರದ (ಬಳ್ಳಿಗಾವೆಯ ಪ್ರಾಚೀನ ಹೆಸರು)ಪಂಚಮಠಗಳವರು ಈ ದಾನವನ್ನು ಊರ್ಜಿತಗೊಳಿಸಬೇಕು. ನಂತರ ದಲ್ಲಿ ಶಾಸನವು ಈ ದೇವಾಲಯವನ್ನು ಕಲ್ಲಿನಲ್ಲಿ ಪುನರ್ನಿರ್ಮಾಣ ಮಾಡಿ ಕಂಚು ಗಾರ ಮಲ್ಲೋಜನು ಆಗ್ಗೆ ನಡೆಸಿದ್ದ ಧರ್ಮಕಾರ್ಯವನ್ನು ಸ್ಥಾಯಿಯಾಗಿ ಊರ್ಜಿತಗೊಳಿಸಿದನೆಂದು ತಿಳಿಸುತ್ತದೆ.

ಶಿಲಾಮೂರ್ತಿಯ ಪೀಠದ ಮೇಲೆ ಭಾಗಶಃ ಸವೆದುಹೋಗಿರುವ ಶಿಲಾ ಲೇಖವು ಶಿಲ್ಪಿಗಳ ಸಂಘದ ಅಳತೆಯ ಮಾನದಲ್ಲಿ ಕಾಲುಭಾಗದ ಅಳತೆಯ ನೆಲ ವನ್ನು ದಾನವಾಗಿ ನೀಡಿರುವುದನ್ನುಹೇಳಿರುವುದರೊಂದಿಗೆ ಮಣಿಕೋಜನ ಅಳಿಯ ನಾದ ಕಂಚುಗಾರ ಮಾಲೋಜನನ್ನು ಉಲ್ಲೇಖಿಸುತ್ತಾ ಪಂಚಲೋಹಾಧಿಪತಿ ಗಳು, ಸುಂಕವನ್ನು ಕೊಡುವುದರಿಂದ ವಿನಾಯಿತಿಯನ್ನು ಪಡೆದಿದ್ದಂತಹ ಶಿಲ್ಪಿ ಗಳ ಶೃತಿ-ಸ್ಮೃತಿ ಪಾಂಡಿತ್ಯ, ಸತ್ಯಶೌಚಾಚಾರಗಳ ಪ್ರಶಂಸೆಯೂ ದೊರೆಯು ತ್ತದೆ.

ವಿರೋಧಿಕೃತ ಸಂವತ್ಸರದ ಅಷಾಢ ಮಾಸವೆಂದು ಶಿಲಾಲೇಖದಲ್ಲಿ ಹೇಳಿರುವುದು ಕ್ರಿಸ್ತಾಬ್ದಿ ೧೧೩೧ಕ್ಕೆ ಹೊಂದಿದ್ದು ಆ ಸಂವತ್ಸರದ ಆಷಾಢ ಮಾಸವು ನಿಜ ಮತ್ತು ಅಧಿಕ ಎಂದು ಎರಡಾಗಿದ್ದು ಎರಡರ ಅಮವಾಸ್ಯೆಗಳೂ ಶುಕ್ರವಾರದಂದೇ ಬರುತ್ತವೆ—೨೬ ಜೂನ್ ಮತ್ತು ೨೪ ಜುಲೈ ೧೧೩೧. ಅಮಾವಾಸ್ಯೆ ತಿಥಿಯು ನಿಜ ಆಷಾಢದಲ್ಲಿ ಗುರುವಾರದಂದೇ ಪ್ರಾರಂಭವಾಗಿ ಶುಕ್ರವಾರದಲ್ಲಿ ಮುಕ್ತಾಯಗೊಂಡರೆ ಅಧಿಕ ಆಷಾಢದಲ್ಲಿ ಶುಕ್ರವಾರದಂದೇ ಪ್ರಾರಂಭವಾಗುತ್ತದೆ. ಆದ್ದರಿಂದ ಶಿಲಾಲೇಖದ ದಿನಾಂಕವು ಕ್ರಿಸ್ತಾಬ್ದಿಯ ಪ್ರಕಾರ ಜೂನ್ ೨೬, ೧೧೩೧ ಎಂದಿರಬೇಕು.

ಶಿಲಾ ಲೇಖಗಳು :

ಅ. ದೇವಾಲಯದ ಗರ್ಭಾಂಕಣದ ಬಾಗಿಲ ಚೌಕಟ್ಟಿನ ಮೇಲ್ಭಾಗದ ಹಾಸುಗಲ್ಲಿನ ಮೇಲೆ ಕೆತ್ತಿರುವ ಶಿಲಾಲೇಖದ ಪಾಠ:

೧ ಸ್ವಸ್ತಿಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೫೬ನೆಯ ವಿರೋಧ (ಧಿ) ಕೃತಸಂವತ್ಸರದಾಷಾಡದಮಾವಸ್ಯೆ

೨ ಬೃಹಸ್ಪತಿವಾರದಂದು ಕಟಕದ ಮಹಾನಗರಂಗಳುಂ **ಪಂಚ ಲೋಹಾಧಿಪತಿಗಳುಂ ತತ್ಸಂಕ ಪರಿವ** (ರ?)

೩ **ಕ್ಷಿತರುಂ** ಬಳ್ಳಿಗಾವೆಯ ಕಾಳಿಕಾದೇವಿಯರ್ಗ್ಗೆ ತಾವರೆಗೆರೆಗೆ ಹೋಹ ದಾರಿಯುಂ ಬಲದ ಮೆಯ್ಯ ಮೊ

೪ ದಲಂಗಡಿಯೊಂದಮಂ ಪೂಜೆ ಪುರಸ್ಕಾರ ನಿವೇದ್ಯಕ್ಕಂ ಬಲಿಪುರದ ಇರುವರುಂ ಸೆಟ್ಟಿಗಳುಂ ನಗರ ಪಂಚ

೫ ಮಠಂಗಳಿದ್ದುರ್ ಪ್ರತಿಪಾಳಿಸುವರು ಬಳ್ಳಿಗಾವೆಯ ನಗರದ ಪುತ್ರ

೬ ಕಂಚುಗಾರ ಮಾಲೋಜಂ ಕಾಳಿಕಾದೇವಿಯ ದೇಗುಲವಂ

೭ ಕಲುವೆಸನಾಗಿ ಮಾಡಿಸಿದ ಈ ಧರ್ಮ್ಮವನಿ ನಡೆಯಿಸುರ್ತಿಪ್ಪ ಮಂಗಳ ಮಹಾಶ್ರೀ

ಆ. ಗರ್ಭಗೃಹದಲ್ಲಿ ಪೀಠದ ಮೇಲಿರುವ ಶೀಲಾಲೇಖದ ಪಾಠ:

೧ ತಮ್ಮ ಕೊಟ್ಟಳಿಯಲು ಕೊಲಲು ಹಾಗವನಾಚಂದ್ರಾರ್ಕ್ಕಂಬರಂ ಚಿತ್ರಾರ ಶ್ರೀ ಮಣಿಕೋಜನಳಿಯಾನಿ ಮಹಾನಗರದ ಮಗಂ ಕಂಚುಗಾರ (ಮಾಲೋಜಂ)

೨ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ವರಗುಣಗಣಳಂಕೃತ ಸತ್ಯ ಶೌಚಾಚಾರ ನಯವಿನಯ ಶೀಲ ಸಂಪನ್ನರುಂ ಶ್ರೀ ಕಾಳಿಕಾದೇವಿ

೩ **ಪಂಚಲೋಹಾಧಿಪತಿಗಳುಂ ತತ್ಸಂಕ ಪರಿರಕ್ಷಿ(ತರುಂ)**

೪ . . . . ಮಪ್ಪ ಶ್ರೀಮತು ಕಟಕದ ಮ (ಹಾನಗರಂ)

೫ . . . . ನೆ . . . .

೬ . . . . ಗೆಯಮ್ಮೆಯ ಸೆಟ್ಟಿ.

★

❋ ಡಾ. ಸಾ. ಶಿ. ಮರುಳಯ್ಯ, ಎಂ.ಎ.,

೧೦

ವಿಶ್ವಬ್ರಾಹ್ಮಣ್ಯವು ವೀರಶೈವಕ್ಕಿತ್ತ ಕೊಡುಗೆ

ಹನ್ನೆರಡನೆಯ ಶತಮಾನದಲ್ಲಿ ನಡೆದ ಕಲ್ಯಾಣದ ಕ್ರಾಂತಿಗೆ ಮುಖಗಳು ಹಲವು. ಅವುಗಳಲ್ಲಿ ಸಾಮಾಜಿಕ ಕ್ರಾಂತಿ ಬಹು ಮಹತ್ವದ್ದು ; ಅರ್ಥಪೂರ್ಣವಾದದ್ದು. ಮಾನವನನ್ನು ಕೇವಲ ಮಾನವೀಯತೆಯ ಮಾನದಿಂದ ಅಳೆದ ಯುಗ ಅದು. ವ್ಯಕ್ತಿಯನ್ನು ಹುಟ್ಟಿನಿಂದಲ್ಲ ವೃತ್ತಿಯಿಂದ ಗುರುತಿಸಿದ ಕಾಲ ಅದು. ಕೈವಲ್ಯಕ್ಕೂ ಮಿಗಿಲಾದ ಗೌರವವನ್ನು ಕಾಯಕಕ್ಕಿತ್ತು, ಕಾಯಕ ನಿಷ್ಠನನ್ನು ಶರಣಶ್ರೇಷ್ಠನೆಂದು ಕಂಡ ಕಾಲ. ಅಂದಿನ ಆಂದೋಲನ ಜಾತಿ ಸೂತಕವನ್ನು ಬಡಿದೋಡಿಸಿ ಸರ್ವರಿಗೂ ಸಾಮಾಜಿಕ, ಧಾರ್ಮಿಕ ಸಮಾನತೆಯನ್ನು ಸೃಷ್ಟಿಸಿ ಕೊಟ್ಟಿತು. ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ ಸರ್ವರನ್ನೂ ಒಂದೇ ಎಂದು ಭಾವಿಸಿ, ಗೌರವಿಸಿದ ಸುಧಾರಣೆಯ ಶ್ರೀಮಂತ ಯುಗ ಅದು.

ಒಕ್ಕಲ ಮುದ್ದಯ್ಯ, ಗಾಣಿಗ ನಾಚಯ್ಯ, ಮೇದರ ಕೇತಯ್ಯ, ಮಾದರ ಚನ್ನಯ್ಯ, ನುಲಿಯ ಚಂದಯ್ಯ, ಅಂಬಿಗ ಚೌಡಯ್ಯ, ಕ್ಷೌರಿಕ ಅಪ್ಪಣ್ಣ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ, ಕುರುಬರ ಗೊಲ್ಲಾಳ, ವೈದ್ಯ ಸಂಗಣ್ಣ ಇಂತಹ ಅಸಂಖ್ಯಾತ ಶರಣ-ಶರಣೆಯರು ಅಣ್ಣನ ಗೌರವಕ್ಕೆ ಪಾತ್ರರಾದದ್ದು ಅವರು ಲಿಂಗಧಾರಿಗಳಾದ್ದರಿಂದ ಅಲ್ಲ, ಅವರು ಕಾಯಕವಾದಿಗಳಾದ್ದರಿಂದ ; ಕರ್ಮಯೋಗದ ಮೂಲಕ ಶಿವಯೋಗವನ್ನು ಸಾಧಿಸಿಕೊಂಡದ್ದರಿಂದ. ಅವರು ಏರಿದಾಗ ಅರಿವು

ಕಂಡರು, ಇಳಿದಾಗ ಕ್ರಿಯೆಯನ್ನು ಆಚರಿಸಿದರು. ಅವರ ಅಖಂಡ ತಪಸ್ಸಿನ ಫಲವಾಗಿ ಕಸುಬು ಕಾಯಕವೆನಿಸಿತು. ಯಾವುದೇ ವೃತ್ತಿಯಾಗಲಿ ಅದು ಪೂಜ್ಯತೆಯನ್ನು ಪಡೆಯಿತು. ಅಂದದಕ್ಕೆ ವೃತ್ತಿಗೌರವ (The Dignity of Labour) ದೊರೆಯಿತು. **ದುಡಿಮೆಯೇ ದೇವರು;** ಆ ದೇವರ ಮುಂದೆ ಮತ್ತಾವ ದೈವವೂ ಇಲ್ಲ, ಗುರುವೂ ಇಲ್ಲ -

ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ಮರೆಯಬೇಕು,
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾದರೂ ಕಾಯಕದೊಳಗು!

ಆಯ್ದಕ್ಕಿ ಮಾರಯ್ಯನ ವಚನ

ಶಿವನಿಗಿಂತ ಶರಣ ಶ್ರೇಷ್ಠ; ಶರಣನಿಗಿಂತ ಅವನ ನುಡಿ ಶ್ರೇಷ್ಠ. ಅವೆಲ್ಲಕ್ಕೂ ಶ್ರೇಷ್ಠ ಸತ್ಯ ಶುದ್ಧ ನಿತ್ಯ ನೇಮದ ಪರಮ ಪ್ರಾಂಜಲ ಶ್ರೀಕಾಯಕ! ಸಾಕ್ಷಾತ್ ಶಿವನೇ ಬಂದು ಗಣಪದವಿಯನ್ನೀಯುವುದಾಗಿ ಆಸೆ ತೋರಿಸಿ ಕೈಲಾಸಕ್ಕೆ ಕರೆದರೆ, 'ದುಡಿಯದೆ ದೊರೆಯುವ ಕೈಲಾಸ, ಕೈವಲ್ಯ, ಸ್ವರ್ಗ ಯಾವುದೂ ಬೇಡ. ನಿನ್ನಲ್ಲಿ ಬೇಡುವವರಿಗೆ ಬೇಕಾದರೆ ಕೊಡು ಹೋಗು, ನನಗೆ ಬೇಡ. ನನಗೆ ಕಾಯಕದ ಮುಂದೆ ಬೇರಾವ ಸ್ವರ್ಗವೂ ಇಲ್ಲ' ಎಂದ ದೃಢವ್ರತಿಗಳು ಅಂದಿನ ಕಾಯಕ ಯೋಗಿಗಳು! ಅಲ್ಲದೆ 'ಕೈಲಾಸವೆಂಬುದೊಂದು ಗುಡ್ಡ, ಅಲ್ಲಿ ಶಿವನೆಂಬವನೊಬ್ಬ ಹೆಡ್ಡ!' ಎಂದು ಗೇಲಿಮಾಡಲೂ ಹೇಸಿದವರಲ್ಲ ಆ ಸ್ವತಂತ್ರ ಧೀರರು!

ಇಂತಹ ಕಾಯಕ ಪ್ರೇಮಿಗಳ ನಿತ್ಯಾನುಷ್ಠಾನದ ಆನುಷಂಗಿಕ ಕ್ರಿಯೆ ಎಂದರೆ ವಚನ ರಚನೆ. ಪ್ರತಿಯೊಬ್ಬನೂ ಒಂದಲ್ಲ ಒಂದು ಕಾಯಕ ಹಿಡಿದಂತೆ, ಒಂದಲ್ಲ ಒಂದು ಅಂಕಿತದಲ್ಲಿ ತಮ್ಮ ಅನುಭಾವವನ್ನು ಅಭಿವ್ಯಕ್ತಪಡಿಸಿದ್ದಾನೆ. ಅವರ ಅನುಭೂತಿ ಹರಳುಗೊಂಡು ಹೊಸ ಸಾಹಿತ್ಯವನ್ನು ವಿಶ್ವ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕಾಣಿಕೆಯಾಗಿ ಸಮರ್ಪಿಸಿತು.

ಹೀಗೆ ಅರಿವು – ಅನುಭಾವ, ಕ್ರಿಯೆ – ಕಾಯಕಗಳ ಮೂಲಕ ವಿಶುದ್ಧ ವೀರಶೈವವನ್ನೂ, ತನ್ಮೂಲಕ ಕನ್ನಡ ಸಾರಸ್ವತ ಕ್ಷೇತ್ರವನ್ನೂ ಶ್ರೀಮಂತ ಗೊಳಿಸಿದವರಲ್ಲಿ ಅಕ್ಕಸಾಲಿಗರಿದ್ದು, ಶಿವನ ಒಕ್ಕಲಾದ ಕಿನ್ನರಿ ಬ್ರಹ್ಮಯ್ಯ, ಹಾವಿನಹಾಳ ಕಲ್ಲಯ್ಯ, ವರದಾನಿ ಗುಡ್ಡವ್ವೆ – ಇವರು ಪ್ರಮುಖರು.

ವೀರಶೈವ ಧರ್ಮ ಮತ್ತು ವಾಙ್ಮಯಗಳನ್ನು ಇತಿಹಾಸ ರಚನೆಯ ದೃಷ್ಟಿಯಿಂದ ಅವಲೋಕಿಸಿದಾಗ ಪ್ರಮುಖವಾಗಿ ಆಚಾರ್ಯಯುಗ, ಬಸವ ಯುಗ, ಸಿದ್ಧಲಿಂಗೇಶ್ವರ ಯುಗ, ಮಠಾಧಿಪತಿಗಳ ಯುಗ ಅಥವಾ ಅವನತಿಯ ಯುಗ ಎಂದು ನಾಲ್ಕು ಭಾಗಗಳು ಕಾಣಿಸಿಕೊಳ್ಳುತ್ತವೆ. ಆಚಾರ್ಯ ಪಂಚಕ ವೀರಶೈವವನ್ನು ಸಂಸ್ಥಾಪಿಸಿದ ಕಾಲ ಸುಮಾರು ಕ್ರಿ. ಶ. ೮ ರಿಂದ ೧೧ ಶತಮಾನ; ಬಸವಣ್ಣನವರ ನೇತೃತ್ವದಲ್ಲಿ ಹುಚ್ಚು ಹೊಳೆಯಾಗಿ ಹರಿದು ಹರಿಹರ, ರಾಘವಾಂಕ, ಕೆರೆಯ ಪದ್ಮರಸರಿಂದ ಪುಷ್ಟಿ ಪಡೆದ ೧೨ ರಿಂದ ೧೩ನೇ ಶತಮಾನ ಅವರ ಪ್ರಗತಿ ಪ್ರಾಚುರ್ಯದ ಕಾಲ ಮತ್ತೆ ಅದಕ್ಕೆ ಜೀವ ತುಂಬಿ ಹಲವು ಕಟ್ಟುಪಾಡುಗಳನ್ನು, ನೇಮ-ನಿಷ್ಠೆಗಳನ್ನು ನಿರೂಪಿಸಿ ಹೊಸಚೈತನ್ಯ ದಿಂದ ಪ್ರಸಾರಗೊಳ್ಳುವಂತೆ ಅನುವು ಮಾಡಿಕೊಟ್ಟ ಕಾಲ ಎಂದರೆ ಎಡೆಯೂರು ಸಿದ್ಧಲಿಂಗೇಶ್ವರ ಯುಗ. ಅಂದಿನ ೧೦೧ ಜನ ವಿರಕ್ತರು ಕೈಕೊಂಡ ಪ್ರಚಂಡ ಪ್ರಚಾರ ಕಾರ್ಯದಿಂದಾಗಿ ವೀರಶೈವ ಮತ್ತೆ ತಲೆಯೆತ್ತಿ ವಿಶ್ವಧರ್ಮವೆನಿಸಿತು. ಮಠಾಧಿಪತಿಗಳ ಯುಗ ೨೦ನೆಯ ಶತಮಾನದ ಕಡೆಯ ದಿನಗಳು. ಅದರ ಅವನತಿಯ ದಿನಗಳು- ಇರಲಿ.

ವೀರಶೈವದ ಪುನರುತ್ಥಾನ ಯುಗದಲ್ಲಿ ಸಿದ್ಧಲಿಂಗೇಶ್ವರರ ಮಾರ್ಗ ದರ್ಶನದಲ್ಲಿ ಮುನ್ನಡೆದು ಅದರ ಪ್ರಾಚುರ್ಯಕ್ಕೆ ಕಾರಣನಾದವನೆಂದರೆ ಕರ ಸ್ಥಲದ ನಾಗಿದೇವ. ಹುಟ್ಟಿನಿಂದ ವಿಶ್ವಬ್ರಾಹ್ಮಣನೇ ಆಗಿದ್ದು ಬದುಕಿದ ದಿನ ಗಳಲ್ಲಿ ವೀರಶೈವರಾಗಿ ವೀರಶೈವ ಧರ್ಮದ ಪುನರುಜ್ಜೀವನ ಕಾರ್ಯದಲ್ಲಿ ಇವರು ಪ್ರಮುಖ ಪಾತ್ರವಹಿಸಿದರು.

ಹೀಗೆ ಬಸವಯುಗದ (೧೨ನೆಯ ಶತಮಾನದ) ವಚನಕಾರ ಕಿನ್ನರಿ ಬೊಮ್ಮಯ್ಯ, ವಚನಕಾರರಾಗಿದ್ದರೂ ಆಗಿರಬಹುದಾದ ಹಾವಿನಹಾಳ ಕಲ್ಲಯ್ಯ, ವರದಾನಿ ಗುಡ್ಡವ್ವೆ ಹಾಗೂ ಎಡೆಯೂರು ಸಿದ್ಧಲಿಂಗೇಶ್ವರ ಯುಗದ

(೧೫ನೆಯ ಶತಮಾನ) ಕರಸ್ಥಲ ನಾಗಲಿಂಗ ಇವರು ಹುಟ್ಟಿನಿಂದ ವಿಶ್ವ ಬ್ರಾಹ್ಮಣರು, ನಿಷ್ಠೆಯಿಂದ ವೀರಶೈವರು, ವೃತ್ತಿಯಲ್ಲಿ ಧರ್ಮಪ್ರಚಾರಕರು; ಪ್ರವೃತ್ತಿಯಲ್ಲಿ ಕಾವ್ಯರಚಕರು. ಧರ್ಮ ದೊಡ್ಡದು ನಿಜ; ಆದರೆ ಧರ್ಮಕ್ಕಿಂತಲೂ ದೊಡ್ಡದು ಜೀವನ. ಅಂತಹ ದೊಡ್ಡದಾದ ಬದುಕಿಗಾಗಿ ಧರ್ಮವನ್ನು, ವಾಙ್ಮಯವನ್ನು ದುಡಿಸಿಕೊಂಡ ಧೀರರು ಇವರು. ಇವರ ಬಾಳು ಒಂದು ಭಾವಗೀತೆ.

ಕಿನ್ನರಿ ಬ್ರಹ್ಮಯ

ಕಿನ್ನರಿ ಬ್ರಹ್ಮಯ್ಯ ಆಂಧ್ರಪ್ರದೇಶ ಪೂಡೂರಿನವನು. ಕವಿದೇವಿ ಎಂಬುವಳ ಏಕಮಾತ್ರ ಪುತ್ರ. ಚಿನ್ನಬೆಳ್ಳಿಯ ಆಭರಣಗಳನ್ನು ಮಾಡುವ ಅಕ್ಕಸಾಲಿ ಕಾಯಕದವನು. ಒಡವೆ ಮಾಡುವ ಸಮಯದಲ್ಲಿ ಬೇಡಿಬಂದ ಜಂಗಮನಿಗೆ ಹೊನ್ನು ಕೊಟ್ಟು ಗುರುವಿನ ಆಗ್ರಹಕ್ಕೆ ಪಾತ್ರನಾಗಿ ವೈರಾಗ್ಯ ಪಡೆದು ಆತ್ಮಾನಂದಕ್ಕಾಗಿ ನಿತ್ಯವೂ ಕಿನ್ನರಿ ಹಿಡಿದು ನುಡಿಸಿ, ಶಿವಾಲಯದಲ್ಲಿ ಶಿವನನ್ನು ತಣಿಸಿ, ಅವನಿಂದಲೇ ಹನ್ನೊಂದು ಹೊನ್ನನ್ನು ನಿತ್ಯವೂ ಪಡೆದು, ಅದರಿಂದಲೇ ಜಂಗಮ ದಾಸೋಹ ನಡೆಸುತ್ತಿದ್ದ ಮಹಾನುಭಾವ ಆದರೆ –

ಬಸವನ ಸದೃಶ ಭಕ್ತಿಭಾವನೆ
ವಸುಧೆಯೊಳು ನೆರೆತೀವಿ ಪಸರಿಸಿ
ದೆಸೆದೆಸೆಗಳಂ ಮುಸುಕೆ –

ಕಲ್ಯಾಣಕ್ಕೆ ಬಂದವನು. ಅಲ್ಲಿ ಭಕ್ತಿಯ ಬದುಕು ಮಾಡಿದವನು. ಅನುಭವ ಮಂಟಪದ ಅನುಭಾವಿ ಎನಿಸಿದನು. ಕಾವ್ಯದ ಕಾಯಕ ಕೈಗೊಂಡವನು. ನಿತ್ಯ ದಾಸೋಹದಲ್ಲಿ ಕೈಂಕರ್ಯ ಸ್ವೀಕರಿಸಿದವನು.

ಒಮ್ಮೆ ಓರ್ವ ವಿಟಪುರುಷ ಕುರಿಯೊಂದನ್ನು ಬಲಿಗೊಡಲು ತಂದಾಗ, ಕೊಲೆ ತಪ್ಪಿಸಿ ಅದರ ಬೆಲೆಕೊಟ್ಟು ಕಳುಹಿಸುತ್ತಾನೆ ಬ್ರಹ್ಮಯ್ಯ. ಆದರೆ ವೇಶ್ಯೆಯ ಮೂದಲಿಕೆಗೆ ಗುರಿಯಾಗಿ ಅದೇ ಕುರಿಯನ್ನು ಬೇಡಿಬಂದ ವಿಟನ ಶಿರಚ್ಛೇದನಮಾಡಿ ಕಲ್ಯಾಣದ ತ್ರಿಪುರಾಂತಕೇಶ್ವರನಿಂದಲೇ ಸಾಕ್ಷಿ ಹೇಳಿಸಿದ ಪವಾಡ ಪುರುಷ ಬ್ರಹ್ಮಯ್ಯ. ಹರಳಯ್ಯ ಮಧುವರಸರ ಕೊಲೆಯ ನಿಮಿತ್ತ,

ಕಲ್ಯಾಣ ಕಟುಕರ ಕೇರಿಯಾಗಿ, ಸಕಲ ಶರಣರು ಉಳವಿ, ಶ್ರೀಶೈಲ, ಹಂಪಿಯ ಕಡೆ ಕಾಲ್ತೆಗೆದಾಗ ಚೆನ್ನಬಸವಣ್ಣನ ನೇತೃತ್ವದಲ್ಲಿ ಸೇನಾಧಿಪತ್ಯ ವಹಿಸಿ, ಅಳಿಯ ಬಿಜ್ಜಳನ ಸೇನೆಯೊಂದಿಗೆ ಸೆಣಸಿ, ಶರಣ ರಕ್ಷಣೆಗಾಗಿ ಹೋರಾಡಿ, ವೀರಮರಣವನ್ನಪ್ಪಿದ ಹುತಾತ್ಮ ಕಿನ್ನರಿ ಬ್ರಹ್ಮಯ್ಯ.

ಕಿನ್ನರಯ್ಯನ ವಚನಗಳಲ್ಲಿ ಭಕ್ತಿಯ ಕಾವು ಇದೆ; ಬದುಕಿನ ನೋವು ಇದೆ.

ನಿನ್ನ ಹರೆಯದ ರೂಹಿನ ನುಡಿಯ ಜಾಣಿನ ಚೆಲುವಿನ ಸಿರಿಯ
ಸಂತೋಷದ ಕರಿ ತುರಗ ರಥ ಪದಾತಿಯ ನೆರವಿಯ
ಸತಿ ಸುತರ ಬಂಧುಗಳ ಸಮೂಹದ
ನಿನ್ನ ಕುಲದಭಿಮಾನದ ಗರ್ವವ ಬಿಡು ! ಮರುಳಾಗದಿರು !
ಅಕಟಕಟಾ, ರೋಮಜನಿಂದ ಹಿರಿಯನೆ?
ಮದನನಿಂದ ಚೆಲುವನೆ ? ಸುರಪತಿಯಿಂದ ಸಂಪನ್ನನೆ?
ವಾಸುದೇವ ವಶಿಷ್ಠರಿಂದ ಕುಲಜನೆ?
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನುಡಿಗೆಡೆಯಿಲ್ಲ !
ಕೇಳೋ ನರನೆ, ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದರೆ
ಕೇಡಿಲ್ಲದ ಪದ ದೊರಕೊಂಬುದು ಮರುಳೆ!

ಭಕ್ತಿಯ ತೀವ್ರ ಆವೇಶದಿಂದ ನುಡಿದಿದ್ದಾನೆ, ಆದರೂ ಅರ್ಥ ಸ್ಪಷ್ಟತೆಗಾಗಿ ನಿಖರವಾದ ಸಾದೃಶ ಸಾಮಗ್ರಿಗಳನ್ನೊದಗಿಸಿ ಕಲಿತ್ವದ ಕಲ್ಪಕತೆಯನ್ನು ಮೆರೆದಿದ್ದಾನೆ. ಅಂತೆಯೇ, **' ಅರಿದರೆ ಶರಣ ಮರೆದರೆ ಮಾನವ '** ಎಂಬಂಶ —

ಹುಸಿಯೆಂಬ ಅಲಗಿಂಗೆ ಒಡಲೆ ಗುರಿಯಾಯಿತ್ತು
ಏನೆಂಬೆನೇನೆಂಬೆ ವಿಧಿಯಾಡಿತ್ತ.
ಸವೆದ ಮಾರ್ಗಗಳು ನೆಲೆಗೊಳ್ಳದೆ ಹೋದವು.
ಮಹಾಲಿಂಗ ತ್ರಿಪುರಾಂತಕನ ಶರಣರೆ ಎನ್ನೊಡೆಯರೆಂದರಿಯದೆ
ಇದ್ದ ಕಾರಣ ತೆರಹು ಮರಹಿನಲ್ಲಿ ತಾವೆಡೆಗೊಂಡವು.

ಹಾವಿನಹಾಳ ಕಲ್ಲಯ್ಯ

ಮಂಗಳನಾಡದ ಹತ್ತಿರವಿರುವ ಹಾವಿನಹಾಳು ಕಲ್ಲಯ್ಯನ ನೆಲೆವೀಡು. ಈತ ಸೋಮವ್ವೆ ಮತ್ತು ಶಿವನಯ್ಯ ಎಂಬ ವಿಶ್ವಬ್ರಾಹ್ಮಣ ದಂಪತಿಗಳ ಸುಪುತ್ರ. ಆದರೆ ಶಿವಧರ್ಮದಲ್ಲಿ ಆಸಕ್ತಿ ಹೊಂದಿದ ಈತನಿಗೆ ತಂದೆಯೇ ಅಡ್ಡಿಬಂದಾಗ, ಶಿವನೆದುರು ನಿಂತು ತನ್ನ ಕರುಳನ್ನೇ ಇರಿದುಕೊಂಡ. ಶಿವ ಕರುಣೆಯಿಂದ ಶರಣನಾದ ಅವನ ಅನುಗ್ರಹದಿಂದ ಅಮರತ್ವ ಪ್ರಾಪ್ತವಾಯಿತು. ಆಚಾರ್ಯ ಪಂಚಕರಲ್ಲಿ ಪ್ರಸಿದ್ಧನಾದ ರೇವಣ ಸಿದ್ಧನಮಗ ರುದ್ರಮುನಿ ಶಿವಾಚಾರ್ಯನಿಂದ ಶಿವದೀಕ್ಷೆ ಪಡೆದ ಕಲ್ಲಯ್ಯ, ಶಿವಯೋಗಿ ಸಿದ್ಧರಾಮನ ಸಾನ್ನಿಧ್ಯದಲ್ಲಿ ತನ್ನ ಸಾರ್ಥಕ ಜೀವನ ಸಾಗಿಸಿದ. ಒಮ್ಮೆ ಕಲ್ಲಯ್ಯನು ಹಾವಿನಹಾಳ ಕಲ್ಲಿನಾಥನನ್ನು ಪೂಜಿಸುತ್ತಿದ್ದಾಗ ಹಾವೊಂದು ಕಚ್ಚಿತು. ಆದರೆ ಭಕ್ತನಿಗೆ ಬದಲು, ಕಚ್ಚಿದ ಭುಜಗವೇ ಸಾವನ್ನಪ್ಪಿತು. 'ಕಚ್ಚಿಸಿಕೊಂಡ ನಾನು ಸಾಯದೆ, ಕಚ್ಚಿದ ಹಾವೇ ಸಾಯಬೇಕಾದರೆ ಅದು ವಿಷಕ್ಕೂ ವಿಷವಾದ ನನ್ನ ಸ್ವೈಸತ್ತ್ವರಿಂದ ಹಿಂಸೆ ಪಟ್ಟಂತಾಯಿತು. ಆದ್ದರಿಂದ ಆ ದೋಷವು ನನ್ನ ಪಾಲಿಗೆ ಬರುವುದು ಖಂಡಿತ' — ಎಂದು ತಿಳಿದು, ಹಾವು ಬದುಕಲಿ ಎಂದು ಹಾರಯಿಸಿ ಬದುಕಿಸುತ್ತಾನೆ. ಈ ಪವಾಡದ ಹಿನ್ನೆಲೆಯಲ್ಲಿ ಅವನ ಪ್ರಾಣಿ ದಯೆ ಅಡಗಿದೆ.

ಕಲ್ಲಯ್ಯ ಸಂಸಾರಿ. ಸೊನ್ನಲಿಗೆಯಲ್ಲಿ ಶಿವಭಕ್ತೆಯೊಬ್ಬಳನ್ನು ಪ್ರೀತಿಸಿ ಲಗ್ನವಾಗುತ್ತಾನೆ. ಕಲ್ಲವ್ವೆ ಎಂಬ ಮಗಳೂ ಹುಟ್ಟುತ್ತಾಳೆ. ಮಗಳು ಮಲ್ಲಿಗೆಯ ಅರಳು. ಮಡಿವಂತರು ಅವಳನ್ನು ಅವಮಾನಗೊಳಿಸಿದ್ದರಿಂದ ಹಾವಿನಹಾಳ ಕಲ್ಲಯ್ಯ ನಾಯಬಾಯಿಂದ ವೇದವನ್ನೋದಿಸಿದನಂತೆ! ಪರಕಾಯ ಪ್ರವೇಶವಿದ್ಯೆ ಗೊತ್ತಿದ್ದಿರಬಹುದು.

ಮಹಾವಿದ್ವಾಂಸನೂ, ಶರಣ ಪುಂಗವನೂ ಆದ ಹಾವಿನಹಾಳ ಕಲ್ಲಯ್ಯನು ನೂರಾರು ವಚನಗಳನ್ನು ರಚಿಸಿರುವುದಾಗಿ ತಿಳಿಯುತ್ತದೆ. ಆದರೆ ಉಪಲಬ್ಧವಿರುವುವು ಕೆಲವು ಮಾತ್ರ. ಮಹಾಲಿಂಗ ಕಲ್ಲೇಶ್ವರಾ ಎಂಬ ಅಂಕಿತವನ್ನೊಳಗೊಂಡ ಅವನ ವಚನಗಳಲ್ಲಿ ಭಾಷೆಯ ಸಾರಳ್ಯವಿದ್ದರೂ ಭಾವ ಹಾಗೂ ಅನುಭಾವಗಳ ತೀವ್ರತೆ ಇದೆ.

ಹಗಲು ಹಸಿವಿಗೆ ಕುದಿದು, ಇರಳು ನಿದ್ರೆಗೆ ಕುದಿದು, ಉಳಿದಾದ ಹೊತ್ತೆಲ್ಲ ಅಶನ ವ್ಯಸನಕ್ಕೆ ಕುದಿದು – ಅಯ್ಯ, ನಿಮ್ಮನರಿಯದ ಪಾಪಿ ನಾನಯ್ಯ. ಅಯ್ಯ, ನಿಮ್ಮನರಿಯದ ಕರ್ಮಿ ನಾನಯ್ಯ. ಮಹಾಲಿಂಗ ಕಲ್ಲೀಶ್ವರಾ, ಅಸಗ ನೀರಡಿಸಿ ಸತ್ತತೆರನಂತಾಯಿತ್ತೆನ್ನ ಯುಕ್ತಿ.

ಒಳಗೆ ಶೋಧಿಸಿ ಹೊರಗಳವಡಿಸಿ ಭಾವದಿಂದ ಗುಡಿ ತೋರಣವ ಕಟ್ಟುವೆನಯ್ಯ, ಎನ್ನ ಲಿಂಗವೇ ಬಾರಯ್ಯಾ! ಎನ್ನದೇವ ಬಾರಯ್ಯಾ! ಎನ್ನಂತರಂಗದ ಪರಂಜ್ಯೋತಿ ಲಿಂಗವನ್ನಿದಿರುಗೊಂಬೆನು ಬಾರಯ್ಯಾ ಮಹಾಲಿಂಗ ಕಲ್ಲೇಶ್ವರ, ನಿಮ್ಮ ಧರ್ಮವು ಬಾರಯ್ಯಾ.

—ಭಕ್ತಿಯ ಓಘವನ್ನು ಗುರುತಿಸಬಹುದು.

ಎತ್ತೆತ್ತ ನೋಡಿದತ್ತತ್ತ ನಿಮ್ಮನೆ ಕಾಂಬೆ. ಎದ್ದುನೋಡಿ ನಿಮ್ಮನೆ ಕಾಂಬೆ. ನಿದ್ರೆಗೆಯ್ದು ನಿಮ್ಮನೆ ಕಾಂಬೆ. ಅಹೋರಾತ್ರಿಯಲ್ಲಿ ನಿಮ್ಮ ಧ್ಯಾನದಲ್ಲಿರಿಸು ಮಹಾಲಿಂಗ ಕಲ್ಲೇಶ್ವರಾ.

ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವು ಕೊಂಬೆಗೆ ಹಾರದಿರು ಮರುಳೇ! ಅಟ್ಟಿ ನೋಡುವ, ಮುಟ್ಟಿ ನೋಡುವ, ತಟ್ಟಿ ನೋಡುವ, ಒತ್ತಿ ನೋಡುವ, ಅಟ್ಟಿದಡೆ ಒತ್ತಿದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗ ಕಲ್ಲೇಶ್ವರ.

—ಈ ವಚನಗಳಲ್ಲಿ ಅಕ್ಕ, ಅಣ್ಣ ಹಾಗೂ ದಾಸಿಮಾರ್ಯರ ವಚನಗಳ ಛಾಯೆ ಕಂಡು ಬಂದರೆ,

ಅರಿವೇ ಗುರು. ಆಚಾರವೇ ಶಿಷ್ಯ. ಜ್ಞಾನವೇ ಲಿಂಗ. ಪರಿಣಾಮವೇ ತಪ. ಸಮತೆ ಎಂಬುದೇ ಯೋಗ ನೋಡಾ, ಈಸುವನರಿಯದೆ ಲೋಚು ಬೋಳಾದರೇನು? ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

—ಎಂಬ ಈ ವಚನದಲ್ಲಿ ಅಂಬಿಗರ ಚೌಡಯ್ಯನ ಧೋರಣೆ ಇದೆ. ಆದರೂ ಅನುಭಾವ ವಚನದಲ್ಲಿ ಅವನತನದಿಂದ ಮೆರೆದಿದ್ದಾನೆ; ಅವನ ಸ್ವಂತಿಕೆ ಅಲ್ಲಡಗಿದೆ.

ಕರ್ಪುರದ ಕಳ್ಳನ ಹುಲ್ಲಿನಲ್ಲಿ ಕಟ್ಟಿರಲು, ಅಗ್ನಿ ಎಂಬ ಹಿತವ ಬಂದು ಬಿಡಿಸಲೊಡನೆ, ಪಾಶ ಬೆಂದು ಕಳ್ಳ ತನ್ನಲ್ಲಿಯೆ ಅಡಗಿದನು. ಬಯಲ

ಶರಣನ ಬಯಲ ಪಾಶ ಬಂದು ಕಟ್ಟಿರಲು, ಬಯಲ ಲಿಂಗ ಬಂದು ಬಿಡಿಸಲು, ಬಯಲು ಬಯಲೇಕವಾಯಿತ್ತು. ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತು ಸರ್ವಶೂನ್ಯವಾಯಿತ್ತು.

ಐಕ್ಯಸ್ಥಲದ ನಿಜದ ನಿಲವು ಇಲ್ಲಿ ವೇದ್ಯ. ಅದನ್ನೂ ಸಾಧ್ಯಮಾಡಿಕೊಂಡಾತ ಹಾವಿನಹಾಳ ಕಲ್ಲಯ್ಯ.

ವರದಾನಿ ಗುಡ್ಡವ್ವೆ

ವಿಜಾಪುರ ಜಿಲ್ಲೆಯ ಉಮರಾಣಿ ಗ್ರಾಮದಲ್ಲಿದ್ದ ಅನಂತರಾಯ ಮತ್ತು ಸಿರಸಮ್ಮ ಎಂಬ ಅಕ್ಕಸಾಲಿಗ ದಂಪತಿಗಳ ಸುಪುತ್ರಿ ಗುಡ್ಡವ್ವೆ. ಅವಳ ಮೊದಲ ಹೆಸರು ಲಿಂಗಮ್ಮ ಎಂದು. ತಂದೆ-ತಾಯಿಗಳು ಶಿವಾನುಭಾವಿಗಳಾದ್ದರಿಂದ ತಾನೂ ಶಿವಾನುಭವ ನಿರತಳಾದಳು. ಬಸವಣ್ಣ ತನ್ನ ಪತ್ನಿ ನೀಲಲೋಚನೆಯೊಡನೆ ಬಂದು ನೋಡಿ ಅಚ್ಚರಿ ವ್ಯಕ್ತಪಡಿಸಿದಾಗ ಶಿವಯೋಗದಲ್ಲಿದ್ದ ಗುಡ್ಡವ್ವೆ ಎಚ್ಚೆತ್ತಮೇಲೆ ಅವರಿಗೇ ಲಿಂಗಾನುಸಂಧಾನ ವಿಧಾನವನ್ನು ತಿಳಿಯ ಹೇಳುತ್ತಾಳೆ. ಅಂತಹ ಮಹಾಪ್ರಾಜ್ಞೆ.

ಸಮಾಜ ಸೇವಾ ಧುರೀಣೆಯಾದ ಗುಡ್ಡವ್ವೆ, ದೀನದಲಿತರಿಗೆ ತಾಯಾದಳು. ಅವಳ ದಾನಗುಣ ಅವಳಿಗೆ 'ವರದಾನಿ' ಎಂಬ ಬಿರುದು ತಂದಿತು. ಸಂಕ ಎಂಬ ಗ್ರಾಮದ ಸಂಗಮನಾಥ ಎಂಬುವನನ್ನು ಲಗ್ನವಾಗುತ್ತಾಳೆ. ತಮ್ಮ ಪ್ರೇಮವನ್ನೇ ಪೂಜೆಯನ್ನಾಗಿಸಿಕೊಂಡ ಈ ಶಿವದಂಪತಿಗಳು ಆಸೇತು ಹಿಮಾಚಲದವರೆಗೆ ಎಲ್ಲೆಡೆಯೂ ಸಂಚರಿಸಿ ಧರ್ಮ ಪ್ರಸಾರ ಮಾಡುತ್ತಾರೆ. ಪ್ರವಾಸ ಕೈಕೊಂಡಾಗ ಆಂಧ್ರದ ಆದವಾನಿ ಮೊದಲಾದೆಡೆಗಳಲ್ಲಿ ಪರವಾದಿಗಳನ್ನು ಸೋಲಿಸಿ ಗುಡ್ಡವ್ವೆ ಶಿವಾನುಭವ ಗೋಷ್ಠಿಗಳನ್ನು ನಡೆಸಿ ಧರ್ಮ ಜಾಗೃತಿಯನ್ನುಂಟು ಮಾಡುತ್ತಾಳೆ. ಗುಡ್ಡಾಪುರದಲ್ಲಿ ನೆಲೆಸಿ ಅಲ್ಲಿಯೇ ಲಿಂಗೈಕ್ಯಳಾಗುತ್ತಾಳೆ. ವೀರಶೈವ ಧರ್ಮ ಪ್ರಚಾರದಲ್ಲಿ 'ವರದಾನಿಯ' ಪಾತ್ರ ಬಹಳ ದೊಡ್ಡದು.

ಕರಸ್ಥಲದ ನಾಗಿದೇವ

ವೀರಶೈವದ ಪುನರುತ್ಥಾನ ಯುಗವೆನಿಸಿದ ಹದಿನೈದನೆಯ ಶತಮಾನದಲ್ಲಿ ನೂರೊಂದು ಜನ ವೀರಶೈವ ವಿರಕ್ತರಲ್ಲಿ ಕರಸ್ಥಲ ನಾಗಿದೇವ ಆದಿಪುರುಷ ಹಾಗೂ ಅಗ್ರಮಾನ್ಯ. ಬೊಮ್ಮೂರಿನಲ್ಲಿ ತನ್ನ ಪತ್ನಿ ನಾಗಕನ್ನೆಯೊಡನೆ ಸುಖ ಸಂಸಾರ ನಡೆಸಿಕೊಂಡು, ಅಕ್ಕಸಾಲಿಗ ಕಾಯಕದಲ್ಲಿ ನಿರತನಾಗಿ, ಶರಣ ಸಂಸಾರ ಸಾಗಿಸುತ್ತಿದ್ದಾಗ ಆ ಊರ ರಾಣಿ ಅವನಲ್ಲಿ ಮೋಹಿತಳಾಗಿ, ಬೋಧೆ ಪಡೆದು ಸನ್ಮಾರ್ಗಿಯಾಗುತ್ತಾಳೆ. ಕರಸ್ಥಲದ ಲಿಂಗದಲ್ಲಿ ತನ್ನ ದೃಷ್ಟಿಯನ್ನು ಸ್ಥಿರೀಕರಿಸಿ ಷಡಕ್ಷರ ಮಂತ್ರವನ್ನು ಪಠಿಸುತ್ತ ಯೋಗರತನಾಗಿ ಶಿವ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ ನಾಗಲಿಂಗ.

ವಿಶ್ವ ಪರ್ಯಟನವನ್ನು ಕೈಗೊಂಡ ನಾಗಿದೇವ ಶ್ರೀರಂಗಪಟ್ಟಣದ ರಾಣಿಗೆ ಸಭ್ಯತೆಯ ಪಾಠಕಲಿಸಿ, ಶಾಂತವೀರಯ್ಯನೊಡನೆ ಅಲ್ಲಲ್ಲಿ ಅನೇಕ ಪವಾಡಗಳನ್ನು ಮೆರೆದು, ಪ್ರೌಢದೇವರಾಯನ ಬಳಿ ನೂರೊಂದು ವಿರಕ್ತರಲ್ಲಿ ಮೊದಲಿಗನಾಗಿ, ಧರ್ಮ ಸೂಕ್ಷ್ಮವನ್ನು ಅರಹುತ್ತಾ ಮೋಹಿನಿ ಗಜವೆಂಬ ಪರ್ವತದಲ್ಲಿ ಶಿವೈಕ್ಯನಾಗುತ್ತಾನೆ.

ವಿಶ್ವಬ್ರಹ್ಮ ಕುಲದಲ್ಲಿ ಹುಟ್ಟಿ ಶಿವಸಮಯ ಸಂಚಾಲಕನಾಗಿ ಬದುಕು ನಡೆಸಿದ ಮಹಾ ಶರಣ ಕರಸ್ಥಲದ ನಾಗಿದೇವ ಪ್ರೌಢದೇವರಾಯನ ಕಾಲದ ಪ್ರಸಿದ್ಧ ಶಿವಕವಿಯೂ ಆಗಿದ್ದಾನೆ. ಲಕ್ಕಣದಂಡೇಶ ಮೊದಲಾದವರಿಂದ ಕೂಡಿದ ಪರಿಸರವೂ ಅವರಿಗಿತ್ತು. ತ್ರಿವಿಧಿ (೩೧ ತ್ರಿಪದಿಗಳ ಸಂಕಲನ), ಮಡಿವಾಳಯ್ಯಗಳ ತಾರಾವಳಿ (ಸುತ್ತಿ ಪದ್ಯಗಳು), ಅಕ್ಷರ ಚೌಪದ (೨೧ ಚೌಪದಗಳು), ಮೂರೇಳು ದೀಕ್ಷೆಯುಪದ (೨೧ ದೀಕ್ಷೆಯ ಪದಗಳು), ವಚನ (೯ ವಾರ್ಧಕ ಷಟ್ಪದಿಗಳು), ಲಿಂಗ ನಿಜ ಸ್ಥಲದ ವಚನ (೯೮ ತ್ರಿಪದಿಗಳನ್ನುಳ್ಳ ವೀರಶೈವ ವೇದಾಂತ ಗ್ರಂಥ), ಪರಮ ವಿರಕ್ತನ ಐಕ್ಯಸ್ಥಲ (೯೧ ತ್ರಿಪದಿಗಳು), ಕಾಲಜ್ಞಾನ ಇಂತಿಷ್ಟು ಕೃತಿಗಳಿವೆ.

ವೀರಶೈವ ಸಕಲ ಸಮಯಗಳನ್ನೊಳಗೊಂಡ ಸಂಕೀರ್ಣ ಧರ್ಮ. ಅಂತೆಯೇ ಎಲ್ಲಮತಗಳ ಸಾರ ಹೀರಿಕೊಂಡು ಶಿವಾದ್ವೈತವೆನ್ನುವ ವಿನೂತನ ದರ್ಶನವನ್ನು ಸಾರಿದ ವಿಶ್ವಧರ್ಮ. ಇದರ ಪ್ರಗತಿ, ಪುನರುತ್ಥಾನ ಕಾರ್ಯ ಗಳಲ್ಲಿ ಮೇಲಿ ತಿಳಿಸಿದ ವಿಶ್ವಬ್ರಾಹ್ಮಣ ಶ್ರೇಷ್ಠರು ನೆರವಾಗಿದ್ದಾರೆ; ತಮ್ಮ ನಿಷ್ಕಾಮಪೂರ್ಣ ಸೇವೆಯಿಂದ ಅದನ್ನು ಶ್ರೀಮಂತಗೊಳಿಸಿದ್ದಾರೆ. ★

ಕರ್ಮಯೋಗಿಗಳಾದ ಋಭುಗಳು

ಯುವಾನಾ ಪಿತರಾ ಪುನಃ
ಸತ್ಯಮಂತ್ರಾ ಋಜೂಯವಃ ।
ಋಭವೋ ವಿಷ್ಟ್ಯಕ್ರತ ॥ ಸ್ವಾಹಾ ॥

ಋಗ್ವೇದ, ೧ : ೨೦ : ೪

ವೈಶ್ವಕರ್ಮಣೋತ್ತಮನಾದ ಸುಧನ್ವನ್ ಎಂಬ ಮಹಾಶಿಲ್ಪಿಯ ಪುತ್ರರಾದ ಋಭು, ವಿಭ್ವ, ವಾಜ ಎಂಬ ಸೌಧನ್ವನಾ ಋಭುಗಳು, ಈ ಹೆಸರಿನಿಂದ ಕರೆಯಲ್ಪಡುವ ಶಿಲ್ಪಿಗಳು, ಸತ್ಯವೆಂಬ ದಿವ್ಯ ತೇಜಸ್ಸಿನಿಂದ ಕೂಡಿದ ವೇದ ಮಂತ್ರ ಸಿದ್ಧಿಯುಳ್ಳವರಾಗಿ, ನ್ಯಾಯಮಾರ್ಗ ಪ್ರವರ್ತಕರಾಗಿ, ಚಮಸಾದಿ ಯಜ್ಞಸಾಧನಗಳನ್ನು ನಿರ್ಮಿಸಿಕೊಂಡು, ಅನೇಕ ಯಜ್ಞಗಳನ್ನು ಮಾಡಿ ಸಂಪಾದಿಸಿದ ಸೂರ್ಯನಿಗೆ ಸಮಾನವಾದ ತಮ್ಮ ತಪಃ ಪ್ರಜ್ಞೆಯಿಂದ ಅಪಃ ಅಪ್ನಃ ಮೊದಲಾದ ಶಿಲ್ಪಕರ್ಮಗಳಲ್ಲಿ ತಮಗಿರುವ ಅದ್ಭುತ ಸಾಮರ್ಥ್ಯದಿಂದ ತಮ್ಮ ವೃದ್ಧರಾದ ತಾಯಿ ತಂದೆಗಳನ್ನು ಯುವಕರನ್ನಾಗಿ ಮಾಡಿ ದೇವತೆಗಳಲ್ಲಿ ಪ್ರಖ್ಯಾತರಾಗಿರುತ್ತಾರೆ. ಅಂತಹ ಋಭುಗಳೇ, ಈ ಯಜ್ಞದಲ್ಲಿ ನಿಮಗೆ ಹವಿಸ್ಸನ್ನು ಅರ್ಪಿಸುತ್ತಿದ್ದೇವೆ. ಇದನ್ನು ಸ್ವೀಕರಿಸಿ ನಿಮ್ಮನ್ನು ಸ್ತೋತ್ರಮಾಡುವ ನಮಗೆ ಯಜ್ಞಫಲವಾದ ರತ್ನಾದಿ ದ್ರವ್ಯಸಂಪತ್ತನ್ನು ಅನುಗ್ರಹಿಸುವವರಾಗಿರಿ

ತೃತೀಯಾವರಣ
—ಮಹನೀಯರು

● ಜೀವಣ್ಣ ಮಸಳಿ

ಕ್ರಾಂತಿಕಾರ ವಿಚಾರವಾದಿ ಮೌನೇಶ್ವರರು

ಭಾರತ ದೇಶದಲ್ಲಿ ಕಾಲಕಾಲಕ್ಕೆ ಅವತಾರಿಗಳು, ಮಹಾತ್ಮರು, ಶರಣರು, ಸಾಧು – ಸಂತರು ಉದಯಿಸಿ ಬಂದಿದ್ದಾರೆ. ಪ್ರಪಂಚದಲ್ಲಿ ಧರ್ಮ ಯಾವಾಗ ಕೆಡುವುದೋ, ನೀತಿ – ನಿಯತ್ತು ಯಾವಾಗ ಜನಗಳಲ್ಲಿ ನಶಿಸುವುದೋ, ಯಾವಾಗ ಜನಗಳು ಗತಿಗೆಟ್ಟು ಅವರಲ್ಲಿ ಆತ್ಮಾನಾತ್ಮ ವಿಚಾರಗಳು ಇಲ್ಲವಾಗುವುವೋ, ಆವಾಗ ಪುನಃ ಅವೆಲ್ಲವನ್ನು ಸ್ಥಾಪಿಸಲೋಸುಗ ಭಗವಂತ ಅವತರಿಸಿ ಮಾನವನಂತೆ ಜನಸಾಮಾನ್ಯರನ್ನೂ ಆಕರ್ಷಿಸಿ ಎಲ್ಲರಿಗೂ ಆದರ್ಶದ ಮಾರ್ಗವನ್ನು ತೋರುತ್ತಾನೆ ಎಂಬ ಮಾತನ್ನು ಎಲ್ಲಾ ಧರ್ಮಜ್ಞರೂ ಹೇಳುತ್ತಲೇ ಬಂದಿದ್ದಾರೆ. ಮೌನೇಶ್ವರ ಸ್ವಾಮಿಗಳೂ ಇದೇ ಸಾಲಿಗೆ ಸೇರಿದ ಅವತಾರ ಪುರುಷರು. ಇವರು ಕರ್ನಾಟಕದಲ್ಲಿ ಕಲಬುರ್ಗಿ ಜಿಲ್ಲೆಯ ಸುರಪುರ ಗ್ರಾಮದ ಪಕ್ಕದಲ್ಲಿರುವ ಗೋನಾಳ ಗ್ರಾಮದಲ್ಲಿ ವಿಶ್ವಕರ್ಮ ಧರ್ಮದ ಹಾವಪ್ಪ – ಹಾವಕ್ಕ ಎಂಬ ದಂಪತಿಗಳ ಉದರದಲ್ಲಿ ಜನಿಸಿ ಬಂದರು. ಅವರು ಅವತರಿಸಿದ ಕಾಲ ಕ್ರಿಸ್ತಶಕ ೧೬೪೦ ಎಂದು ನಾವು ಸಂಶೋಧಿಸಿದ ಸಂಗತಿ

ಗಳಿಂದ ನಿರ್ಣಯಿಸಲಾಗಿದೆ*. ಆದರೆ ಈ ಅವತಾರ ಪುರುಷರ ಮೇಲಿನ ಭಕ್ತಿಯಿಂದಲೂ, ಮೂಢನಂಬಿಕೆಯಿಂದಲೂ ಕೆಲವರು ಮೌನೇಶ್ವರರು ಅಯೋನಿಜರು ಎಂದೂ ಮತ್ತು ಅವರು ಈ ಭೂಲೋಕದಲ್ಲಿ ಇಪ್ಪತ್ತೊಂದು ನೂರು ವರುಷ ಇದ್ದರೆಂದೂ ಹೇಳುವುದುಂಟು. ಇವೆರಡೂ ಸಂಗತಿಗಳು ನಿರಾಧಾರವಾದವು. ಏಕೆಂದರೆ ಶ್ರೀ ಮೌನೇಶ್ವರರೇ ತಮ್ಮ ವಚನವೊಂದರಲ್ಲಿ **ಇಂದ್ರಿಸೂತಕದಿಂದ ಅಂದು ನಾ ಜನಿಸಿದೆ** ಎಂದು ಹೇಳುತ್ತಾರೆ. ಇನ್ನೂ ಮುಂದೆ ಸಾಗಿ **ನಾ ಬಂದಂಥ ಭವಕೆ ಮಿತಿಯಿಲ್ಲ** ಎಂದು ಪೂರ್ವಜನ್ಮಗಳ ನೆನಪು ಮಾಡಿಕೊಡುತ್ತಾರೆ. ಹೀಗಿರುವಾಗ ನಾವು ಅವರನ್ನು ಅಯೋನಿಜರೆಂದು ಹೇಳುವುದು ನಮ್ಮ ಅನುಭವದ ಅಭಾವವನ್ನು ತೋರಿಸುತ್ತದೆ.

ಮೌನೇಶ್ವರರು ಆ ಕಾಲದ ಪರಿಸರವನ್ನು ತಮ್ಮ ವಚನಗಳಲ್ಲಿ ತುಂಬಾ ಚರ್ಚಿಸಿದ್ದಾರೆ. ಅವರು ಸುಮಾರು ಎಂಟುನೂರು ವಚನಗಳನ್ನು ಬರೆದಿದ್ದಾರೆ. ಅವೆಲ್ಲ ವಚನಗಳು ತ್ರಿಪದಿ ಲಯದಲ್ಲಿ ಬರೆಯಲ್ಪಟ್ಟಿರುತ್ತವೆ. ಜಾನಪದ ಶೈಲಿ. ಅನುಭವದ ರಸಘಟ್ಟಿ. ನಿರೂಪಣೆಯು ನೇರವಾಗಿದ್ದು ಅತ್ಯಂತ ನಿರ್ಭಯ, ನಿರ್ದಾಕ್ಷಿಣ್ಯ. ಅನೇಕ ಸಂಗತಿಗಳನ್ನು ಕಟುನುಡಿಗಳಿಂದ ಟೀಕಿಸಿದ್ದಾರೆ. ಅವರು ವಿಶ್ವಕರ್ಮ ಧರ್ಮದಲ್ಲಿ ಜನಿಸಿ ಬಂದವರಾದರೂ ಪ್ರಪಂಚದ ಎಲ್ಲಾ ಧರ್ಮಗಳನ್ನು, ಧರ್ಮಶಾಸ್ತ್ರಗಳನ್ನು ಮಾನ್ಯ ಮಾಡುತ್ತಾರೆ. ಯಾರನ್ನೂ, ಯಾವುದನ್ನೂ, ಯಾವ ಶಾಸ್ತ್ರಗಳನ್ನೂ, ಯಾವ ಧಾರ್ಮಿಕ ನಿಯಮ ನಿಬಂಧನೆಗಳನ್ನೂ, ಯಾವ ದೇವರನ್ನೂ ತಿರಸ್ಕರಿಸಿಲ್ಲ. ಆದರೆ ಆಚರಣೆಯನ್ನು ಪುರಸ್ಕರಿಸಿದ್ದಾರೆ. ಬರಿ ನುಡಿಗೆ ಅವರು ಕಾಸಿನ ಬೆಲೆಯನ್ನೂ ಕೊಟ್ಟಿಲ್ಲ. ನಡೆಗೆ, ಆಚರಣೆಗೆ ಬಹಳ ಮಹತ್ವ ಕೊಟ್ಟಿದ್ದಾರೆ. ಸಾಮಾನ್ಯ

---

* ಈ ಬಗ್ಗೆ ಹೆಚ್ಚಿನ ವಿವರಗಳನ್ನು ಇದೇ ಲೇಖಕರ 'ಮಹಾತ್ಮ ಮೌನೇಶ್ವರರ ಕಾಲ ನಿರ್ಣಯ ವಿಚಾರ' ಲೇಖನದಲ್ಲಿ ಪಡೆಯಬಹುದು. ಈ ಲೇಖನವು ಡಿಸೆಂಬರ್ ೧೯೭೩ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ರಾಷ್ಟ್ರೀಯ ವಿಶ್ವಕರ್ಮ ಅಧಿವೇಶನದ ನೆನಪಿನ ಸಂಚಿಕೆ 'ವಿಶ್ವಶಿಲ್ಪಿ'ಯಲ್ಲಿ ಪ್ರಕಟವಾಗಿದೆ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ ಎಂಬುದು ಲೇಖಕರ ಅಭಿಪ್ರಾಯವೂ ಆಗಿದೆ.

— ಸಂಪಾದಕರು

ವಾಗಿ ಎಲ್ಲ ಧರ್ಮಗಳ ವಿಷಯದಲ್ಲಿ ಅವರು ಕೈಯಾಡಿಸಿದ್ದಾರೆ. ಹನ್ನೆರಡನೆಯ ಶತಮಾನದ ಶಿವಶರಣರ ಕ್ರಾಂತಿಕಾರಕ ವಿಚಾರಗಳು, ಆಚಾರಗಳು ಅವರಿಗೆ ಮಾನ್ಯವಾಗಿವೆ. ಒಮ್ಮೊಮ್ಮೆ ಮೌನೇಶ್ವರ ಸ್ವಾಮಿಗಳು ಶಿವಶರಣರ ವಿಚಾರ ಆಚಾರಗಳನ್ನು ಮೆಚ್ಚಿ ಹೊಗಳುವಲ್ಲಿ 'ಇವರು ವೀರಶೈವ ಧರ್ಮದವ ರೆಂದು' ಭಾವಿಸುವಷ್ಟರ ಮಟ್ಟಿಗೆ ಹೊಗಳಿದ್ದಾರೆ. ಮಾತುಮಾತಿಗೆ ಅಲ್ಲಮ ಪ್ರಭು, ಬಸವಣ್ಣ, ಶಿವಶರಣರ ಹೆಸರುಗಳನ್ನು ಬಳಸಿಕೊಂಡಿದ್ದಾರೆ. ನುಡಿ–ನಡೆಗೆ ಸಾಮಿಪ್ಯವನ್ನಿಟ್ಟುಕೊಂಡು ಹೋಗುವ ಯಾರನ್ನಾದರೂ ಅವರು ತುಂಬ ಹೊಗಳಿದ್ದಾರೆ ಎಂಬುದನ್ನು ನಾವು ಗಮನಿಸಬೇಕು. ಎಷ್ಟೋ ಜನ ವೀರ ಶೈವ ಸಾಹಿತಿಗಳು, ಕವಿಗಳು ಜೈನಧರ್ಮದ ಗ್ರಂಥಗಳನ್ನು ಕೂಡ ಬರೆದಿದ್ದಾರೆ. ಗಂಟೆಗಟ್ಟಲೆ ಬಾಯಿತುಂಬಾ ಹೊಗಳುತ್ತಾರೆ. ಇಷ್ಟರ ಆಧಾರದ ಮೇಲೆಯೇ ಅವರು ಜೈನಮತಾವಲಂಬಿಗಳೆಂದು ಭಾವಿಸುವುದು ಅನುಚಿತ. ಮೌನೇಶ್ವರ ಸ್ವಾಮಿಗಳು ಭರತಖಂಡವನ್ನೆಲ್ಲ ಸಂಚರಿಸಿ ಎಲ್ಲ ಧರ್ಮ, ಪಂಥಾನುಯಾಯಿ ಗಳನ್ನು ಕಂಡಿದ್ದಾರೆ. ಅವರುಗಳ ನಡೆಯಲ್ಲಿ ಶುಚಿಯಿದ್ದುದನ್ನು ಹೊಗಳಿ ದ್ದಾರೆ. ನಡೆಯಲ್ಲಿ ತಪ್ಪಿ, ನುಡಿಯಲ್ಲಿ ಶುಚಿಯಿದ್ದರೆ ಅಂಥವರನ್ನು ಕಟುವಾಗಿ ತೆಗಳಿದ್ದಾರೆ. ಅವರು ತಮ್ಮ ವಚನದಲ್ಲಿ:

> ಕಾಶಿಯ ಪರ್ಯಂತರ ತ್ರಾಸಿಕ್ಕಿ ತೂಗಿದೆನು ।
> ಸೀಸವ ಹಾಕಿ ಊದಿದೆನು । ಲೇಸು ಲೇಸು ಎಂಬ ನುಡಿಯಿಲ್ಲ ॥

– ಎಂದು ಹೇಳಿದ್ದಾರೆ. ಅವರು ಆಚರಣೆಯನ್ನು ಬಹಳ ಮೆಚ್ಚಿದ್ದಾರೆ. ನುಡಿದಂತೆ ನಡೆಯ ಬೇಕೆಂಬುದೇ ಸ್ವಾಮಿಗಳ ವಿಚಾರ. ಇನ್ನೊಂದು ಕಡೆಗೆ **ದೇಶದೇಶವ ತಿರುಗಿ ಬೇಸತ್ತೆನಲೆ ಗುರುವೇ। ಈಶ್ವರನಾಪಾದ ಅರುಹೆನಗೆಂದರೆ 'ತ್ರಾಸಿ'ನೊಳು ನೋಡು** ಎಂದು ಹೇಳುತ್ತಾರೆ. ಇಲ್ಲಿ 'ತ್ರಾಸು' ಎಂದರೆ ಚಿಕ್ಕತಕ್ಕಡಿ. ನಡೆ, ನುಡಿ ಇವು ಸಮತೂಕದಲ್ಲಿರಲಿ, ಇವು ಮೇಲೆ ಕೆಳಗಾಗಬಾರದು. ಅವರು ಹೀಗೆ ತಮ್ಮ 'ತ್ರಾಸ'ನ್ನು ಕೈಯಲ್ಲಿ ಹಿಡಿದುಕೊಂಡೇ ಎಲ್ಲಾ ಧರ್ಮಾನುಯಾಯಿಗಳನ್ನು ತೂಗಿದ್ದಾರೆ. ಎಲ್ಲಿ ನಡೆ, ನುಡಿಗಳು ಸಮ-ಸಮದಲ್ಲಿ ನಿಂತವೋ ಅವರನ್ನು ಮನದಣಿಯೆ ಶ್ಲಾಘಿಸಿದ್ದಾರೆ.

ಎಲ್ಲಿ ತಕ್ಕಡಿಯ ಪರಡಿಗಳು ಮೇಲೆ-ಕೆಳಗಾಗುತ್ತವೆಯೋ ಅಲ್ಲಿ ತುಂಬ ಒರಟು ಶಬ್ದಗಳಿಂದ ಟೀಕಿಸಿದ್ದಾರೆ. 'ತ್ರಾಸ'ವೆಂದರೆ ಆತ್ಮಾನಾತ್ಮ ವಿಚಾರ. ಸಮದರ್ಶಿ ಭಾವದಿಂದಲೇ ಸಕಲವನ್ನೂ ಕಂಡಿದ್ದಾರೆ. ಏಕಪಕ್ಷೀಯ ವಿಚಾರ ಅವರಿಗೆ ಗ್ರಾಹ್ಯವಲ್ಲ. ಪೂರ್ವಗ್ರಹ ಪೀಡಿತ ವಿಚಾರಧಾರೆ ಅವರಿಗೆ ತ್ಯಾಜ್ಯ. ಅವರ ವಚನಗಳಲ್ಲಿ ಈ ಸಂಗತಿ ಸ್ಪಷ್ಟವಾಗಿ ಬಂದಿರುತ್ತದೆ.

ಬಸವನುಂಗುರವ ಬೆರಳಲ್ಲಿಧರಿಸಿದರೆ
ಭಸಿತವನಿಟ್ಟ ಮೇಲೆ ಹುಸಿಯನಾಡುವದು ಬಿಡಬೇಕು ನಮ್ಮ
ಶಶಿಧರ ಒಪ್ಪಲರಿಯನು.

ಗಂಧವನಿಟ್ಟಮೇಲೆ ಅಂದದಲ್ಲಿರಬೇಕು
ನಿಂದೆಕುಂದವ ಸುಡಬೇಕು ಇದು ನಮ್ಮ
ಚಂದ್ರಧರ ಒಪ್ಪಲರಿಯನು.

ಅಕ್ಷತಿಯನಿಟ್ಟ ಮೇಲೆ ಠಕ್ಕೊಂದು ಬಿಡಬೇಕು
ಮುಕ್ಕಣನಿಟ್ಟ ನೊಸಲಗಣ್ಣ ಧರಿಸಿದ ಮೇಲೆ
ಕಕ್ಕುಲಾತಿಗಳ ಸುಡಬೇಕು.

ನಾಮಗಳನಿಟ್ಟುಕೊಂಡು ನೇಮದಲ್ಲಿರಬೇಕು
ಸಾಮಘಾತಕವ ಬೀಡಬೇಕು ನಮ್ಮ
ಸ್ವಾಮಿ ಸಂಗಯ್ಯ ನೊಲಿಯನು.

ಇದರಿಂದ ಮೌನೇಶ್ವರ ಸ್ವಾಮಿಗಳು ಆಚರಣೆಗೆ ಎಷ್ಟೊಂದು ಮಹತ್ವ ಕೊಟ್ಟಿದ್ದಾರೆಂಬುದು ತಿಳಿಯುತ್ತದೆ. ನಿಷ್ಠುರ ನುಡಿಗಳನ್ನಾಡುವಾಗ ಅವರು ಹಿಂದು ಮುಂದು ನೋಡಿಲ್ಲ. ಯಾವ ಸಮಯದಲ್ಲಿಯೂ ದಾಕ್ಷಿಣ್ಯ ತೋರಿಸಿಲ್ಲ. ತಮ್ಮಜ್ಞಾನ ದೃಷ್ಟಿಯಲ್ಲಿ ಕಂಡದ್ದನ್ನು ಕಂಡಂತೆ ನುಡಿದಿದ್ದಾರೆ. ಅದನ್ನೇ ಅವರು ಸ್ಪಷ್ಟಿಪಡಿಸಿಯೂ ಇದ್ದಾರೆ—

ಅಕ್ಕನಾದದರೇನು, ತಂಗಿಯಾದರೇನು
ಚಿಕ್ಕವ್ವನಾದರೆ ನನಗೇನು ನಾ ನನ್ನ
ಲೆಕ್ಕವಿದ್ದಂತೆ ಉಸುರುವೆನು.

ತಾಯಿಯಾದರೇನು ದೇವರಾದರೆ ನನಗೇನು,
ಯಾವನಾದರೇನು ನಾ ನನ್ನ
ಲೆಕ್ಕವಿದ್ದಂತೆ ಉಸುರುವೆನು.

ಲಿಂಗವಾದರೇನು, ಜಂಗಮವಾದರೇನು
ಸಂಗಯ್ಯನಾದರೆ ನನಗೇನು, ನಾ ನನ್ನ
ಕಂಗಳಲಿ ಕಂಡಂತೆ ಉಸುರುವೆನು.

ಅಕ್ಕ, ತಂಗಿ, ಚಿಕ್ಕವ್ವ, ತಾಯಿ, ದೇವ, ಲಿಂಗ, ಜಂಗಮ, ಸಂಗಯ್ಯ ಯಾರಾದರೇನು ? ಇವರು ತಮ್ಮ ಕಂಗಳಿಗೆ ಕಂಡದ್ದನ್ನು ನುಡಿದುಬಿಟ್ಟಿದ್ದಾರೆ. ಸರ್ವಜ್ಞತ್ವವನ್ನು ಹೊಂದಿದ ಮೌನೇಶ್ವರಸ್ವಾಮಿಗಳ ಕಣ್ಣಿಗೆ ಸತ್ಯದ ದರ್ಶನವಾಗಿದೆ. ಅಸತ್ಯ ಕಂಡು ಅವಹೇಳನ ಮಾಡುವಲ್ಲಿ ಅಂಜಿಕೆಯಿಲ್ಲ, ಅಳುಕಿಲ್ಲ.

ಆನೆ ನೀರಾಟವಾಡಿದರೆ ಮೀನುಗಳು ಅಂಜುವವೆ ?
ಹೀನ ಮಾನವರ ಬಿರುನುಡಿಗೆ, ತತ್ತ್ವಜ್ಞಾನಿ ಅಂಜುವನೆ ?

ಹೀಗೆ ಅನೇಕ ವಚನಗಳನ್ನು ಹೇಳಿ 'ಬ್ರಹ್ಮತ್ವದಲ್ಲಿ ನಿಂತು ಯಾರಿಗೇಕೆ ಅಂಜಬೇಕು? ' ಎಂದು ಪ್ರಶ್ನಿಸುತ್ತಾರೆ.

ಕುಲದಲ್ಲಿ ಛಲಬೇಡ

ಮೌನೇಶ್ವರ ಸ್ವಾಮಿಗಳು ಕುಲಕ್ಕಾಗಿ ಹೊಡೆದಾಡುವವರನ್ನು ಕಂಡು ತುಂಬ ಕಟುವಾಗಿ ಖಂಡಿಸಿದ್ದಾರೆ. ಅವರು ತಮ್ಮ ವಚನಗಳಲ್ಲಿ ಸುಂದರವಾಗಿ ವಿವರಿಸಿ ಹೇಳಿದ್ದಾರೆ :

ಹೋರಾಗೆ ಬಿದ್ದವಂಗೆ ಬೇರೊಂದು ಕುಲವುಂಟೆ
ನೀರಿನ ಮಕ್ಕಳು ಜಗವೆಲ್ಲ
ಹೋರಾಡುತಾರೆ ಹೊಲಿಯರು.

ಹಾಟವೇ ತೀರ್ಥ ಕೂಟವೇ ಪ್ರಸಾದ
ನಾಟಿ ಬಂದದ್ದೇ ನಿಜಲಿಂಗ ಇದರೊಳಗೆ
ಬೂಟಾಟಿಕೆ ಯಾಕೋ ?

ಮೂರು ಹೊಲೆಗಳು ಎನಗೆ ಸೇರಿಕೊಂಡಿಪ್ಪವು
ನೀರ ಮುಳುಗಿದರೆ ತೊಳೆಯುವು, ನಮ್ಮ
ಹಾರುವ ಜನ್ಮ ಬಿಡಬೇಕು.
ಎಲುವು ಇಲ್ಲದ ನಾಲಗೆ ಹಲವು ಶಾಸ್ತ್ರವನೋದಿ
ಫಲವಿಲ್ಲದಂತೆ ಕೆಲದಾಡಿ ಸತ್ತಂಥಾ
ಹೊಲೆಯರ ಗೊಡವೆ ನಮಗ್ಯಾಕೆ? ಮರ್ತ್ಯಕ್ಕೆ
ಕುಲುಮೆಯಿಲ್ಲದಿದ್ದರೆ ಕುಲವಿಲ್ಲ ಗೋತ್ರವಿಲ್ಲ
ಹಲವು ಪರಿಯಲ್ಲಿ ಆಯುಧವಿಲ್ಲ. ಲೋಕದ
ಕಿಲುಕೀಟಕ ಹುಳುಗಳಿರ್ಯಾ!
ಕಾಯಕವೇ ಕಮ್ಮಾರ, ಕಾಯವೇ ಹೊಲೆಮಾದಿಗ
ವಾಯು ಅಗ್ನಿ ಪರಬ್ರಹ್ಮ ಇದರೊಳಗೆ,
ಆನ ಕುಲವೆಂದು ಬೆದಕಲೋ?
ಹಸಿಯ ತೊಗಲೊಳಗಣ ತುಪ್ಪ ಬಸಿಬಸಿದು ಉಂಡಮೇಲೆ
ಕೊಸರ್ಯಾಡಬಹುದೇ ಕುಲಛಲಕೆ?
ಮುಸುರೆಗೆ ಹತ್ತಿದಾ ನೊಣಗಳಿರ್ಯಾ, ನಿಮ್ಮ
ಪಿಸರು ಶಾಸ್ತ್ರವ ಬಿಡಬೇಕು.
ವೇದಶಾಸ್ತ್ರಗಳ್ಯಾಕೆ ವಾದತರ್ಕಗಳ್ಯಾಕೆ
ಕಡಿಧಾಡಲ್ಯಾಕೆ ಕುಲಛಲಕೆ
ಮಾದಿಗನ ಹಾಗಿರಬೇಕು.
ಉಚ್ಚಿಯಾ ಕುಣಿಯೊಳಗೆ ಉಚ್ಚಿ ಬಿದ್ದದ್ದು ನಾ ಬಲ್ಲೆ
ಹೆಚ್ಚು ಕಡಿಮೆಯೆಂದು ಕುಲಗಳಿಗೆ ಹೆಣಗಿದರೆ, ಇವರಿಗೆ
ಮೆಚ್ಚಿ ಮೋಚಿಲಿ ಹೊಡೆಯಂದ.

ಈ ಪ್ರಕಾರ ಎಷ್ಟೋ ವಚನಗಳಲ್ಲಿ ಕುಲದ ಬಗ್ಗೆ ಹೇಳಿದ್ದಾರೆ. ಕುಲವನ್ನು ನಿರ್ಮಿಸಿಕೊಂಡವನು ಮಾನವ. ತನ್ನ ಒಗೆಗೆ ತಾಳಿದ ದುರಭಿಮಾನವೇ ಕುಲದ ಕಲ್ಪನೆಯನ್ನು ಬಿತ್ತಿ ಬೆಳೆಸಿ ತನ್ನ ಹಾಗು ತನ್ನವರ ಸುತ್ತಲೂ ಮಂಡಲಹಾಕಿಕೊಂಡು ವ್ಯವಹರಿಸುತ್ತಿದ್ದಾನೆ. ನಿಸರ್ಗದಲ್ಲಿ ನೀರು, ಅನ್ನ,

ಆಸರೆ, ಬಟ್ಟೆ ಇವುಗಳಲ್ಲಿ ತಾರತಮ್ಯವಿಲ್ಲ. ಸೂರ್ಯ, ಚಂದ್ರ,ತಾರೆ, ಗಾಳಿ, ಮಳೆ, ಭೂಮಿ, ನೀರು, ಆಹಾರ, ವಿಹಾರ ಎಲ್ಲಾರಿಗಾಗಿ ನಿರ್ಮಿತವಾಗಿರುತ್ತವೆ. ಮೌನೇಶ್ವರ ಸ್ವಾಮಿಗಳು ತಮ್ಮೊಂದು ವಚನದಲ್ಲಿ **ಹಿಂದು ತುರುಕರಿಗೆ ಚಂದ್ರಮನೊಬ್ಬನೆ, ನಿಂದಿಸಿದವನೇ ಅಧಮನು** ಎಂದು ಹೇಳಿದ್ದಾರೆ. ದೇವ ನಿರ್ಮಿತ ನಿಸರ್ಗದಲ್ಲಿ ಎಲ್ಲಾ ಪ್ರಾಣಿಗಳಿಗೂ ಬದುಕಲು, ಬಾಳಲು ಹಕ್ಕಿದೆ. ಆ ಹಕ್ಕನ್ನು ಕಸಿದುಕೊಂಡು ಮೇಲುಕೀಳುಗಳ ಅಡ್ಡ ಗೋಡೆಯನ್ನು ಕಟ್ಟುವದು ಬೇಡ ಎಂದು ಅವರು ಘಂಟಾಘೋಷವಾಗಿ ಸಾರಿದ್ದಾರೆ.

ಲಿಂಗ-ಜಂಗಮದ ಪರಿ

ಮೌನೇಶ್ವರ ಸ್ವಾಮಿಗಳು ಎಲ್ಲಾ ಧಾರ್ಮಿಕ ನಿಯಮಗಳನ್ನು ಮಾನ ಮಾಡುತ್ತಾರೆಂಬುದನ್ನು ಹಿಂದೆಯೇ ಹೇಳಿದ್ದೇವೆ. ಅವರು ಲಿಂಗವೆಂದು ಏತಕ್ಕೆ ಅನ್ನಬೇಕು? ಲಿಂಗದ ಮಹತ್ವವೇನು, ಲಿಂಗದ ನಿಜವಾದ ಅರ್ಥವೇನು ಎಂಬುದು ಅನೇಕ ವಚನಗಳಲ್ಲಿ ಹೇಳಿದ್ದಾರೆ. ಆದರೆ ತಾವೆಂದೂ ಲಿಂಗಧರಿಸಿಲ್ಲ ಎಂಬುದನ್ನು ಖಡಾಖಂಡಿತವಾಗಿ ಹೇಳಿದ್ದಾರೆ—

ತೋರು ಲಿಂಗವ ಕಟ್ಟುವ ಸೋರ ಜಂಗಮ ನಾನಲ್ಲ.
ಈರೇಳು ಭುವನದ ಒಡೆಯ, ನೀರಿಲಿಂಗವೆನಗುಂಟು ಲೋಕದ,
ಪೋರಲಿಂಗದ ಗೊಡವಿ ನಮಗ್ಯಾಕೆ?

ಇದರಿಂದ ಲಿಂಗಧರಿಸಿಲ್ಲವೆಂಬುದನ್ನು ಖಚಿತಪಡಿಸಿದ್ದಾರೆ. ಅಲ್ಲದೆ, **ಹರನೆ ಕಮ್ಮಾರನಾಗಿ ನರ ರೂಪ ತಾಳಿದ. ಸರ್ವಕಾಯಕ್ಕೆ ಉಪದೇಶಕೊಟ್ಟಂಥಾ ಗುರುವಿನ ಮುಂದೆ ಗುರುವುಂಟೆ?** ಎಂದು ತಾನು ಕಮ್ಮಾರ(ಮನು)ನಾಗಿ ಹುಟ್ಟಿದ್ದೇನೆಂದೂ ಉಸುರಿದ್ದಾರೆ. ಕೆಳಗಿನ ವಚನಗಳನ್ನು ಗಮನಿಸಿದರೆ ಲಿಂಗ–ಜಂಗಮದ ಪರಿ ತಿಳಿಯುತ್ತದೆ:

ಆಡಿನ ಹಿಕ್ಕಿಯಲಿ ಮಾಡಿದರೊಂದು ಲಿಂಗವ
ರೂಢಿಗೀಶ್ವರನಾ ಶರಣ ಸದ್ಭಕ್ತರಿಗಲ್ಲದೆ
ಪೀಡಿಗಳಿಗೆ ಲಿಂಗ ಸಲುವುದೇ?

ಚಂದಕ್ಕೆ ಲಿಂಗವ ಮಂದೆಲ್ಲ ಧರಿಸಿದರು ನಮ್ಮ
ಚಂದಯ್ಯನಂಥ ದೃಢವಿಲ್ಲ ಲೋಕದ
ಅಂಧಕರು ಧರಿಸಿದಾ ಫಲವೇನೊ ?

ಏಳೇಳು ಲೋಕದ ಒಡೆಯಂಗೆ ಕಾಳುವಪ್ಪವ ಹಾಕಿದವರುಂಟೆ ? ಕಾಲನೆ ತೊಳೆದು ಉದಕ ನೀಡಿ ಎನ್ನ ಏಳಲವ ಮಾಡಿದರು. ಇವರು ಕೂಳಿಗೆ ಮನೆಮನೆಯ ತಿರುಗಿದರು.

ಬೂದಿ ಪೂಸಿಕೊಂಡು ಬೀದಿ ಬೀದಿಯಾ ತಿರುಗುವ
ಬೀದಿ ಜಂಗಮ ನಾನಲ್ಲ ನಾಲ್ಕು ವೇದವ ತಂದಂಥಾ
ಮಾಧವನ ಗುರುತವನರಿಯರು.

ಹತ್ತುಸಾವಿರ ಬಿನ್ನಹ ಜಂಗಮರಿಗಿಕ್ಕಿ ಅನ್ನಪ್ರಸಾದ ಕೆಡಿಸುವರೆ ?
ಊರಾಗಿರುವ ತೊನ್ನ ಮೂಕರಿಗೆ ಉಣಲಿಕ್ಕಿದರೆ
ಉನ್ನತದ ಪದವಿ

ಹೀಗೆ ಅನೇಕ ವಚನಗಳನ್ನು ಹೇಳಿ, ಮಾನವರು ಲಿಂಗ-ಜಂಗಮದ ಬಗೆಗೆ ತಪ್ಪಾಗಿ ತಿಳಿದುಕೊಂಡಿದ್ದಾರೆ. ಲಿಂಗದ ಮಹತಿಯನ್ನು ಹೇಳುತ್ತಾ **ಸೂರ್ಯ, ಚಂದ್ರ, ಲಿಂಗ, ತಾರೆ, ಮಂಡಲಲಿಂಗ, ಧಾರುಣಿಲಿಂಗ, ಮರ್ತ್ಯಕ್ಕೆ ಧಾನ್ಯವೇ ಲಿಂಗ** ಎಂದು ಉಸಿರಿದ್ದಾರೆ **ಹರನೆ ಜಂಗಮನಾಗಿ ತಿರಿದುಂಡರೆ ಧರೆ ಮೂರು ಲೋಕಗಳು ಉಳುವುದೇ?** ಎಂಬ ವಚನ ದಲ್ಲಿ ಜಂಗಮನು ತಾನು ಶಿವನ ಅವತಾರವೆಂದು ಹೇಳಿ ಏನೊಂದೂ ಕರ್ಮ ಮಾಡದೆ, ತಿರಿದುಂಡರೆ ಪರಾನ್ನವನ್ನು ಭುಂಜಿಸಿದ ದೋಷ ಉಂಟಾಗುವುದು. ಅದಕ್ಕಾಗಿ ಕಾಯವನ್ನು ಬದುಕಿಸಲು ಕಾಯಕವನ್ನು ಮಾಡಲೇಬೇಕೆಂದು ಹೇಳುತ್ತಾರೆ. **ನಾಲ್ಕು ವೇದವ ತಂದಂಥಾ ಮಾಧವನ ಗುರುತನರಿಯರು** ಎಂದು ಹೇಳಿ ತಾವು **ಮಾಧವನ** ರೂಪ ಎನ್ನುತ್ತಾರೆ. ಅವತಾರಿಗಳು ಮಹಾಚೈತನ್ಯದ ಸ್ವರೂಪವೇ ಆಗಿರುತ್ತಾರೆ. ಅಂಥವರಿಗೆ ಜಾತಿ ಪ್ರಾಂತ ರೆಂದು ಹೇಳಕೂಡದು. ಮೌನೇಶ್ವರ ಸ್ವಾಮಿಗಳು ನಡೆಯಲ್ಲಿ ತಪ್ಪಿದ ಜಾರ

ನ್ನಾದರೂ ಬಿಟ್ಟಿಲ್ಲ. ಬಸವಣ್ಣನವರನ್ನು ಕುರಿತು ಅವರು ತಮ್ಮದೊಂದು ವಚನದಲ್ಲಿ ಹೀಗೆ ಹೇಳುತ್ತಾರೆ :

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ನಿಚ್ಚಭೋಜನ ಮಾಡಿದೆನೆಂಬುದು ಅಹಂಕಾರದಲ್ಲಿ
ಠಕ್ಕು ಬಂತು ನಿನ್ನ ಭಕ್ತಿಗೆ, ಮರ್ತ್ಯಕ್ಕೆ ಹೋಗೆಂದು
ಕುಕ್ಕನ ಕೂಡ ಬೆರೆದುಂಡಲ್ಲದೆ ನಿನ್ನ ಹತ್ತಿದ ಪಾಪ ಹರಿಯದು.

ಇದರಿಂದ ಅವರು ನಡೆಗೂ ನುಡಿಗೂ ಅಂತರ ಎಲ್ಲಿದೆಯೋ ಅಲ್ಲಿ ಅದನ್ನು ಖಂಡಿಸಿದ್ದಾರೆ. ವಿಶ್ವಬ್ರಾಹ್ಮಣನಾದವನು ಜನಿವಾರವನ್ನು ಹಾಕಿ ಮಾಯಾ ಮಲ, ಕಾರ್ಮಿಕಮಲ, ಆಣವಮಲಗಳನ್ನು ದಾಟದಿದ್ದರೆ, ಸತ್ವ, ರಜಸ್ಸು, ತಮಸ್ಸು ಈ ತ್ರಿಗುಣಗಳ ದೋಷಗಳನ್ನು ಇಲ್ಲವಾಗಿಸದಿದ್ದರೆ ಮೂರೆಳೆಯ ಯಜ್ಞೋಪವೀತವನ್ನೇಕೆ ಧರಿಸಬೇಕೆಂದು ಈ ಕೆಳಗಿನ ವಚನದಲ್ಲಿ ಸುಂದರ ವಾಗಿ ಹೇಳಿದ್ದಾರೆ.

ಯಜ್ಞೋಪವವೀತವ ಧರಿಸಿ ಅವಗುಣವನೆ ಕೆತ್ತಿ
ಭರ್ಗೋದೇವನ ಭಜಿಸಿ, ಬ್ರಾಹ್ಮಣನಾದೆನೆಂದರೆ
ಹಗ್ಗವಾ ಹಾಕಿ ಕೊರಳು ಕೊಯ್ಯೆಂದುದಾರ ಹೇಳಿದರೊ?
ಆಚಾರನಲ್ಲ, ಬಾಹ್ಮಣನಲ್ಲ, ಶೂದ್ರನಲ್ಲ,
ದಾವಕುಲವೆಂದು ತಿಳಿಯಲೊ?

ಮಾನವನು ಲಿಂಗ, ವಿಭೂತಿ, ಗಂಧ, ಜನಿವಾರ, ಚಂಡಿಕೆ ಇವುಗಳನ್ನು ದೇಹದ ಮೇಲೆ ಧರಿಸಿದಾಕ್ಷಣ ಅವುಗಳ ಮಹತಿಯನ್ನು ತಿಳಿದಂತಾಗಲಿಲ್ಲ. ಒಂದೊಂದು ಗುರುತಿಗೆ ಒಂದೊಂದು ಅರ್ಥವಿದೆ. ಅವು ನಮ್ಮ ಆತ್ಮೋನ್ನತಿಯ ಸಾಧನಕ್ಕೆ ಅತ್ಯಾವಶ್ಯಕವಾದ ಕುರುಹುಗಳು. ಮೌನೇಶ್ವರರು **ಚೆಂಡಿಕೆಯ ಬಿಟ್ಟೇನು ದಂಡಪ್ರಣಾಮವೆರಿಗೇನು ಫಲ ?** ಎಂದು ಕೇಳುತ್ತಾರೆ. **ಹೆಂಡ ಖಂಡವ ತಿಂದು ಕಂಡಲ್ಲಿ ತಿರಿದುಂಡು ಪೆನಗೊಂಡೆ ಬಾಬಯ್ಯ ಗುರುವಾದುದು ಕಂಡಿಲ್ಲವೇನೊ ಕುರುಡರಿರ್ಯಾ ?** ಎಂದು ಕೇಳುತ್ತಾರೆ. [ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಪುಟ್ಟಪರ್ತಿಗೆ ಸಮೀಪದಲ್ಲಿ ಪೆನ

ಗೊಂಡ ಇದೆ. ಅಲ್ಲಿ ಬಾಬಯ್ಯ ಎಂಬ ಮುಸಲ್ಮಾನ ಧರ್ಮದ ಮಹಾತ್ಮನು ಆಗಿ ಹೋಗಿದ್ದಾನೆ!. **ಚನ್ನಂಗೆ, ಕನ್ನಂಗೆ ಮುನ್ನ ಕೊಟ್ಟನು ಶೀಲ.** ಮಾದರ ಚೆನ್ನಯ್ಯ, ಬೇಡರ ಕನ್ನಯ್ಯ ಇವರು ಕಡಿಮೆ ಕುಲದವರೆಂದು ಹೇಳಬಹುದೆ? ಉತ್ತಮ ಕುಲದವನಾಗಬೇಕೆಂದರೆ ಧರ್ಮಾಚಾರಣೆಯಲ್ಲಿ ತೊಡಗಿ ಆತ್ಮಜ್ಞಾನವನ್ನು ಹೊಂದಬೇಕೆನ್ನುತ್ತಾರೆ. ಆತ್ಮಜ್ಞಾನವನ್ನು ಪಡೆದವರ ಇರುವಿಕೆಯೇ ಬೇರೆಯಾಗಿರುತ್ತದೆ. **ಸಾವಿರ ಮಂದಿ ಸತಿಯರ ಭೋಗ ಮಾಡಿ ಯೋಗಿಯಾಗುವ ಸ್ಥಲ ಬೇರೆ. ಸಕಲರಾ ಮನೆಯ ಹಾಗರ ವಸುಂಡು ಕುಲಜನಾಗುವಂಥಾ ಅವರಾಗಮವು ಬೇರೃತಿ** ಎನ್ನುತ್ತಾರೆ.

ಮೌನೇಶ್ವರ ಪ್ರಭುಗಳು ಆಡಂಬರ ಜೀವನಕ್ಕೆ ಕಾಸಿನ ಬೆಲೆಯನ್ನೂ ಕೊಡುವದಿಲ್ಲ. ಕಂಡದನ್ನು ಕಂಡಂತೆ ಆಡಿ ತೋರಿಸುವ ಸ್ವಭಾವ. ಅಂಜಿಕೆ ಎಂಬುದನ್ನು ಅರಿಯರು. ಧರ್ಮಶಾಸ್ತ್ರಗಳು ಉಸುರಿದಂತೆ ನಡೆದು ಪರಮಾತ್ಮನ ಚಿಂತನೆಯಲ್ಲಿ ಕಾಲ ಕಳೆಯುವದೇ ಮಾನವನಿಗೆ ಬೇಕಾದುದು. ಕೆಲವರು ಕುಲದ ಭ್ರಮೆಯಲ್ಲಿ ಇನ್ನೊಂದು ಧರ್ಮವನ್ನು ಹೀಯಾಳಿಸುವುದರಲ್ಲೇ ತಮ್ಮ ಕಾಲ ಕಳೆಯುವರು. ಇಂಥ ಜನರನ್ನು ಕಂಡರೆ ಸ್ವಾಮಿಗಳಿಗೆ ಆಗುವುದಿಲ್ಲ. ಆಡಂಬರದ ಪೂಜೆ, ಜೀವನಕ್ಕಾಗಿ ಜಂಗಮ ವೃತ್ತಿ ತರವಲ್ಲ ಎನ್ನುತ್ತಾರೆ. ನಿರಾಡಂಬರ ಜೀವನ ನಡೆಸಬೇಕು. ಸಹಜವಾದ ಲೌಕಿಕ ವ್ಯವಹಾರ ಮಾಡಬೇಕು ಸಿರಿತನ ಬರಲಿ, ಬಡತನ ಬರಲಿ ಪಾಲಿಗೆ ಬಂದದ್ದನ್ನು ಭೋಗಿಸಬೇಕು. ನಿರಂತರವೂ ಬ್ರಹ್ಮನ ಅಂದರೆ ಸತ್ಯದ ಆಚರಣೆಯಲ್ಲಿಯೇ ಇರಬೇಕು. ಸತ್ಯಾಚರಣೆಯಲ್ಲಿರುವವರೇ **ಬ್ರಹ್ಮಚಾರಿ** ಗಳಾಗಿರುವುದು. 'ಉಂಡು ಉಪವಾಸಿ, ಬಳಸಿದ ಬ್ರಹ್ಮಚಾರಿ'ಯಾಗಿರುವುದೇ ಮೌನೇಶ್ವರ ಸ್ವಾಮಿಗಳ ಬೋಧನೆಯ ಸಾರವಾಗಿದೆ. ಈ ಪ್ರಕಾರ ಲಿಂಗವನ್ನು ತಿಳಿಯಬೇಕು. ಲಿಂಗಾನುಭವಿಯಾಗಿದ್ದು ಜಂಗಮ ಸ್ವರೂಪಿಯಾಗಿ ಸಂಚರಿಸಬೇಕು ಎನ್ನುತ್ತಾರೆ.

ಸಂನ್ಯಾಸ - ಸಂಸಾರ

ಆತ್ಮ ಜ್ಞಾನ ಸಂಪಾದನೆಗಾಗಿ ಮನೆ, ಮಠ, ಊರು, ಕೇರಿ, ಹೆಂಡತಿ ಮಕ್ಕಳನ್ನು ಬಿಟ್ಟು ಅರಣ್ಯಕ್ಕೆ ಓಡುವರು ಕೆಲವರು. ಇವರಂಥ ಹೇಡಿಗಳು ಮತ್ತೊಬ್ಬರಿಲ್ಲ ಎನ್ನುತ್ತಾರೆ ಮೌನೇಶ್ವರ ಸ್ವಾಮಿಗಳು.

ಹುಟ್ಟಿದ ಯೋನಿಯ ಹಳಿದು। ಕೊಟ್ಟ ಮೊಲೆಗಳ ಹಳಿದು॥
ಎತ್ತಿ ಮುದ್ದಾಡಿದ ಮುಖವ ಹಳಿದವಂಗೆ
ಎತ್ತಣದ ಉಪದೇಶ? ಲೋಕದ
ಕತ್ತೆಗಳ ಕಂಡು ಬೆರಗಾದೆ.

ತಾಯಿ, ಹಂಡೆಗಳನ್ನು ತ್ಯಜಿಸಿ, ಆತ್ಮಜ್ಞಾನಿಯಾಗುವೆನೆಂಬುವುದು ಅನುಚಿತ ಮಾರ್ಗ. ಹಡೆದ ತಾಯಿಯನ್ನು ಬಿಟ್ಟು, ಕೈಹಿಡಿದ ಸತಿಯನ್ನು ತ್ಯಜಿಸಿ ಅರಣ್ಯಕ್ಕೆ ಹೋಗಿ ಅಲ್ಲಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೇನೆ ಅನ್ನುವ ನುಡಿ ಮೌಢ್ಯದ ಪರಮಾಧಿ ಸೂಚಿಸುತ್ತದೆ.

ಹೆಣ್ಣಿನ ಮೇಲಿನ ಆಸೆ। ಸುಣ್ಣದ ಕಲ್ಲಿನ ರಾಶಿ।
ಕಣ್ಣಿಲಿ ನೋಡಿ ಬಳಲುವ ಪಾಪಿಗೆ। ತಣ್ಣೀರೊಳಗೆ ಬಿದ್ದ ತೆರನಂತೆ।
ಇವರಿಗೆ ಸಂನ್ಯಾಸಿ ಎಂಬ ಬಿರುದ್ಯಾಕೆ।
ಇವರಿಗೆ ಸನ್ನಿ ಹತ್ತಿದೆಯೇನೋ ?

ಸನ್ಯಾಸವನ್ನು ಆಚರಿಸಲು ಗುಡ್ಡ ಗುಹೆಗಳಿಗೆ ಹೋಗಿ ವಾಸಮಾಡುವ ಸಾಧಕರಿಗೆ ಮೌನೇಶ್ವರ ಸ್ವಾಮಿಗಳು ಸಂಸಾರದಲ್ಲಿದ್ದೇ ಸಂನ್ಯಾಸವನ್ನು ಸಾಧಿಸಬೇಕೆಂದು ಉಪದೇಶಿಸುತ್ತಾರೆ. ಅದು ಸುಲಭವಾದ ಮಾರ್ಗವೆಂದು ಹೇಳುತ್ತಾರೆ. ರತ್ನಾಕರವರ್ಣಿಯು ಭರತೇಶ ವೈಭವದಲ್ಲಿ ಹೇಳುವಂತೆ: 'ಶಿಲೆಯ ಮೇಲಿದ್ದ ಭೋಗಿಗಳುಂಟು। ಮೊಲೆಯ ಮೇಲಿರ್ದ ಯೋಗಿಗಳುಂಟು।' ಎಂದೆನ್ನುವ ವಿಚಾರವನ್ನು ಸಮರ್ಥಿಸುತ್ತಾರೆ. ಶಿಲೆಯೆಂದರೆ ಗುಡ್ಡ ಗುಹೆಗಳಲ್ಲಿ ಕುಳಿತು ತಪಸ್ಸು ಮಾಡುವ ಸಾಧಕನು ಮನಸ್ಸಿನಿಂದ ಹೆಣ್ಣಿನ ವಾಸನೆಯನ್ನು ಬಿಡುವುದು ತುಂಬ ಕಷ್ಟಸಾಧ್ಯವಾಗುತ್ತದೆ. ಮನದಲ್ಲಿ ಹೆಣ್ಣಿನ ರೂಪವನ್ನು ಸ್ಮರಿಸಿಕೊಂಡರೆ ಸಾಕು ಆವನು ಭೋಗಿ ಎಂದೇ ಭಾವಿಸಬೇಕು. ಕೆಲವರು ಸಂಸಾರದಲ್ಲಿದ್ದೇ ಕುಂಬಾರ ಹುಳುವಿನಂತೆ ವೈಗೆ, ಮನಕ್ಕೆ ಏನೊಂದನ್ನೂ ಹಚ್ಚಿಕೊಳ್ಳದೇ ಇದ್ದೂ - ಇಲ್ಲದಂತೆ ಬಾಳಿ ಯೋಗ ಜೀವನ ನಡೆಸುತ್ತಿರುತ್ತಾರೆ. ಅಂಥವರು ಮೊಲೆಯ ಮೇಲಿದ್ದ ಯೋಗಿಗಳೆಂದು ಹೇಳುತ್ತಾರೆ. ಮೌನೇಶ್ವರ ಸ್ವಾಮಿಗಳು ಸಂಸಾರದಲ್ಲಿದ್ದುಕೊಂಡೇ ಯೋಗಿಯಾಗು

ವುದು ಶ್ರೇಯಸ್ಕರವೆನ್ನುತ್ತಾರೆ. **ಹೆಣ್ಣು ಬಿಟ್ಟೆನೆಂದು ಹೇಳುವವರ ಹೆಸರೇನು ?** ಎಂದು ಪ್ರಶ್ನೆ ಕೇಳುವುದು ತುಂಬ ಔಚಿತ್ಯ ಪೂರ್ಣವಾದುದಾಗಿದೆ. ಹಾಗಾದರೆ ಸಾಧಕನು ಹೇಗಿರಬೇಕೆಂಬುದನ್ನು ಅವರು ಸುಂದರವಾಗಿ ಹೇಳುತ್ತಾರೆ : **ಉಂಬಂತೆ ಉಣಬೇಕು। ಕೊಂಬಂತೆ ಕೊಳಬೇಕು। ಬಂದದ್ದನ್ನುಂಡು ಬ್ರಹ್ಮಚಾರಿಯಾಗ ಬೇಕಾಗುವುದೇ** ಅತ್ಯಂತ ಶ್ರೇಷ್ಠವಾದ ಮಾರ್ಗವೆಂದು ಉಸುರುತ್ತಾರೆ. ಅವರೇ ಇನ್ನೊಂದು ವಚನದಲ್ಲಿ **ಕಿಂಚಿತ್ ಮೂತ್ರದಿ ಹಿಂಚು ಮುಂಚು ಕಾಣದೆ। ಕಂಚಿಪುರಕೆ ಏತಕೆ ಹೋಗಬೇಕು ? ಮಲಗುವ ಮಂಚದ ಮೇಲೆ ತಿಳುಕೊಳ್ಳು** ಎಂದು ಹೇಳುತ್ತಾರೆ. 'ತನ್ನರಿವೇ ತನಗೆ ಗುರುವು' ಎನ್ನುವ ಅನುಭಾವಿಗಳ ಮಾತನ್ನೇ ಇವರು ಹಿಂದೆ ಮುಂದೆ ವಿಚಾರಿಸದೆ [ಅಂದರೆ ಎಲ್ಲಿಂದ ಬಂದೆ, ಎಲ್ಲಿಗೆ ಹೋಗುವವ ಎಂಬುದನ್ನು ಹಿಂದಿನ ಮುಂದಿನ ವಿಚಾರ ಮಾಡದೆ] ಕಂಚಿಪುರಕ್ಕೆ (ದಕ್ಷಿಣ ಭಾರತದಲ್ಲಿ ಹೆಸರಾದ ವಿದ್ಯಾ ಕೇಂದ್ರ) ಏಕೆ ಹೋಗಬೇಕು ? ತಾನೆಲ್ಲಿರುವನೋ ಅಲ್ಲಿಯೇ ಇದ್ದು ಆತ್ಮಜ್ಞಾನವನ್ನು ಉಂಟು ಮಾಡಿಕೊಳ್ಳಲು ಸಾಧ್ಯವಿದೆ ಎಂಬುವ ವಿಚಾರವನ್ನು ಮೌನೇಶ್ವರ ಸ್ವಾಮಿಗಳು ಚೆನ್ನಾಗಿ ನಿರೂಪಿಸಿದ್ದಾರೆ.

ಇನ್ನೊಂದು ವಚನದಲ್ಲಿ **ಕುರುಬನಂತಿರಬೇಕು। ಕೊರವನಂತಿರಬೇಕು। ಕೆರವು ತರುವವನಂತಿರಬೇಕು ಮುನ್ನಿನ। ಅರುಂಬುದಿರಬೇಕು** ಎಂದು ಹೇಳಿದ್ದಾರೆ. ಆತ್ಮಜ್ಞಾನ ಸಂಪಾದಿಸಲು ಗಡ್ಡ ಮೀಸೆ ಬಿಟ್ಟು, ತಲೆಯಲ್ಲಿ ಜಟೆಯನ್ನು ಬಿಟ್ಟು, ಕಾವಿಯ ಬಟ್ಟೆ ಉಟ್ಟು, ಭಸಿತ ರುದ್ರಾಕ್ಷಿ ಗಂಧಾದಿಗಳ ಧರಿಸಿ ದೇಶ ದೇಶ ಸಂಚಾರ ಗೈವ ಆಡಂಬರ ಸಂನ್ಯಾಸಿಗಳಿಗಿಂತ ಸಂಸಾರದಲ್ಲಿ ಕುರುಬನಂತೆ, ಕೊರವನಂತೆ, ಕೆರವು ತರುವ ಮಾದಿಗನಂತೆ ಬಾಳಿ, ಯಾರಿಗೂ ತಿಳಿಯದಂತೆ ಸಾಧನೆಯಲ್ಲಿದ್ದು ಮಹಾಜ್ಞಾನವನ್ನು ಸಂಪಾದಿಸಬೇಕೆಂಬ ವಿಚಾರವನ್ನು ಸ್ವಾಮಿಗಳು ತೀರಸರಳವಾದ ಶಬ್ದಗಳಲ್ಲಿ ಹೇಳಿದ್ದಾರೆ. ಅರಣ್ಯಕ್ಕೆ ಹೋಗಿ ತಪಸ್ಸು ಮಾಡುವವರ ಬಗೆಗೆ ತಮ್ಮದೊಂದು ವಚನದಲ್ಲಿ **ತರುಗಿರಿಗಳೊಳಗೆ ತರಗೆಲೆಗಳ ಮೆದ್ದು। ಶಿರಗಳ ಅಡಿಯಾಗಿ ತಪವ ಮಾಡುವವರೆಲ್ಲ। ಕುರಿಯ ಆತ್ಮದಲ್ಲಿ ಜನಿಸು**

ವರು । ಎಂದು ಹೇಳುತ್ತಾರೆ. ದೇಹದಂಡನೆ ಮಾಡಿದರೆ ಮನೋನಿಗ್ರಹ ಸಾಧ್ಯವಾಗುವುದೆ ? ಹುತ್ತ ಬಡದಿರೆ ಹಾವು ಸಾಯುವುದೇ ? ಸಂಸಾರ ದಲ್ಲಿದ್ದು ತಾಳ್ಮೆಯನ್ನು ರೂಢಿಸಬೇಕು. ಸಮತಾ ಬುದ್ಧಿಯನ್ನು ವೃದ್ಧಿಸ ಬೇಕು. ಯಾವುದೇ ಒಂದು ಕೆಲಸವನ್ನು ಮಾಡಿಗಳಿಸಿ ಉದರ ಪೋಷಣೆ ಮಾಡಿಕೊಳ್ಳಬೇಕು. ನಿರಂತರ ಪರಮಾತ್ಮನ ಚಿಂತನೆಯಲ್ಲಿರಬೇಕು. **ಮಾಯೆ** ಯೊಡನೆ ನಿತ್ಯ ಹೋರಾಡಿ ಅದನ್ನು **ತಾಯಿ** ಯನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಯಾವುದು ಮಾಯೆಯಾಗಿ ಕಾಡುವುದೋ, ಅದೇ ಆಗ ತಾಯಿಯಾಗಿ ಕಾಪಾಡುವುದು. ಸಂಸಾರದಲ್ಲಿದ್ದು ಇದನ್ನು ಸಾಧಿಸಲು ಸಾಧ್ಯವಾಗುತ್ತದೆಯೇ ಹೊರತು ಗುಡ್ಡ ಗುಹೆಗಳಲ್ಲಿ ತಲೆಕೆಳಗಾಗಿ ನಿಂತರೆ ಒಣಗಿದ ಎಲೆಗಳ ತಿಂದರೆ ಅದರಿಂದೇನೂ ಫಲವಿಲ್ಲ. ಮುಂದಿನ ಜನ್ಮದಲ್ಲಿ ಅಂಥವರು ಕುರಿಯ ಉದರದಲ್ಲಿ ಜನಿಸುವರೆಂದು ಹೇಳುತ್ತಾರೆ. ಅದಕ್ಕಾಗಿ ಮಾನವನು ಆತ್ಮೋನ್ನತಿಯನ್ನು ಸಾಧಿಸಲಿಕ್ಕೆ ಸಂನ್ಯಾಸಕ್ಕಿಂತಲೂ ಸಂಸಾರವೇ ಸರ್ವಶ್ರೇಷ್ಠವಾದುದ್ದಾಗಿದೆ ಎಂದು ಹೇಳುತ್ತಾರೆ.

ಜೀವನ ಧರ್ಮ

ಎಲ್ಲಿ 'ಜೀವಿ' ಇದೆಯೋ ಅಲ್ಲಿ 'ಜೀವನ'ವಿದೆ. ಉದರ ಪೋಷಣೆ ಗಾಗಿ ಸಾಹಸಪಡುವುದು, ವಾಸಕ್ಕೆ ಅನುಕೂಲತೆಯನ್ನು ಹೊಂದುವುದು, ದೇಹದ ಹಸಿವೆ, ತೃಷೆ, ಕಾಮ ತೃಪ್ತಿಗಾಗಿ ಗಂಡು ಹೆಣ್ಣುಗಳು ಜೋಡಿ ಯಾಗುವುದು, ಮಕ್ಕಳನ್ನು ಹೆರುವುದು, ಮಕ್ಕಳ ಜೋಪಾನಕ್ಕಾಗಿ ವ್ಯವಸಾಯ ನಡೆಯಿಸುವುದು, ಅದಕ್ಕಾಗಿ 'ಜೀವನ' ಕಾರ್ಯವನ್ನು ಮುಂದುವರಿಸಿ ಕೊಂಡು ಹೋಗಬೇಕಾಗುತ್ತದೆ. ಪ್ರಪಂಚದಲ್ಲಿ ಪಶುಪಕ್ಷಿಗಳಿಗಿಂತಲೂ ಮಾನವನು ಶ್ರೇಷ್ಠನಾಗಿದ್ದಾನೆ. ಇವನ ಬೌದ್ಧಿಕ ಶಕ್ತಿಯು ಇವನು ಪಶುಪಕ್ಷಿಗಳಿಗಿಂತ ಭಿನ್ನವಾದ, ಹಾಗೂ ಉನ್ನತವಾದ ಜೀವನವನ್ನು ಸಾಗಿ ಸಲು ನೆರವಾಗುತ್ತಿದೆ. ಬುದ್ಧಿಶಕ್ತಿ ಹಾಗು ಭಾವನೆಗಳನ್ನು ಚೆನ್ನಾಗಿ ಬೆಳೆಸಿ ಕೊಂಡು ನಾಗರಿಕತೆ, ಸಂಸ್ಕೃತಿಗಳ ಸೋಪಾನಗಳನ್ನು ಒಂದೊಂದಾಗಿ ಏರುತ್ತಾ ನಡೆದಿರುತ್ತಾನೆ. ಆದರೂ ಒಮ್ಮೊಮ್ಮೆ ಪಶುಪಕ್ಷಿಗಳಿಗಿಂತ ಕೀಳು

ಮಟ್ಟದಲ್ಲಿ ವರ್ತಿಸುತ್ತಾನೆ. ಅಜ್ಞಾನದ ಅಮಲಿನಲ್ಲಿ ನೂರಾರು ತಪ್ಪುಗಳನ್ನು ಮಾಡುತ್ತಾನೆ, ಇದರಿಂದ ಅವನು ಪಶುಪಕ್ಷಿಗಳ ಆದರ್ಶವನ್ನು ಮುಂದಿಟ್ಟು ಕೊಂಡು ಬಾಳಬೇಕಾಗುತ್ತದೆ.

ನಡೆಶುದ್ಧ ನುಡಿಶುದ್ಧ ಒಡೆಯನ ಚಾಕರಿ ಶುದ್ಧ । ತೊಡೆಯಲ್ಲಿ ಶುದ್ಧ ಇದರಂಥಾ। ಒಡನಿ ಮತ್ತೊಂದುಂಟೆ ಧರೆಯೊಳಗೆ। ಕೇಡು ನುಡಿದವನೆ ಹೊಲೆನಾಯಿ ನಾಯಿಯಲ್ಲಿ ಎಂಥಾ ಪ್ರಾಮಾಣಿಕ ಚಾರಿತ್ರ್ಯ ವಿದೆ? ಕಾಮ ಕೇಳಿಯು ಅದರಲ್ಲಿ ಮಿತಗೊಂಡಿರುತ್ತದೆ; ಆದರೆ ಮಾನವಲ್ಲಿ ಮಿತಿ ಮೀರಿದೆ. ನಂಬಿಗೆ, ವಿಶ್ವಾಸಗಳು ನಾಯಿಯಲ್ಲಿಯೇ ಹೆಚ್ಚಾಗಿರುತ್ತವೆ. ಆದರೆ ಮಾನವನು ಇಂದು ಅಪ್ರಾಮಾಣಿಕ, ಅವಿಶ್ವಾಸ ವೃತ್ತಿಗೆ ಪಕ್ಕಾಗಿ ನಾಯಿ ಬಾಳಿಗಿಂತಲೂ ನಿಕೃಷ್ಟ ಜೀವನ ಸಾಗಿಸುತ್ತಿದ್ದಾನೆ. ಇನ್ನೊಂದು ವಚನದಲ್ಲಿ **ಒಡೆಯ ಬಡವನೆಂದು ಒಡೆದಂಟನೆ ಮೆದ್ದು। ಮಡುವಿನಾ ಅಗ್ಗವಣಿ ಕುಡಿದು। ಮಡಿವ್ಯೈಲಿಗೆ ಎಂದು ನಿಷೇಧವಿಲ್ಲದೆ ಹೋರುವುದು। ಇದರಂಥಾ । ಒಡನಿ ಮತ್ತೊಂಟಿ ಧರೆಯೋಳಗೆ।** ಎಂದು ಕತ್ತೆಯ ಸಹನೆಯ ಗುಣವನ್ನೂ, ನಂಬಿಗೆಯನ್ನು ಮಾನವನು ಇಂದು ಕಲಿತು ಕೊಳ್ಳಬೇಕೆಂದು ಹೇಳುತ್ತಾರೆ. **ಸರ್ವರ ಮಲವನ್ನೆಲ್ಲ ಸರಿಯೆಂದು ಸೇವಿಸುವುದು। ಶರೀರಾ ಕೊಯ್ದು ಉಣಿಸುವುದು। ಕಿರಿದೆನ್ನಬಹುದೆ?** ಎಂದು ಹಂದಿಯ ತ್ಯಾಗದ ವೃತ್ತಿಯನ್ನು ಮಾನವನು ಅನುಸರಿಸಬೇಕೆಂದು ಹೇಳುತ್ತಾರೆ. ಮಾನವನು ಪ್ರಪಂಚದ ಅನೇಕ ಪ್ರಾಣಿಗಳನ್ನು, ಅನೇಕ ಬ್ರಹ್ಮ ಸೃಷ್ಟಿ ವಸ್ತುಗಳನ್ನು ನೋಡಿ ತನ್ನ ನಡೆ-ನುಡಿಗಳನ್ನು ತಿದ್ದುಕೊಳ್ಳಬೇಕು.

ನಾಲ್ವತ್ತುಸಾವಿರ ಜೇನು ಹುಳವನು ಕೊಂದೆ । ನಾನದರ ಪಡಿಯ ಸೆಳೆದುಂಡೆ। ಪ್ರಭುರಾಯಾ, ದಾನಧರ್ಮಿಯೆಂದೆನಲಾರೆ ಎಂಬ ವಚನದಲ್ಲಿ ಮಾನವನು ಎಂಥಾ ಕರ್ಮಪಾತಕಿ ಎಂಬುದನ್ನು ತೋರಿಸಿ ಕೊಡುತ್ತಾರೆ. ಜೇನು ಹುಳುಗಳು ಲಕ್ಷಾನು ಲಕ್ಷ ಹೂಗಳಲ್ಲಿಯ ಪರಾಗವನ್ನು ತಂದು ಗೂಡಿನಲ್ಲಿಟ್ಟು ಅಮೃತ ಸಮಾನವಾದ ತುಪ್ಪವನ್ನು ತಯಾರಿಸುವವು. ಎಷ್ಟೋ ತಿಂಗಳು ಕಷ್ಟಪಟ್ಟು ಜೇನು ತುಪ್ಪವನ್ನು ಸಿದ್ಧಗೊಳಿಸಿದ್ದನ್ನು ಮಾನವನು ಕ್ಷಣಾರ್ಧದಲ್ಲಿ ಅದರ ಪಡಿಯನ್ನು (ಗೂಡನ್ನು) ಸೆಳೆದುಕೊಂಡು

ಜೇನು ಕುಡಿದು ಬಿಡುತ್ತಾನೆ. ಒಬ್ಬರ ಪರಿಶ್ರಮದಿಂದ ಸಂಗ್ರಹಿಸಿದ ಅನ್ನವನ್ನು ಅನಾಯಾಸವಾಗಿ ಎತ್ತಿಹಾಕಿ, ಪರಾನ್ನ ಭುಂಜಿಸುವ ಪಾತಕಿ ಮಾನವನ ದುಷ್ಕೃತಿಯನ್ನು ಕಂಡು ಮೌನೇಶ್ವರ ಸ್ವಾಮಿಗಳು ಕಿಡಿ ಕಿಡಿಯಾಗಿದ್ದಾರೆ. 'ನಾನು ದಾನ ಮಾಡುತ್ತೇನೆ. ಧರ್ಮ ಮಾಡುತ್ತೇನೆ'ಂದು ಬಡಾಯಿ ಕೊಚ್ಚಿಕೊಳ್ಳುವ ಮಾನವನ ಜೀವನವನ್ನು ಕಂಡು ಕಟುವಾಗಿ ಟೀಕಿಸಿದ್ದಾರೆ. ಮನುಷ್ಯನು ತನ್ನ ನಡೆ-ನುಡಿಗಳಿಂದ ಜೀವನವನು ಶುದ್ಧಿಗೊಳಿಸಬೇಕು. ಕಠಿಣವಾದ ಯೋಗಸಾಧನೆ ಮಾಡದಿದ್ದರೂ ದಿನವಿಡೀ ಬದುಕಿನಲ್ಲಿ ಅನ್ಯಾಯ ಅಪರಾಧ, ಹಿಂಸೆ ಇವು ಘಟಿಸದಂತೆ ಎಚ್ಚರವಾಗಿರಬೇಕು. ಪ್ರಾಣಿಗಳಲ್ಲೂ ಜೀವನಧರ್ಮ ತತ್ತ್ವಗಳು ಸಮಾವೇಶವಾಗಿರುವಾಗ ಮಾನವನಲ್ಲಿ ಅವು ನಶಿಸಿದರೆ ಮಾನವನು ಬುದ್ಧಜೀವಿಯಾಗಿದ್ದು ಸಾರ್ಥಕವೇನು ? ಸತ್ಯವಾದ, ಸಾತ್ವಿಕವಾದ, ಅಹಿಂಸಾತ್ಮಕವಾದ, ನ್ಯಾಯವಾದ, ನೀತಿ ಬದ್ಧವಾದ ಜೀವನಧರ್ಮವನ್ನು ಅನುಸರಿಸಿಕೊಂಡು ಬರಬೇಕು.

ಪರಿಸಮಾಪ್ತಿ

ಮೌನೇಶ್ವರ ಸ್ವಾಮಿಗಳು ವಚನಗಳನ್ನು ನುಡಿದು ಜನ ಅವುಗಳನ್ನು ಓದಿ ಅರಿತುಕೊಂಡು ರೂಢಿಗಿಳಿಸಲಿ ಎಂದು ಇಚ್ಛಿಪಟ್ಟಿದ್ದಾರೆ. ಜನತೆಯ ಜೀವನವನ್ನು ಪರಿಶುದ್ಧಗೊಳಿಸಲು ಪರಿಶ್ರಮಿಸಿದ್ದಾರೆ. ವಿನಯದ ನುಡಿಗಳಿಂದ ಬೋಧಿಸಿದ್ದಾರೆ. ಅನೈತಿಕ ರೋಗಗ್ರಸ್ತ ವಿಷಯಗಳನ್ನು ಅತ್ಯಂತ ಕಠೋರವಾದ, ತೀರಾ ಕ್ಷುಲ್ಲಕ ಶಬ್ದಗಳಿಂದ ನಿರ್ದಾಕ್ಷಿಣ್ಯವಾಗಿ ಹಿಂದು ಮುಂದು ನೋಡದೆ ಹೇಳಿದ್ದಾರೆ. ಕುಟುಂಬ ವ್ಯವಸ್ಥೆ ಹೇಗಿರಬೇಕು ? ಸಾಮಾಜಿಕ ಜೀವನ ಹೇಗಿರಬೇಕು ? ರಾಜ್ಯಸೂತ್ರ ಹಿಡಿದ ರಾಜಕೀಯ ಜನಗಳು ಹೇಗಿರಬೇಕು ? ಗುರು, ಶಿಷ್ಯ, ಆಚಾರ್ಯ, ಜಂಗಮರು ಹೇಗಿರಬೇಕು ? ಎಂಬುದನ್ನು ಮನನೀಯವಾಗುವಂತೆ ಬೋಧಿಸಿದ್ದಾರೆ —

ಆಡು ಕಾಯುವವನ ಬುದ್ಧಿ ಅರಸಗಿದ್ದರೆ । ರೂಢಿಗಳೆಲ್ಲ ಕೆಡುವವೆ ? ಇವರು । ಕೋಡಗಗಿಂತ ಕನಿಷ್ಠ ॥

ಕರುವ ಕಾಯುವವನ ಬುದ್ಧಿ । ಗುರು ಹಿರಿಯರಿಗಿದ್ದರೆ । ಧಾರುಣಿಯೆಲ್ಲ ಕೆಡುವುದೆ ? ಇವರು ನರಿಗಳಿಗಿಂತ ಕನಿಷ್ಠ ॥

ಅರವಟಿಕೆಯಿಕ್ಕಿಸಿ, ಕೆರೆಭಾವಿ ಕಟ್ಟಿಸಿ । ಕರುವಿಗೆ ತಾಯಿ ಮೊಲಿಯೇರಡು ಉಣಬಿಟ್ಟರೆ । ಕರೆವಾ ಮಳೆಯೇನು ಕಡಿಮೆಯಯ್ಯಾ ?

ರಾಜನು ಕರ್ತವ್ಯಚ್ಯುತನಾದರೆ, ಪ್ರಜೆ ಜಾಡನಂತೆ ಸಹನತೆಯನ್ನು, ಬುದ್ಧಿವಂತಿಕೆಯನ್ನು ಕಳೆದುಕೊಂಡರೆ, ಗುರುಹಿರಿಯರಿಗೆ ಚಿಕ್ಕವರ ಬುದ್ಧಿ ಕೂಡ ಇರದಿದ್ದರೆ ಆ ನಾಡು ಹಾಳಾಗಿ ಹೋಗುವದೆಂದು ಹೇಳುತ್ತಾರೆ.

ನಾಯಕನಾದ ಮೇಲೆ ನ್ಯಾಯದಲ್ಲಿರಬೇಕು । ಘಾಯಕತನ ಬಿಡಬೇಕು. ಕೊಂದವರ ಕೊಲೆಯುಂಟು ನೊಂದವರ ನೋವುಂಟು । ತಂದೆ ತಾಯಿಗಳ ಹರಕೆ ಉಂಟು ಇವು ಮೂರು ಎಂದೆಂದಿಗೂ ಬೆನ್ನುಬಿಡವಯ್ಯಾ.

ಹೀಗೆ ಸಮಾಜ, ರಾಜಕೀಯ ವಿಷಯಗಳ ಬಗೆಗೂ ವಚನಗಳನ್ನು ನುಡಿದು ಕ್ರಾಂತಿಕಾರಕ ವಿಚಾರಗಳನ್ನು ಮುಂಡಿಸಿದ್ದಾರೆ. ಸ್ವಾಮಿಗಳು ಪ್ರಪಂಚದ ಎಲ್ಲಾ ವಿಷಯಗಳಲ್ಲಿ ಮಾನವನ ನೀತಿ ನಡತೆಗಳನ್ನು ತಿದ್ದುವುದಕ್ಕೆ ಕಟುವಾಗಿ ಟೀಕಿಸಿ ಹೇಳಿದ್ದಕ್ಕೆ "ಇವನೇನು ಮಹಾ" ಎಂದು ಅನುಮಾನ ಪಡುವ ಜನಗಳನ್ನುದ್ದೇಶಿಸಿ **ಇಚ್ಛೆಯಿಚ್ಛೆಗೆ ಮಾತಾಡುವ ಹುಚ್ಚನಾ ಮಾತಲ್ಲ । ನಿಶ್ಚಿಂತದಿಂದ ನಿಜದಿಂದ ಅಲ್ಲಮರಾಯನ ಮುಚ್ಚವರೆಕಲ್ಲು ಹಿಡಿದುಕೊಂಡು ಬಂದೀನಿ । ಮೇಲು ದಾರಿಗಳ ತೋರಿದರೆ । ಮೆಚ್ಚಿ ನಿಮ್ಮ ಪಾದಕ್ಕೆ ಎರಗುವೆನು ॥** ಎನ್ನುತಾರೆ.

ಮೌನೇಶ್ವರ ಸ್ವಾಮಿಗಳು ತಮ್ಮ ಸಮಕಾಲೀನ ವಿಜಾಪುರದ ಆದಿಲಶಹರನ್ನೂ, ನಾಡಿನ ಅನೇಕ ರಾಜ ಮಹಾರಾಜರನ್ನೂ ತಮ್ಮ ಪ್ರಭಾವ ದಡಿಗೆ ಸೆಳೆದು ಕೊಂಡಂತೆ ಕಂಡುಬರುತ್ತದೆ. ಧಾರವಾಡ ಜಿಲ್ಲೆಯ ಮರವಿ, ರಾಯಚೂರ ಜಿಲ್ಲೆಯ ಸುರಪುರ ತಾಲೂಕಿನ ತಿಂಥಿಣಿ ಗ್ರಾಮಗಳ ಹತ್ತಿರ ಮಸೀದಿಯಾಕಾರದ ಭವ್ಯವಾದ ಶ್ರೀ ಮೌನೇಶ್ವರ ಸ್ವಾಮಿಯ ದೇವಾಲಯಗಳೇ ಈ ಮಾತಿಗೆ ಸಾಕ್ಷಿಯಾಗಿವೆ. ಆ ಕಾಲದಲ್ಲಿ ಹಿಂದು-ಮುಸ್ಲಿಂ ಜನಗಳಲ್ಲಿ ವೈಮನಸ್ಸು ಹೆಚ್ಚಾಗಿ ದೇಶದಲ್ಲಿ ಸಾಮಾಜಿಕ ಪರಿಸ್ಥಿತಿ ತೀರ ಹದ ಗೆಟ್ಟಿತ್ತು. ಉತ್ತರ ಭಾರತದ ಪಂಜಾಬದ ಗುರು ನಾನಕರಂತೆ ಮೌನೇಶ್ವರ

ಸ್ವಾಮಿಗಳೂ ಹಿಂದೂ-ಮುಸ್ಲಿಮರ ಐಕ್ಯಕ್ಕಾಗಿ ತುಂಬ ಹೋರಾಡಿದ್ದಾರೆ. ಈ ಹೊತ್ತಿಗೂ ತಿಂಥಿಣಿಯ ಶ್ರೀ ಮೌನೇಶ್ವರ ದೇವಸ್ಥಾನದ ಎದುರು ಪಾಲಕಿ ಹೊತ್ತು ಹೆಜ್ಜೆಯಾಡುವ ಪದ್ಧತಿ ಇರುತ್ತದೆ. ಅಲ್ಲದೆ, ಇಂದಿಗೂ ಈ ದೇವಸ್ಥಾನದಲ್ಲಿ ಶ್ರೀ ಮೌನೇಶ್ವರ ಸ್ವಾಮಿಗಳ ಸಮಾಧಿಯ ಮೇಲಿನ ಕೋಣೆಯೊಂದರಲ್ಲಿ 'ಬಡೇಮಿಯಾ' ಎಂಬ ಮುಸಲ್ಮಾನ ಸ್ನೇಹಿತನ ಗೋರಿ ಇರುತ್ತದೆ. ಇಂಥ ಅನೇಕ ಕುರುಹು ಮತ್ತು ವಚನಗಳನ್ನು ನಾವು ವೀಕ್ಷಿಸಿದಾಗ ಶ್ರೀ ಮೌನೇಶ್ವರ ಸ್ವಾಮಿಗಳು ಆಧ್ಯಾತ್ಮಿಕ, ಸಾಮಾಜಿಕ, ನೈತಿಕ ಕ್ರಾಂತಿಯನ್ನು ಎಸಗಿ, ಜನಗಳಲ್ಲಿ ಒಗ್ಗಟ್ಟು, ಶಾಂತಿ, ಸಮಾಧಾನಗಳನ್ನು ಮೂಡಿಸಿ ವ್ಯವಸ್ಥಿತ ಸಮಾಜವನ್ನು ನಿರ್ಮಾಣ ಮಾಡಲು ಹೋರಾಡಿದ ಅವತಾರ ಪುರುಷರು ಎಂಬ ಭಾವನೆ ದೃಢವಾಗುತ್ತದೆ. ★

ಬಹು ಹುಷಾರ್

ಭಕ್ತ ಗಣಂಗಳಿಗೆ, ಯುಕ್ತ ಗಣಂಗಳಿಗೆ, ಮುಕ್ತ ಗಣಂಗಳಿಗೆ ಬಹು ಹುಷಾರ್ ॥ ನಾ ಹೆಚ್ಚು ನೀ ಹೆಚ್ಚು ಎಂದು ನುಡಿಯಲಿ ಬೇಡಿ. ಹೆಚ್ಚಿನಾ ರುದ್ರರು ಬಂದು ನಿಮ್ಮ ದೇಹವ ಹೆಚ್ಚಿ ಹೋಳನೆ ಮಾಡಿ ಕಿಚ್ಚನಿಕ್ಯಾರು, ಭಕ್ತರಾದವರು ಬಹು ಹುಷಾರ್. ಎಲ್ಲಾ ಬಲ್ಲನೆಂದು ಬಲ್ಲತನವ ನುಡಿಯಲಿ ಬೇಡ. ಹಲ್ಲುಗಳ ಮುರಿಯಲಿಕ್ಕೆ ಅಲ್ಲಮಪ್ರಭು ಬಂದಾನು, ಖುಲ್ಲ ಮಾನವರಿಗೆ ತಿಳಿಯದು ಭಕ್ತರಾದವರು ಬಹು ಹುಷಾರ್. ಎಚ್ಚರವ ಹೇಳಲಿಕ್ಕೆ, ಅಚ್ಯುತನು ಬಂದಾನೆ, ಕಿಚ್ಚುಗಣ್ಣಿನವನ ಕೂಡ ಮತ್ಸರದ ನುಡಿಸಲ್ಲದು. ನಿಮ್ಮ ಹುಚ್ಚು ಶಾಸ್ತ್ರವ ಬಿಟ್ಟು ನಂಬಿರೋ ಭಕ್ತರಾದವರು, ಬಹು ಹುಷಾರ್. ಪತ್ರಾರ್ರಿಗೆ ಪಟ್ಟವಾಗುವದೇ ಖರಿಯಾ ದಿಟ್ಟರಾದವರು ಘಟ್ಟಿಯಾಗಿ ನೆಲೆಗೊಳ್ಳಿ. ಬಿಟ್ಟು ಆಡಿದರೆ ಕೆಟ್ಟು ಹೋದೀರಿ, ನೀವು ಸೃಷ್ಟಿಗೆ ಕಾರಣಕರ್ತರಹುದೆಂದು ಘಟ್ಟಿಯಾಗಿ ನಂಬಿರೋ ಭಕ್ತರಾದವರು ಬಹು ಹುಷಾರ್. ಮೌನನಾ ವಚನವು ಚಾನದಾ ಹದನದಂತೆ, ನಾನು ನೀನೆಂಬುವ ಗರ್ವವ ಬಿಟ್ಟು, ಜ್ಞಾನವುಳ್ಳವರು ಬೇಕಾದವರು ಬೆರಕೊಳ್ಳಿರಿ ಸಾಕಾದವರು ಸರಕೊಳ್ಳಿರಿ, ಏಕಮತವಿದ್ದರೆ ತಿಳಿಕೊಳ್ಳಿರಿ, ಈ ಲೋಕದಂತಾದರೆ ಕೊರಕೊಳ್ಳಿರಿ, ಭಕ್ತರಾದವರು ಬಹು ಹುಷಾರ್, ಬಹು ಹುಷಾರ್ ॥

—**ಮೌನೇಶ್ವರರು**

ಕೆ. ಪಿ. ಸ್ವಾಮಿ, ಎಂ.ಎ., ಡಿ.ಎಂ.ಇ.,

೨

ಪವಾಡಪುರುಷ ಸಿದ್ದಪ್ಪಾಜಿ

ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಧಾರ್ಮಿಕವೃತ್ತಿ ಗಾಯಕರಾದ ನೀಲಗಾರರು ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. 'ನೀಲಗಾರ' ಎಂಬುದು 'ಲೀಲೆಗಾರ' ಎಂಬ ಶಬ್ದದಿಂದ ಬಂದಂತಿದೆ. ತಮ್ಮ ಗುರುವಿನ ಲೀಲೆಯನ್ನು ಮೆರೆಸುವುದರಿಂದ ಲೀಲೆಗಾರರಾಗಿರಬಹುದು. ಇವರನ್ನು ಮಂಟೇಸ್ವಾಮಿ, ಮಂಟೇದಯ್ಯ, ಮಂಟೇದೇವರು ಎಂದೂ ಕರೆಯುತ್ತಾರೆ. ಇವರ ಧರ್ಮಗುರು ಮಂಟೇಲಿಂಗಯ್ಯನವರ 'ಮುಖ್ಯದಳವಾಯಿ' ಸಿದ್ದಪ್ಪಾಜಿ ನೀಲಗಾರ ಪರಂಪರೆಯ ಮೂಲಪುರುಷ. ನೀಲಗಾರರು ಹಾಡುವ ಕಾವ್ಯಗಳಲ್ಲಿ ಆ ಮಹಾಮಹಿಮನನ್ನು ನೆನೆದು ಸ್ತುತಿಸುತ್ತಾರೆ; ಅವನು ಮೈದುಂಬುವಂತೆ ಕೋರುತ್ತಾರೆ—'ಸಿದ್ಧ ಸಿದ್ಧರಿಗೆಲ್ಲಾ ಅತಿ ಮುದ್ದು ಘನನೀಲಿ ಸಿದ್ಧಯ್ಯ ಸ್ವಾಮಿ ಬನ್ನೀ ಮಃಪಾಡಗೆದ್ದಯ್ಯ ನೀವೆ ಬನ್ನಿ. ಜಾರದ ಮಃವಾಡ ಕ್ಷೈಲ್ಲಿ ಬಂದು ಒದಗೋ ಘನನೀಲಿ ಸಿದ್ಧಯ್ಯ ಶಿವನೇ ಬನ್ನಿ'. ಸಿದ್ದಪ್ಪಾಜಿಯ ಘನಲೀಲೆಯನ್ನು ಪ್ರಸಾರ ಮಾಡುವುದೇ ನೀಲಗಾರರ ಮುಖ್ಯ ಗುರಿ ಎಂಬಂತೆ ಅನನ್ಯ ಶ್ರದ್ಧೆಯಿಂದ ಕಾವ್ಯವನ್ನು ಹಾಡುತ್ತಾರೆ.

ನಿಡುಘಟ್ಟ ಸಂಸ್ಥಾನದ ಅರಸ ಮುದ್ದೋಜ. ಆತನ ಪತ್ನಿ ಲಿಂಗಮ್ಮತಾಯಿ. 'ಜಾತಿಯಲಿ ಲಿಂಗವಂತ ಪಂಚಾಳದವರು'. ಅವರಿಗೆ ಆರುಮಂದಿ ಗಂಡುಮಕ್ಕಳು. ಅವರಲ್ಲಿ ಕೊನೆಯವ ಕೆಂಪಣ್ಣಾಚಾರ್ಯ. ಕೆಂಪಣ್ಣ ಹುಟ್ಟಿದ

ಮೇಲೆ ಅವರಿಗೆ 'ಹರಿಬಿಯ ಹಣವಂತೆ. ಮೊರದ ಬಂಗಾರವಂತೆ. ಹಟ್ಟಿಗೆ ಬಿಗಿಸಿರುವುದು ಅಪರಂಜಿ ಕೆತ್ತನೆಕಲ್ಲು. ಎತ್ತು ಎಮ್ಮೆ ಕಟ್ಟೋದು ಬೆಳ್ಳಿಗೂಟ. ಅರಮನೆಯ ಮೇಲೆ ಚಿನ್ನದ ಹೊಂಗಳಸ.'

ಕೆಂಪಣ್ಣನಿಗೆ ಏಳು ವರ್ಷವಾಯಿತು. ಪ್ರಭುದೇವರು (ಇವರನ್ನೇ ಧರೆಗೆ ದೊಡ್ಡೋರು, ಮಂಟೇಸ್ವಾಮಿ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ) ತಪೋಭೂಮಿಯನ್ನು ಅರಸುತ್ತಾ ಬರುತ್ತಾರೆ. ಕಲ್ಯಾಣಪಟ್ಟಣದಲ್ಲಿ ಬಸವಣ್ಣ-ನೀಲಮ್ಮನವರ 'ದೃಢ' ವನ್ನು ಪರೀಕ್ಷಿಸಿ ಕಪಟ ಜಂಗಮರಿಗೆ ಶಾಪ ನೀಡಿ ರಾಚಪ್ಪಾಜಿ, ಫಲಾಹಾರದಯ್ಯ, ಚೆನ್ನಾಮ್ಮಾಜಿ ಮುಂತಾದ ಶಿಷ್ಯರೊಂದಿಗೆ ಬರುತ್ತಿದ್ದಾಗ, ಕಲ್ಯಾಣ ಪಟ್ಟಣದ ಕೊನೆಯ ಬಾಗಿಲ ಬಳಿ 'ಬಾಚಿ ಕಾಯಕದ ಬಸವಯ್ಯ ಕಾದುಕೊಂಡು ಕೂತೇ ಇದ್ದ. ಈರಭದ್ರನ ಹಲಗೇಯ ಗೇಯುತ ಬಂದವನೆ. ಗುಡುಗುಡನೆ ಓಡಿ ಒಂದು ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟು ನಿಮಗೆ ಶಿಶುಮಗ ಆಯ್ತೀನಿ ಸ್ವಾಮಿ' ಅಂತ ಕೇಳಿಕೊಂಡ. ಧರೆಗ ದೊಡ್ಡ ವರು ಜ್ಞಾನ ದೃಷ್ಟಿಯಲ್ಲಿ ಅವಲೋಕಿಸಿ 'ಮುಂದಿನ ಜನ್ಮದಲ್ಲಿ ನಿನ್ನ ಶಿಷ್ಯನ ನ್ನಾಗಿ ಪಡೆಯುತ್ತೇನೆ. ಇನ್ನೂ ನಿನ್ನ ಕರ್ಮ ಸವೆದಿಲ್ಲ' ಎಂದು ಮುದ್ದೋಜನ ಮಡದಿ ಲಿಂಗಮ್ಮ ತಾಯಿಯ ಗರ್ಭದಲ್ಲಿ ಬಾಚಿ ಬಸವಣ್ಣನವರಿಗೆ ಸ್ಥಾನಮಾಡಿ ಕೊಟ್ಟರು. ಏಳು ವರ್ಷಕ್ಕೆ ಬರುವುದಾಗಿ ಹೇಳಿದ್ದರು. ಈಗ ಧರೆಗೆ ದೊಡ್ಡ ವರು ಮುದ್ದೋಜನ ಅರಮನೆಗೆ ಬಂದರು. ಸಪ್ತಕೋಟಿ ಸೂರ್ಯಪ್ರಕಾಶದಿಂದ ಕಂಗೊಳಿಸುತ್ತಿದ್ದ ಅವರು ಭಿಕ್ಷೆ ಕೇಳುತ್ತಲೆ ಲಿಂಗಮ್ಮ ತಾಯಿ ನವರತ್ನ ತುಂಬಿ ಕೊಂಡು ಬಂದರು. "ನಿಮ್ಮ ಅರಮನ್ಯಾಗೆ ಇರುವ ಮುತ್ತು ರತ್ನ ನನ್ನ ಪಾತ್ರ ಮುಗ್ಗಲ ಜೋಳವನ್ನು. ನಿನ್ನ ಧೀರಮರಿ ಕೆಂಪಣ್ಣ ಪ್ರೀತಿಯಾದಂತ ಬಂದಿ ದ್ದೀನಿ. ನಿನ್ನ ಮಗನಲ್ಲದೆ ನನ್ನ ಮಗನ ಮಾಡಿಕೊಟ್ಟುಬಿಡು; ಈಗಿನ ಸಿರಿ ಸಂಪತ್ತಿನ ಮೇಲೆ ಎರಡರಷ್ಟು ಭಾಗ್ಯವ ಕೊಡತೀನಿ" ಎಂದರು ಮಂಟೇದೇವರು. ಕೆಂಪಣ್ಣ ಹುಟ್ಟಿದ ಮೇಲೆ ಭಾಗ್ಯಲಕ್ಷ್ಮಿ ಒಲಿದಿದ್ದಳು. ಈ ಭಾಗ್ಯವಂತ ಮಗನನ್ನು ದಾನ ಕೊಡಲು ಯಾರು ಒಪ್ಪುತ್ತಾರೆ? "ಭಿಕ್ಷೆಗೆ ಬಂದವನ ಸೊಕ್ಕಿನ ಮಾತು ಇದು!" ಎಂದು ಕತ್ತು ಹಿಡಿದು ಹೊರಕ್ಕೆ ದಬ್ಬಿಸಿದ ಮುದ್ದೋಜ. ಕೆಂಪಣ್ಣ ಊರ ಮುಂದೆ ಅರಳಿಮರದ ನೆರಳಲ್ಲಿ ಕುಲುಮೆ ಕೆಲಸದ ಉಸ್ತುವಾರಿ

ನೋಡಿಕೊಳ್ಳುತ್ತಿದ್ದ. ಅಲ್ಲಿ 'ಭಂಗಿ ಫಲಾರ'ಕ್ಕಾಗಿ ಬೆಂಕಿಕೆಂಡ ಬೇಡಿದರು ಪ್ರಭುದೇವರು. ಸೊಕ್ಕಿನ ಕೆಂಪಣ್ಣ ದಪ್ಪಕೆಂಡವನ್ನು ಇಕ್ಕಳದಲ್ಲಿ ಹಿಡಿದು 'ಹಿಡಿಯೋ ಪರದೇಶಿ ನಿನ್ನ ಎರಡು ಕೈಯ' ಎಂದು ಸ್ವಾಮಿಯ ಅಂಗೈಯಲ್ಲಿ ಬೆಂಕಿ ಕೆಂಡ ಇರಿಸಿದ. ಮೂರು ಘಳಿಗೆಕಾಲ ಕೆಂಡವನ್ನು ಅಂಗೈಯಲ್ಲಿರಿಸಿ ಕೊಂಡಿದ್ದು ನಂತರ ಅದನ್ನು ಜೋಳಿಗೆಗೆ ಸೇರಿಸಿ "ಈಗಲಾರ ನಮ್ಮ ಸತ್ಯ ನೋಡಿದಿರಾ ?....ನಮ್ಮ ಶಿಷ್ಯ ಆದೀರಾ ಕೆಂಪಣ್ಣಾ ?...."ಎಂದು ಕೇಳಿದರು. "ನಿನ್ನ ಇಕ್ಕಳದಲ್ಲಿ ಹಿಡಿದು ರಾವುಗೋಲಲ್ಲಿ ಜನಿವಾರದ ಬರೆ ಬರೆಯುತೀನಿ. ಕುಲುಮೆ ಬಿಟ್ಟು ಆಚೆಗೆ ಹೋಗು" ಎಂದ ಕೆಂಪಣ್ಣ !

ಕೆಂಪಣ್ಣನನ್ನು ಶಿಷ್ಯನನ್ನಾಗಿ ಪಡೆಯಲೇ ಬೇಕಲ್ಲ. ಮುಂಟೇದೇವರು ಮಾರಳ್ಳಿ ಕುಂಡುಮಾರಿ ನಿಡುಘಟ್ಟಕ್ಕೆ ಹೋಗುವಂತೆ ಮಾಡಿದರು. 'ಚಿನ್ನದ ಅರಮನೆ ಮಣ್ಣಾಯಿತು. ಏಳು ಮಂದಿ ಅಣ್ಣತಮ್ಮಂದಿರು ಪ್ರಾಣತೆತ್ತರು.' ಬಾಲಕೆಂಪಣ್ಣ ಹುಚ್ಚನಾದ. ಆಗ ಧರೆಗೆ ದೊಡ್ಡೋರು ಬಂದು ಕಾಳಿಕಾ ದೇವಾಲಯದಲ್ಲಿ ಪವಡಿಸಿದರು. ಕೆಂಪಣ್ಣ ಅದೃಶ್ಯನಾದ. ಮಾತು ಕೇಳಿಸಿ ದರೂ, ಸ್ಪರ್ಶಕ್ಕೆ ಸಿಲುಕಿದರೂ ಕಣ್ಣಿಗೆ ಕಾಣಲೊಲ್ಲ. ಮುದ್ದೋಜ ತನ್ನ ತಪ್ಪನ್ನು ಅರಿತು ಕಾಳಿಕಾದೇವಾಲಯದಲ್ಲಿ ಪವಡಿಸಿದ್ದ ಮುಂಟೇದೇವರ ಬಳಿ ಬಂದು ಪಾದ ಹಿಡಿದ. 'ಪುತ್ರ ಭಿಕ್ಷೆ ನೀಡಿ ಪ್ರಭು' ಎಂದು ಯಾಚಿಸಿದ. 'ನನ್ನ ಶಿಷ್ಯನನ್ನು ಕೊಡಿ. ಕಳೆದಿರುವುದೆಲ್ಲಾ ನಿಮಗೆ ಸಿಗುತ್ತದೆ'-- ಇದು ಪ್ರಭು ದೇವರ ಮಾತು. ಬೇರೆ ಮಾರ್ಗ ಕಾಣದೆ ಒಪ್ಪಿದರು. ಕೆಂಪಣ್ಣ ದೃಶ್ಯನಾದ. ಹುಚ್ಚು ಇಳಿದಂತೆ ಕಾಣುತ್ತಿರಲಿಲ್ಲ. ಆತನನ್ನು ಗುರುವಿಗೆ ಅರ್ಪಿಸಿದರು ಹೆತ್ತ ವರು. 'ನಮ್ಮ ದೊಡ್ಡೋರು ಮುಂದುಗಡೆ ಕೆಂಪಣ್ಣ ಹಿಂದುಗಡೆ' ಹೀಗೆ ನಿಡುಘಟ್ಟದಿಂದ ಹೊರಟರು. ಕೆಂಪಣ್ಣ ಗುರುವಿನ ಮೇಲೆ ಕಲ್ಲೆಸೆಯುತ್ತಾನೆ. 'ಅವರಿಗಿಟ್ಟಕಲ್ಲು ಮಲ್ಲಿಗೆ ಹೂ ಆಯಿತಂತೆ'. ಆದರೂ ಕೆಂಪಣ್ಣ ತನ್ನ ಕೆಲಸ ಬಿಡಲಿಲ್ಲ. ಪ್ರಭುದೇವರು ಕೆಂಪಣ್ಣನ ಬಿಡಲಿಲ್ಲ. ಕುಂದೂರು ಬೆಟ್ಟದ ಬಳಿಗೆ ಬಂದರು. "ನಿನ್ನ ಶಿಷ್ಯನ್ನ ಮಾಡ್ಕೊಳ್ಳೋಕೆ ಬಹಳ ಶ್ರಮ ಪಟ್ಟೆನಲ್ಲೊ ಮಗ. ಈಗಲಾದರೂ ನನ್ನ ಶಿಷ್ಯ ಆದೀಯಾ?" ಎಂದು ಕೇಳಿದರು.

ಕೆಂಪಣ್ಣನಿಗೆ ಕುತೂಹಲ "ಆಪ್ರೆ ಏನು ಕೊಡುತೀರಿ?" ಎಂದು ಕೇಳಿದ.

“ಹರಕು ಜೋಳ್ಗಿ ಮುರುಕು ಬೆತ್ತ ಕೊಡ್ತೀನಿ. ಅದು ತಕ್ಕೊಂಡು ಆರುಮನೆ ಕ್ವಾರಣ್ಯಕ್ಕೆ (ಭಿಕ್ಷೆಗೆ) ಹೋಗಬೇಕು. ಮೂರು ಮನೆಯಲಿ ಹೋಗು ಅನ್ನಬೇಕು. ಮತ್ತೆ ಮೂರು ಮನೆಯಲ್ಲಿ ಕೊಟ್ಟ ಭಿಕ್ಷೆ ಜೋಳಿಗೆ ತುಂಬಿ ಭೂಮಿಗೆ ಸುರಿದ್ಹೋಗಬೇಕು....”

“ಆಗ಼್್ಲೊ ನಿಮ್ಮ ಸ್ತೋತ್ರ ಮಾಡಿದರೆ ಏನು ಕೊಡ್ತೀರಿ?”

“ಮಳವಳ್ಳಿಯಿಂದ ಹನ್ನೆರಡು ಮಾರುದ್ದ ನೂಲಗ್ಗ ತರಿಸಿ ನಿನ್ನ ಕೈಕಾಲು ಕಟ್ತೀನಿ. ಏಳು ಅಂತಸ್ತಿನ ಕಾಳಿಂಗನ ಗವಿಗೆ ಎತ್ತಿಹಾಕ್ತೀನಿ”

“ಆಗ್ಲೊ ನಿಮ್ಮ ಸ್ತೋತ್ರ ಮಾಡಿದರೆ....”

“ ಏಳು ಅಂತಸ್ತಿನ ಪಾತಾಳ ಗವಿಯಲಿ ಎಡೆಬಿಡದೆ ನನ್ನ ಸ್ತೋತ್ರ ಮಾಡಿದರೆ ನನ್ನ ಸಮ ಮಾಡ್ತೀನಿ ಹೆಚ್ಚಿನ ಕೆಂಪಣ್ಣನವರೇ”

“ಅಂದ್ರೆ ದೊರೆ ಮಾಡ್ತೀರ ಅಥವ ನಿಮ್ಮಂಗೆ ನನ್ನೂವೆ ತಿರಕನನ್ನಾಗಿ ಮಾಡ್ತೀರಾ?”

ಕೆಂಪಣ್ಣಾಚಾರಿಯ ಹಮ್ಮು ಬಿರಿದಿಲ್ಲವೆಂದು ಅರಿತ ಧರ್ಮಗುರು ಪ್ರಭುದೇವರು ಮುಂಗೈ ಹಿಡಿದು ಕಾಳಿಂಗನ ಗವಿ ಹತ್ತಿರಕ್ಕೆ ಬಂದರು. ಅಲ್ಲಿ ಏಳುಮಂದಿ ಸಿದ್ಧರು ಕುಳಿತಿದ್ದರು. “ನಮ್ಮ ಸಿದ್ಧರಿಗೂ ಜಾಗ ಕೊಡಿ” ಎಂದು ಕೇಳಿದಾಗ, “ನಾವು ಕುಳಿತು ಸವಾರಿ ಮಾಡುವ ಏಳೆಜ್ಜೆ ಹುಲಿಯ ಮೇಲೆ ಕುಂದೂರು ಬೆಟ್ಟ ಏಳು ಸುತ್ತುಸುತ್ತಬೇಕು” ಎಂದು ಸವಾಲು ಹಾಕಿದರು. “ಹುಲಿಯನ್ನು ಕರೆಸಿ” ಎಂದು ಅದು ಬರುತ್ತಲೇ ಪ್ರಭುದೇವರು ‘ನಾಗಬೆತ್ತ ಹರಿಸಿ ಅದರ ಮುಂಡೆ ಮೇಲೆ ಮಡಗುತಾರೆ. ಹೇಳೆಜ್ಜೆ ಕರಿಬರಗ ಸುಮ್ಮಕಾರ ನಿಂತುಕಂತು. ಅದಕೆ ಕಾರಚಂದನಾರ ಹಿಡಿದು ಕಡುವಾಣ ಮಾಡುತಾರೆ. ಅವರ ಕಾವಿ ಬಟ್ಟೆ ಅದಕೆ ಕವದೀನಾರ ಮಾಡುತ್ತಾರೆ. ಬಾಲಕೆಂಪಣ್ಣನ್ನ ಎತ್ತಿ ಅದರ ಮ್ಯಾಲ ಕುಂಡಿಸುತಾರೆ. ದೃಢವುಳ್ಳ ಕೆಂಪಣ್ಣನವರಿಗೆ ಬಾಲನೀಲಿ ಕೊಟ್ಟಾರಂತೆ. ಉರಸಂಗಿ ಕೊರಡ ಅವನ ಬಲಗೈಗೆ ಕೊಟ್ಟರಂತೆ. ಹುಚ್ಚು ಬೆಪ್ಪಿನ ಗ್ಯಾನದಲ್ಲಿ ಹುಲಿಗೆ ಮೂರು ಎಳೆತ ಎಳೆದ ಕೆಂಪಣ್ಣ’. ಅವರು ಏಳು ಎನ್ನುವಷ್ಟರಲ್ಲಿ ಅದು ಹದಿನಾರು ಬಾರಿ ಕುಂದೂರು ಬೆಟ್ಟವನ್ನು ಸುತ್ತಿ

ಬಂದಿತು. ಏಸು ಋಷಿಗಳು ಗವಿಬಿಟ್ಟು ಹೋದರು. ಕೆಂಪಣ್ಣನ ಕತ್ತಿನ ಮೇಲೆ ಮೂರುಗುದ್ದಿ ಆ ಪಾತಾಳಗವಿಗೆ ತಳ್ಳಿಬಿಟ್ರು. 'ನಿನಗೆ ಗವಿ ತುಂಬಾ ಬಿರುದುಗಳಾಗಲಪ್ಪ' ಎಂದು ಆಶೀರ್ವಾದ ಮಾಡಿ ಉತ್ತರ ದಿಕ್ಕಿಗೆ ನಮನ ಬಿಟ್ಟು ನೋಡಿದರು. ಹಡುಗುಂಡೊಂದು ಬಂದು ಆ ಕಾಳಿಂಗನ ಗವಿಯ ಬಾಗಿಲಿಗೆ ಬಿತ್ತು. ಮಂಟೇದೇವರು ಬೊಪ್ಪಣಪುರಕ್ಕೆ ನಡೆದರು.

ಹನ್ನೆರಡು ವರ್ಷಗಳು ಸಂದವು. ನಮ್ಮ ಶಿಷ್ಯನನ್ನು ಕರೆತನ್ನಿ ಎಂದು ರಾಚಪ್ಪಾಜಿ ಮತ್ತು ದೊಡ್ಡಮ್ಮ ತಾಯಿಗಳನ್ನು ಕಳುಹಿಸಿದರು. ಅವರು ಕಾಳಿಂಗ ಗವಿಯ ಬಳಿ ನಿಂತು ನೋಡಿದರು. ಬರಿಕಾಡು. ಒಳಗೆ ಹೋಗಲು ಸಾಧ್ಯವಿಲ್ಲದಂತಹ ದಟ್ಟವಾದ ಪೊದೆಗಳು. ನಾಲ್ಕಾರು ಬಾರಿ ಕರೆದರು. ಅದಕ್ಕೆ ಪ್ರತಿಯಾಗಿ ಭೂಮಿಯೇ ನಡುಗಿದಂತಹ ಸದ್ದು. ಹೆದರಿಕೊಂಡು ಅವರು ಧರೆಗೆ ದೊಡ್ಡವರಲ್ಲಿ ಬಂದು ಬಿನ್ನವಿಸಿಕೊಂಡರು. 'ನನ್ನ ಶಿಷ್ಯನನ್ನ ಕರ ಕೊಂಡು ಬರ್ಲೋಕೆ ನಿಮ್ಮ ಶಕ್ತಿ ಸಾಲಲಿಲ್ಲ. ಇನ್ನು ಆರು ಘಳಿಗೆ ಮೂರು ಜಾವಕ್ಕೆ ಅವರೇ ಬರುತಾರೆ ಕಾಣಿರೋ' ಎಂದು ಹೇಳಿ ತಮ್ಮ ಶಿಷ್ಯನಿಗೆ ತಿಳಿ ವನ್ನು ಪ್ರಸಾದಿಸಿದರು.

ಕಾಳಿಂಗನ ಗವಿಯಿಂದ ಕೆಂಪಣ್ಣಾಚಾರಿ ಎಚ್ಚರಗೊಂಡು ಹೊರಬಂದ. ಸುತ್ತಲಿನ ಕಾಡು, ಹಕ್ಕಿಗಳನ್ನು ಕಂಡ. ಧರೆಗೆ ದೊಡ್ಡೋರ ಪಾದಕ್ಕೆ ಮೊದಲ ಶಿಷ್ಯನಾದ ತಾನು ಅವರಿಗೆ ಗುರುಕಾಣಿಕೆ ಕೊಂಡು ಹೋಗಬೇಕೆಂದು 'ಕುಂದೂರು ಬೆಟ್ಟದಲಿ ಇರುವಂಥ ಹಾವು-ಚೇಳು, ಕರಿಯಕಬ್ಬಿನ ಜಲ್ಲೆ-ಬಿಳಿಯ ಕಬ್ಬಿನ ಜಲ್ಲೆ, ನೂರೊಂದು ಹಾವನ್ನೆಲ್ಲ ಹಿಡಕಂಡು ಕಟ್ಟಿನ ಹಾವಿನ ಒಳಗೆ ಪುಟ್ಟ ಹೊರೆಯ ಕಟ್ಕೊಂಡು ನೆತ್ತಿಮೇಲೆ ಹೊತ್ತು' ನಡಿಗೆಯಲಿ ಹೊರಟ.

ಅಪೂರ್ವ ಶಿಷ್ಯನನ್ನು ಸ್ವಾಗತಿಸಲು ಧರೆಗೆ ದೊಡ್ಡವರೇ ಬಂದರು ಬೊಪ್ಪಣಪುರದ ಹೆಬ್ಬಾಗಿಲಿಗೆ ಬರುತ್ತಲೇ ಮಲ್ಲಿಗೆ ಮಹಾದೇವಿ ಆರತಿ ಬೆಳಗಿ ದಳು. ಚೆನ್ನಾಜಮ್ಮ, ರಾಜಪ್ಪಾಜಿ, ದೊಡ್ಡತಾಯಿ ಪಂಚದೀವಟಿಗೆಗಳನ್ನು ಹಿಡಿದು ಸ್ವಾಗತಿಸಿದರು. ಮಡಿವಾಳ ಮಾಚಯ್ಯ ಕರಿ ಕಂಬಳಿ ಗದ್ದುಗೆ ತಯಾರು ಮಾಡಿದ. ಧರೆಗೆ ದೊಡ್ಡವರು ಕರಿಯ ಕಂಬಳಿಯ ಮೇಲೆ ಶಿಷ್ಯ

ನನ್ನ ಕುಳ್ಳಿರಿಸಿ "ನಮ್ಮ ಶಿಷ್ಯನಾದೆ. ಈಗ ಹೋಗಿ ಸ್ನಾನ ಮಾಡಿಬಾ" ಎಂದರು. ಹತ್ತು ಆಳುದ್ದದ ಗಂಗೆಯಲ್ಲಿ ಜಡೆ ಮೈ ಶುಭ್ರ ಪಡಿಸಿಕೊಂಡು ಸ್ವಾಮಿ ಪಾದಕ್ಕೆ ಬಂದರು. ದೀಕ್ಷೆ ನೀಡಿ ಉಪದೇಶ ಕೊಟ್ಟು ಕೊರಳಿಗೆ 'ಲಾಂಛನ' ಕಟ್ಟುತ್ತಾರೆ. ಧರ್ಮಗುರುವಾದ ಶಿಷ್ಯನಿಗೆ ನೂರೊಂದು ಬಿರುದು ಕೊಡುತ್ತಾರೆ. "ನಿಮ್ಮ ತಾಯಿ-ತಂದೆ ಧೀರಮರಿ ಕೆಂಪಣ್ಣ ಅಂತ ಕರೆದಿದ್ದರು. ಇವತ್ತಿಗೆ ಆ ಹೆಸರು ಹೋಯ್ತು. ನಾವು ಘನನೀಲಿ ಸಿದ್ಧಯ್ಯ ಅಂತ ನಾಮ ಕರಣ ಮಾಡಿದ್ದೀವಿ" ಎಂದರು—'ಸಿದ್ಧಯ್ಯ ಸ್ವಾಮಿ ಬನ್ನಿ, ಪವಾಡ ಗೆದ್ದಯ್ಯ ಸ್ವಾಮಿ ನೀವೇ ಬನ್ನಿ, ಘನನೀಲಿ ಸಿದ್ಧಯ್ಯ ಬನ್ನಿ' ಎಂದು ನೆರೆದವ ರೆಲ್ಲಾ ನೂರೊಂದು ಬಿರುದುಗಳನ್ನು ಸ್ತುತಿಸಿದರು. ಕೆಂಪಣ್ಣಾಚಾರಿಯು **ಸಿದ್ದಪ್ಪಾಜಿ**ಯಾಗಿ ಗುರುಪಟ್ಟವನ್ನೇರಿದ.

'ಒಕ್ಕಳಗಂಟೆ ಹುಲ್ಲೇ ಚರ್ಮ, ಹಕ್ಕಿಯ ಗೂಡು ಹಕ್ಕಿಯ ಪಾಜಿ, ಬಾರಿ ಕಂಡಾಯವಂತೆ, ಬಟುವಿನ ಕಿರೀಟವಂತೆ, ಮುಕ್ಕಣ್ಣ ಕುಲಾವಿಯಂತೆ, ರುದ್ರಾಕ್ಷಿ ಕಿರೀಟವಂತೆ, ಬೆನ್ನ ಮೇಲೆ ಹೊದ್ದರಂತೆ ಹುಲಿಚರ್ಮ, ಪಾದಕ್ಕೆ ಮುಳ್ಳಾವಿಗೆ ಪವಾಡ, ಗಂಡಗತ್ತಿ ಪವಾಡ, ಬೆನ್ನಮೇಲೆ ತ್ರಿಶೂಲ, ರುದ್ರಾಕ್ಷಿ-ಭದ್ರಾಕ್ಷಿ ಸರಗಳು, ತೋಳಲ್ಲಿ ಐದು ರುದ್ರಾಕ್ಷಿ, ಉರಸಂಗಿ ಕೊರಡು ಬಲಗೈಗೆ, ಎಡೆಗೈಯಲ್ಲಿ ಜಾಗಟೆ, ಬಲದಗೈಯಲ್ಲಿ ಡಮರುಗ, ನೂರೊಂದು ಕಿರುಜಡೆ'– ಈ ಸ್ವರೂಪದ ಧರ್ಮಗುರು ಸಿದ್ದಪ್ಪಾಜಿಯವರು ಮದ್ದಾನೆಯ ಹಾಗೆ ತೂಗಿ ಬಾಗುತ್ತಾ ಸ್ವಾಮಿಯ ಪಾದಕ್ಕೆರಗುತ್ತಾರೆ.

ತೃಪ್ತರಾದ ಮಂಟೇ ಸ್ವಾಮಿಗಳು "ಏಳೇಳು ಲೋಕವನ್ನ ಆಳಿ ಬಾಳಿ ಬಂದೋ. ಬರುವಾಗ ಬೇಕಾದಷ್ಟು ಶಿಷ್ಯಮಕ್ಕಳ ಮಾಡಿಕೊಂಡು ಬಂದೋ. ಅಲ್ಲೆಲ್ಲೂ ಇಂಥ ಶಿಶುಮಗ ನಮಗೆ ದೊರೆಯಲಿಲ್ಲ. ಗುರು ಪಾದಕ್ಕೆ ಒಪ್ಪಿದ ಶಿಷ್ಯ ನೀ ಒಬ್ಬನೆಯೋ ....ಪೂಜೇ ದೇವರು ನಾವು ಕಣೋ, ಪೆರೆಯೋ ದೇವರು ನೀವು ಕಾಣೋ. ಕೂತು ಪಟ್ಟ ನಮ್ಮದು, ದಳವಾಯಿ ಪಟ್ಟ ನಿಮ್ಮ ದಯ್ಯ... ಚಂಡಿಗೇ ನೀ ಗಂಡ, ಚಾಮುಂಡಿಗೆ ಬಲದವನೇ. ಎಲ್ಲಮ್ಮ ಏಕ ನಾತಿಗೆ ನೀ ಮೊದಲ ಗಂಡ ಪ್ರಾಯಕಾಂತ, ಯಾರಾದರೂ ನಿಮ್ಮ ಮಾತು

ಮೀರಿದರೆ ಉರಸಂಗಿ ಕೊರಡಲ್ಲಿ ಒಂದೊಂದು ಎಳೆತ ಎಳಿಯುರಯ್ಯ.... " ಎಂದು ಅಪ್ಪಣೆ ಕೊಡಿಸಿ ಸಿದ್ದಪ್ಪಾಜಿಯುವರನ್ನು ಧರ್ಮಗುರುಗಳನ್ನಾಗಿ ಮಾಡುತ್ತಾರೆ. ಪಂಚ ದೀವಟಿಗೆಗಳ ಬೆಳಕಿನಲ್ಲಿ ಮೆರವಣಿಗೆ ನಡೆಸುತ್ತಾ ಸ್ವಾಮಿಯನ್ನು ಬೊಪ್ಪಣಪುರಕ್ಕೆ ಕರ್ರ್ಕೊತಂದರು.

ಕಾಲ ಸಾಗಿತು. ಧರೆಗೆ ದೊಡ್ಡವರು ಜೀವ ಸಮಾಧಿ ಪಡೆಯಬೇಕೆಂದು ಬಯಸಿ "ಹಲಗೂರು ಪಂಚಾಳಗೇರಿಗೆ ಹೋಗಿ ಒಂಬತ್ತು ಲಗ ತಂದು ಕೊಡಿ. ಚಿನ್ನದ ತೊಟ್ಟಿಲು ಬೆಳ್ಳಿಲಾಕೆ ನಾಲ್ಕು ಕಡೆ, ಒಳಗೆ ಚಿನ್ನದ ದೀವಿಗೆ, ಚಿನ್ನದ ಸರಪಣಿ. ಒಂಟಿ ನಿಶಾನಿ ಒಂಟಿ ಡಂಗುರ ಮಾಡಿಸಿಕೊಂಡು ಕಬ್ಬಿಣದ ಭಿಕ್ಷೆ ಪಡಕೊಂಡು ಶೀಘ್ರದಲ್ಲಿ ಬರಬೇಕು ಸಿದ್ದಪ್ಪನವರೇ" ಎಂದರು.

ಹಲಗೂರು ಹೆಸರು ಕೇಳುತ್ತಲೇ ಸಿದ್ದಪ್ಪಾಜಿಯವರ ಎದೆ ನಡುಗಿತು. "ಎತ್ತು ಕಾಲು ತುಳಿದರೆ ಎತ್ತಿನ ಕಾಲು ತುಳೀತಾರೆ. ಕಲ್ಲು ಬಗ್ಗಿಸಬಹುದು ದೊಡ್ಡ ಮರ ಬಗ್ಗಿಸಬಹುದು. ಹಲಗೂರ ಪಂಚಾಳರ ಬಗ್ಗಸಾಕಾಗ್ದು. ಅವರು ದೇವರ ಕಂಡವರಲ್ಲ; ಗುರುವ ಅರಿತವರಲ್ಲ. ಹಟ್ಟಿ ಒಳಗಲ ಕರೆಯುವ ಎಮ್ಮೆ ಕೊಟ್ಟು ಹಮ್ಮನ್ನು ಇಸಿಕೊಂಡು ಬಂದವರು ಪಂಚಾಳರು. ಬಹಳ ಹಮ್ಮಿನ ಜನ. ನಮ್ಮ ಬಿರುದು ಭಿಕ್ಷ ಕಂಡು ನಗುತಾರೆ. ಪಂಚಾಳಗೇರಿಗೆ ಹೋಗಿ ನಾನು ಕಬ್ಬಿಣದ ಭಿಕ್ಷೆ ಪಂಚಾಳದ ದಣಿಗಳನ್ನು ಕೇಳಿಬಿಟ್ಟರೆ ಬರೆ ಹಾಕುತಾರೆ. ದೊಡ್ಡ ದೊಡ್ಡ ಪವಾಡಗಳೇ ತಂದು ಮಡಗುತಾರೆ. ಅವರ ಅಗ್ಗಣಿಗೆ ನನಗೆ ಕೊಡಬೇಡಿ ಹೆತ್ತಯ್ಯ ಮಂಟೇಸ್ವಾಮಿ".

"ನೀ ಹೆದರಬೇಡ ಕಂದ, ಹೋಗಿಬಾರೋ ಹಗಲೂರಿಗೆ. ನಿಂದಕನ ನಿರುಬಯಲ ಮಾಡುತೀನಿ. ಆಗದವನಿಗೆ ಅಂಬಿನ ಸರಳು. ಮೀರಿದವನಿಗೆ ಮಿಂಡುಗುದಲಿ, ಗಂಟಲಗಾಣ, ಎದೆಗೆ ಶೂಲ ಆಗುತೀನಿ ಹೋಗಯ್ಯ."

ಗುರುವಿನ ಅಪ್ಪಣೆಯಂತೆ ಹಲಗೂರಿಗೆ ಹೊರಟರು ಸಿದ್ದಪ್ಪಾಜಿ. ಗುರುವಾಗಲಿ, ದೇವನಾಗಲಿ ಭಕ್ತನಿಂದ ಪಡೆಯದೆ ಏನೂ ಕೊಡುವುದಿಲ್ಲವಂತೆ. ಪಡೆದ ನಂತರ ಅದರ ಸಾವಿರಪಟ್ಟು ಅನುಗ್ರಹಿಸುತ್ತಾನಂತೆ. ಅದೇ ರೀತಿಯ ಪರೀಕ್ಷೆಯೋ ಇದು ಎನಿಸಿತು ಸಿದ್ದಪ್ಪಾಜಿಗೆ. ಹಲಗೂರತ್ತ ಪ್ರಯಾಣ ಬೆಳೆಸಿದರು.

ಹಲಗೂರು, ಚಿಲ್ಲಾಪುರಗಳು ಶ್ರೀಮಂತ ನಗರಗಳು. ಸುಭದ್ರ ಕೋಟೆಗಳಿಂದ ರಕ್ಷಿತವಾಗಿದ್ದವು. ವಿಶ್ವಬ್ರಾಹ್ಮಣರ ಆಳ್ವಿಕೆಯ ಈ ಪ್ರದೇಶವು ಕೈಗಾರಿಕಾ ಕೇಂದ್ರವಾಗಿ ಲಕ್ಷ್ಮಿಯ ತೌರಾಗಿತ್ತು. ಸರ್ವ ಸುಖಗಳ ಆಗರವಾಗಿತ್ತು. ಅಲ್ಲಿಯ ಏಳು ಪ್ರಮುಖರು ಕಾಳೋಜ, ದಿಂಬೋಜ, ಬೇಟೋಜ, ವರದೋಜ, ನಿಂಗೋಜ, ಹೊನ್ನೋಜ ಮತ್ತು ನರಸೋಜ. ಏಳು ಮಂದಿಗೂ ಏಳು ಅರಮನೆಗಳು. ಸಂಪದ್ಭರಿತವಾದ ಹಲಗೂರು ನಾಡಿನ ಕೇಂದ್ರ ಬಿಂದುವಾಗಿ ಕಂಗೊಳಿಸುತ್ತಿತ್ತು. ಏಳುನೂರೈವತ್ತು ಶಿಲ್ಪಿಕುಟುಂಬಗಳಿದ್ದವು ಅಲ್ಲಿ.

ಸಿದ್ದಪ್ಪಾಜಿ ಗುರುವಿನ ಅಜ್ಞೆಯ ಪ್ರಕಾರ ಶುಕ್ರವಾರ ಮಟ ಮಟ ಮಧ್ಯಾಹ್ನ ಪಹರೆಯವರಿಗೆ ಮಾಯಾನಿದ್ರೆಕೊಟ್ಟು ಸಪ್ತಮಾತೃಕೆಯರೊಂದಿಗೆ ಹಲಗೂರನ್ನು ಪ್ರವೇಶಿಸಿದರು. "ದಾನವ ಕೊಟ್ಟವರಿಗೆ ಕಣಜ ಹೊನ್ನಾಗಲಿ, ಭಿಕ್ಷವ ಕೊಟ್ಟವರಿಗೆ ಲಕ್ಷ ಭಾಗ್ಯವಾಗಲಿ" ಎಂದು ಹರಸುತ್ತಾ 'ಭಿಕ್ಷೆ' ಕೇಳಿದರು. ಹಲಗೂರಿನವರು ಈ ಮಾತು ಕಿವಿಗೆ ಹಾಕಿಕೊಳ್ಳಲೇ ಇಲ್ಲ. 'ನೀಟಿದ ಕಾಲು ತೆಗೆಯಲೂ ಇಲ್ಲ. ಹಾಸ್ಯಮಾಡ್ತಿದ್ರು. ಜಿರುಮುಗಳನ್ನು ಅಳ್ಳಿ ಕಡ್ಡಿ ಟಿಂದ್ರು' ಕೊನೆಗೆ ಒಬ್ಬ ಮುದುಕ "ಪರದೇಶೀ, ಯಾವೂರೋ ? ಕಾಡು ಬಿಟ್ಟು ಈ ನಾಡಿಗ್ಯಾಕೆ ಬಂದೆ ?" ಎಂದು ಕೇಳಿದ.

ಸಿದ್ದಪ್ಪಾಜಿ ತಮ್ಮ ಗುರುವಿನ ಬಗ್ಗೆ, ತಾವು ಬಂದ ವಿಷಯದ ಬಗ್ಗೆ ವಿವರಿಸಿ "ಒಂದೊಂದು ಕುಲುಮೆಗೆ ಒಂದೇ ದುಡ್ಡಿನ ತೂಕ ಎತ್ತಿಕೊಂಡರೂ ಗುರುವಿಗೆ ಅವಶ್ಯಕವಾದ ಪರಿಕಗಳು ಸಿದ್ಧವಾಗಬಲ್ಲದು" ಎಂದು ಹೇಳುತ್ತಾರೆ. ಭಿಕ್ಷೆ ಕೊಡಲು ಅರಸರ [ಎಂದರೆ ಊರಿನ ಪ್ರಮುಖರು] ಅಪ್ಪಣೆ ಕೊಡಬೇಕೆಂದರು. ಅವರನ್ನು ಕಾಣುವುದು ಸುಲಭ ಸಾಧ್ಯವಿಲ್ಲ ಎಂಬುದೂ ಅವರೇ ವಿವರಿಸಿದರು: "ರಾಜರ ಅರಮನೆ ಸುತ್ತ ಮಾಲದ್ಯಾರು ಚೀಕುದಾರ್ರು ಬೆರಳಿ ಬರೆಯ ಗೊಲ್ಲರವರಿ ಬಿಚ್ಚುಗತ್ತಿ ಪಾರವದೆ ಏಳು ಸುತ್ತಿನ ಪಾರ ಕಾಡದೆ ಪರದೇಶಯ್ಯ!" ಅವರಲ್ಲೊಬ್ಬ ಅರಸರು ತಮ್ಮ ಏಳನೂರೈವತ್ತು ಒಕ್ಕಲ ಕರೆದು ಸಂಬಳ ಬಟವಾಡೆ ಮಾಡುವ ಸ್ಥಳದಲ್ಲಿ ಅವರನ್ನು ಕಾಣುವುದು ಕ್ಷೇಮವೆಂದೂ ಸೂಚಿಸಿದ. ಸಿದ್ದಪ್ಪಾಜಿ ಅದಕ್ಕೆ ಒಪ್ಪಿ ಕಾದು ನಿಂತರು.

ಸಂದಿ ಪಜಾರದಲ್ಲಿ ರತ್ನಗಂಬಳಿ ಮೇಲೆ ಚಿನ್ನದ ಕುರ್ಚಿಗಳಲ್ಲಿ ಏಳು ಮಂದಿ ಪಟೇಲರು ಕುಳಿತಿದ್ದು ಅಲ್ಲಿಯ ಕುಲುಮೆಗಳಲ್ಲಿ ಕೆಲಸ ಮಾಡುತ್ತಿದ್ದ ಏಳುನೂರ್ಯೆಪತ್ತು ಪಂಚಾಳ ಶಿಲ್ಪಿಗಳಿಗೆ ಸಂಬಳ ಪಟ್ಟಿ ಮಾಡುತ್ತಾ ಇದ್ದರು. ಆಗ ಸಿದ್ದಪ್ಪಾಜಿಯವರು "ದಾನವ ಕೊಡಿರಯ್ಯ ಹಲಗೂರ ಪಂಚಾಳದವರೇ. ನಮಗೆ ಭಿಕ್ಷವ ಕೊಡಿರಯ್ಯ ಲಕ್ಷಾಧಿಪತಿಗಳೇ" ಎಂದರು.

ಕಾಳಿಕಾದೇವಿ, ವೀರಭದ್ರ ಮತ್ತು ಬಸವರಿಂದ ರಕ್ಷಿಸಲ್ಪಡುತ್ತಿರುವ ಈ ನಗರಕ್ಕೆ ಈ ಪರದೇಶಿ ಪ್ರವೇಶಿಸಿದ್ದು ಹೇಗೆ ಎಂದು ಆಶ್ಚರ್ಯದಿಂದ ಅವನನ್ನೇ ನೋಡಿ "ಯಾವ ಗವಿಯಿಂದ ಬಂದೆ ಪರದೇಶಿ ?" ಎಂದು ಕೇಳಿದರು.

"ಭೂಮಿಗೆ ದೊಡ್ಡವರು ಪಾತಾಳ ಭಾವಿ ತೆಗೆಸಲು ಸೂಕ್ತ ಸಲಕರಣೆಗಳನ್ನು ಕೇಳಿದ್ದಾರೆ. ಆದ್ದರಿಂದ ಕಬ್ಬಿಣದ ಭಿಕ್ಷೆ ನೀವು ಕೊಟ್ಟರೆ ಈಗ ಬದುಕುತ್ತಿರುವ ಸಿರಿಸಂಪತ್ತಿನ ಮೇಲೆ ಇನ್ನಷ್ಟು ಭಾಗ್ಯಕೊಡುತ್ತೇನೆ" ಎಂದರು ಸಿದ್ದಪ್ಪಾಜಿಯವರು.

"ಏಲೋ ಪರದೇಶಿ, ಕಾಡಲ್ಲಿ ಬಿದ್ದಿದ್ದರೆ ಕರಿಕಲ್ಲು ಅಂಜೋರು. ಅದನ್ನ ನನ್ನ ಅಡ್ಡಗಲ್ಲು ಮ್ಯಾಲೆ ಮಡಗಿಕೊಂಡು, ಕಾಲಲ್ಲಿ ಮೆಟ್ಟಿಕೊಂಡು, ಉಳಿಯಿಂದ ವಿಗ್ರಹವನ್ನು ಕಂಡರಿಸಿ ಈ ಭೂಮಿಯ ಜನರಿಗೆ ದೇವರನ್ನು ಕೊಡುತ್ತೇವೆ. ಈ ಲೋಕದ ದೇವರೆಲ್ಲಾ ನಮಗೆ ಮಕ್ಕಳು. ನಾವು ಮಾಡಿದ ದೇವರು, ಗುರು ನಮಗ್ಯಾಕೆ ? ನಾವ್ಯಾಕೆ ಶಿಷ್ಯರು ? ನೀನು ಕೆಂಪಣ್ಣಾಚಾರಿ ಅಲ್ವೇ ? ಇನ್ನು ನಿನಗೆ ಹೆಚ್ಚಿನ ಗುರು ಯಾರು? ನಮ್ಮ ಧರ್ಮ ಕೆಡಿಸಬ್ಯಾಡ. ಭಿಕ್ಷೆ ಮಾಡೋದು ನಮ್ಮ ಕಸಬಲ್ಲ. ನೀನು ನಮ್ಮವನೇ ಆದ್ರಿಂದ ನಿನಗೆ ಭಿಕ್ಷೆ ನಾವು ಹ್ಯಾಂಗೆ ಕೊಡೋದು ? ಅದನ್ನ ನೀನೇ ಗಳಿಸ್ಬೇಕು. ನಮ್ಮನ್ನ ಸಿಟ್ಟಿಗೇಳಿಸಬ್ಯಾಡ" ಎಂದರು.

ಪಹರೆಯವನಿಂದ ಸ್ವಾಮಿಯನ್ನು ಊರ ಹೊರಗಿನ ಕಾಳಿಕಾ ದೇವಾಲಯದಲ್ಲಿ ಬಂಧಿಸುವರು. ಅಲ್ಲಿಯೂ ಕಬ್ಬಿಣದ ಭಿಕ್ಷೆಯನ್ನೇ ಬೇಡುತ್ತಿರಲು ಸಿಟ್ಟಿಗೆದ್ದ ಪಹರೆಯವರು ಸ್ವಾಮಿಯ ಕಾಲನ್ನು ತಿರುಚಿದರು. ದೇವಾಲಯವೇ ತಿರುಗಿತು. ಈ ಆಶ್ಚರ್ಯದ ಸುದ್ದಿ ಊರಿನಲ್ಲೆಲ್ಲಾ ಹರಡಿತು. "ಮಾಯಾ-

ಮಂತ್ರಗಳಿಗೆ ಹೆದರುವ ಜನ ನಾವಲ್ಲ. ನಮ್ಮನ್ನು ಶಕ್ತಿನಿಂದ ಮೋಸಗೊಳಿಸುವುದು ಸಾಧ್ಯವಿಲ್ಲ. ನಾವು ಹೇಳಿದಂತೆ ನಡೆದು ಕಬ್ಬಿಣವನ್ನು ಗೆಲ್ಲಬಹುದು" ಎಂದು ಹಮ್ಮಿನಿಂದ ನುಡಿಯುತ್ತಾರೆ. ಅವರೊಡ್ಡಿದ ಸಮಸ್ಯೆಗಳನೆಲ್ಲಾ ಲೀಲಾಜಾಲವಾಗಿ ಪರಿಹರಿಸುತ್ತಾರೆ. ಕಾದ ಉಕ್ಕಿನ ಉಂಡೆಗಳನ್ನು ಅವಲು ಮಾಡಿ ಸೇವಿಸಿ ಜಲಪಾನ ಮಾಡುತ್ತಾರೆ. ಕರಗಿದ ಕಬ್ಬಿಣದ ರಸವನ್ನು ಅಂಗೈಯಲ್ಲಿ ಹಿಡಿಯುತ್ತಾರೆ. ನಾಲಿಗೆ ಇಲ್ಲದ ಏಳು ಭಾರಿ ಗಂಟೆಗಳನ್ನು ಆಧಾರವಿಲ್ಲದೆಯೆ ನಿಲ್ಲಿಸಿ ಸಪ್ತಸ್ವರಗಳು ಹೊಮ್ಮುವಂತೆ ಮಾಡುತ್ತಾರೆ. ಏಳು ಆಳು ಪ್ರಮಾಣದ ಗುಳಿಯಲ್ಲಿ ಏಳು ಕಂಡಗ ಕೆಂಡ, ಏಳು ಕಂಡಗ ಮೆಣಸಿನ ಕಾಯಿ ತುಂಬಿದ್ದು ಅದರಲ್ಲಿ ಏಳು ದಿನಗಳಕಾಲ ಇರುತ್ತಾರೆ. ಆಗ ಮೇಲೆ ಕಲ್ಲು ಚಪ್ಪಡಿ ಮುಚ್ಚಿ ಅದರ ಮೇಲೆ ದೊಡ್ಡ ಒಲೆಯನ್ನು ಹಾಕಲಾಗಿತ್ತು. ಈ ಗುಳಿಯಿಂದ ಏಳನೆಯ ದಿನ ಮುಗಿಸಿಕೊಂಡು ಎದ್ದು ಬಂದು ಸಿದ್ದಪ್ಪಾಜಿ ಕಬ್ಬಿಣದ ಭಿಕ್ಷೆಗಾಗಿ ಬೇಡಿದರು! ಸೊಕ್ಕಿಗೆ ತುತ್ತಾಗಿದ್ದ ವಿಶ್ವಬ್ರಾಹ್ಮಣ ಶಿಲ್ಪಿಗಳು ಈ ಲೀಲಾ ಮೂರ್ತಿಯನ್ನು ಠಕ್ಕುಗಾರನೆಂದೇ ಭಾವಿಸಿದ್ದರು. ಕಬ್ಬಿಣ ಕೊಟ್ಟರೆ ತಮ್ಮ ಸಂಪತ್ತನ್ನೆಲ್ಲಾ ಲೂಟಿ ಮಾಡುತ್ತಾನೆ ಎಂದೇ ಹೆದರಿದ್ದರು. ಕಾದ ಕೊಪ್ಪರಿಗೆಯೊಳಕ್ಕೆ ತಳ್ಳಿ ಮೇಲೊಂದು ಕೊಪ್ಪರಿಗೆ ಮುಚ್ಚಿ ಮತ್ತಷ್ಟು ಕಾಯಿಸಿದರು. ಕೆಂಪಾದ ಕೊಪ್ಪರಿಗೆಗಳ ಬಿಸಿ ತಾಳಲಾರದೆ ಜನ ದೂರ ಸರಿಯುತ್ತಿದ್ದರೆ ಸಿದ್ದಪ್ಪಾಜಿ ನಗುತ್ತಾ ಹೊರಬಂದು "ದೂರ ಹೋಗದಿರಿ ಮಕ್ಕಳೇ" ಎಂದು ಬಳಿಗೆ ಕರೆದರು.

ಧಣಿಗಳು ಕತ್ತಿಯ ಅಲುಗಿನಿಂದ ಜೋಡಿಸಲ್ಪಟ್ಟಿದ್ದ ಉಕ್ಕಿನ ಕುದುರೆಯನ್ನೇರಿ ಏಳು ಸಾರಿ ನಮ್ಮ ರಾಜ ಬಿದಿಗಳನ್ನು ಸುತ್ತಿ ಸನ್ನಿಧಾನಕ್ಕೆ ಬಾ ಎಂದು ಕುದುರೆಯ ಮೇಲೆ ಕೂಡಿಸಿದರು. 'ಇಷ್ಟೆಲ್ಲಾ ಪರೀಕ್ಷೆಗಳಾದರೂ ತನ್ನ ಬಂಧುಗಳಿಗೆ ಬುದ್ಧಿ ಬರಲಿಲ್ಲವಲ್ಲ!' ಎಂದು ಖತಿಗೊಂಡು ಗುರುವನ್ನು ನೆನೆಯಲು ಉಕ್ಕಿನ ಕುದುರೆಯೇ ಶ್ವೇತಾಶ್ವವಾಗಿ ರಾಜ ಬೀದಿಗಳಲ್ಲಿ ಏಳು ಬಾರಿಸುತ್ತಿ ಬಂದು ಅಲ್ಲಿ ನಿಲ್ಲುತ್ತದೆ.

ಹೀಗೆ ಏಳನೂರ ಎಪ್ಪತ್ತು ಪವಾಡಗಳನ್ನು ಮಾಡಿ ತೋರಿದರು ಸ್ವಾಮಿಗಳು. ಆದರೂ ಪಂಚಾಳರ ಕಣ್ತೆರೆಯಲಿಲ್ಲ. "ಅಹಂಕಾರದ ಮೊಟ್ಟೆಗಳಾಗಿ

ನಿಜಗುರುವನ್ನೇ ಮರೆತಿರುವಿರಿ. ದೈವವನ್ನು ವಿಸ್ಮರಿಸಿದ್ದೀರಿ. ಗುರುವನ್ನು ನೆನೆದು ಕಬ್ಬಿಣದ ದಾನ ಕೊಟ್ಟು ಅನುಗ್ರಹವನ್ನು ಗಳಿಸಿ" ಎಂದು ಹೇಳಿದರು ಸಿದ್ದಪ್ಪಾಜಿಯವರು.

"ಗುರು-ದೈವ ನಾವೇ ಆಗಿರುವಾಗ ನೆನೆಯುವುದು ಯಾರನ್ನು ? ಯಾತಕ್ಕಾಗಿ ಅವರ ಸ್ಮರಣೆ ?.... ....ಕೊನೆಯದಾಗಿ ಒಂದು ಪಂಥ. ಈ ಪಂಥ ಗೆಲ್ಲೋ ಪರದೇಶಿ ನೋಡೋಣ" ಎಂದು ಅವರು ಸವಾಲು ಹಾಕಿದರು ಇಷ್ಟೆಲ್ಲಾ ಆದನಂತರ !

ದೊಡ್ಡ ಕಬ್ಬಿಣದ ಗಟ್ಟಿಯನ್ನು ಏಳನೂರೈವತ್ತು ಕುಲುಮೆಗಳವರು ಹನ್ನೆರಡುದಿನ ಕಾಯಿಸುತ್ತಾರೆ. ಅವರ ಶಾಖಕ್ಕೆ ಹಕ್ಕಿಗಳೂ ಕೂಡ ಆಕಾಶದಲ್ಲಿ ತಮ್ಮ ಹಾರಾಟ ನಿಲ್ಲಿಸುತ್ತವೆ. ಅದುವರೆವಿಗೂ ಕಾಳಿಕಾ ದೇವಾಲಯದಲ್ಲಿ ಬಂಧಿಸಿದ್ದ ಸಿದ್ದಪ್ಪಾಜಿಯವರನ್ನು ಎಳೆತಂದು "ಈ ಕಾದ ಗಟ್ಟಿಯ ಮೇಲೆ ಕುಳಿತುಕೋ, ಇಲ್ಲದಿದ್ದರೆ ನಿನ್ನ ಬಿರುದು ಬಾವಲಿಗಳನ್ನೆಲ್ಲಾ ನಮಗೆ ಒಪ್ಪಿಸು" ಎಂದು ಮೂದಲಿಸುತ್ತಾರೆ.

ಧೀರರಾಗಿ ಧರೆಗೆ ದೊಡ್ಡವರನ್ನು ನೆನೆದು, ನವಿಲುಗರಿಯಿಂದ ಗಟ್ಟಿಯನ್ನು ಸ್ವಚ್ಛಗೊಳಿಸಿ ಗಟ್ಟಿಯ ಮೇಲೆ ಹತ್ತಿದರು. ರುದ್ರ ಭೀಕರ ಡಮರುಗ ಬಾರಿಸುತ್ತಾ ತಾಂಡವ ನರ್ತನ ಮಾಡುತ್ತಾರೆ. ಹಲಗೂರಿನ ಪಂಚಾಳರೆಲ್ಲರು ಸ್ವಾಮಿಯ ಶರಣಾಗುತ್ತಾರೆ. ಸಿದ್ದಪ್ಪಾಜಿಯವರು ಕಾದ ಗಟ್ಟಿಯಿಂದ ಕೆಳಕ್ಕಿಳಿದು ಅದರ ಮೇಲೆ ನಾಗ ಬೆತ್ತವನ್ನು ಇಡಲು ಅದು ಕರಗಿ ನೀರಾಗಿ ಹಲಗೂರ ಬೀದಿಗಳಲ್ಲಿ ಹರಿಯಿತು. ಆದರೂ ತನ್ನ ಕುಲಜರು ಕಬ್ಬಿಣದ ಭಿಕ್ಷೆ ಕೊಡಲು ಮುಂದಾಗಲಿಲ್ಲ. ಇವೆಲ್ಲವನ್ನೂ ತಮ್ಮ ದಿವ್ಯ ದೃಷ್ಟಿಯಿಂದ ಅವಲೋಕಿಸುತ್ತಿದ್ದ ಧರೆಗೆ ದೊಡ್ಡವರು "ಹಲಗೂರು ಹಾಳಾಗಲಿ ಎನ್ನುತ್ತಾರೆ. ಹಲಗೂರು ಸ್ಮಶಾನವಾಯಿತು. ಪಂಚಾಳರ ವೈಭವ ಕರಗಿ ಆವಿಯಾಯಿತು.

ಆಗ ಕಣ್ತೆರೆದು ಪಂಚಾಳರು ಸ್ವಾಮಿಯ ಪ್ರಥಮ ಒಕ್ಕಲಾದರು. ಧರೆಗೆ ದೊಡ್ಡವರ ನಿಜ ಸಮಾಧಿಯ ನಂತರ ಸಿದ್ದಪ್ಪಾಜಿ ಅವರು ಚಿಕ್ಕಲ್ಲೂರಲ್ಲಿ (ಕೊಳ್ಳೇಗಾಲದ ಭೀಮೇಶ್ವರಿ ಘಟ್ಟದ ನಿಸರ್ಗದ ಚೆಲುವಿನ ತಪ್ಪಲು) ಮಠ

ಸ್ಥಾಪಿಸಿ, ಎಲ್ಲಾ ಮತಗಳವರಲ್ಲೂ ನೀಲಗಾರರನ್ನು ಪಡೆದು, ಶೈವ-ವೈಷ್ಣವಗಳ ಭೇದವನ್ನು ಅಳಿಸಿ, ಐಕ್ಯತೆಯನ್ನು ಮೂಡಿಸಿ ಜನರಲ್ಲಿ ಆಧ್ಯಾತ್ಮ ಭಾವವನ್ನು ಬೆಳೆಯಿಸಿ ಅವರು ತಮ್ಮ ಜೀವನದ ಗುರಿಯನ್ನು ಮುಟ್ಟುವುದರಲ್ಲಿ ನೆರವಾದರು.

ಸಿದ್ದಪ್ಪಾಜಿಯವರ ಮಠ, ಅವರು ಹಲಗೂರಿನಲ್ಲಿ ಕಾದ ಗಟ್ಟಿಯ ಪವಾಡ ನಡೆಸಿದರೆನ್ನಲಾಗುವ ಸ್ಥಳದಲ್ಲಿ ಕುರುಹುಗಳು ಈಗಲೂ ಇದ್ದು, ಪ್ರತಿ ವರ್ಷವೂ ಇಲ್ಲಿ ಜಾತ್ರೆ ನಡೆಯುತ್ತದೆ. ಲಕ್ಷಾಂತರ ಭಕ್ತರು ಆ ಸಮಯಕ್ಕೆ ಇಲ್ಲಿ ಸೇರುತ್ತಾರೆ; ಸ್ವಾಮಿಯ ಚರಿತ್ರೆಯನ್ನು ಮನ ತುಂಬಾ ಹಾಡುತ್ತಾರೆ. ಈ ಹಾಡುಗಳು ಕನ್ನಡ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಕಾವ್ಯಗಳು. ಸಿದ್ದಪ್ಪಾಜಿಯವರನ್ನು ಆರಾಧಿಸುವ ಭಕ್ತರು, ಅವರ ಆಶೀರ್ವಾದವನ್ನು ಬೇಡುವ ಶಿಷ್ಯರು ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ ಬಹುವಾಗಿ ಇರುವರು. ಆದರೆ ಸ್ವಾಮಿಗಳ ಜೀವನ ಸಾಧನೆಗಳ ಬಗ್ಗೆ ಐತಿಹಾಸಿಕ ದೃಕ್ಪಥವನ್ನಿರಿಸಿಕೊಂಡು ಅನ್ವೇಷಿಸಿ ಆಧಾರ ಭೂತವಾದ ಜೀವನ ಚರಿತ್ರೆಯನ್ನು ರಚಿಸಬೇಕಾದ ಆವಶ್ಯಕತೆ ಬಹುವಾಗಿದೆ. ★

ಧರ್ಮ—ಕಲೆ

ಅಮೃತಂ ಸಕಲೋ ಧರ್ಮಃ ಸಧರ್ಮಾ ಚಿನ್ಮಯೀ ಕಲಾ ।
ಧರ್ಮೇಣ ಕಲಯಾ ವಿದ್ವಾನ್ ಕಲಾ ಧರ್ಮೌ ಶಿವಾತ್ಮಕೌ ॥

— ದುರಿಶೇಟಿ ವೆಂಕಟರಾಮಾಚಾರ್ಯುಲು

ಕಲಾತ್ಮಕವಾದ ಧರ್ಮವು ಅಳಿವಿಲ್ಲದ್ದು. ಧರ್ಮದಿಂದ ಕೂಡಿದ ಕಲೆಯು ಜ್ಞಾನಸ್ವರೂಪಿ. ಧರ್ಮ ಕಲೆಗಳನ್ನು (ಬ್ರಹ್ಮ - ಕರ್ಮಗಳನ್ನು) ಪಡೆದಿರುವವನೇ ವಿದ್ವಾಂಸ. ಇವೆರಡರಲ್ಲೂ ಯಾವುದೊಂದನ್ನು ಬಿಟ್ಟರೂ ಆತ ಅಪಂಡಿತನೇ. ಕಲಾ - ಧರ್ಮಗಳೆರಡೂ ಪಾರ್ವತಿ - ಪರಮೇಶ್ವರರ (ಗಾಯತ್ರಿ ವಿಶ್ವಕರ್ಮರ) ರೂಪಗಳು.

೩

● ವ್ಹಿ. ಜಿ. ದೀಕ್ಷಿತ, ಎಂ.ಎ., ಎಂ.ಎಡ್.,
ಸಾಹಿತ್ಯ ರತ್ನ, ಡಿಪ್.ಇನ್.ಎಪಿ.,

ರಾಜಾ ಬಾಘುಸವಾರ ಚಾಂಗದೇವ

ಮಹಾರಾಷ್ಟ್ರದಲ್ಲಿ ಖಾನದೇಶ ಜಿಲ್ಲೆಯಲ್ಲಿ ಹಬ್ಬಿದ ಸಾತಪುಡಾ ಪರ್ವತಕ್ಕೆ ಹೊಂದಿ ಆದಿಲಾಬಾದ ಎಂಬ ಪ್ರಾಚೀನ ಪಟ್ಟಣವಿರುತ್ತದೆ. ತಾಪೀ ಮತ್ತು ಪೂರ್ಣನದಿಗಳ ಬಳಿಯಲ್ಲಿಯೇ ಸಂಗಮ ಗೊಳ್ಳುತ್ತದೆ. ಆ ಸ್ಥಳದಲ್ಲಿ ಪುರಾತನ ಕಾಲದಲ್ಲಿ ಸುಂದರಪುರವೆಂಬ ಪಟ್ಟಣವಿತ್ತು [ಈಗ ಆ ಸ್ಥಳದಲ್ಲಿರುವ ಗ್ರಾಮಕ್ಕೆ ಚಾಂಗದೇವ ಎಂಬ ಹೆಸರು ರೂಢಿಗೆ ಬಂದಿದೆ. ಅಲ್ಲಿ ಚಾಂಗದೇವರ ದೇವಾಲಯವೂ ಇದೆ]. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಮುಧೋಪಂತನೆಂಬ ಮಯ ಬ್ರಾಹ್ಮಣ (ಪಂಚಾಲ ಬ್ರಾಹ್ಮಣ)ನಿದ್ದನು. ಆತನು ಆ ಊರಿನ ಸ್ಥಾನಪತಿಯಾಗಿ ಸಕಲರಿಗೂ ಬೇಕಾದವನಾಗಿದ್ದನು. ಆತನ ಪತ್ನಿಯು ಸಕಲ ಸದ್ಗುಣಿಯೂ, ಪರೋಪಕಾರಿಯೂ, ಪತಿವ್ರತೆಯೂ ಆಗಿದ್ದಳು. ಈ ದಂಪತಿಗಳಿಗೆ ಬಹುದಿನಗಳಿಂದಲೂ ಮಕ್ಕಳಾಗಿರಲಿಲ್ಲ ಆದಕ್ಕಾಗಿ ಅನೇಕ ವ್ರತ-ತೀರ್ಥಯಾತ್ರೆಗಳನ್ನೂ ಮಾಡಿದ್ದರು.

ಒಂದು ದಿನ ಒಬ್ಬ ಮಹಾಯೋಗಿ ಭಿಕ್ಷಾಟನೆ ಮಾಡುತ್ತಾ ಇವರ ಮನೆಗೆ ಬಂದನು. ಮುಧೋಪಂತನು ಭಕ್ತಿಯಿಂದ ಪತ್ನೀಸಮೇತನಾಗಿ ಅವರನ್ನು ಉಪಚರಿಸಿದನು. ಸಂತುಷ್ಟನಾದ ಯತಿವರ್ಯನು "ನಿಮ್ಮ ಭಕ್ತಿಗೆ ಮೆಚ್ಚಿದ್ದೇನೆ. ನಿಮ್ಮ ಮನದಿಚ್ಛೆ ಅರಿತಿದ್ದೇನೆ. ನನ್ನಂತಹ ಮಗನನ್ನು ಪಡೆಯುವಿರಿ. ಚಿಂತಿಸದಿರಿ" ಎಂದು ಆಶೀರ್ವಾದ ಮಾಡಿದನು.

ಕೆಲವು ದಿನಗಳುರುಳಿದ ಮೇಲೆ ಆ ಬ್ರಾಹ್ಮಣಿಯು ಋಷಿಯ ವರ ಪ್ರಭಾವದಿಂದ ಗರ್ಭಿಣಿಯಾದಳು. ಬಳಗದವರಿಗೆಲ್ಲಾ ಮಿತಿಯಿಲ್ಲದಾನಂದ. ಒಂದು ಸಮುಹೂರ್ತದಲ್ಲಿ ಗಂಡು ಮಗುವು ಜನಿಸಿತು. ಮಗುವು ಮುದ್ದಾಗಿ ಬಹಳ ಸುಂದರವಾಗಿದ್ದುದರಿಂದ ಜನರು **ಚಾಂಗ ದೇವ** ಎಂದು ಕರೆದರು. ಆದರೆ ಮಧೋಪಂಡಿತನು (ಮಾಧವ ಪಂಡಿತ) ಹಾಗೂ ಆತನ ಪತ್ನಿ ಅಶ್ವತ್ಥ ನಾರಾಯಣನನ್ನು ಸ್ಮರಿಸಿ ವಟೇಶ್ವರನೆಂದು ಹೆಸರಿಟ್ಟರು. ರೂಢನಾಮವಾದ ಚಾಂಗದೇವನೆಂಬ ಹೆಸರಿನಿಂದಲೇ ಆತ ಜನಪ್ರಿಯನಾದ.

ಸಂಪ್ರದಾಯದಂತೆ ಎಂಟನೆಯ ವಯಸ್ಸಿಗೇ ಗಾಯತ್ರೀ ಮಂತ್ರೋಪ ದೇಶವಾಯಿತು. ಪಂಡಿತ ಮನೆತನದಲ್ಲಿ ಜನಿಸಿದ್ದರಿಂದ ಉದಾತ್ತ ಸಂಸ್ಕೃತಿಯ ಪ್ರಭಾವವು ಬಹುವಾಗಿತ್ತು. ಚುರುಕು ಬುದ್ಧಿಯಿಂದಲೂ, ರೂಪ-ಗುಣ ಗಳಿಂದಲೂ ಈ ವಟೇಶ್ವರನು ಅಸಮಾನ್ಯನೆನಿಸಿಕೊಂಡಿದ್ದನು. ತಂದೆಯ ಮನೆಯಲ್ಲಿಯೂ, ಗುರುವಿನ ಆಶ್ರಮದಲ್ಲಿಯೂ ಯೋಗ ಶಿಕ್ಷಣ ಪಡೆದ. ಸ್ವಲ್ಪ ಕಾಲದಲ್ಲಿಯೇ ಹಲವು ವಿದ್ಯೆಗಳಲ್ಲಿ ನಿಷ್ಣಾತನಾದನು. ಗುರು ಪ್ರೇರಿತ ನಾಗಿ ಚಾಂಗದೇವನಲ್ಲಿ ಯೋಗ ವಿದ್ಯೆಯನ್ನು ಕಲಿಯಬೇಕೆಂಬ ಲವಲವಿಕೆ ಹೆಚ್ಚಾಯಿತು. ಯೋಗ ಸಿದ್ಧಿ ಪಡೆಯಲು ಕಾಶೀನಗರದ ಸಮೀಪದ ಕಾಡಿ ನಲ್ಲಿದ್ದ ಗವಿಯನ್ನು ಹೊಕ್ಕು ಅಲ್ಲಿದ್ದ ಯೋಗಿರಾಜರ ಕಾಲಿಗೆ ಬಿದ್ದನು. ಆ ಯೋಗಿ ತಮ್ಮ ಯೋಗ ದೃಷ್ಟಿಯಿಂದ ಬಾಲಕನ ಭವಿಷ್ಯವನ್ನು ಕಂಡುಕೊಂಡು ಆನಂದದಿಂದ ಚಾಂಗದೇವನಿಗೆ ಅಷ್ಟಾಂಗ ಯೋಗ ಸಮಾಧಿಯನ್ನು ಉಪ ದೇಶಿಸಿದರು. ಏಳು ವರ್ಷಗಳ ಕಾಲ ಗುರುವಿನ ಸೇವೆ ಮಾಡಿಕೊಂಡು ಯೋಗ ಸಿದ್ಧಿಯನ್ನು ಸಾಧಿಸಿದ ಮೇಲೆ ಗವಿಯಿಂದ ಹೊರಕ್ಕೆ ಬಂದು ಕಾಶಿಯ ಮಣಿ ಕರ್ಣಿಕಾ ಘಾಟದ ಮೇಲೆ ವಾಸಿಸತೊಡಗಿದರು. ಸ್ವಲ್ಪ ಸಮಯದಲ್ಲಿಯೇ ಅವರ ಕೀರ್ತಿ ನಾಲ್ಕೂ ಕಡೆ ಹಬ್ಬಿತು. ಅಷ್ಟ ಸಿದ್ಧಿಗಳನ್ನೂ ವಶಪಡಿಸಿಕೊಂಡಿ ದ್ದರಿಂದ ಸಿದ್ಧಪುರುಷರೆಂದು ಪ್ರಖ್ಯಾತರಾದರು.

ಚಾಂಗದೇವರು ಕಾಶಿಯಿಂದ ಹೊರಟು ಅನೇಕ ಕ್ಷೇತ್ರಗಳನ್ನು ನೋಡುತ್ತಾ ತಮ್ಮ ಜನ್ಮ ಸ್ಥಳವಾದ ಸುಂದರಪುರಕ್ಕೆ ಬಂದು, ಅಲ್ಲಿ ಕೆಲವು

ದಿನಗಳ ತನಕ ಇದ್ದು ದಕ್ಷಿಣಕ್ಕೆ ಹೊರಟರು. ದಾರಿಯಲ್ಲಿ ಅಸಂಖ್ಯಾತ ಭಕ್ತ ರಿಗೆ ಉಪದೇಶಿಸುತ್ತಾ, ಆಶೀರ್ವದಿಸುತ್ತಾ ಪಂಢರಪುರಕ್ಕೆ ಬಂದರು. ಚಂದ್ರ ಭಾಗಾ ನದಿಯ ದಂಡೆಯ ಮೇಲೆ ನೆಲೆಸಿರುವ ಈ ರಮ್ಯ ಕ್ಷೇತ್ರವು ಅವರಿಗೆ ಆಹ್ಲಾದಕರವೆನ್ನಿಸಿತು. ಅಲ್ಲಿ ಪರಬ್ರಹ್ಮನನ್ನು ಕುರಿತು ಘೋರತಪಸ್ಸನ್ನಾಚರಿಸ ತೊಡಗಿದರು. ಇವರ ಭಕ್ತಿ ಮತ್ತು ತಪಸ್ಸಿಗೆ ಮೆಚ್ಚಿ ವಿಶ್ವಕರ್ತನಾದ ವಿಶ್ವ ಬ್ರಹ್ಮನು ಪಂಚಮುಖ ದಶಭುಜಗಳ ದಿವ್ಯರೂಪದಿಂದ ಪ್ರಕಟಗೊಂಡನು. ಪ್ರಸನ್ನ ನಾದ ವಿಶ್ವಕರ್ಮನು ಆತನಿಗೆ ಅಪಾರವಾದ ಯೋಗೈಶ್ವರ್ಯವನ್ನು ದಯಪಾಲಿಸಿ ತನ್ನ ಲೋಹದಂಡ, ತ್ರಿಶೂಲ ವನ್ನು ಕೆಳಗಿರಿಸಿ "ಲೋಹದಂಡವನ್ನಿರಿಸಿದ ಈ ಸ್ಥಳದಲ್ಲಿ ಸರ್ವತೀರ್ಥಗಳು ಸ್ಥಾಪಿತವಾಗಿವೆ. ಇದು ವಿಶ್ವಜ್ಞ ಲೋಹತೀರ್ಥ ವೆಂದು ಪ್ರಖ್ಯಾತವಾಗುವುದು. ಕೆಲವು ವರ್ಷಗಳಾದ ಮೇಲೆ ನನ್ನ ವೈಷ್ಣ ವಾಂಶದಿಂದ ಅವತರಿಸುವ ಮಹಾಜ್ಞಾನಿ ಈ ಕ್ಷೇತ್ರಕ್ಕೆ ವಿಶೇಷ ಮಹತ್ವ ವನ್ನುಂಟುಮಾಡುವನು. ಅವನಿಂದ ನೀನು ಉಪದೇಶವನ್ನು ಹೊಂದು" ಎಂದು ಹೇಳಿ ಅಂತರ್ಧಾನನಾದನು. ಈ ಲೋಹ ತೀರ್ಥದಿಂದ ಪಂಢರಪುರವು ಭೂ ವೈಕುಂಠವೆನ್ನಿಸಿತು. ತೀರ್ಥದ ಬಳಿಯೇ ವಿಶ್ವಕರ್ಮ ದೇವಾಲಯವು ಇದ್ದಿತು. ಆದರೆ ಯಾವ ಕಾಲಕ್ಕೆ ದಕ್ಷಿಣದಲ್ಲಿ ಮುಸಲ್ಮಾನರ ಸೈನ್ಯವು ಬಂದ ಕಾರಣ ವಿಠ್ಠಲನ ಮೂರ್ತಿಯನ್ನು ಮುಚ್ಚಿಟ್ಟಿದ್ದರೋ ಅದೇ ಪ್ರಕಾರ ವಿಶ್ವಕರ್ಮ ಪ್ರಭುವಿನ ಮೂರ್ತಿಯನ್ನು ದೇವಾಲಯದೊಳಗಿನಿಂದ ತೆಗೆದಿಟ್ಟಿದ್ದರು. ಆ ಮೂರ್ತಿಯು ಇಂದಿನವರೆವಿಗೂ ಪಂಢರಪುರದಲ್ಲಿದ್ದು, ಅದರ ಬಗ್ಗೆ ಶಿಲಾ ಲೇಖ ಗಳ ಆಧಾರವು ಸಿಕ್ಕಿರುತ್ತದೆ.

ಶ್ರೀಕಾಲಜ್ಞಾನಿಗಳಾದ ಚಾಂಗದೇವರು ಪರಕಾಯ ಪ್ರವೇಶ ವಿದ್ಯೆ ಮತ್ತು ಯೋಗ ಸಿದ್ಧಿಗಳಿಂದ ಮೃತ್ಯುವು ಬಂದಾಗಲೆಲ್ಲಾ ಮೊದಲೇ ಅದನ್ನು ತಿಳಿದು ತಪ್ಪಿಸಿಕೊಂಡರು. ಅವರಿಗೆ ಇದೊಂದು ಅದ್ಭುತಪ್ರಯೋಗವೆಂದೆನ್ನಿಸಿರ ಬೇಕು. ೧೪೦೦ ವರ್ಷಗಳ ಕಾಲ ಜೀವಿಸಿದ್ದರು. ಇಷ್ಟು ದೀರ್ಘಾವಧಿ ಯಾವ ಯೋಗಿಯೂ ಬದುಕಿರಲಿಲ್ಲ. ಕಳೆದ ಶತಮಾನದವರೆವಿಗೂ ಹೀಗೆ ಅನೇಕ ಶತ ಮಾನಗಳವರೆವಿಗೆ ಬಾಳಿದ ಮಹಾತ್ಮರುಂಟು. ನವಿಲುಗುಂದ ನಾಗಲಿಂಗ

ಸ್ವಾಮಿಗಳಿಗೆ ಭೇಟಿಯಾದ ಬೂದಿಸ್ವಾಮಿ ಎಂಬ ಯೋಗಿ ಏಳುನೂರು ವರ್ಷಗಳು ಜೀವಿಸಿದ್ದು ನಾಗಲಿಂಗರು ಛೀಮಾರಿ ಹಾಕಲು. ಆತ ದೇಹವನ್ನು ತೊರೆದು ಮುಕ್ತನಾದನು.

ದಿಲ್ಲಿಯಲ್ಲಿ ಮುಸಲ್ಮಾನರ ಆಳ್ವಿಕೆಯು ಪ್ರಾರಂಭವಾಗಿತ್ತು. ಗುಲಾಮ ವಂಶದ ಸುಲ್ತಾನರು ಆಳುತ್ತಿದ್ದರು (ಕ್ರಿ. ಶ. ಹದಿಮೂರನೆಯ ಶತಮಾನ). ಸುಲ್ತಾನರ ಮಗನಿಗೆ ಒಂದು ರೋಗವು ಅಂಟಿಕೊಂಡಿತು. ಹಕೀಮರು ಮತ್ತು ವೈದ್ಯರು ಔಷಧೋಪಚಾರ ಮಾಡಿದರೂ ಗುಣವಾಗಲಿಲ್ಲ. ಚಾಂಗ ದೇವರು ತಮ್ಮ ಸಾವಿರಾರು ಜನ ಶಿಷ್ಯರೊಂದಿಗೆ ತ್ರ್ಯಂಬಕೇಶ್ವರ, ಸೋಮ ನಾಥ, ಹರಿದ್ವಾರ ಕ್ಷೇತ್ರಗಳನ್ನು ಸಂದರ್ಶಿಸಿ ದಿಲ್ಲಿಯ ಕಡೆಗೆ ಬರುತ್ತಿದ್ದರು. ಮಹಾಯೋಗಿಗಳು ಹುಲಿಯ ಮೇಲೆ ಕುಳಿತು, ಅದಕ್ಕೆ ಚೇಳಿನ ಕಡಿವಾಣ ಹಾಕಿ, ನಾಗರಹಾವನ್ನು ಬಾರಕೋಲನ್ನಾಗಿ ಮಾಡಿ ಹಿಡಿದುಕೊಂಡು ಭಯಂ ಕರ ರೂಪವನ್ನು ತಾಳಿ ಬರುತ್ತಿದ್ದರು.

ಬಾದಶಹರು ತಮ್ಮ ಮಂತ್ರಿಯನ್ನು ಕಳುಹಿಸಿ ಚಾಂಗದೇವರನ್ನು ಅರ ಮನೆಗೆ ಆಹ್ವಾನಿಸಿದರು. ಯೋಗಿವರ್ಯರು ತಮ್ಮ ಶಿಷ್ಯರೊಂದಿಗೆ ದಿಲ್ಲಿಯನ್ನು ಪ್ರವೇಶಿಸಿದಾಗ ಬಾದಶಹರೇ ಅವರನ್ನು ಗೌರವದಿಂದ ಸ್ವಾಗತಿಸಿ, ಪಾದಗಳಿಗೆ ವಂದಿಸಿ ಕಾಣಿಕೆ ಸಲ್ಲಿಸಿದರು. ಹಾಗೂ ಅರಮನೆಗೆ ಕರೆದೊಯ್ದರು. ರಾಜ ಕುಮಾರನು ಹಾಸಿಗೆಯ ಮೇಲೆ ನಿಶ್ಶಕ್ತನಾಗಿ ಕಳಾಹೀನನಾಗಿ ಮಲಗಿದ್ದನು. ಯೋಗಿರಾಜರು ಅವನ ಶರೀರವನ್ನು ತಮ್ಮ ಸ್ವಹಸ್ತದಿಂದ ಸ್ಪರ್ಶಿಸಿ ಯೋಗದಂಡ ದಿಂದ ಎದೆಯ ಮೇಲೆ ಸವರಿದರು. ರಾಜಕುಮಾರನು ನವಚೈತನ್ಯದಿಂದ ನಿರೋಗಿ ಯಂತೆ ಎದ್ದು ಕುಳಿತನು. ಸುಲ್ತಾನರೂ ಸೇರಿದಂತೆ ದರಬಾರಿನಲ್ಲಿ ಸೇರಿದ್ದ ವರೆಲ್ಲರೂ ಮತ್ತು ಯೋಗಿರಾಜರ ಶಿಷ್ಯರೂ 'ರಾಜಾಬಾಘ ಸವಾರ ಶ್ರೀ ಚಾಂಗದೇವ ಮಹಾರಾಜಕೀ ಜೈ' ಎಂದು ಹೊಗಳಿ ಕೊಂಡಾಡಿದರು. ಅಂದಿ ನಿಂದ ಅವರ ಭಕ್ತಾದಿಗಳು ಇಂದಿಗೂ ಸಹ 'ರಾಜಾಬಾಘ ಸವಾರ' ಎಂದೇ ಸಂಬೋಧಿಸುತ್ತಾರೆ.

ಜ್ಞಾನೇಶ್ವರರು ಕೋಣನಿಂದ ವೇದಮಂತ್ರವನ್ನು ಹೇಳಿಸಿದರೆಂಬ

ಅದ್ಭುತ ಪವಾಡವನ್ನು ಕೇಳಿದ ಚಾಂಗದೇವರು 'ಈತ ವಿಷ್ಣುವಿನ ಅವತಾರವೇ ಇರಬೇಕು' ಎಂದು ಯೋಚಿಸಿ ಒಂದು ಪತ್ರ ಬರೆಯ ಬೇಕೆಂದು ಕುಳಿತರು 'ಜ್ಞಾನೇಶ್ವರ ತನಗಿಂತ ವಯಸ್ಸಿನಲ್ಲಿ ಬಹು ಕಿರಿಯನಾದರೂ ಮಹಿಮೆಯಲ್ಲಿ ಸಣ್ಣವನಲ್ಲ, ಆದ್ದರಿಂದ ಚಿರಂಜೀವಿ ಎನ್ನಬೇಕೋ ಪೂಜ್ಯ ಎಂದು ಬರೆಯಬೇಕೋ ?' ಎಂಬ ಸಂಶಯ ಎದುರಾಯಿತು. ಬರಿಯ ಕಾಗದವನ್ನೇ ತಮ್ಮ ಶಿಷ್ಯನ ಕೈಯಲ್ಲಿ ಕೊಟ್ಟು ಕಳುಹಿಸಿದರು.

ಚಾಂಗದೇವರ ಪತ್ರವನ್ನು ಜ್ಞಾನೇಶ್ವರರು ತಮ್ಮ ಸೋದರಿ ಮುಕ್ತಾ ಬಾಯಿಗೆ ಕೊಟ್ಟರು. ಆಕೆ "ಅಯ್ಯೋ, ಚಾಂಗದೇವನು ದೀರ್ಘಕಾಲ ಬಾಳಿ ದರೂ ಸದ್ಗುರುವು ದೊರೆಯದೆ ಬರಿದಾಗಿಯೇ ಇದ್ದಾನೆ!" ಎಂದಳು.

ಹಿರಿಯ ಅಣ್ಣ ನಿವೃತ್ತಿನಾಥರು "ತಂಗಿ, ಹಾಗೆ ಹೇಳಬೇಡ. ಚಾಂಗ ದೇವರು ಪರಿಶುದ್ಧರು. ಅವರು ಮಹಾನುಭಾವ ಪಂಥದ ಸಿದ್ಧರಿಗೂ ಪರಮ ಗುರುಗಳು; ಹಠಯೋಗಿಗಳು. ತಮಗೆ ಗುರುವಿಲ್ಲವೆಂಬ ಅಹಂಕಾರದಿಂದ ಮೋಕ್ಷ ಪಡೆಯಲಾರದಾಗಿದ್ದಾರೆ. ಬ್ರಹ್ಮಜ್ಞಾನವನ್ನು ಉಪದೇಶಿಸುವ ಜ್ಞಾನ ದೇವ" ಎಂದರು.

ಮರಾಠಿಯಲ್ಲಿ ವೇದಾಂತ ಸಾರವನ್ನು ತಿಳಿಸುವ ಅರವತ್ತೈದು ಪದ್ಯಗಳುಳ್ಳ ಪತ್ರವನ್ನು ಬರೆದು ಕಳುಹಿಸಿದರು. ಅವು **ಚಾಂಗದೇವ ಪಾಸಷ್ಟಿ** ಎಂದು ಪ್ರಖ್ಯಾತವಾಗಿದೆ. ಇದು ಬ್ರಹ್ಮಜ್ಞಾನ ಬೋಧಿಸುವ ರತ್ನಪ್ರಾಯ ಕೃತಿಯಾಗಿದೆ.

ಜ್ಞಾನೇಶ್ವರರನ್ನು ಕಾಣಬೇಕೆಂದು ಹುಲಿಯನ್ನೇರಿ ಆಳಂದಕ್ಕೆ ಬಂದರು ಚಾಂಗದೇವರು. ಆಗ ಜ್ಞಾನೇಶ್ವರರು ತಮ್ಮ ಮನೆಯ ಮುಂದಿನ ಹಳೆಯ ಗೋಡೆಯ ಮೇಲೆ ಕುಳಿತಿದ್ದರು. ಚಾಂಗದೇವರು ಸಮೀಪಕ್ಕೆ ಬರುತ್ತಿರಲು ತಾವು ಕುಳಿತ ಗೋಡೆಗೆ 'ನಡೆ' ಎನ್ನಲು ಅದು ಚಾಂಗದೇವರ ಕಡೆಗೆ ನಡೆಯ ತೊಡಗಿತು. ಅದನ್ನು ಕಂಡ ಚಾಂಗದೇವರು ಅಹಂಕಾರದಿಂದ ಇಳಿಯುವಂತೆ ಹುಲಿಯ ಮೇಲಿಂದ ಇಳಿದರು. ವಿನೀತರಾಗಿ ಜ್ಞಾನೇಶ್ವರರನ್ನು ಅಪ್ಪಿ "ಸದ್ಗುರುವೇ, ನನಗೆ ಉಪದೇಶವನ್ನು ಕೊಡಿ" ಎಂದು ಪ್ರಾರ್ಥಿಸಿದರು.

ನಿವೃತ್ತಿನಾಥರು "ಮಹಾಸಿದ್ಧ, ಶತಶತಮಾನಗಳಕಾಲ ಜೀವಿಸಿರುವ ತಾವು ಎಲ್ಲವನ್ನೂ ತಿಳಿದವರು. ನಾಥ ಸಂಪ್ರದಾಯದಲ್ಲಿ ನೀವು ನನ್ನ ಗುರುವಿನ ಗುರು--ಮಹಾಗುರುವಾದಿರಿ. ಅಹಂಕಾರವಳಿದು ನೀವು ಮೋಡ ಸರಿದ ಸೂರ್ಯನಂತಾಗಿರುವಿರಿ." ಎಂದು ತುಂಬು ಹೃದಯದಿಂದ ಸ್ವಾಗತಿಸಿದರು.

ಇವರೀರ್ವರ ಮಿಲನ ಪ್ರಸಂಗವನ್ನು ಮರಾಠಿಯಲ್ಲಿ ನೂರಾರು ಕವಿಗಳು ತಮ್ಮ ಕಾವ್ಯಗಳಲ್ಲಿ ಭಾವವೇಶದಿಂದ ವರ್ಣಿಸಿದ್ದಾರೆ. ಮರಾಠಿಯ ವೇದಾಂತ ಸಾಹಿತ್ಯದಲ್ಲಿ ತುಂಬಾ ಖ್ಯಾತವಾದ 'ಚಾಂಗದೇವ ಪಾಸಷ್ಟಿ' ಇಂದೂ ಜನಪ್ರಿಯವಾಗಿದೆ. ಪರಬ್ರಹ್ಮನ ಬಗ್ಗೆ ಅದರಲ್ಲಿ ಈ ಪದ್ಯವಿದೆ -

ನಾಹಿ ತೇಂಚಿ ಕಾಯನೇಣೋ ಅಸೇ। ದಿಸೇ ತೇಂಚಿ ಕೈಸೆ ನೇಣೋದಿಸೆ।
ಅಸೆ ತೇಂಚಿ ನೇಣೋ ಅಪೈಸೆ। ತೇ ಕೀಂ ಹೋಯಿಜೆ ॥ ೬೪ ॥

[ಪರಬ್ರಹ್ಮ ವಸ್ತುವು ಇಲ್ಲವೆಂದರೆ ಹೇಗೆ ಸರಿಯಾದೀತು? ಯಾವುದು ಪ್ರತ್ಯಕ್ಷವಾಗಿ ಕಾಣುವುದೋ ಅದು ಇಲ್ಲದಂತೆ ತೋರುವುದು ಹೇಗೆ? ಆದ್ದರಿಂದ ಅದು ಆನಂದ ಸ್ವರೂಪವಾದದ್ದು. ದುಃಖ ಅದಲ್ಲ. ಸಹಜಾವಸ್ಥೆಯಲ್ಲಿರುವ ಸಚ್ಚಿದಾನಂದ ಆತ್ಮಸ್ವರೂಪವನ್ನು ಹೊಂದಿದರೆ ಮಾತ್ರ ಮೋಕ್ಷ ದೊರಕುವುದು.]

ಚಾಂಗದೇವರು ಯೋಗಿ ಚಕ್ರವರ್ತಿಗಳಾಗಿದ್ದಂತೆಯೇ ಶ್ರೇಷ್ಠ ಕವಿಗಳೂ ಆಗಿದ್ದರು. ಅವರು ಬರೆದ ಪದ್ಯಗಳು ದೊರೆತಿದ್ದು ಅವರ ಕಾವ್ಯ ಪ್ರತಿಭೆಯ ದ್ಯೋತಕಗಳಾಗಿವೆ. ಗ್ವಾಲಿಯರ ರಾಜ್ಯದಲ್ಲಿ ಅವರು ಬರೆದ ಗ್ರಂಥವು ಸಿಕ್ಕಿದ್ದು ಅದರಲ್ಲಿ ೪೦೦ ಪದ್ಯಗಳಿವೆ. ಆದರೆ ಕೊನೆಯ ಪುಟವನ್ನು ನೋಡಿದರೆ ೧೦೩೬ ಪದ್ಯಗಳು ಆ ಕಾವ್ಯದಲ್ಲಿದ್ದಂತೆ ತೋರುತ್ತದೆ. ಈ ಗ್ರಂಥವನ್ನು ಮಹಾರಾಷ್ಟ್ರದ ನಗರಜಿಲ್ಲೆಯಲ್ಲಿರುವ ಆಕೋಲೆ ತಾಲ್ಲೂಕಿನ ಹರಿಶ್ಚಂದ್ರ ಗಡದಲ್ಲಿ ಕ್ರಿ. ಶ. ೧೩೨೫ರಲ್ಲಿ ಚಾಂಗದೇವರು ರಚಿಸಿದರು ಪ್ರೊ. ಹ. ರಾ. ದಿವೇಕರರು ೪೦೦ ಪದ್ಯಗಳಿಗೆ ಟೀಕೆ ಬರೆದು **ಚಾಂಗದೇವ ತತ್ತ್ವಸಾರ** ಎಂಬ ಹೆಸರಿನಲ್ಲಿ ಮರಾಠಿಯಲ್ಲಿ ಪ್ರಕಟಿಸಿದ್ದಾರೆ. ಯೋಗದ ಬಗ್ಗೆ ಅತ್ಯಮೂಲ್ಯ ಗ್ರಂಥವಿದು—

ಜೈಸಿ ಕರಾ ಜೋತಿ ಠೇವೂನಿ। ಗೃಹ ವಸ್ತು ಅವಲೋಕುನಿ।
ಸ್ವಯಂ ಠೇವಿಲೆ ದೇಖೌನಿ। ತ್ಯಾಗ ಕೇಜೈ।
ನಾತರಿ ಐಲಿಥಡಿಂಚಿ ನಾಂವೇ ಚಾ। ಕೀ ಜೈ ಪ್ರಯತ್ನ ಸ್ವೀಕಾರ।
ತಿಯೇಜಾ ಪೈಲು ಪಾರು ಪಾವಲಿಯಾಂ ತಿಚಾ। ಪಾಂಗುಛಿಟಿ॥
ತೈಸಾ ದೇಹಾಸ್ಥ ದೇಹಾತೀತ ದೇಖಿಲೆ। ಗುರು ಪ್ರಾಸಾದೆ ಜಾನಿತಲೆ।
ಮ್ಹಣೌನಿ ತ್ಯಜೀಂ ಪುತ್ರಾಂ ಮ್ಹಣಿತಲೆ। ಅಶೇಷ ಹೀ॥

[ಯಾವ ಪ್ರಕಾರ ಮನೆಯಲ್ಲಿಯ ವಸ್ತುವನ್ನು ಹುಡುಕಿದ ಮೇಲೆ ದೀಪವನ್ನು ಮೊದಲಿನ ಸ್ಥಾನದಲ್ಲಿ ಇಡಲಾಗುವುದೋ ಮತ್ತು ಹೇಗೆ ನದಿಯ ಮತ್ತೊಂದು ದಂಡೆಯನ್ನು ಮುಟ್ಟಿದ ಮೇಲೆ ನಾವೆಯನ್ನು ಅದರ ಮೊದಲಿನ ಸ್ಥಾನಕ್ಕೆ ಹಿಂದಿರುಗಿಸಲಾಗುವುದೋ ಅದೇ ಪ್ರಕಾರ ಗುರುವಿನ ಕೃಪೆಯಿಂದ ಶರೀರವೆಂಬ ಮನೆಯಲ್ಲಿ ಪರಮಾತ್ಮನೆಂಬ ವಸ್ತುವನ್ನು ಹುಡುಕಿದ ಮೇಲೆ ಸಂಸಾರ (ಪ್ರಪಂಚ)ದ ತ್ಯಾಗವೂ ತಾನೇ ಆಗುವುದು. ಇದೇ ನಿಜವಾದ ತ್ಯಾಗವು.]

ತಮ್ಮ ಅವತಾರವನ್ನು ಮುಗಿಸುವ ಹದಿಮೂರು ವರ್ಷಗಳ ಮೊದಲು ಈ ರಚನೆ ನಡೆಸಿದ್ದಾರೆ. ಸಂತ ಸಾಹಿತ್ಯದಲ್ಲಿ ಚಾಂಗದೇವರ ಹೆಸರು ಶಾಶ್ವತವಾಗಿ ಇಂದಿಗೂ ಉಳಿದಿದೆ.

೧೪೦೦ ವರ್ಷಗಳ ದೀರ್ಘಕಾಲದ ಜೀವನದ ನಂತರ ನರ್ಮದಾ ನದಿಯ ದಂಡೆಯ ಮೇಲಿನ ಪುಣತಾಂಬೆ (ಪುಣ್ಯಸ್ತಂಭ)ದಲ್ಲಿ ಕ್ರಿ.ಶ. ೧೩೩೮ ರಲ್ಲಿ ತಮ್ಮ ತ್ರಿಶೂಲ, ಯೋಗದಂಡ, ಡಮರುಗ, ಪಾದುಕೆಗಳನ್ನು ಬಿಟ್ಟು, ಶಿಷ್ಯರನ್ನು ಆಶೀರ್ವದಿಸಿ ಗುಹೆಯಲ್ಲಿ ಹೊಕ್ಕು ಜೀವಸಮಾಧಿಯನ್ನು ಪಡೆದರು. ಈ ಕ್ಷೇತ್ರವು ಜಾಗೃತ ಕ್ಷೇತ್ರವೆಂದು ಹೆಸರಾಗಿದ್ದು, ಪ್ರತಿವರ್ಷವೂ ಜಾತ್ರೆ ನಡೆಯುತ್ತದೆ. ಚಾಂಗದೇವರು ಲಕ್ಷಾಂತರ ಭಕ್ತಗಣದಿಂದ ಇಂದೂ ಆರಾಧಿಸಲ್ಪಡುತ್ತಿರುವರು. ★

೪

ಈಶ್ವರಚಂದ್ರ ಚಿಂತಾಮಣಿ

ಲಚ್ಯಾಣದ ಜ್ಯೋತಿ ಸಿದ್ಧಲಿಂಗ ಮಹಾರಾಜರು

ಉತ್ತರ ಕರ್ನಾಟಕದಲ್ಲಿ ವಿಜಾಪುರ ಜಿಲ್ಲೆ ಇದೆ. ಈ ಜಿಲ್ಲೆಯು ಪುಣ್ಯ ಪುರುಷರು ಬಾಳಿ ಬೆಳಗಿದ ಬೀಡು. ಜಿಲ್ಲೆಯಾದ್ಯಂತ ಈಗಲೂ ಆಧ್ಯಾತ್ಮಿಕ ಕೇಂದ್ರಗಳಾಗಿ ಕಂಗೊಳಿಸುವ ಹಲವಾರು ಪುಣ್ಯಕ್ಷೇತ್ರಗಳಿವೆ. ಅಂಥ ಪುಣ್ಯ ಕ್ಷೇತ್ರಗಳಲ್ಲಿ ಇಂಡಿ ತಾಲ್ಲೂಕಿನ ಲಚ್ಯಾಣವೂ ಒಂದು ಜಾಗೃತ ಸ್ಥಾನ; ಪುಣ್ಯದ ಬೀಡು. ಈ ಆಧ್ಯಾತ್ಮ ಕೇಂದ್ರದ ದಿವ್ಯ-ಚೇತನ ಶ್ರೀ ಸಿದ್ಧಲಿಂಗ ಮಹಾರಾಜರು. ಹತ್ತೊಂಬತ್ತನೆಯ ಶತಮಾನದಲ್ಲಿ ತಮ್ಮ ಶುದ್ಧ ಜೀವನದ ಸತ್ವಪೂರ್ಣ ಸಾಧನೆಗಳಿಂದ ಸ್ಮಶಾನವನ್ನು ಸುಕ್ಷೇತ್ರಗೊಳಿಸಿದ, ರುದ್ರಭೂಮಿ ಯನ್ನು ಶುದ್ಧಗೊಳಿಸಿದ ಶ್ರೇಯ ಅವರದು. ಸಿದ್ಧಲಿಂಗ ಮಹಾರಾಜರು ಶಾಲೆಯಲ್ಲಿ ಓದು ಕಲಿತವಾಗಿರಲಿಲ್ಲ ; ವೇದ, ಶಾಸ್ತ್ರಗಳನ್ನು ಅಭ್ಯಸಿಸಿದವರಲ್ಲ. ಅವರ ಅಂತರಂಗದ ಅರಿವು, ಬಹಿರಂಗದ ಇರವು ಎಲ್ಲಾ ತತ್ವಗಳನ್ನೂ ಗರ್ಭೀ ಕರಿಸಿಕೊಂಡಂತಿದ್ದು, ನಡೆ-ನುಡಿಗಳೊಂದಾಗಿ 'ಸಿದ್ಧ ಪುರುಷನಿವ' ಎಂದು ಸಮಕಾಲೀನ ಹಿರಿಯರೂ ತಲೆಬಾಗುವಂತಾಯಿತು. ಅವರ ಜೀವನ ಮತ್ತು ಸಾಧನೆಗಳು ಜಿಲ್ಲೆಯ ಹಲವಾರು ಆಧ್ಯಾತ್ಮ ಕೇಂದ್ರಗಳಲ್ಲಿ (ಮಠಗಳಲ್ಲಿ) ಇಂದಿಗೂ ಬೆಳಕು ಬೀರುತ್ತಿವೆ ; ಯಾತ್ರಿಕರನ್ನೂ ಆಕರ್ಷಿಸುತ್ತಿವೆ. ಅಲೌಕಿಕ ವಾದ ಸತ್ವವನ್ನು ಪಡೆದು, ತನ್ನ ಸತ್ಯಶಕ್ತಿಯನ್ನು ಶಿಷ್ಯರಲ್ಲಿ ಬಿತ್ತಿಬೆಳೆದು ಸುತ್ತಲು ಬೆಳಕನ್ನು ಬೀರುತ್ತಿರುವ ಸಿದ್ಧಲಿಂಗ ಮಹಾರಾಜರ ಪೂರ್ವಾಶ್ರಮದ ಪರಿಚಯ ತಿಳಿಯುವುದು ಅಗತ್ಯ.

ಕಕ್ಕಳಮೇಲಿ ಸಿಂದಗಿ ತಾಲೂಕಿನಲ್ಲೊಂದು ಹೆಸರಾದ ಹಳ್ಳಿ; ಶರಣರು ನೆಲೆಸಿದ ಸ್ಥಾನ. ವಿಶ್ವಬ್ರಾಹ್ಮಣ (ಪಂಚಾಳ) ಸಮಾಜದ ಸಭ್ಯಗೃಹಸ್ಥ ಲಚ್ಚಪ್ಪ; ಅವನ ಧರ್ಮಪತ್ನಿ ನಾಗಮ್ಮ. ಊರಿನವರಲ್ಲೆಲ್ಲಾ ಜನಪ್ರಿಯತೆ ಗಳಿಸಿದ ದಂಪತಿಗಳಿವರು. ಇವರಿಗೆ 'ತಿಪ್ಪಮ್ಮ' ಮತ್ತು 'ಮೋನಮ್ಮ' ಎಂಬ ಇಬ್ಬರು ಹೆಣ್ಣು ಮಕ್ಕಳು. ಗಂಡು ಸಂತಾನಕ್ಕಾಗಿ ಅವರು ಹಂಬಲಿಸುತ್ತಾ ಹತ್ತು ದೇವರುಗಳಿಗೆ ಹರಕೆ ಹೊತ್ತು ವ್ರತ ಕೈಕೊಂಡಿದ್ದರು. ಅವರ ಇಳಿ ವಯಸ್ಸಿನಲ್ಲಿ 'ಅರಕೇರಿ ಅಮೋಘ ಸಿದ್ಧ'ನ ಕೃಪೆಯಿಂದ ಶಾಲಿವಾಹನ ಶಕ ೧೭೭೧ ಸೌಮ್ಯನಾಮ ಸಂವತ್ಸರ ಶ್ರಾವಣ ಶುದ್ಧ ಸಪ್ತಮಿ ಸೋಮವಾರ ಪ್ರಾತಃಕಾಲ ಶುಭ ಸಮಯದಲ್ಲಿ ಗಂಡು ಮಗು ಜನಿಸಿತು. ಆ ಕೂಸಿಗೆ 'ಸಿದ್ಧಪ್ಪ' ಎಂದು ನಾಮಕರಣ ಮಾಡಿದರು. ಈತನೇ ಲಚ್ಯಾಣದ ಸಿದ್ಧಲಿಂಗ ಮಹಾರಾಜನಾಗಿ ಅಮರನಾಗಿದ್ದಾನೆ.

ಹುಟ್ಟಿದ ಹತ್ತನೆಯ ದಿನಕ್ಕೆ ಕೂಸಿಗೆ ವಿಚಿತ್ರ ಬಾಧೆಗಳಾದವು. ತಾಯಿಯ ಮಗ್ಗುಲಲ್ಲಿ ಮಲಗಿದ ಕೂಸು ರಾತ್ರಿ ವೇಳೆಯಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿದ ಗೋವಿನ ಕಾಲಕೆಳಗೆ ಸ್ಥಳಾಂತರವಾಗುವುದೆಂದರೆ ಯಾರಿಗೆ ತಾನೇ ಆಶ್ಚರ್ಯವಾಗಲಿಕ್ಕಿಲ್ಲ? ಹೀಗೆ ಮೂರ್ನಾಲ್ಕು ದಿನ ಘಟಿಸಿದಾಗ ಪಿಶಾಚಿಯ ಬಾಧೆ ಎಂದು ತಾಯಿ-ತಂದೆಗಳಿಗೆ ದುಃಖ! ಒಬ್ಬ ಬೈರಾಗಿಯ ಆಕಸ್ಮಿಕ ದರ್ಶನದಿಂದ ಬಂದ್ದಿದ ಆತಂಕ ದೂರಾಯಿತು. ಇದೊಂದು ಪವಾಡವಲ್ಲ ಆದರೆ ಅದು ಸಂಭವಿಸಿದಪ್ರಸಂಗ!

ಎಳೆತನದಲ್ಲಿ ಮುದ್ದು ಮಗು 'ಸಿದ್ಧಪ್ಪ' ಎಲ್ಲರಿಗೂ ವಿಚಿತ್ರವಾಗಿ-ಹುಚ್ಚು ಮಗುವಾಗಿ – ಕಂಡದ್ದುಂಟು. ಓದು ಕಲಿಯಲು ಮಠಕ್ಕೆ ಹೋಗಲಾರ. ಹೊತ್ತಿಗೆ ಸರಿಯಾಗಿ ಉಣ್ಣಲಾರ. ಓಣಿಯ ತುಂಬ ಓಡಾಟ. ಒಬ್ಬೊಂಟಿಗ ನದೇ ತರತರದ ಆಟ! ಎಲ್ಲವೂ ಹುಚ್ಚುಚ್ಚಾಟ. ಅವನ ಜೀವನದ ವಾಸ್ತವಾಂಶ ಗಳು ಹೀಗೆ ನೂರಾರು.

ಇರುವೊಬ್ಬ ಪುತ್ರ ಹುಚ್ಚನಾಗಿ ಬೆಳೆಯುತ್ತಿದ್ದಾನಲ್ಲ ಎಂದು ತಾಯಿ ನಾಗಮ್ಮ ದಿನವೂ ಅಳುವಳು. ತಂದೆ ಲಚ್ಚಪ್ಪ ಚಿಂತಿಸುವನು. 'ಯಾಕೆ

ಆಳುತ್ತೀರೊ ಹುಚ್ಚರ್‍ಯಾ ? ' ಎಂದು ಬಾಲಕ ಸಿದ್ಧಪ್ಪ ನಗುತ್ತ ಮಾತಾಪಿತೃಗಳ ಮುಂದೆ ನಗುತ್ತ ಕುಣಿಯುತ್ತಿದ್ದುದನ್ನು ಕಂಡು ಅವರ ಹಿತೈಷಿಗಳಿಗೆ ನಗು ಮತ್ತು ವ್ಯಥೆಯಾಗುತ್ತಿತ್ತು. ಬಾಲಕ ಸಿದ್ಧಪ್ಪನ ಎರಡೂ ಕಿವಿಗಳಿಗಳಿಗೂ ಹುಟ್ಟಂದಿನಿಂದಲೇ ಮುರುವು ತೊಡಿಸುವ ರಂಧ್ರಗಳಿದ್ದುದೊಂದು ಅಚ್ಚರಿಯ ಸಂಗತಿ ! 'ಇವು ನನ್ನ ಗುರುವಿನ ಗುರುತಾ !' ಎಂದು ಸಿದ್ಧಪ್ಪ ತಾಯಿಗೆ ಹೇಳುತ್ತಿದ್ದ. 'ಎಲ್ಲಿದ್ದಾನಪ್ಪ ನಿನ್ನ ಗುರು ?' ಎಂದಾಗ, 'ಇದ್ದಾನವ್ವಾs ಕೂಡಿ ಬಂದಾಗ ಕರಕೋತಾನ' ಎಂಬುದು ಬಾಲಕನ ಉತ್ತರ.

'ಜಳಕಾ ಮಾಡಬಾರೋ ಸಿದ್ಧಣ್ಣ !' ಎಂದು ತಾಯಿ ಬಲವಂತದಿಂದ ಕರೆದಾಗ 'ಯವ್ವಾs,ಮ್ಯಾಗ ಮಾತ್ರ ಜಳಜಳ ಆದರೇನಾಯ್ತು ? ಒಳಗ ಮನಾ ಮೈಲಿಗಿ ಆಗೇತಿ ! ಅದ್ನ ತೊಳೀತೀದೇನು ?' ಎಂಬುದು ಸಿದ್ಧಣ್ಣನ ಅರ್ಥಪೂರ್ಣ ಪ್ರಶ್ನೆ. 'ಬಾಳಾs, ಹಿಂಗೆಲ್ಲಾ ಅಂದ್ರ ನನಗೇನು ತಿಳೀತೈತಿ? ನಿನ್ನ ಹುಚ್ಚುಚ್ಚಾರ ಮಾತು ಕೇಳಿದರ, ದುಃಖಾಗತೈತಿ ! ನಿನ್ನನ್ನು ಬಂಥನಾಳ ಶಂಕರಲಿಂಗ ಶರಣರ ಕಡೆಗೆ ಒಯ್ದು ನೆಟ್ಟಗೆ ಮಾಡಿಸಿದರೇ ಹಾದೀಗಿ ಬರ್ತೀ, ಹೌದಲ್ಲೊ ?' ಹೀಗೆಂದು ತಾಯಿ ನಾಗಮ್ಮ ಆಗಾಗ ಅನ್ನುವಳು. ಆಗ ಸಿದ್ಧಣ್ಣ ಹಿಗ್ಗಿನಿಂದ:

'ಯವ್ವಾs ಬಂಥನಾಳ ಮುತ್ತ್ಯಾನ ಹಂತ್ಯಾಕ ಕರಕೊಂಡ ಹೊಗ್ತೀಯು? ನನ್ನ ನಸೀಬು ತೆಗೀತದ ನೋಡು. ನಾನೂ ಶ್ಯಾಣಾ ಆಗತೀನಿ !' ಎಂದು 'ಶಿವ ಶಿವ!' ಸ್ಮರಣೆ ಮಾಡುತ್ತ ಕುಣಿದಾಡುವನು.

ಲಚ್ಚಪ್ಪ, ನಾಗಮ್ಮ ಸಿರಿವಂತರೇನಲ್ಲ. ಮನೆಯ ಕಾಯಕ ಮರಗೆಲಸ (ಬಡಿಗತನ). ನಾಗಮ್ಮ ದಿನವೂ ಕೂಲಿ ಕುಂಬಳಿ ಮಾಡುವಳು. ಅವಳು ಕೂಲಿ ಕೆಲಸಕ್ಕೆ ಹೋದರೆ ಅಕ್ಕರೆಯ ಬಾಲಕ ಸಿದ್ಧಣ್ಣ ಜೊತೆಗೆ ಹೋಗತಕ್ಕವನೇ. ಕೆಲಸಗಾರ ಹೆಣ್ಣುಮಕ್ಕಳ ಮಧ್ಯದಲ್ಲಿ ಈ ಬಾಲಕನ ವಿಶಿಷ್ಟ ರೀತಿಯ ನೀತಿಯ ಮಾತುಗಳೆಂದರೆ ಎಲ್ಲರಿಗೂ ಹಿಗ್ಗು ; ಮನರಂಜನೆ, ಎಲ್ಲರಿಗೂ 'ಯವ್ವಾs' 'ಯಕ್ಕಾs' 'ಯಜ್ಜೀ' 'ಅತ್ತೀ'(ಕತ್ತೀ) ಎಂದು ತನಗೆ ತೋಚಿದ ಹಾಗೆ ಹೆಸರಿಸಿ ಕರೆಯುತ್ತಿದ್ದ ಮುಗ್ಧ ಸಿದ್ಧಣ್ಣನ ಒಡಪಿನ ಮಾತುಗಳನ್ನು ಕೇಳಿದವರಿಗೆಲ್ಲ ಬೇಸರಿಕೆ ಬಯಲಾಗುತ್ತಿತ್ತು.

ಕಕ್ಕಳಮೇಲಿ ಗ್ರಾಮದ ಭೂತಾಳಿ ಶರಣಮ್ಮ ಅಜ್ಜಿಯ ತೋಟದಲ್ಲಿ ಕಳೆ ತೆಗೆಯುವ ಕೆಲಸಕ್ಕೆ ಇತರ ಕೂಲಿಕಾರ ಹೆಣ್ಣುಮಕ್ಕಳೊಂದಿಗೆ ನಾಗಮ್ಮ ಹೋಗಿದ್ದಳು. ಸಿದ್ಧಣ್ಣ ತೋಟದ ಒಂದು ಮೂಲೆಯಲ್ಲಿ ಜೋಳದ ದಂಟಿನಿಂದ ಸೊಗಸಾದ ತೇರನ್ನು (ರಥವನ್ನು) ತಯಾರಿಸುವುದರಲ್ಲೆ ಮಗ್ನನಾಗಿದ್ದ. ಕೂಲಿ ಕೆಲಸದ ಹೆಂಗಸರು ಊಟಕ್ಕೆ ಕುಳಿತರು. ನಾಗಮ್ಮ ತನ್ನ ಮಗನನ್ನು ಊಟಕ್ಕೆ ಕರೆದಳು. ಆತ ಬರಲಿಲ್ಲ. ಉಳಿದವರು ಕರೆದರೂ ಬರಲಿಲ್ಲ! ಕೊನೆಗೆ ಒಡತಿಯಾದ ಶರಣಮ್ಮ ಅಜ್ಜಿ ಜುಲುಮೆ ಮಾಡಿ 'ಬಾರೋ ಸಿದ್ಧಣ್ಣಾ, ಊಟ ಮಾಡೂನು ಬಾ' ಎಂದು ಕರೆದಳು. ಆಗ ಸಿದ್ಧಣ್ಣ, 'ಅಜ್ಜೀ, ನಾನು ಬೇಡಿದ್ದನ್ನು ಕೊಡ್ತಿಯಾ? ಅಂದ್ರ ಬರ್ತೀನಿ!'

'ಏನು ಬೇಕು ಬಾಳ್ಯಾ?' ಅಜ್ಜಿ ಕೇಳಿದಳು.

'ನನ್ನ ತೇರು ಎಳೀಲಾಕ, ನಿನ್ನ ಹೊಲದಾಗ ಜಾಗ ಕೊಡ್ತೀನೆಂತ ಆಣೆ ಮಾಡಿ ವಚನ ಕೊಡು ಬರ್ತೀನಿ.' ಎಂದು ಸಿದ್ಧಣ್ಣ ಅಜ್ಜಿಯ ಮುಂದೆ ಸೆಟೆದು ನಿಂತ.

'ಈ ಬೆಂಡಿನ ತೇರು ಎಳೀತಿದ್ಯಾ, ಎಳೀ!' ಎಂದಳು ಅಜ್ಜಿ.

'ಅಜ್ಜೀ, ಈಗ ಬೆಂಡಿನ ತೇರು ಎಳಿಂರೋ ಈ ಜಾಗದಾಗ ಮುಂದೆ ಬಾಳ ದೊಡ್ಡ ತೇರು ತಯಾರಿಸಿ ಕಳಿಸ್ತೀನಿ! ಅದಕ್ಕs ಬಾಳs ಜಾಗಾ ಬೇಕು. ಮಾತು ಕೊಡು ಬರ್ತೀನಿ!' ಎಂದ.

'ಆಗಲೆಪ್ಪ ಕೋಡತೀನಿ. ಊಟ ಮಾಡ ಬಾ.' ಎಂದು ಅಜ್ಜಿ ಒಪ್ಪಿದಳು.

ಮುಂದೆ ಅರವತ್ತು ವರ್ಷಗಳ ನಂತರ ಸಿದ್ಧಲಿಂಗ ಮಹಾರಾಜರು ಸ್ವತಃ ತಯಾರಿಸಿ, ಲಚ್ಯಾಣದಿಂದ ಕಳಿಸಿದ ಭವ್ಯ ತೇರು ಇಂದಿಗೂ ಅಜ್ಜಿಯ ಹೊಲದಲ್ಲಿ ತನ್ನ ಅಪಾರ ಮಹಿಮೆಯನ್ನು ಪ್ರದರ್ಶಿಸಿ ಇಂದಿಗೂ ಯಾತ್ರಿಕರನ್ನು ಆಕರ್ಷಿಸುತ್ತಿದೆ.

ಉತ್ತರ ಕರ್ನಾಟಕದ ಸುಕ್ಷೇತ್ರಗಳಲ್ಲಿ ಬಂಥನಾಳವೂ ಒಂದು ಪವಿತ್ರ ಸ್ಥಾನ. ಅಲ್ಲಿ ಶಂಕರಲಿಂಗ ಸ್ವಾಮಿಗಳೆಂದರೆ ಜಿಲ್ಲೆಯ ಜ್ಯೋತಿ ಇದ್ದಂತೆ

ಅವರು ದಾಸೋಹ ಮೂರ್ತಿಗಳಾಗಿ, ಸತ್ಯ, ನ್ಯಾಯ, ಧರ್ಮ ಪರಿಪಾಲಕರಾಗಿ ಆಕರ್ಷಿಸುವರು.

ಸಿದ್ಧಣ್ಣನ ಅಕ್ಕ ತಿಪ್ಪವ್ವನ ಗಂಡನ ಮನೆ ಬಂಥನಾಳ. ತನ್ನ ಹುಚ್ಚು ತಮ್ಮನನ್ನು ತಾಯಿಯೊಂದಿಗೆ ಕರೆಯಿಸಿಕೊಂಡಳು. ಶಂಕರಲಿಂಗ ಸ್ವಾಮಿಗಳ ಹತ್ತಿರ ತಾಯಿ ಮಗಳು ಬಾಲಕ ಸಿದ್ಧಣ್ಣನೊಂದಿಗೆ ಬಂದರು.

ಶಂಕರಲಿಂಗ ಶಿವಯೋಗಿಗಳು ಬಾಲಕನನ್ನು ಕಂಡೊಡನೆ ಅಂತರ್ಮುಖಿಗಳಾಗಿ ಕೊಂಚಕಾಲ ಮೌನತಾಳಿದರು. ಎಲ್ಲರಿಗೂ ಆಚ್ಚರಿ. ಆನಂದದಿಂದ 'ಮಗು, ನಿನ್ನ ಬರುವಿಗಾಗಿ ಹಂಬಲಿಸುತ್ತಿದ್ದೆ. ಲೋಕದ ಜನರಿಗೆ ನೀನು ಹುಚ್ಚನಾಗಿ ಕಂಡರೆ, ನಮಗೆ ನೀನು ಅಚ್ಚುಮೆಚ್ಚಿನವನು ಬಾಳು!' ಎಂದು ಆಶೀರ್ವದಿಸಿದರು.

ಗುರುಗಳ ಅನುಗ್ರಹ ಪಡೆದ ಸಿದ್ಧಣ್ಣನನ್ನು ತಾಯಿ ನಾಗಮ್ಮ ಅಪ್ಪಿಕೊಂಡು ಮುದ್ದಿಟ್ಟಳು. ತನ್ನ ಕಂದನು ಪುಣ್ಯವಂತನು ಮನೆತನ ಮುಂದೆ ತರುವನೆಂದು ಹಿಗ್ಗಿದಳು. ಅಷ್ಟರಲ್ಲಿ ಶಿವಯೋಗಿಗಳು:

'ತಾಯಿ, ನಿನ್ನ ಸಿದ್ಧಣ್ಣನನ್ನು ನಮಗೆ ಕೊಡುತ್ತೀಯಾ ?' ಎಂದು ಕೇಳಿದರು.

'ಯಪ್ಪಾ, ಎಲ್ಲಾ ನಿಮ್ಮ ಪುಣ್ಯಾರೀ ತಂದೆ, ಬೇಕಾದರ ತಗೊಳ್ರಿ! ' ಎಂದು ನಗುತ್ತ ಸಹಜವಾಗಿ ನುಡಿದಳು. ಅಷ್ಟಕ್ಕೆ ಸಿದ್ಧಣ್ಣ ಕುಣಿದಾಡುತ್ತ 'ನಾನು ಗೆದ್ದೆ ! ನಾನು ಗೆದ್ದೆ !'ಎಂದು ಮಠದ ತುಂಬ ಓಡಾಡಿದ. ಶಂಕರಲಿಂಗ ಶಿವಯೋಗಿಗಳು ಬಾಲಕನ ಹಿಗ್ಗನ್ನು ಕಂಡು ಆನಂದಭರಿತರಾದರು.

ಅಂದಿನಿಂದ ಸಿದ್ಧಣ್ಣನು ಬಂಥನಾಳ ಶಿವಯೊಗಿಗಳವರ ಅಕ್ಕರೆಯ ಶಿಷ್ಯನಾಗಿ ರೂಪುಗೊಳ್ಳತೊಡಗಿದ. ಕಕ್ಕಳಮೇಲಿಗೆ ಬಲವಂತದಿಂದ ಕರೆದೊಯ್ದರು. ಅಲ್ಲಿಂದ ರಾತ್ರಿಯಲ್ಲಿ ಓಡುತ್ತಾ ಕಲ್ಲು ಮುಳ್ಳೆನ್ನದೆ ಬಂಥನಾಳಕ್ಕೆ ಬಂದ. ಅಕ್ಕನ ಮನೆಯಲ್ಲಿ ಕಾಲಿಡಲಿಲ್ಲ. ಮಠವೇ ಅವನ ಮನೆ. ಗುರುಗಳೇ ಅವನ ಸರ್ವಸ್ವ.

ಮುಂದೆ ಸಿದ್ಧಣ್ಣನ ಇಪ್ಪತ್ತನೆಯ ವರ್ಷಕ್ಕೆ ಶ್ರೀ ಗುರುಗಳಿಂದ ಮನಸಾರ ಶಿಷ್ಯತ್ವದ ದೀಕ್ಷೆ ಪ್ರಾಪ್ತಿ. ಶ್ರೀ ಗುರುವಚನವೇ ಆತನಿಗೆ ವೇದವಾಕ್ಯವಾಯಿತು. ನಿತ್ಯ ಯೋಗ-ಅಂಗ ಸಾಧನೆಗಳ ಬಲದಿಂದ ಕುಸ್ತಿ ಪೈಲ್ವಾನನೆಂದು ಸುತ್ತಮುತ್ತಲೂ ಖ್ಯಾತಿ ಪಡೆದಿದ್ದನು. ಹಾಗೂ ಕಾಯಕ ನಿರತ ಸಿದ್ಧಣ್ಣ ಬಂಥನಾಳ ಮಠದ ಜೀರ್ಣೋದ್ಧಾರದಲ್ಲಿ ಮರಗೆಲಸ ಸ್ವತಃ ಅಚ್ಚುಕಟ್ಟಾಗಿ ಮಾಡಿದ್ದು ಈಗಲೂ ಸಾಕ್ಷೀಭೂತವಾಗಿದೆ. ಅವನ ವಾಣಿ 'ಪ್ರಸಾದವಾಣಿ' ಯಾಗಿ ಪರಿಣಮಿಸಿತು. ದೂರದರ್ಶನ ಶಕ್ತಿ ಶ್ರೀ ಗುರುಚರಣ ಸೇವೆಯಿಂದ ಪ್ರಾಪ್ತಿಯಾಗಿ ಅನಂತ ದೃಶ್ಯಗಳನ್ನು ಕಂಡು ಅಂತರ್ಮುಖಿಯಾಗಿ ತನ್ನಷ್ಟಕ್ಕೆ ತಾನೇ ನಗುವ, ಅಳುವ, ಕೇಕೆ ಹಾಕುತ್ತ ಕುಣಿಯುವ ತರಳೂ ಸಾಧು ಸಿದ್ಧಣ್ಣನನ್ನು ಕಂಡರೆ ಎಲ್ಲರಿಗೂ ಭಯಭಕ್ತಿ! ತನ್ನಮೂವತ್ತನೆಯ ವಯಸ್ಸಿನಲ್ಲಿ ಸಿದ್ಧಲಿಂಗ ಏಕಕಾಲದಲ್ಲಿ ಎರಡು ಸ್ಥಳಗಳಲ್ಲಿ ಕಾಯಕ ನಿರತನಾಗಿ ಕಾಣಿಸಿಕೊಂಡ ಅಪೂರ್ವ ಘಟನೆಗಳಿಂದ ಎಲ್ಲೆಲ್ಲೂ ಅವನ ಖ್ಯಾತಿ ಪ್ರಚಾರವಾಯಿತು! ಅವನ ಶಕ್ತಿ ಫಲಪ್ರದವಾದುದನ್ನು ಕಂಡು ಗುರುಗಳಿಗೆ ಅತ್ಯಾನಂದವಾಯಿತು.

'ಸಿದ್ಧಲಿಂಗಾ, ನೀನಿನ್ನು ನಮ್ಮ ಮಠದಿಂದ ಹೊರಡು!' ಎಂದು ಶಂಕರಲಿಂಗ ಗುರುಗಳ ಅಪ್ಪಣೆ.

'ಯಪ್ಪಾ ಗುರುವೇ, ಈ ಪರದೇಶಿ ಕೂಸಿಗೆ ತಮ್ಮ ಸೇವೆ ಬೇಡವಾಯಿತೇ ?' ಎಂದು ಸಿದ್ಧಲಿಂಗರಿಗೆ ದುಃಖ.

'ನಿನ್ನ ಸೇವೆ ಲೋಕಕ್ಕೆ ಅಗತ್ಯವಾಗಿದೆ. ಹೂಂ, ಈ ಕೂಡಲೇ ಉತ್ತರಾಭಿಮುಖವಾಗಿ ಹೊರಡು! ಇದೇ ಈ ಜೋಳಿಗೆ–ಅದರಲ್ಲಿಹುದು ಒಂದು ರೊಟ್ಟಿ! ಈ ಪ್ರಸಾದವು ನಿನಗೆ ಕಾಮಧೇನುವಾಗಿ ಕಾಪಾಡುತ್ತದೆ!' ಎಂದು ತಲೆ ನೇವರಿಸಿ ಜೋಳಿಗೆಯನ್ನಿತ್ತು ಬೀಳ್ಕೊಟ್ಟಾಗ ಸಿದ್ಧಲಿಂಗ ಸಣ್ಣ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ.

'ಈ ಕೂಸಿಗೆ ತಮ್ಮ ದರ್ಶನವೆಂದು ತಂದೆ!?' ಎಂದು ಅಳುತ್ತ ನಮಸ್ಕರಿಸಿದ.

'ಮಗಾ, ನಾನು ನಿನ್ನ ಭೆಟ್ಟಿಗೆ ಬರುತ್ತೇನೆ! ನೀನು ಗುರುವನ್ನು ಗುರ್ತಿ

ಸಿದರೆ ನಿನ್ನ ಸಂಗಡ ಇರ್ತೀನಿ! ಮರೆತೆಯಾದರೆ . . . ! ' ಎಂದು ಒಳಗೆ ನಡೆದರು; ಹೊರಳಿ ನೋಡಲಿಲ್ಲ.

ತನ್ನ ಮಧ್ಯವಯಸ್ಸಿನಲ್ಲಿ ಶ್ರೀ ಗುರು ಪೀಠದಿಂದ ಹೊರಬಿದ್ದ ಸಿದ್ಧಲಿಂಗ ಭಿಕ್ಷಾಂದೇಹಿ 'ಕಾಯಕ'ದೊಂದಿಗೆ ಹತ್ತು ವರ್ಷಗಳ ಕಾಲ ಭಾರತದ ತುಂಬಾ ಸಂಚರಿಸಿ, ಸಾಧನೆಗೈದು, ಗಿರಿ ಗಹ್ವರಗಳಲ್ಲಿ ತಪವನ್ನಾಚರಿಸಿ, ಗುಡಿ-ಗುಂಡಾರಗಳಲ್ಲಿ ವಾಸ್ತವ್ಯ ಮಾಡಿ ಲಚ್ಯಾಣ ಗ್ರಾಮದ ರುದ್ರಭೂಮಿಯಲ್ಲಿ ತಮ್ಮ ನಾಲ್ವತ್ತನೆಯ ವಯಸ್ಸಿನಲ್ಲಿ ಬಂದು ನೆಲೆಯೂರಿದ ಪ್ರಸಂಗ ರೋಮಾಂಚನಕಾರಿ.

ಸಿದ್ಧಲಿಂಗರ ಸಾಧನೆ.

ಸಿದ್ಧಲಿಂಗರನ್ನು ಮಹಾರಾಜರೆಂದು ಭಕ್ತಾದಿಗಳು ಸಂಬೋಧಿಸಲು ಪ್ರಾರಂಭಿಸಿದ್ದು ಅವರು ಲಚ್ಯಾಣ ಸ್ಮಶಾನದಲ್ಲಿ ಬೀಡಾರ ಮಾಡಿದಂದಿನಿಂದ. ಸುತ್ತಲೂ ಮುಳ್ಳುಕಂಟಿಗಳಿಂದ, ಗೋರಿಗಳಿಂದ, ರುದ್ರಭಯಾನಕವಾದ ಪರಿಸರದಲ್ಲಿ ತನ್ನ ಆಕಳ ಮಣಕ (ಚಿಕ್ಕ ಆಕಳು)ದೊಂದಿಗೆ ಬೀಡಾರ ಮಾಡಿದ ಬೈರಾಗಿಯನ್ನು ಕಂಡು ಜನರು ಬೆರಗಾದರು; ತಲೆಬಾಗಿ ನಮಿಸಿದರು.

ಕೆಲವೇ ದಿನಗಳಲ್ಲಿ ಗ್ರಾಮದ ಹಿರಿಯರು ಸಿದ್ದಲಿಂಗ ಮಹಾರಾಜರಿಗೆ ಗುಡಿಸಲೊಂದನ್ನು ನಿರ್ಮಿಸಿದರು. ಅನೇಕ ಜನ ಬೈರಾಗಿಗಳು ಅವರನ್ನು ಅರಸುತ್ತ ಬರಹತ್ತಿದರು. ಆಗಲೇ ಸ್ಮಶಾನವನ್ನು ಶುದ್ಧಗೊಳಿಸಲು ಸಾಧುಜನರು ಹಾಗೂ ಭಕ್ತರು ಮುಂದಾದರು. ಸಂಸಾರದ ತಾಪತ್ರಯಗಳಲ್ಲಿ, ರೋಗರುಜಿನಗಳಲ್ಲಿ, ಅತ್ಯಾಚಾರ, ಅನ್ಯಾಯಗಳಲ್ಲಿ ನೊಂದು ಬೆಂದವರು ಲಚ್ಯಾಣದ ಆಶ್ರಮಕ್ಕೆ ಬಂದು, ಸಿದ್ಧಲಿಂಗರ ದರ್ಶನ ಹೊಂದಿ ಸಂತೃಪ್ತಿ ಸುಖ ಶಾಂತಿಗಳನ್ನು ಪಡೆಯುಹತ್ತಿದರು. ಹೀಗೆ ಹತ್ತು ವರ್ಷಗಳಲ್ಲಿ ಸಿದ್ಧಲಿಂಗರ ಶಿಷ್ಯರ ಬಳಗ, ಭಕ್ತರ ಸಮುದಾಯ ವೃದ್ಧಿಯಾಗಿ ಶುದ್ಧವಾದ ಆ ರುದ್ರಭೂಮಿಯಲ್ಲಿ ಗುರುಮಠ, ಕರ್ಮಮಠ, ತಪೋನುಷ್ಠಾನಕ್ಕೆ ಗವಿಗಳು ನಿರ್ಮಾಣವಾದವು.

ಈ ಮಧ್ಯದಲ್ಲಿ ಮಹಾರಾಜರು ಜೊತೆಗೆ ತಂದಿದ್ದ ಆಕಳು ಪ್ರಾಪ್ತ ವಯಸ್ಸಿಗೆ ಗರ್ಭಧರಿಸಿ ಹೋರಿ ಕರು ಈಯಿತು. ಹುಟ್ಟಿದ ಕರು ನಾಲ್ಕು ದಿನ ತಾಯಿಯ (ಆಕಳ) ಮೊಲೆ ಉಣ್ಣಲಿಲ್ಲ! ಕರುವಿನ ಚೆಲುವನ್ನು ಉಪವಾಸ ವ್ರತವನ್ನು ಗಮನಿಸಿದ ಸಿದ್ಧಲಿಂಗರು ಕರುವಿನ ಕಾಲಿಗೆರಗಿ ಅತ್ತು ಬಿಟ್ಟರು :

'ಯಪಾs ನನ್ನ ತಂದೆ ಶಂಕರಲಿಂಗಾs, ನೀನು ಈ ರೂಪದಲ್ಲಿ ನಿನ್ನ ಕಂದ ನಿಗೆ ದರ್ಶನ ಕೊಡುವುದನ್ನು ಮರೆತು, ನಾಲ್ಕುದಿನ ನಿನ್ನನ್ನು ಉಪವಾಸ ಬೀಳಿ ಸಿದ ಈ ಮೂರ್ಖನನ್ನು ಕ್ಷಮಿಸು! ನೀನು ಮೊಲೆ ಕುಡಿ ಗುರುವೇ!' ಎಂದು ಬೇಡಿಕೊಂಡರು. ಆಗ ಕರುವು ಆನಂದದಿಂದ ಮೊಲೆ ಕುಡಿಯಪ್ರಾರಂಭಿಸಿತು.

'ನನ್ನ ತಂದೆ ಶಂಕರಾs ಬಂದೆಯಲ್ಲ! ನಾನು ಧನ್ಯ! ನೀನು ನಿಜ ವಾಗಿಯೂ ನನ್ನ ಹಡೆದಪ್ಪ ಶಂಕರಲಿಂಗ ಎಂಬುದನ್ನು ಲೋಕಕ್ಕೆ ಸಾರಬೇಕಾ ದರೆ ಮುಂದೆ ಎಂದೆಂದಿಗೂ ನೀನು ಬ್ರಹ್ಮಚಾರಿಯಾಗಿರಬೇಕು! ಯಾವ ಗೋವುಗಳನ್ನೂ ಕಣ್ಣೆತ್ತಿ ನೋಡಬಾರದು! ಹೂಂಕರಿಸು, ಆದರೆ ಹಾಯ್ದು ಹಿಂಸಿಸಬೇಡ!' ಎಂದು ಬೇಡಿಕೊಂಡರು. ಈ ದೃಶ್ಯವನ್ನು ನೋಡಿದ ಸಾವಿ ರಾರು ಜನರು ಶಂಕರಲಿಂಗ ಕರುವಿಗೆ ನಮಿಸಿದರು. ಮುಂದೆ ಆ ಕರುವು 'ಶಂಕರ ಲಿಂಗ' ಹೆಸರಿನ ಗೂಳಿಯಾಗಿ ಇಪ್ಪತ್ತು ವರ್ಷ ಕಾಲ ಲಚ್ಯಾಣ ಮಠ ದಲ್ಲಿ ತಪೋನಿಷ್ಠವಾದ ರೋಗಿಯಂತೆ ಬ್ರಹ್ಮಚರ್ಯ ವ್ರತದೊಂದಿಗೆ ಸಿದ್ಧ ಲಿಂಗ ಮಹಾರಾಜರ ಅಣತಿಯಂತೆ ವರ್ತಿಸಿತು. ಆ ಗುರು ರೂಪಿ ಗೂಳಿಯ ಸಮಾಧಿಯು ಮಹಾರಾಜರ ಸಮಾಧಿಯ ಮೇಲ್ಭಾಗದಲ್ಲಿ ಪೂಜೆಗೊಳ್ಳುತ್ತಿದೆ. ಅಪರೂಪವಾದ ಇಂಥ ಮಹಿಮೆಯನ್ನು ಸುಕ್ಷೇತ್ರ ಲಚ್ಯಾಣದಲ್ಲಿ ಕಂಡವ ರುಂಟು. ಪವಾಡ ಸತ್ಯವೆಂದು ಹೇಳುವವರುಂಟು. ದೈವೀಶಕ್ತಿಯ ಇಂಥ ಘಟನೆಗಳಿಗೆ ಪವಾಡಗಳೆಂದು ಹೆಸರಿಸುವದು ಸೂಕ್ತವಲ್ಲವೆ?

'ನಾನು ಗುರುವಿನ ಗುಲಾಮ'ನೆಂದು ಸಿದ್ಧಲಿಂಗ ಮಹಾರಾಜರು ಮತ್ತೆ ಮತ್ತೆ ಹೇಳುವರು. ಶ್ರೀ ಗುರುವಿನ ಸ್ಮರಣೆಯಲ್ಲೇ ಅವರ ಸಕಲ ಸಾಧನೆ ಗಳಿಗೂ ಯಶಸ್ಸು. 'ಅಪ್ಪ', 'ಅಪ್ಪ' ಎಂದೇ ಎಲ್ಲರನ್ನೂ ಕರೆಯುವುದು ಅವರ ಸ್ವಭಾವ.

ಸಿದ್ಧಲಿಂಗ ಮಹಾರಾಜರಿಗೆ 'ಕ್ಷೀರಾ ಲಿಂಗ', 'ಯಲ್ಲಾಲಿಂಗ' ಮತ್ತು 'ಗಿರಿಜಾ ಮಾತೆ' ಈ ಮೂವರು ಹೆಸರಾಂತ ಶಿಷ್ಯರು. ಅವರನ್ನು ಆಶೀರ್ವದಿಸಿ ಬೀಳ್ಕೊಟ್ಟರು. ಬೆಳಗಾವಿ ಜಿಲ್ಲೆಯ 'ಮುಗಳಖೋಡ'ದಲ್ಲಿ ಯಲ್ಲಾಲಿಂಗ ಮಹಾರಾಜರ ಮಠ ನಾಡಿನ ತುಂಬ ಪ್ರಸಿದ್ಧಿ. ಅವರಿಗೆ ಈಗ ೧೧೦ ವರ್ಷ ವಯಸ್ಸು, 'ಗಿರಿಜಾ ಮಾತೆ' ಅವರು ೧೦೫ ವಯಸಿನ ಮಹಾ ತ್ಯಾಗಮಯಿ ದೇವತೆ. ಅವರ ಮಠ ಜೋಳಿಗಾವದಲ್ಲಿದೆ, ಅದು ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಪುಣ್ಯಧಾಮ. ಮುನ್ನೂರು ಬಡವಿದ್ಯಾರ್ಥಿಗಳಿಗೆ ಈ ತಾಯಿ ಆಶ್ರಯವಿದೆ. 'ಕ್ಷೀರಾಲಿಂಗ' ಮಹಾರಾಜರು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಏಳು ಕ್ಷೇತ್ರಗಳನ್ನು ಶ್ರೀ ಸಿದ್ಧಲಿಂಗ ಮಹಾರಾಜರ ಹೆಸರಿನಲ್ಲಿ ಸ್ಥಾಪಿಸಿದರು. ಪುಣೆಯ ಹತ್ತಿರದ ಹಡಪಸರ ಮತ್ತು ರಾಯಚೂರು ಜಿಲ್ಲೆಯ 'ಕೃಷ್ಣಾ' ಮಠಗಳು ತುಂಬಾ ಪ್ರಸಿದ್ಧಿ ಪಡೆದಿವೆ.

೧೯೩೫ ರಲ್ಲಿ ಸುಕ್ಷೇತ್ರ ಲಚ್ಯಾಣ ಮಠವನ್ನು ಹಾಗೂ ತಮ್ಮ ಸಾಧನೆಯ ಸರ್ವಸ್ವವನ್ನು ಬಂಥನಾಳರ ಶ್ರೀ ಗುರು ಪೀಠಕ್ಕೆ ಸಮರ್ಪಿಸಿದ ಶ್ರೀ ಸಿದ್ಧಲಿಂಗ ಮಹಾರಾಜರು, ಪೂಜ್ಯ ಸಂಗನ ಬಸವ ಶಿವಯೋಗಿಗಳವರ ಪಾದಕಿಂಕರರಾಗಿ ಬೆಳಗಿದರು. ಕಾಲಜ್ಞಾನ ಸೂಚನೆ ಅವರ ಸಹಜ ಸ್ವಭಾವ. ೧೯೪೦ರ ನಂತರ ಸುಕ್ಷೇತ್ರ ಲಚ್ಯಾಣದಲ್ಲಿ ಜರುಗಬಹುದಾದ ಅಪೂರ್ವ ಸಮಾರಂಭಗಳನ್ನು ಒಂದೊಂದಾಗಿ ೧೯೩೫ರಲ್ಲಿಯೇ ಸಾವಿರಾರು ಜನರೆದುರು ಘೋಷಿಸಿದರು. ಇಚ್ಛಾನುಸಾರ ತಮ್ಮ ಸಂಕಲ್ಪದಂತೆ ತಮ್ಮ ಸಮಾಧಿಯನ್ನು ಸಿದ್ಧಗೊಳಿಸಿ ೧೯೩೭ ಸೆಪ್ಟಂಬರ್ ೧೮ರಂದು ಪ್ರಾತಃಕಾಲದ ಪೂಜೆಯನ್ನು ಪೂರೈಸಿ ಶ್ರೀ ಗುರುವಿನ ಸ್ಮರಣೆಯೊಂದಿಗೆ ದೇಹ ಬಿಟ್ಟರು. ಅವರ ಅಂತರ್‌ಜ್ಞಾನದ ಕರೆಯನ್ನು ಕೇಳಿದ ಮೂವರೂ ಶಿಷ್ಯರು ಅಂತ್ಯಕಾಲದಲ್ಲಿ ತಾವಾಗಿಯೇ ಲಚ್ಯಾಣಕ್ಕೆ ದಯಮಾಡಿಸಿದಾಗ ಊರಿಗೆಲ್ಲಾ ಅಚ್ಚರಿ !

ಸುಕ್ಷೇತ್ರ ಲಚ್ಯಾಣದ ಶ್ರೀ ಸಿದ್ಧಲಿಂಗ ಮಹಾರಾಜರ ದಿವ್ಯಚರಿತ್ರೆ ಹಾಗೂ ಅಪೂರ್ವವಾದ ಸಾಧನೆ ಇಂದಿಗೂ ಪೂರ್ಣಗೊಂಡಿಲ್ಲ. ಅವರ ಸುಪ್ತ ಚೇತನದ ಫಲವನ್ನು ಈಗಲೂ ನಂಬಿಗೆಯುಳ್ಳ ಭಕ್ತರು ಪಡೆಯುತ್ತಿದ್ದಾರೆ. ಮುಂದೆಯೂ ಪಡೆಯುತ್ತಾರೆಂಬುದರಲ್ಲಿ ಸಂದೇಹವೇ ಇಲ್ಲ. ★

ಸರಿತಾ ಜ್ಞಾನಾನಂದ,
ಬಿ.ಎ., ಬಿ.ಎಡ್., 'ಪ್ರವೀಣ್'

೫

ಪೋತಲೂರು ವೀರಬ್ರಹ್ಮೇಂದ್ರ ಸ್ವಾಮಿ

ಸಂತಾನಾಪೇಕ್ಷೆಯಿಂದ ತೀರ್ಥಯಾತ್ರಾರ್ಥಿಗಳಾಗಿದ್ದ ಪರಿಪೂರ್ಣಾಚಾರ್ಯ ಪ್ರಕೃತಮಾಂಬೆಯರ ಕೋರಿಕೆ ಮಾರ್ಗದಲ್ಲಿಯೇ ಈಡೇರಿ ಅತ್ರಿಮುನೀಂದ್ರನ ಆಶ್ರಮದಲ್ಲಿ ಬಳಿ ಪ್ರಸವವಾಗಲು, ಆಶ್ರಮ ವಾಸಿಗಳು ಆ ದಂಪತಿಗಳಿಗೆ ನೆರವಾದರು. ಅದೇನು ವಿಪರ್ಯಾಸವೋ ಕೂಸು ಹುಟ್ಟುತ್ತಲೇ ತಾಯಿ - ತಂದೆಗಳಿಬ್ಬರೂ ಅಕಾಲ ಮರಣಕ್ಕೆ ತುತ್ತಾಗಿ ಮಗುವು ಆಶ್ರಮಕ್ಕೆ ಸೇರಿತು. ಪಾಪಘ್ನಿ ಪೀಠಾಧ್ಯಕ್ಷರಾಗಿದ್ದ ವೀರಭೋಜೇಂದ್ರಾಚಾರ್ಯ ಸ್ವಾಮಿಗಳು ಪತ್ನೀ ಸಮೇತರಾಗಿ ಕಾಶೀ ಯಾತ್ರೆಯನ್ನು ಮುಗಿಸಿಕೊಂಡು ಬರುತ್ತಿದ್ದರು. ಅವರು ಅತ್ರಿ ಮುನಿಗಳ ಆಶ್ರಮದಲ್ಲಿ ತಂಗಿದರು. ಅವರಿಗೂ ಸಂತಾನಾಪೇಕ್ಷೆಯಿದ್ದರೂ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಈ ಅನಾಥ ಶಿಶುವನ್ನು ದತ್ತಾಗಿ ಸ್ವೀಕರಿಸುವುದು ಸೂಕ್ತವೆನಿಸಿದ್ದಕ್ಕೆ ಅತ್ರಿಮುನೀಂದ್ರರೂ ಒಪ್ಪಿದರು. ಮಗು ಪಾಪಘ್ನಿ ಪೀಠಾಧಿಕಾರಿಗಳಿಗೆ ಸುತನಾದ.

ಮಗುವಿಗೆ ಐದುವರ್ಷಗಳಾಗುತ್ತಿದ್ದಂತೆಯೇ ಶುಭ ಮುಹೂರ್ತದಲ್ಲಿ ಬ್ರಹ್ಮೋಪದೇಶವನ್ನು ಮಾಡಿ ವೇದ-ಶಾಸ್ತ್ರಾಭ್ಯಾಸ ಪ್ರಾರಂಭಿಸಿದರು. ಅತ್ರಿ ಮುನಿ 'ವೀರನಾರಾಯಣ' ಎಂದು ಕರೆಯುತ್ತಿದ್ದ ಮಗು 'ವೀರಂಭಟ್ಲು' ಎಂದು ರೂಢಿಗೆ ಬಂದಿದ್ದ. ವೀರಭೋಜೇಂದ್ರ ಸ್ವಾಮಿಗಳು ಕಾಲಧರ್ಮ ಬಾಲ್ಯ ವನ್ನು ಹೊಂದಿದರು. ಮಗನ ವಿದ್ಯಾಭ್ಯಾಸ ಪೀಠದ ಆಡಳಿತ ನಿರ್ವಹಣೆಯನ್ನು ವೀರಪಾಪಮಾಂಬೆಯೇ ಗಮನಿಸುತ್ತಾ ಪತಿಯ ವಿಯೋಗ

ವನ್ನು ಮರೆತಂತಿದ್ದರು. ಹನ್ನೆರಡು ವರ್ಷಗಳ ಪ್ರಾಯಕ್ಕೆ ಬರುತ್ತಲೇ ಗಿರಿ ಗಹ್ವರಗಳಲಿ ತಪಸನ್ನಾಚರಿಸಬೇಕೆಂಬ ತನ್ನ ನಿರ್ಧಾರವನ್ನು ತಾಯಿಯ ಮುಂದಿರಿಸಿ ಅದಕ್ಕೆ ಆಕೆಯ ಅಪ್ಪಣೆಯನ್ನು ಕೋರಿದ ವೀರಂಭಟ್ಟು.

"ಈ ಕಿರಿಯ ವಯಸ್ಸಿನಲ್ಲಿ ಇದೇನು ವೈರಾಗ್ಯ? ನಿನ್ನ ಸಾಮೀಪ್ಯ ನನ್ನ ವೈಧವ್ಯದ ದುಃಖವನ್ನು ಮರೆಸಿದೆ. ಈ ಮಠಕ್ಕಿಂತಲೂ ಪ್ರಶಾಂತ ಸ್ಥಳ ನಿನಗೆ ಬೇರೆಲ್ಲಿ ದೊರಕೀತು? "

"ಅಮ್ಮ ನಿನ್ನಲ್ಲಿಯ ಪುತ್ರವಾತ್ಸಲ್ಯ ಹೀಗೆ ನುಡಿಸುತ್ತಿದೆ. ನಾನು ಕಿರಿಯನೆಂದು ನೀವು ಶಂಕಿಸಬೇಡಿ. ವಿಶ್ವಕರ್ಮಭಗವಾನನ ಅನುಗ್ರಹ ಒಂದೇ ಸಾಲದೇ? ಈ ಮಾಯೆಯ ಬಂಧನ ಕಿತ್ತೊಗೆದು ನನ್ನನ್ನು ಆಶೀರ್ವದಿಸಿ ಕಳುಹಿಸಿ ಕೊಡಮ್ಮಾ" ಎಂದು ಹಲವುಬಾರಿ ಪ್ರಾರ್ಥಿಸಿದ ಆ ಬಾಲಕ.

"ನೀನು ಈ ಪೀಠಾಧ್ಯಕ್ಷನಾಗಿ ಶಿಷ್ಯರ ಪಾಲನೆ ನಡೆಸುವುದನ್ನು ಕಾಣ ಬೇಕೆಂಬ ಆಕಾಂಕ್ಷೆಯಿಂದಲೇ ನಿಮ್ಮ ತಂದೆಯವರ ಅಗಲಿಕೆಯನ್ನೂ ಸಹಿಸಿ ಕೊಂಡಿದ್ದೇನೆ. ನೀನು ಏನು ಹೇಳಿದರೂ ಈ ಸ್ಥಳದಿಂದ ನೀನು ಬೇರೆಯಾಗು ವುದು ನನಗೆ ಸಮ್ಮತವಿಲ್ಲ" ತಾಯಿ ಒಂದೇ ಮಾತು ಹೇಳಿದಳು.

"ಅಮ್ಮಾ, ಹೀಗೆ ಹೇಳಬೇಡಿ. ಭಾರತವೆಲ್ಲಾ ಪರ್ಯಟನೆ ಮಾಡಿ ಧರ್ಮೋಪದೇಶವನ್ನು ನಡೆಸಿ, ಮಾನವ ಕಲ್ಯಾಣ ಸಂಪಾದಿಸುವುದು ನನ್ನ ಗುರಿ· ಹಲವು ಪೀಠಗಳ ಉದ್ಧಾರ ಮಾಡಬೇಕಾಗಿರುವವನು ಒಂದು ಪೀಠಕ್ಕೇ ಅಂಟಿ ಕೊಳ್ಳುವುದು ಸರಿಯೇ? ಪಾಪಘ್ನಿಪೀಠಾಧಿಪತ್ಯಕ್ಕಾಗಿ ಬೇರೆಯವರನ್ನ ನಿಯಮಿಸಿ ನನ್ನನ್ನು ಬಿಟ್ಟುಕೊಡಿ." ಎಂದು ಪ್ರಾರ್ಥಿಸಿ ಆಕೆಗೆ ತತ್ತ್ವ ಬೋಧನೆಯನ್ನು ಮಾಡಿ, ಆಕೆಯನ್ನು ಆವರಿಸಿದ್ದ ಅಜ್ಞಾನದ ತೆರೆಯನು ತೊಲಗಿಸಿ ವೀರಂಭಟ್ಟು ಪಾಪಘ್ನಿ ಮಠದಿಂದ ಪ್ರಯಾಣವಾದರು.

ಸಾಮಾನ್ಯ ವಿದ್ಯಾ ವಿವೇಕಗಳನ್ನು ಪಡೆದಿದ್ದವರ್‍ಯಾರೂ ಅಯಾಚಿತವಾಗಿ ಬಂದಿದ್ದ ಶ್ರೀಮಂತ ಪಾಪಘ್ನಿಮಠದ ಸ್ವಾಮ್ಯವನ್ನು ದೂರೀಕರಿಸಿ ಹೋಗುತ್ತಿರ ಲಿಲ್ಲ. ಇತರ ಪೀಠಾಧಿಪತಿಗಳಂತೆ ಅಥವ ಸ್ವಲ್ಪ ಹೆಚ್ಚಾಗಿಯೇ ವೈಭವದ ಜೀವನ ಸಾಗಿಸಬಹುದಾಗಿತ್ತು. ತನ್ನ ಮುಂದಿನ ಗುರಿಯನ್ನು ಅರಿತಿದ್ದರಿಂದ

ತಾನು ಮಾತ್ರವೇ ಅಲ್ಲದೆ ತನ್ನ ತಾಯಿಗೂ ತಿಳಿವನ್ನು ಕೊಟ್ಟು ಲೋಕ ಸಂಗ್ರಹಾರ್ಥನಾಗಿ ವೀರಗುರು ದೇವನು ಹೊರ ಹೊರಟಿದ್ದ.

ಕೆಲಕಾಲ ಭಕ್ತಿ-ಜ್ಞಾನ-ಕರ್ಮಯೋಗಗಳ ಪ್ರಚಾರ ಸಾಗಿಸುತ್ತಾ, ತೀರ್ಥದರ್ಶನ ಮಾಡಿಕೊಂಡು, ಮಾನವನನ್ನು ಮರ್ತ್ಯಧರ್ಮದಿಂದ ದಿವ್ಯಧರ್ಮಕ್ಕೆ ಕೊಂಡೊಯ್ಯಬಲ್ಲ ಏಕೈಕ ಸಾಧನವಾದ ತಪವನ್ನಾಚರಿಸಿದರು. ಹರಿಹರಪುರದಲ್ಲಿ ತಪದಲ್ಲಿದ್ದಾಗ ಆನಂದಭೈರವ ಯೋಗಿ ಎಂಬ ಕ್ಷತ್ರಿಯನಿಗೆ ಉಪದೇಶಿಸಿ ಕೃತಾರ್ಥನನ್ನಾಗಿ ಮಾಡಿದರು. ಉತ್ತರ ದೇಶದ ತೀರ್ಥ ಕ್ಷೇತ್ರಗಳನ್ನು ದರ್ಶಿಸಿ ಹಿಂತಿರುಗುತ್ತಾ ಶ್ರೀಶೈಲ, ಮಹಾನಂದಿಗಳನ್ನು ದರ್ಶಿಸಿ ಧರ್ಮ ಪ್ರಚಾರ ಮಾಡುತ್ತಾ ಅಂತಿಮವಾಗಿ ಬನಗಾನಪಲ್ಲೆಗೆ ಬಂದರು.

ಬನಗಾನಪಲ್ಲೆ ವಾಸ

ಬನಗಾನ ಪಲ್ಲೆಯಲ್ಲಿ ಗರಿಮರೆಡ್ಡಿ ವೆಂಕಟರೆಡ್ಡಿಯವರ ಮನೆಯು ಹೆಸರಾದದ್ದು. ವೆಂಕಟರೆಡ್ಡಿಯವರ ಪತ್ನಿ ಅಚ್ಚಮ್ಮ ಪರಮ ಸಾಧ್ವಿ. ಅತಿಥಿ ಅಭ್ಯಾಗತರನ್ನು ಸತ್ಕರಿಸುವುದರಲ್ಲಿ ಅತ್ಯಂತ ಶ್ರದ್ಧೆಯಿದ್ದ ಗೃಹಿಣಿ. ಯೋಗಿಗಳ, ಸಾಧು-ಸಂತರ ಶುಶ್ರೂಷೆಯಲ್ಲಿ ಆಸಕ್ತಳು. ಗೋಪಾಲಕನಾಗಿ ಆಕೆಯ ಮನೆಯಲ್ಲಿ ಊಳಿಗವನ್ನು ಮಾಡಲು ಆಕೆಯನ್ನು ಒಪ್ಪಿಸಿದ. ಶ್ರೀಕೃಷ್ಣನು ಗೋಪಾಲನೆ ಮಾಡಿ ಭಾರತೀಯರಿಗೆ ಗೋಮಾತೆಯು ಪೂಜನೀಯಳೆಂದು ನಿರೂಪಿಸಿದಂತೆ ವೀರಗುರುವು ಗೋಪಾಲನೆ ನಡೆಸಿ ಅದೇ ಮಹಾ ಆದರ್ಶವನ್ನೇ ತಿಳಿಯ ಹೇಳಿದ್ದಾರೆ. ಕೇವಲ ಗೋಕ್ಷೀರವನ್ನೇ ಆಹಾರವನ್ನಾಗಿ ಮಾಡಿಕೊಂಡು ಗೋವುಗಳ ಹಿಂಡನ್ನು ಒಂದು ಕಡೆ ಬಿಟ್ಟು ತಾವು ಗುಹೆಯೊಂದರಲ್ಲಿ ಕಾಲಜ್ಞಾನ ರಚಿಸುತ್ತಾ ಇದ್ದರು. 'ವೀರಪ್ಪ'ನ ವರ್ತನೆಯನ್ನು ಗಮನಿಸಲು ಬಂದ ದಂಪತಿಗಳಿಗೆ ಪದ್ಮಾಸನದಲ್ಲಿ ಮಂಡಿತನಾಗಿದ್ದ ಆತನ ಸುತ್ತಲೂ ಅಲೌಕಿಕವಾದ ದಿವ್ಯ ತೇಜೋವಲಯ, ಘಳಿಗೆಘಳಿಗೆಗೂ ಒಂದೊಂದು ರೀತಿಯಲ್ಲಿ ಕಾಣಿಸುತ್ತಿದ್ದುದನ್ನು ಕಂಡು–ಬ್ರಹ್ಮ, ವಿಷ್ಣು, ಶಿವ, ಪಂಚಮುಖದೇವ–ಕೈ ಮುಗಿದು ಆತನನ್ನು ಪ್ರಾರ್ಥಿಸಿದರು. ಆ ದಂಪತಿಗಳಿಗೆ ಗುರುದೇವ ಮಂತ್ರೋಪದೇಶವನ್ನು ಮಾಡಿ **ಶೂದ್ರರಿಗೆ ಮಂತ್ರಾಧಿಕಾರವಿಲ್ಲ** ಎಂಬ ಸಂಕುಚಿತ ಸಂಪ್ರದಾಯವನ್ನು ಕುರುಡಾಗಿ

ಅನುಸರಿಸಬಾರದೆಂದು, ಶೂದ್ರನಾಗಲಿ, ಬ್ರಾಹ್ಮಣನಾಗಲಿ ಹೃದಯ ಸಂಸ್ಕಾರ, ಯೋಗ್ಯತೆಗಳ ಮೂಲದಿಂದಲೇ ಬ್ರಹ್ಮವಿದ್ಯೆಯು ಸಿದ್ಧಿಸುತ್ತದೆ ಎಂದು ಸಾರಿದರು.

ಇದೇ ಕಾಲದಲ್ಲಿಯೇ ಅನ್ನಾಜಯ್ಯ ಎಂಬ ಒಬ್ಬ ಬ್ರಾಹ್ಮಣ ಭಕ್ತ ಗುರುದೇವರ ಶಿಷ್ಯರಾಗಿ ಸೇರಿದರು. ಅವರ ಸೇವಾ ಶುಶ್ರೂಷೆಗಳಿಗೆ ಮೆಚ್ಚಿ ಮಂತ್ರ-ಯೋಗಾದಿಗಳನ್ನು ಉಪದೇಶಿಸಿ, ಅನೇಕ ಕಾಲಜ್ಞಾನ ರಹಸ್ಯಗಳನ್ನೂ ಬೋಧಿಸಿದರು. ವೀರಗುರುದೇವರನ್ನು ಆಶ್ರಯಿಸಿ ಅತ್ಯಂತ ಶೀಘ್ರವಾಗಿ ಕೃತಾರ್ಥರಾದವರಲ್ಲಿ ಅನ್ನಾಜಯ್ಯ ಅಗ್ರೇಸರರು. ಗುರುದೇವರು ತಾವು ರಚಿಸಿದ ಕಾಲಜ್ಞಾನವೆಲ್ಲವನ್ನೂ ಅನ್ನಾಜಯ್ಯನವರಿಗೆ ಒಪ್ಪಿಸಿದರು. ಅವರಿಂದಲೇ ಕಾಲಜ್ಞಾನವು ದೇಶವೆಲ್ಲಾ ಪ್ರಚಾರಕ್ಕೆ ಬಂದದ್ದು.

ವೀರಗುರದೇವರು ಬನಗಾನಪಲ್ಲೆಯಲ್ಲಿ 'ನೇಲ ಮಠ' ವನ್ನು ಸ್ಥಾಪಿಸಿ ಅಲ್ಲೊಂದು ಶಿವಲಿಂಗವನ್ನು ಪ್ರತಿಷ್ಠಿಸಿದರು. ತಮ್ಮ ಕಾಲಜ್ಞಾನದ ತಾಳೆಯಗರಿಗಳನ್ನು ಅಚ್ಚಮ್ಮನವರ ಮನೆಯಲ್ಲಿ ಭದ್ರಪಡಿಸಿ ಅಲ್ಲಿಂದ ಮುಂದೆ ಹೊರಟರು [ದುವ್ವೂರಿನಲ್ಲಿ ಕೆಲಕಾಲವಿದ್ದು, ಅಲ್ಲಿಯ ಕಾಳಿಕಾ ದೇವಾಲಯದ ನಿರ್ಮಾಣವನ್ನು ನಡೆಸಿದರೆಂದು ಹೇಳುತ್ತಾರೆ].

ರಾಜಯೋಗ

ಇದುವರೆವಿಗೂ ಬ್ರಹ್ಮಚರ್ಯಾಶ್ರಮದಲ್ಲಿದ್ದ ಗುರುದೇವರು ಗಾರ್ಹಸ್ಥ್ಯ ಧರ್ಮವನ್ನೂ ಪಾಲಿಸಿ ಲೋಕಕ್ಕೆ ಪರಮಾದರ್ಶವನ್ನು ತೋರಬೇಕೆಂದು ಬಯಸಿದರು. ಆಗ್ಗೆ ಬುದ್ಧ, ಶಂಕರಾಚಾರ್ಯರು ಸಂಸಾರದಲ್ಲಿ ನೀರಸವನ್ನು ಪ್ರಚಾರಕ್ಕೆ ತಂದು ಸಂನ್ಯಾಸವನ್ನು ಶ್ರೇಷ್ಠವೆಂದು ತೋರಿದ್ದರು. ಇದು ಸಲ್ಲದು. ಜಗತ್ತಿಗೆ ಉಪಕಾರಿಯಾಗಿ ಬದುಕಲು ಗೃಹಸ್ಥನಿಂದಲೇ ಸಾಧ್ಯವೆಂಬುದನ್ನು ತೋರಿಸಲು ಆಜನ್ಮ ಬ್ರಹ್ಮಜ್ಞನಾದ ಬ್ರಹ್ಮಯ್ಯ ಗೃಹಸ್ಥನಾಗಬೇಕಾಯಿತು. 'ರಾಜಯೋಗ'ವೆನ್ನುವ ಈ ಮಾರ್ಗ ಆರ್ಷೇಯವಾದುದು. ಪ್ರಾಚೀನ ಋಷಿಗಳು ಅನುಸರಿಸುತ್ತಿದ್ದ ಕ್ರಮ. ಈ ಮಹಾ ಆದರ್ಶವನ್ನು ತೋರಬೇಕೆಂದು ಪೆದಕೊಮರ್ಲಗ್ರಾಮದ ಶಿವಕೋಟಾಚಾರ್ಯರ ಮಗಳಾದ ಗೋವಿಂದಮ್ಮನನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ಸುಗುಣ ಖನಿ. ಪತಿಸೇವಾ ಪರಾಯಣೆ. ಪುಣ್ಯಸಾಧ್ವೀಮಣಿ. ಇವರಿಂದ ಅವರ ಗೃಹಜೀವನವು ಸುಖಕರವಾಗಿತ್ತು. ಗೋವಿಂದಮಾಂಬಾ

ವೀರಬ್ರಹ್ಮಯೋಗಿಗಳ ವಿವಾಹವು ಪಾರ್ವತೀ ಪರಶಿವರ ದಾಂಪತ್ಯದಂತೆ ಜಗತ್ಕಲ್ಯಾಣಕಾರಕವಾದದ್ದು. ವಿಶ್ವಕರ್ಮ ದೇವನ ಪಂಚ ಪುತ್ರರಂತೆ ಈ ದಂಪತಿಗಳಿಗೂ ಗೋವಿಂದಯ್ಯ, ಸಿದ್ಧಲಿಂಗಯ್ಯ, ಶಿವರಾಮಯ್ಯ, ಓಂಕಾರಯ್ಯ, ಪೋತಲೂರಯ್ಯ ಐದುಮಂದಿ ಗಂಡು ಮಕ್ಕಳು, ವೀರನಾರಾಯಣಮ್ಮ ಎಂಬ ಮಗಳೂ ಜನಿಸಿದರು.

ಬಾಲ್ಯದಲ್ಲಿ ವೀರಪ್ಪಯ್ಯ, ವೀರನಾರಾಯಣ, ವೀರಪ್ಪ ಮುಂತಾಗಿ ಕರೆಯಲ್ಪಡುತ್ತಿದ್ದು ಕಂದಿಮಲ್ಲಯಪಲ್ಲಿ ಪ್ರವೇಶಿಸಿದನಂತರ ಬ್ರಹ್ಮಮು ಎಂದು ಹೆಸರು ಪಡೆದರು. ಆಗ್ಗೇ ಅವರ 'ಅಹಂ ಬ್ರಹ್ಮಾಸ್ಮಿ' ಎಂಬ ಮಹಾ ವಾಕ್ಯವನ್ನು ಅನುಭೂತಿಗೆ ತಂದುಕೊಂಡಿದ್ದು ಮಾತ್ರವೇ ಅಲ್ಲದೆ **ನೇನೇ ಬ್ರಹ್ಮಮುರಾ ಪಾಮರುಲಾರ ನೇನೇ ಬ್ರಹ್ಮಮುರಾ !** ಎಂಬ ತತ್ವವನ್ನು ಬರೆದು ಪ್ರಚಾರಕ್ಕೆ ತಂದಿದ್ದರು. ಆದ್ದರಿಂದ ಆತನ ಶಿಷ್ಯರು ಮಾತ್ರವೇ ಅಲ್ಲದೆ ಇತರರೂ ಸಾಕ್ಷಾದಕ್ಷರ ಪರಬ್ರಹ್ಮನೆಂದು ಭಾವಿಸಿ **ಬ್ರಹ್ಮಮು** ಎಂದೇ ಕರೆದರು. ಬಾಲ್ಯದ ನಾಮಗಳಲ್ಲಿ ವೀರ ಶಬ್ದವು ಇದಕ್ಕೆ ಸೇರಿಕೊಂಡು **ವೀರಬ್ರಹ್ಮೇಂದ್ರ ಸ್ವಾಮಿಗಳು** ಎಂದು ಕರೆದರು. ಇದರಿಂದಲೇ ಶ್ರೀಮದ್ವೀರನಾರಾಯಣಾಯ ನಮಃ, ಶ್ರೀ ವೀರಬ್ರಹ್ಮಣೇ ನಮಃ ಮಂತ್ರಗಳು ಈ ಮಹನೀಯರ ಉಪಾಸನಾ ಮಂತ್ರಗಳಾಗಿ ರೂಢಿಯಲ್ಲಿವೆ.

ನಮ್ಮ ಗುರುದೇವರು ಗೃಹಸ್ಥರಾದ ನಂತರ ಧನಾರ್ಜನೆಗೆ ಸಾಧನವಾಗಿ ತಮಗೆ ಬಾಲ್ಯದಿಂದ ಪರಂಪರೆಯಿಂದ ಬಂದಿದ್ದ ವೇದವಿದ್ಯೆ(ಪೌರೋಹಿತ್ಯ)ಯನ್ನು ಸಾಧನವನ್ನಾಗಿರಿಸಿಕೊಂಡು ಅನಾಯಾಸವಾಗಿ ಧನ–ಧಾನ್ಯವನ್ನು ಗಳಿಸಿ ಜೀವನ ಸಾಗಿಸುವುದು ಸುಲಭವಾಗಿತ್ತು. ಈ

ಶಿಲ್ಪಯೋಗ

ರೀತಿಯ ಸುಲಭ ಜೀವನಕ್ಕೆ ಅವರು ಆಕರ್ಷಿತರಾಗಲಿಲ್ಲ. ಶ್ರೇಷ್ಠ ಧರ್ಮವಾದ ಶಿಲ್ಪಕರ್ಮವನ್ನು ಸಾಗಿಸುತ್ತ ಸಂಸಾರ ನಿರ್ವಹಣೆ ಸಾಗಿಸಿದರು. ಸಕಲ ಶಿಲ್ಪಕಲಾ ಕೋವಿದರಾದ ಅವರಿಗೆ ತಿಳಿಯದ ಶಿಲ್ಪವಿರಲಿಲ್ಲವಾದರೂ ಆ ಪ್ರದೇಶಕ್ಕೆ ಆವಶ್ಯಕವಾದ ಕಬ್ಬಿಣ ಹಾಗೂ ಶಿಲಾ ಶಿಲ್ಪ ಸಾಗಿಸಿದರು. ವಾಸ್ತುಶಿಲ್ಪದಲ್ಲೂ ಅವರು ಕೆಲಸ ಮಾಡಿರುವಂತೆ ತೋರಿ ಬರುತ್ತದೆ. **ಶಿಲ್ಪಮಧ್ಯಯನಂ ನಾಮವೃತ್ತಂ**

ಬ್ರಾಹ್ಮಣ ಲಕ್ಷಣವಮ್ ಎಂಬುದೇ ಅವರ ಜೀವನದ ಪರಮ ಧ್ಯೇಯವಾಗಿ ಮಹಾಬ್ರಾಹ್ಮಣರಾಗಿದ್ದರು. ಸಾರಸ್ವತ ವಿದ್ಯೆಗೆ ಕರ್ಮವಿದ್ಯೆಗಳ ನೆರವು ಇಲ್ಲದೆ ಪುರುಷಾರ್ಥ ಸಾಧನೆಯು ಸಾಧ್ಯವಿಲ್ಲ. ಇದು ಕೇವಲ ವ್ಯಕ್ತಿಯ ಬಾಳ ನಿರ್ವಹಣೆಯ ಪ್ರಶ್ನೆಯಲ್ಲ. ಆತನ ಹೃದಯದಲ್ಲಿ ವಿಶಾಲ ಭಾರತ ಮಾತೆಯೇ ಪ್ರತಿಫಲಿಸಿದ್ದಳು. ದಾಸ್ಯದಲ್ಲಿ ಸಿಕ್ಕಿಬಿದ್ದಿದ್ದು ಎಲ್ಲಾ ರಂಗ ಗಳಲ್ಲೂ ಹಿಂದೆ ಸರಿಯುತ್ತಿದ್ದ ಭಾರತದ ಪ್ರಗತಿಗೆ ಶಿಲ್ಪವೃತ್ತಿಗಳೇ ದಿವ್ಯೌಷಧವೆಂದು ಈ ಮಹನೀಯರು ಈ ರೀತಿಯ ಆದರ್ಶವನ್ನು ಸಾರಿದರು. ಭಾರತಕ್ಕೇ ಏನು ಜಗತ್ತಿನ ಯಾವ ರಾಷ್ಟ್ರದ ಪ್ರಜೆಗಾದರೂ ಶಿಲ್ಪಕರ್ಮಾನು ಷ್ಠಾನವು ಆವಶ್ಯಕ ಅರ್ಥ ಸಂಗ್ರಹವನ್ನು ನೀಡಬಲ್ಲ ಉತ್ತಮ ಸಾಧನವೆಂದು ವಿಶ್ವಮಾನವ ಧರ್ಮವನ್ನು ತಾವೇ ಪಾಲಿಸುತ್ತಾ ಬೋಧಿಸಿದರು. ಭಾರತ ದೇಶದಲ್ಲಿ ಶಿಲ್ಪಲಕ್ಷ್ಮಿ ತಾಂಡವಿಸುತ್ತಿದ್ದಾಗ ನಮ್ಮ ಐಹಿಕಾಮುಷ್ಮಿಕಗಳು ಹೇಗೆ ಸಾಗುತ್ತಿದ್ದವೆಂಬುದನ್ನು ನಮ್ಮ ಪ್ರಾಚೀನ ಚರಿತ್ರೆ ಹೇಳುತ್ತದೆ. ಈ ಅಂಶವನ್ನೇ ವೀರಬ್ರಹ್ಮೇಂದ್ರ ಸ್ವಾಮಿಗಳು ಅನೇಕ ನವಾಬರಲ್ಲಿ ಹೇಳಿ ಅವರಿಂದ ಶಿಲ್ಪವಿದ್ಯಾರ್ಜನೆಯನ್ನು ನಡೆಸಿದ್ದಾರೆ. ಇತ್ತೀಚಿನ ಗಾಂಧೀಜಿಯವರು ದೇಶ ಕಲ್ಯಾಣಕ್ಕಾಗಿ ಸಾರಸ್ವತ ವಿದ್ಯೆಗಳೊಂದಿಗೆ ವೃತ್ತಿ ವಿದ್ಯೆಗಳೂ ಸೇರ ಬೇಕೆಂದು ಹೇಳುತ್ತಿದ್ದುದನ್ನು ಗಮನಿಸಬೇಕು.

ಶಿಲಾಶಿಲ್ಪದಲ್ಲಿ ನಿಷ್ಣಾತರಾಗಿದ್ದ ವೀರಬ್ರಹ್ಮೇಂದ್ರ ಸ್ವಾಮಿಗಳು ಪೂಜೋ ಚಿತವಾದ ವೀರಭದ್ರಸ್ವಾಮಿಯ ವಿಗ್ರಹವೊಂದನ್ನು ನಿರ್ಮಿಸಿ ಪ್ರಾಣಪ್ರತಿಷ್ಠೆ ಮಾಡಿ ಅದನ್ನು ಚೇತನಗೊಳಿಸಿದರು. ಅದು ಕುಬುದ್ಧಿಗಳ ಪ್ರವಾಹದಲ್ಲಿ ಸಿಲುಕಿ ಅಲ್ಲಾಡುವ ಹಲ್ಲಿಗೆ ತೇಲುತ್ತಾ ಬಂತು. ಕೆಲಕಾಲದ ನಂತರ ಈ ಊರಿನ ಹಿರಿಯ ಒಕ್ಕಲ ಕನಸಿನಲ್ಲಿ ವೀರಭದ್ರ ಸ್ವಾಮಿ ಕಾಣಿಸಿಕೊಂಡು ತನಗಾಗಿ ಆಲಯವೊಂದನ್ನು ನಿರ್ಮಿಸಬೇಕೆಂದು ಬಯಸಿದ. ಅಲ್ಲಿಗೆ ವೀರಬ್ರಹ್ಮೇಂದ್ರ ಸ್ವಾಮಿಗಳೇ ಬಂದು ತಾವೇ ಆ ಮೂರ್ತಿಯ ಪ್ರತಿಷ್ಠಾದಿಗಳನ್ನು ನಿರ್ವಹಿಸಿ, ಅಲ್ಲಿಯೇ ಕೆಲಕಾಲ ತಮ್ಮ ಔಪಾಸನೆಯನ್ನು ಸಾಗಿಸಿ ವಿಗ್ರಹ ಆರಾಧನೆಯ ಮಹತ್ತ್ವವನ್ನು, ಪ್ರಯೋಜನವನ್ನು ಎಲ್ಲರಿಗೂ ತಿಳಿಸಿದರು. ವೀರಬ್ರಹ್ಮೇಂದ್ರ ಸ್ವಾಮಿಗಳು ತಮಗೆ ಗುರುವಾಗಿ ಭಾವಿಸಿದ್ದು ಈ ವೀರಭದ್ರನನ್ನೇ. ಇಂದಿಗೂ

ಅಲ್ಲಾಡುಪಲ್ಲಿಯಲ್ಲಿ ವೀರಭದ್ರಸ್ವಾಮಿ ಭಕ್ತರ ಪೂಜೆಗಳನ್ನು ಸ್ವೀಕರಿಸುತ್ತಾ ಅವರ ಕಾಮ್ಯಾರ್ಥಗಳ ಸಿದ್ಧಿ ದಯಪಾಲಿಸುತ್ತಾ ನಿಂತಿದ್ದಾನೆ.

ತಾವು ಕಬ್ಬಿಣದ ಕೆಲಸವನ್ನು ನಿರ್ವಹಿಸುತ್ತಾ ಇಹಲೋಕ ಜೀವನ ನಿರ್ವಹಣಾ ಸಾಧನೆಯನ್ನೂ, ವೀರಭದ್ರ ಸ್ವಾಮಿಯ ನಿರ್ಮಾಣ, ಪ್ರತಿಷ್ಠೆ ಪೂಜೆಗಳಿಂದ, ಪಾರಮಾರ್ಥಿಕ ಸಾಧನವನ್ನೂ ನಿರೂಪಿಸಿದ್ದಾರೆ.

ವೀರ ದೇಶಿಕರು ಅವತರಿಸಿ ನೆರವೇರಿಸಿದ ಕಾರ್ಯಗಳಲ್ಲಿ ಯೋಗನುಷ್ಠಾನ ಪ್ರಬೋಧವು ಒಂದು. ತಾವು ಅನುಷ್ಠಾನಲ್ಲಿ ಇರಿಸಿಕೊಳ್ಳದ ಯಾವುದನ್ನೂ ಅವರು ಇತರರಿಗೆ ಬೋಧಿಸಿಲ್ಲವೆಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು.

ಯೋಗೋದ್ಧಾರಕ

ಜನ್ಮತಃ ಯೋಗಿಯಾಗಿದ್ದ ಇವರು ಮುಟ್ಟದ ಯೋಗ ಮಾರ್ಗವೇ ಇಲ್ಲ-ಪರಕಾಯ ಪ್ರವೇಶ, ಜೀವ ಸಮಾಧಿ, ಅಣಿಮಾದಿ ಸಿದ್ಧಿಗಳು ಇವೆಲ್ಲವನ್ನೂ ಸೂಕ್ತವೂ ಅವ ಶ್ಯಕವೂ ಆದ ಎಡೆಗಳಲ್ಲಿ ಈ ಶಕ್ತಿ ಪ್ರದರ್ಶನವು ನಡೆಸದೇ ಇಲ್ಲ. ತಮ್ಮನ್ನು ಆಶ್ರಯಿಸಿ ಬಂದ ಶಿಷ್ಯರಿಗೆ ಬಾಲ್ಯದಿಂದಲೂ ಯೋಗ ವಿದ್ಯೆಯನ್ನು ತಿಳಿಸಿ ಉತ್ತಮ ಯೋಗೀಶ್ವರರನ್ನಾಗಿ ಮಾಡಿದ್ದಾರೆ. ಯೋಗಸಿದ್ಧಿಸಿರುವ ಸಂಯಮಿ ಗಳಿಗೆ ಮಾತ್ರವೇ ತಮ್ಮ ಆಯುಃಪ್ರಮಾಣ ತಿಳಿಯುತ್ತದೆ. ಈ ವಿಷಯದಲ್ಲಿ ಸ್ವಯಂ ಗುರುದೇವರು, ಅವರ ಧರ್ಮಪತ್ನಿ ಗೋವಿಂದಮ್ಮನವರು, ಅವರ ಮಕ್ಕಳು ಗೋವಿಂದಯ್ಯ, ಮೊಮ್ಮಗಳು ಈಶ್ವರಮ್ಮ, ಪ್ರಧಾನ ಶಿಷ್ಯನಾದ ಸಿದ್ಧಪ್ಪ, ಸಿದ್ಧಪ್ಪನವರ ಶಿಷ್ಯ ಕರಣಮು ಗೋವಿಂದಯ್ಯ ಹೀಗೆ ಅವರ ಶಿಷ್ಯ ಪ್ರಶಿಷ್ಯರು ತಮ್ಮ ಆಯುಸ್ಸನ್ನು ತಿಳಿದು, ಈ ಸಂಗತಿ ಅರ್ಹರಿಗೆ ತಿಳಿಸಿ, ಜೀವ ತ್ಸಮಾಧಿ ನಿಷ್ಠೆಯಲ್ಲಿ ಕುಳಿತು, ತಮ್ಮ ಗುರುವಿನ ಸಂಪ್ರದಾಯವನ್ನು ಘೋಷಿಸಿ ದವರೇ. ನಷ್ಟವಾಗಿದ್ದ ಯೋಗ ಸಂಪ್ರದಾಯವನ್ನು ಅನುಷ್ಠಾನ ಪೂರ್ವಕ ವಾಗಿ ಉದ್ಧರಿಸಿದ ಮಹಾಯೋಗೋದ್ಧಾರಕ ಈ ವೀರಗುರು ದೇಶೀಕೇಂದ್ರ.

ಕಂದಿಮಲ್ಲಯ ಪಲ್ಲೆಗೆ ಅನತಿ ದೂರದಲ್ಲಿ ಮುಡಮಾಲ ಎಂಬ ಗ್ರಾಮ. ಅಲ್ಲಿ ಪೀರ್ ಸಾಹೇಬ, ಆದಂಬೀ ದಂಪತಿಗಳ ಪುತ್ರ 'ಸಿದ್ಧಪ್ಪ'. ಹಿಂದೂ ಮತ ವೇದಾಂತದತ್ತ ಆಕರ್ಷಗೊಂಡು ವೀರಬ್ರಹ್ಮೇಂದ್ರ ಸ್ವಾಮಿಗಳ ಶಿಷ್ಯನಾಗಲು

ಬಂದ ಮ್ಲೇಚ್ಛನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಎಲ್ಲರೂ ವಿರೋಧಿಸಿದರೂ, ಮಹಮ್ಮದೀಯ ಮಾನವನ ಗುಣ-ವರ್ತನೆಗಳಿಗೇ ಪ್ರಾಧಾನ್ಯತೆಯೇ ಶಿಷ್ಯ ಹೊರತು 'ಜಾತಿ'ಗಲ್ಲ ಎಂದು ಗುರುದೇವ ಆತನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಗುರುಕುಲದಲ್ಲಿ ಗುರುಪತ್ನೀ ಪುತ್ರಾದಿಗಳ ಅಗ್ನಿ ಪರೀಕ್ಷೆಗಳೆಲ್ಲದರಲ್ಲೂ ಸಿದ್ಧಪ್ಪನೇ ಗೆದ್ದ. ಅವಿಚಲಿತ ಭಕ್ತಿಯೋಗದಿಂದ ಹನ್ನೆರಡು ಸಂವತ್ಸರಗಳು ತದೇಕ ದೀಕ್ಷೆಯಿಂದ ಗುರುಸೇವೆಯನ್ನು ನಡೆಸಿ ಸಿದ್ಧಪ್ಪನಂತಹ ಶಿಷ್ಯನಿಲ್ಲವೆಂದು ಪ್ರಖ್ಯಾತನಾದ.

ಗುರು ಶಿಷ್ಯರಿಬ್ಬರೂ ಹಿಂದೂ-ಮಹಮ್ಮದೀಯ ಮತ ಸಖ್ಯಕ್ಕಾಗಿ, ಸರ್ವ ಮಾನವ ಸೌಭ್ರಾತೃತ್ವಕ್ಕಾಗಿ, ದೇಶ ಕಲ್ಯಾಣಕ್ಕಾಗಿ ಅನೇಕ ನವಾಬರ ಆಸ್ಥಾನ ಗಳನ್ನು ದರ್ಶಿಸಿ, ಜ್ಞಾನ ಬೋಧೆಯನ್ನು ನಡೆಸಿ ಸತ್ಯಪ್ರಚಾರವನ್ನು ಮಾಡಿ ದರು. 'ಬ್ರಹಯ್ಯನವರು ತಮ್ಮ ಮತದ ಸಿದ್ಧಪ್ಪನನ್ನು ಹಿಂದೂವಾಗಿ ಪರಿವರ್ತಿಸಿ ಮತಕ್ರಾಂತಿಯನ್ನುಂಟುಮಾಡಿದ್ದಾರೆ' ಎಂದು ಅಸೂಯಾಗ್ರಸ್ತರಾದ ಅಂದಿನ ಕಾಲದ ಮಹಮ್ಮದೀಯ ನವಾಬರು, ಜನಸಾಮಾನ್ಯರು ಇವರ ಬೋಧನೆ ಗಳನ್ನು, ಸತ್ಪ್ರವರ್ತನೆಯನ್ನು ಕೇಳಿ-ಕಂಡು ಸದಭಿಪ್ರಾಯದಿಂದ 'ಉಭಯ ಮತಗಳಿಗೆ ಸೇರಿದ ಈ ಗುರು ಶಿಷ್ಯರು ಕಾರಣ ಜನ್ಮರೆಂದು, ಮಹಾಪುರುಷ ರೆಂದು, ಧರ್ಮಸಂಸ್ಥಾಪನೋದ್ದೇಶದಿಂದ ಈಶ್ವರ ಸಂಕಲ್ಪದಂತೆ ಅವತರಿಸಿದ್ದಾ ರೆಂದು' ಅವರೂ ಈ ಸೌಹಾರ್ದ ಪ್ರಸಾರದಲ್ಲಿ ನೆರವಾದರು. ಅಂದಿನ ತೆಲಗು ಸೀಮೆಯಲ್ಲಿ ಶಿಷ್ಯ ಸಮೇತನಾಗಿದ್ದ ವೀರ ಗುರುವನ್ನು ದರ್ಶಿಸಿದ ಕಣ್ಣುಗಳು, ಅವರ ಬೋಧಾಮೃತ ರಸಪಾನ ಮಾಡಿದ ಕಿವಿಗಳು ಸತ್ಪ್ರವರ್ತನೆಗೆ ಪರಿವರ್ತಿತ ಗೊಳ್ಳುತ್ತಿತ್ತು. ಅವರನ್ನು ದ್ವೇಷಿಸುತ್ತಿದ್ದ ಪ್ರತಿಪಕ್ಷದವರೂ ಪರಮಮಿತ್ರರಾಗಿ ದಾಸಾನುದಾಸರಾಗುತ್ತಿದ್ದರು ಎಂಬ ಜನಪ್ರಚಲಿತ ಸಂಗತಿ ಸುಳ್ಳಲ್ಲ. ಅವರ ಮಾನವೈಕ್ಯ ಪ್ರಬೋಧದಲ್ಲಿಯ ಆಕರ್ಷಣೆ, ಅವರ ತಪಸ್ಸಿಗೆ ಫಲವಿಲ್ಲವೆಂದು ಯಾರು ತಾನೇ ಹೇಳಬಲ್ಲರು ?

ಸಿದ್ಧವಟದ ನವಾಬನಿಗೆ ಸಿದ್ಧಪ್ಪನ ಈ ಪರಿವರ್ತನೆ ಸಹಿಸದಾದಾಗ ಸಿದ್ಧಪ್ಪನ ಸಕಾರಣ ವೇದಾಂತ ಪ್ರತಿಪಾದನೆಯನ್ನು ಕೇಳಿ ಮುಗ್ಧಗೊಂಡು, ಈ ಮಹನೀಯ ಹಾಗೂ ಆತನ ಗುರುವು ಮತ್ತೆಷ್ಟು ಪ್ರ ಭಾ ವ ಶಾ ಲಿ ಯೋಗಿ

ಮಠ ಸ್ಥಾಪನೆ

ಎಂದು ಆತನ ಗುರುವನ್ನೂ ಆಹ್ವಾನಿಸಿ ಪೂಜಿಸಿದ. ಪ್ರಸ್ತುತ ಕಂದಿಮಲ್ಲಯಪಲ್ಲೆಯಲ್ಲಿರುವ ಮಠದ ನಿರ್ಮಾಣಕ್ಕೆ ನೆರವಾದದ್ದೂ ಈ ನವಾಬನೇ! ಇದೇ ರೀತಿಯಲ್ಲಿ ಕಡಪದ ನವಾಬನೂ ಈ ಗುರುವಿನ ಉಪದೇಶಕ್ಕೆ ಮಾರು ಹೋಗಿ ಶಿಷ್ಯನಾದ.

ಗುರುದೇವನ ಅವತಾರೋದ್ದೇಶಗಳಲ್ಲಿ ಪೀಠಾಧಿಪತಿಗಳ ಸಂಸ್ಕರಣವು ಒಂದು. ಆಗ ಸನಾತನವಾದ ಗಾಯಿತ್ರಿ, ಸಾವಿತ್ರಿ, ಸರಸ್ವತಿ ಪೀಠಗಳು, ಶ್ರೀ ಶಂಕರ ಭಗತ್ಪಾದಾಚಾರ್ಯರ ಕಾಲದಿಂದ ಪ್ರಚಾರಕ್ಕೆ ಬಂದಿದ್ದ ಶೃಂಗೇರಿ ಮುಂತಾದ ಪೀಠಗಳು ಬಹು ಪ್ರಚಾರದಲ್ಲಿದ್ದವು. ಗಾಯತ್ರ್ಯಾದಿ ಪೀಠಗಳು ವಿಶ್ವಬ್ರಾಹ್ಮಣರ ಆಳ್ವಿಕೆಯಲ್ಲೂ, ಶೃಂಗೇರಿ ಮುಂತಾದವು ಸಪ್ತಾರ್ಷೇಯ ಬ್ರಾಹ್ಮಣರ ಆಳ್ವಿಕೆಯಲ್ಲೂ ಇದ್ದವು.

ಪುಷ್ಪಗಿರಿ ಪೀಠದ ಸಂಸ್ಕರಣೆ

ಪುಷ್ಪಗಿರಿಯ ಶಂಕರ ಪೀಠವು ವೀರಬ್ರಹ್ಮೇಂದ್ರಸ್ವಾಮಿಗಳಿಗೆ ಅತಿಸಮೀಪವಾಗಿತ್ತು. ಆ ಕಾಲದಲ್ಲಿ ಆ ಅಗ್ರಹಾರಿಕರು ತಮ್ಮ ವೇದವಿದ್ಯಾ ದರ್ಪದಿಂದಲೂ, ಜಾತ್ಯಾಭಿಮಾನದಿಂದಲೂ ಸ್ವಧರ್ಮವನ್ನು ದೂರೀಕರಿಸಿ, ಶಂಕರೋಕ್ತ ಉಪದೇಶಗಳನ್ನು ವಿಸ್ಮರಿಸಿ ಮೆರೆಯುತ್ತಿದ್ದರು. ಒಮ್ಮೆ ಸಕುಟುಂಬ ಶಿಷ್ಯ ಸಮೇತರಾಗಿ ವೀರ ಗುರುರಾಯರು ಆ ಅಗ್ರಹಾರದ ಮೂಲಕ ಕಡಪಕ್ಕೆ ಪ್ರಯಾಣ ಹೊರಟರು. ಸಿದ್ಧ ಮುಂದೆ ಈಶೋಪನಿಷತ್ತಿನ ಪಾರಾಯಣ ಮಾಡುತ್ತಾ ಹೆಜ್ಜೆ ಇರಿಸುತ್ತಿದ್ದ. ಪುಷ್ಪಗಿರಿಗೆ ಅಡಿ ಇಡುತ್ತಿದ್ದಂತೆಯೇ ವಿಪ್ರರು ಇವರನ್ನು ತಡೆದು 'ಜಾತಿ–ಮತ'ಗಳ ಪ್ರಶ್ನೆ ಎತ್ತಿ ಜಗಳಕ್ಕೆ ನಿಂತರು. ಸಿದ್ಧನೇ ಅವರ ಪ್ರಶ್ನೆಗಳಿಗೆಲ್ಲಾ ಉತ್ತರ ನೀಡುತ್ತಿದ್ದ. ಪಂಡಿತರಿಗೆ ಈತನ ಮಾತುಗಳು ಸಹಿಸಲಾಗಲಿಲ್ಲ. ಮೊದಲೇ ತಮ್ಮ ಪ್ರಭಾವ ಇಳಿಮುಖವಾದುದರಿಂದ ಕುದಿಯುತ್ತಿದ್ದರು. ಬಾಯಿಗೆ ಬಂದಂತೆ ವೀರಬ್ರಹ್ಮೇಂದ್ರ ಸ್ವಾಮಿಗಳನ್ನೂ ನಿಂದಿಸಿದರು. ಗುರುವೇ ಬಂದರು. ಕುಲಭೇಧ ಗುಣಕರ್ಮ ವಾದಗಳ ರಹಸ್ಯವನ್ನು ತಿಳಿಹೇಳಿ ಶಾಂತಿಗೊಳಿಸಲು ಪ್ರಯತ್ನಿಸಿದರು. ಉದ್ಧಟ ಪಂಡಿತರು ನಿಂದಾವಾಕ್ಯಗಳೊಂದಿಗೆ ಶಿಲಾವರ್ಷವನ್ನು ನಡೆಸಿದರು. ಗುರುಪತ್ನಿಗೆ ಕಲ್ಲೊಂದು ತಾಕುತ್ತಲೇ ಸಿದ್ಧ ಕೃದ್ಧನಾದ. ಬ್ರಹ್ಮ ಹೃದಯದಲ್ಲೂ ಅಗ್ನಿಆವರಿಸಿತು. ಇದ್ದಕ್ಕಿದ್ದಂತೆಯೇ ಅಗ್ರಹಾರಕ್ಕೆ ಬೆಂಕಿಬಿತ್ತು. ಅಗ್ರಹಾರಿಕರೆಲ್ಲಾ ದೇಶಿಕೇಂದ್ರರ ಪಾದ ಹಿಡಿದರು. ವೃದ್ಧ

ಪಂಡಿತರು, ಉದ್ಧಟರೂ **ಗುರು ಚರಣಂ ಮಮ ಶರಣಂ** ಎಂದು ಏಕಕಂಠದಲ್ಲಿ ಪ್ರಾರ್ಥಿಸಿದರು. ಅಗ್ನಿಹೋತ್ರ ಆತ್ಮಲೀಲೆಯನ್ನು ಉಪಸಂಹರಿಸಿದ. ಪೀಠಾಧಿಪತಿಗಳೊಂದಿಗೆ ಪಂಡಿತಮಂಡಲಿಗೆ ಗುರುವು ತತ್ತ್ವೋಪದೇಶ ಮಾಡಿ ಅವರ ಅನೇಕ ಸಂಶಯಗಳನ್ನು ಪರಿಹರಿಸಿದ. ಅಂದು ಪುಷ್ಪಗಿರಿಯಲ್ಲಿ ವೇದಾಂತ ಸೂತ್ರಸಾರವು ನದಿಯಾಗಿ ಪ್ರವಹಿಸಿತು.

ಎಲ್ಲರ ನೋಟವು ಗುರುಪಾದ ಪದ್ಮಗಳತ್ತ ಹೊರಳಿತ್ತು. ಇಂತಹ ಮಹಾ ಯೋಗೀಶ್ವರನಿಗೆ, ಜ್ಞಾನಿಗೆ, ಕರ್ಮಯೋಗಿಗೆ ಅರ್ಹವಾದ ಪೂಜೆ ಯಾವುದು? ಪೀಠಾಧಿಪತಿಗಳ ಯಾಜಮಾನ್ಯದಲ್ಲಿ ಅಖಂಡ ಬ್ರಹ್ಮ ರಥೋತ್ಸವ ಸ್ವಸ್ತಿ ಮಂತ್ರ ಪಾಠಗಳಿಂದ ನೆರವೇರಿತು. ಪೀಠಾಧಿಪತಿಗಳ ಕರ್ತವ್ಯವನ್ನು ಉಪದೇಶಿಸಿ ಶಂಕರಹೃದಯವನ್ನು ಅನುಸರಿಸಲು ಪ್ರೇರೇಪಿಸಿ, ಗುರುಗಳಿಗೂ ಗುರೋತ್ತಮ ನಾಗಿ ಪ್ರಕಾಶಿಸಿದ ವೀರದೇಶಿಕೇಂದ್ರ. ಪುಷ್ಪಗಿರಿ ಪೀಠದವರಿಗೆ ಬೋಧಿಸಿದ ಸಂಸ್ಕಾರ ಪಾಠ ಸಾಟಿಯಿಲ್ಲದ್ದು. ಅದನ್ನು ಸಮಸ್ತ ಪೀಠಗಳವರೂ ಅನುಸರಿಸಿದಲ್ಲಿ ಗುರುಪೀಠಗಳು ಪ್ರಜಾ ಸಂಸ್ಕರಣಕ್ಕೆ ಸಾಧನಗಳಾಗಿ, ಪ್ರಜೋಪಕಾರಕ್ಕೆ ಕಾರಣವಾಗಿ ಬೆಳಗುತ್ತವೆ.

ಕಂದಿಮಲ್ಲಯ ಪಲ್ಲೆಯಲ್ಲಿದ್ದ ಕಾಲದಲ್ಲಿ ತಮ್ಮ ಆಶ್ರಮದಲ್ಲಿ ಶಿಷ್ಯರಿಗೆ ವೇದಾಂತ ಪಾಠವನ್ನು ಹೇಳುತ್ತಿದ್ದರು. ಈ ಉಪದೇಶ ರಹಸ್ಯವಾಗಿರಲೆಂದು

ಪಂಚಮರ ಉದ್ಧಾರ

ಸಾಮಾನ್ಯವಾಗಿ ರಾತ್ರಿಗಳಲ್ಲಿ ನಡೆಸುತ್ತಿದ್ದರು. ಒಂದು ದಿನ ಷಟ್ಚಕ್ರರಹಸ್ಯವನ್ನು ಬೋಧಿಸುತ್ತಿದ್ದರು. ರಾತ್ರಿಗಳಲ್ಲಿ ಗ್ರಾಮವನ್ನು ಸುತ್ತುತ್ತಾ ಅದರ ರಕ್ಷಣೆ ನೋಡಿಕೊಳ್ಳುತ್ತಿದ್ದ ಕಕ್ಕಯ್ಯನ ಕಿವಿಗೆ ಈ ಉಪದೇಶದ ಮಾತುಗಳು ಬಿದ್ದವು. ಮರೆಯಲ್ಲಿ ಅಲ್ಲೇ ನಿಂತು ಅವರ ಉಪದೇಶವನ್ನು ಆಲಿಸುತ್ತಿದ್ದಂತೆಯೇ ಪರಬ್ರಹ್ಮ ಸಾಕ್ಷಾತ್ಕಾರವಾದಂತೆ ಅವನ ಮೂಢ ಭಕ್ತಿಗೆ ಅನ್ನಿಸಿತು. ಅಲ್ಲಿಂದ ನೇರವಾಗಿ ಮನೆಗೆ ಹೋಗಿ ನಿದ್ರಿಸುತ್ತಿದ್ದ ಪತ್ನಿಯ ಹೊಟ್ಟೆಕೊಯ್ದು ಆ ಚಕ್ರಗಳನ್ನು ನೋಡಲೆಂದು. ರಕ್ತ ಮಾಂಸದ ವಿನಾ ಬೇರೇನೂ ಕಾಣಿಸಲಿಲ್ಲ. ಮಡದಿಯನ್ನು ಕಳೆದುಕೊಂಡ ದುಷ್ಫಲ ಮಾತ್ರವೇ ಲಭಿಸಿತು. ಇದರ ತಿಳಿವು ಬರುತ್ತಲೇ ಗೋಳಿಡುತ್ತಾ ಗುರುದೇವರೆಡೆಗೆ ಓಡಿಬಂದ. ಅವನ ಮೌಢ್ಯಕ್ಕೆ

ಮರುಕ ಪಟ್ಟು ಅವನ ಮನೆಗೆ ಹೋಗಿ ಅವನ ಮಡದಿಯನ್ನು ಬದುಕಿಸಿದರು. ಅಂದಿನಿಂದ ಗುರುವಿನ ಮೆಚ್ಚಿನ ಶಿಷ್ಯನಾದ ಕಕ್ಕಯ್ಯ. ವೇದಾಂತೋಪದೇಶದಿಂದ ಕಕ್ಕಯ್ಯನನ್ನು ಕೃತಾರ್ಥಗೊಳಿಸದೆ, ಅಸ್ಪೃಶ್ಯರೆಂದು ಹೆಸರಾಗಿದ್ದವರನ್ನು ಸಂಸ್ಕರಿಸಿ, ಅವರ್ಣಿಗಳನ್ನು ಸವರ್ಣರನ್ನಾಗಿ ಮಾಡಲು ಬ್ರಹ್ಮಪ್ರಯತ್ನಗಳನ್ನೇ ನಡೆಸಿದರು. ನಾಲ್ಕು ನೂರು ವರ್ಷಗಳ ಹಿಂದೆಯೇ ಹರಿಜನೋದ್ಧಾರಕ್ಕೆ ಕೈಹಾಕಿದ ಗುರುದೇವನ ದೂರದೃಷ್ಟಿ ಎಂತಹದೋ ತಾವೇ ಯೋಚಿಸಿ. ತಮ್ಮ ಈ ಕೃಷಿ ನಂತರದಲ್ಲಿ ಫಲನೀಡುವುದೆಂದು ಹರಿಜನರ ಆಳ್ವಿಕೆ ನಡೆಯುವುದೆಂದು ತಮ್ಮ ಕಾಲಜ್ಞಾನದಲ್ಲೂ, ಗೋವಿಂದವಾಕ್ಯಗಳಲ್ಲೂ ಹೇಳಿದ್ದಾರೆ : **ಮಾಲಲಕು ಮಂಚಾಲು ಬಾಪಲಕು ಪೀಟಲು** (ಹರಿಜನರಿಗೆ ಮಂಚಗಳಾದರೆ ಬ್ರಾಹ್ಮಣರಿಗೆ ಮಣೆಗಳು), **ಮಾಲವಾಡೇ ರಾಜ್ಯ ಮೇಲೇನಿಮಾ** (ಹರಿಜನರೇ ರಾಜ್ಯಾಡಳಿತ ನಡೆಸುತ್ತಾರೆ). ಕಲ್ಪನೆಯ ಈ ಕುಲ ಬೇಧಗಳು ಎಷ್ಟುಕಾಲ ಇರುತ್ತದೆ ಎಂಬುದನ್ನೂ ಹೇಳಿದ್ದಾರೆ—**ಅಯಿದುವೇಲ ಮೀದ ಬಹುಧಾನ್ಯಮು ಲೋಪಲ ಅನ್ನಿ ಜಾತಲು ಒಕ್ಕಟಯ್ಯೇನಿಮಾ ; ಅವನಿಲೋಗಲ ಬೀದ-ಧನವಂತುಲೊಕಟಿಗಾ ಅಯ್ಯೆ ಯೋಗಮು ಗೂಡ ವಚ್ಚೇನಿಮಾ ಹರಿಗೋವಿಂದ ಗೋವಿಂದ ॥** (ಕಲಿಯುಗದ ಐದು ಸಾವಿರ ವರ್ಷಗಳ ನಂತರದ ಬಹುಧಾನ್ಯದೊಳಗಾಗಿ ಎಲ್ಲಾ ಜಾತಿಗಳು ಒಂದಾಗುತ್ತವೆ. ಹಣವಂತ-ಬಡವರೊಂದೇ ಆಗುವ ಕಾಲವೂ ಬರುತ್ತದೆ).

ಅಲೌಕಿಕ ಮಹಿಮೆಗಳು

ಅಲೌಕಿಕ ಮಹಿಮೆಗಳನ್ನು ತೋರಿಸಿದ್ದು ಗುರುದೇವನ ಜೀವನದಲ್ಲಿ ಒಂದು ವಿಶೇಷ. ಪಾತಂಜಲ ಯೋಗಸೂತ್ರದಲ್ಲಿ ಧ್ಯಾನ, ಧಾರಣಾ, ಸಮಾಧಿಗಳೆಂಬ ಮೂರಂಗಗಳನ್ನೂ ವಿಜ್ಞಾನ ಭೂಮಿಕೆಯಲ್ಲಿ ಅನುಸಂಧಾನ ಮಾಡಿದ್ದಾರೆ. ಸಂಯಮವನ್ನು ಆಯಾ ವಿಷಯಗಳ ಮೇಲೆ ಕೇಂದ್ರೀಕರಿಸಿ ಸಂಕಲ್ಪಿಸಿದರೆ ಯೋಗೀಶ್ವರನಿಗೆ ಸಿದ್ಧಿಯಾಗುತ್ತದೆ ಎಂದು ಹೇಳಲಾಗಿದೆ. ಇದರಿಂದಲೇ ಪೂರ್ವಜ್ಞಾನ, ಪಂಚಭೂತ ವಶೀಕರಣ, ಶಾಪಾನುಗ್ರಹ ದಕ್ಷತೆ ಇತ್ಯಾದಿಗಳೆಲ್ಲಾ ಸಿದ್ಧಿಯಾಗುತ್ತದೆ. ಎಲ್ಲಾ ಮಹರ್ಷಿಯರ ಬಾಳ ಕಥೆಗಳಲ್ಲೂ ಈ ರೀತಿಯ ಅಸಾಮಾನ್ಯಗಳನ್ನು ಕಾಣುತ್ತೇವೆ. ಅವನ್ನು ಅಸತ್ಯವೆನ್ನುವುದು

ಸಾಹಸವೇ. ಯಾರು ನಂಬಲಿ, ಬಿಡಲಿ ಪ್ರತಿ ಮಹಾಪುರುಷನೂ ತಾನು ನಡೆಸ ಬೇಕಾದ ಕಾರ್ಯವನ್ನು ನಡೆಸದೆ ಬಿಡನಲ್ಲ !

ಪೋಲೇರಮ್ಮನ ವಿಗ್ರಹದಿಂದ ನಮ್ಮ ಗುರುದೇವ ಬೆಂಕಿ ತರಿಸಿದರು. ಆ ದೇವತೆಯನ್ನು ವಶಮಾಡಿಕೊಂಡು ಅನೇಕ ಕೆಲಸಗಳನ್ನು ಸಾಧಿಸಿ ಪ್ರಜಾ ಕ್ಷೇಮಕ್ಕೆ ಕಾರಣರಾದರು. ಮೂಸೆಯಲ್ಲಿ ಕರಗಿದ್ದ ತಗರವನ್ನು ಗಟಗಟನೆ ಕುಡಿದರು. ಸಿದ್ಧವಟದ ನವಾಬನು ಅತಿಥಿಸತ್ಕಾರಕ್ಕಾಗಿ ಮಾಂಸಾಹಾರಗಳನ್ನು ಮುಂದಿರಿಸಿದಾಗ ಅದನ್ನು ಫಲಪುಷ್ಪಗಳನ್ನಾಗಿ ಪರಿವರ್ತಿಸಿದರು. ಕರ್ನೂಲಿನ ನವಾಬನು ತನ್ನ ಕುದುರೆಯ ಗರ್ಭದಲ್ಲಿದ್ದ ಅಶ್ವವನ್ನು ನೋಡಲು ಬಯಸಿದಾಗ ಅದರ ಗರ್ಭ ಬೇಧಿಸಿ ಮರಿಯನ್ನು ತೋರಿ ಮತ್ತೆ ಅಶ್ವವನ್ನು ಬದುಕಿಸಿದರು. ಕಕ್ಕಯ್ಯನ ಹೆಂಡತಿಯನ್ನು ಬದಕಿಸಿದ್ದು, ಅಚ್ಚಮಾಂಬೆಯ ಮನೆಯಲ್ಲಿ ಗೋಪಾಲನೆ ನಡೆಸುತ್ತಿದಾಗ ಮಂಡಲವನ್ನು ಬರೆದು ಅಷ್ಟರಲ್ಲಿಯೇ ಗೋವುಗಳು ಇರುವಂತೆ ಮಾಡುತ್ತಿದ್ದುದು, ಈ ರೀತಿ ಅನೇಕ ಮಹಿಮೆಗಳನ್ನು ವೀರ ಗುರುದೇಶೀಕೇಂದ್ರರು ಪ್ರದರ್ಶಿಸಿರುವುದುಂಟು. ಈ ರೀತಿಯ ನೂರಾರು ಮಹಿಮೆಗಳು ಇಂದೂ ಜನರ ನಾಲಿಗೆಗಳ ಮೇಲಿವೆ.

ಆದರೆ ಯಾವ ವ್ಯಕ್ತಿಯೇ ಆಗಲಿ ಕೇವಲ ಮಹಿಮೆಗಳನ್ನು ಪ್ರದರ್ಶಿಸಿದ ಮಾತ್ರಕ್ಕೆ ಮೋಕ್ಷಾರ್ಹ ಮಹನೀಯನಾಗುವುದಿಲ್ಲ ಎಂಬುದನ್ನು ನೆನಪಿನಲ್ಲಿರಿಸಿ ಕೊಳ್ಳಬೇಕು. ಮೋಕ್ಷಕ್ಕೆ ಆವಶ್ಯಕವಾದದ್ದು ಅನುಭವ ಪ್ರಧಾನವಾದ ಬ್ರಹ್ಮಜ್ಞಾನ, ಸದಾಚಾರ. ವೀರಯೋಗೀಂದ್ರರೂ ಮಹಿಮೆಗಳನ್ನು ನಡೆಸಿರುವುದು ಕೇವಲ ಕಾರ್ಯಸಾಧನಾ ನಿಮಿತ್ತ ಮಾತ್ರವೇ ಹೊರತು ಅವು ಮೋಕ್ಷ ಹೇತುವೆಂದಲ್ಲ.

ವೀರಬ್ರಹ್ಮಯೋಗೀಂದ್ರರು ಶೈವಾಚಾರ ಪರಾಯಣರಾಗಿಯೇ ಕಂಡು ಬಂದರೂ, ವೈಷ್ಣವವೆಂದರೆ ಪರಾಙ್ಮುಖತೆ ಇಲ್ಲ. ಗುರುದೇವರು ವಿಷ್ಣುವಿನ

ಗುರುದೇವನ ವೇದಾಂತ ದೃಷ್ಟಿ

ಅವತಾರವೆಂದು ಕಾಲಜ್ಞಾನ ಗ್ರಂಥವು ಸಾರುತ್ತದೆ. ವಿಭೂತಿ ರುದ್ರಾಕ್ಷಿಗಳ ಧಾರಣೆ, ದೇವೀಪೂಜೆ, ಪಂಚಾಕ್ಷರಿ ಮಂತ್ರೋಪಾಸನೆ ಮುಂತಾದವು ಅವರ ಸಂಪ್ರದಾಯವನ್ನು ತೋರುತ್ತವೆ. ಗುರುದೇವರಿಗೆ ಮಾಯಾಕಲ್ಪಿತ ರೂಪ

ಗಳಿಗೆ ಪ್ರಾಧಾನ್ಯವಿಲ್ಲ. ಅವರ ಪರಮಾರಾಧ್ಯ ತತ್ತ್ವವು ಸಚ್ಚಿದಾನಂದ ಘನ ವಾದ ತತ್ತ್ವವೇ. ಅವರಿಗೆ ಇಷ್ಟವಾದುದು ಉಪನಿಷತ್ಪ್ರತಿಪಾದ್ಯವಾದ ಅದ್ವೈತ ಸಿದ್ಧಾಂತ. **ಅಹಂ ಬ್ರಹ್ಮಾಸ್ಮಿ, ಪ್ರಜ್ಞಾನಂ ಬ್ರಹ್ಮ, ತತ್ತ್ವ ಮಸಿ** ಮುಂತಾದ ಮಹಾವಾಕ್ಯಗಳನ್ನು ಅನುಭವ ಜನ್ಯವಾಗಿಸಿಕೊಂಡು ಇದನ್ನು ಯೋಗದೊಂದಿಗೆ ಸಂಬಂಧ ಕೂಡಿಸಿದ್ದು ವಿಶೇಷ. ಯೋಗ-ವೇದಾಂತ ಗಳ ಸಂಗಮದಿಂದ ಶುಷ್ಕ ವೇದಾಂತ ನಶಿಸಿ ಅನುಷ್ಠಾನ ಪೂರ್ವಕವಾದ ವೇದಾಂತ ಪ್ರಜ್ಞೆ ವಿಕಸಿಸಿತು. ಆದ್ದರಿಂದಲೇ ಈ ಮಾರ್ಗವನ್ನನುಸರಿಸಿದ ಶಿಷ್ಯರು ತಮ್ಮ ಮರಣಕಾಲವನ್ನು ಮೊದಲೇ ತಿಳಿಯುವಂತಹ ಶಕ್ತಿಸಂಪಾದಿಸು ತ್ತಿದ್ದರು. ಜ್ಞಾನಯೋಗ ಪ್ರಧಾನವಾದ ಈ ತತ್ತ್ವಮಾರ್ಗದಲ್ಲಿ ವೈದಿಕ ಕರ್ಮಕಾಂಡಕ್ಕೆ ಸ್ಥಾನವಿಲ್ಲ. ಮಂತ್ರಾನುಷ್ಠಾನ, ದೇವತಾರಾಧನೆಗೆ ಉಪಾ ಸನೆಗೆ ಸ್ವಲ್ಪ ಸ್ಥಾನವಿದ್ದರೂ ಅದು ಆತ್ಮಸಂಸ್ಕರಣ, ಆತ್ಮಜ್ಞಾನಗಳಿಗೇ ಹೆಚ್ಚು ಒತ್ತು ನೀಡುವಂತೆ ರೂಪಗೊಳ್ಳಬೇಕೆಂದು ಅವರ ಆಶೆಯು. ಈ ಮಾರ್ಗದ ದೀರ್ಘವಿವರಣೆ ಗುರುದೇವರ **ಕಾಳಿಕಾಂಬ ಹಂಸಕಾಳಿಕಾಂಬ** ಎಂಬ ಮಕು ಟದ ಪದ್ಯಗಳಲ್ಲೂ, ಗೋವಿಂದ ವಾಕ್ಯಗಳಲ್ಲೂ ವಿವರಿಸಲಾಗಿದೆ. ಸಂಸಾರಿಯಾ ಗಿದ್ದು ಸರ್ವವೂ ಬ್ರಹ್ಮಮಯವೆಂಬ ಆರೂಢಜ್ಞಾನವನ್ನು ಗಳಿಸಿದವನೇ ರಾಜ ಯೋಗಿ ಎಂಬುದನ್ನು ಹೀಗೆ ಹೇಳಿದ್ದಾರೆ : **ಸಂಸಾರಮುಂಡು ನುಂಡಿಯುು । ಸಂಸಾರಮುು ಮಿಥ್ಯ ಜೇಸಿ ಸರ್ವಮೂ ತಾನೈ । ಸಂಸಾರಂಬುನು ಗೆಲಿಚಿನ । ಸಂಸಾರೇ ರಾಜಯೋಗಿ ಸತ್ಯಮುು ಸಿದ್ಧಾ ॥**

ಗುರುದೇವರ ಈ ತತ್ತ್ವದೃಷ್ಟಿ ಅಂದಿನ ಪೀಠಾಧೀಶರಲ್ಲಿರಲಿಲ್ಲ. ಅವರು ಸ್ವಾರ್ಥಿಗಳಾಗಿ ಗುಣಕರ್ಮಗಳಿಗೆ ಪ್ರಾಧಾನ್ಯತೆ ಕೊಡದೆ ಪ್ರಜಾಪೀಡಕ ರಾಗಿದ್ದರು. ಇಂತಹವರನ್ನು ಸಂಸ್ಕರಿಸುವ ದೀಕ್ಷೆ ಈ ವೀರ ದೇಶಿಕರದು. ಶಂಕರ ವೇದಾಂತಮಾರ್ಗ ಖಿಲವಾಗದಂತೆ, ಅದು ಸಾಮಾನ್ಯನ ತುದಿನಾಲಿಗೆ ಯಲ್ಲೂ ನಿಲ್ಲುವಂತೆ ರಕ್ಷಿಸಿದರು. ಯೋಗವೇದಾಂತ ರಸಾಯನಾಸ್ವಾದನೆ ಯನ್ನು, ಜ್ಞಾನ ಸಂಪತ್ತನ್ನು ಕರುಣಿಸಿ ತಿಳಿಯಾದ ತೆಲುಗಿನಲ್ಲಿ ವೇದಾಂತ ತತ್ತ್ವ ಸಾರಸ್ವತವನ್ನು ನಿರ್ಮಿಸಿದ್ದಾರೆ.

ಸಹಜ ಕವಿಗಳಾದ ಗುರುದೇವರ ವಾಙ್ಮಯ ಸೇವೆ ಅಮೂಲ್ಯವಾದದ್ದು. ಪ್ರಾಚೀನ ತತ್ತ್ವ ವಾಙ್ಮಯವನ್ನು ತಿಳಿಯಾದ ತೆಲುಗು ಭಾಷೆಯಲ್ಲಿ ಬರೆದ

ಅಂದಿನ ಜನರಲ್ಲಿದ್ದ ಮೂಢನಂಬಿಕೆಗಳು, ಕಲ್ಪನೆಗಳನ್ನು ಖಂಡಿಸಿದ್ದಾರೆ.

ಸಾರಸ್ವತ ಸೃಷ್ಟಿ

ಮನೋಹರ ಕವಿತೆಗಳಾಗಿ, ಪಾಮರರೂ ಅವನ್ನು ಮೆಲುಕು ಹಾಕುವಂತೆ ಗೇಯಪೂರ್ಣವಾಗಿ ರಚಿಸಿದ್ದಾರೆ. 'ಸಿದ್ಧಾ-ಕಾಳಿ' ಸಂವಾದ ರೂಪದ ಪದ್ಯಗಳು, ಕಾಳಿಕಾಂಬ ಹಂಸ ಕಾಳಿಕಾಂಬ ಎಂಬ ಮಕುಟದ ಪದ್ಯಗಳು, ಗೋವಿಂದ ವಾಕ್ಯಗಳು, ಕಾಲಜ್ಞಾನ ತತ್ತ್ವಗಳು ಇವುಗಳ ಪ್ರಸಿದ್ಧಿ ಜನಪ್ರಿಯತೆ ಇಂದಿಗೂ ಮಾಸಿಲ್ಲ. ವೀರಬ್ರಹ್ಮೇಂದ್ರ ಸ್ವಾಮಿಗಳ ಬಹುಪಾಲು ಗದ್ಯ-ಪದ್ಯವು ರೂಪಕಾತಿಶಯೋಕ್ತಿಯಿಂದ ತುಂಬಿರುತ್ತದೆ. ಉಪಮಾನವನ್ನು ಮಾತ್ರವೇ ಹೇಳಿ ಉಪಮೇಯವನ್ನು ಸ್ಫುರಿಸುವಂತೆ ಮಾಡುವುದನ್ನು ರೂಪಕಾತಿಶಯೋಕ್ತಿ ಎನ್ನುತ್ತಾರೆ. ಒಂದು ತತ್ತ್ವದಲ್ಲಿ **ಮೂಡು ಕಾಲ್ವಲು ದಾಟಲೇರನ್ನ ಈ ಮೂಢ ಜನಂಲು ಮೂಡು ಕಾಲ್ವಲು ದಾಟಲೇರನ್ನ** ಎಂದು ಹೇಳುವಾಗ ಮೂರು ಕಾಲುವೆಗಳು ಈಷಣತ್ರಯಗಳಿಗೆ (ಧನ ದಾರಾ ಪುತ್ರೇಷಣಗಳು) ಉಪಮಾನ. ಹೀಗೆಯೇ **ಮೂಡಾರು ವಾಕಿಳ್ಳು ಮೂಯುವಲೆನನ್ನ** ಎನ್ನುವಾಗ ದೇಹದ ನವದ್ವಾರಗಳನ್ನು ಸೂಚಿಸುತ್ತಾರೆ. **ಆರಿಟ ಮೀದನೆ ಚಿದ್ರೂಪಂ** ಎಂದು ಹೇಳುವಾಗ ಆಧಾರಾದಿ ಷಟ್ಚಕ್ರಗಳನ್ನು ದಾಟಿದರೆ ಏಳನೆಯ ಸಹಸ್ರಾರದಲ್ಲಿ ಚಿತ್ಕಳೆಯ ದರ್ಶನವಾಗುತ್ತದೆ. ಇದನ್ನು ಗಮನಿಸಿ ವಿಶ್ಲೇಷಿಸಿದ ಇಂದಿನ ವಿದ್ವಾಂಸರು 'ವೀರಬ್ರಹ್ಮೇಂದ್ರ ಸ್ವಾಮಿಗಳ ರೂಪಕಾತಿಶಯೋಕ್ತಿ ವ್ಯತಿರೇಕ ಲಕ್ಷಣವು ಅನ್ಯತ್ರ ದುರ್ಲಭ' ಎಂದು ಕೊಂಡಾಡಿದ್ದಾರೆ.

ಶಿವ ಪಂಚಾಕ್ಷರಿ ಮಂತ್ರಂ ಪರಶಿವಯೋಗುಲಕೇ ಜಪಸೂತ್ರಂ
ಅವಿರಳಯೋಗಂ ಬಂದಿನವಾರಿಕಿ ಆರಿಟಿಮೀದನೆ ಚಿದ್ರೂಪಂ ||
ಅಯಿದು ಮುಖಂಬುಲ ಪೆರಿಗಿನದೀ, ಅಯಿದಕ್ಷರಮುಲ ಅಮರಿನದೀ
ಅಯಿದಯಿದುಲ ಇರುವದಿಸ್ಯೈದೌ ಅಖಂಡತೇಜಂ ಬೀಮಂತ್ರಂ ||
ಮೂಡುತ್ರೋವಲದಿ ಸಾಕಾರಂ, ಮೂಟಿನಡುಮನೇ ಶ್ರೀಕಾರಂ
ಚೂಚೇದಂತಯು ಸಾಕಾರಂ ಚೂಪುನಿಲಿಪಿತೇ ನಿರಾಕಾರಂ ||
ಸುಷುಮ್ನಾಂತಮುನ ಗುರುತೇಜಂ, ಅಷ್ಟಕಮಲಮುನ ಶಿವರೂಪಂ
ಸಹಸ್ರಾರಮುನ ಪರಬ್ರಹ್ಮ ಶ್ರೀ ಗುರುವೀರೇಶುನಿ ಘನತೇಜಂ ||

—ಪಂಚಾಕ್ಷರೀಮಂತ್ರ ಪ್ರಭಾವ, ಪಂಚಸಂಖ್ಯಾರಹಸ್ಯ, ಪಂಚವಿಂಶ ತತ್ತ್ವಗಳು ಸೂಚಿಸಿ, ಏಳನೆಯ ಚಕ್ರವಾದ ಸಹಸ್ರಾರದಲ್ಲಿ ಸಾಕ್ಷಾತ್ಕರಿಸುವ ಚಿತ್ಸ್ವರೂಪವು ಕೂಡ ಪ್ರಸ್ತಾಪಿಸಲ್ಪಟ್ಟಿದೆ. ಮಹಾಯೋಗೀಶ್ವರ ಬ್ರಹ್ಮ ಗುರುವು ಸಹಸ್ರಾರವನ್ನು, ಅಲ್ಲಿಗೆ ಬರಲು ಜೀವನು ಅನುಸರಿಸಬೇಕಾದ ಸುಷುಮ್ನಾ ಮಾರ್ಗವನ್ನು ಮರೆಯುವುದಿಲ್ಲ; ಶಿಷ್ಯರನ್ನೂ ಮರೆಯಗೊಳಿಸುವು ದಿಲ್ಲ. ಇದೇ ರಾಜಯೋಗಿಗಳ ಶುಭ ಲಕ್ಷಣ.

ವೀರಬ್ರಹ್ಮೇಂದ್ರ ಗುರುಸ್ವಾಮಿ ಹಿರಿಯ ಸುಧಾರಕರು. ಆದ್ದರಿಂದಲೇ ಅಚ್ಚಮ್ಮ, ವೆಂಕಟರೆಡ್ಡಿ, ವಿಪ್ರನಾದ ಅನ್ನಾಜಯ್ಯ, ಮಹಮದೀಯನಾದ ಸಿದ್ಧಪ್ಪ, ಅಂತ್ಯಜನಾದ ಕಕ್ಕಯ್ಯ ಎಲ್ಲರಿಗೂ ಮಂತ್ರೋಪದೇಶ ಮಾಡಿದರು. ಮತ ದುರಭಿಮಾನವನ್ನು ನಾಶಪಡಿಸಿ ಅನೇಕ ಸಾಮಾಜಿಕ ಸುಧಾರಣೆಗಳಿಗೆ ಕಾರಣವಾದರು.

ಆಡು ಭಾಷೆಯಲ್ಲಿ ಸತ್ಯಸೂತ್ರಗಳನ್ನು ಪ್ರಚಾರಕ್ಕೆ ತಂದು ದೇಶಭಾಷೆಯ ಪುನರುಜ್ಜೀವನಕ್ಕೆ, ಜನರಲ್ಲಿಯ ಆಧ್ಯಾತ್ಮ ಪ್ರಜ್ಞೆಯ ವಿಕಾಸಕ್ಕೆ ಕಾರಣರಾದ ಕವೀಂದ್ರ. ಸಂಯಮಿ. ತ್ರಿಕಾಲಜ್ಞ. ತಾನು ಅವತಾರ ಪುರುಷನಾದರೂ, ಸಾಮಾನ್ಯ ಪೌರನಂತೆಯೇ ಸಾಮಾನ್ಯರಲ್ಲಿ ಬೆರೆತಿದ್ದು ರೈತರಿಗೆ, ಗ್ರಾಮದ ಕುಟೀರ ಪರಿಶ್ರಮಿಗಳಿಗೆ ನೆರವಾಗಿ ನಿಂತು ಉತ್ತಮ ಪೌರಧರ್ಮ ಪ್ರಚಾರ ಮಾಡಿದರು. ಆದರ್ಶ ಗೃಹಸ್ಥ. ಮಹಾವೇದಾಂತಿ. ಯೋಗೀಶ್ವರ. ವಿಶಾಲ ವಾದ ಉಪನಿಷತ್ತಿನ ಗರ್ಭದಲ್ಲಿ ಸರ್ವಮತ ಸಿದ್ಧಾಂತಗಳಿಗೂ ಸ್ಥಾನ ನೀಡಿ ವಿಶ್ವಮತದ ಪ್ರತಿನಿಧಿಯಾಗಿ ಸುಸ್ಥಿರ ಶಾಂತಿಯನ್ನು ಸ್ಥಾಪಿಸಿದರು. ಈ ಪ್ರಾಚೀನ ಆರ್ಷಶಕ್ತಿ ವಿಜೃಂಭಿಸಿರುವುದೇ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿಗಳ ಜೀವನ ಲೀಲಾ ಚರಿತ್ರೆ.

[ಆಧಾರ : ಡಾ. ಕೊಂಡೂರು ವೀರರಾಘವಾಚಾರ್ಯ ಅವರ ಮನ ಗುರುದೇವುಡು]

★

ಅನುಗ್ರಹ ವೃಷ್ಟಿ

ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಮಹಾದೇವಸ್ವಾಮಿಗಳು

ಮಠಾಧೀಶರು

ಶ್ರೀ ಜಗದ್ಗುರು ನಾಗಲಿಂಗಸ್ವಾಮಿಗಳ ಮಠ, ಮೈಸೂರು-೪

ಶುಭ ಸಂದೇಶ

ಅಧ್ವರ್ಯುಶಿರೋಮಣಿ, ವಿದ್ಯಾಭೂಷಣ ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರನ್ನು ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಸನ್ಮಾನಿಸಲು ಸಮಾರಂಭವನ್ನು ಏರ್ಪಡಿಸಿರುವ ವಿಷಯವನ್ನು ತಿಳಿದು ತುಂಬಾ ಸಂತೋಷವಾಯಿತು. ಶ್ರೀ'ನಾಭಾ' ಅವರು ನಮಗೆ ಚಿರಪರಿಚಿತರು. ಅವರು ನಮ್ಮ ಹಿಂದಿನ ಶ್ರೀ ಶ್ರೀ ಗಳವರಲ್ಲಿ ವಿಶೇಷ ಭಕ್ತಿಯನ್ನಿಟ್ಟು, ನಮ್ಮ ಶ್ರೀ ಮಠದಲ್ಲಿ ಹಿಂದಿನಿಂದಲೂ ರಾಜವೈಭವದಿಂದ ನಡೆಯುತ್ತಿದ್ದ ಶ್ರೀ ಸದ್ಗುರು ಆರಾಧನ ಮಹೋತ್ಸವದಲ್ಲಿ ಬಂದು ಭಾಗಿಗಳಾಗುತ್ತಿದ್ದರು. ನಮ್ಮ ಕಾಲದಲ್ಲಿಯೂ ಕೆಲವು ಸಾರಿ ಬಂದಿರುವರು. ಆಚಾರ್ಯರು ನಮ್ಮಲ್ಲಿಯೂ ಬೆಳೆಸಿಕೊಂಡು ಬಂದಿರುವ ಭಕ್ತಿವಿಶ್ವಾಸಗಳಿಂದ ನಮಗೆ ಪ್ರಮೋದಾಸ್ಪದವಾಗಿದೆ. ವೈದಿಕ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುತ್ತಿರುವ ಅವರು ಒಬ್ಬ ನಿಷ್ಠಾವಂತ ವ್ಯಕ್ತಿಯಾಗಿದ್ದಾರೆ. ಮಂಗಳೂರಿನ ಶ್ರೀ ಕಾಳಿಕಾಂಬಾ ದೇವಸ್ಥಾನ ಮುಂತಾದ ಕಡೆಗಳಲ್ಲಿ ನಮ್ಮ ಸಮ್ಮುಖದಲ್ಲಿ ನಡೆದ ಅನೇಕ ಸಮಾರಂಭಗಳಲ್ಲಿ ಭಾಗವಹಿಸಿ, ತಮ್ಮ ಅನುಭವ ಗೋಚರವಾದ ವೈಶ್ವಕರ್ಮಣ ವಿಚಾರಲಹರಿಯನ್ನು ಹರಿಸಿದ್ದಾರೆ. ಧರ್ಮಪ್ರಚಾರ ಕಾರ್ಯ ನಿರತರಾಗಿರುವರೆಂಬುದು ವಿದಿತವಾಗಿದೆ. ಮೆಚ್ಚತಕ್ಕದ್ದು. ಆದರೆ ಹೊಗಳಿಕೆಗಳಿಂದ ಮನಸ್ಸು ಕಲುಷಿತಗೊಳ್ಳದಿರಲಿ.

ಮನಸ್ಸು ಪರಿಪಕ್ವ ಸ್ಥಿತಿಗೆ ಬರಲಿ. ಶ್ರೀ ವಿಶ್ವಕರ್ಮ ಪರಬ್ರಹ್ಮದರ್ಶನವೇ ಮುಖ್ಯ ಗುರಿಯಾಗಿರಲಿ. ಇದು ನಮ್ಮ ಶುಭ ಸಂದೇಶವಾಗಿದೆ.

ಸಮಾಜ ಸೇವೆಯೇ ಈಶ ಸೇವೆಯೆಂದು ತಿಳಿದಿರುವ ಶ್ರೀ 'ನಾಭಾ' ಅವರ ಜೀವನದಲ್ಲಿ ಎಪ್ಪತ್ತು ವರ್ಷಗಳು ಉರುಳಿವೆ. ಇನ್ನು ಮುಂದೆಯೂ ಅವರು ನೂರು ವರ್ಷ ಪರ್ಯಂತ ಸಾರ್ಥಕ ಜೀವನವನ್ನು ನಡೆಸಲಿ ಎಂಬುದು ನಮ್ಮ ಶುಭ ಹಾರೈಕೆಯಾಗಿದೆ. ಅವರ ಸನ್ಮಾನ ಸಮಾರಂಭವು ಯಶಸ್ವಿಯಾಗಿ ನಡೆಯಲಿ. ಅವರಿಗೆ ಸಕಲ ಸನ್ಮಂಗಳವನ್ನುಂಟುಮಾಡಲಿ ಎಂದು ಪರಶಿವ ವಿಶ್ವಕರ್ಮನನ್ನು ಪ್ರಾರ್ಥಿಸುತ್ತೇವೆ.

ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಮಹಾದೇವಸ್ವಾಮೀ

ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಮಹಾದೇವಸ್ವಾಮಿಗಳು, ಮಠಾಧೀಶರು, ಶ್ರೀ ಜಗದ್ಗುರು ನಾಗಲಿಂಗಸ್ವಾಮಿ ಮಠ, ಮೈಸೂರು - ೪ ಇವರು ಆಶೀರ್ವಾದ ಪೂರ್ವಕ ಕಳುಹಿಸಿದ ಲಘು ಪ್ರಬಂಧ :

ಶ್ರೀ ವಿಶ್ವಕರ್ಮ ತತ್ತ್ವಾರ್ಥ ಚಿಂತನಂ

ಋತ್ವಿಜರನೇಕರು ವಿಶ್ವಕರ್ಮ ಬ್ರಹ್ಮ ಸ್ವರೂಪವನ್ನು ತಿಳಿಯದೆ ಕೇವಲ ಕರ್ಮಮಾರ್ಗ ನಿರತರಾಗಿದ್ದರೆಂದು ವೇದದಲ್ಲಿ ತಿಳಿಸಿರುವುದನ್ನು ನೋಡಿದ ಮೇಲೆ ಸಾಮಾನ್ಯ ಮಾನವನ ವಿಚಾರವನ್ನೇನೆಂದು ಹೇಳುವುದು ?

ಆ ಬ್ರಹ್ಮಸ್ವರೂಪವು ಅನಿರ್ವಚನೀಯವೂ, ರಹಸ್ಯವೂ ಆದುದು. ಅದು ಗುರೂಪದೇಶ, ತಪಸ್ಸು ಮುಂತಾದುವುಗಳಿಂದ ತಿಳಿಯಬೇಕಾದುದು.

ಶ್ರುತಿಯಲ್ಲಿ ದೇವ, ಮನುಷ್ಯ, ಯಕ್ಷ, ರಾಕ್ಷಸ, ಗಂಧರ್ವ, ಕಿನ್ನರ, ಕಿಂಪುರುಷಾದಿ ಸಕಲ ಜೀವಿಗಳನ್ನೂ, ಸಕಲ ಲೋಕಗಳನ್ನೂ ಸೃಷ್ಟಿಸಿರುವ ಆ ವಿಶ್ವಕರ್ಮದೇವನನ್ನು ಏಕೆ ನೀವು ತಿಳಿಯಲಾರಿರಿ ? ಎಂದು ಪ್ರಶ್ನಿಸಿ, ಅದಕ್ಕುತ್ತರವನ್ನು ಹೇಳಿದೆ. ಎಲೈ ಋತ್ವಿಜರೇ, ನೀವು ಮಂಜಿನಂತಹ ಅಜ್ಞಾನದಿಂದ ಆವರಿಸಲ್ಪಟ್ಟಿದ್ದೀರಿ. ಆದುದರಿಂದ ಆ ಪರವಸ್ತುವು ನಿಮ್ಮಲ್ಲಿಯೇ ಅಂತರ್ಗತವಾಗಿದ್ದರೂ ಅದನ್ನು ನೀವು ತಿಳಿಯದವರಾಗಿದ್ದೀರಿ.

ಲೋಕದಲ್ಲಿಯೂ ಮಂಜು ಕವಿದುಕೊಂಡರೆ ಇದು ಕಲ್ಲು, ಮಣ್ಣು, ಮರ ಎಂಬ ಮುಂತಾದ ವಸ್ತುಗಳನ್ನು ಕಾಣಲು ಹೇಗೆ ಸಾಧ್ಯವಿಲ್ಲವೋ, ಹಾಗೆ ನೀವೂ ಸಹ ಅಜ್ಞಾನವೆಂಬ ಮಂಜಿನಿಂದ ಮುಚ್ಚಲ್ಪಟ್ಟಿರುವ ಕಾರಣ ಆ ದೇವನನ್ನು ಕಾಣಲು ನಿಮಗೆ ಸಾಧ್ಯವಿಲ್ಲವಾಗಿದೆ. ಅಜ್ಞಾನದಿಂದ ಕೂಡಿದ ನೀವು ಯಾವುದಾದರು ಉಪಾಯದಿಂದ ಲೌಕಿಕ ಸುಖವನ್ನು ಹೊಂದಲು ಪ್ರವೃತ್ತರಾಗುವಿರಿ. ಇಷ್ಟಕ್ಕೆ ತೃಪ್ತರಾಗದೆ ಸ್ವರ್ಗಾದ್ಯಾಮುಷ್ಮಿಕ ಫಲಗಳನ್ನೂ ಸಹ ಪಡೆಯಲು, ಅಗ್ನಿಷ್ಟೋಮಾದಿ ಯಾಗಗಳನ್ನು ಆಚರಿಸತೊಡಗುವಿರಿ. ಯಾಗಗಳಲ್ಲಿ ಉಕ್ಥ್ಯ, ಷೋಡಶಿನ್, ಪ್ರಉಗ, ನಿಷ್ಕೇವಲ್ಯ ಮುಂತಾದ ಶಸ್ತ್ರಮಂತ್ರಗಳನ್ನು ಪಠಿಸುತ್ತೀರಿ. ಹೀಗೆ ನೀವು ಇಹ - ಪರಗಳ ಭೋಗಾಪೇಕ್ಷೆಯೇ ಮುಂದಾಗಿವುಳ್ಳವರಾಗಿದ್ದೀರಿ. ಕ್ಷಣಿಕವಾದ ಇಂತಹ ಸುಖವನ್ನೇ ಅಪೇಕ್ಷಿಸುತ್ತಿರುವ ನಿಮಗೆ ಶಾಶ್ವತ ಪರಬ್ರಹ್ಮ ವಿಶ್ವಕರ್ಮ ಸ್ವರೂಪ ದರ್ಶನವು ಅಲಭ್ಯವಾಗಿದೆ. ಎಲೈ ಮೇಧಾವಿಗಳೇ, ನೀವು ಇಂತಹ ದಿವ್ಯದರ್ಶನವನ್ನು ಪಡೆದು ಕೃತಾರ್ಥರಾಗಬೇಕಾದರೆ, ಧ್ಯಾನದ ಮೂಲಕವಾಗಿ ಅದನ್ನು ಪಡೆಯಬಹುದೆಂದು ತಿಳಿಸಿದೆ.

ಕಾಮ್ಯವಾದಿಗಳೂ, ಭೋಗಪರರೂ, ಸ್ವಾರ್ಥಿಗಳೂ ಆದ ಕರ್ಮವಾದಿಗಳು ಇಷ್ಟಾಪೂರ್ತ್ಯಾದಿ ಕರ್ಮಗಳೇ ಅಧಿಕವೆಂದೂ, ಶ್ರೇಯಸ್ಕರವೆಂದೂ ನಂಬುತ್ತಾರೆ. ಕರ್ಮಫಲವಾದ ಸ್ವರ್ಗಭೋಗವನ್ನು ಅನುಭವಿಸಿ ಆ ಕರ್ಮವನ್ನು ಸವೆಸಿ ಅನಂತರ ಹಿಂತಿರುಗಿ ಈ ಲೋಕದಲ್ಲಿ ಬಿದ್ದು, ಜನನ ಮರಣ ಕ್ಲೇಶ ರೂಪವಾದ ಸಂಸಾರ ಚಕ್ರದಲ್ಲಿ ಸುತ್ತುತ್ತಾರೆ. ಪರಿಪಕ್ವವಾದ ಜ್ಞಾನವಿಲ್ಲದಿರುವುದೇ ಅವರ ಈ ದುರವಸ್ಥೆಗೆ ಕಾರಣವಾಗಿದೆ.

ಅವರು ತಮ್ಮ ಅಲ್ಪವಾದುದೂ, ಅಪರಿಷ್ಕೃತವಾದುದೂ ಆದ ಭ್ರಾಂತಿಯಿಂದ ನಾವೇ ಕೃತಾರ್ಥರೆಂದು ತಿಳಿದು ಕರ್ಮದಲ್ಲಿಯೇ ತಮ್ಮ ಬುದ್ಧಿಯನ್ನು ಅಧಿಕವಾಗಿ ಸಂಯೋಜನೆಯನ್ನು ಮಾಡುತ್ತಾರೆ. ಇದರಿಂದ ಅದು ಕಾಮರೂಪವಾಗಿಯೇ ಪರಿಣಮಿಸಿ ದುರಭಿಮಾನಗಳಿಗೆ ಅವಕಾಶ ಕೊಡುತ್ತದೆ. ಅದು ಮೋಕ್ಷ ಮಾರ್ಗದಲ್ಲಿ ಪ್ರವರ್ತಿಸುವುದೇ ಇಲ್ಲ. ಭಗವದ್ವಿಶ್ವಕರ್ಮ ಸಾಕ್ಷಾತ್ಕಾರಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಅಜ್ಞಾನ ರೂಪವಾದ ಕತ್ತಲೆಯಲ್ಲಿ ಮುಳುಗಿದ್ದರೂ ಸಹ ತಾವೇ ಜ್ಞಾನಿಗಳೆಂದು ತಿಳಿದ ಈ ಅವಿವೇಕಿಗಳು ಅನೇಕವಿಧ ಕ್ಲೇಶಗಳಿಗೆ ಭಾಗಿಗಳಾಗುತ್ತಾರೆ. ಅಂಥರು ಇತರ ಅಂಧರಿಗೆ ಮಾರ್ಗದರ್ಶಿಗಳಾದರೆ ಹೇಗೋ ಹಾಗೆ ಇವರು ಅಹಂಮನ್ಯರಾಗಿ ಅಂದರೆ ನಾವೇ ತಿಳಿದವರು ಎಂಬ ದುರಹಂಭಾವದಿಂದ ಇತರರಿಗೂ ಉಪದೇಶವನ್ನೀಯುತ್ತಾ, ತಾವೂ ಅಜ್ಞಾನಕೂಪದಲ್ಲಿ ಬೀಳುವುದಲ್ಲದೆ, ಇತರರನ್ನೂ ಅಜ್ಞಾನಕೂಸದಲ್ಲಿ ಬೀಳಿಸುತ್ತಾರೆ.

ಆದುದರಿಂದ ಮನುಷ್ಯನಿಗೆ ಅಜ್ಞಾನವು ತೊಲಗಿ, ದಿವ್ಯಜ್ಞಾನೋದಯವಾಗಬೇಕಾದರೆ, ವಿಶ್ವಕರ್ಮೋಪಾಸನೆಯೊಂದೇ ಏಕೈಕ ಮಾರ್ಗವಾಗಿದೆ. ಇಂತಹ ಶ್ರೇಷ್ಠಮಾರ್ಗದಿಂದ ಸುಲಭವಾಗಿ ಅವನನ್ನು ಕಾಣಬಹುದು. ವೇದವೇದಾಂತ ಪ್ರತಿಪಾದ್ಯನಾದ ವಿಶ್ವಕರ್ಮನನ್ನು ಬೇರೆಲ್ಲಿಯೂ ಹುಡುಕಬೇಕಾಗಿಲ್ಲ. ಅವನು ನಮ್ಮೊಳಗೇ ನೆಲಸಿರುವನು. ಜ್ಞಾನಿಗಳು ಅವನನ್ನು ತಮ್ಮಲ್ಲಿಯೇ ಕಾಣುವರೇ ಹೊರತು ವಿಗ್ರಹಗಳಲ್ಲಿ ಕಾಣುವುದಿಲ್ಲ. ಸಾಮಾನ್ಯ ಜನರಿಗೆ ಶ್ರೀ ವಿಶ್ವಕರ್ಮನ ಬಗ್ಗೆ ಭಕ್ತಿವಿಶ್ವಾಸಗಳನ್ನೂ, ನಂಬಿಕೆಯನ್ನೂ ಹುಟ್ಟಿಸುವುದಕ್ಕಾಗಿ ವಿಗ್ರಹಗಳು ನಿರ್ಮಿತವಾಗಿವೆ. ಅವರು ಅಲ್ಲಿ ಅವನನ್ನು ಕಾಣುವುದು ಸಹಜ. ಯಾರು ತನ್ನೊಳಗಿರುವ ಜ್ಯೋತಿಯನ್ನು ಕಾಣಬಯಸುವರೋ ಅವರು ತಮ್ಮ ಹೃದಯದಲ್ಲಿಯೇ ಪ್ರಾಣರೂಪದಿಂದ ಪ್ರಕಾಶಿಸುತ್ತಿರುವ ವಿಶ್ವಕರ್ಮನನ್ನು ಕಾಣುವರು. ☆

ಶಾಂತಿ ಮಂತ್ರಃ

ಓಂ ನಮೋ ವಾಚೇ ಯಾಚೋದಿತಾ ಯಾಚಾನುದಿತಾ ತಸ್ಯೈ ವಾಚೇ ನಮೋ ನಮೋ ವಾಚೇ ನಮೋ ವಾಚಸ್ಪತಯೇ ನಮ ಋಷಿಭ್ಯೋ ಮಂತ್ರಕೃದ್ಭ್ಯೋ ಮಂತ್ರಪತಿಭ್ಯೋ ಮಾ ಮಾಮೃಷಯೋ ಮಂತ್ರಕೃತೋ ಮಂತ್ರಪತಯಃ ಪರಾದುರ್ಮಾಹಮೃಷೀನ್ಮಂತ್ರಕೃತೋ ಮಂತ್ರಪತೀನ್ ಪರಾದಾಂ ವೈಶ್ವದೇವೀಂ ವಾಚಮುದ್ಯಾಸಗ್ಂ ಶಿವಾಮದಸ್ತಾಂ ಜುಷ್ಟಾಂ ದೇವೇಭ್ಯಃ ಶರ್ಮ ಮೇ ದ್ಯೌಶ್ಶರ್ಮ ಪೃಥಿವೀ ಶರ್ಮ ವಿಶ್ವಮಿದಂ ಜಗತ್ । ಶರ್ಮ ಚಂದ್ರಶ್ಚ ಸೂರ್ಯಶ್ಚ ಶರ್ಮ ಬ್ರಹ್ಮ ಪ್ರಜಾಪತೀ ॥ ಓಂ ಶಾಂತಿಃ ಶಾಂತಿಃ ಶಾಂತಿಃ

॥ ಶ್ರೀ ಜಗದ್ಗುರು ಕಾಳಹಸ್ತ್ರಾಚಾರ್ಯೋವಿಜಯತೇ ॥

ಶ್ರೀಮತ್ಕಾಶ್ಯಾದಿ ಪಂಚಸಿಂಹಾಸನ ಪೂಜಿತರಾದ ಶ್ರೀ ಶ್ರೀ ಜಗದ್ಗುರು ಶ್ರೀಮತ್ಕಾಳಹಸ್ತ್ರಾಚಾರ್ಯ ನಾಮ್ನ ಶ್ರೀಮದಾನಾಗೊಂದೀ ಸಂಸ್ಥಾನ ಲೇಬಗಿರಿ ಮಠದ

ಶ್ರೀ ಶ್ರೀ ಲಕ್ಷ್ಮೀಂದ್ರ ಮಹಾಸ್ವಾಮಿಗಳವರ

ದಿವ್ಯ ಸನ್ನಿಧಿಯಿಂದ

ಅನುಗ್ರಹ ಶ್ರೀಮುಖ

ವೇ. ಬ್ರ. ಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು ನಮ್ಮ ಸಮಾಜದ ಒಂದು ಶಕ್ತಿ. ಅಪಾರವಾದ ವೈದಿಕ ವಿದ್ವತ್ತು, ನಿಷ್ಠಾಪರ ಆಚಾರ, ಆಧುನಿಕ ದೃಕ್ಪಥವನ್ನೂ ಅಳವಡಿಸಿಕೊಂಡಿರುವ ವಿವೇಕ, ಅದ್ಭುತವಾದ ವಾಗ್ಝರಿ, ಹಲವು ಭಾಷೆಗಳ ಮೇಲೆ ಸ್ವಾಮ್ಯ, ಇವೆಲ್ಲಕ್ಕೂ ಕಲಶಪ್ರಾಯವಾಗಿ ಅವರಲ್ಲಿರುವ ಉತ್ಕಟ ಸಮಾಜಪ್ರೇಮ ಮತ್ತು ಸೇವಾ ಮನೋಭಾವ, ಸಾಧಾರಣವಾಗಿ ಅನ್ಯತ್ರ ಕಾಣುವುದು ಅಸಾಧ್ಯ.

ಇಂತಹ ಮಹನೀಯರನ್ನು ಕರ್ನಾಟಕ ಹಾಗೂ ನೆರೆಯ ರಾಜ್ಯಗಳಾದ ಆಂಧ್ರ, ತಮಿಳು, ಮಹಾರಾಷ್ಟ್ರ, ಕೇರಳದ ವಿಶ್ವಬ್ರಾಹ್ಮಣ ಬಂಧುಗಳು ಸೇರಿ ಸನ್ಮಾನಿಸುತ್ತಿರುವುದು ಶುಭ ಸಂಗತಿ. ಅಧ್ಯಯನ ಅಧ್ಯಾಪನಗಳನ್ನು ಅವ್ಯಾಹತವಾಗಿ ಸಾಗಿಸುತ್ತಾ ಇರುವ ಆಚಾರ್ಯರು ಅನೇಕ ಲೇಖನಗಳನ್ನು, ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ತನ್ಮೂಲಕ ಸಮಾಜದಲ್ಲಿ ವಿಶ್ವಕರ್ಮ ಧರ್ಮ ಸಂಸ್ಕೃತಿಗಳ ಪರಿಚಯ ಜನಸಾಮಾನ್ಯರಿಗೂ ಮಾಡಿಕೊಟ್ಟಿದ್ದಾರೆ. ಈ ಶುಭ ಸಂದರ್ಭದಲ್ಲಿ ಇನ್ನೂ ನೂರ್ಕಾಲ ಸಮಾಜಸೇವೆಯನ್ನು ನಡೆಸುತ್ತಾ ಅದರ ಮುನ್ನಡೆಗೆ ಕಾರಣವಾಗುವಂತೆ ದೀರ್ಘಾಯುರಾರೋಗ್ಯ ಸಂಪತ್ತುಗಳನ್ನು, ಸುಖ-ಶಾಂತಿ-ಸಂವೃದ್ಧಿಗಳನ್ನು ದಯಪಾಲಿಸಲೆಂದು ಆ ಪರಾತ್ಪರನಾದ ಶ್ರೀ ವಿಶ್ವಕರ್ಮ ಪರಮೇಶ್ವರನಲ್ಲಿ ಪ್ರಾರ್ಥಿಸುತ್ತೇವೆ.

ಇತ್ಯಾಶಿಷಃ

||ಶ್ರೀ ಜಗದ್ಗುರು ಕಾಳಹಸ್ತ್ಯಾಚಾರ್ಯೋ ವಿಜಯತೇ||

ಶ್ರೀ ಶ್ರೀ ಶ್ರೀ ಜಗದ್ಗುರು ಶ್ರೀಮತ್ಕಾಳಹಸ್ತ್ಯಾಚಾರ್ಯ ಸ್ವಾಮಿ (ಶ್ರೀ ಸರಸ್ವತಿ ಪೀಠಾಧೀಶರು) ಶ್ರೀ ಮುದಾನಾಗುಂದೀ ಸಂಸ್ಥಾನ್, ಯಾತಗಿರಿ ವಿಶ್ವಕರ್ಮ ಏಕದಂಡಿಗಿ ಮಠ ಶಹಾಪೂರ

ಶ್ರೀ ಶ್ರೀ ದೇವೇಂದ್ರ ಮಹಾಸ್ವಾಮಿಗಳವರ

ಸನ್ನಿಧಿಯಿಂದ–

ವಿದ್ಯಾಭೂಷಣ ಅಧ್ವರ್ಯುಶಿರೋಮಣಿ, ವಿಶ್ವಕರ್ಮಜ್ಞಾನಧುರೀಣ ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯ, ಬೆಂಗಳೂರು, ಇವರಿಗೆ

ಶುಭಾಶೀರ್ವಾದವೂ

ಸತ್ವಯುತ, ಸಮಾಜ ರಚನೆಗೆ ಧರ್ಮಪರಂಪರೆಗಳು ಜೀವಂತವಾಗಿ ಉಳಿಯುವುದು ಅವಶ್ಯ. ವಿಶ್ವಕರ್ಮಧರ್ಮ ಪುನಶ್ಚೇತನಗೊಳ್ಳುವಲ್ಲಿ, ಅದರ ಪರಂಪರೆಯು ಜೀವಂತವಾಗಿ ಉಳಿಯುವಲ್ಲಿ ಶ್ರೀ 'ನಾ ಭಾ' ಅವರ ಪಾತ್ರ ಅತ್ಯಂತ ಹಿರಿದು. ಅವರ ಎಪ್ಪತ್ತನೇ ವರ್ಧಂತ್ಯುತ್ಸವ ನಾಡಿನ ಸಮಾಜಕ್ಕೆ ಹೊಸ ಚೇತನ ನೀಡಲಿ. ಶ್ರೀ ಗಾಯಿತ್ರೀ ವಿಶ್ವಕರ್ಮ ಭಗವಂತನ ಕೃಪೆಯಿಂದ ಅವರು ನೂರು ಸಂವತ್ಸರಗಳ ಪರ್ಯಂತರ ಬಾಳಿ ಸಮಾಜಕ್ಕೆ ಬೆಳಕಾಗಲಿ. ಅವರ ವಂಶ ಉತ್ತರೋತ್ತರ ಅಭಿವೃದ್ಧಿಯಾಗಲಿ.

ಶ್ರೀ 'ನಾಭಾ' ಅವರಿಗೆ ನಮ್ಮ ಶುಭಾಶೀರ್ವಾದಗಳು.

|| ಶ್ರೀಮತ್ಕಾಳಹಸ್ತ್ಯಾಚಾರ್ಯೋ ವಿಜಯತೇ ||

ಶ್ರೀ ಮತ್ಕಾಶ್ಯಾದಿ ಪಂಚಸಿಂಹಾಸನ ಪೂಜಿತ ಶ್ರೀ ವಿಶ್ವಕರ್ಮ ಜಗದ್ಗುರು ಶ್ರೀಮತ್ಕಾಳಹಸ್ತ್ಯಾಚಾರ್ಯ ಪರಂಪರಾಯುಪಾನ ಶ್ರೀಮದಾನಾಗೊಂದಿ ಸಂಸ್ಥಾನ ಸರಸ್ವತೀ ಪೀಠಾಧೀಶ್ವರ

ಶ್ರೀ ಶ್ರೀ ದಿವಾಕರ ಮಹಾಸ್ವಾಮಿಗಳವರು

ಗಿಣಿಗೇರಿ ಮಠ ಇವರ ಸನ್ನಿಧಿಯಿಂದ

ಆಶೀರ್ವಚನ

ವೇ. ಬ್ರ. ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರು ಕರ್ನಾಟಕದ ವಿಶ್ವಬ್ರಾಹ್ಮಣ ಸಮಾಜದ ಕಣ್ಮಣಿಗಳು. ವಿಶ್ವಕರ್ಮ ಹಾಗೂ ವೈಶ್ವಕರ್ಮಣ ಧರ್ಮದ ಬಗ್ಗೆ ವೇದ, ಉಪನಿಷತ್, ಇತಿಹಾಸ ಪುರಾಣಗಳಲ್ಲಿ ಉದ್ಗತವಾದ ಸಂಗತಿಗಳನ್ನು ಆಮೂಲಾಗ್ರವಾಗಿ ಶೋಧಿಸಿ ಅವರು ಸಮಾಜಕ್ಕೆ ಮಾಡಿರುವ ಮಹದುಪಕಾರಕ್ಕೆ ಅವರ ಅನೇಕ ಕೃತಿಗಳೇ ಸಾಕ್ಷಿ. ಅವರು ನಿಜವಾದ ಅರ್ಥದಲ್ಲಿ **ವಿಶ್ವಕರ್ಮ ಜ್ಞಾನ ಧುರೀಣರು.**

ಸದ್ಯ ಅವರ ಎಪ್ಪತ್ತೊಂದನೆಯ ವರ್ಧಂತ್ಯುತ್ಸವದ ಸಂದರ್ಭದಲ್ಲಿ ವಿಶ್ವ ಬ್ರಾಹ್ಮಣ ಸಮಾಜದವರು ರಾಜ್ಯಮಟ್ಟದಲ್ಲಿ ಸಮಿತಿಯನ್ನು ಏರ್ಪಡಿಸಿ ಕೊಂಡು ಈ ವಿದ್ವಾಂಸರನ್ನು ಸನ್ಮಾನಿಸುತ್ತಿರುವುದು ಸ್ತುತ್ಯ. ಅವರಿಂದ ಇತೋಪ್ಯತಿಶಯ ಕೃತಿಗಳು ಹೊರಬಂದು ಈ ಧರ್ಮವನ್ನು ಬೆಳಗಲೆಂದು ಅದಕ್ಕಾಗಿ ಶ್ರೀಮದಾಚಾರ್ಯರಿಗೆ ದೀರ್ಘಾಯುಷ್ಯ, ಆರೋಗ್ಯ ಮತ್ತು ಸಕಲ ಸಂಪತ್ತುಗಳನ್ನೂ ಅನುಗ್ರಹಿಸಲೆಂದು ಹಾರೈಸುತ್ತೇವೆ.

ಶ್ರೀಮದ್ರೂಪಾಚಾರ್ಯ ಸ್ಮರಣ ಪೂರ್ವಕ ಆಶೀರ್ವಾದಗಳು

|| ಶ್ರೀ ಕಾಳಹಸ್ತಾಚಾರ್ಯೋ ವಿಜಯತೇ ||

ಶ್ರೀ ಜಗದ್ಗುರು ಕಾಳಹಸ್ತ್ಯಾಚಾರ್ಯ ನಾಮ್ನ ಕಾಶ್ಯಾದಿ ಪಂಚ ಸಿಂಹಾಸನ ಪೂಜಿತ ಶ್ರೀ ಸರಸ್ವತಿ ಪೀಠಾಧೀಶರು ಶ್ರೀಮದಾನಾ ಗೊಂದೀ ಸಂಸ್ಥಾನ ಯಾತಗಿರಿ ಏಕದಂಡಿಗಿ ಮಠಾಧೀಶ್ವರರಾದ

ಶ್ರೀ ಶ್ರೀ ಗುರುನಾಥ ಮಹಾಸ್ವಾಮಿಗಳವರ

ದಿವ್ಯ ಸನ್ನಿಧಿಯಿಂದ

ಆಶೀರ್ವಚನ

ಸದ್ಗುಣಿಗಳು, ಮೇಧಾವಿಗಳು, ಪಂಡಿತ ಪ್ರಕಾಂಡರೂ ಆಗಿರುವ ವೇ. ಬ್ರ. ಶ್ರೀ. ನಾ. ಭಾ. ಚಂದ್ರಶೇಖರಾಚಾರ್ಯರಂತಹ ಸಮಾಜಾಭಿಮಾನಿಗಳು, ಕರ್ಮನಿಷ್ಠರು ಬಹಳ ವಿರಳ. ಇಂತಹವರ ಸೇವೆಯನ್ನು ಸ್ಮರಿಸಿ ಅವರನ್ನು ಗೌರವಿಸುವುದು ಸಮಾಜದ ಕರ್ತವ್ಯ. ಈ ರೀತಿಯ ವಿದ್ವತ್ಸನ್ಮಾನ ಕಾರ್ಯವನ್ನು ಸಮಾಜದ ಪರವಾಗಿ ನಡೆಸಲು ರೂಪಗೊಂಡಿರುವ ಶ್ರೀ 'ನಾ ಭಾ' ಸನ್ಮಾನ ಸಮಿತಿಯನ್ನು ಅಭಿನಂದಿಸುತ್ತೇನೆ.

ಶ್ರೀ 'ನಾ ಭಾ' ಅವರಂತಹವರನ್ನು ಪಡೆದಿರುವ ಸಮಾಜ ಮತ್ತು ನಮ್ಮ ಗುರುಪೀಠವೇ ಧನ್ಯ. ಶ್ರೀ ಏಕದಂಡೀಶನು ಶ್ರೀಮದಾಚಾರ್ಯರಿಗೆ ಸಕಲ ಆಯುರಾರೋಗ್ಯ ಭಾಗ್ಯಾದಿಗಳನ್ನು ಕರುಣಿಸಿ ನೂರ್ಕಾಲ ಅವರ ಸೇವೆ ಆದರ್ಶಗಳು ಸಮಾಜಕ್ಕೆ ದೊರೆಯುವಂತೆ ಅನುಗ್ರಹಿಸಲೆಂದು ಹರಿಸಿ ಆಶೀರ್ವದಿಸುತ್ತೇವೆ.

ಶುಭಮಸ್ತು

|| ಓಂ ನಮೋ ವಿಶ್ವಕರ್ಮಣೇ ||

ಶ್ರೀ ಶ್ರೀ ಶ್ರೀ ಜಗದ್ಗುರು ಶ್ರೀಮತ್ಕಾಳಹಸ್ತ್ಯಾಚಾರ್ಯ ನಾಮ್ನ (ಶ್ರೀ ಸರಸ್ವತಿ ಪೀಠಾಧೀಶರು) ಶ್ರೀಮದಾನಾಗೊಂದಿ ಸಂಸ್ಥಾನ ಯಾತಗಿರಿ ವಿಶ್ವಕರ್ಮ ಏಕದಂಡಿಗಿ ಮಠ ಮುದ್ದಾಬಳ್ಳಿ

ಶ್ರೀ ಶ್ರೀ ರುದ್ರ ಸ್ವಾಮಿಗಳು ಎಂ. ಎ., ಬಿ. ಎಡ್.,

ಅವರ ಸನ್ನಿಧಿಯಿಂದ

ಆಶೀರ್ವಚನ

ಉನ್ನತವೂ, ದೃಢವೂ ಆದ ದೇಹ. ಶ್ರೀಮಂತ ಹೃದಯ. ಅನುಭವದಿಂದ ಪಕ್ವಗೊಂಡ ಪಾಂಡಿತ್ಯ. ಗಂಭೀರ ವಿಚಾರಗಳನ್ನು ಕಂಚುಕಂಠದಿಂದ ಶ್ರೋತೃಗಳ ಹೃದಯಕುಹರವನ್ನು ಮುಟ್ಟಿಸಬಲ್ಲ ವಾಕ್ಪಟುತ್ವ, ಸಮಾಜಕ್ಕೆ ಆದರ್ಶಪ್ರಾಯರಾಗಿದ್ದು ಅದರ ಮಾರ್ಗದರ್ಶನ ಮಾಡಬಲ್ಲ ಚೈತನ್ಯವುಳ್ಳ ವೇ.ಬ್ರ. ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರು ಕಳೆದ ಐದಾರು ದಶಕಗಳಿಂದಲೂ ಸಮಾಜದ ಸೇವೆಯನ್ನು ನಾನಾ ಮುಖಗಳಿಂದ ನಡೆಸುತ್ತಿದ್ದಾರೆ. ಯಜ್ಞ-ಯಾಗ, ಪೂಜೆ-ವ್ರತ, ಷೋಡಶಕರ್ಮಗಳ ನಿರ್ವಹಣೆಯಲ್ಲಿ ನೆರವಾಗುತ್ತಾ ಹಲವಾರು ಬ್ರಹ್ಮಕಲಶಮಹೋತ್ಸವಗಳನ್ನು ನಿರ್ವಹಿಸುತ್ತಾ ಜನರಲ್ಲಿ ಆಸ್ತಿಕತೆಯು ಬೆಳೆಯಲು ನೆರವಾಗಿದ್ದಾರೆ. ವಿಶ್ವಕರ್ಮ, ವಿಶ್ವಕರ್ಮ ಧರ್ಮಗಳ ಬಗ್ಗೆ ಆಳವಾಗಿ ಅಭ್ಯಾಸ ನಡೆಸಿ ಅನೇಕ ಲೇಖನಗಳನ್ನು, ಹೊತ್ತಗೆಗಳನ್ನು ಪ್ರಕಟಿಸಿದ್ದಾರೆ; ಹಲವು ವೇದಿಕೆಗಳಿಂದ ಮಾತನಾಡಿದ್ದಾರೆ.

ವಿದ್ಯಾಭೂಷಣ, ಅಧ್ವರ್ಯುಶಿರೋಮಣಿ, ವಿಶ್ವಕರ್ಮಜ್ಞಾನಧುರೀಣ, ವಿದ್ಯಾಲಂಕಾರ ಇತ್ಯಾದಿ ಬಿರುದುಗಳಿಂದ ಹಲವಾರು ಸಂಘ-ಸಂಸ್ಥೆಗಳು ಶ್ರೀಮದಾಚಾರ್ಯರನ್ನು ಗೌರವಿಸಿವೆ. ಇಂತಹವರ ಸಪ್ತತ್ಯಬ್ದಿ ವರ್ಧಂತಿ ಮಹೋತ್ಸವದ ಸಂದರ್ಭದಲ್ಲಿ ಸನ್ಮಾನಿಸುತ್ತಿರುವುದು ತುಂಬಾ ಹರ್ಷದ ಸಂಗತಿ.

ನಮ್ಮ ಶ್ರೀಮಠದ ಮೂಲಪುರುಷರಾದ ಶ್ರೀಕಾಳಹಸ್ತ್ಯಾಚಾರ್ಯರು ಶ್ರೀಮದಾಚಾರ್ಯರಿಗೆ ಎಲ್ಲಾ ಸನ್ಮಂಗಳಗಳನ್ನೂ ಕರುಣಿಸಲಿ. ಅವರ ಸೇವೆ ಸಮಾಜಕ್ಕೆ ನೂರ್ಕಾಲ ದೊರೆಯಲೆಂದು ಪ್ರಾರ್ಥಿಸುತ್ತೇವೆ.

ಇತಿ ಶ್ರೀಕಾಳಹಸ್ತ್ಯಾಚಾರ್ಯ ಸ್ಮರಣೆಗಳು

ಶ್ರೀ ಕಾಶ್ಯಾದಿ ಪಂಚ ಸಿಂಹಾಸನ ಪೂಜಿತರಾದ, ಸಾವಿತ್ರಿ ಪೀಠಾಧ್ಯಕ್ಷರಾದ ಬೆಲಗೂರು ರೂಢಾಚಾರ್ಯವಂಶ ಸಂಭೂತರಾದ ಶ್ರೀ ದೇವಣಾಚಾರ್ಯ ಕರಕಮಲ ಸಂಜಾತ ವಡ್ಡನಹಾಳ್ (ಚನ್ನಗಿರಿ ತಲ್ಲೂಕ) ಬೆಲಗೂರು ಸಂಸ್ಥಾನಾಧೀಶ್ವರ

ಶ್ರೀ ಶ್ರೀ ಶಂಕರಾಚಾರ್ಯ ಮಹಾಸ್ವಾಮಿಗಳವರ

ದಿವ್ಯ ಸನ್ನಿಧಾನದಿಂದ

ಶುಭ ಸಂದೇಶ

ವೇ. ಬ್ರ. ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರ ಎಪ್ಪತ್ತೊಂದನೆಯ ವರ್ಧಂತ್ಯುತ್ಸವ ಸಂದರ್ಭದಲ್ಲಿ ಕರ್ನಾಟಕದ ವಿಶ್ವಬ್ರಾಹ್ಮಣರು, ಅವರೊಂದಿಗೆ ನೆರನಾಡಿನ ವಿಶ್ವಬ್ರಾಹ್ಮಣರೂ ಸೇರಿ ಸನ್ಮಾನಿಸುತ್ತಿರುವುದು ತುಂಬಾ ಸಂತೋಷದ ಸಂಗತಿ. ವೇದಾಗಮೋಪನಿಷತ್ತುಗಳಲ್ಲಿಯ ವಿಶ್ವಕರ್ಮ ತತ್ತ್ವ ಸಾಕ್ಷಾತ್ಕಾರವನ್ನು ಮಾಡಿಕೊಂಡು, ಅದನ್ನು ಸಮಾಜದ ಸಾಮಾನ್ಯರಿಗೂ ನಿಲುಕಿಸುವಂತೆ ತಾವು ಮಾಡಿರುವ ಪ್ರಯತ್ನ ಅನನ್ಯವಾದುದು. ಯಜ್ಞ - ಯಾಗಾದಿಗಳನ್ನು, ನಿತ್ಯ - ನೈಮಿತ್ತಿಕ ಕರ್ಮಗಳನ್ನು ನಡೆಸುವಲ್ಲಿ ಅಧ್ವರ್ಯುಗಳಾಗಿ ಸಮಾಜಕ್ಕೆ ಚೈತನ್ಯ ತುಂಬುತ್ತಿರುವಿರಿ. ತಮ್ಮ ವಾಗ್ವೈಖರಿಯಿಂದ, ನುರಿತ ಲೇಖನಿಯಿಂದ ಸಾಕಷ್ಟು ಸಮಾಜ ಜಾಗೃತಿಯನ್ನುಂಟು ಮಾಡುತ್ತಿದ್ದೀರಿ.

ಸರ್ವಶಕ್ತನಾದ ಆ ವಿಶ್ವಕರ್ಮ ಪರಮೇಶ್ವರನು ನೂರು ವರ್ಷಗಳ ಕಾಲ ಆರೋಗ್ಯ ಐಶ್ವರ್ಯಗಳನ್ನು ಕೊಟ್ಟು ಸಕಲ ಸನ್ಮಂಗಳನ್ನು ಕರುಣಿಸಿ ಸಮಾಜಕ್ಕೆ ತಮ್ಮ ಸೇವೆ ಲಭಿಸಲಿ ಎಂದು ಹಾರೈಸುತ್ತೇವೆ.

ಇತ್ಯಾಶಿಷಃ

॥ ಓಂ ತತ್ಸತ್ ಪರಬ್ರಹ್ಮಣೇ ನಮಃ ॥

ಶುಭಾಶಯ

ವಿಶ್ವಕರ್ಮ ತತ್ವಪಂಡಿತರೂ ವೇದಗಳ ಪೂರ್ವೋತ್ತರ ವಿಷಯ ತಜ್ಞರೂ, ಯಜ್ಞ ಕರ್ಮಾಚರಣ ಧುರೀಣರೂ, ಸವಿನಯ ಸಹನಶೀಲರೂ, ಸಮಾಜ ಹಿತಚಿಂತಕರೂ ಆದ ವೇ. ಬ್ರ. ಶ್ರೀ ನಾ. ಭಾ. ಚಂದ್ರಶೇಖರಾಚಾರ್ಯರವರು ಕೇವಲ ಕರ್ಮಾಚರಣೆಯುಳ್ಳವರಷ್ಟೇ ಅಲ್ಲ, ವಿಶ್ವಕರ್ಮ ತತ್ವವೆಂಬ ನೈಜ ಬ್ರಹ್ಮಸಿದ್ಧಾಂತದಲ್ಲಿ ಪಳಗಿದವರು. ಉಪನಿಷತ್ತುಗಳ ಪುರಾಣೇತಿಹಾಸಗಳನ್ನು ಕೂಲಂಕಷವಾಗಿ ವಿವೇಚನೆ ಮಾಡುವ ಪ್ರಜ್ಞೆಯುಳ್ಳವರು. ಪರೋತ್ಕರ್ಷದಲ್ಲಿ ಆನಂದ ಪಡೆಯುವ ಹಿರಿಯ ಗುಣವುಳ್ಳವರು. ಒಳ್ಳೆಯ ವಾಗ್ಮಿಗಳು, ಲೇಖಕರಾದ ಇಂಥ ಪುಣ್ಯಾತ್ಮ ಪೂಜ್ಯ ಪುರೋಹಿತರನ್ನು ಪಡೆದ ವಿಶ್ವಕರ್ಮವಂಶದೇವತೆಯು ಧನ್ಯಳು. ಅವರು ತಮ್ಮ ಅಧ್ವರ್ಯುದಲ್ಲಿ ಅನೇಕ ಪುರೋಹಿತರಿಗೆ ಮಾರ್ಗದರ್ಶನ ಮಾಡಿ ಅವರನ್ನು ಪಳಗಿಸಿದರು. ಇದನ್ನೆಲ್ಲಾ ಕಣ್ತುಂಬ ನೋಡಿದ ನಾನು ಒಳ್ಳೆಯ ಗುಣ ಕರ್ಮಗಳನ್ನು ಕೊಂಡಾಡುವುದೂ ಒಂದು ಪೂಜೆ ಎಂದು ಹೇಳಿದ್ದೇನೆ.

ಅವರು ಶತಮಾನೋತ್ಸವ ಆಚರಿಸುವ ಪರ್ಯಂತ ಶ್ರೀ ಪ್ರಭು ವಿಶ್ವಕರ್ಮನು ಅವರ ದೇಹವನ್ನು ನಮ್ಮೆಲ್ಲರ ಮಧ್ಯದಲ್ಲಿ ಆಯುರಾರೋಗ್ಯದಿಂದ ಇರಲು ಆಶೀರ್ವದಿಸಲಿ. ಅವರ ಅಂತರಂಗದಲ್ಲಿ ಸಂಕಲ್ಪರೂಪದಿಂದ ಇರುವ ಅನೇಕ ಮಹತ್ಕಾರ್ಯಗಳು ಕಾರ್ಯರೂಪಕ್ಕೆ ಬರಲಿ. ಶ್ರೀ ವಿಶ್ವಕರ್ಮ ಸಮಾಜವು ಅವರ ಸದುಪಯೋಗ ಪಡೆಯಲಿ. ನಾನೂ ಅದರಲ್ಲಿ ಭಾಗಿಯಾಗುವ ಯೋಗ ಒದಗಲಿ ಎಂದು ಪ್ರಭು ಶ್ರೀ ವಿಶ್ವಕರ್ಮನಲ್ಲಿ ಆಶಿಸುವೆನು.

ಇತಿ, ಶಿವಂ ಮಂಗಲಂ.

ಸಜ್ಜನ ಸೇವಕ

ಶ್ರೀ. ಶ್ರೋ. ಬ್ರ. ಚಂದ್ರಶೇಖರ ಸ್ವಾಮೀಜಿ

ಶ್ರೀ ಶಾಂಡಿಲ್ಯಾಶ್ರಮ, ಹುಬ್ಬಳ್ಳಿ-೨೩

ಕಾವ್ಯ ಕನಕಾಭಿಷೇಕ

೧. ಶುಭಾಶಿಷಃ

ನಾಭಾ ವಂಶ್ಯಃ ಶಶಿಮಕುಟ ನಾಮಾ
ವಯಃ ಸಪ್ತತಿರ್ಭಾಕ್
ಸರ್ವಜ್ಞತ್ವಂ ಬುಧಹಿತ ಮಹೋ
ಪುತ್ರ ಪೌತ್ರಾದಿ ಶೋಭಾ
ಸಂಘೋತ್ಕರ್ಷಾತಿಶಯ ಮತಿ
ಗಾಂಭೀರ್ಯ ಭಾವಾಸ್ತ್ವಯಿಸ್ಥಾಃ
ಪಾಯಾತ್‌ತ್ವಂ ವಿಶ್ವಸೃಡಖಿಲದಃ
ಸರ್ವಭೋಗೈಕ ಯುಕ್ತ್ಯಾ ||

ವಿಮರ್ಶಕಾಚಾರ್ಯ ಶಿಲ್ಪಕಳಾಕೋವಿದ
○ ಸ್ವರ್ಣ ಸುಬ್ರಹ್ಮಣ್ಯ ಕವಿಃ

೩. ಸುವರ್ಣಾಭಿಷೇಕಃ

ಮಮ 'ಜ್ಞಾನಾನಂದ' ಪ್ರಮುಖ ಸುಹೃದಾ ಸೇವಿತಪುರೇ
ಸುವರ್ಣಕ್ಷೇತ್ರೇ ತ್ವಾಂ ಸಕಲ ವಿದುಷಾಂ ಹಾರತರಳಮ್ ।
ಶ್ರುತಿ ಜ್ಞಾನಾಂಭೋಧೇಃ ಕಲಶಜಮುದಿಂ ಶಿಲ್ಪಧಿಷಣಾ
ಧುರಂ ದೃಷ್ಟ್ವಾತ್ವಹೃಷ್ಟೋಽಭವ ಮಭಿಮುಖಂ ಭಾಗ್ಯಮಿವ ಮೇ ॥೧॥

ನಕುತ್ರಾಽಪೀಕ್ಷೇಽಹಂ ತವಸಮಬುಧಂ ವೈದಿಕ ಮಣಿಂ
ಕಳಾಶ್ರೀ ಸಂಪೂರ್ಣಂ ಕವಿಜನನುತಂ ವ್ಯಾಸರಚನಾ ।
ಯಶಶ್ಚಾಂದ್ರೀಸಾಂದ್ರಂ ಚ ಬಹುಸದಸಾಂ ವಕ್ತೃತಿಲಕಂ
ವಿಶಿಷ್ಟೇ ಕರ್ಣಾಟೇಽವಿರಳ ವಿಜಯಸ್ತೇಽಸ್ತು ಸತತಮ್ ॥ ೨ ॥

'ನಾಭಾ' ವಂಶಾಂಬುಧೇಶ್ಚಂದ್ರಂ ಚಂದ್ರಶೇಖರ ನಾಮಕಮ್ ।
ನಾಭಾನೇದಿಷ್ಟ ಶಿಲ್ಪೀಂದ್ರ ಪ್ರಾಭವ ಶ್ರೀ ಮನೋಹರಮ್ ॥೩॥

ಋಗ್ಯಜುಸ್ಸಾಮ ವೇದಾನಾಂ ಸದಾ ಪಠನ ಪಾಠನೈಃ ।
ಪರಿಪೂತಗಳಂ ದ್ವೇಧಾ ಸಿದ್ಧಶಿಲ್ಪೇ ಕನತ್ಕರಮ್ ॥೪॥

ಇದಾನೀಂ ಬೆಂಗಳೂರ್ ಪುರ್ಯಾಂ ಸಪ್ತತ್ಯಬ್ದ ಮಹೋತ್ಸವೇ ।
ಸಾವಿತ್ರೀ ತ್ವಷ್ಟೃದೇವೌ ತ್ವಾಂ ಅವೇತಾಂ ಕರುಣಾ ದೃಶಾ ॥೫॥

ತ್ರಿಭಾಷಾಕವಿಃ ಅವಧಾನಿಶೇಖರಃ
○ ಪುಲಿವರ್ತಿ ಶರಭಾಚಾರ್ಯ ಕವಿಃ

೩. ಅಭಿನಂದನಾಶೀಃ ಕುಸುಮಾನಿ

ಸಂಸ್ಕೃತಾಂಧ್ರಾಂಗ್ಲ ಕರ್ಣಾಟ ಭಾಷಾಸು ವಿಹಿತಶ್ರಮಂ ।
ಯಾಜಕಾಗ್ರೇಸರಂ ಧೀರಂ ವೇದವಿದ್ಯಾ ವಿಪಶ್ಚಿತಮ್ ॥ ೧ ॥

ವಿಶ್ವಕರ್ಮೇಶ ಪಾದಾಬ್ಜ ಬಂಭರಾಯಿತ ಮಾನಸಂ ।
ವಿಶ್ವಬ್ರಾಹ್ಮಣ ಸಂಘಾಭಿವೃದ್ಧಯೇಽರ್ಪಿತ ಜೀವಿತಮ್ ॥೨॥

ಕರ್ಣಾಟಾಂಧ್ರ ಮಹಾರಾಷ್ಟ್ರ ಕೇರಳ ದ್ರವಿಡಾದಿಷು ।
ಶ್ರೀ ಪಂಚಬ್ರಹ್ಮ ಯಜ್ಞಾನಾ ಮಸಂಖ್ಯಾನಾಂ ಪ್ರಯೋಜಕವ್ ॥೩॥

ವೇದ ಧರ್ಮ ಪ್ರಚಾರಾಯ ಬದ್ಧದೀಕ್ಷ ಮಕಲ್ಮಷಂ- ।
ಪ್ರಭುತ್ವೋದ್ಯೋಗ ವಿಶ್ರಾಂತಂ ವಿಶ್ವಬ್ರಾಹ್ಮಣ ವಂಶಜಂ ॥೪॥

ವಿಶ್ವಬ್ರಾಹ್ಮಣ ಧರ್ಮೈಕ ಪೀಠ ನಿರ್ವಾಹಕಂ ಬುಧಂ ।
ಸಾನಗ ಬ್ರಹ್ಮ ಮೌನೀಂದ್ರ ಗೋತ್ರೋದ್ಭವ ಮಕಲ್ಮಷಮ್ ॥ ೫ ॥

ಅಸ್ಮಿನ್ಮಿತ್ರ ಸಹಸ್ರೇಷು ವರಿಷ್ಠಂ ವಾಗ್ಮಿ ಸತ್ತಮಂ ।
ಶ್ರೋತ್ರೀಯ ಬ್ರಹ್ಮ ಜಿಜ್ಞಾಸುಂ ವೇದಾಚಾರ ಪರಾಯಣಂ ॥೬॥

ಶ್ರೀ ಚಂದ್ರಶೇಖರಾಚಾರ್ಯಂ ಋಷಿಕಲ್ಪ ಮನಿಂದಿತಂ ।
ಗಾಯತ್ರೀವಲ್ಲಭಃ ಪಾಯಾತ್ ಸಪ್ತತ್ಯಬ್ದ ಮಹೋತ್ಸವೇ ॥ ೭ ॥

ದರ್ಶನಾಚಾರ್ಯಃ

○ ಡಾ. ಕೊಂಡೂರು ವೀರರಾಘವಾಚಾರ್ಯಃ

೪. ಅಭಿನಂದನ ಸುಮಾಂಜಲಿ

ಶ್ರೀಚಂದ್ರಶೇಖರ ಕವಿಂ ಸಕಲತ್ರಪುತ್ರಂ ।
ಸ್ತೋತುಂ ಭೃಶಂ ಸದಸಿ ಸಪ್ತತಿವರ್ಷಪೂರ್ತ್ಯಾ ।
ಏಷಾ ಮದೀಯರಸನಾ ಲಸತಿ ಪ್ರಸನ್ನಂ ।
ವಿದ್ಯಾವದಾತಮನಸಂ ತಪಸಾ ಪ್ರದೀಪ್ತಮ್ ॥ ೧ ॥

ಶ್ರೀರಸ್ತು ಸರ್ವವಿಜಯಶ್ರೀರಸ್ತು ಕಲತ್ರಪುತ್ರಮಿತ್ರವತೇ
ಭವತೆ ಶಶ್ವದುಪಾತ್ತತ್ರಿವರ್ಗ ಫಲಪಾಕಮನುಭವತೆ ॥ ೨ ॥

ಸಪ್ತತಿ ವರ್ಷ ಮಹೋತ್ಸವ ಸದಸಿ ಮಹತಿ ವಿದುಷಿ ಭವತಿ ಭಕ್ತಿಪರಾಃ
ಆಯಾಂತಿ ದಿಗ್ವಿದಿಕ್ಷು ಪ್ರಥಿತಾ ಆಶೀರ್ವಚೋ ದಾತುಮ್ ॥ ೩ ॥

ಇಮೇ ವಾಗ್ಬ್ರಹ್ಮಾಣೋ ಹೃದಿ ವಚಸಿ ಕಾಯೋಽಪಿ ಚ ಸಮಾಃ
ದದತ್ಯಾಶೀರ್ವಾದಂ ವಿದಧತಿ ದಿಶಃ ಶಬ್ದಮುಖರಾಃ
ನಗರ್ಯೇಷಾ ಯೋಷಾ ಧೃತ ಸಕಲಭೂಷೇವ ವಿದುಷೀ
ಭವಂತಂ ಧೀಮಂತಂ ಗುಣಗಣ ಪರೀತಂ ಸ್ತುತವತೀ ॥ ೪ ॥

ಅನ್ಯೈ ಸಂತು ಮನೀಷಿಣೋ ಹಿ ಬಹವಃ ಕೋ ನ್ವಸ್ತಿ ಸರ್ವಾತ್ಮನಾ
ವಿಶ್ವಬ್ರಾಹ್ಮಣ ಧರ್ಮರಕ್ಷಣರತೋಽನುಷ್ಠಾತೃತಾಪುಣ್ಯಭಾಕ್
ತತ್ತ್ವಾಂ ನೌಮಿ ಜನುಃ ಶತೈಃ ಕೃತಪರೀಪಾಕೇನ ಬದ್ಧೋಂಽಜಲಿ
ರ್ಯೋಽಹಂ ತ್ವಾಂ ಸ್ಪೃಹಯಾಮಿ ಧರ್ಮನಿರತಂ ತೇನಾಸ್ಮಿ ಪೂತಃಸತಾಮ್ ॥೫॥

ದಯಾ ಸತ್ಯಶುಚಿರ್ಭೂತ್ವಾ ಭವಾನ್ನಿತ್ಯ ಮುಪಾತ್ತವಾನ್
ಅನುಪ್ರವೇಶ ತತ್ತ್ವಂ ಚ ಧರ್ಮಂ ಕೋಽಹಂ ಪ್ರಶಂಸಿತುಮ್ ॥೬॥

ಶ್ರೀ ವಿಶ್ವಕರ್ಮ ಪರಮೇಶ್ವರ ಸುಪ್ರಭಾತ
ವ್ಯಾಖ್ಯಾತೃಕರ್ತೃ ಫಲಮತ್ರ ಸಮಂ ಬುಭುಕ್ಷ್ವೋಃ ।
ಸ್ಪರ್ಧಾಽಽವಯೋರ್ನಹಿ ಪರಂತು ಭವಾನ್ ಗರೀಯಾನ್
ವಿದ್ಯಾವಯೋಽಧಿಕತಯಾ ಪ್ರಣಮಾಮಿ ತೇನ ॥ ೭ ॥

ಅಭಿನವ ಮುರಾರಿಃ, ಮಧುವಿದ್ಯಾತೀರ್ಥಃ

○ ದುರಿಶೇಟ ವೇಂಕಟರಾಮಾಚಾರ್ಯ ಸೌಪರ್ಣಃ

೫. ಅಭಿನಂದನ ಪದ್ಯಮಾಲಿಕಾ

ಶ್ರೀ ನಾಭಾನ್ವಯ ಪಾಥೋಧೇ
ಶ್ಚಂದ್ರಮಾಶ್ಚಂದ್ರ ಶೇಖರಃ ।
ಸಪ್ತತ್ಯುತ್ಸವ ಸಂದರ್ಭೇ
ಗೃಹ್ಣೀಯಾನ್ಮಮವಂದನಮ್ ॥೧॥

ಕರ್ಣ್ಣಾಟ ದ್ರವಿಡಾಂಧ್ರ ಕೇರಳ ಮಹಾರಾಷ್ಟ್ರಾದಿ ಸ್ತುತಂ
ಶ್ರೀಮನ್ಮಂಜುಲ ವಾಗ್ವಿಶೇಷವಿಭವಂ ನಾಭಾನ್ವಯೋದ್ಧಾರಕಮ್ ।
ಬ್ರಹ್ಮಶ್ರೀ ನಿಗಮ ಸ್ವರೂಪ ಮಮಲಂ ಸದ್ವಕ್ತ್ರ ಪಂಚಾನನಂ
ವಿಶ್ವಬ್ರಾಹ್ಮಣ ವಂಶವರ್ಧನ ಕರಂ ವೀರಂಭಜೇ ಶ್ಯಾಮಲಮ್ ॥೨॥

ದೀರ್ಘಾಯುರ್ಭವ! ಚಂದ್ರಶೇಖರ ಬುಧ! ಶ್ರೀರಸ್ತು ಗೀರಸ್ತು ತೇ
ನಿತ್ಯಾರೋಗ್ಯ ವಿಭೂತಿರಸ್ತು ವಿಜಯೋಸ್ತ್ವೈಶ್ವರ್ಯ ಮಸ್ತ್ವನ್ವಹಮ್ ।
ವಾಣೀ ನರ್ತಿತ ಜಿಹ್ವಿಕಾಗ್ರ ವಿಲಸದ್ವಾಕ್ಯ ಪ್ರಸೂನಾಯತೇ
ಗಾಯತ್ರೀ ವರ ವಿಶ್ವಕರ್ಮ ಕೃಪಯಾ ಸಂಘಾಭಿವೃದ್ಧಿಂ ಕುರು ॥೩॥

ಸರ್ವತೋ ಮುಖ ಪಾಂಡಿತ್ಯಂ
ಸಂಘಾಭ್ಯುದಯ ಕಾರಕಮ್ ।
ಜ್ಞಾನಶ್ರೀವರ್ಧನಂ ನಿತ್ಯಂ
ಸಭಾಯಾಂ ದರ್ಶಿತಂ ತವ ॥೪॥

ಶ್ರೀ ಚಂದ್ರಶೇಖರಾಚಾರ್ಯಂ 'ನಾಭಾ'ವಂಶಕಳಾನಿಧಿಮ್ ।
ವಕ್ತ್ರ ಪಂಚಾನನಂ ವಂದೇ ಕರ್ಣ್ಣಾಟರಾಷ್ಟ್ರ ಸಂಭವಮ್ ॥೫॥

ಗಾಯತ್ರೀ ವಿಶ್ವಕರ್ಮಾಣೌ ಜಗದಾದ್ಯ ವಧೂವರೌ ।
ದತ್ತಾಂ ವಧೂವರಾಭ್ಯಾಂ ವಾಂ ನಿತ್ಯ ಕಲ್ಯಾಣ ವೈಭವಮ್ ॥೬॥

ಕವಿರತ್ನ ವಿದ್ವಾನ್
ಮಂಗಮೋಲು ಆದಿಶೇಷ ಶಾಸ್ತ್ರಿ ಎಂ. ಎ., ಬಿ.ಎಡ್.,

೬. ಅಭಿವಾದನಮ್

ಏಷಾ ಹಿ ಕುಂತಲ ವಸಂತ ವನಾಂತ ಭೂರಿ ।
ಶ್ರೀ ನಾಗಮಂಗಳ ಪುರೀ ಪರಮೋದಯಸ್ಯ ।
ಶ್ರೀ ಭಾಸ್ಕರಾರ್ಯ ಕುಲನಂದನ ಪಾರಿಜಾತ ।
ಶ್ರೀ ಚಂದ್ರಶೇಖರ ಗುರೋಃ ಶುಭ ಸಪ್ತತಿ ಶ್ರೀಃ ॥೧॥

ನಾಭಾನೇದಿಷ್ಠ ಪುತ್ರ್ಯಾಯಾ
ಶೋಭಾಸಂಭಾರಭಾವಿತಾ ।
ವೈಶ್ವಕರ್ಮಣ್ಯ ಧರ್ಮಶ್ರೀ
ಸ್ತ್ವಾಂ ರಕ್ಷತು ಮಹೋದಯ ॥೨॥

ಕರ್ಣಾಟಾಂಧ್ರೇಷುದೇಶೇಷು ಮಹಾರಾಷ್ಟ್ರೇಷುಸಂಭವಾಃ ।
ಸಾಂಘಿಕಾಸ್ಸೋದರಾಸ್ಸರ್ವೇ ಪ್ರಬುದ್ಧಾಸ್ತವ ಬೋಧನೈಃ ॥೩॥

ಮೃದುಲಾ ಮಧುರಾ ರಮ್ಯಾ ಜಟಾಪಾಠಾದಿಭಿರ್ಯುತಾ ।
ಸುಧಾಕರ ಕಥೋ ಪೇತಾ ತವ ಸುಂದರ ವಾಕ್ಸುಧಾ ॥೪॥

ಪೌರೋಹಿತ್ಯೇನ ಧರ್ಮೇಣ ಪುಣ್ಯಕಾರ್ಯ ಕ್ರಮಾದಿಭಿಃ ।
ಆಚಾರ್ಯಸ್ಸುಯಶೋ ದೀಪ್ತಃ ಜೀಯಾದ್ವರ್ಷಶತಂ ಸುಖಂ ॥೫॥

ನಾಗೇಶ್ವರೇಣ ಪದಪಾಠಿ ಕುಲೋದ್ಭವೇನ ।
ವಾಗೀಶ್ವರೀ ಪರಮ ಕಾರುಣಿಕಾತ್ಮನಾ ಚ ।
ಸೌದರ್ಯ ಭಾವಮನುಭೂಯ ಕೃತೋಯಮೇತಂ ।
ಸ್ವೀಕೃತ್ಯ ಸನ್ಮತಿ ಮುದಂ ಸ ಕರೋತು ಧನ್ಯಃ ॥೬॥

ಸ್ಥಾಪತ್ಯವೇದಾಚಾರ್ಯಃ
○ ಪದಪಾಠೀ ನಾಗೇಶ್ವರರಾಯಃ

೭. ಪೊರೆಯಲಿ ಅನವರತ

ಚಂದ್ರಶೇಖರ ಪರಶಿವನು ಸಂ ।
ಕ್ರಂದನಾದಿ ಸುರಾಳಿ ವಂದಿತ ।
ಚಂದ್ರ ಸೂರ್ಯಾಗ್ನಿಗಳ ಲೋಚನ ಮಂಗಳಾಂಗನುತಾಂ ॥
ಚಂದ್ರ ಮುಖಿ ಪಾರ್ವತಿಯ ಪ್ರಿಯನುಂ ।
ಸಾಂದ್ರ ಕೀರ್ತಿಯನಿತ್ತು ನಾಭಾ ।
ಚಂದ್ರಶೇಖರ ಶರ್ಮರನು ಪೊರೆಯಲ್ಕೆ ಅನವರತ. ॥ ೧ ॥

ಆಗಮಗಳಾಧಾರಭೂತನು
ನಾಗಯಜ್ಞದ ಸೂತ್ರ ಪರಮನು ।
ನಾಗಮಂಗಲ ಭಾಸ್ಕರಾಚಾರ್ಯರ ಸುಪುತ್ರರಿಗೆ ॥
ಬೇಗ ಸನ್ಮಂಗಳವ ಕರುಣಿಸಿ ।
ಭೋಗ ಭಾಗ್ಯಾಯುಷ್ಯವೀಯುತ ।
ನೀಗಿ ದೋಷವ ಸಪ್ತದಶ ವತ್ಸರದಿ ಶುಭ ಕೊಡಲುಂ ॥ ೨ ॥

ಇಂದುಮುಖಿ ಗಾಯತ್ರಿಯುಂ ಸಾ ।
ನಂದದಿಂ ಪೊರೆಯಲ್ಕೆ ಇವರನು ।
ಎಂದಿಗೂ ಕೈಬಿಡದೆ ವಿಶ್ವದ ಜನನಿಯಿಷ್ಟಗಳ ॥
ಸಾಂದ್ರತರ ಮಾಗಿತ್ತು ಕೀರ್ತಿಯ ।
ನಂದಿಸದೆ ತಾನೆಲ್ಲಕಾಲವು ।
ಸಂದ ಕಷ್ಟಗಳನು ಪರಿಹರಿಸಲ್ಕೆ ಪ್ರೀತಿಯೊಳು ॥ ೩ ॥

ವೇದಗಳಲುಕ್ತವಹ ಶ್ರೀ ಶ್ರೀ ।
ವೇದವೇದ್ಯನ ವಿಶ್ವಕರ್ಮನ ।
ಸಾದರದಿ ತತ್ವಾರ್ಥ ತಿಳಿಸುತ ಸರ್ವಜನಗಳಿಗು ॥
ಮೋದದಿಂ ಮಂತ್ರಾರ್ಥವರುಹುತ ।
ವಾದಗೈಯ್ಯಲು ಇತರ ವರ್ಗವು ।
ಭೇದವಡಗಿಪ ಧೀಮಣಿಗಳುಂ 'ನಾ ಭಾ' ಶ್ರೀಯವರುಂ ॥ ೪ ॥

ಇವರು ವಿಶ್ವಬ್ರಾಹ್ಮಣಾನ್ವಯ ।
ರಿವರು ಸಾನಗ ಗೋತ್ರಜನಿತರು ।
ಇವರು ವೈದಿಕ ಧರ್ಮಮಾರ್ಗದಿ ನುರಿತ ವ್ಯಕ್ತಿಗಳು ॥
ಇವರು ಪಂಡಿತ ವರ್ಗ ಗಣ್ಯರು ।
ಇವರ್ಗಿಗಂ ನಾವೆಲ್ಲ ಋಣಿಗಳು ।
ಶಿವನಿವರ್ಗಿಗಂ ಶ್ರೇಯ ಕೊಡಲೆಂದಾಶಿಪೆವು ಸತತಂ ॥ ೫ ॥

ನಿಷ್ಠೆಯಿಂ ಸಪ್ತದಶ ಶಾಂತಿಯ ।
ಸ್ಪಷ್ಟದಿಂದಾಚರಿಸಿ ಇವರುಂ ।
ಶ್ರೇಷ್ಠತರ ಶ್ರೀ ವಿಶ್ವಕರ್ಮನ ದಯದಿ ಶತವರ್ಷ ॥
ಇಷ್ಟ ಮಿತ್ರರ ಕೂಡಿ ಸುಖಿಸಲಿ ।
ನಷ್ಟವಿಲ್ಲದ ಶುಭವ ಪೊಂದುತ ।
ಸೃಷ್ಟಿಯೊಳು ವಿಶ್ವಾತ್ಮ ಕರುಣಾ ದೃಷ್ಟಿಯೊಳಗಿವರುಂ ॥ ೬ ॥

ಪದ್ಮಭವನಾಯುಷ್ಯ ವೀಯಲಿ ।
ಪದ್ಮನಾಭನು ಸುಖದಿ ಪೊರೆಯಲಿ ।
ಪದ್ಮವೈರಿಯ ಧಾರಿ ಶಂಕರ ಶ್ರೇಯ ಕರುಣಿಸಲಿ ॥
ಪದ್ಮ ಮಿತ್ರನು ತೇಜವೀಯಲಿ ।
ಪದ್ಮಸದನೆಯು ಸಿರಿಯುತಾನುಂ ।
ಸದ್ಮದಲಿ ನೆಲೆಸುತ್ತಾ ಎಲ್ಲಕಾಲ ರಕ್ಷಿಸಲಿ ॥ ೭ ॥

○ **ಕೆ. ಎನ್. ವೀರಾಚಾರ,**

೮. ಹರಕೆ

ವಿಶ್ವವನು ನಿರ್ಮಿಸಿದ ದೇವನು
ವಿಶ್ವದಲಿ ತಾನುದಿಸಿ ನಾನಾ
ವಿಶ್ವಜೀವಿಗಳಾಗಿ ಕಾಣ್ಬನು ತನ್ನ ಲೀಲೆಯಲಿ ।
ವಿಶ್ವಜೀವಿಗಳೊಳಗಂ ಮಾನ
ವಶ್ರೇಷ್ಠನೆನಿಸಿಹನಿವರೊಳಗೆ
ವಿಶ್ವಕರ್ಮನ ತಿಳಿದನಾವನೊ ಪುಣ್ಯಜೀವಿಯವ ॥೧॥

ಇಂಥ ಪುಣ್ಯಾತ್ಮರಲಿ ರಂಜಿಪ
ಶಾಂತ ನಾಭಾ ಚಂದ್ರಶೇಖರ
ರಂತೆನುವ ವೇದಜ್ಞ ವಿಶ್ವಬ್ರಹ್ಮಜ್ಞಾನಿಗಳು ॥
ಸಂತರಂ ಸುಜ್ಞಾನಿಗಳುಂ ನಿ
ಶ್ಚಿಂತೆಯಿಂ ಶ್ರೀ ವಿಶ್ವಕರ್ಮನ
ನಂತ ಮಹಿಮೆ ಬಲ್ಲ ಪ್ರೌಢರು ಭೌವನ ಮುನಿಕುಲಜರು ॥೨॥

ಸೃಷ್ಟಿಕರ್ತನ ಸುತರಲಿವರು
ಶ್ರೇಷ್ಠರೆನಿಸಿಹರಿನ್ನು ತತ್ವದ
ನಿಷ್ಠೆಯಿಂ ಪಾಲಿಸುವರಧ್ವರ್ಯುಗಳು ಲೇಖಕರು ।
ಸ್ಪಷ್ಟವಿದು ಶ್ರೀ ವಿಶ್ವಕರ್ಮನ
ಸೃಷ್ಟಿಯಿದರಲಿ ಕರ್ಮಯೋಗಿಯು
ಶ್ರೇಷ್ಠನವನೇ ವಿಶ್ವಕರ್ಮನುಯೆಂದು ತಿಳಿದವರು ॥೩॥

ವಿಶ್ವಕರ್ಮ ಸಮಾಜವೃಂದಕೆ
ವಿಶ್ವಕರ್ಮನ ಮಹಿಮೆ ಪೇಳುತ
ವಿಶ್ವಬ್ರಾಹ್ಮಣ ಧರ್ಮತತ್ವವ ಬೆಳಗಿಸಿದರಿವರು ।
ವಿಶ್ವಕರ್ಮ ಕೃಪೆಯಿಂ ಸಲಹ
ಲಿ ಶ್ರೇಷ್ಠ ಶತಾಯುಷ್ಯ ನೀಡ
ಲಿ ಶ್ರೀ ನಾಭಾ ಚಂದ್ರಶೇಖರರ ಸ್ವಸ್ತಿಗೊಳಿಸಲಿ ॥೪॥

○ ವಿ. ಗುರುಲಿಂಗಾಚಾರ್ಯ

೯. ತತ್ವಜ್ಞಾಂಜಲಿ

ವೇದಗಳ ತಿರುಳನ್ನು ಶೋಧಿಸುತ ಭೋಧಿಪರೆ
ಅಧ್ವರ್ಯು ಶಿರೋಮಣಿ ಬಿರುದಂಗೆ
ಭಾಧ್ಯರಾದವರು ತತ್ವಜ್ಞ ॥

ಸಿದ್ಧಿ ಸಾಧನೆಯಿಂದ ಬುದ್ಧಿ ಪ್ರೌಢಿಮೆಯಿಂದ
ವಿದ್ಯಾಭೂಷಣ ಪದವಿ ಪಡೆದವರೆ
ಆದ್ಯರೆಲ್ಲಕು ತತ್ವಜ್ಞ ॥

ವಿಶ್ವಕರ್ಮನ ಮಹಿಮೆ ವಿಶ್ವಕ್ಕೆ ಹರಡಿದಾ
ವಿಶ್ವಕರ್ಮನ ಜ್ಞಾನ ಧುರೀಣ ನೆಂ
ಬೂಷಣದ ಆರ್ಯ ತತ್ವಜ್ಞ ॥

ಸ್ಪಷ್ಟ ನಡೆ ನುಡಿಗಳ ಶ್ರೇಷ್ಠ ಸಾಹಿತಿ ಜ್ಞಾನಿ
ಶಿಷ್ಟ ಚಂದ್ರಶೇಖರಾಚಾರ್ಯರಾ
ಇಷ್ಟಾರ್ಥ ಸಿದ್ಧಿಸಲಿ ತತ್ವಜ್ಞ ॥

ತ್ವಷ್ಟಾ ಮನು ಮಯ ಶಿಲ್ಪಿ ವಿಶ್ವಜ್ಞರೆಲ್ಲರ
ಸೃಷ್ಟಿಯಾ ಮಹಿಮೆಯನು ತಿಳಿಸಿದಾ
ಶ್ರೇಷ್ಠದಾಚಾರ್ಯ ತತ್ವಜ್ಞ ॥

○ ವಿ. ಅಶ್ವತ್ಥನಾರಾಯಣಾಚಾರ್ಯ

೧೦. ಅಕ್ಷರಾಂಜಲಿ

ಕಂ || ಆಚಾರ್ಯವರೇಣ್ಯುನಿ, ಧೀ
ವಾಚಸ್ಪತಿ ನಿತ್ಯವಿನುತ ಪಂಚಾನನು ನಾ
ಭಾ ಚಂದ್ರಶೇಖರಾರ್ಯು ನಿ
ಬ್ರೋಚುತ ಪರಮೇಶುಂ ಡೀಕನು ಮುಪ್ಪದಿ ಯೇಂಡುಲ್ !

ಸೀ || ಕನ್ನಡಾಂಧ್ರಾಂಗ್ಲವಾಕ್ಪಟಿಮ ಧಾರಳಂಬು
ಗಾ ನುಪನ್ಯಾಸರಂಗಮುಲ ನಲರಿ
ಕತ್ತಿಪೈ ಸಾಮುಗಾಂಗಲ ಪ್ರಭುತ್ವೋದ್ಯೋಗ
ನಿರ್ವಹಣಂಬುಲ ನೇರ್ಪು ಚೂಪಿ
ವೈದಿಕ ವಿದ್ಯಾವಿವೇಕಂಬು ಸುಸ್ಥಿಗಾ
ಬ್ರಾಹ್ಮ್ಯಪೌರೋಹಿತ್ಯ ಪಥಮು ಪಟ್ಟಿ
ಆದರ್ಶಮೂರ್ತಿಗಾ ನಾಚಾರ ನಿಯತಿನ್ಪೈ
ವೈಶ್ವಕರ್ಮಣ್ಯ ಭಾವಮುಲ ನಿಲಿಚಿ

ಸೀ || ಗೀ || ಪೂಜಲಂದಿನ ಪರಿಪೂರ್ಣ ಪುರುಷುಂಡೀವು !
ನೀಕು ಸಪ್ತತಿವರ್ಷೋತ್ಸವೈಕ ಶೋಭ
ಜಾತಿ ಕುದ್ಬೋಧಮಾನಪ್ರಭಾತಿಶೋಭ !
ಸತ್ಯಮಿದಿ ಚಂದ್ರಶೇಖರಾಚಾರ್ಯ ವರ್ಯ !

ಉ || ಚೆಂಚಿತಿ ಸಂಘಸೇವ ಮಂಚಿ ಜೇಸೆದ ನಿಂಕನು ಸೇವಲಂಚು ವಿ
ಶ್ವಾಸಮು ಗಲ್ಗಂಜೇಸಿ ಬಲಂಸ್ವಾರ್ಥಮುಂತೋಂ ದಮಂಪೊಟ್ಟನಿಂಪು ಸ
ನ್ಯಾಸುಲು ಮೋಂಕಮನ್ನೆ ಪ್ರೇಲ್ಮೆ ಕಳಿಂತುರುಗಾ ಕಚಂಚಲ
ಧ್ಯಾಸ ಸ್ವಜಾತಿ ಯುನ್ನತಿಕಿ ನೈ ಶ್ರಮಿಯಿಂಚು ನಿನುಗ್ ಸ್ಮರಿಂಪರೇ ?

ಗಿ || ನಿನ್ನುಂ ಬೊಗಡಂಗ ನನ್ನಿಂಟಿ ಚಿನ್ನವಾಂಡ
ನೇರ್ಪು ಚೂಪಿಂಪಂಗಾಂ ಬ್ರಯತ್ನಿಂತು ನೇನಿ
ತಪ್ಪುಟಡುಗುಲು ವಡು ನನ್ನ ತಲಂಕು ಗಲ್ಗು
ನೊಕ ನಮಸ್ಕಾರ ಮಿಡುದನೋ ಯೋಗ್ಯ ಚರಿತ !

ಸಹಜಕವಿ ಪಂಚಾನನ, ಕವಿಶೇಖರ
ಅವಧಾನಿಶಿರೋಮಣಿ, ಕವಿಗಂಡಪೆಂಡಾರ ಸಮ್ಮಾನಿತ
— ಪೂಸಪಾಟಿ ನಾಗೇಶ್ವರ ರಾವು

11. SUPER GOLD OF SEVENTY CARATS

Who are you of tall and lean frame, before
My eyes, every inch filled up with the lore
Of Vedic and classific thought at Bang'lore ?
Perhaps of NABHA's fame, of knowledge store 4
Of immense dimensions !
I see in you
The confluence of cultures, old and new
Of East and West and of pre-historic
And historic times ; O ! How dynamic 8
Your life !
How, so far, it flowed for seven and one
Decades through long meadows and fields that spun
Splendoured spectra of green and gold colours
Over its silver foam !
you laid focus 14
On ideals that sublimate the souls
Of all round you ; drove us to goals
Worthy of persistent pious pursuit.
As an ACHARYA vowed to pluck the fruit 18
Of nectarine juice from the Heavenly Tree ;
(God speed to you) March onward, forward Tree, 20
After AGHAMARSHAN bath
Upon the Dharma's path 22
Sure of Pilgrims' Progress !
Beyond the secular stress. 24

May VISHVAKARMA bless
And in His hands caress
You ! O Chandra Sekhar !
To shine on without par 28
As Kolar's Golden bar
Endearing all us near and far 30

○ **Pulivarthy Sarabhacharya**

ಶಾನ್ತಿ ಪಾತಃ

ಶಂಚ ಮೇ ಮಯಶ್ಚ ಮೇ ಪ್ರಿಯಂ ಚ ಮೇಽನುಕಾಮಶ್ಚ ಮೇ ಕಾಮಶ್ಚ ಮೇ ಸೌಮನಸಶ್ಚ ಮೇ ಭದ್ರಂ ಚ ಮೇ ಶ್ರೇಯಶ್ಚ ಮೇ ವಸ್ಯಶ್ಚ ಮೇ ಭಗಶ್ಚ ಮೇ ದ್ರವಿಣಂ ಚ ಮೇ ಯನ್ತಾ ಚ ಮೇ ಧರ್ತಾ ಚ ಮೇ ಕ್ಷೇಮಶ್ಚ ಮೇ ಧೃತಿಶ್ಚ ಮೇ ವಿಶ್ವಂಚ ಮೇ ಮಹಶ್ಚ ಮೇ ಸಂವಿಚ್ಚ ಮೇ ಜ್ಞಾತ್ರಂ ಚ ಮೇ ಸೂಶ್ಚ ಮೇ ಪ್ರಸೂಶ್ಚ ಮೇ ಸೀರಂ ಚ ಮೇ ಲಯಶ್ಚ ಮ ಋತಂ ಚ ಮೇಽಮೃತಂ ಚ ಮೇಽಯಕ್ಷ್ಮಂಚ ಮೇಽನಾಮಯಚ್ಚ ಮೇ ಜೀವಾತುಶ್ಚ ಮೇ ದೀರ್ಘಾಯುತ್ವಂ ಚ ಮೇಽನಮಿತ್ರಂ ಚ ಮೇಽಭಯಂ ಚ ಮೇ ಸುಗಂ ಚ ಮೇ ಶಯನಂ ಚ ಮೇ ಸೂಷಾ ಚ ಮೇ ಸುದಿನಂ ಚ ಮೇ ||

ಓಂ ಶಾನ್ತಿಃ ಶಾನ್ತಿಃ ಶಾನ್ತಿಃ



ಆಚಾರ್ಯರ
ಸಮಾಜ ಸೇವೆ

ಮಾನವ ಸೇವೆಯೇ ಮಾಧವ ಸೇವೆ ಎಂದು ನಿರ್ದೇಶಿಸುವ ಜಾಣ್ನುಡಿ ವಿಶ್ವಧರ್ಮ ಸಾರವನ್ನೇ ಸಾರುತ್ತದೆ. ನಿನ್ನ ನೆರೆಯವನನ್ನು ನಿನ್ನನ್ನು ಪ್ರೀತಿಸುವಷ್ಟೇ ಗಹನವಾಗಿ ಪ್ರೀತಿಸು (LOVE THY NIEGHBOUR AS THYSELF) ಎನ್ನುವ ವಾಕ್ಯದಲ್ಲೂ ಇದೇ ಭಾವ ಘನೀಭವಿಸಿದೆ. ದೇವರ ಪೂಜೆಗಿಂತಲೂ ಮಿಗಿಲಾದುದು ಈ 'ಸೇವೆ'. ಇದು 'ನಾಭಾ' ಚಂದ್ರಶೇಖರಾಚಾರ್ಯರಿಗೆ ಯಾರು ಯಾವಾಗ ತಿಳಿಸಿದರು ಎಂಬುದನ್ನು ಹೇಳುವುದು ಕಷ್ಟ. ನಾಗಮಂಗಲದಲ್ಲಿ ಶಿಲ್ಪ-ವೈದಿಕ ವೃತ್ತಿಗಳನ್ನು ಸಾಗಿಸುತ್ತಿದ್ದು ಆರ್ಥಿಕವಾಗಿ ಬಡವರಾಗಿದ್ದ ಕುಟುಂಬದಲ್ಲಿ ಜನಿಸಿದರೂ, ಸುಸಂಸ್ಕೃತ ಪರಂಪರೆ, ಆಚಾರ-ಶೀಲಗಳು ಅವರಿಗೆ ಲಭಿಸಿದ್ದವು. ಅವರ ಬಾಲ್ಯದಲ್ಲಿ ಸ್ಥಳೀಯ ಕಾಳಿಕಾದೇವಿಯ ದೇವಾಲಯವು ತೆಳ್ಳದ ನರಸಿಂಹಾಚಾರ್ಯರ ನೇತೃತ್ವದಲ್ಲಿ ನಾಗಮಂಗಲದ ಶಿಲ್ಪಿಗಳೆಲ್ಲರೂ ಕೂಡಿಕೊಂಡು ದೇವಾಲಯಕ್ಕೆ ಅಗತ್ಯವಾದ ಮೂರ್ತಿಗಳನ್ನೂ, ಅಲಂಕರಣಗಳನ್ನು ನಿರ್ಮಿಸಿ ನವೀಕರಿಸಿದ ಘಟನೆ, ಆಗ ಅವರು ಸಮಾಜದಲ್ಲಿ ಸಾಧಿಸಿದ ಐಕ್ಯತೆ, ತನ್ಮೂಲಕ ಇತರರ ಮೇಲೆ ಅವರು ಬೀರಿದ ಪರಿಣಾಮ, ಆಗಿನ ಕಾಲದಲ್ಲಿ ಆ ಕಾಳಿಕಾ ದೇವಾಲಯದ ಉತ್ಸವಗಳು ಆಕರ್ಷಿಸುತ್ತಿದ್ದ ಜನ ಸಂದಣಿ, ಅದರ ವೈಭವ ಇವು ಎಳೆಯ ಮನಸ್ಸಿನ

ಮೇಲೆ ಬಹು ಪರಿಣಾಮ ಬೀರಿರಬಹುದು. ಆದ್ದರಿಂದ ಕೂಡಿ ಬಾಳುವುದೇ ಸುಖ ಎಂದು ನಿರ್ಣಯಿಸಿರಬಹುದು.

ಬನುಮಯ್ಯನವರ ಕೊಲಿಜಿಯೇಟ್ ಹೈಸ್ಕೂಲನ್ನು ಸೇರಲು 'ನಾಭಾ' ಅವರು ಮೈಸೂರಿಗೆ ಬರುತ್ತಲೇ ಅವರಿಗೆ ದೊರಕಿದ ಸಖ್ಯ ಬಿ. ಜಿ. ಶಂಕರಯ್ಯ, ತರಿಕೆರೆ ಶಾಮಣ್ಣ, ಮ. ಗಂಗಾಧರಮೂರ್ತಿ ಮುಂತಾದವರದು. ಇವರೆಲ್ಲರೂ ಸಮಾಜ ಸೇವೆಯಲ್ಲಿ ಆಗ್ಗೇ ಹೆಸರಾಗಿದ್ದವರು. ಮೈಸೂರಿನಲ್ಲಿ ವಿಶ್ವಕರ್ಮ ಸಮಾಜ, ವಿಶ್ವಕರ್ಮ ವಿದ್ಯಾರ್ಥಿ ಸಂಘ, ವೇದಪಾಠಶಾಲೆ, ವಿದ್ಯಾರ್ಥಿ ನಿಲಯ ಹೀಗೆ ನಾಲ್ಕಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನೇಕ ಸ್ಥಳೀಯರ ನೆರವಿನಿಂದ ಸಾಕಷ್ಟು ಚಟುವಟಿಕೆಗಳ ಕೇಂದ್ರವಾಗಿದ್ದವರು. ಇವರ ಸ್ನೇಹ ದೊಂದಿಗೆ ಅಲ್ಲಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿತು. ವಿದ್ಯಾರ್ಥಿ ದೆಶೆಯಲ್ಲಿಯೇ ಸಮಾಜದ ಸಮಸ್ಯೆಗಳು, ಸಮಾಜದ ಸದಸ್ಯರು ಎದುರಿಸುತ್ತಿರುವ ಸಂಕಟಗಳು ಅರಿವಾಗತೊಡಗಿತು. ಇದೇ ಅವರನ್ನು ಅಂದಿನಿಂದ ಇಂದಿನವರೆವಿಗೂ ಸಮಾಜಕಾರ್ಯದತ್ತ ಸೆಳೆದಿರಿಸಿಕೊಂಡಿರುವ ಆಕರ್ಷಣೆ. ಸೇವೆ ಎಲ್ಲಿ ಹೆಚ್ಚು ಅವಶ್ಯಕವೋ ಅಲ್ಲಿ ಪೂರ್ಣವಾಗಿ ಸೇವೆ ಸಲ್ಲಿಸಬೇಕಾದುದೂ ಧರ್ಮಜ್ಞರ ಕರ್ತವ್ಯವಲ್ಲವೇ ? ಆದ್ದರಿಂದ 'ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೇನೆ' ಎನ್ನುತ್ತಾರೆ ಆಚಾರ್ಯರು.

ಪ್ರಾರಂಭದಲ್ಲಿಯ ಚಟುವಟಿಕೆಗಳು ಚರ್ಚಾಕೂಟಗಳು, ಪಾರಾಯಣ, ಭಾಷಣ, ಪೂಜೆ, ಮಹೋತ್ಸವಗಳೆಂದಾಗಿದ್ದರೂ ಅವುಗಳ ಎಲ್ಲದರ ಗುರಿಯಾಗಿ ಸಮಾಜದ ಸದಸ್ಯರನ್ನೆಲ್ಲಾ ಒಂದು ವೇದಿಕೆಯ ಬಳಿಗೆ ಸೆಳೆಯುವುದು, ಅವರಲ್ಲಿ ಐಕ್ಯತಾಭಾವ ಮೂಡಿಸಿ ಸಮಾಜೋತ್ಕರ್ಷಕ್ಕೆ ಅವರನ್ನು ಸಿದ್ಧಗೊಳಿಸುವುದು. ಇದನ್ನು ಎಳೆಯದರಲ್ಲಿಯೇ ಗ್ರಹಿಸಿದ್ದರು ಆಚಾರ್ಯರು. ಇದೇ ಮಾರ್ಗದಲ್ಲಿ ನಡೆಯುತ್ತಿದ್ದ ಗಂಗಾಧರ ಮೂರ್ತಿಗಳು, ಪಿ. ಎನ್. ಶ್ರೀಕಂಠಾಚಾರ್ಯರು ಮುಂತಾದವರೂ ಇವರ ನೆರವಿಗೆ ದೊರೆತರು. ಅನುಭದಿಂದ ಪರಿಪಕ್ವಗೊಂಡ ಶ್ರೀಮದಾಚಾರ್ಯರು ಸಮಾಜ ಸೇವೆಯನ್ನು ಹೆಚ್ಚು ವ್ಯಾಪಕ ರೀತಿಯಲ್ಲಿ ಸಾಗಿಸಲು ಮೊದಲು ಮಾಡಿದ್ದು ಶ್ರೀರಂಗಪಟ್ಟಣ ಸೇರಿದ ಮೇಲೆ. ಕೋರ್ಟಿನಲ್ಲಿ ಉದ್ಯೋಗವಾದುದರಿಂದ ನೇರವಾಗಿ ಎಲ್ಲರಿಗೂ ತಿಳಿಯು

ವಂತೆ ಚಳುವಳಿಗಳಲ್ಲಿ ಭಾಗವಹಿಸುವುದು ಸಾಧ್ಯವಿರಲಿಲ್ಲ. ಅವರ ಸೇವೆಯ ಬಗ್ಗೆ ಆಗ ಅವರ ಒಡನಾಡಿಗಳಾಗಿದ್ದು ಅನೇಕ ಕಾರ್ಯಗಳಲ್ಲಿ ಭಾಗವಹಿಸಿದ ಅವರ ಜೊತೆಗಾರರಿಂದಲೇ ಕೇಳೋಣ :

✲ ಬಿ. ಆರ್. ವೀರಪ್ಪಾಚಾರ್ಯ

ಶಿಲ್ಪ ವೃತ್ತಿ ಸಾಗಿಸುತ್ತಿರುವ ಪರಂಪರಾಗತ ಬ್ರಾಹ್ಮಣರನ್ನು ಬ್ರಾಹ್ಮಣವರ್ಣದಲ್ಲಿ ಒಂದು ಭಾಗವೆಂದೇ ಪರಿಗಣಿಸಿ ವಿಶ್ವಬ್ರಾಹ್ಮಣರೆಂದು, ವಿಶ್ವಕರ್ಮರೆಂದು ಹೇಳುವ ವಾಡಿಕೆ ಪುರಾತನವಾದದ್ದು. ಆದರೂ ಶಿಲ್ಪವೃತ್ತಿಗಳನ್ನು ಅನುಸರಿಸಿ ಅನೇಕ ರೂಢನಾಮಗಳು ಬಳಕೆಯಲ್ಲಿದ್ದು ಅವನ್ನೇ ಜಾತಿವಾಚಕಗಳಾಗಿ ಬಳಸುವ ಅಭ್ಯಾಸ ಅನೇಕಕಡೆ ಇತ್ತು (ಇನ್ನೂ ಅದು ಮಾಸಿಲ್ಲ. ನೆರೆಯ ಆಂಧ್ರಪ್ರದೇಶದಲ್ಲಿ ಈ ಸಮಸ್ಯೆ ಬಹುಪಾಲು ಪರಿಷ್ಕಾರವಾಗಿದೆ). ಇದರ

೧೯೩೧ರ ಜನಗಣತಿ

ಅತ್ಯಂತ ಅಪಾಯಕಾರಿ ಫಲವೆಂದರೆ ಒಂದು ವೃತ್ತಿಯಿಂದ ಒಂದು ಹೆಸರು ಪಡೆದವರು ಮತ್ತೊಬ್ಬರಿಗಿಂತಲೂ ಭಿನ್ನ ಎಂಬ ಒಡಕನ್ನು ಹುಟ್ಟಿಸುವುದು. ಎರಡನೆಯದಾಗಿ ಯಾವ ರೀತಿಯ ಲೆಕ್ಕಕ್ಕೂ ಈ ಜನಾಂಗದ ನೈಜ ಚಿತ್ರಣ ಎಟುಕದೆ ನಾನಾ ಭಾಗವಾಗಿ ಒಡೆದು ಕೊನೆಗೆ ಈ ಜನಾಂಗದ ಇರವೇ ಸಂಶಯಗ್ರಸ್ತವಾಗಿ ಕಾಣಿಸುವಂತಹ ಪರಿಸ್ಥಿತಿ. ಗ್ರಾಮಸ್ಥರು, ಅನಕ್ಷರಸ್ಥರು ರೂಢನಾಮಗಳನ್ನೇ ತಮ್ಮ ಜಾತಿವಾಚಕಗಳಾಗಿ ಅಜ್ಞಾನವಶದಿಂದ ಹೇಳುತ್ತಿದ್ದರೆ, ಕೆಲವರು ಅವೇ ಸರಿಯಾದ ಹೆಸರುಗಳೆಂದು ತಿಳಿದೋ ತಿಳಿಯದೆಯೋ ವಾದಿಸುತ್ತಿದ್ದರು. ಇದನ್ನು ೧೯೩೧ನೇ ಸೆನ್ಸಸ್ ನಡೆದ ಕಾಲದಲ್ಲಿ ಮೈಸೂರಿನ ಸಮಾಜದ ಮೂಲಕ 'ವಿಶ್ವಕರ್ಮ' ಎಂಬ ಒಂದು ಹೆಸರಿನಲ್ಲೇ ಎಲ್ಲಾ ಉಪನಾಮಗಳೂ ಸಂಗ್ರಹಗೊಳ್ಳುವಂತೆ ಪ್ರಯತ್ನಿಸಿ ಯಶಸ್ವಿಯಾದರು. ಅಸಂಬಂದ್ಧವೂ, ಅರ್ಥಶೂನ್ಯವೂ ಆದ ಇತರ ವರ್ಗೀಕರಣಗಳನ್ನು ರದ್ದುಗೊಳಿಸಿ ಈ ಜನಾಂಗದ ವರ್ಗೀಕರಣ ಒಂದು ಕ್ರಮದ ಹಾದಿಯಲ್ಲಿ ಸಾಗುವಂತೆ ಇದರಿಂದ ಸಾಧ್ಯವಾಯಿತು. ಈ ಸಂದರ್ಭದಲ್ಲಿ 'ನಾಭಾ' ಅವರು ಮತ್ತು ನಾನು ಹತ್ತು-ಹದಿನೈದು ದಿನಗಳ ಕಾಲ ಅಹರ್ನಿಶಿ ಎನ್ನದೆ ಹಳ್ಳಿ

ಹಳ್ಳಿಗೂ ಹೋಗಿ ಎಲ್ಲರೂ 'ವಿಶ್ವಕರ್ಮ' ಎನ್ನುವ ಹೆಸರನ್ನೇ ಹೇಳಬೇಕೆಂದು ಪ್ರಚಾರ ಮಾಡಿದೆವು [ಇದಕ್ಕೂ ಬಹಳ ಮೊದಲೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರವಣಬೆಳಗೊಳದ ಎಸ್. ವಿ. ಗುರುಮೂರ್ತ್ಯಾಚಾರ್ಯರು ಸರ್ಕಾರಿ ದಾಖಲೆ ಗಳಲ್ಲಿ 'ವಿಶ್ವಕರ್ಮ' ಎಂಬ ಹೆಸರನ್ನು ಮಾತ್ರವೇ ಇರಿಸಬೇಕೆಂದು ವೃತ್ತಿನಾಮ ಗಳು ಕೂಡದೆಂದು ನಿರ್ಣಯವನ್ನು ಪಾಸ್ ಮಾಡಿಸಿದ್ದರು. ಅದು ಸರ್ಕಾರದ ಮಟ್ಟದಲ್ಲಾಗಿದ್ದರೆ ಪ್ರಸ್ತುತ ಪ್ರಯತ್ನ ಸರ್ಕಾರಕ್ಕೆ ಆ ನಿರ್ಣಯವನ್ನು ನೆನಪು ಮಾಡಿಕೊಡುವುದರೊಂದಿಗೆ ಜನಸಾಮಾನ್ಯರಲ್ಲೂ ಆ ಬಗ್ಗೆ ತಿಳಿವು ಮೂಡಿ ಸುವುದೂ ಆಗಿತ್ತು].

ಶ್ರೀರಂಗಪಟ್ಟಣದಲ್ಲಿ ಹತ್ತೊಂಬತ್ತು ವರ್ಷಗಳ ಕಾಲ ಕೋರ್ಟಿನಲ್ಲಿ ಕೆಲಸ ಮಾಡಿಕೊಂಡಿದ್ದ ಆಚಾರ್ಯರಿಂದ ಇಲ್ಲಿ ನಡೆದ ಸೇವಾಕಾರ್ಯಗಳು ರಾಜ್ಯಮಟ್ಟದಲ್ಲಿ ಪ್ರಭಾವ ಬೀರಿರುವಂತಹವು ಎಂಬುದನ್ನು ಈಗಿನ ಸಿಂಹಾವ ಲೋಕನದಲ್ಲಿ ನನಗೆ ಅರಿವಾಗುತ್ತದೆ. ಆಚಾರ್ಯರ ಸಾಂಗತ್ಯವೇ ನನಗೆ ಲಭಿಸದೆ ಇದ್ದಿದ್ದರೆ ನಾನು ಹೇಗಿರು ತ್ತಿದ್ದೆನೋ ಹೇಳಲಾರೆ. ಆಚಾರ್ಯರ ಅನುಷ್ಠಾನ ಕ್ರಮ, ನಿಯಮಬದ್ಧ ಜೀವನ, ಮಂತ್ರಪಾಠಕ್ಕೆ ಅವರು ನೀಡುತ್ತಿದ್ದ ಪ್ರಾಶಸ್ತ್ಯ ಇವಾವನ್ನೂ ನನ್ನದಾಗಿಸಿಕೊಳ್ಳದ ನನಗೆ ಮುಜುಗರವೆನ್ನಿಸಿತ್ತು. ಪ್ರತಿನಿತ್ಯವೂ ಅವರು ಒಂದೇ ಸಮನೆ ಹೇಳುತ್ತಿದ್ದ ಉಪದೇಶಗಳಲ್ಲಿ ಏನೋ ತಿರುಳಿದೆ ಎನ್ನಿ ಸಿತು. ನನ್ನ ಜೀವನದ ಕ್ರಮದಲ್ಲಿ ತಪ್ಪಿದೆ ಎಂದೂ ಮನವರಿಕೆಯಾಗತೊಡ ಗಿತು. ಹೋಟಲಿನ ತಿಂಡಿಗೆ ಒಗ್ಗಿದ್ದ ನಾಲಿಗೆಯು 'ರುಚಿ' ಮನೆಯ ಅಡಿಗೆಯ ಸವಿಯನ್ನು ಕಾಣತೊಡಗಿತು. ಧೂಮಪಾನ ಆರೋಗ್ಯಕ್ಕೆ ಹಾನಿಯನ್ನು ತರುವುದರೊಂದಿಗೆ ಮನುಷ್ಯನಲ್ಲಿಯ ನಿಯಂತ್ರಣ ಶಕ್ತಿಯನ್ನು ದುರ್ಬಲಗೊಳಿಸಿ ಅವನನ್ನು ಚಟದ ದಾಸನನ್ನಾಗಿಸುತ್ತದೆ ಎಂಬುದು ಅರಿವಾಯಿತು. ನನ್ನಲ್ಲಿ ಪ್ರಥಮತಃ ಪರಿವರ್ತನೆ ಮೂಡಿದ್ದು ಆಚಾರ್ಯರಿಗೂ ವಿಚಿತ್ರವೆನಿಸಿರಬೇಕು. ಅವರೊಂದಿಗೆ ವೇದಪಾಠ ಪ್ರಾರಂಭಿಸಿದೆ. ಶಿಖೆ ಇಟ್ಟೆ; ಮೀಸೆ ತೆಗೆದೆ. ಊರಿನವರೂ ಇದೆಲ್ಲ ವಿಚಿತ್ರವೆನ್ನುವಂತೆ ದೃಷ್ಟಿಸಿದರೂ ಅವರ ದೃಷ್ಟಿಯಲ್ಲಿ ನನ್ನ ವ್ಯಕ್ತಿತ್ವದ ಬೆಲೆ ಏರಿತ್ತು ! ಶ್ರೀರಂಗಪಟ್ಟಣದ ಮುನಿಸಿಪಾಲಿಟಿಗೆ ನಾನು

ಅಯಸ್ಕಾಂತದ ಪ್ರಭಾವ

ನಾಮಿನೇಟೆಡ್ ಮೆಂಬರ್ ಆದೆ. ನಂತರವಲ್ಲಿ ಅಲ್ಲಿಯ ಕಾಳಿಕಾ ದೇವಾಲಯದ ಧರ್ಮದರ್ಶಿಯೂ ಆದೆ. ಆಚಾರ್ಯರಿಂದ ನನಗೆ ಆಗಿರುವ ಲಾಭ ಈ ರೀತಿ ಅಮೂಲ್ಯವಾದದ್ದು.

ಅದಕ್ಕೂ ಮೊದಲು ಮೈಸೂರಿನ ನಾಗಪ್ಪ ಸ್ವಾಮಿ ಆಚಾರ್ಯರು ಧರ್ಮದರ್ಶಿಗಳಾಗಿದ್ದರು. ಪ್ರಾರಂಭದಿಂದಲೂ ನಮ್ಮವರೇ ದೇವಾಲಯದ ಅರ್ಚಕರಾಗಿದ್ದರು. ಹತ್ತಿಪ್ಪತ್ತು ವರ್ಷಕ್ಕೆ ಮೊದಲು ನಮ್ಮವರ್ಯಾರೂ ಅರ್ಚಕ ವೃತ್ತಿಯನ್ನು ಒಪ್ಪಿ ನಡೆಸಲು ಮುಂದೆ ಬರಲಿಲ್ಲವಾದ್ದರಿಂದ ದೇವಾಲಯದ ಪೂಜಾದಿಗಳು ತಪ್ಪದೆ ನಡೆಯಲು ಸಪ್ತಾರ್ಷೇಯರನ್ನು ನಿಯಮಿಸಬೇಕಾಯಿತು. ಆಡಳಿತ ಮಾತ್ರ ನಮ್ಮವರಲ್ಲೇ ಇತ್ತು. ದೇವಾಲಯದ ಮಹಾದ್ವಾರದ ಕಲಶಗಳು ಖಿಲವಾಗಿದ್ದು ಧರ್ಮದರ್ಶಿಗಳ ಸಲಹೆಯ ಮೇರೆಗೆ ನೂತನ ಕಲಶಗಳನ್ನು ಮಾಡಿಸಲಾಯಿತು. ಅವನ್ನು ಶಿಲ್ಪಿಗಳೇ ಸ್ಥಾಪಿಸಬೇಕೆಂಬುದು ಧರ್ಮದರ್ಶಿಗಳ ಮತ್ತು ಆಡಳಿತ ಮಂಡಳಿಯ ಅಭಿಪ್ರಾಯ. ಸರ್ಕಾರದವರು ಸಪ್ತಾರ್ಷೇಯರು ಆ ಕಾರ್ಯ ಮಾಡಬೇಕೆಂದು ಹೇಳುತ್ತಾ ಬಂದರು. ಅದೇ ಸಮಯಕ್ಕೆ ಎಂ. ಗುಂಡಪ್ಪ ಎಂಬುವರು ಅಮಲ್ದಾರರಾಗಿ ಬಂದರು. ಅವರೇ ತಾಲ್ಲೂಕು ಮುಜರಾಯಿ ಅಧಿಕಾರಿಗಳೂ ಆಗಿದ್ದರು. ಶಾಸ್ತ್ರವಿದರು; ಧರ್ಮಾಭಿಮಾನಿಗಳು. ಇವರು 'ಕಲಶಪ್ರತಿಷ್ಠಾದಿಗಳು ಶಿಲ್ಪಿಗಳಿಂದಲೇ ಶಿಲ್ಪಾಗಮದ ರೀತಿಯಿಂದ ನಡೆಯಬೇಕಾದುದು ಸಾಧು. ಅದರಲ್ಲೂ ಶಿಲ್ಪಿಗಳ ದೇವಾಲಯದಲ್ಲಿ ಶಿಲ್ಪಿಗಳು ಪ್ರತಿಷ್ಠಾಪನೆ ಮಾಡಬಾರದೆಂದರೆ ಅರ್ಥವೇ ಇಲ್ಲ' ಎಂದು ಹೇಳಿದರು. ಈ ರೀತಿಯ ತೀರ್ಮಾನ ಅವರಿಂದ ಬರಲು ಪ್ರಧಾನ ಕಾರಣ 'ನಾನು' ಎಂದು ಬಹುಮಂದಿ ತಿಳಿದಿದ್ದರೂ ನನ್ನನ್ನು ಉಪಕರಣವಾಗಿಸಿಕೊಂಡು ಕಾರ್ಯ ನಡೆಸಿದವರು ಆಚಾರ್ಯರೇ. ಅಮಲ್ದಾರರಿಗೆ ವಿಷಯದ ಪೂರ್ಣ ತಿಳುವಳಿಕೆ, ಸಮಸ್ಯೆಯ ಮುಖ ಆಚಾರ್ಯರು ತಿಳಿಸಿದ್ದಂತೆ ಅವರ ಕಿವಿಗೆ ಹಾಕಿದವ ಮಾತ್ರ ನಾನೇ! ನಮ್ಮೆಲ್ಲರ ಸಲಹೆಯ ಮೇರೆಗೆ ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಂದ ಕಲಶ ಪ್ರತಿಷ್ಠೆ ನಡೆಯುವಂತಾಯಿತು. ಅಮಲ್ದಾರ್ ಗುಂಡಪ್ಪನವರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ವೈದಿಕ ಕಾರ್ಯಗಳನ್ನು, ಆಗಮ ತಂತ್ರಗಳನ್ನು ವೀಕ್ಷಿಸಿ ಸಂತೋಷಿಸಿದರು.

ಶ್ರೀಕಾಳಿಕಾ ದೇವಾಲಯ

ನಾನು ಸ್ಥಳೀಯವಾಗಿ ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಪ್ರಧಾನವಾಗಿದ್ದುದರಿಂದ ದೇವಾಲಯದಲ್ಲಿ ತುಂಬಾ ಸೀಮಿತವಾಗಿ ನಡೆಯುತ್ತಿದ್ದ ಉತ್ಸವಾದಿಗಳು ಊರಿನಲ್ಲಿ ಪ್ರಮುಖ ಉತ್ಸವಗಳಾಗಿ ರೂಪುಗೊಂಡವು. ಊರಿನ ಪ್ರಮುಖರೂ ಈ ಉತ್ಸವಗಳಲ್ಲಿ ಭಾಗವಹಿಸಲು ಮುಂದಾದರು. ಅವೆಲ್ಲಕ್ಕೂ ಆಚಾರ್ಯರ ಮಾರ್ಗದರ್ಶನವೇ ಕಾರಣ. ನಮ್ಮವರಲ್ಲಿ ಮೂಡಿದ್ದ ವೈಮನಸ್ಯಗಳನ್ನು ದೂರಮಾಡಿ ಅವರನ್ನೆಲ್ಲಾ ಒಂದು ಕಡೆ ಕೂಡಿಸುವಂತಹ ತಂತ್ರಗಳನ್ನು ಬೋಧಿಸಿದವರೇ ಆಚಾರ್ಯರು. ಆದರೆ ಅವರು ಮಾತ್ರ ಇವುಗಳಿಂದ ದೂರವಿರುವಂತೆಯೇ ತೋರಿಸಿಕೊಳ್ಳುತ್ತಿದ್ದರು! ಇವೆಲ್ಲವೂ ನನ್ನಿಂದಲೇ ನಡೆಯುತ್ತಿವೆ ಎಂದು ಅಭಿಪ್ರಾಯ ಬರುವಂತೆಯೂ ಮಾತನಾಡುತ್ತಿದ್ದರು!

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯದಲ್ಲಿ 'ಪ್ರಜಾಪ್ರತಿನಿಧಿಸಭೆ'ಯೊಂದಿದ್ದು ಅದಕ್ಕೆ ಸದಸ್ಯರು ನಾಮಕರಣಗೊಳ್ಳುತ್ತಿದ್ದರು. ಅಲ್ಪಸಂಖ್ಯಾತರಾಗಿರುವ ನಮ್ಮವರು ಬಹುಸಂಖ್ಯಾತರ ವಿರುದ್ಧ ಸೆಣಸಿ ಚುನಾಯಿತರಾಗುವುದು ಕನಸಿನ ಮಾತು. ಆದ್ದರಿಂದ ಅಲ್ಪಸಂಖ್ಯಾತರಿಗೆ ಈ ಸವಲತ್ತು ದೊರಕಿಸಿಕೊಳ್ಳಬೇಕೆಂದು ನಾನು ಚಳುವಳಿ ಪ್ರಾರಂಭಿಸಿದೆ. ಅದೇ ಸಮಯಕ್ಕೆ ಸಿ. ಕೆ. ಪುಟ್ಟಣ್ಣಯ್ಯಾಚಾರ್ಯರು ಇದೇ ಉದ್ದೇಶದಿಂದ ಎಡತೊರೆಯ ಅರ್ಕೇಶ್ವರ ದೇವಾಲಯದಲ್ಲಿ ಯಜಮಾನ್ ಟಿ. ಯಾಲಕ್ಕಾಚಾರ್ಯರ ಅಧ್ಯಕ್ಷತೆಯಲ್ಲಿ ೧೯೪೦ ರ ಜೂನ್ ತಿಂಗಳಲ್ಲಿ ಒಂದು ಮಹಾಸಭೆಯನ್ನು ಕರೆದರು. ಸಭೆಯ ಉದ್ಘಾಟನೆಯನ್ನು ವಾಸ್ತುಕಲಾ ಸೇವಾಸಕ್ತ ಟಿ. ಚಲುವಾಚಾರ್ಯರು ನಡೆಸಿದರು. ಈ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಸರ್ಕಾರಕ್ಕೆ ಕಳುಹಿಸಿದರು. ಆಗಿನ ತೀರ್ಮಾನಗಳ ಕರಡನ್ನು ಬಹುಶ್ರಮದಿಂದ ತಯಾರಿಸಿ ಸಭೆಯನ್ನು ನಡೆಸಬೇಕಾದ ರೀತಿಯನ್ನು ತಿಳಿಸಿಕೊಟ್ಟವರು ಮ. ಗಂಗಾಧರ ಮೂರ್ತಿಗಳು ಮತ್ತು ಆಚಾರ್ಯರು.

ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ

ಹಿಂದುಳಿದ ವರ್ಗಗಳು ಎಂದು ಹಿಂದುಳಿದವರಲ್ಲಿ ಬಹುಸಂಖ್ಯಾತರೇ ಎಲ್ಲಾ ಸವಲತ್ತುಗಳನ್ನೂ ನುಂಗುತ್ತಿರುವುದು ನನಗೆ ಕಂಡುಬಂದು ಅಲ್ಪಸಂಖ್ಯಾತರ ಸಮ್ಮೇಳನವೊಂದನ್ನು ಶ್ರೀರಂಗಪಟ್ಟಣದಲ್ಲಿ ನಾನೇ ಕರೆದೆ. ಕಾಳಿಕಾದೇವಿ ದೇವಾಲಯದ ಸಭಾಂಗಣದಲ್ಲಿ ಸಭೆ. ಅಧ್ಯಕ್ಷರು ಶ್ರೀ ಎಲ್. ಸಿ.

ಮಾನಾಚಾರ್ಯರು. ಆಗ್ಗೇ ರಾಜಕೀಯದಲ್ಲಿ ತಮ್ಮ ವರ್ಚಸ್ಸನ್ನು ಬೆಳಸಿಕೊಂಡಿದ್ದವರು. ಅಧ್ಯಕ್ಷರನ್ನು ರೈಲ್ವೆಸ್ಟೇಷನ್ನಿನಿಂದ ಮೆರವಣಿಗೆಯಲ್ಲಿ ಕರೆತರುವಾಗ ಘೋಷಣಾ ಫಲಕಗಳು, ಘೋಷಣೆಗಳು, ಬೀದಿಯ ಗೋಡೆಗಳ ಮೇಲೂ ಬೇಡಿಕೆಗಳು .. ಹೀಗೆ ವಾತಾವರಣವೇ ಇವೆಲ್ಲವನ್ನೂ ಹೇಳುವಂತೆ ಪರಿವರ್ತಿಸಲಾಗಿತ್ತು. ಈ ರೀತಿಯ ಚಳುವಳಿಯ ಫಲವೇ ವಿಶ್ವಬ್ರಾಹ್ಮಣರಿಗೆ ಪ್ರತಿನಿಧ್ಯ ಅವಶ್ಯಕ ಎಂದು ಮೇಲಾಧಿಕಾರಿಗಳ ಮನಸ್ಸಿಗೆ ಭಾಸವಾಗುವಂತೆ ಮಾಡಿದ್ದು. ಆಬಾರಿ ಶ್ರೀ ಎಲ್. ಸಿ. ಮಾನಾಚಾರ್ಯರು ನಾಮಕರಣಗೊಂಡ ಸದಸ್ಯರಾದರು.

ಮೈಸೂರು-ಶ್ರೀರಂಗಪಟ್ಟಣಗಳ ಸಮಾಜ ಬಾಂಧವರ ಮಧ್ಯೆ ತುಂಬಾ ಮಧುರವಾದ ಮೈತ್ರಿ ಬೆಳೆದು ಬಂದಿತ್ತು. ಒಂದು ಪೌರ್ಣಮಿಯ ದಿನ ದೇವಿಯ ಉತ್ಸವ ಏರ್ಪಡಿಸಿ ಅಂದು ಧಾತ್ರಿ ಹವನವನ್ನು, ವಿಶ್ವಬ್ರಾಹ್ಮಣ ಸಮಾರಾಧನೆಯನ್ನೂ ನಡೆಸಿದೆವು. ಅಲ್ಲಿಯ ಸಮಾರಂಭದ ವೈಭವವನ್ನು ಕಂಡು ಮ. ಗಂಗಾಧರಮೂರ್ತಿಗಳು ಆಂಧ್ರದಲ್ಲಿ ತಾವು ಮತ್ತು ಆಚಾರ್ಯರು ಪಾಲ್ಗೊಂಡಿದ್ದ ಕಣಿತಿ ಜೋಗಾಚಾರ್ಯ ಸಿದ್ಧಾಂತಿ ಅವರ ನೇತೃತ್ವದಲ್ಲಿ ನಡೆದಿದ್ದ ಪಂಚಬ್ರಹ್ಮಯಜ್ಞದ ನೆನಪು ಮಾಡಿಕೊಂಡು ಇಲ್ಲಿ 'ವೈಶ್ವಕರ್ಮಣ ಮಹಾಯಾಗ' ಮಾಡಬೇಕೆಂದು ತಮ್ಮ ಸಂಕಲ್ಪವಿರುವುದಾಗಿಯೂ ಅದಕ್ಕೆ ನೆರವಾಗಬೇಕೆಂದು ಮನವಿ ಮಾಡಿದರು. ಸಮಾಜ ಬಾಂಧವರು ಪೂರ್ಣೋತ್ಸಾಹದಿಂದ ಮುಂದಾದರು. ಇದೇ ಕರ್ನಾಟಕದಲ್ಲಿ ವಿಶ್ವಕರ್ಮ ಬಂಧುಗಳನ್ನು ಒಂದಾಗಿ ಕೂಡಿಸಿದ ಪ್ರಥಮ ಮಹಾವೇದಿಕೆಯಾಯಿತು. ಇದರಲ್ಲಿ ಆಚಾರ್ಯರ ಶ್ರಮ ಮತ್ತು ಕಾರ್ಯನಿರ್ವಹಣೆ ಇಂತಿಷ್ಟೆಂದು ನಿಖರವಾಗಿ ಹೇಳುವುದೇ ಸಾಧ್ಯವಿಲ್ಲ ಅವರು - ಗಂಗಾಧರಮೂರ್ತಿಗಳು ಜೀವ - ದೇಹ ನ್ಯಾಯದಂತೆ ಐಕ್ಯತೆಯಿಂದ ದುಡಿಯುತ್ತಿದ್ದರು.

ಧಾತ್ರೀ ಹವನ

ವೈಶ್ವಕರ್ಮಣ ಮಹಾಯಾಗವು **೧೯೫೨ ಏಪ್ರಿಲ್ ೬ ರಿಂದ ೧೧ರ ತನಕ** ನಡೆಯಿತು. ಆ ವೈಭವ ನೆನೆಸಿಕೊಂಡರೆ ಇಂದೂ ಮೈ ಪುಲಕಿತಗೊಳ್ಳುತ್ತದೆ. ಗಂಗಾಧರಮೂರ್ತಿಗಳು ಅಧ್ವರ್ಯುಗಳಾಗಿದ್ದು, 'ನಾಭಾ' ಅವರು

ವೈಶ್ವಕರ್ಮಣ ಮಹಾಯಾಗ

ಆಚಾರ್ಯರಾಗಿದ್ದರು. ಬಿ. ವೈ. ಚಿನ್ನಪ್ಪಾಚಾರ್ಯರು ಎನ್. ಕೆ. ಚಿನ್ನಣ್ಣಾಚಾರ್ಯರು, ಯಜಮಾನ್ ಶ್ರೀಕಂಠಾಚಾರ್ಯರು ಪುರೋಹಿತ, ಪುಟ್ಟಶಾಮಾಚಾರ್ಯರು, ನೀಲಕಂಠಾಚಾರ್ಯರು ಮುಂತಾದವರು ಹೋತೃ, ಉದ್ಗಾತೃ, ವಿಶ್ವಕರ್ಮ, ಪ್ರಸ್ತೋತೃ, ಪ್ರತಿಹರ್ತೃ, ಉನ್ನೇತೃ, ಅಗ್ನೀಧ್ರ ಮುಂತಾದ ಋತ್ವಿಕ್ ಸ್ಥಾನಗಳಲ್ಲಿದ್ದರು. ವಿಪೂರಿ ಗಾಯತ್ರೀ ಪೀಠಾಧ್ಯಕ್ಷರಾದ ಶ್ರೀವರ ವೆಂಕಟಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. 'ಯಾಜುಷೀ ಗೃಹ್ಯಬೋಧಿನಿ' ಬಿಡುಗಡೆಯಾದದ್ದು ಇದೇ ಸಂದರ್ಭದಲ್ಲಿಯೇ. ಪೂರ್ಣಾಹುತಿಯಂದು ಅರಮನೆಯಿಂದ ಪೂರ್ಣಾಹುತಿ ಸಾಮಗ್ರಿ, ಉಪಹಾರ ಅರಮನೆಯು ಬಕ್ಷಿಗಳೇ ತಂದಿದ್ದರು. ಅಂದು ಊಟ ಮಾಡಿದವರು ಐದಾರು ಸಾವಿರಕ್ಕೆ ಕಡಿಮೆ ಇಲ್ಲವೆಂದು ಅಂದಾಜು. ಈ ಸಂದರ್ಭದಲ್ಲಿ ನಾಭಾ ಅವರ ಶಿಸ್ತು, ಸಭೆಗಳನ್ನು ಏರ್ಪಡಿಸಿದ ವಿಧಾನ ಎಲ್ಲರ ಮೆಚ್ಚುಗೆ ಗಳಿಸಿದಂತೆ, ಅವರು ಆಚಾರ್ಯ ಸ್ಥಾನದಿಂದಲೂ ಎಲ್ಲರ ಮೆಚ್ಚುಗೆ ಗಳಿಸಿದರು.

ಮಂಡ್ಯದಲ್ಲಿ ವಿಶ್ವಕರ್ಮ ವಿದ್ಯಾರ್ಥಿ ನಿಲಯವಾಗಿದೆ. ಅದನ್ನು ಎಸ್. ವೆಂಕಟಾಚಾರ್ಯ–ಉ–ಪುಟ್ಟಸ್ವಾಮಿ ಆಚಾರ್ಯರ ೧೯೪೪, ಡಿಸೆಂಬರ್ ೮ ರಂದು ಸಾರಿರುವ ಧರ್ಮಪತ್ರದಿಂದ ರೂಪಿಸಲಾಗಿದೆ. ಈ ಧರ್ಮದ ಮೂಲ ಪ್ರೇರ

ವಿಶ್ವಕರ್ಮ ವಿದ್ಯಾರ್ಥಿ ನಿಲಯ, ಮಂಡ್ಯ

ಕರು 'ನಾಭಾ' ಅವರೇ. ದಾನಿಗಳು ದಾನ ಮಾಡಿದ ನಂತರ ಆ ಹಾಸ್ಟಲಿನಲ್ಲಿದ್ದು ಆಚಾರ್ಯರು ಹಾಸ್ಟಲನ್ನು ನಿಯಮಬದ್ಧವಾದ ರೀತಿಯಲ್ಲಿ ಆದರ್ಶಯುತವಾಗಿ ಹಲವಾರು ವರ್ಷಗಳು ನಡೆಸಿದರು. ಇಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿಜೀವನವನ್ನು ಮರೆಯಲಾರದಂತೆ, ನೆನಪಿನಲ್ಲಿ ಉಳಿಯುವಂತೆ ನಿರ್ವಹಿಸಿದ್ದಾರೆ. ಅನೇಕರಲ್ಲಿ ನಿಯಮಬದ್ಧತೆ, ಆಚಾರಶೀಲತೆಗಳನ್ನೂ, ಸಮಾಜಾಭಿಮಾನವನ್ನೂ ರೂಢಿಸಿ ಕೊಟ್ಟಿದ್ದಾರೆ. ಆ ಹಾಸ್ಟಲಿನ ಟ್ರಸ್ಟಿಗಳಲ್ಲಿ ಒಬ್ಬರಾಗಿ ಇಂದೂ ಮುಂದುವರಿಯುತ್ತಿದ್ದಾರೆ.

✻ ಡಿ. ಎಸ್. ಸುಬ್ಬಯ್ಯಾಚಾರ್ಯ

ಕೋಮುವಾರು ಭಾವನೆ ಹಿಂದೂ ಸಮಾಜದಲ್ಲಿ ವ್ರಣವಾಗಿದೆ ಎಂಬುದರ ಬಗ್ಗೆ ಎರಡನೆಯ ಮಾತಿಲ್ಲ. ಈ ಕೋಮುಗಳ ಕೆಟ್ಟತನ ಅಡಗಿರುವುದು ಮೇಲು-ಕೀಳು ಎಂಬ ಕಾಲ್ಪನಿಕ ಭಾವಾಗ್ನಿಗೆ ಗಾಳಿ ಹಾಕುವಲ್ಲಿ. ಸಮಾಜದಲ್ಲಿ ಅನ್ಯವರ್ಗಗಳು ಯಾವುದಾದರೂ ಹಾದಿಯನ್ನು ಅನುಸರಿಸಿ ಇತರನ್ನು ದಮನಗೊಳಿಸುತ್ತಿದ್ದದು ಅನೂಚಾನವಾಗಿ ಸಾಗಿಬರುತ್ತಿದೆ. ದಕ್ಷಿಣ ಭಾರತದಲ್ಲಿ ಸಮಾಜವನ್ನು ಪಣಗಳಾಗಿ ಇಬ್ಭಾಗಿಸಿದ್ದೂ ಒಂದು ವಿಚಿತ್ರ. ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಂಡು ಅದೇ ರೀತಿಯ ಸವಲತ್ತು ಮುಂದಿನ ತಮ್ಮ ಪೀಳಿಗೆಗೂ ದೊರೆಯಬೇಕೆಂದು, ಈಗ ಊಳಿಗದಲ್ಲಿರುವವರು ಪರಂಪರೆಯಾಗಿ ಅದೇ ವೃತ್ತಿಯಲ್ಲಿ ಮುಂದುವರೆಯಬೇಕೆಂಬುದು ಅವರ ಬಯಕೆ. ಬ್ರಾಹ್ಮಣರಿಗೆ ಈ ಪಣಗಳಿಲ್ಲವೆಂದು ಹೇಳಿಯೂ ವಿಶ್ವಬ್ರಾಹ್ಮಣರಿಗೆ ಈ ಪಣವನ್ನು ಮೆತ್ತಿದ್ದು ಮತ್ತೂ ವಿಚಿತ್ರವಾದದ್ದು. ಈ ಪಣಗಳ ವಿಂಗಡಣೆಯನ್ನು ವಿಶ್ವಬ್ರಾಹ್ಮಣರು ಒಪ್ಪಿಲ್ಲವಾದರೂ ಊರಿನಲ್ಲಿ ಅಧಿಕಾರ ಚಲಾಯಿಸಬಲ್ಲ ವರ್ಣಗಳವರು, ಬಹುಸಂಖ್ಯಾತರು, ಅಲ್ಪಸಂಖ್ಯಾತರನ್ನು ಅನೇಕ ತೊಂದರೆಗಳಿಗೆ ಗುರಿಮಾಡಿದ್ದುಂಟು. ಈ ತೊಂದರೆಗಳಿಗೆ ಸರ್ಕಾರದ ಖಾನೂನಾಗಲಿ, ಕುಲಮತಗಳ ಕಟ್ಟಳೆಗಳಾಗಲಿ, ಶಾಸ್ತ್ರಾಧಾರಗಳಾಗಲಿ ಯಾವುದೂ ಕಾರಣವಲ್ಲ. ಅಜ್ಞಾನಾನುವಶವರ್ತಿಗಳು ತಮ್ಮ ಶಕ್ತಿಯನ್ನು ಅನ್ಯರ ಮೇಲೆ ತೋರಲು, ತಾವೇ ಬಲಶಾಲಿಗಳೆಂದು ಪ್ರದರ್ಶಿಸಲು ಅಲ್ಪಸಂಖ್ಯಾತರ ಮೇಲೆ, ಈ ರೀತಿಯ ದಬ್ಬಾಳಿಕೆಯನ್ನು ಕೆಲವು ಸ್ಥಳಗಳಲ್ಲಿ ನಡೆಸಿರುವುದುಂಟು.

ಬ್ರಾಹ್ಮಣ ವರ್ಣದ ಶಿಲ್ಪಿಗಳಿಗೆ ಪಣಗಳು ಸಲ್ಲ ಎಂಬುದನ್ನು ಅರಿತಿದ್ದ ಗ್ರಾಮಸ್ಥರೂ ಇರದೆ ಇರಲಿಲ್ಲ. ಅಂತಹವರೂ ಕೂಡ ಈ ಬಲಶಾಲಿಗಳ ಮುಂದೆ ಮೌನವಹಿಸಬೇಕಾಗಿತ್ತು. ಅನ್ಯಥಾ ಅವರ ಕೋಪಕ್ಕೆ ಬಲಿಯಾಗಿ ಅವರೂ ತೊಂದರೆಗಳನ್ನು ಅನುಭವಿಸಲು ಸಿದ್ಧವಾಗಬೇಕಾಗಿತ್ತು.

ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಈ ರೀತಿಯ ತೊಂದರೆಗಳು ಪ್ರಾರಂಭದಲ್ಲಿ ಇದ್ದರೂ ಅನೇಕ ಪಾಶ್ಚಿಮಾತ್ಯ ಅಧಿಕಾರಿಗಳು ಈ ಮೊಕದ್ದಮೆಗಳ ಸತ್ಯಾಸತ್ಯತೆಯನ್ನು ಅರಿತು ಈ ರೀತಿಯ ಸಾಮಾಜಿಕ ಅನ್ಯಾಯಗಳಿಗೆ ಎಡೆಯಾಗ

ದಂತೆ ಪ್ರಯತ್ನಿಸಿದರಾದರೂ ಅವೆಲ್ಲವೂ ಕೇವಲ ಸ್ಥಳೀಯ ಪರಿಹಾರಗಳಾಗಿಯೇ ನಿಂತು ವ್ಯಾಪಕ ರೀತಿಯಲ್ಲಿ ಪರಿಣಾಮ ಬೀರಲು ಸಾಧ್ಯವಿಲ್ಲದೆ ಹೋಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಪ ಸಂಖ್ಯಾತರಾಗಿರುವ ವಿಶ್ವಬ್ರಾಹ್ಮಣರು ಅನೇಕ ರೀತಿಯ ತೊಂದರೆಗಳಿಗೆ ತುತ್ತಾಗಿರುವುದುಂಟು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ಗ್ರಾಮಗಳಲ್ಲಿ **ಜಿಸ್‌ಕಿ ಲಾಠಿ ಉಸ್‌ಕಿ ಭೈಂಸ್** (ದೊಣ್ಣೆ ಹಿಡಿದವನದೇ ಹಸು!) ಎಂಬ ರೂಕ್ಷ ನ್ಯಾಯ ನಡೆಯುತ್ತಿದೆ ಎಂಬುದು ಅತ್ಯುಕ್ತಿಯಲ್ಲ. ಅಸ್ಪೃಶ್ಯರೆನಿಸಿದ ಮಾದಿಗ ಹೊಲೆಯರನ್ನೂ ಈ 'ಪಣ'ದ ಪಿಶಾಚಿ ಎರಡು ಭಾಗ ಮಾಡಿ, ಎಡಗೈ-ಬಲಗೈ ಎಂದು ಬೇರ್ಪಡಿಸಿ ಅವರಲ್ಲೂ ಐಕಮತ್ಯದ ಲೋಪವನ್ನುಂಟು ಮಾಡಿ, ಅವರ ದಮನಕ್ಕೆ ಕಾರಣವಾಗಿತ್ತು. ಅಲ್ಪಸಂಖ್ಯಾತರೂ ಮತ್ತು ಹಿಂದುಳಿದವರು ಸಮಾಜದಲ್ಲಿ ಬಹುವಾಗಿದ್ದರೂ ಕೇವಲ ಕೆಲವೇ ಪ್ರತಿಷ್ಠಿತರ ಹಿಡಿತಕ್ಕೆ ಸಿಕ್ಕಿ ನರಳುತ್ತಿದ್ದರು.

ಅಜ್ಞಾನ ಗ್ರಾಮಸ್ಥನ

ಗ್ರಾಮಾಂತರ ಪ್ರದೇಶಗಳಲ್ಲಿ ಈ ಪುಂಡುತನ ವಿಪರೀತವಾಗಿತ್ತು. ಯಾವುದೋ ಕಾರಣಕ್ಕಾಗಿ ಹೊಡೆದರೂ 'ಜಾತಿ'-'ಪಣ' ಮುಂದು ಮಾಡಿ ನ್ಯಾಯವನ್ನು ಹೇಳುವುದು, ಊರಿನ ಮುಖಂಡರು "ಏನ್ರಿ, ಜನರ ಹತ್ರ ಅಡ್ಜಸ್ಟ್ ಮಾಡ್ಕೊಂಡು ಹೋಗೋಕಾಗೋಲ್ವೇ?" ಎಂದು ಬುದ್ಧಿವಾದ ಹೇಳುವುದು ಸಾಮಾನ್ಯವಾಗಿತ್ತು. ಈ ಚಿತ್ರಹಿಂಸೆಗೆ ಅಂತ್ಯವಿಲ್ಲವೇ ಎಂದು ಅನೇಕ ರಾತ್ರಿಗಳು ನಾನು ಯೋಚಿಸಿದ್ದುಂಟು. ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ರೈಲ್ವೇ ಸ್ಟೇಷನ್ನಿನ ಎದುರಿಗಿದ್ದ ಜೋಡಿ ತೋಪಿನಲ್ಲಿ **ಗ್ರಾಮಾಂತರ ವಿಶ್ವಕರ್ಮ ಮಹಾಜನಗಳ ಸಭೆ** ಸೇರಿತು. ಅಲ್ಲಿ 'ನಾಥಾ' ಚಂದ್ರಶೇಖರಾಚಾರ್ಯರು ಗ್ರಾಮಸ್ಥರ ಉಪಯೋಗಕ್ಕೆ ಬರುವಂತಹ, ಅವರ ಸಮಸ್ಯೆಗಳಿಗೆ ಪರಿಹಾರ ಸೂಚನೆಗಳನ್ನೊಳಗೊಂಡ **ಗ್ರಾಮಸ್ಥರ ಗ್ರಹಿಕೆಗಾಗಿ** ಎಂಬ ಭಾಷಣ ಮಾಡಿದ್ದರು [ನಂತರ ಈ ಭಾಷಣವು **ಮೈಸೂರು ಸ್ಟಾರ್** ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು]. ಅದರಿಂದ ತುಂಬಾ ಪ್ರಭಾವಿತನಾಗಿದ್ದೆ. ನನ್ನ ಸೋದರರಾದ ಸಿ. ಕೆ. ಪುಟ್ಟಣ್ಣಯ್ಯನವರು ನನ್ನ ಈ ಅನಿಸಿಕೆಯಲ್ಲಿ ಪಾಲುದಾರರಾಗಿದ್ದರು. ಮೊದಲ ಬಾರಿಗೆ ಎಲ್. ಶಿವಲಿಂಗಯ್ಯ (ಈಗ ಅಸಿಸ್ಟೆಂಟ್ ಕಮೀಷನರ್ ಆಗಿ ರಿಟೈರ್ ಆಗಿ

ದ್ದಾರೆ) ಅವರ ಅಧ್ಯಕ್ಷತೆಯಲ್ಲಿ ಗಂಗಾಧರ ಮೂರ್ತಿಗಳು ಮತ್ತು ಆಚಾರ್ಯರು ಕ್ಯಾತನ ಹಳ್ಳಿ ಸುತ್ತಮುತ್ತಲ ಬಾಂಧವರನ್ನು ಉದ್ದೇಶಿಸಿ ಮಾತನಾಡಿದರು. ವಿಶ್ವಬ್ರಾಹ್ಮಣರ ವೈದಿಕ ಜೀವನ ಪದ್ಧತಿಯನ್ನು ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ಹಿರೋಡೆ ಬೆಟ್ಟದಲ್ಲಿ ಸಾಮೂಹಿಕ ಉಪಾಕರ್ಮವನ್ನೂ ಕೆಲವು ಬಾರಿ ಆಚಾರ್ಯರ ಪೌರೋಹಿತ್ಯದಲ್ಲಿ ಏರ್ಪಡಿಸಿದ್ದುಂಟು. ಇದರ ಪ್ರಧಾನ ಉದ್ದೇಶ ಇತರರು ನಮ್ಮನ್ನು ಅರಿತುಕೊಳ್ಳಲು ಸಾಧ್ಯವಾಗಲಿ ಎಂಬುದೇ.

ಆಗ ಮದುವೆ ಮಾಡಿಸಬೇಕಾಗಿದ್ದರೆ ಮೊದಲು ಲೈಸನ್ಸ್ ಪಡೆಯಬೇಕಾಗಿತ್ತು. ಅನೇಕ ಬಾರಿ ಪ್ರಭಾವಿಗಳ ಹಸ್ತಕ್ಕೆ ಸಿಕ್ಕಿ ಕೆಲವು ಗ್ರಾಮಗಳಲ್ಲಿ ಸಾರ್ವಜನಿಕ ನೆಮ್ಮದಿಗೆ ಭಂಗ ಬರುವುದೆಂಬ ಕಾರಣವನ್ನು ಹೇಳಿ ಲೈಸನ್ಸ್ ಕೊಡುತ್ತಲೇ ಇರಲಿಲ್ಲ. ಆಚಾರ್ಯರೇ ತಮ್ಮ ವಕೀಲ ಮಿತ್ರರ ನೆರವಿನಿಂದ ಒಂದು ಅರ್ಜಿಯನ್ನು ತಯಾರಿಸಿಕೊಟ್ಟರು. ಅದರಲ್ಲಿ ಹೈಕೋರ್ಟಿನ ಅನೇಕ ತೀರ್ಮಾನಗಳನ್ನು ಉಲ್ಲೇಖಿಸಿ, ಮದುವೆ ಮಾಡುವ, ಮೆರವಣಿಗೆ ಹೋಗುವ ಸಾರ್ವಜನಿಕ ಹಕ್ಕು ಎಲ್ಲರಿಗೂ ಉಂಟೆಂಬುದನ್ನು ಸಾರ್ವಜನಿಕರ ಗ್ರಹಿಕೆಗೆ ಗ್ರಾಮಗಳಲ್ಲಿ ಡಂಗೂರ ಹಾಕಿಸಲು ಪ್ರಾರ್ಥಿಸಲಾಗಿತ್ತು.

ಮದುವೆ ಮಾಡಲು ಲೈಸನ್ಸ್!

ಈ ಅರ್ಜಿಯ ಬಗ್ಗೆ ಮಂಡ್ಯದ ಎಸ್. ಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಅದರಲ್ಲಿ ನಾನಾ ಭಾಗಗಳಿಂದ ಸದಸ್ಯರು ಭಾಗವಹಿಸಿದ್ದರು. ಅವರು ಈ ಸೂಚನೆಗೆ ತಮ್ಮ ಅಂಗೀಕಾರ ಸೂಚಿಸಿದರು. ಸರ್ಕಾರಕ್ಕೆ ಮನವಿ ಅರ್ಪಿಸಲಾಯಿತು. ಅದಕ್ಕೆ ಉತ್ತರವೂ ಶೀಘ್ರವಾಗಿಯೇ ಬಂತು "ಪ್ರಸ್ತುತ ಜಾರಿಯಲ್ಲಿರುವ ಕಾನೂನೇ ಈ ಹಕ್ಕಿನ ರಕ್ಷಣೆಗೆ ಸಾಕಾಗಿದೆ. ಅದನು ಎಲ್ಲರೂ ಬಳಸಿಕೊಳ್ಳಬಹುದು." ಇದರಿಂದ ನಮ್ಮವರಿಗೆ ಸೌಲಭ್ಯ ದೊರೆತಂತಾಗಲಿಲ್ಲ. ಇಲ್ಲಿ ನಡೆಯಬೇಕಾದದ್ದು ಪುಂಡರಿಗೆ, ಅಹಂಮಾನ್ಯರಿಗೆ ತಿಳಿವು, ನ್ಯಾಯದ ಬೆದರಿಕೆ. ಅದು ದೊರೆಯದೆ ಈ ಪ್ರಯತ್ನ ಸೋತಿತ್ತು.

ಕೆಲವು ಗ್ರಾಮಸ್ಥರಿಂದ ತಾಲ್ಲೂಕ್ ಮ್ಯಾಜಿಸ್ಟ್ರೇಟರಲ್ಲಿ ಮದುವೆ ನಡೆಸಲು ಲೈಸೆನ್ಸ್‌ಗಳಿಗೆ ಅರ್ಜಿಗಳನ್ನು ಹಾಕಿಸಿದೆವು. ಅದೇ ಹಳೆಯ ಜಾಡಿನಲ್ಲಿ ನೆಮ್ಮದಿಗೆ ಭಂಗ ಬರುವುದೆಂದು ನಿರಾಕರಿಸಿದರು. ಅಪೀಲ್ ಮಾಡಿದರೆಸಬ್-ಡಿವಿಷನ್ ಮ್ಯಾಜಿಸ್ಟ್ರೇಟರೂ ಅದೇ ತೀರ್ಮಾನ ನೀಡಿದರು! ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ

(ಡೆಪ್ಯುಟಿ ಕಮೀಷನರ್, ಬಳಿ ಎರಡನೆಯ ಅಪೀಲ್ ಮಾಡಿದೆವು. ಅವರು ನಮ್ಮ ನಿಜವಾದ ಸಮಸ್ಯೆಯನ್ನು ಅರಿತು ನೆಮ್ಮದಿಗೆ ಭಂಗ ಬರುವುದೆಂಬ ಕಾರಣದಿಂದ ಒಂದು ಸಾರ್ವಜನಿಕ ಹಕ್ಕಿನ ಘೋಷಣೆ ನಿರಾಕರಿಸುವುದು ತೀರ ತಪ್ಪು, ಸರ್ಕಾರವು ರಕ್ಷಣೆ ಕೊಟ್ಟು ಈ ಸ್ವಾತಂತ್ರ್ಯವು ಜನರು ಅನುಭವಿಸಲು ಅವಕಾಶ ಮಾಡಿ ಕೊಡಬೇಕು. ಈ ತೀರ್ಪು ಹೈಕೋರ್ಟಿನ ತೀರ್ಪುಗಳಿಗೆ ಅನುಗುಣವಾಗಿದೆ ಎಂದು ತೀರ್ಪಿತ್ತರು. ಈ ಸಂದರ್ಭದಲ್ಲಿ ಹೈಕೋರ್ಟಿನ ತೀರ್ಪುಗಳನ್ನು, ಕಾಯಿದೆಯ ರೂಪರೇಷೆಗಳನ್ನೂ ಸಂಪೂರ್ಣವಾಗಿ ಒದಗಿಸಿಕೊಟ್ಟವರು ನಾಭಾ. ಅವರಿಗೆ ನೆರವಾಗಿದ್ದವರು ಶ್ರೀರಂಗಪಟ್ಟಣದ ಸುಪ್ರಸಿದ್ಧ ಲಾಯರಾಗಿದ್ದ ಬಿ. ನರಸಿಂಗರಾಯರ ಅಳಿಯ ಅಡ್ವೋಕೇಟ್ ಎಂ. ಎನ್. ನಂಜುಂಡಯ್ಯನವರು. ಅವರು ಈ ಪರಿಸ್ಥಿತಿ ಕೇಳಿ "ಈ ಜನಕ್ಕೆ ಜ್ಞಾನೋದಯವಾಗುವುದು ಯಾವಾಗ? " ಎಂದು ತುಂಬಾ ವಿಷಾದಿಸಿದ್ದುಂಟು.

ಈ ತೀರ್ಮಾನ ಬರುತ್ತಲೇ ಲೈಸೆನ್ಸು ದೊರೆಯಿತು. ಈ ತೀರ್ಮಾನವನ್ನು ಅಚ್ಚು ಮಾಡಿಸಿ ಮುಂದಿನ ಲೈಸೆನ್ಸು ಅರ್ಜಿಗಳಿಗೆಲ್ಲಾ ಈ ತೀರ್ಮಾನದ ಕಾಪಿ ಲಗತ್ತಿಸಲಾಗುತ್ತಿತ್ತು. ಲೈಸೆನ್ಸು ಮರು ಮಾತಿಲ್ಲದೆ ದೊರೆಯುತ್ತಿತ್ತು. ಮದುವೆಗಳೂ ಸಾಂಗವಾಗಿ ವಿಧಿವತ್ತಾಗಿ ನಡೆಯುತ್ತಿದ್ದವು.

ಆಚಾರ್ಯರ ಈ ಸೇವಾ ಕಾರ್ಯಗಳಿಂದ ಪ್ರೇರಿತಗೊಂಡ ಚಿಕ್ಕಮಸಳಿಯ ವಿಶ್ವಬ್ರಾಹ್ಮಣರು ಶ್ರೀ ಕಾಳಿಕಾ ದೇವಿಯ ಆಲಯವನ್ನು ನಿರ್ಮಿಸಿ ಆಗ ಮುಖ್ಯ ಮಂತ್ರಿಗಳಾಗಿದ್ದ ಬಿ. ಡಿ. ಜತ್ತಿ ಅವರನ್ನು ಆಹ್ವಾನಿಸಿ ಅವರ ಸಮಕ್ಷಮದಲ್ಲಿ ಪ್ರತಿಷ್ಠಾಪನಾಕಾರ್ಯ ನೆರವೇರಿಸಿದರು.

ಸರ್ಕಾರದ ತೀರ್ಮಾನಗಳು ಅನೇಕ ಗ್ರಾಮಗಳಲ್ಲಿದ್ದ ತುಂಟರನ್ನು ದೂರ ಮಾಡಿದ್ದರೆ ಬೆಳ್ಳೂರು ಬಳಿಯ ಕಂಚನಹಳ್ಳಿಯಲ್ಲಿ ಅದು ವಿಪರೀತಕ್ಕೆ ಪರಿವರ್ತಿತವಾಯಿತು. ಇದು ನಡೆದದ್ದು ೧೯೫೦ ರಲ್ಲಿ. ಸಣ್ಣಲಿಂಗಾಚಾರ್ಯ ಎಂಬುವರು ತಮ್ಮ ಮಗಳ ಮದುವೆ ನಿಶ್ಚಿತಾರ್ಥ ಮಾಡಿ ಮದುವೆಯ ದಿನಾಂಕ

ಕಂಚನಹಳ್ಳಿ ಪ್ರಕರಣ

ನಿರ್ಧರಿಸಿ ಲಗ್ನಪತ್ರಿಕೆ ಬರೆಯಿಸಿದರು. ಈ ಸುದ್ದಿ ಕೇಳಿದೊಡನೆಯೇ ಊರಿನ ಪಟೇಲ ಇದನ್ನು ವಿರೋಧಿಸಿ ದಂಡ ವಿಧಿಸಿರುವುದಾಗಿ ಹೇಳಿದ. ಸಣ್ಣಲಿಂಗಾಚಾರ್ಯ "ಇದು ಅನ್ಯಾಯ. ದಂಡ ನಾನು ಕೊಡಬೇಕಾಗಿಲ್ಲ" ಎಂದ.

ಒಡನೆಯೇ ಮನೆಯಮೇಲೆ ಕಲ್ಲುಗಳು ಬಿದ್ದವು. ಬೆಳ್ಳೂರಿನ ಪೋಲೀಸರಿಗೆ ದೂರು ಕೊಡಲ್ಪಟ್ಟಿತು. ಒಬ್ಬ ಪೋಲೀಸಿನವ ಬಂದು ಅವರ ರಕ್ಷಣಾರ್ಥ ಕಾಯುತ್ತಿದ್ದ. ಕೆಲವು ದಿನಗಳು ಮೌನವಾಗಿದ್ದನಂತರ ಇದ್ದಕ್ಕಿದ್ದಂತೆಯೇ ಮೇ ೨೭, ೧೯೫೦ ರಂದು ಬೆಳಿಗ್ಗೆಯೇ ಕಲ್ಲು ತೂರಲಾರಂಭಿಸಿದರು. ವಿಚಾರಿಸಲು ಹೊರಬಂದ ವೆಂಕಟಾಚಾರ್ಯರನ್ನು ಇಬ್ಬರು-ಮೂವರು ಸೇರಿ ಬಹುವಾಗಿ ಬಡಿದರು. ತತ್ಫಲವಾಗಿ ಅವರ ಪಕ್ಕೆಲುಬೊಂದು ಮುರಿಯಿತು. ಕೃಷ್ಣರಾಜೇಂದ್ರ ಆಸ್ಪತ್ರೆ (ಮೈಸೂರು) ಸೇರಬೇಕಾಯಿತು. ಆಗ ಹಾಜರಿ ಇದ್ದ ಪೋಲೀಸೇ ಸಾಕ್ಷಿದಾರನಾದ! ಪೋಲೀಸರು ಕೇಸ್ 'ಬುಕ್' ಮಾಡಿದರು!!

ಇಷ್ಟೆಲ್ಲಾ ರಾದ್ಧಾಂತವಾದ ನಂತರ ನನಗೆ ಈ ಸಂಗತಿ ತಿಳಿಯಿತು. ಆಗಲೂ ಗ್ರಾಮದ ಪುಂಡರು "ಅದ್ಹ್ಯಾಗೆ ಮದುವೆ ಮಾಡ್ತಾರೊ ನೋಡ್ತೀವಿ. ಅವರ ಮನೆಗಳನ್ನ ಸುಡ್ತೀವಿ. ಎಲ್ಲರ ರಕ್ತ ಬಸಿದು ಕುಡೀತೀವಿ..." ಎಂದು ಅಬ್ಬರಿಸುತ್ತಲೇ ಇದ್ದರು. ಇವರಿಗೆ ಪಾಠ ಕಲಿಸಬೇಕು. ಇವರನ್ನು ಬಗ್ಗುಬಡಿಯಬೇಕೆಂಬುದು ನನ್ನ ಬಯಕೆ. ಆದರೆ ಹೇಗೆ?

ಸೂರಾಚಾರ್ಯರು ತಮ್ಮ ಮಗನ ಮದುವೆ ಮಾಡಬೇಕೆಂದಿದ್ದರು. ಅವರನ್ನು ಹುರಿದುಂಬಿಸಿ 'ಸಾರ್ವಜನಿಕವಾಗಿರುವ ಹಕ್ಕು ಬಿಟ್ಟರೆ ಮುಂದಿನ ತಲೆಮಾರುಗಳಿಗೂ ಇದೇ ಪದ್ಧತಿಯಾಗಿ ಉಳಿದೀತು! ಈ ಪುಂಡುತನವನ್ನು ಮೆಟ್ಟನಿಲ್ಲಬೇಕು' ಎಂದು ಹೇಳಿದೆ. ಅದೇ ಪ್ರಕಾರ ೧೯೫೦ ಜೂನ್ ೭ ರಿಂದ ೯ರ ತನಕ ತಮ್ಮ ಮನೆಯಲ್ಲಿ ಮದುವೆ ನಡೆಸಲು ಅಮಲ್ದಾರರಲ್ಲಿ ಲೈಸನ್ಸ್‌ಗೆ ಅರ್ಜಿ ಸಲ್ಲಿಸಿದರು. ಎರಡನೆಯ ತಾರೀಕು ಮಹಜರ್‌ಗಾಗಿ ಸಬ್-ಇನ್ಸ್‌ಪೆಕ್ಟರ್ ಬಂದಾಗ ಸೂರಾಚಾರ್ಯರೂ ಮನೆಯಲ್ಲಿರಲಿಲ್ಲ. ಅದಕ್ಕಾಗಿ ಮರುದಿನ ಮಧ್ಯಾಹ್ನ ಬೆಳ್ಳೂರಿಗೆ ಹೋಗಿ ಥಫೇದಾರರಲ್ಲಿ ಮಹಜರ್ ಬರೆಯಿಸಿ ನಾನು, ಸೂರಾಚಾರ್ಯರು, ಕರಿಯಾಚಾರ್ಯರು ಹಿಂತಿರುಗಿ ಬರುತ್ತಿದ್ದೆವು. ಸಂಜೆಗತ್ತಲು ಕಂಚನಹಳ್ಳಿಯ ಸಮೀಪದಲ್ಲಿಯೇ ೨೦-೩೦ ಮಂದಿ ಸೇರಿಕೊಂಡು ನಮ್ಮನ್ನು ಬಡಿದರು. ಮುವ್ವರೂ ಪ್ರಜ್ಞಾಹೀನರಾಗಿ ಬಿದ್ದೆವು. ನಾವು ಸತ್ತಿರುದ್ದೇವೆಂದೇ ಅವರು ತಿಳಿದರೇನೋ? ನಮ್ಮನ್ನು ಬೇಲಿಯ ಬುಡಕ್ಕೆ ಎಸೆದು ಹೋದರು.

ಕತ್ತಲಲ್ಲಿ ಬಹುಕಾಲವೇ ಆ ರೀತಿ ಬಿದ್ದಿದ್ದೆವೇನೋ? ನನಗಿಂತಲೂ ಸೂರಾಚಾರ್ಯರು, ಕರಿಯಾಚಾರ್ಯರು ಹೆಚ್ಚು ಪೆಟ್ಟುತಿಂದಿದ್ದರು. ಅವರನ್ನು ಪ್ರಯತ್ನದಿಂದ ಆಸ್ಪತ್ರೆಗೆ ಸಾಗಿಸಿದೆ. ನಾನು ನೇರವಾಗಿ ಶ್ರೀರಂಗಪಟ್ಟಣಕ್ಕೆ ಬಂದೆ. ಆಗ 'ನಾಭಾ' ಅವರು ಮಂಡ್ಯದ ಎಸ್. ಕೆ. ನರಸಿಂಹಾಚಾರ್ಯರ ಮನೆಯವರೊಬ್ಬರ ಮದುವೆಗಾಗಿ ಪಶ್ಚಿಮವಾಹಿನಿಯಲ್ಲಿರುವ ಮಹಾರಾಜರ ಛತ್ರದಲ್ಲಿದ್ದರು. ಅಲ್ಲಿಯೇ ಅವರನ್ನು ಕಂಡೆ. ಗಾಭರಿಯಿಂದ ಆಚಾರ್ಯರು ನನ್ನ ಅಂಗಿ ಬಿಚ್ಚಿಸಿ ಮೈಮೇಲೆ ಮುಡಿದ್ದ ಬಾಸುಂಡೆ-ಬರೆಗಳನ್ನು ನೋಡಿದರು. ಅವರ ಕಣ್ಣಿಂದ ನೀರು ತೊಟ್ಟಿಕ್ಕಿತು. ಬಳಿಯಲ್ಲಿಯೇ ಇದ್ದ ಗಂಗಾಧರಮೂರ್ತಿಗಳು ವಿಷಯವನ್ನೆಲ್ಲಾ ಕೇಳಿ ತುಂಬಾ ವಿಷಾದಿಸಿದರು. ಒಡನೆಯೇ ಮದುವೆಯ ಗಲಾಟೆಯನ್ನೂ, ತಮ್ಮ ಆಯಾಸವನ್ನೂ ಮರೆತು ಅರ್ಜಿಯನ್ನು ಬರೆದು ಗೃಹಮಂತ್ರಿಗಳಾಗಿದ್ದ ಟಿ. ಮರಿಯಪ್ಪನವರಿಗೆ, ಮಂಡ್ಯದ ಡೆಪ್ಯುಟಿ ಕಮೀಷನರ್ ಅವರಿಗೆ ಸಲ್ಲಿಸುವಂತೆ ಮಾಡಿದರು. ಗಂಗಾಧರ ಮೂರ್ತಿಗಳು ಕಂಚನಹಳ್ಳಿಯವರ ಪತ್ರವನ್ನು ತಮ್ಮ ವಿಶ್ವಕರ್ಮ ಪತ್ರಿಕೆ (ಜುಲೈ ೧೯೫೦) ಯಲ್ಲಿ ಪ್ರಕಟಿಸಿ ಕರ್ನಾಟಕದ ಎಲ್ಲಾ ವಿಶ್ವಬ್ರಾಹ್ಮಣರ ಸಹಾನುಭೂತಿ, ದ್ರವ್ಯ ಸಹಾಯವನ್ನು ಗಳಿಸಿಕೊಟ್ಟರು. ಗೃಹಮಂತ್ರಿಗಳು ತಮ್ಮನ್ನು ಭೇಟಿಯಾಗಲು ಅವಕಾಶಕೊಟ್ಟಿದ್ದು ಮಾತ್ರವಲ್ಲ ಜಿಲ್ಲಾಧಿಕಾರಿಗಳಿಗೂ, ಪೋಲೀಸ್ ಸೂಪರಿನ್‌ಟೆಂಡೆಂಟರಿಗೂ ಈ ಬಗ್ಗೆ ಹೇಳಿ ಮದುವೆಯ ಸಮಯದಲ್ಲಿ ಅವರೇ ಖುದ್ದಾಗಿ ಇದ್ದು, ಕಾರ್ಯ ಸುಸೂತ್ರಗೊಳಿಸಬೇಕೆಂದು ಅಪ್ಪಣೆ ಮಾಡಿದರು. ಆಗ ಕೆ. ಪಿ. ರಾಮನಾಥಯ್ಯನವರು ಡಿ. ಸಿ. ಆಗಿದ್ದರು. ಸ್ವತಃ ಎಲ್ಲಾ ಸಂಗತಿಗಳನ್ನು ವಿಚಾರಿಸಿ, ನನ್ನ ಮೈ ಮೇಲಿನ ಗಾಯಗಳನನ್ನು ಕಂಡು ತುಂಬಾ ನೊಂದುಕೊಂಡರು. ಒಂದು ಪೋಲೀಸರ ತುಕಡಿ ಕಂಚನಹಳ್ಳಿಯಲ್ಲಿಯೇ ಇರುವಂತೆ ವ್ಯವಸ್ಥೆ ಮಾಡಿದರು. ಒಂದು ಔಟ್ ಪೋಸ್ಟ್ ಸ್ಟೇಷನ್ ಪ್ರಾರಂಭಿಸಿದರು. ಗಲಾಟೆಕೋರರಿಗೆ, ಪುಂಡರಿಗೆ ಪುಂಡುಗಂದಾಯ ವಿಧಿಸಲಾಗುವುದೆಂದು ಖುದ್ದಾಗಿ ತಾವೇ ಬಂದು ಎಚ್ಚರಿಸಿದರು. ತಾವೇ ಮದುವೆಯದಿನ ಅಲ್ಲಿದ್ದು ಎಲ್ಲಾ ಕಾರ್ಯಗಳೂ ಸುಸೂತ್ರವಾಗಿ ನಡೆಯುವಂತೆ ಅನುವುಮಾಡಿಕೊಟ್ಟರು.

ಈ ಸಂಗತಿ ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿದು ಕೆಂಗೇರಿಯ ಗುರುಕುಲ

ವರಿಗೆ ಕಂಚನ ಹಳ್ಳಿಯ ಹಳ್ಳಿಗರಿಗೆ ತಿಳಿಹೇಳಲು ಆದೇಶ ಬಂದಿತ್ತು. ಯಾರ ಗಮನಕ್ಕೂ ಬರದಂತೆ ಕೇವಲ ತೊಂದರೆಯೇ ಅನುಭವಿಸುವುದನ್ನು ತಿಳಿದಿದ್ದ ನಮಗೆ ರಾಷ್ಟ್ರಮಟದಲ್ಲಿ ಈ ರೀತಿಯ ನೆರವು-ಭರವಸೆ ದೊರಕಿಸಿಕೊಟ್ಟವರು 'ನಾಭಾ' ಅವರು. ಈಗ ಕಂಚನಹಳ್ಳಿಯಲ್ಲಿ ತಿಳಿವು ಮೂಡಿದೆ ಈ ರೀತಿಯ ಅಜ್ಞಾನವಿಲ್ಲ. ಶಾಂತಿಯಿಂದ ಎಲ್ಲಾ ಸಾಮಾಜಿಕ ಕಾರ್ಯಕ್ರಮಗಳು ಎಲ್ಲರ ಸಹಕಾರಗಳೊಂದಿಗೆ ಸಾಗುತ್ತಿವೆ.

ಹೊನ್ನಿಶೆಟ್ಟಿಹಳ್ಳಿ

ಇದೇ ರೀತಿಯ ಪ್ರಕರಣ ಹೊನ್ನಿಶೆಟ್ಟಿಹಳ್ಳಿ (ಚನ್ನರಾಯಪಟ್ಟಣ)ಯಲ್ಲಿ ನಡೆಯಿತು. ಅಲ್ಲಿ ನಿಶ್ಚಿತಾರ್ಥ ನಡೆಸುವಾಗ ಓಲಗ ಊದಿಸಕೂಡದೆಂದು ಒಬ್ಬ ಜಗಳ ತೆಗೆದು ಪುಂಡಾಟ ಪ್ರಾರಂಭಿಸಿ ಯಜಮಾನ ನನ್ನು ಕಂಭಕ್ಕೆ ಬಿಗಿದು ಮನೆಯನ್ನೇ ಲೂಟಿಮಾಡಿದ. ನಂತರ ಆತ ಊರಿಂದ ಹೊರಕ್ಕೆ ಹೋಗದಂತೆ ಕಾವಲು ಹಾಕಿದ್ದ. ಈ ಘಟನೆಯ ನಂತರ ಒಂದು ವಾರಕ್ಕೆ ಅವರೇ ನನ್ನಲ್ಲಿ ಬಂದು ಹೇಳಿಕೊಂಡರು. 'ನಾಭಾ' ಅವರ ಮಾರ್ಗದರ್ಶನದಲ್ಲಿ ಮುಂದುವರೆದು ಆ ಹಳ್ಳಿಯಲ್ಲೂ ಸೌಹಾರ್ದವಾತಾವರಣ ಮೂಡಿಸಲಾಯಿತು.

ಗ್ರಾಮಗಳಲ್ಲಿ ಜ್ಞಾನ ಪ್ರಸಾರ

ಆಚಾರ್ಯರಿಗೆ ಗ್ರಾಮಾಂತರ ಪ್ರದೇಶಗಳಲ್ಲಿರುವವರ ಬಗ್ಗೆ ತುಂಬಾ ಕಳಕಳಿ ಇದೆ. ಅವರ ಅಭಿವೃದ್ಧಿಯಾದಂದೇ ಸಮಾಜಾಭಿವೃದ್ಧಿ ನಡೆಯುತ್ತದೆ ಎಂದು ಅಚಲವಾಗಿ ನಂಬಿದ್ದಾರೆ. ಅವರು ನಂಜನಗೂಡಿನಲ್ಲಿ ಕೆಲಸದಲ್ಲಿದ್ದಾಗ ಗ್ರಾಮಾಂತರ ಪ್ರದೇಶಗಳವರಿಗೆ ತಿಳಿಹೇಳಲು ಒಂದು ಪ್ರವಾಸ ನಡೆಸಿದ್ದರು. ಆ ಗುಂಪಿನಲ್ಲಿ ಆಚಾರ್ಯರೊಂದಿಗೆ ಮ. ಗಂಗಾಧರ ಮೂರ್ತಿಗಳು, ನಂಜನಗೂಡಿನ ಗೋವಿಂದಾಚಾರ್ಯರು, ಸಿ. ಕೆ. ಪುಟ್ಟಣ್ಣಯ್ಯಚಾರ್ಯರು ಮತ್ತು ನಾನು ಇದ್ದೆವು. ಮೊದಲು ಹೆಮ್ಮರಗಾಲು, ಕಬ್ಬಳ್ಳಿ, ಅಂಗಳ, ಬಿಳಿಕೆರೆ, ಹೊಸ ಹೊಳಲು, ಕಿಕ್ಕೇರಿ, ಮುತ್ತೇಗೆರೆ, ದುದ್ದ, ಕೆರಗೂಡು, ಕೆ. ಆರ್. ನಗರ, ಸಂತೆ ಸರಗೂರು ಮುಂತಾದ ಪ್ರದೇಶಗಳನ್ನು ನಾವು ಆ

ಸಮಯದಲ್ಲಿ ಸಂದರ್ಶಿಸಿ ಸಭೆಗಳನ್ನು ನಡೆಸಿದೆವು. ಈಗಲೂ ಅವರಲ್ಲಿ ಈ ಸಮಾಜಾಭಿಮಾನ, ಸೇವಾ ಮನೋಧರ್ಮ ಎಳ್ಳಷ್ಟೂ ಕುಗ್ಗಿಲ್ಲ.

* * *


ಇದಿಷ್ಟು ಇಬ್ಬರು ಹೇಳಿರುವ ಸಂಗತಿಗಳು. ಇಂತಹ ಸೇವಾ ಪ್ರಸಂಗಗಳು ಇನ್ನೆಷ್ಟಿವೆಯೋ? ಸಮಾಜವನ್ನೇ ತಮ್ಮ ಆರಾಧ್ಯದೈವವಾದ ವಿಶ್ವಕರ್ಮ ನೆಂದು ನಂಬಿರುವ ಆಚಾರ್ಯರು ತಮ್ಮ ಬಾಳಿನ ಅರವತ್ತು ವರ್ಷಗಳನ್ನು ಅದರ ಸೇವೆಯಲ್ಲಿಯೇ ವಿನಿಯೋಗಿಸಿ, ಕನಸಿನಲ್ಲೂ ಅದರ ಉಚ್ಛ್ರಾಯವನ್ನೇ ಕಾಣು ತಿರುವರು. ಇವರ ಸೇವೆ ನೂರ್ಕಾಲ ಅವ್ಯಾಹತವಾಗಿ ಸಮಾಜಕ್ಕೆ ದೊರೆ ಯಲಿ. ಸಮಾಜದ ಸರ್ವತೋಮುಖ ಪ್ರಗತಿಗೆ ಅವಕಾಶವಾಗಲಿ. ☆

ಮಹಾತ್ಮಾ ವಿಶ್ವರೂಪಾಚಾರ್ಯರು

ದೇವಸ್ತ್ವಷ್ಟಾ ಸವಿತಾ ವಿಶ್ವರೂಪಃ ಪುಪೋಷ ಪ್ರಜಾಃ ಪುರುಧಾ ಜಜಾನ ।
ಇಮಾ ಚ ವಿಶ್ವಾ ಭುವನಾನ್ಯಸ್ಯ ಮಹದ್ದೇವಾನಾಮಸುರತ್ವಮೇಕಮ್ ॥

ಋಗ್ವೇದ, ೩ : ೫೫ : ೧೯

ವೈಶ್ವಕರ್ಮಣೋತ್ತಮನಾದ ತ್ವಷ್ಟೃಬ್ರಹ್ಮನ ಮಗನಾದ ಆಚಾರ್ಯ ವಿಶ್ವರೂಪನು ದೇವತೆಗಳಲ್ಲಿ ಸೂರ್ಯ ಸಮನಾದವನು, ತನ್ನ ಆಶ್ರಿತರನ್ನೇ ಅಲ್ಲದೆ ಸಕಲ ಪ್ರಜೆಗಳನ್ನೂ ಸಮಾನವಾಗಿ ಕಾಣುವವನು. ದೇವ ಪುರೋ ಹಿತನಾಗಿ ಎಲ್ಲರ ಹಿತವನ್ನೂ ಬಯಸುವವನೇ ಅಲ್ಲದೆ ಅದರಂತೆ ನಡೆಯು ವವನು. ಈ ವಿಶ್ವವೂ, ಸಕಲ ಲೋಕಗಳೂ ಆತನ ಮಹತ್ತ್ವವನ್ನು ಕೃತಜ್ಞತೆಯಿಂದ ಕೊಂಡಾಡುತ್ತಿವೆ. ಪರಸ್ಪರ ದ್ವೇಷಿಗಳಾದ ದೇವತೆಗಳನ್ನೂ ಅಸುರರನ್ನೂ ಸಮಾನದೃಷ್ಟಿಯಿಂದ ಕಂಡು ಅವರಲ್ಲಿ ಸಮರಸವನ್ನೂ ಪ್ರೀತಿ ಯನ್ನೂ ಉಂಟುಮಾಡುವುದಕ್ಕಾಗಿ ಬಹುಕಾಲ ಹೆಣಗಿ ಕೊನೆಗೆ ತನ್ನನ್ನೇ ಅರ್ಪಿಸಿಕೊಂಡ ಮಹಾತ್ಯಾಗಿ. ಜಗತ್ತಿನಲ್ಲಿ ಇಂತಹ ಮಹಾತ್ಮ ಈತ ನೊಬ್ಬನೇ. ಈತನ ಸ್ಮರಣೆಯಿಂದ ನಮ್ಮಲ್ಲಿ ಸದ್ಬುದ್ಧಿಯು ಜಾಗೃತ ವಾಗುವುದು.



✻ ಕೆ ವಾಸುದೇವಾಚಾರ್ಯ

ಆಚಾರ್ಯರ ಸಾಹಿತ್ಯ ಸಾಧನೆ

ಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು ಲೇಖನಗಳನ್ನು ಬರೆಯಲು ಪ್ರಾರಂಭಿಸಿದ್ದು ೧೯೩೦ಕ್ಕೂ ಮೊದಲೇ. ನಿಜ ಹೇಳಬೇಕೆಂದರೆ ಅವೆಲ್ಲವೂ ಲೇಖನಗಳು ಎನ್ನುವುದಕ್ಕಿಂತಲೂ ಮುಖ್ಯವಾಗಿ ಭಾಷಣಗಳು (ನಂತರದಲ್ಲಿ ಯಾರ ಒತ್ತಾಯಕ್ಕೋ ಮಣಿದು ಲೇಖನಗಳಾಗಿರುವವು). ಇದಕ್ಕೆ ಕಾರಣ ಅವರು ಸಮಾಜದೊಂದಿಗೆ ನೇರ ಸಂಪರ್ಕ ಸ್ಥಾಪಿಸಿಕೊಳ್ಳಲು ಮುಖ್ಯ ಹಾದಿ ಸಭಾವೇದಿಕೆ ಎಂಬುದನ್ನು ಅರಿತಿದ್ದದ್ದು. ಅವರ ಮಾತುಗಾರಿಕೆಗೆ ಬೆನ್ನೆಲುಬಾಗಿದ್ದದ್ದು ವಾಚಾಳಿತನವಾಗಲಿ, ಚಪ್ಪಾಳೆ ಗಿಟ್ಟಿಸುವ ಆಸೆಯಾಗಲಿ ಅಲ್ಲ ಸಮಾಜದಲ್ಲಿ ಚೇತನ ಮೂಡಿಸಬೇಕು; ನಮ್ಮವರು ಇತರರ ಸಮನಾಗಿಯಾದರೂ ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಸ್ತರಗಳಲ್ಲಿ ಬರುವಂತಹ ಪ್ರಜ್ಞೆ ಮೂಡಿಸಬೇಕು ಎಂಬ ಆಸ್ಥೆ. ಆಚಾರ್ಯರ ಸಂಪೂರ್ಣ ಸಹಾನುಭೂತಿಗೆ ಒಳಗಾಗಿದ್ದವರು ಗ್ರಾಮಸ್ಥರು, ಗ್ರಾಮಗಳ ಕುಶಲ ಕೆಲಸಗಾರರು. ಅದಕ್ಕಾಗಿ ಅವರ ಮೊದಲ ಭಾಷಣದ ವಸ್ತುವೇ ಗ್ರಾಮಸ್ಥರ ಗ್ರಹಿಕೆಗಾಗಿ. ಇದರ ಲೇಖನ ರೂಪವು 'ಮೈಸೂರು ಸ್ಟಾರ್' ಪತ್ರಿಕೆಯಲ್ಲಿ ಧಾರಾವಾಹಿಯಾಗಿ

ಪ್ರಕಟಗೊಂಡಿದೆ. ಇದೇ ಸಂಗತಿಯು ಐವತ್ತು ವರ್ಷಗಳ ನಂತರವೂ ಅವರ ಮನಸ ಕಲಕುತ್ತಲೇ ಇದೆ. ೧೯೭೮ ರಲ್ಲೂ ಅವರು Save The Rural Artisans First ಎಂದು ಲೇಖನ ಬರೆದಿದ್ದಾರೆ (ವಿಶ್ವಶಿಲ್ಪಿ, ಪಾಟ್ನ - ಸೆಪ್ಟೆಂಬರ್, ೭೮). ಇದು 'ನಾಭಾ' ಅವರಿಗೆ ಅತ್ಯಂತ ಸನ್ನಿಹಿತವಾದ ಸಂಗತಿ. ಈಗಲೂ 'ಹಳ್ಳಿಗಳಲ್ಲಿ ತಿಳಿವು ಬಿತ್ತುವ ಕೆಲಸ ಆವಶ್ಯಕವಾಗಿ ಆಗಬೇಕಾಗಿದೆ. ಅದು ಸಾಧ್ಯವಾಗುವಂತಹ ಕಾರ್ಯಕ್ರಮ ರೂಪಿಸುವುದು ಅಗತ್ಯ' ಎಂದು ಹೇಳುತ್ತಲೇ ಇದ್ದಾರೆ.

ವಿಶ್ವಕರ್ಮರೂಪೀ ಸಮಾಜಸೇವಾ ದೀಕ್ಷೆಯೇ 'ನಾಭಾ' ಅವರನ್ನು ಸಾಹಿತ್ಯವತ್ತ ಎಳೆದಿರುವ ಸೂಜಿಗಲ್ಲು ಎಂದು ತೋರುತ್ತದೆ. ಎಳೆತನದಿಂದ ವೈದಿಕ ಆಚಾರ, ಸಾಹಿತ್ಯಗಳನ್ನು ರೂಢಿಸಿಕೊಂಡು ಬಂದಿರುವರು. ಸಾಮಾಜಿಕ ಸಮಸ್ಯೆಗಳು, ಸುಧಾರಣೆಗಳು ಮುಂತಾದವುಗಳ ಬಗ್ಗೆಯೇ ಅತ್ಯಂತ ಹೆಚ್ಚಿನ ಲೇಖನಗಳನ್ನು ಬರೆದಿದ್ದಾರೆ! ಅವರ ಬಹುಪಾಲಿನ ಲೇಖನಗಳ ವಾದ, ತೀರ್ಮಾನಗಳು, ಸೂಚನೆಗಳು ಇಂದಿಗೂ ಸೂಕ್ತವಾಗಿಯೇ ನಿಲ್ಲುತ್ತವೆ ; ಪ್ರಸ್ತುತವಲ್ಲೂ ಅನುಸರಣೀಯವಾಗಿಯೇ ಇವೆ.

ಆಚಾರ್ಯರ ಈ ಪೌರುಷದ ಕರೆ **ಮತ ಸೇವಾ ದಿಕ್ಸೂಚಿ** ಯಲ್ಲಿ ಸ್ಪಷ್ಟವಾಗಿದೆ. ವಿದ್ಯಾರ್ಥಿಗಳನ್ನು, ಯುವಜನರನ್ನು ಅವರು ಮತ ಸೇವೆಯ ದೀಕ್ಷೆಗಾಗಿ ಆಹ್ವಾನಿಸುತ್ತಾ ಅವರಿಂದ ಆಗ ಬೇಕಾದ ಸೇವಾ ನೆಲೆಗಳ ಹಿರಿಯ ಪಟ್ಟಿಯನ್ನೇ ಮುಂದಿರಿಸಿದ್ದಾರೆ.

ಇದೇ ದೃಷ್ಟಿಕೋನವು ಮತ್ತೂ ಅರಳಿ ವ್ಯಕ್ತಿಯು ತನ್ನ ಸ್ವಾರ್ಥ ಪ್ರಲೋಭನಕ್ಕೆ ಒಳಗಾಗಿ ಸಮಾಜವನ್ನು ಒಡೆಯುವುದರಲ್ಲಿ, ದುರ್ಬಲಗೊಳಿಸುವುದರಲ್ಲಿ ತೊಡಗಬಹುದಾದ ಪರಿಸ್ಥಿತಿಗಳನ್ನು ಸೂಚಿಸಿ 'ಬಹು ಜನ ಹಿತಾಯ ಬಹುಜನ ಸುಖಾಯ' ತಾನು ನಡೆಸಬೇಕಾದ ಸೇವೆಯನ್ನು ದಿಗ್ದರ್ಶಿಸುತ್ತಾರೆ. ನಿಸ್ವಾರ್ಥ ವರ್ತನೆಯೇ ತ್ಯಾಗಕ್ಕೆ ಅಡಿಗಲ್ಲು. ಅದರ ಮೇಲೆ ವಿಶ್ವಧರ್ಮ ಗೋಪುರದ ನಿರ್ಮಾಣ. ಇದೇ ಅವರ **ಸ್ವಾರ್ಥ ತ್ಯಾಗವೂ ಮತ ಸೇವೆಯೂ** ಕೃತಿಯಸಾರ.

ಆಚಾರ್ಯರು ಕೇವಲ 'ಆದರ್ಶ'ವಾದಿಗಳಲ್ಲ. ವ್ಯವಹಾರಿಕವಾಗಿ ಎದುರಾಗಬಹುದಾದ ಅನೇಕ ಸಮಸ್ಯೆಗಳನ್ನು ಅವರು ಅರಿಯದೆ ಇಲ್ಲ. ಅವುಗಳ ಪರಿಹಾರ ಕಠಿಣವಲ್ಲ ಎಂಬುದು ಆಚಾರ್ಯರ ವಾದ. ಅವರು ಸಮಸ್ಯೆಗಳ ಮಂಥನ ತಮ್ಮ **ಯುವಕ ಸೇವಕರ ಸಮಸ್ಯೆಗಳು** ಕೃತಿಯಲ್ಲಿ ನಡೆಸಿದ್ದಾರೆ.

೧೯೫೦-೫೧ ರಲ್ಲಿ 'ವಿಶ್ವಕರ್ಮ' ಪತ್ರಿಕೆಯಲ್ಲಿ **ನಮ್ಮ ಸಾಮಾಜಿಕ ಸಮಸ್ಯೆಗಳು** ಎಂಬ ಶಿರೋನಾಮೆಯಲ್ಲಿ ನಾಲ್ಕು ಲೇಖನಗಳನ್ನು ಬರೆದಿದ್ದಾರೆ. (೧) ನಮ್ಮ ಕೆಲಸ ಗೌರವ ಹೀನವೇ ? (೨) ಐಕ್ಯಮತ್ಯ (೩) ನಮ್ಮ ಕುಲಸಭೆಗಳೂ ವಿದ್ಯಾವಂತರೂ (೪) ನಮ್ಮ ಗುರುಮಠಗಳ ಉದ್ಧಾರ. ಈ ಲೇಖನಗಳಲ್ಲಿ ಚರ್ಚಿತ ಸಂಗತಿಗಳು ಇಂದಿಗೂ ಯಾವ ರೀತಿಯಲ್ಲೂ ಬದಲಾವಣೆ ಹೊಂದದಯೇ ಇದ್ದು, ಈ ವಿಚಾರಧಾರೆ ಇಂದೂ ಸ್ವೀಕಾರಾರ್ಹ. ಸಮಾಜದ ಮುನ್ನಡೆಯತ್ತ ಆಸ್ಥೆ ವಹಿಸಿರುವವರು ಇಂದೂ ಅಭ್ಯಸಿಸಬೇಕಾದ ಉತ್ತಮ ಲೇಖನಗಳಾಗಿವೆ.

ಹೀಗೆ ಸಮಾಜದಲ್ಲಿ ನಡೆಯಬೇಕಾದ ಪ್ರಗತಿಯ ಚಿಂತನೆಯೊಂದಿಗೆ ಆರ್ಥಿಕ ಮುನ್ನಡೆಗಾಗಿ, ಗೃಹ ಕೈಗಾರಿಕೆಗಳ ಪುರೋಗಮನಕ್ಕಾಗಿ, ಶಿಲ್ಪಿಗಳು ಪ್ರಸ್ತುತ ಸಮಾಜದಲ್ಲಿ ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದರ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಸಮಾಜವು ಬಹುಕಾಲದಿಂದ ದಿಕ್ಕುಗಾಣದಂತೆ ಯಾವ ಪ್ರಗತಿಯನ್ನೂ ಕಾಣದಿರುವುದರ ಮುಖ್ಯಕಾರಣ ರಾಜಕೀಯವಾಗಿ ಈ ಸಮಾಜ ಆಡಳಿತ ಪಕ್ಷವನ್ನು ಆಕರ್ಷಿಸದೆ ಇರುವುದೇ ಎಂಬುದನ್ನು ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಪ್ರತಿಪಾದಿಸುತ್ತಿದ್ದಾರೆ. ಈಗಲೂ ಈ ಬಗ್ಗೆ ಆಚಾರ್ಯರು ಚರ್ಚಿಸುವಾಗ ಅವರ ಆವೇಶ, ವಾದದ ವೈಖರಿ ಯಾರನ್ನಾದರೂ ತಲೆತೂಗಿಸುತ್ತದೆ. ಅವರು ರಾಜಕೀಯ ಪ್ರಾತಿನಿಧ್ಯವನ್ನು ಪ್ರತಿಪಾದಿಸುತ್ತಾ ಅನೇಕ ಲೇಖನಗಳನ್ನು ಬರೆದಿದ್ದಾರೆ; ಬರೆಯುತ್ತಿದ್ದಾರೆ. ಹಲವು ವೇದಿಕೆಗಳಿಂದ ತಮ್ಮ ವಿಚಾರಧಾರೆಯನ್ನು ಮಂಡಿಸಿದ್ದಾರೆ.

ಸಾಮಾನ್ಯವಾಗಿ ಈ ರೀತಿಯಲ್ಲಿ ಯೋಚಿಸುವ ಮಂದಿ ಮರೆಯುವ ವಿಷಯವೆಂದರೆ ಧರ್ಮ. ಆಚಾರ್ಯರು ವಿಶಿಷ್ಟರೀತಿಯಲ್ಲಿ ಆಳವಾಗಿ ಈ ಬಗ್ಗೆ

ಅಧ್ಯಯನ ಮಾಡಿದ್ದಾರೆ. ಅಷ್ಟು ಮಾತ್ರವೇ ಅಲ್ಲ ಜನರನ್ನು ಒಕ್ಕಟ್ಟಿಗೆ ತರುವ ಏಕಮಾತ್ರ ಸೂತ್ರ ಧರ್ಮ ಎಂಬುದನ್ನೂ ಚೆನ್ನಾಗಿ ತಿಳಿದಿದ್ದಾರೆ. ಧರ್ಮದ ಸೂತ್ರಗಳನ್ನು ಸಾಮಾನ್ಯರೂ ಅರಿತರೆ ಇದರಿಂದ ಸಮಾಜಕ್ಕೆ, ರಾಷ್ಟ್ರಕ್ಕೆ ಅಪಾರವಾದ ಲಾಭವಾಗುತ್ತದೆ ಎಂಬ ರಹಸ್ಯ ಕಂಡುಕೊಂಡಿದ್ದಾರೆ. ವ್ಯಕ್ತಿಯು ಐಹಿಕ, ಪಾರಮಾರ್ಥಿಕ ಸಾಧನೆಗೆ ಇದು ಏಕೈಕ ಮಾರ್ಗ ಎಂಬುದನ್ನು ತೀರ್ಮಾನಿಸಿಕೊಂಡಿದ್ದಾರೆ.

ಆದಕ್ಕೆಂದೇ ಅವರು ವೈಶ್ವಕರ್ಮ್ಯ ಧಾರ್ಮಿಕ ಸಾಹಿತ್ಯದಲ್ಲಿ ಬಹಳಷ್ಟು ಕೃಷಿ ಮಾಡಿದ್ದಾರೆ. ಆ ಸಂಗತಿಗಳ ಬಗ್ಗೆ ದೀರ್ಘಕಾಲದಿಂದ ಚಿಂತನೆ ನಡೆಸಿದ್ದಾರೆ. ಅನೇಕ ಸಂಗತಿಗಳನ್ನು ಅರಿತುಕೊಂಡು ತಮ್ಮ ಜತೆಯವರಿಗೆ, ಶಿಷ್ಯರಿಗೆ, ತಮ್ಮ ಭಾಷಣಗಳನ್ನು ಆಲಿಸುವವರಿಗೆ ತಾವು ಅರಿತ ವಿಷಯಗಳನ್ನು ವಿವರವಾಗಿ ತಿಳಿಸಿ ಹೇಳಿರುವುದೇ ಅಲ್ಲದೇ ತಮ್ಮ ಅನೇಕ ಲೇಖನಗಳಲ್ಲೂ ಅದನ್ನು ವಿಶದವಾಗಿ ವ್ಯಕ್ತಪಡಿಸಿದ್ದಾರೆ.

ವಿದ್ವಾಂಸರು ಮಾತ್ರವೇ ಅರಿತಿದ್ದ 'ವಿಶ್ವಕರ್ಮ ಸೂಕ್ತ'ವನ್ನು ಸಾಮಾನ್ಯರಲ್ಲೂ ಪ್ರಚಾರಕ್ಕೆ ತಂದವರಲ್ಲಿ ಆಚಾರ್ಯರು ಮೊದಲಿಗರು. ಮ. ಗಂಗಾಧರ ಮೂರ್ತಿಗಳು ಇವರೊಂದಿಗೆ ಈ ಪ್ರಚಾರದಲ್ಲಿ ಸೇರಿದ್ದರು. ಇದು ಇವರ ಮೊದಲ ಅದ್ಭುತ ಸಾಧನೆ. ಬ್ರಾಹ್ಮೀಮುಹೂರ್ತದ ಪೂರ್ವ ನಾಮ ತ್ವಾಷ್ಟ್ರೀ ಮುಹೂರ್ತವಾಗಿತ್ತು ಎಂಬುದನ್ನು ಅನ್ವೇಷಿಸಿ ತಮ್ಮ ಲೇಖನದಲ್ಲಿ (ವಿಶ್ವಕರ್ಮ ಪ್ರಕಾಶ - ಜೂನ್ ೭೧) ವ್ಯಕ್ತಪಡಿಸಿದ್ದಾರೆ. ಆಚಾರ್ಯರ ವೈದಿಕ ವಿದ್ವತ್ತು **ವೇದ ಪುರುಷನ ಆತ್ಮಯಜ್ಞ** (ವಿಶ್ವಕರ್ಮ, ಡಿಸೆಂಬರ್ ೭೧) **ವೈಶ್ವಕರ್ಮ್ಯ ಧರ್ಮದ ಗುರಿ** (ವಿಶ್ವಕರ್ಮ, ಏಪ್ರಿಲ್ ೫೩), **ಈಶಾವಾಸ್ಯವು ವಿಶ್ವಕರ್ಮೋಪನಿಷತ್ತು** (ವಿಶ್ವಕರ್ಮ, ಆಗಸ್ಟ್ ೭೪) ಹೀಗೆ ಹಲವಾರು ಲೇಖನಗಳಲ್ಲಿ ವ್ಯಕ್ತವಾಗಿದೆ.

ವೈಶ್ವಕರ್ಮ್ಯ ಧರ್ಮ-ತತ್ತ್ವಗಳನ್ನು ಕರ್ನಾಟಕದ ಜನರಲ್ಲಿ ಪ್ರಚುರಪಡಿಸಿದವರಲ್ಲಿ ಗಂಗಾಧರಮೂರ್ತಿಗಳು, ಆಚಾರ್ಯರು ಪ್ರಮುಖರು. ಈ ವಿಷಯದಲ್ಲಿ ಅನೇಕ ಭಾಷಣಗಳನ್ನು ಮಾಡಿರುವರು. ಆಚಾರ್ಯರ ಎರಡು ಭಾಷಣಗಳು **ವಿಶ್ವ ಬ್ರಾಹ್ಮಣ ಧರ್ಮ** ಎಂಬ ಹೆಸರಿನಲ್ಲಿ ಪ್ರಕಟವಾಗಿವೆ.

ವಿಶ್ವಬ್ರಾಹ್ಮಣ ಧರ್ಮ, ಸಂಪ್ರದಾಯಗಳನ್ನು ವಿವರಿಸುವ ಪ್ರಾಚೀನ ಕೃತಿಗಳು ಹಲವು ಇವೆಯಾದರೂ ಅವು ಸಂಸ್ಕೃತ ಭಾಷೆಯಲ್ಲಿರುವುದರಿಂದ ಸಾಮಾನ್ಯರಿಂದ ದೂರವಾಗಿಯೇ ಇವೆ ಎಂದು ಹೇಳದೆ ವಿಧಿಯಿಲ್ಲ. ಕನ್ನಡ ಭಾಷೆಯಲ್ಲಿಯ ಇದುವರೆವಿಗಿನ ಪ್ರಕಟಣೆಗಳಲ್ಲಿ ವಿಶ್ವಬ್ರಾಹ್ಮಣ ಧರ್ಮದ ತತ್ತ್ವ ಆಚಾರಗಳ ದರ್ಶನ ಆಚಾರ್ಯರ **ವಿಶ್ವಬ್ರಾಹ್ಮಣ ಧರ್ಮ** ಕೃತಿಯಲ್ಲಿ ನಡೆದಿರುವಂತೆ ಅನ್ಯತ್ರ ನಡೆದಿಲ್ಲ. ವ್ಯಾಪಕವಾದ ವಿಶ್ವಬ್ರಾಹ್ಮಣ ಧರ್ಮವನ್ನು **'ಆತ್ಮಯಜ್ಞ - ಅನುಪ್ರವೇಶ - ಅನುಸಂಧಾನ'** ಎಂಬ ಮೂರು ಸುಡಿಗಟ್ಟಿನಲ್ಲಿ ಶ್ರೀ 'ನಾಭಾ' ಅವರು ಸಂಗ್ರಹಿಸಿದ್ದಾರೆ. ಅನುಸಂಧಾನವನ್ನು 'ಶಿಲ್ಪಕರ್ಮ' ಪ್ರಕರಣದಲ್ಲಿ ವಿವರಿಸುತ್ತಾ ತತ್ತ್ವಕ್ಕೆ ಅನುಸಾರವಾದ ನಡೆಯೇ ಇದೆಂಬುದನ್ನು, ಈ ಧರ್ಮದಲ್ಲಿ ಅದು ಹರಡಿರುವ ಕ್ರಮವನ್ನು ವರ್ಣಿಸಿದ್ದಾರೆ. ಮನುಷ್ಯರನ್ನು ಭಾಗಿಸುತ್ತಾ ತುಣುಕುಗಳನ್ನಾಗಿಸುವ ಅಹಂಕಾರ-ಸ್ವಾರ್ಥಗಳ ತೆರೆಯನ್ನು ಹರಿದು ಲೋಕಕ್ಕೆ ತನ್ನನ್ನು ಹಂಚಿಕೊಳ್ಳುವ ನಡವಳಿಕಗಳೇ, ವಿಶ್ವಕರ್ಮನು ಲೋಕಾನುಗ್ರಹಾಕಾಂಕ್ಷೆಯಿಂದ ಚರಾಚರ ಜಗತ್ತನ್ನು ತಾನೇ ಸೃಷ್ಟಿಸಿ ಅವುಗಳನ್ನು ಒಳಹೊಕ್ಕು ವ್ಯಾಪಿಸಿರುವುದೇ ಅನುಪ್ರವೇಶ ತತ್ತ್ವದ ಅನುಸಂಧಾನವಾಗಿರುತ್ತದೆ. ಈ ತದಾತ್ಮ್ಯ ಭಾವನೆ, ಯಿಂದಲೇ ಲೋಕ ಕ್ಷೇಮಕ್ಕಾಗಿ ತನ್ನ ಶರೀರವನ್ನು ಸವೆಸುವುದೇ ವಿಶ್ವಕರ್ಮನು ಕೊನೆಯಲ್ಲಿ ತನ್ನನ್ನೂ ಯಜ್ಞ ಮಾಡಿಕೊಂಡ ಆತ್ಮಯಜ್ಞದ ಪ್ರತ್ಯಾಚರಣೆಯಾಗಿದೆ. ವೇದರ್ಷಿಗಳು ಲೋಕಕ್ಕೆ ಈ ತತ್ತ್ವದರ್ಶನ ಮಾಡಿಸಲು ಹೀಗೆ ಪ್ರಯತ್ನಿಸಿ ಶ್ರಮಿಸಿದ್ದಾರೆ ಎಂಬುದರ ಕಿರುಪರಿಚಯ ಈ ಲೇಖನಗಳಿಂದ ಸಾಧ್ಯವಾದೀತು.

ಉದಾತ್ತ ಧ್ಯೇಯಗಳತ್ತ ಬಾಲ್ಯಾವಸ್ಥೆಯಿಂದಲೇ ಗಮನಹರಿಸಿ, ಅವುಗಳನ್ನು ನಡೆಯಲ್ಲಿ ಅಳವಡಿಸಿಕೊಂಡು, ಲೋಕದಲ್ಲಿ ನಿರುಪದ್ರವಿಗಳೆನಿಸಿ ಸರ್ವರ ನೆರವಿಗೆ ನಿಂತು, ಸಜ್ಜನರೆನಿಸಿ, ನಾವು ಶ್ರೇಷ್ಠರು ನಮ್ಮದು ಸದ್ವಂಶವೆಂಬ ದುರಭಿಮಾನವನ್ನು ದೂರೀಕರಿಸಿ, ಬಾಳಿನಲ್ಲಿ ಅಳವಡಿಸಿಕೊಂಡ ಆಚಾರಧರ್ಮ ವ್ಯವಹಾರದಲ್ಲಿ ಪ್ರತಿಬಿಂಬಿಸಿ ಸರ್ವ ಮಂಗಳಕಾರರಾದರೆ ಲೋಕಕಲ್ಯಾಣವೇ ಸಾಧಿತವಾಗುತ್ತದೆ. ಯಾವ ಧರ್ಮದವರೇ ಆಗಲಿ ಉನ್ನತಿಯನ್ನು ಸಾಧಿಸಬೇಕಾಗಿದ್ದರೆ ತಮ್ಮ ಧರ್ಮದ ಮೂಲತತ್ತ್ವಗಳನ್ನಾ

ವರೂ –ಸಚ್ಚಾರಿತ್ರ್ಯ, ಸ್ವಾರ್ಥರಹಿತ ಕರ್ಮ ಇತ್ಯಾದಿ ಜೀವನದಲ್ಲಿ ರೂಢಿಸಿ ಕೊಳ್ಳಬೇಕಾದುದು ಅನಿವಾರ್ಯ.

ಈ ಬೋಧನೆಗಳು ವಿಶ್ವಬ್ರಾಹ್ಮಣಧರ್ಮದಲ್ಲಿ ಹೇಗೆ ಅಡಗಿವೆ ಎಂಬುದು ಈ ಕೃತಿಯಲ್ಲಿ ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿ ರುವಂತೆ ಪ್ರಕಟಣೆಗೊಂಡಿರುವ ಯಾವ ಪ್ರಕಟಣೆಗಳೂ ಈ ಕೃತಿಯ ಮಟ್ಟ ವನ್ನು ಮುಟ್ಟಲಾರದಾಗಿವೆ. ಇದರಿಂದ ಈ ಪ್ರಕಟಣೆಯ ಮಹತ್ವವು ನಿರೂಪಿ ತವಾಗುತ್ತದೆ.

ವಿಶ್ವಕರ್ಮ ಯಾರು ? ಒಂದು ವೈಶಿಷ್ಟ್ಯಪೂರ್ಣ ಕೃತಿ. ವಿಷಯ ಬಾಹುಳ್ಯದಲ್ಲಿ ಮೌಲಿಕ ವಿಚಾರ ಸರಣಿಯಲ್ಲಿ ತುಂಬಾ ಅಪೂರ್ವವಾದ ಕೃತಿ. ಸಕಲ ದೇವರನ್ನೂ ನಿರ್ಮಿಸಿ ನಾಮಕರಣ ಮಾಡಿದ ಈತನ ಸ್ವರೂಪವನ್ನು ಅರಿಯಲು ಎಲ್ಲರೂ ಪ್ರಶ್ನಿಸುವವರೇ ವಿನಾ ಆತನನ್ನು 'ಅರಿತಿರುವೆ' ಎಂದು ಹೇಳಿರುವವರಿಲ್ಲವಂತಹ **ಸಂಪ್ರಶ್ನ**ವನ್ನು ವಿವರಿಸುವ ಪ್ರಯತ್ನವೇ ಈ ಕೃತಿ. ಈ ರೀತಿಯ ತೀಕ್ಷ್ಣ ತಳಿಯ ನೋವಿನ ಪ್ರಶ್ನೆ ಏಕೆ ಎಂದರೆ 'ಪಿತೃದತ್ತ ಸಂಸ್ಕೃತಿ ಇರುವವನನ್ನು ಕಂಡು ಎಷ್ಟಾದರೂ ಸಿಂಹದ ಮರಿ ಎನ್ನುತ್ತಾರೆ. ಇಲ್ಲದವನನ್ನು ಪರವಾ ಇಲ್ಲ ಆ ಜಾತಿಯಲ್ಲಿ ಹುಟ್ಟಿದರೂ ಎನ್ನುತ್ತಾರೆ.' ಎಂದು ಹೇಳಿ 'ತಂದೆ-ತಾಯಿಗಳ ಹೆಸರೇ ತಿಳಿಯದ ಬೀದಿಯ ಮಗುವಿನಂತೆ ನಮ್ಮ ಸ್ಥಿತಿಯಾಗಬಾರದು' ಎಂದು ಎಚ್ಚರಿಸಿ, ವೈಶ್ವಕರ್ಮಣ ಮತ ಸಾಹಿ ತ್ಯವು ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ ಹೊಂದಿಕೊಂಡಿರುವುದು, ಇದನ್ನು ಅರಿತರೆ ವೇದೋಪನಿಷದ್ಬ್ರಾಹ್ಮಣಾದಿಗಳ ಪಾರಾಯಣದ ಫಲಕ್ಕಿಂತಲೂ ಮಿಗಿಲಾದ ಫಲವೇ ದೊರೆಯುತ್ತದೆ. ಆದ್ದರಿಂದ ಈ ಪ್ರಶ್ನೆಗೆ ಉತ್ತರ ಕಂಡು ಕೊಳ್ಳುವುದು ಆವಶ್ಯಕ ಎಂದು ಮನದಟ್ಟು ಮಾಡುತ್ತಾರೆ ಆಚಾರ್ಯರು.

ಪ್ರಾರಂಭದಲ್ಲಿ ಸಾಮಾನ್ಯನ ದೃಷ್ಟಿಯಿಂದ ವಿವೇಚಿಸಿ, ಕೇವಲ ಲೌಕಿಕ ವಾಗಿ ಸಾಮಾನ್ಯರು ಹೇಳುವ ಉತ್ತರಗಳನ್ನು ವಿಶ್ಲೇಷಿಸುತ್ತಾ ವಿಶ್ವಕರ್ಮನ ವೈದಿಕ ವಿಶ್ಲೇಷಣೆ ೧೪ನೇ ಪುಟದಲ್ಲಿ ಪ್ರಾರಂಭಿಸುತ್ತಾರೆ. ಅನೇಕ ವೈದಿಕ ವಿದ್ವಾಂಸರು ವಿಶ್ವಕರ್ಮ, ಪ್ರಜಾಪತಿ, ಹಿರಣ್ಯಗರ್ಭ ಮುಂತಾದ ಹೆಸರುಗಳೆಲ್ಲಾ ಪರ್ಯಾಯಪಾದವು, ಎಲ್ಲವೂ ಸಮಾನ ಸ್ತರದ ತತ್ತ್ವಗಳು ಎಂದು ಹೇಳುತ್ತಾ

ಬಂದಿದ್ದಾರೆ. ಆಚಾರ್ಯರು ನಿಖರವಾಗಿ ಹೇಳುತ್ತಾರೆ: 'ಈ ತಾದಾತ್ಮ್ಯವನ್ನು ಅಥವ ಸಮಾನತ್ವವನ್ನು ಪ್ರತಿಪಾದಿಸುವುದು ತಪ್ಪು. ವಿಶ್ವಕರ್ಮನು ಸದಾ ಎಲ್ಲಾ ದೇವತೆಗಳಿಗಿಂತಲೂ ಉನ್ನತ ಸ್ತರದಲ್ಲಿದ್ದು ಅವರ ನಿಯಂತ್ರಕನಾಗಿದ್ದಾನೆ.' ಇದು ಕೇವಲ ಹೆಗ್ಗಳಿಕೆಯಲ್ಲ. ಅನೇಕ ದೃಷ್ಟಾಂತಗಳಿಂದ ಅದನ್ನು ಸಾಧಿಸಿದ್ದಾರೆ. ಈ ಭಾಗವು ತುಂಬಾ ಗಂಭೀರವಾದುದು. ಪ್ರಜಾಪತಿ, ಬ್ರಹ್ಮ, ಹಿರಣ್ಯಗರ್ಭರನ್ನು ವಿಶ್ವಕರ್ಮನೊಂದಿಗೆ ತೂಗಿ ಅವನ ಶ್ರೇಷ್ಠತೆಯನ್ನು ತೋರುತ್ತಾರೆ. ಈ ತೌಲನಿಕ ವಿವೇಚನೆ ಅನ್ಯತ್ರ ಅಲಭ್ಯವಾಗಿದ್ದು ಆಚಾರ್ಯರು ತಮ್ಮ ದೀರ್ಘ ತಪಸ್ಸಿನಿಂದ ಕಂಡುಕೊಂಡ ಸತ್ಯಸಂಗತಿಯಾಗಿದೆ.

ವಿಶ್ವಕರ್ಮನು ಕರ್ಮಸಿದ್ಧಾಂತದ ಉಗಮತೀರ್ಥ. ಸ್ವಾರ್ಥವಾಗಬಹುದಾದುದನ್ನು ಪರಹಿತವನ್ನಾಗಿಸಿ, ಅದಕ್ಕೆ ಬಹುಮೂಲ್ಯವನ್ನು ತಂದುಕೊಟ್ಟು, ಅದರಿಂದ ವಿಶ್ವಧರ್ಮವನ್ನು ಸಾರಲು ಅನುವಾಗಿಸಿರುವ ಸೂತ್ರ. ಇದರಿಂದಲೇ ವಿಶ್ವಕರ್ಮನು ಸಾರ್ಥಕರ್ಮನಾದದ್ದು. ತನ್ಮೂಲಕ ಅವನ ಮಹಾತ್ಮ್ಯವನ್ನು ವಿದ್ವತ್‌ಪೂರ್ಣವಾಗಿ ವಿವೇಚಿಸಿದ್ದಾರೆ. ವಿಶ್ವಕರ್ಮ ಸೂಕ್ತದ ಪದಪದವೂ ಇಲ್ಲಿ ವಿಶ್ಲೇಷಿತಗೊಂಡಿರುವುದು ಒಂದು ವೈಶಿಷ್ಟ್ಯ.

ಈ ರೀತಿ ವಿದ್ವತ್ಪೂರ್ಣವಾದ ಪರತತ್ತ್ವ ಚಿಂತನೆಯು ವ್ಯಕ್ತಿಗಳ ಅವತಾರದತ್ತ ತಿರುಗಿ ಭೌವನ ವಿಶ್ವಕರ್ಮನಿಂದ ಪ್ರಾರಂಭಗೊಂಡು ನಂತರದ ವಿಶ್ವಕರ್ಮರನ್ನು ಹೇಳುತ್ತದೆ. ಪರಾತ್ಪರನಾದ ವಿಶ್ವಕರ್ಮನ ಅವತಾರಗಳೆಂದು ಹೆಸರಾಗಿ ಪರಂಪರೆಗಳ ಪ್ರವರ್ತಕರಾದ ಪ್ರಭಾಸ, ಭೌವನಾದಿಗಳ ವಿವರಣೆ, ನಂತರ ಹಲವು ಪುರಾಣಗಳಲ್ಲಿ ದೊರೆಯುವ ವಿಶ್ವಕರ್ಮ ಮಹಾತ್ಮ್ಯೆಯೊಂದಿಗೆ ಈ ಹೊತ್ತಗೆ ಮುಗಿಯುತ್ತದೆ.

ಅತ್ಯಂತ ಪ್ರಾಚೀನವಾದ ಈ ಪ್ರಶ್ನೆಗೆ ಆಚಾರ್ಯರು ಸಮಗ್ರವೆನಿಸಬಹುದಾದ ಉತ್ತರವನ್ನು ವಿದ್ವತ್ಪೂರ್ಣ ರೀತಿಯಲ್ಲಿ ಮಂಡಿಸಿದ್ದಾರೆ. ವಿಶ್ವಕರ್ಮ ಜಗತ್ಕಾರಣ ವಸ್ತು ಮಾತ್ರವಲ್ಲ ಅದರ ನಿಯೋಜಕ, ನಿಯಂತ್ರಕನೇ ಅವನು. ಆತನ ಅಂಶಾವತಾರಗಳ, ಪೂರ್ಣಾವತಾರಗಳ ಪರಂಪರೆಯನ್ನು ಹೇಳಿ, ಆ ಜಗತ್ಪ್ರಭುವಿನ ಆರಾಧನೆಯಿಂದ ಮುಕ್ತಿಗಳಿಸಿದವರ ವಿವರಗಳನ್ನೂ ನೀಡಿದ್ದಾರೆ. **ಭಕ್ತಿಯಿಂದ ವಿಶ್ವಕರ್ಮನನ್ನು ಯಾರು ಪೂಜಿಸುತ್ತಾರೋ ಅವರ**

ವಂಶವು ಎಲ್ಲರಿಂದ ಪೂಜಾರ್ಹವಾಗುತ್ತದೆ. ಆದ್ದರಿಂದ ಈಗ ನಮಗೆ ಆವಶ್ಯಕವಾಗಿರುವುದು ವಿಶ್ವಕರ್ಮಭಕ್ತಿಯೊಂದೇ ಎಂದು ಹೇಳಿ ಎಲ್ಲರ ಗಮನವನ್ನೂ ಅತ್ತ ಸೆಳೆದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಇದುವರೆವಿಗೂ ವಿಶ್ವಕರ್ಮನ ಬಗ್ಗೆ ಪ್ರಕಟವಾಗಿರುವ ಕೃತಿಗಳಲ್ಲಿ ಇದು ಅತ್ಯಂತ ಸಮಗ್ರವೂ, ಶ್ರೇಷ್ಠವೂ ಆಗಿದ್ದು ವಿಶ್ವಕರ್ಮನ ಬಗ್ಗೆ ತಿಳಿಯಬೇಕೆಂದು ಬಯಸುವವರಿಗೆಲ್ಲಾ ತಿಳಿವು ನೀಡಬಲ್ಲ ಏಕೈಕ ಗ್ರಂಥವಾಗಿದೆ.

ಆಚಾರ್ಯರ ಸಾಹಿತ್ಯ ಸಾಧನೆ 'ಇದಮಿತ್ಥಂ' ಎಂದು ನಿರ್ಣಯಿಸಿ, ಸಣ್ಣ ಲೇಖನದಲ್ಲಿ ಅದನ್ನು ನಿರೂಪಿಸುವುದು ಸಾಧ್ಯವಿಲ್ಲ. ಅವರ ಲೇಖನ, ಪ್ರಕಟಣೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಕೊಡಲಾಗಿದೆ. ಆಚಾರ್ಯರ ಸಾಹಿತ್ಯ ಸೃಷ್ಟಿ, ಅಷ್ಟಕ್ಕೆ' ಸೀಮಿತವಾಗಿದೆ ಎಂದೂ ಹೇಳುವಂತಿಲ್ಲ. ಅನೇಕ ಲೇಖನಗಳನ್ನು ಅವರು ಬೇರೆ ಬೇರೆ ಹೆಸರುಗಳಲ್ಲೂ ಬರೆದು ಪ್ರಕಟಿಸಿರುವುದುಂಟು. 'ವಿಶ್ವಕರ್ಮ' ಪತ್ರಿಕೆಯ ಸಂಪಾದಕರಾಗಿದ್ದ ಗಂಗಾಧರಮೂರ್ತಿಗಳಿಗೆ ತುಂಬಾ ಸನ್ನಿಹಿತ ಮಿತ್ರರಾಗಿದ್ದು ಅವರ ಕಾರ್ಯಗಳಲ್ಲಿ ನೆರವಾಗಿದ್ದ ಆಚಾರ್ಯರು ಅನೇಕ ಬಾರಿ ಸಂಪಾದಕೀಯ ಅಗ್ರಲೇಖನಗಳನ್ನೂ ಬರೆದಿರುವುದುಂಟು. ಅವನ್ನೆಲ್ಲಾ ಇಷ್ಟೇ, ಇಂತಹವೇ ಎಂದು ಈಗ ಆಚಾರ್ಯರ ನೆರವಿಲ್ಲದೆ ನಿರ್ಣಯಿಸುವುದೂ ಅಸಾಧ್ಯ.

ಈ ರೀತಿಯಲ್ಲಿ ವೈವಿಧ್ಯಮಯವಾಗಿ ಹಲವು ಮುಖಗಳಲ್ಲಿ ವೈಶ್ವಕರ್ಮಣ ಸಾಹಿತ್ಯ ಸೃಷ್ಟಿಮಾಡಿರುವವರು ಕರ್ನಾಟಕದ ಮಟ್ಟಿಗೆ ಆಚಾರ್ಯರೊಬ್ಬರೇ. ಅವರ ವಿಚಾರಲಹರಿ ಇಂದಿಗೂ ಸಮಾಜಕ್ಕೆ ಬೆಳಕಾಗಿ ನಿಲ್ಲಬಲ್ಲಂತಹುದು. ಅವರ ಸಮಗ್ರ ಲೇಖನಗಳು ಸಂಗ್ರಹಗೊಂಡು ಸಂಪುಟಗಳಾಗಿ ಪ್ರಕಟವಾಗಬೇಕಾದ ಆವಶ್ಯಕತೆ ಬಹುವಾಗಿದೆ.

★



ಸಂಕಲನ :

✻ನಾ.ಶ್ರೀ. ಕಸ್ತೂರಿ. ಬಿ.ಎಸ್ಸಿ.,

ಆಚಾರ್ಯ ಕೃತ ಸಾಹಿತ್ಯ

ಪುಸ್ತಕಗಳು

೧. ಮೈಸೂರು ವಿಶ್ವಕರ್ಮ ಸಮಾಜದ ಸಂಕ್ಷಿಪ್ತ ಇತಿಹಾಸ
೨. ವಿಶ್ವಕರ್ಮ ಮತಸೇವಾ ದಿಕ್ಸೂಚೀ
೩. ಸ್ವಾರ್ಥ ತ್ಯಾಗವೂ ಮತ ಸೇವೆಯೂ
೪. ಯುವಕ ಸೇವಕರ ಸಮಸ್ಯೆಗಳು
೫. ಕಳಾರಾಧನೆ (ಡಾ. ಕೊಂಡೂರು ವೀರರಾಘವಾಚಾರ್ಯರ ತೆಲುಗು ಕಾದಂಬರಿಯ ಅನುವಾದ – ಪ್ರಕಟಣೆ: ವಿಶ್ವಕರ್ಮ ಸಾಹಿತ್ಯ ಅಕ್ಯಾಡೆಮಿ)
೬. ಶ್ರೀಮದ್ವಿಶ್ವಕರ್ಮ ಸುಪ್ರಭಾತಂ (ಕನ್ನಡ ತಾತ್ಪರ್ಯ ಸಹಿತ) (ಪ್ರಕಟಣೆ : ರಾವಿಸಸಭಾ, ಮಂಗಳೂರು– ಎರಡು ಮುದ್ರಣಗಳಾಗಿದೆ)
೭. ಸಂಕ್ಷಿಪ್ತ ಸಂಧ್ಯಾ–ದೇವತಾರ್ಚನಾದಿಗಳು (ಜ್ಞಾನಭಂಡಾರ, ಕೆಜಿಎಫ್)
೮. ವಿಶ್ವಬ್ರಾಹ್ಮಣ ಧರ್ಮ (ಜ್ಞಾನಭಂಡಾರ, ಕೆಜಿಎಫ್)
೯. ವಿಶ್ವಕರ್ಮ ಯಾರು? (ಗ್ರಂಥ ಗಂಗೋತ್ರಿ ಪ್ರಕಾಶನ, ಕೆ.ಆರ್. ಪೇಟೆ)

ಲೇಖನಗಳು

ಗಮನಿಕೆ : ಇಂಗ್ಲೀಷ್ ತಿಂಗಳ ಮೊದಲ ಅಕ್ಷರ ಮಾತ್ರ ಕೊಡಲಾಗಿದೆ. ವಿಶ್ವಕರ್ಮ ೧೯೪೮ ರಲ್ಲಿ ಪ್ರಾರಂಭವಾಗಿ ೧೯೫೨ರ ತನಕ ಮೈಸೂರಿನಿಂದ ಶ್ರೀ ಮ. ಗಂಗಾಧರಮೂರ್ತಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಅವರ ನಂತರ ಈಗ ಮಂಗಳೂರಿನಿಂದ ಶ್ರೀ ಬಿ. ಹರಿಶ್ಚಂದ್ರಾಚಾರ್ಯರ ಸಂಪಾದಕತ್ವದಲ್ಲಿ ಪ್ರಕಟಿತವಾಗುತ್ತಿದೆ.

ಸಂಕೇತಗಳು : ವಿ = ವಿಶ್ವಕರ್ಮ, ವಿ ಪ್ರ = ವಿಶ್ವಕರ್ಮ ಪ್ರಕಾಶ, ತುಮಕೂರು.

ವೈದಿಕ

೧. ಯಜ್ಞ ಸಂದೇಶ (ವಿ – ಫೆ. ೪೯)
೨. ವೇದಾಧ್ಯಯನ (ವಿ – ಏ. ೫೦)
೩. ಉಪಾಕರ್ಮ (ವಿ – ಆ. ೫೦)
೪. ನಮ್ಮ ಮಂತ್ರಪಾಠಕರು ಗಮನಿಸಬೇಕು (ವಿ – ಫೆ. ೭೦)
೫. ಶಾಸ್ತ್ರೋಕ್ತ ಜೀವನ (ವಿರಾಟ್ ವಿಶ್ವಕರ್ಮ, ಬೆಳಗಾವಿ – ಆ. ೭೦)
೬. ನಮ್ಮ ಶಾಸ್ತ್ರ ಸಂಪತ್ತು (ಅದೇ ಡಿ ೭೦ ಮತ್ತು ಜ. ೭೧)
೭. ವಾಚಸ್ಪತಿ – ವಿದ್ಯಾಪತಿ (ವಿ ಪ್ರ – ಏ ೭೧)
೮. ವಿಶ್ವಕರ್ಮನಾರು ? (ವಿ ಪ್ರ – ಅ. ೭೧)
೯. ವೇದಪುರುಷನ ಆತ್ಮಯಜ್ಞ (ವಿ – ಡಿ. ೭೧ ಮತ್ತು ಜ. ೭೨ ವಿ. ಪ್ರ. – ಜ. ೭೨)
೧೦. ವಿಶ್ವಕರ್ಮ ಮಹಿಮಾ (ವಿ – ಮಾ, ಏ. ೭೨)
೧೧. ವಿಶ್ವಕರ್ಮ ಮತೀಯರೂ ಕಾಳೀ ಆರಾಧನೆ (ವಿ – ಮಾ ೭೨)
೧೨. ಯಜ್ಞದ ಮಹತ್ತ್ವ (ಶಿಲ್ಪಿ – ರಾ.ವಿ.ಸ. ಸಭಾ ೧೯೭೨)
೧೩. ಮೂಲಸ್ಥಂಭದಿಂದ ವಿಶ್ವಕರ್ಮನ ಸ್ವರೂಪ (ವಿ – ನ. ೭೫)
೧೪. ಮೋಕ್ಷಕ್ಕಾಗಿ ಕರ್ಮಯೋಗದ ಕಾಣಿಕೆ (ವಿ – ಏ. ೭೬)
೧೫. ವಿಶ್ವಕರ್ಮಮಹಿಮಾ (ವಿ – ಆ. ೭೭)
೧೬. ಈಶಾವಾಸ್ಯವು ವಿಶ್ವಕರ್ಮೋಪನಿಷತ್ತು (ವಿ – ಆ. ೭೯)

೧೭. ವೇದೋಕ್ತ ವಿಶ್ವಕರ್ಮ ಸೂಕ್ತವು ಏನು ಹೇಳುತ್ತದೆ? (ವಿಶ್ವಜಾಗೃತಿ ೭೮)

ಸಾಮಾಜಿಕ

೧೮. ಅಲ್ಪಸಂಖ್ಯಾತರ ಪ್ರಶ್ನೆಯು ಮತ ಪ್ರಶ್ನೆಯಲ್ಲ – ಪ್ರಾತಿನಿಧ್ಯದ ಪ್ರಶ್ನೆ (ವಿ-ಜು. ೪೯)

೧೯. ಗ್ರಾಮಾಂತರ ವಿಶ್ವಕರ್ಮ ಮತೀಯರೂ ಅವರ ವಿದ್ಯಾಭ್ಯಾಸವೂ (ಅದೇ)

೨೦. ನಮ್ಮ ಸ್ವಾತಂತ್ರ್ಯ (ವಿ-ಅ ೪೯)

೨೧. ವಿಶ್ವಬ್ರಾಹ್ಮಣ ಯುವಕ ಸೇವಕರ ಸಮಸ್ಯೆಗಳು (ವಿ–ಡಿ ೪೯)

೨೨. ನಮ್ಮ ಸಾಮಾಜಿಕ ಸಮಸ್ಯೆಗಳು

ಅ. ನಮ್ಮ ಕೆಲಸ ಗೌರವ ಹೀನವೇ ? (ವಿ-ಜ ೫೦)

ಆ. ಐಕ್ಯಮತ್ಯ (ವಿ–ಜ ೫೦)

ಇ. ನಮ್ಮ ಕುಲಸಭೆಗಳೂ ವಿದ್ಯಾವಂತರು (ವಿ–ನ ೫೦)

ಈ. ನಮ್ಮ ಗುರುಮಠಗಳ ಉದ್ಧಾರ (ವಿ–ಏ ೫೧)

೨೩. ಚಿನ್ನದ ಕೆಲಸ ಮಾಡುವ ಮತಬಾಂಧವರ ತಿಳುವಳಿಕೆಗಾಗಿ (ವಿ ಮತ್ತು ವಿ ಪ್ರ. ಅ ೬೯)

೨೪. ಜಾತಿ ನಿರ್ಮೂಲನದ ಕೂಗು ರಚನಾತ್ಮಕ ಕಾರ್ಯಕ್ಕೆ ಕುಠಾರವೇ? (ವಿ-ಮಾ ೬೧)

೨೫. ಬೆಂಗಳೂರಿನಲ್ಲಿ ಆಗಲೇಬೇಕಾಗಿರುವ ಕೆಲಸಗಳು (ವಿಪ್ರ – ಸೆ. ೭೦)

೨೬. ಮಂಗಳೂರು ಸಮ್ಮೇಳನ ಹೇಗೆ ನಡೆಯಬೇಕು (ವಿ – ಏ. ೭೭)

೨೭. ಹಿಂದುಳಿದ ಜಾತಿಗಳ ಅಭಿವೃದ್ಧಿ ಹೇಗಾಗಬೇಕು (ಉಪಾಧ್ಯಾಯವಾಣಿ– ಸೆ. ೭೨)

೨೮. ಹಿಂದುಳಿದವರ ಹಿತಸಾಧನೆ (ವಿ – ಸೆ. ೭೨)

೨೯. ನಮ್ಮ ಗ್ರಾಮೀಣ ಮತ್ತು ಮರಗೆಲಸದವರ ಇಂದಿನ ಸ್ಥಿತಿ (ವಿ-ಅ.೭೨)

೩೦. ವಿಶ್ವಕರ್ಮ ಜನಾಂಗದ ಅಭಿವೃದ್ಧಿಗೆ ಒಂದು ಸಲಹೆ (ವಿ - ಅಕ್ಟೋ. ೭೩)

೩೧. ನಮ್ಮ ಸಮಾಜಾಭಿವೃದ್ಧಿಗೆ ಸಾಧನೆ —ಬೆಂಗಳೂರು ಸಮ್ಮೇಳನಕ್ಕೆ ಒಂದು ಸಲಹೆ (ವಿ – ಅಕ್ಟೋ. ೭೩)

೩೨. ವೈವಿಧ್ಯವಿರುವಾಗಲೇ ಐಕ್ಯಮತ್ಯ ಸಾಧಿಸಬೇಕು ಅದು ಪುರುಷ ಲಕ್ಷಣ (ವಿ-ಜ. ೭೪)

೩೩. ನಮ್ಮ ವಿದ್ಯಾವಂತರ ಜವಾಬ್ದಾರಿ (ವಿ – ನ. ೭೭)

ವೈಚಾರಿಕ

೩೪. ತ್ವಾಷ್ಟ್ರೀಮುಹೂರ್ತವು ಬ್ರಾಹ್ಮೀ ಮುಹೂರ್ತ ಹೇಗಾಯಿತು? (ವಿಪ್ರ – ಜೂ. ೭೧)

೩೫. ವಿಶ್ವಕರ್ಮನೋ ಪಂಚಬ್ರಹ್ಮ ಸದಾಶಿವನೋ? (ವಿಪ್ರ – ಅಕ್ಟೋ. ೭೧)

೩೬. ಶಿಲ್ಪಸಂಪತ್ತೂ ಮತ್ತು ವಿಶ್ವಬ್ರಾಹ್ಮಣ ಬರಹಗಾರರು (ವಿ-ಅಕ್ಟೋ.೭೪)

೩೭. ದೇವಾಲಯ ತಂತ್ರ (ವಿಶ್ವಕರ್ಮಾಭ್ಯುದಯ – ಕೋಟೆಕಾರುನೆಲ್ಲಿಸ್ಥಳ)

೩೮. ಜಕ್ಕಣಾಚಾರ್ಯರ ಬಗ್ಗೆ ವಿಷಕಾರುವುದೇಕೆ? (ವಿ - ಅಕ್ಟೋ. ೭೯)

ವ್ಯಕ್ತಿ ಪರಿಚಯ

೩೯. ವಿಶ್ವಕರ್ಮ ಕುಲದೀಪಕ ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು (ವಿ – ಜು ೫೨)

೪೦. ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳ ಮತಸೇವೆ(ವಿ–ಆ. ೫೨)

೪೧. ಪುಣ್ಯಸ್ಮರಣೆ (ಗಂಗಾಧರಮೂರ್ತಿಗಳ ಬಗ್ಗೆ) (ವಿಪ್ರ – ಸೆ. ೬೯)

೪೨. ಎಂ. ಎನ್. ವಿಠಲಾಚಾರ್ಯರು (ವಿಪ್ರ - ಫೆ. ೭೧)

೪೩. ಶ್ರೀ ಪಾಲ್ಕೆ ಅವರ ಸಾರ್ಥಕ ಜೀವನ (ವಿ – ಜ ೭೬)

ಪುಸ್ತಕ ಪರಿಚಯ/ವಿಮರ್ಶೆ

೪೪. ಸಮಾಜದ ಸ್ವತ್ತುಗಳ ಸಂರಕ್ಷಣೆ (ರಂಗಪ್ಪಕಿತ್ತಳಿ) (ವಿ – ಜೂ.೪೯)

೪೫. ವಿಶ್ವಕರ್ಮ ಸಮಾಜ ಸಮಾಲೋಚನೆ (ಬಿ. ಶ್ರೀಕಂಠಾಚಾರ್ಯ) (ವಿ - ಜ. ಮತ್ತು ಮಾ. ೫೦)

೪೬. ಶ್ರೀ ವಿಶ್ವಕರ್ಮಾನ್ವಯ ಪ್ರದೀಪಿಕಾ (ವರಾಹ ನರಸಿಂಹಾಚಾರ್ಯ) —ಅವಲೋಕನ (ವಿ – ಏ. ಮೇ. ಆ. ಸೆ. ಮತ್ತು ಡಿ. ೬೦)

೪೭. ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ಸ್ವಾಮಿಗಳ ಪೂಜಾವಿಧಿ (ವಿ – ಆ ೫೨)

೪೮. ವಿಶ್ವಕರ್ಮ ಬ್ರಾಹ್ಮಣ ವಂಶಾಗಮಮು (ವಡ್ಡೆಪಾಟಿ ನಿರಂಜನಶಾಸ್ತ್ರಿ) (ವಿಪ್ರ – ಡಿ. ೬೮)

೪೯. ಸನ್ನುತಿ ರತ್ನಮಾಲ (ಚಾಮುರ್ತಿ ಅಮರೇಶ್ವರಶರ್ಮ) (ವಿಪ್ರ - ಡಿ.೭೦)
೫೦. ಪೌರುಷ ಪಾಂಚಜನ್ಯ (ತಾಮೆಂ ಮುತ್ತಾಚಾರ್ಯ) (ವಿಪ್ರ-ಮಾ. ೭೧)
೫೧. ಸಾರ್ಥ ಷೋಡಶ ಸಂಸ್ಕಾರ ರತ್ನಮಾಲ (ಪದ್ಮಾಕರಶಾಸ್ತ್ರಿ)
(ವಿಪ್ರ – ಮೇ. ೭೧)

ಮುಖ್ಯವಾದ ಮುನ್ನುಡಿಗಳು

೫೨. ಮ. ಗಂಗಾಧರಮೂರ್ತಿಗಳು ಸಂಪಾದಿಸಿ ಪ್ರಕಟಿಸಿರುವ 'ಯಾಜುಷೀ ಗೃಹ್ಯ ಬೋಧಿನಿ'ಗೆ ಬರೆದಿರುವ 'ಪ್ರಸ್ತಾವನೆ'
೫೩. ಟಿ. ವಿ. ಮುತ್ತಾಚಾರ್ಯರ 'ಕನ್ನಡ ವಿಶ್ವಕರ್ಮ ಪುರಾಣ'
೫೪. ಟಿ. ವಿ. ಮುತ್ತಾಚಾರ್ಯರ 'ಕನ್ನಡ ವಿಶ್ವಕರ್ಮ ವಂಶವಿಕಾಸ'
೫೫. ಶ್ರೀಶ್ರೀಶ್ರೀ ದೇವೇಂದ್ರ ಮಹಾಸ್ವಾಮಿಗಳ 'ಮೌನೇಶ್ವರ ಮಹಾತ್ಮ್ಯೆ'
೫೬. ಶ್ರೀಮತಿ ಭಾರತಮಾತಾ ಶ್ರೀನಿವಾಸಮೂರ್ತಿ ಅವರ 'ಸಂತ ನರಹರಿ ಸೋನಾರ'
೫೭. ವರಾಹ ನರಸಿಂಹಾಚಾರ್ಯರ 'ಶ್ರೀ ವಿಶ್ವಕರ್ಮಾನ್ವಯ ಪ್ರದೀಪಿಕಾ' ಕನ್ನಡ ಅವತರಣಿಕೆಗೆ 'ದರ್ಶನ'

ಅನುವಾದಗಳು

೫೮. ಗೀತೆ ಮತ್ತು ಗಾಂಧೀ ತತ್ತ್ವ (ಧರ್ಮರ್)
೫೯. ಮಯಶಾಸ್ತ್ರ (ಪಂಚಾನನ ಗ್ರಂಥಮಾಲೆಯ ಪ್ರಕಟಣೆ)
(ವಿ – ಜ.+ಮಾ. ೫೦)
೬೦. ನಾಳಂದಾ ವಿಶ್ವವಿದ್ಯಾಪೀಠದ ನಷ್ಟ ವೈಭವ (ರಾಜೇಂದ್ರಪ್ರಸಾದ್)
(ವಿ – ಜ. ೫೨)
೬೧. ಶಿಲ್ಪತತ್ತ್ವ (ಡಾ || ಕೊಂಡೂರು ವೀರರಾಘವಾಚಾರ್ಯ)
(ವಿ – ಜು, ಸೆ, ಅ, ನ, ಡಿ, ೫೨, ಜ. ೫೩, ಫೆ. ಮತ್ತು ಮಾ. ೫೩)
೬೨. ವೇದದಲ್ಲಿ ಸೃಷ್ಟಿ ನಿರೂಪಣೆ (ಸಿದ್ಧಗಂಗಾ, ತುಮಕೂರು – ೬೭/೪, ೬೮/೩ ಮತ್ತು ವಿಪ್ರ – ಡಿ. ೬೯, ಜ. ೭೦)
೬೩. ಗಾಯತ್ರೀ (ಸತ್ಯಸಾಯಿಬಾಬಾ) (ವಿಪ್ರ. – ಜ. ೭೦)

೬೪. ಗಾಯತ್ರೀ ಮಂತ್ರಾರ್ಥ (ಬಿ. ನಾರಾಯಣ ಐಯಂಗಾರ್) (ವಿ–ಏ.೭೦)
೬೫. ಆಂಧ್ರಪ್ರದೇಶದ ವಿಶ್ವಬ್ರಾಹ್ಮಣರ ಚಟುವಟಿಕೆಗಳು (ವಿಪ್ರ–ಜು,ಆ.೭೦)
೬೬. ಶ್ರೀ ವೀರಬ್ರಹ್ಮೇಂದ್ರಸ್ವಾಮಿಗಳ ಮಠದಲ್ಲಿ ಚಿರ್ರಾವೂರು ನಾಗಭೂಷಣಾಚಾರ್ಯರ ಭಾಷಣ (ವಿ – ಆ. ೭೦)
೬೭. ಅದ್ವೈತ ದೃಷ್ಟಿಯಲ್ಲಿ ಪ್ರಪಂಚ (ವಿ – ಮೇ, ಜೂ, ಆ. ೭೩)
೬೮. ಸಮುದ್ರಶ್ರೀ (ವಿ – ನ. ೭೪, ಜ, ಮಾ. ೭೫)
೬೯. ಬೇಲೂರು–ಹಳೇಬೀಡು ದೇವಾಲಯಗಳ ವಿನ್ಯಾಸ (ವಿ – ನ. ೭೯)

ಇತರೆ

೭೦. ದುಡಿಮೆ ಹಾಗೂ ಜನರ ವಿಹಾರ ಮನೋಭಾವ; ಮಿತವ್ಯಯ(ವಿ ಜ೪೯)
೭೧. ರಾಷ್ಟ್ರ ಭಾಷೆಯೋ ಅಂತರರಾಷ್ಟ್ರಭಾಷೆಯೋ ? (ವಿ–ಏ. ೪೯)
೭೨. ಸರ್ಕಾರಿ ಕೆಲಸಗಾರರಿಗೆ ರಾಜಕೀಯ ಸ್ವಾತಂತ್ರ್ಯ ಬೇಡವೇ? (ವಿ–ಜ೫೦)
೭೩. ಮಕ್ಕಳನ್ನು ಹೆದರಿಸಬೇಡಿ (ವಿ – ಮಾ. ೫೨)
೭೪. ನಮ್ಮ ಇಂಡಿಯಾದ ಆಧುನಿಕ ಧ್ಯೇಯ ಧೋರಣೆಗಳ ಸಾಧನೆ ಸುಲಭ ಸಾಧ್ಯವೇ (ವಿಪ್ರ – ಫೆ. ೭೧)

ಇಂಗ್ಲೀಷ್ ಲೇಖನಗಳು

75. Vishvakarma Culture (Vishvakarma Prakasha, Apr 1969)
76. Vishvakarma Knowledge (VP, Sept. 69)
77. Vishvakarma Integration (VP, Nov. 69)
78. Who Represents Artisans (Vishvakarma, Dec 70)
79. About the Fifth Veda (V, Apr 71)
80. Speach at the meeting of ABVM (V, Nov 72)
81. Restore Vishvakarmaism & Resuscitate (V, Aug. 72)
82. What Ails us ? Why this conference ? (Vishva Shilpi-Souvinier published on the occassion of First All India Vishkarma Conference, December 1973)
83. Within Ourselves (Prabodha Tarangini, 1975)
84. Propagation a Necessity (PT 76)


85. Vishvakarma Religion OR The Creed of Vishva-braminism (PT, 77)
86. Vishvakarma Tradition (Vishva Shilpi–Patna, Dec. 77 ; V, Jan, 78 & PT 79)
87. Total Revolution When & How ? (VS - Patna, Feb. 78 : V, Mar, 78)
88. Save the Starving Rural Artisan First (VS - Patna, Sept. 78)

★

IMPORTANCE OF LITERATURE

If any degradation or fall is felt in social, ethical and cultural life of a community, one of the basic reasons for the same is lack of knowledge about the glorious history and excellent culture, it has inherited. Knowledge of history and culture, duties and rights will always help to improve and elevate the life and lot of the community. It can do well by gaining sympathy and establishing goodwill, if it is brought to the easy approach of other communities also. Insults and insinuations, troubles and tortures experienced by Vishvabrahmins can easily be traced to the lack of knowledge about their own tradition and culture. Even after such sufferings of the past and present, it is most unfortunate that most of our brothers are yet to realise the importance of this knowledge.

Prof. **Y. Madhavacharyulu**, M.A.,
Sabhapathi : *Vishvabrahmana Dharma Peetham*



*ಕೆ. ಸಿ. ಕಾಳಾಚಾರ್ಯ, ಬಿ.ಎಸ್ಸಿ.,

ಆಚಾರ್ಯರ ವೈದಿಕ ವಿದ್ವತ್ತು

ಆಚಾರ್ಯರ ಪಿತೃಪಾದರಾದ ನಾಗಮಂಗಲದ ಯಜಮಾನ್ ಭಾಸ್ಕರಾಚಾರ್ಯರು ವಂಶ ಪರಂಪರೆಯ ಶಿಲ್ಪವನ್ನು ನಿರ್ವಹಿಸುತ್ತಾ ಪೌರೋಹಿತ್ಯ, ಜ್ಯೋತಿಷ್ಯ, ಮಂತ್ರಶಾಸ್ತ್ರಗಳಲ್ಲೂ ಪ್ರೌಢಿಮೆಗಳಿಸಿದ್ದರು. ಮಗ ಸಂಸ್ಕೃತವನ್ನು ಓದಬೇಕೆಂದು ಶಾಲೆಯಲ್ಲೂ ಸಂಸ್ಕೃತ ಭಾಷೆಯ ಅಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟಂತೆಯೇ ಮನೆಯಲ್ಲೂ ಸಂಸ್ಕೃತ ಪಾಠ ನಡೆಯುತ್ತಿತ್ತು. ಆದರೆ ಶಾಲೆಯ ಓದಿಗೆ ಹೆಚ್ಚು ಪ್ರಾಧಾನ್ಯವಿದ್ದು ಉಳಿದವು ಬಿಡುವಿದ್ದಾಗ ಸಾಗುತ್ತಿತ್ತು. ಕ್ರಮವಾಗಿ ಪಾಠ ಪ್ರಾರಂಭಿಸಿದವರು ಎಂದರೆ ಆಚಾರ್ಯರ ಮಾವನವರಾಗಿದ್ದ ಪುರೋಹಿತ ಕಾಳಾಚಾರ್ಯರು ಆಕಾಲಕ್ಕೆ ಅಲ್ಲಿಯ ಪೌರೋಹಿತ್ಯವರ್ಗದವರಲ್ಲಿ ತುಂಬಾ ಮುಂದುವರಿದಿದ್ದು ಒಳ್ಳೆ ಹೆಸರುಗಳಿಸಿದ್ದರು. ಅವರ ಮಗನೊಂದಿಗೆ ಆಚಾರ್ಯರು ಸಹಪಾಠಿಯಾಗಿ ವೇದಾಭ್ಯಾಸದ ತರಗತಿಗೆ ಸೇರಿದ್ದರು. ಇದು ಬಾಲ್ಯಾವಸ್ಥೆಯ ಪಾಠವು ಶಾಲಾ ಓದಿನೊಂದಿಗೆ ಸಾಗುತ್ತಾ ಬಂದಿತ್ತು.

ಹೆಚ್ಚಿನ ಓದಿಗಾಗಿ ನಾಗಮಂಗಲವನ್ನು ಬಿಟ್ಟು ಮೈಸೂರು ಸೇರಿದ ನಂತರ ಕೆಲಕಾಲ ವೇದಪಾಠ ಸ್ಥಗಿತಗೊಂಡಿತ್ತು. ಆದರೆ ಸಂಸ್ಕೃತ ಅಭ್ಯಾಸ ಮಾತ್ರ ಶಾಲೆಯ ಓದಿನೊಂದಿಗೇ ಮುಂದುವರೆಯುತ್ತಿತ್ತು.

ಮೈಸೂರಿನಲ್ಲಿ ತರಿಕೆರೆ ಶ್ಯಾಮಣ್ಣನವರ ಅಧ್ಯಕ್ಷತೆಯಲ್ಲಿ ಒಂದು ವಿದ್ಯಾರ್ಥಿಸಂಘವು ಹಲವಾರು ಚಟುವಟಿಕೆಗಳನ್ನು ಸಾಗಿಸುತ್ತಿತ್ತು. ಅಲ್ಲಿ ಚರ್ಚಾಕೂಟಗಳು, ಭಾಷಣಗಳು ಮುಂತಾದ ಕಾರ್ಯಕ್ರಮಗಳು ವ್ಯವಸ್ಥಿತ ವಾಗಿ ನಿಯಮಬದ್ಧವಾಗಿ ನಡೆಯುತ್ತಾ ಇದ್ದು ಅಲ್ಲಿಗೆ ಆಚಾರ್ಯರು ಆಕರ್ಷಿತ ರಾದರು. ಸ್ವಲ್ಪಕಾಲದಲ್ಲಿಯೇ ಸಹಾಯಕ ಕಾರ್ಯದರ್ಶಿಯಾಗಿ ಅಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆಯಿತು. ಅದೇ ಕಾಲದಲ್ಲಿ ಬಂಡಿಕೇರಿಯಲ್ಲಿ ಕಳ್ಳನಕೆರೆ ವೀರಣ್ಣಾಚಾರ್ಯರ ಮನೆಯಲ್ಲಿ ಅವರ ಮಕ್ಕಳು ಕ. ವೀ. ಭಾಸ್ಕರಾಚಾರ್ಯರಲ್ಲಿ ಗಂಗಾಧರ ಮೂರ್ತಿಗಳು ರತ್ನಾಭರಣ ನಿರ್ಮಾಣ ಕೆಲಸವನ್ನು ಕಲಿ ಯುತ್ತಿದ್ದರು. ಅಲ್ಲಿಯೇ ಪುರೋಹಿತ ಚಂದ್ರಶೇಖರಾ ಚಾರ್ಯರು ವೇದ ಪಾಠಶಾಲೆಯನ್ನು ನಡೆಸುತ್ತಿದ್ದರು. ಅಲ್ಲಿಗೆ ಆಗ್ಗೇ ಪುರುಷೋತ್ತಮಾಚಾರ್ಯರು, ಸುಣ್ಣದಕೇರಿ ವೆಂಕಟಾಚಾರ್ಯರು, ಪು. ಈಶ್ವರಾಚಾರ್ಯರು, ನೀಲಕಂಠಾಚಾರ್ಯರು, ಭಾಸ್ಕರಾಚಾರ್ಯರು, ವರದಾ ಚಾರ್ಯರು, ಮೃತ್ಯುಂಜಯಾಚಾರ್ಯರು ಮುಂತಾದವರು ಮಂತ್ರಪಾಠ ಕಲಿ ಯುತ್ತಿದ್ದರು. ಸಂಜೆಯಲ್ಲಿ ಮಂತ್ರಪಾಠಕ್ಕೆ ಹೋಗಲು ಪ್ರಾರಂಭವಾಯಿತು. ಗಂಗಾಧರಮೂರ್ತಿಯವರಲ್ಲಿ 'ನಾಭಾ' ಅವರ ಹಿಂದಿನ ಪಾಠಗಳು ಶುದ್ಧ ಗೊಂಡವು. ಅವರಲ್ಲಿದ್ದ ಗ್ರಂಥಗಳಿಂದ ಪೂರ್ವ ಪ್ರಯೋಗ ಗ್ರಂಥವನ್ನು ಹೊಸದಾಗಿಯೇ ಆಚಾರ್ಯರು ಬರೆದುಕೊಂಡರು. ಆ ವೇದ ಪಾಠಶಾಲೆಯು **ಶ್ರೀ ವಿಶ್ವಕರ್ಮ ವೇದ ಶಾಸ್ತ್ರೋಜ್ಜೀವಿನೀ ಸಭೆ** ಎಂದು ಕರೆಯಲ್ಪಟ್ಟಿತು.

ಶ್ರೀ ವಿಶ್ವಕರ್ಮ ವೇದ ಶಾಸ್ತ್ರೋಜ್ಜೀವಿನಿ ಸಭೆ

ಈ ಸಭೆಯ ಅಧ್ಯಯನ ಕೈಂಕರ್ಯವು ಮೈಸೂರು ಕಾಳಿಕಾ ದೇವಾಲ ಯದ ರತ್ನಮುಡಿ ಉತ್ಸವ ಮತ್ತು ಆರ್ದ್ರಾದರ್ಶನೋತ್ಸವಗಳಲ್ಲಿ ನಡೆ ಯುತ್ತಿತ್ತು. ಹತ್ತು ಹನ್ನೆರಡು ವಿಶ್ವಬ್ರಾಹ್ಮಣರ ವೈದಿಕ ತಂಡವು ದೇವರ ಉತ್ಸವದ ಹಿಂದೆ ಎರಡು ಗುಂಪು ಗಳಾಗಿ ಸೂಕ್ತಗಳನ್ನು, ಉಪನಿಷತ್ತುಗಳನ್ನು ಒಂದು ತಂಡದ ನಂತರ ಮತ್ತೊಂದು ತಂಡವಾಗಿ ಹೇಳುತ್ತಿದ್ದರೆ ಬೀದಿಯ ಜನರು ಅಭಿಮಾನಿಗಳು ಆಕರ್ಷಿತರಾಗಿ ಈ ತಂಡಗಳನ್ನೇ ಹಿಂಬಾಲಿಸುತ್ತಿದ್ದರು.

ಕಾಳಿಕಾದೇವಿ ಉತ್ಸವ

ಈ ವೈದಿಕರನ್ನು ಹಾಲು ಹಣ್ಣು, ಕಲ್ಲು ಸಕ್ಕರೆಗಳನ್ನು ಕೊಟ್ಟು ಸತ್ಕರಿಸುತ್ತಿದ್ದುದೂ ಉಂಟು.

ಇಲ್ಲಿ ಗಂಗಾಧರಮೂರ್ತಿಗಳ ಬಗ್ಗೆ ಒಂದೆರಡು ನುಡಿಗಳನ್ನು ಹೇಳುವುದು ಅವಶ್ಯ. ವೈಶ್ವಕರ್ಮಣ ಸಮಾಜದಲ್ಲಿ ಅವರು ಅವತಾರ ಪುರುಷರಂತೆ ಅವತರಿಸಿ ಮೆರೆದರು. ಅದ್ಭುತ ಪಾಂಡಿತ್ಯ. ಅಸ್ಖಲಿತ ವಾಗ್ಝರಿ. ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ವೇದ ಶಾಸ್ತ್ರಗಳನ್ನು ಸಮಗ್ರವಾಗಿ ಪರಿಶೀಲಿಸಿ ಅಧಿಕಾರಯುತವಾಗಿ ಮಾತನಾಡ ಬಲ್ಲವರು. ಎಂತಹವರಾದರೂ ಅವರಗಾಂಭೀರ್ಯ ಮುಖಮುದ್ರೆಯಿಂದ, ಅವರ ವಿದ್ವತ್ತಿನಿಂದ ಆಕರ್ಷಿತರಾಗುತ್ತಿದ್ದರು. ಸಮಾಜದ ಬಗ್ಗೆ ಅವರಿಗೆ ಅತ್ಯಂತ ಅಭಿಮಾನ. ಅದರ ಉಚ್ಛ್ರಾಯಕ್ಕಾಗಿ ಸಂಘ, ಸಮ್ಮೇಳನಗಳನ್ನು ಮಾತ್ರ ಏರ್ಪಡಿಸಿದರೆ ಸಾಲದು ಎಂಬುದು ಅರಿತು ೧೯೪೮ರ ನವೆಂಬರ್‌ನಲ್ಲಿ 'ವಿಶ್ವಕರ್ಮ' ಪತ್ರಿಕೆಯು ಮೊದಲ ಸಂಚಿಕೆಯನ್ನು ಪ್ರಕಟಿಸಿ ಅದು ಜನ ಜಾಗೃತಿಗೆ ಕಾರಣವಾಗಬೇಕೆಂದು ಕರ್ನಾಟಕದ ಮೂಲೆಮೂಲೆಗಳಲ್ಲೂ ಪ್ರಚಾರ ಮಾಡಿದವರು. ಈ ದಿನ ಸಮಾಜದಲ್ಲಿ ಜಾಗೃತಿ ಏನಾದರೂ ಕಾಣಬರುತ್ತಿದ್ದರೆ ಅದು ಗಂಗಾಧರ ಮೂರ್ತಿಗಳು ಅಂದು ವಹಿಸಿದ ಆಸ್ಥೆಯ ಫಲ. ಪುರೋಹಿತರಿಗೆ ಉಪಯೋಗವಾಗುವಂತಹ ಉಪಯುಕ್ತವೂ ತಪ್ಪಿಲ್ಲದೆಯೂ ಇರುವಂತಹ ಕೃತಿಗಳು ವಿರಳವಾಗಿದ್ದು, ಇರುವ ಕೃತಿಗಳು ಕೈಬರಹಗಳಲ್ಲಿಯೇ ಪರಂಪರೆಯಿಂದ ಉಳಿದು ಬಂದಿದ್ದವು. ಕೆಲವು ಪುಸ್ತಕಗಳು ಅಚ್ಚಾಗಿದ್ದರೂ ಅವು ತುಂಬಾ ಸೀಮಿತವಾಗಿದ್ದು ಪೂರ್ಣ ತಂತ್ರಗಳಾಗಿ ಪ್ರಯೋಗಕ್ಕೆ ಬರುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ಯಾಜುಷೀ ಗೃಹ್ಯ ಬೋಧಿನೀ ಅವರಿಂದ ಸಂಪಾದಿತಗೊಂಡ ಅಮೂಲ್ಯ ಕೃತಿ ರತ್ನವಾಗಿದೆ. ಆ ಕೃತಿಯನ್ನು ಕಂಡ ವಿದ್ವಾಂಸರೆಲ್ಲರೂ ಅಪಾರವಾದ ಮೆಚ್ಚುಗೆ ಇಂದೂ ವ್ಯಕ್ತಪಡಿಸುತ್ತಾರೆ. ಅದೇ ರೀತಿಯಲ್ಲಿ ಅವರು ಪ್ರಕಟಿಸಿದ ಶ್ರಾದ್ಧ ತರ್ಪಣ ವಿಧಿಃ, ಕಾಶ್ಯಪ ಶಿಲ್ಪಾಗಮೋಕ್ತ ಪ್ರತಿಷ್ಠಾವಿಧಿ, ನಿತ್ಯಕರ್ಮಾನುಷ್ಠಾನ ಸಂಗ್ರಹಗಳಿಗೆ ಸಾಟಿಯಾದ ಕೃತಿಗಳು ಇಂದಿಗೂ ಕನ್ನಡ ಭಾಷೆಯಲ್ಲಿ ಪ್ರಕಟವಾಗಿಲ್ಲ. ಇಂತಹ ಮಹಾ ನಿಸ್ವಾರ್ಥ ಸಮಾಜ ಸೇವಾ ಪರಾಯಣರ ಸಖ್ಯ, ಅವರ ವೈದುಷ್ಯದ ಸಾಂಗತ್ಯ 'ನಾಭಾ'

ಗಂಗಾಧರಮೂರ್ತಿಗಳ ಮಾರ್ಗದರ್ಶನ

ಅವರಿಗೆ ಅಮೂಲ್ಯವಾಗಿತ್ತು. 'ನಾಭಾ' ಅವರೂ ಗಂಗಾಧರಮೂರ್ತಿಗಳ ದೃಷ್ಟಿಯಲ್ಲಿ ಅಂತೆಯೇ ಕಂಡಿರಬೇಕು. ಇವರಿಬ್ಬರೂ ಅತ್ಯಂತ ಅನ್ಯೋನ್ಯ ದಿಂದ ಸಮಾಜ ಸೇವೆಯ ಎಲ್ಲಾ ಕಾರ್ಯರಂಗಗಳಲ್ಲೂ ದುಡಿಯುತ್ತಿದ್ದರು. ಇವರ ಕೆಲಸಗಳಲ್ಲಿ ಯಾರ ಪಾಲು ಎಷ್ಟು ಎಂಬುದು ಬೇರ್ಪಡಿಸಿ ತಿಳಿ ಯುವುದೇ ಕಷ್ಟ.

ಗಂಗಾಧರ ಮೂರ್ತಿಗಳು ಆಕಾಶ ಗಂಗೆಯನ್ನೇ ತಂದು ಮೈಸೂರಿನ ಎಲ್ಲಾ ಪುರೋಹಿತರನ್ನು ಕ್ರಮಗೊಳಿಸಿ ಅವರ ಪಾಠಗಳನ್ನು ಸಂಸ್ಕರಿಸಿದರು. ಸಂಹಿತೆಗಳ ಕ್ರಮ, ಪದ, ಜಟಾ, ಘನ, ಶಿಖಾ, ರೇಖಾ ಪಾಠಗಳನ್ನು ಮಾಡಿ ಸಿದರು. 'ನಾಭಾ' ಅವರು ಇಲ್ಲಿ ವಿದ್ಯಾರ್ಥಿಗಳೂ ಹೌದು. ಅದೇ ರೀತಿ ಅಧ್ಯಾಪಕರೂ ಹೌದು. ಇದು ಅವರ ಕುಶಾಗ್ರಮತಿಯ ಕುರುಹು.

ತಮ್ಮ ಜೀವನೋಪಾಯಕ್ಕಾಗಿ ಶ್ರೀಮದಾಚಾರ್ಯರು ಸರ್ಕಾರಿ ಕೆಲಸ ದಲ್ಲಿದ್ದುದನ್ನು ಕಂಡವರಿಗೆ ಇವರ ವೈದಿಕ ಪಾಠ, ಪೌರೋಹಿತ್ಯ ಕ್ರಮ ಗಳನ್ನು ಗಮನಿಸಿದಲ್ಲಿ ತುಂಬಾ ಆಶ್ಚರ್ಯವಾಗುತ್ತಿದ್ದದ್ದು ತೀರಾ ಸಾಮಾನ್ಯ. ಕೊನೆಗೆ ನಮ್ಮವರೇ ಆಚಾರ್ಯರನ್ನು ಪೂರ್ಣವಾಗಿ ಆಗ್ಗೆ ಅರಿಯದೆ ಇದ್ದರು ಎಂದರೂ ಹೆಚ್ಚಲ್ಲ (ಎಷ್ಟೇ ಆಗಲಿ ನಾವು 'ನಾವು' ತಾನೇ ? ವಿದ್ವತ್ತಿನ ಮೆಚ್ಚುಗೆ ಇತರರಿಂದ ಬರುವತನಕ ನಾವು ಗುರ್ತಿಸುವುದು ಹೇಗೆ ? .

ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಆಚಾರ್ಯರು ಆಗ ಸರ್ಕಾರಿ ಸೇವೆಯಲ್ಲಿದ್ದರು. ಮೈಸೂರು ಅರಮನೆಯ ಸ್ವರ್ಣಶಾಲಾಧಿಕಾರಿಗಳಾಗಿದ್ದ ಶ್ರೀನಿವಾಸಚಾರ್ಯ ಅವರಿಗೆ ಅರವತ್ತು ವರ್ಷ ತುಂಬಿದ್ದರಿಂದ ಉಗ್ರರಥ ಶಾಂತಿ ಕರ್ಮವನ್ನು ಆಚರಿಸಲು ಏರ್ಪಾಟು ಮಾಡಿದರು. ಅರ ಮನೆಯ ಸಂಪರ್ಕ ಹೊಂದಿದ್ದ ಅವರಿಗೆ ಅರಮನೆಯ ಪುರೋಹಿತರೇ ಸರಿಕಂಡರು. ಅವರನ್ನೇ ಆಹ್ವಾನಿಸಿ ಶಾಂತಿಕರ್ಮ ನಡೆಸಲು ಪ್ರಾರಂಭಿಸಿದರು. ಬಹು ಮಂದಿಗೆ ಇದು ಸೂಕ್ತವೆಂದು ತೋರದಿದ್ದರೂ ಮೌನವಾಗಿದ್ದೇ ವಿರೋಧಿಸಿ ದರು. ಈ ಸಮಾರಂಭಕ್ಕೆ ಸಮಾಜದ ಬಹುಮಂದಿಯನ್ನೂ, ಆಚಾರ್ಯರನ್ನೂ ಆಹ್ವಾನಿಸಿದ್ದರು. ಅರಮನೆಯ ಪುರೋಹಿತರು ಶಾಂತಿ ಕಾರ್ಯವನ್ನು

ಉಗ್ರರಥ ಶಾಂತಿ ಕಾರ್ಯದಲ್ಲಿ

ಉತ್ಸಾಹದಿಂದ ಮಾಡಿಸುತ್ತಿರುವಂತೆ ಕಾಣಬರಲಿಲ್ಲ. ಶ್ರೀನಿವಾಸಾಚಾರ್ಯರೂ ಅದನ್ನು ಗಮನಿಸಿದಂತೆ ತೋರಿತು. ಆದರೆ ಯಾರೂ ಮಾತನಾಡುವಂತಿರಲಿಲ್ಲ. ನಾಭಾ ಅವರಿಗೆ ಈ ವರ್ತನೆ ಈಟಿಯಂತೆ ಇರಿಯಿತು. ಕಾರ್ಯಕ್ರಮದಲ್ಲಿ ಬಂಧು ಮಿತ್ರರ ಪರವಾಗಿ ಶ್ರೀನಿವಾಸಾಚಾರ್ಯರನ್ನು ಅಭಿನಂದಿಸಬೇಕೆಂದು ಅವಕಾಶ ಕಲ್ಪಿಸಿಕೊಂಡರು. ಶಿಲ್ಪಿಗಳಿಗೆ ವೈದಿಕ ಪರಂಪರೆ ವಂಶಪಾರಂಪರ್ಯ ದಿಂದಲೂ ಬಂದಿರುವುದೆಂದು ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತಾ ಶ್ರೀನಿವಾಸಾ ಚಾರ್ಯರನ್ನು ಆಶೀರ್ವದಿಸುತ್ತಾ ಉಡುಗೊರೆಗಳ ಅರ್ಪಣೆ ಮಾಡಲು 'ನಾಭಾ' ಅವರೇ ಪ್ರಾರಂಭಿಸಿ, ಪ್ರತಿಂಒಂದು ಉಡುಗೊರೆಗೂ ಬೇರೆ ಬೇರೆ ಹನಸ್ಸುಗಳನ್ನು ಹೇಳುತ್ತಾ ಉಡುಗೊರೆಗಳ ಅರ್ಪಣೆ ಪ್ರಾರಂಭಿಸಿದರು. ಪ್ರತಿ ಹನಸ್ಸಿನಲ್ಲೂ ವಿಶ್ವಕರ್ಮ, ವೈಶ್ವಕರ್ಮಣ ಪರಂಪರೆ, ಶಿಲ್ಪವಿದ್ಯಾಮಹತ್ವ ಇತ್ಯಾದಿ ಮಹತ್ತರ ಸಂಗತಿಗಳು ಪ್ರತಿಪಾದಿತವಾಗುತ್ತಿದ್ದವು. ಅಲ್ಲಿ ಸೇರಿದ್ದ ಜನ ಸಮೂಹಕ್ಕೆ ವ್ಯತ್ಯಾಸ ಸ್ಪಷ್ಟವಾಗಿ ಕಾಣಿಸುತ್ತಿತು. ಅರಮನೆಯ ಪುರೋಹಿತರ ಕಿವಿ ನೆಟ್ಟಗಾಯಿತು. ಬಹುಶಃ ಅವರು ಆದುವರೆವಿಗೂ ತಮ್ಮ ಕಾರ್ಯವನ್ನು ಅರ್ಥ ಮಾಡುವವರು, ಗಮನಿಸುವವರು ಅಲ್ಲಿ ಇಲ್ಲವೆಂದು ಭಾವಿಸಿದ್ದರೇನೋ. ಈಗ ಅವರ ಕಣ್ಣು ಅರಳಿತ್ತು. ನಾಭಾ ಅವರನ್ನು ತುಂಬಾ ಮೆಚ್ಚುಗೆಯಿಂದ ನೋಡುತ್ತಾ "ಏನ್ರಿ ಆಚಾರ್ರೇ, ನನ್ನ ಮೈ ಸ್ವಸ್ಥ ವಾಗಿಲ್ಲ ಅಂತಹೇಳ್ತಿದ್ರೂ ನಾನೇ ಬರಬೇಕು ಅಂತ ಹಠ ಮಾಡಿದ್ರಿ. ನಿಮ್ಮಲ್ಲೇ ಇಂಥಾ ಮಹಾ ವಿದ್ವಾಂಸರನ್ನು ಇಟ್ಕೊಂಡು ನಮಗ್ಯಾಕೆ ಈ ರೀತಿ ತೊಂದರೆ ಕೊಡ್ತೀರಿ ?" ಎಂದು ಅವರೇ ಕೇಳಿದರು. ತಾವು ದಿನ ನಿತ್ಯವೂ ನೋಡುವ, ಕೋರ್ಟಿನಲ್ಲಿ ನೌಕರಿ ಮಾಡುವ ನಮ್ಮವರು ಅರಮನೆಯ ಪುರೋಹಿತರ ಮೆಚ್ಚುಗೆಗೆ ಪಾತ್ರರಾದರು ಎಂದರೆ ಅವರ ವಿದ್ವತ್ತು ಅಸಮಾನ್ಯದ್ದೇ ಆಗಿರ ಬೇಕೆಂದು ಆಗ ನಮ್ಮವರ ಮನಸ್ಸಿಗೆ ಹೊಳೆಯಿತು ! ಶ್ರೀನಿವಾಸಾಚಾರ್ಯರು ತಮ್ಮ ತಪ್ಪಿಗಾಗಿ ಕೈಕೈ ಹಿಸುಕಿ ಕೊಂಡರು.

ಆಚಾರ್ಯರ ಪೌರೋಹಿತ್ಯ ಕಾರ್ಯವನ್ನು ಗಮನಿಸಿದ್ದು ವೈದಿಕ ಕ್ರಿಯೆ ಗಳಲ್ಲಿ ಆಸಕ್ತಿ ಇರುವವರಿಗೆ ಅವರ ಚಾಕಚಕ್ಯತೆ, ಸಮಯದ ಪರಿಜ್ಞಾನ

ಅಗ್ನಿ ಪ್ರತಿಷ್ಠಾಪನಾ ಚಾತುರ್ಯ

ಚೆನ್ನಾಗಿ ತಿಳಿಯುತ್ತದೆ. ಅಗ್ನಿಪ್ರತಿಷ್ಠಾಪನಾಕಾರ್ಯ ಕ್ಲಿಷ್ಟವಾದದ್ದು. ಅನೇಕ ಪುರೋಹಿತರು ಇಲ್ಲಿ ಎಡವುವುದು ಸಾಮಾನ್ಯ. ದಿಕ್ಕುಗಳನ್ನು ಸರಿಯಾಗಿ ಗುರುತಿಸಲಾರದೆ ಫಜೀತಿಯಾಗುತ್ತದೆ. ಅದರಲ್ಲೂ ಹೊಸ ಸ್ಥಳವಾಗಿ ದಿಕ್ಕುಗಳನ್ನು ಗುರುತಿಸುವುದರಲ್ಲಿ ಸ್ವಲ್ಪ ಕಷ್ಟವಿದ್ದರೆ ತೀರಿತು ಅಂದು ಪೌರೋಹಿತ್ಯ ಅಧ್ವಾನ.

ಅಗ್ನಿಪ್ರತಿಷ್ಠಾಪನ ವಿಧಿ ಹೀಗೆ : ಹೋಮದ್ರವ್ಯಗಳ ಸಂಗ್ರಹಣೆ. ಮಂಟಪದ ಮಧ್ಯೆ ಅಥವಾ ಈಶಾನ್ಯ ಭಾಗಕ್ಕೆ ನೀರಿನಿಂದ ಪ್ರೋಕ್ಷಿಸಿ ಸ್ಥಂಡಿಲವನ್ನು ಮಾಡಿ ಚೋಟುದ್ದ ದರ್ಭೆ ಅಥವ ಸಮಿತ್ತುಗಳಿಂದ ಮೂರುಗೆರೆಗಳನ್ನು ಪಶ್ಚಿಮದಿಂದ ಪೂರ್ವಕ್ಕೆ, ದಕ್ಷಿಣದಿಂದ ಉತ್ತರಕ್ಕೆ ಎಳೆದು ದರ್ಭೆಗಳ ಒಂದಂಗುಲ ಉದ್ದದ ಅಗ್ರ ಭಾಗವನ್ನು ಕಡ್ಡಿಯಿಂದ ಕತ್ತರಿಸಿ ನೀರಿನಿಂದ ಪ್ರೋಕ್ಷಿಸಿ ಸ್ಥಂಡಿಲದ ನೈರುತ್ಯ ಭಾಗದಲ್ಲಿಟ್ಟು, ಉದಕ ಸ್ಪರ್ಶಮಾಡಿಸಿ, ಎರಡು ತಟ್ಟೆಗಳಲ್ಲಿ ಸುವಾಸಿನಿಯರಿಂದ ಔಪಾಸಾಗ್ನಿಯನ್ನು ತರಿಸಿಕೊಂಡು ಸ್ಥಂಡಿಲದ ಆಗ್ನೇಯ ಭಾಗದಲ್ಲಿರಿಸಿಕೊಂಡು, ಗಾಯಿತ್ರೀ ಮಂತ್ರದಿಂದ ಅಭಿಮಂತ್ರಿಸಿ ರೇಖೆಗಳ ಮಧ್ಯಭಾಗದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಅಗ್ನಿಯನ್ನು ಅಕ್ಷತೆಗಳಿಂದ ಆವಾಹಿಸಿ, ಅಗ್ನಿಯ ನಾಲ್ಕುದಿಕ್ಕುಗಳಲ್ಲೂ ಬಲಹಸ್ತದ ಭೂಮಿಯನ್ನು ಪರಿಮೃಜಿಸಿ ಅಗ್ನಯೇ ನಮಃ ಎಂಬ ಮಂತ್ರಗಳಿಂದ ಎಂಟು ದಿಕ್ಕೂಗಳಲ್ಲೂ ಪುಷ್ಪಾಕ್ಷತೆಗಳನ್ನು ಇರಿಸಬೇಕು. ಅಗ್ನಿಯ ನಾಲ್ಕು ದಿಕ್ಕುಗಳಲ್ಲೂ ಹದಿನಾರು ಧರ್ಭೆಗಳಿಂದ ಕಟ್ಟಿದ ಪರಿಸ್ತರಣಗಳನ್ನು ಪ್ರಾಗುದಗ್ರಗಳಾಗಿ ಇಟ್ಟು ಉತ್ತರ ಭಾಗದಲ್ಲಿ ನಾಲ್ಕು ದರ್ಭೆಗಳನ್ನೂ ದಕ್ಷಿಣದಲ್ಲಿ ಎರಡು ದರ್ಭೆಗಳನ್ನೂ ಪೂರ್ವಾಗ್ರಗಳನ್ನಾಗಿಯೂ ಪಶ್ಚಿಮದಲ್ಲಿ ಎರಡು ದರ್ಭೆಗಳನ್ನು ಉತ್ತರಾಗ್ರಗಳಾಗಿಯೂ ಇಡಬೇಕು.

ಈ ಕಾರ್ಯವನ್ನು ಆಚಾರ್ಯರು ತುಂಬಾ ಜಾಣ್ಮೆಯಿಂದ ಬಹು ಶೀಘ್ರಗತಿಯಲ್ಲಿ ಎಲ್ಲೂ ತಡವರಿಸದೆ ನಡೆಸುತ್ತಾರೆ. ಅವರ ಈ ಜಾಣ್ಮೆ, ಶೀಘ್ರಗತಿಯನ್ನು ಗಮನಿಸುವ ವೈದಿಕರು ಯಾರಾದರೂ ಬೆರಗಾಗುತ್ತಾರೆ. ಅವರು ನಡೆಸುವ ಅಗ್ನಿಪ್ರತಿಷ್ಠೆಯನ್ನು ವೀಕ್ಷಿಸುವುದೇ ಒಂದು ಆನಂದ.

ವೈಶ್ವಕರ್ಮಣ ಮಹಾಯಾಗ

ಮೈಸೂರು ಮತ್ತು ಪರಿಸರದ ಸ್ಥಳಗಳಲ್ಲಿ 'ನಾಭಾ' ಅವರ ಹೆಸರು ಸಾಕಷ್ಟು ಪರಿಚಿತವಾಗಿತ್ತು. ವೈದಿಕ ವಿದ್ವಾಂಸರೆಂಬ ಖ್ಯಾತಿಯೂ ಬಂದಿತ್ತು. ಆವರ ಲೇಖನ-ಭಾಷಣಗಳು ಅನೇಕರ ಪರಿಚಯು ಅವರಿಗೆ ದೊರಕಿಸಿತ್ತು. ಆದರೂ ಅವರ ಖ್ಯಾತಿ ಕರ್ನಾಟಕದಲ್ಲೆಲ್ಲಾ ವ್ಯಾಪಿಸಿದ್ದು ೧೯೫೨ ಏಪ್ರಿಲ್ ೬ ರಿಂದ ೧೦ ರ ತನಕ ಶ್ರೀರಂಗಪಟ್ಟಣದಲ್ಲಿ ನಡೆದ ವೈಶ್ವಕರ್ಮಣ ಯಾಗದ ಸಮಾರಂಭದಲ್ಲಿ. ಮ. ಗಂಗಾಧರ ಮೂರ್ತಿಗಳು ಅಧ್ವರ್ಯುಗಳು. 'ನಾಭಾ' ಅವರು ಆಚಾರ್ಯರು. ಶ್ರೀರಂಗಪಟ್ಟಣದ ಈ ಕಾರ್ಯಕ್ರಮಕ್ಕೆ ಆನೇಕ ಭಾಗಗಳಿಂದ ವಿಶ್ವಬ್ರಾಹ್ಮಣ ಬಂಧುಗಳು ಆಗಮಿಸಿದ್ದರು. ಇಲ್ಲಿ 'ನಾಭಾ' ಅವರ ಬಿಡುವಿಲ್ಲದ ಓಡಾಟ, ಮಿಂಚಿನ ವೇಗದ ಸಿದ್ಧತೆಗಳು ಎಲ್ಲ ರನ್ನೂ ತನ್ನತ್ತ ಸೆಳೆದುಕೊಂಡಿತ್ತು.

ಇವೆಲ್ಲಾ ಸ್ಥಾನೀಯವಾಗಿ ಆಚಾರ್ಯರು ಗಳಿಸಿದ ಪ್ರಸಿದ್ಧಿ. ಇವರ ವೈದುಷ್ಯ ಕರ್ನಾಟಕದ ಎಲ್ಲಾ ಮೂಲೆಗಳಿಗೂ, ನೆರೆನಾಡುಗಳಿಗೂ ಹಬ್ಬಲು ಕಾರಣವಾದದ್ದು ಗೋವಾದ ಕಾಸರಪಾಡುವಿನಲ್ಲಿ ನಡೆದ ಸಹಸ್ರ ಚಂಡೀ ಯಾಗದ ಸಂದರ್ಭ. ೧೯೬೫ರಲ್ಲಿ ಭಾರತ-ಪಾಕಿಸ್ತಾನಗಳ ನಡುವಣ ವಿರಸ ಯುದ್ಧದಲ್ಲಿ ಪರಿಣಮಿಸಿತು. ಅದೇ ಸಂದರ್ಭದಲ್ಲಿ ಭಾರತದ ಜಯ ಕೋರಿ ಈ ಯಾಗವನ್ನು ಬೊಂಬಾಯಿಯ ದೈವಜ್ಞ ಬ್ರಾಹ್ಮಣ ಸಮಾಜದ ವರು ಏರ್ಪಡಿಸಿದ್ದರು. ಕರ್ನಾಟಕದಿಂದ ಮೈಸೂರಿನ ಶ್ರೋತ್ರಿಯ ಬ್ರಹ್ಮಶ್ರೀ ಶ್ರೀಕಂಠಾಚಾರ್ಯರ ಮೂಲಕ ಆಚಾರ್ಯರು, ಬೆಂಗಳೂರಿನ ಯಜಮಾನ್ ಬಿ. ವೈ. ಚನ್ನಪ್ಪಾಚಾರ್ಯರು ಆಹ್ವಾನಿತರಾಗಿದ್ದರು.

ಸಹಸ್ರಚಂಡೀಯಾಗ

ಕಾಸರಪಾಡಿನ ಶ್ರೀಕಾಳಿಕಾದೇವಿ ಆಲಯದ ಸುತ್ತಲೂ ಹಂಗಾಮಿ ನಗರವನ್ನೇ ನಿರ್ಮಿಸಿದ್ದರು. ಯಾಗಶಾಲೆ, ಯಜ್ಞಕುಂಡಗಳನ್ನು ಶಾಸ್ತ್ರೀಯ ವಾಗಿ ಪುಣೆಯ ಪದ್ಮಾಕರಶಾಸ್ತ್ರಿಗಳು ನಿರ್ಮಿಸಿದ್ದರು. ಪಾಕಶಾಲೆ, ಅತಿಥಿ ಗೃಹಗಳು ನಿರ್ಮಾಣವಾಗಿತ್ತು. ಬಳಿಯಲ್ಲಿಯೇ ಹರಿ ಯುತ್ತಿದ್ದ ಝುರಿಯುದ್ದಕ್ಕೂ ರಸ್ತೆ ಮಾಡಿ ಸೋಪಾನ ಕಟ್ಟಿಸಿ 'ವಿಶ್ವಕರ್ಮ ತೀರ್ಥ'ವೆಂದು ಹೆಸರಿಟ್ಟಿದ್ದರು.

ಒಂದು ನೂರು ಮಂದಿ ಪುರೋಹಿತರು ಆಹ್ವಾನಿತರಾಗಿದ್ದರು. ಅವರಲ್ಲಿ ೬೦ ಮಂದಿ ಗೋಕರ್ಣದವರು, ಉಳಿದ ನಲವತ್ತು ಮಂದಿ ಬೇರೆ ಬೇರೆ ಪ್ರಾಂತಗಳಿಂದ ಬಂದ ವಿಶ್ವಬ್ರಾಹ್ಮಣರು. ಪದ್ಮಾಕರ ಶಾಸ್ತ್ರಿಗಳು ಪುರೋಹಿತರೊಂದಿಗೆ ಸಂಸ್ಕೃತದಲ್ಲಿಯೇ ಸಂಭಾಷಿಸುತ್ತಾ ಅವರಿಗೆ ನಿರ್ದೇಶನಗಳನ್ನೂ ಸಂಸ್ಕೃತದಲ್ಲಿಯೇ ನೀಡುತ್ತಿದ್ದರು.

ನದೀ ತೀರ್ಥಸಂಗ್ರಹಣ ಮಾಡಿಕೊಂಡು ಯಜ್ಞ ಸಂಭಾರಗಳೊಡನೆ ಮೆರವಣಿಗೆಯಲ್ಲಿ ಕ್ಲುಪ್ತ ಮುಹೂರ್ತದಲ್ಲಿ ಯಜ್ಞಶಾಲೆ ಪ್ರವೇಶ ಮಾಡಲು ನೂರು ಮಂದಿ ಪುರೋಹಿತರೂ ಒಂದೇ ಧ್ವನಿಯಲ್ಲಿ ವೇದಪಾರಾಯಣದೊಂದಿಗೆ ಬರುತ್ತಿದ್ದುದೊಂದು ಅಪೂರ್ವ ದೃಶ್ಯ. ಅದನ್ನು ಕಂಡವರು, ಅಲ್ಲಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು ಇಂದೂ ನೆನೆಸಿಕೊಂಡು ಪುಲಕಿತರಾಗುತ್ತಾರೆ. ಅರಣಿಗಳಿಂದಲೇ ಅಗ್ನಿಮಂಥನ ನಡೆಸಿ ಅಗ್ನಿಯನ್ನು ಕುಂಡಗಳಲ್ಲಿ ಪ್ರತಿಷ್ಠಿಸಿ ನವ ದುರ್ಗಾ ಯೋಗಿನಿಯರ ಪೂಜೆ ಮಾಡಿ, ಸಪ್ತಶತಿಯ ಏಳುನೂರು ಮಂತ್ರಗಳನ್ನು ಒಂದು ನೂರು ಮಂದಿ ಋತ್ವಿಜರು ಹೇಳುತ್ತಿರುವಲ್ಲಿ ಯಜಮಾನರು ಹೋಮ ಮಾಡುತ್ತಿದ್ದರು. ಹೀಗೆ ನೂರು ಜನರು ಹತ್ತು ದಿವಸ ಮಾಡಿದಲ್ಲಿ ಅದು 'ಸಹಸ್ರಚಂಡೀ'ಯಾಗುತ್ತದೆ. ವಿಸ್ತಾರವೂ ಆಳವೂ ಆದ ಯಜ್ಞಕುಂಡವು ಪೂರ್ಣಾಹುತಿಯ ದಿನದಂದು ತುಂಬಿ ಸಾಲದಾಗುವುದೇನೋ ಎನಿಸುವಂತಿತ್ತು.

ಇಂತಹ ವೈಭವ ಪೂರ್ಣ ಕಾರ್ಯಕ್ರಮವು ಉಷಃಕಾಲದಲ್ಲಿ ಪ್ರಾರಂಭವಾದರೆ ಮಧ್ಯರಾತ್ರಿಯತನಕ ಬಿಡುವೇ ಇಲ್ಲ. ನೂರು ಮಂದಿಯಲ್ಲೂ 'ನಾಭಾ' ಅವರ ವ್ಯಕ್ತಿತ್ವ ಎದ್ದು ಕಾಣಿಸುವಂತಾಗಿತ್ತು. ಶಾಸ್ತ್ರಿಗಳು ಆಚಾರ್ಯದಿಂದ ಪ್ರತಿದಿನವು ಮಧ್ಯಾಹ್ನ ವಿಶ್ವಕರ್ಮ ಸೂಕ್ತವನ್ನು ಹೇಳಿಸುತ್ತಿದ್ದರು. ಇವರ ಸ್ಫುಟವಾದ ಉಚ್ಚಾರಣೆ, ಸಾಮಯಿಕ ಪ್ರಜ್ಞೆ ಎಲ್ಲರ ಗಮನ ಸೆಳೆದಿತ್ತು. ಪುರೋಹಿತರೆಲ್ಲರಿಗೂ ಬೇಕಾದವರಾದರು.

ರಾಜೋಪಚಾರ ಪೂಜೆಯನ್ನು ಗೋಕರ್ಣದವರು ಸಂದರ್ಭೋಚಿತ ರಚಿತವಾದ ಶ್ಲೋಕಗಳಿಂದಲೂ ನಡೆಸುತ್ತಿದ್ದರು. ಇದ್ದಕ್ಕಿದಂತೆಯೇ ಐದನೆಯ ದಿನ ಮೈಸೂರಿನ ವೈದಿಕರಿಂದ ರಾಜೋಪಚಾರ ಪೂಜೆ ಎಂಬುದಾಗಿ ಶಾಸ್ತ್ರಿಗಳು ಮೈಕ್‌ನಲ್ಲಿ ಘೋಷಿಸಿದರು. ಅಂದು ರಾತ್ರಿಯೇ ಸೂಕ್ತವಾದ ಶ್ಲೋಕಗಳನ್ನು


ಆಚಾರ್ಯರು ರಚಿಸಿ ರಾಜೋಪಚಾರ ಪೂಜೆ ನಡೆಸಿದ್ದು ಮಾತ್ರವಲ್ಲ ಸಮಾವರ್ತನ ಸಂದರ್ಭದಲ್ಲಿ ಒಂದು ಋಕ್ಕಿನ ಶಿಖಾ ಪಾಠವನ್ನೂ ಹೇಳಿದರು! ಕ್ರಮ ಪಾಠದ ಪ್ರಕಾರ ಒಂದೊಂದು ಪದವಾಗಿ ಮುಂದಕ್ಕೆ ಹೋಗಿ ಹಂತ ಹಂತಕ್ಕೂ ವಿಲೋಮ ಕ್ರಮದಿಂದ ಪದಗಳನ್ನು ಜೋಡಿಸಿಕೊಂಡು ಹಿಂದಕ್ಕೆ ಬಂದು, ತಿರುಗಿ ಪದಪದವಾಗಿ ಮುಂದಕ್ಕೆ ಹೋಗಿ, ಮುಂದಕ್ಕೆ ಹೋದ ಪದದಿಂದ ಹಿಂದಕ್ಕೆ ಬಂದು ಋಕ್ಕು ಮುಗಿಯುವ ತನಕ ಹೇಳಬೇಕು. ಈ ಮಧ್ಯೆ ವಾಕ್ಯ ಸಮಾಪ್ತಿಯನ್ನೂ ಗಮನಿಸುತ್ತಿರಬೇಕು. ಹೆಚ್ಚಿನ ಪೂರ್ವಸಿದ್ಧತೆಗೆ ಅವಕಾಶವಿಲ್ಲದೆಯೇ ಇಷ್ಟೆಲ್ಲವನ್ನೂ ಅಚ್ಚು ಕಟ್ಟಾಗಿ ಶಾಸ್ತ್ರೀಯವಾಗಿ ನಿರ್ವಹಿಸಿದ್ದು ಎಲ್ಲರಿಗೂ ತುಂಬಾ ಹರ್ಷದಾಯಕವಾಗಿತ್ತು. ಮೈಸೂರಿನವರು ಪಾಠದಲ್ಲಿ ಕಡಿಮೆಯಲ್ಲ ಎಂದು ಸ್ಫುರಿಸುವಂತಿತ್ತು. ಅಲ್ಲಿ ಸೇರಿದವರೆಲ್ಲರೂ ಹರ್ಷೋದ್ಗಾರ ಮಾಡಿದರು.

ಇಲ್ಲಿಂದ ನಾಭಾ ಅವರ ಖ್ಯಾತಿ ಕರ್ನಾಟಕದ ಹೊರಗೂ ಹರಡಿತು. ಆಂಧ್ರ, ತಮಿಳು ನಾಡು, ಮಹಾರಾಷ್ಟ್ರ, ಕೇರಳಗಳಲ್ಲಿಯೇ ಅಲ್ಲದೆ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲೂ ಇವರ ಹೆಸರು ತಿಳಿಯುವಂತಾಯಿತು.

ಹಲವಾರು ಬಾರಿ 'ನಾಭಾ' ಅವರು ಆಂಧ್ರ, ಮಹಾರಾಷ್ಟ್ರ, ತಮಿಳು ನಾಡು ಇತ್ಯಾದಿ ಕರ್ನಾಟಕದ ಹೊರಭಾಗಗಳಿಗೂ ಹೋಗಿ ವೈದಿಕ ಕಾರ್ಯಕ್ರಮಗಳನ್ನು ನಿರ್ವಹಿಸಿ ಮೆಚ್ಚುಗೆಗಳಿಸಿದ್ದಾರೆ. ಇವರ ಈ ಪಾರಂಗತತ್ವವನ್ನು ಮನ್ನಿಸಿ, ಮೆಚ್ಚಿ ಆಂಧ್ರದ ವಿಶ್ವಬ್ರಾಹ್ಮಣ ಧರ್ಮ ಪೀಠದವರು **ಅಧ್ವರ್ಯು ಶಿರೋಮಣಿ** ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ.

ಅಧ್ವರ್ಯು ಶಿರೋಮಣಿ

ಈ ರೀತಿಯ ಮಹಾ ನಿಷ್ಣಾತರಾದ ವಿದ್ವಾಂಸರು ಯಾವುದೇ ಸಮಾಜದವರಿಗಾದರೂ ಹೆಮ್ಮೆಯ ವ್ಯಕ್ತಿಗಳು. ಇವರು ನೂರ್ಕಾಲ ಇದ್ದು ಇವರಿಂದ ವೈದಿಕವಿದ್ಯಾ ಪ್ರಚಾರ ನಿರಂತರವಾಗಿ ಸಾಗಿ ನಮ್ಮ ಸಮಾಜಕ್ಕೆ ಇದೇ ತೆರನಾದ ನೂರಾರುಮಂದಿ ಆಚಾರ್ಯರು ಲಭಿಸುವಂತಾಗಲಿ ಎಂದು ಸರ್ವಶಕ್ತ ಶ್ರೀ ವಿಶ್ವಕರ್ಮೇಶನಲ್ಲಿ ಪ್ರಾರ್ಥಿಸುತ್ತಾ, ಶ್ರೀಮದಾಚಾರ್ಯರಿಗೆ ದೀರ್ಘಾಯುರಾರೋಗ್ಯ ಸಕಲ ಸಂಪತ್ತುಗಳೂ ದೊರೆಯಲೆಂದು ಪ್ರಾರ್ಥಿಸುತ್ತೇನೆ. ★



ಸಂಗ್ರಹ :

ವಿ. ಗುರುಲಿಂಗಾಚಾರ್ಯ

ಆಚಾರ್ಯರ ವಿಚಾರಧಾರೆ

ಶ್ರೀಮದಾಚಾರ್ಯರು ನನಗೆ ಬರೆದಿರುವ ಅನೇಕ ವಿಚಾರಪರಿಪ್ಲುತ ಪತ್ರಗಳಲ್ಲಿ ಕೆಲವನ್ನು ಅವರ ವಿಚಾರಧಾರೆಯನ್ನು ನಿರೂಪಿಸಲು ಇಲ್ಲಿ ಆಯ್ದು ಮಾಡಿ ಕೊಡುತ್ತಿದ್ದೇನೆ :

* * *

[ಪತ್ರ : ದಿನಾಂಕ ೨೪-೧೨-೧೯೭೫] ನಿತ್ಯಕರ್ಮಗಳ ವಿಚಾರವನ್ನು ಬರೆದಿದ್ದೀರಿ. 'ಸಂಧ್ಯಾರ್ಚನೆ' ಎಂದರೆ ಸಂಧ್ಯಾ–ದೇವತಾರ್ಚನೆಗಳೆರಡೂ ಸೇರಿವೆಯೋ ಹೇಗೇ? ಇಲ್ಲದಿದ್ದಲ್ಲಿ ಸಂಧ್ಯಾವಂದನೆಗೆ ಬದಲು ಸಂಧ್ಯಾರ್ಚನೆ ಎನ್ನುವುದು ಸರಿಹೋಗುವುದಿಲ್ಲ. ನಾನಾವಿಧ ಭಕ್ತಿಗಳಲ್ಲಿ ನಿಮಗೆ ಅರ್ಚನಂ, ವಂದನಂ, ದಾಸ್ಯಂ ಎಂಬುದು ಗೊತ್ತಿಲ್ಲವೇ? ವಂದನೆಯೇ ಬೇರೆ. ಅರ್ಚನೆಯೇ ಬೇರೆ. ಸಂಧ್ಯಾವಂದನೆ ಆಂತರಂಗಿಕವಾದುದು. ಅರ್ಚನೆ ಬಾಹ್ಯರೂಪದ್ದು ...

ಸಂಧ್ಯಾವಂದನೆ
ದೇವತಾರ್ಚನೆ

ಶ್ರೀ ಗಾಯತ್ರಿ ಜಪಕ್ಕೆ ಮೊದಲು ಪ್ರದರ್ಶಿಸಬೇಕಾದ ಚತುರ್ವಿಂಶತಿ ಮುದ್ರೆಗಳ ರೀತಿಗಳನ್ನು ಕೇಳಿದ್ದೀರಿ. ಅವನ್ನು ಭೇಟಿಯಾದಾಗ ತಿಳಿಸುತ್ತೇನೆ. ಅಲ್ಲದೆ ಮಂತ್ರವನ್ನು ಜಪಿಸಿದರೂ ಸಾಕು ಎಂಬ ಅಭಿಪ್ರಾಯವು ಕೆಲವು ವೈದಿಕರಲ್ಲಿರುತ್ತದೆ ....

ನಿಮ್ಮ ಪತ್ರದ ಕೊನೆಯಲ್ಲಿ ಶಿರಸಾಷ್ಟಾಂಗ ನಮಸ್ಕಾರಗಳು ಎಂದು ಬರೆದಿದ್ದೀರಿ. ಇದು ಸರಿಯಲ್ಲ. 'ಸಾಷ್ಟಾಂಗ' ಇದೆಯೇ ಹೊರತು ಶಿರ ಸಾಷ್ಟಾಂಗವಿಲ್ಲ. ಅಷ್ಟಾಂಗ ಸಹಿತ ವಾದದ್ದು ಸಾಷ್ಟಾಂಗ. ಅದರಲ್ಲಿ ಶಿರಸ್ಸೂ ಸೇರಿಹೋಗು ತ್ತದೆ. ನೋಡಿ —

ಅಷ್ಟಾಂಗ ನಮಸ್ಕಾರ

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ ।
ಪದ್ಭ್ಯಾಂ ಕರಾಭ್ಯಾಂ ಕರ್ಣಾಭ್ಯಾಂ ಪ್ರಣಾಮೋಽಷ್ಟಾಂಗ ಮುಚ್ಯತೇ ॥

* * *

[ಪತ್ರ ದಿನಾಂಕ : ೬-೧೦-೧೯೭೪] ನನ್ನ ಫೋಟೋ ಕೇಳಿದ್ದೀರಿ. ಸಿದ್ಧವಾಗಿರುವುದು ಇಲ್ಲ. ಮುಂದೆ ಎಂದಾದರೂ ತೆಗೆಸಿದಾಗ ಕಳುಹಿಸುತ್ತೇನೆ. ಮೂರ್ತಿಗಳು ಕಣ್ಣಿಗೆ ಮಾತ್ರ ತೃಪ್ತಿಕೊಡಬಹುದು. ಆದರೆ ತೃಪ್ತಿ ಪಡ ಬೇಕಾದುದು ಹೃದಯಗಳು. ಭಾವನಾ ಪ್ರಪಂಚದಲ್ಲಿ, ವಿಚಾರ ಕ್ಷೇತ್ರದಲ್ಲಿ ಸ್ಥಾನ ಸಿಕ್ಕಿದಂದು ಏನೋ ಅದೂ ಒಂದು ಬದುಕೆನ್ನಬಹುದು. ಆಭಾಗ್ಯ ನಮಗುಂಟೇ? ಭಗವಾನ್ ಬುದ್ಧನು ಯಜ್ಞವ್ಯಾಜದಿಂದ ಆಗುತ್ತಿದ್ದ ಪ್ರಾಣಿಹಿಂಸೆಯನ್ನು ತಪ್ಪಿಸಿ ಧರ್ಮಪ್ರವರ್ತಕನಾದನು. ಮಹಾತ್ಮಾಗಾಂಧಿ ಯವರು ಯುದ್ಧ ನಿಮಗ್ನ ಪ್ರಪಂಚಕ್ಕೆ ವಿಶ್ವಶಾಂತಿಯನ್ನು ಅಹಿಂಸಾಮಾರ್ಗದಿಂದಲೇ ಹೇಗೆ ಸ್ಥಾಪಿಸಬಹುದೆಂಬು ದನ್ನು ತೋರಿಸಿ ಪ್ರಪಂಚ ಚರಿತ್ರೆಯಲ್ಲಿ ಶಾಶ್ವತ ಸ್ಥಾನ ವನ್ನು ಸಂಪಾದಿಸಿದರು. ಪಂಡಿತ್ ಜವಹರಲಾಲ್ ನೆಹರು ಅವರು ವಿಚಾರ ಕ್ರಾಂತಿಯನ್ನು ಪ್ರಗತಿಪರತೆಯನ್ನು ತಮ್ಮ ನರನಾಡಿ ಗಳಲ್ಲೂ ಮೈಗೂಡಿಸಿಕೊಂಡಿದ್ದು ಅಂತಹ ಒಂದು ಗುಣ ನಾಡಿನಾದ್ಯಂತ ಮೈಸೇರಲೆಂದು ತಮ್ಮ ಚಿತಾಭಸ್ಮವನ್ನು ಧಾನ್ಯ ಬೆಳೆಯುವ ಕ್ಷೇತ್ರಗಳಲ್ಲಿ, ಕುಡಿಯುವ ನೀರಿನಲ್ಲೂ ಬಿತ್ತಿರೆಂದು ಮರಣಶಾಸನ ಮಾಡಿ ಜನ್ಮ ಸಾರ್ಥಕ ಮಾಡಿಕೊಂಡರು. ಮೊನ್ನೆತಾನೇ ಕಾಮರಾಜರು ಸಂಸಾರದಿಂದ ದೂರಾಗಿ ಪ್ರಜಾಸೇವೆಯನ್ನೇ ಜೀವನ ಧರ್ಮವಾಗಿ ಸ್ವೀಕರಿಸಿ ಅದರಲ್ಲೇ ಶರೀರವನ್ನು

ಫೋಟೋ ಚಿತ್ತ ಭಿತ್ತಿಯಲ್ಲಿರಬೇಕು

ಸವೆಯಿಸಿ ತ್ಯಾಗ ಮಾಡಿದರು. 'ಡಿವಿಜಿ' ಅವರಿಂದ ಕನ್ನಡ ಸಾಹಿತ್ಯಕ್ಕೆ ಎಂಥಾ ಅಚ್ಚಳಿಯದ ಕಾಣಿಕೆ ಸಂದಿದೆ! ಹಾಗೇ ಜನಾಂಗದ ಮನಃ ಪಟಲದ ಮೇಲೆ ನಾವು ಯಾವುದಾದರೊಂದು ಮುದ್ರೆಯನ್ನು ಮೂಡಿಸಲು ಸಮರ್ಥರಾದಾಗಲೇ ನಾವು ಹೃತ್ಪೂರ್ವಕವಾದ ಪೂಜೆಗೆ ಪಾತ್ರರಾಗುವುದು.

ನಾವು ದೇಶದ ಮೂಲೆ ಮೂಲೆಗಳಲ್ಲಿರುವ ಪ್ರತಿ ಹಳ್ಳಿ, ಪಟ್ಟಣಗಳಿಗೂ ತಿರುಗಿ ನಮ್ಮವರ ಅಜ್ಞಾನವನ್ನು ಹೋಗಲಾಡಿಸಿ, ಚೈತನ್ಯವನ್ನು ಮೂಡಿಸಲು ಇದುವರೆವಿಗೂ ಸಾಧ್ಯವಾಗಲಿಲ್ಲ. ಮತ್ತೆ ಪೂಜ್ಯತೆ ಎಲ್ಲಿ ಬಂತು? ಅಭಿಮಾನವು ಸಾಕು. ಸಹೋದರರಂತೆ ಸೇವಾ ಕ್ಷೇತ್ರದಲ್ಲಿರೋಣ ... ..

* * *

[ಪತ್ರ ದಿನಾಂಕ: ೧೯-೧೦-೧೯೭೯]....ಅದ್ವೈತಿಗಳು ಪ್ರಪಂಚವು ಮಿಥ್ಯ ಎಂಬುದನ್ನು, ವಿಶ್ವಕರ್ಮನು ಪ್ರಪಂಚವನ್ನು ಹೊರತಂದ ಸಗುಣರೂಪನು ಮಾತ್ರ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. ಅವನಿಗೆ ಸಗುಣ-ನಿರ್ಗುಣ ಎರಡೂ ಶಕ್ತಿಗಳಿರುತ್ತವೆ. ಬ್ರಹ್ಮನು ಸಗುಣನು ಎಂಬುದು ಈ ಮೊದಲೇ ನಿಮಗೆ ತಿಳಿಸಿದ್ದೇನೆ. ಅಂತಹ ಸಗುಣನಿಗೆ ಬ್ರಹ್ಮತ್ವವು ಸಿಗುವುದಾದರೆ ವಿಶ್ವಕರ್ಮನಿಗೆ ಆ ಶಕ್ತಿ ಇಲ್ಲವೇ? ಆ ವಸ್ತು ಅಕರ್ಮಿಯಾಗಿರುವುದು ಸಾಧ್ಯವೇ ಇಲ್ಲ. ಅವನು ಸತ್ ಅಷ್ಟೇ ಅಲ್ಲ, ಏಕ ಕಾಲದಲ್ಲಿ ಚಿತ್ತು-ಆನಂದ ರೂಪಗಳಿಂದಲೂ ತುಂಬಿ ತುಳುಕುತ್ತಿರುತ್ತಾನೆ. ಅವನಿಂದಲೇ ಉಕ್ಕಿಹರಿದ ಚಿದಾನಂದಗಳೇ ಈ (ವಿಶ್ವದ ದೇವತೆಗಳೂ, ಪ್ರಾಣಿಗಳೂ ಇರುವ) ಸೃಷ್ಟಿ. ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣನಾದ ಅವನೊಬ್ಬನೇ ಆಗಿರುವನಲ್ಲದೆ ಅವನಿಗಿಂತಲೂ ಮಿಗಿಲಾದದ್ದು ಮತ್ತೊಂದಿಲ್ಲ. ಆದುದರಿಂದ ಅವನ ಅವ್ಯಕ್ತಸ್ಥಿತಿ ನಿರ್ಗುಣ, ವ್ಯಕ್ತಸ್ಥಿತಿ - ವಿಶ್ವ - ಅವನ ಸಗುಣ ರೂಪ. ವಿಶ್ವಕ್ಕೆ ವಿಶ್ವಕರ್ಮನೊಬ್ಬನೇ ಎಲ್ಲವೂ ಆಗಿದ್ದಾನೆ.

ವಿಶ್ವಕರ್ಮ ಸಗುಣ-ನಿರ್ಗುಣ ಎರಡೂ

* * *

[ಪತ್ರ ದಿನಾಂಕ: ೩೦-೧೧-೭೭]....ನವೆಂಬರ್ ೭೭ರ ವಿಶ್ವಕರ್ಮಾ ಪತ್ರಿಕೆ ಬಂದಿದೆ. ಇದರಲ್ಲಿ ನಿಮ್ಮ 'ವಿಶ್ವಕರ್ಮದರ್ಶನ' ಲೇಖನ ಬಂದಿದೆ. ನೋಡಿದೆ. ಮಾರ್ಗದಲ್ಲಿರುವಿರೆಂದು ಸಮಾಧಾನವಾಯಿತು. ವೇದ ಕಾಲದ ವಿಶ್ವಕರ್ಮ

ಮಹಾತತ್ತ್ವವನ್ನು ಕೆಳಗಿಳಿಸಿ 'ಬ್ರಹ್ಮತ್ವ'ವು ಮೇಲೇರಿಬೇಕು. ಬ್ರಹ್ಮನಿಗೆ ಉನ್ನತಸ್ಥಾನವನ್ನು ಕೊಡಲು ಬ್ರಾಹ್ಮಣಗಳ ಕಾಲದಿಂದಲೇ ಮೊದಲಾಗಿ ಉಪನಿಷತ್ತುಗಳ ಕಾಲದಲ್ಲಿ ಅದು ಶಿಖರವನ್ನೇರಿತು. ಅವುಗಳಲ್ಲಿ ವಿಶ್ವ ಕರ್ಮನಿಗೆ ಕೊಡಬೇಕಾದ ಸ್ಥಾನವನ್ನು ಬ್ರಹ್ಮನಿಗೆ ಕೊಟ್ಟಿ ದ್ದಾರೆ. ಬ್ರಹ್ಮನಿಗೆ ಹೇಳಿರುವುದೆಲ್ಲಾ ವಿಶ್ವಕರ್ಮನಿಗೆ ಅನ್ವಯವಾಗುತ್ತದೆಂದು ತೀರ್ಮಾನಿಸಿ ವಿಶ್ವಕರ್ಮ ಮಹಿಮೆ ಯನ್ನು ನಾನು ವಿಶ್ವಕರ್ಮ ಪತ್ರಿಕೆಗೆ ಬರೆದಿದ್ದು. ಅದನ್ನು

ವಿಶ್ವಕರ್ಮಾ
ವಿಶ್ವಬ್ರಹ್ಮ

ನೀವು ನಿರ್ಗುಣ ಸ್ವರೂಪದ ವರ್ಣನೆಯಾಯಿತು ಎಂದು ಅಭಿಪ್ರಾಯ ಪಟ್ಟಿ ದ್ದೀರಿ. ಆದ್ದರಿಂದ ನೀವು ವಿಶ್ವಬ್ರಹ್ಮನೆನ್ನುವುದು ಅಷ್ಟು ಉಚಿತವಾಗಿ ಕಾಣಲಿಲ್ಲ. ನೀವೇ ಅಲ್ಲ ನಮ್ಮ ಹಿಂದಿನವರೂ ಒಂದು ಹೆಮ್ಮೆಯ ಮನೋ ಭಾವದಿಂದ ಆ ಪ್ರಯೋಗ ಮಾಡಿದ್ದಾರೆ. ಇದುವೇ ವೇದ ಋಷಿಗಳಿಗೆ ಮಾಡುತ್ತಿರುವ ಅವಮಾನ. ವಿಶ್ವಬ್ರಹ್ಮನೆನ್ನದೆ ವಿಶ್ವಕರ್ಮಾ ಎಂದಿದ್ದರಿಂದ ಅವರಿಗೆ ಲಭಿಸಿದ ಸಿದ್ಧಿ ಏನಾದರೂ ಕಡಿಮೆಯಾಗಿತ್ತೇ? ಯೋಚಿಸಿ. ತನ್ಮೂಲಕ ನಮ್ಮ ಕರ್ಮಯೋಗ ಸಿದ್ಧಾಂತಕ್ಕೂ, ಆ ಪದವು ಮುಂದಿಡುವ ವಿಶ್ವಧರ್ಮಕ್ಕೂ ನಾವು ಅಪಚಾರ ಮಾಡಿದ ಹಾಗಾಗುತ್ತದೆ. ಸರ್ವಾತ್ಮನಾ ವೇದೋಕ್ತ ಪದವನ್ನೇ ಎತ್ತಿ ಹಿಡಿಯಬೇಕು.

ನಿಮ್ಮ ಕಡೆ ವೀರಶೈವದ ಗಾಳಿ ಹೆಚ್ಚು ಬೀಸುತ್ತಿರುವಂತೆ ಕಾಣುತ್ತದೆ. ವಿಶ್ವಕರ್ಮ ವಚನಗಳನ್ನು ಆ ಮಾದರಿಯಲ್ಲಿ ರಚಿಸಲು ತೊಡಗಿರುವುದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ಅವರು ವಚನಗಳನ್ನು ಶ್ಲಾಘಿಸುವುದೂ, ವೇದೋಕ್ತಿಗಳಿಗೆ ಶಿವನನ್ನಾರೋಪಿಸುವುದೂ, ಪ್ರಚಾರ ಮಾಡುವುದೂ ಸ್ವಾಭಾವಿಕ. ಗಾಂಧೀಜಿಯವರು "ಎಲ್ಲಾ ಮತಗಳ ಗಾಳಿಗಳನ್ನು ನನ್ನ ಕಿಟಕಿ ಗಳ ಮೂಲಕ ಮನೆಯೊಳಕ್ಕೆ ಬಿಟ್ಟುಕೊಳ್ಳುತ್ತೇನೆ. ಆದರೆ ಅವು ಸುಂಟರ ಗಾಳಿಯಾಗಿ ನನ್ನ ಮನೆಯನ್ನು ಬೀಳಿಸಲು ಅವಕಾಶ ಕೊಡುವುದಿಲ್ಲ" ಎಂದು ಹೇಳಿರುವುದು ತುಂಬಾ ಸೂಕ್ತವಾದದ್ದು. ನಮ್ಮ ಮತ ತತ್ತ್ವ ಪ್ರಚಾರವಿಲ್ಲದೆ, ಗ್ರಂಥಗಳ ಪ್ರಚಾರವಿಲ್ಲದೆ ನಮ್ಮವರು ಇತರ ಮತ ತತ್ತ್ವಗಳನ್ನು ಉಚ್ಚರಿಸು ವುದೂ, ನಡೆ-ನುಡಿಗಳಲ್ಲಿ ಅವರನ್ನು ಅನುಕರಿಸುವುದೂ ಆಗಿ, ತಮಗೂ ಒಂದು ಸಂಪ್ರದಾಯವಿದೆ ಎಂಬುದನ್ನು ಮರೆಯುತ್ತಿದ್ದಾರೆ. ಇದನ್ನು ತಡೆಗಟ್ಟಲು

ನಿಮ್ಮಂತಹ ಲೇಖಕರು ವಿಶ್ವಕರ್ಮ ಸಾಹಿತ್ಯ ಪ್ರಕಾರ-ಪ್ರಕಾರಗಳಾಗಿ ರಚಿಸಲು ತೊಡಗಬೇಕು.

* * *

[ಪತ್ರ ದಿನಾಂಕ : ೩-೧೦-೧೯೭೮] ಪೌರುಷೇಯವೆಂದರೆ ವೀರತ್ವ ದಿಂದ ಬಾಳುವವರು ಎಂಬ ವ್ಯಾಖ್ಯಾನವು ಒಂದು ಲಾಕ್ಷಣಿಕ ಪ್ರಯೋಗ. ಸಭಾಸದರು ಪಾಮರರೆಂದು ತಿಳಿಯದೆ ಆ ಶಬ್ದಕ್ಕೊಂದು ಅರ್ಥವನ್ನು ಕೊಡ ಬೇಕೆಂದು ಉತ್ಸಾಹದಲ್ಲಿ ಹೇಳುವ ವ್ಯಾಖ್ಯಾನ. ಅದು ನಿಜವಾದ ಅರ್ಥವಲ್ಲದಿದ್ದರೂ ತತ್ಕಾಲಕ್ಕೆ ಮನರಂಜಕ ವಾಗಿ ಕಾಣುವ ಶಬ್ದಾರ್ಥದ ಒಂದು ಮುಖವೆಂದು ಒಂದು ವೇಳೆ ಹೇಳಬಹುದು. ಗುಣವಾಚಕಗಳನ್ನು ರೂಪಿಸು ವಾಗ ಉಪಯೋಗಿಸಲ್ಪಡುವ ಪ್ರತ್ಯಯಗಳಲ್ಲಿ ಈಯ ಎಂಬುದೂ ಒಂದು. ಇದು ಸಾಮಾನ್ಯವಾಗಿ ಮೂಲಶಬ್ದದ ತನೂಭವತ್ವವನ್ನು ಪ್ರಕಟಿಸುತ್ತದೆ. ವಂಶೀಯ, ರಾಜಕೀಯ, ರಾಧೇಯ, ನಾಸದೀಯ ಮುಂತಾಗಿ ಇದಕ್ಕೆ ಉದಾ ಹರಣೆಗಳಾಗಿ ಕೊಡಬಹುದು.

ಪೌರುಷ
ಪೌರುಷೇಯ

ಪೌರುಷೇಯ ಬ್ರಾಹ್ಮಣರೆಂದು ವಿಶ್ವಬ್ರಾಹ್ಮಣರಿಗೆ ಹೇಳಲ್ಪಟ್ಟಿರುವುದು ಇವರು ಕೇವಲ ಆರ್ಷೇಯರಲ್ಲ ಎಂದು. ಇದಕ್ಕೆ ಕಾರಣ ಇವರ ಮೂಲ ಪುರುಷ ರಾದ ಸಾನಗಾದಿ ಮಹರ್ಷಿಗಳು 'ಬ್ರಾಹ್ಮಣೋಽಸ್ಯಮುಖ ಮಾಸೀತ್' ಎಂಬ ಪುರುಷಸೂಕ್ತದ ಉಕ್ತಿಯಿಂದಲೇ ಅಲ್ಲ ಇತರ ಆಧಾರಗಳಿಂದಲೂ ಸಾಕ್ಷಾತ್ ವಿಶ್ವಕರ್ಮನ ಪಂಚಮುಖಗಳಿಂದ ಉದ್ಭವಿಸಿದರೆಂಬುದು ಆ ವಿಶ್ವಕರ್ಮನ ಇತರ ಅಂಗ ಗಳಾದ ಬಾಹುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಹುಟ್ಟಿದರು ಎಂಬುದಾಗಿ ಅದೇ ಸೂಕ್ತವು ಮುಂದೆ ಹೇಳುವು ದಿಲ್ಲವೇ? ಅಂತಹ ಮಾನವರು ತಮ್ಮ ಸಿದ್ಧಿಯಿಂದ ಬ್ರಾಹ್ಮಣ್ಯವನ್ನು ಪಡೆದು ಅವರಿಂದುಂಟಾದ ಸಂತಾನವು ಅವರ ಗೋತ್ರದ್ಧೆಂದು ಪ್ರಸಿದ್ಧಿ ಯಾಯಿತು. ಆದ್ದರಿಂದ ಇವರು ಕೇವಲ ಆರ್ಷೇಯರೆನಿಸಿದರು.

ಆದರೆ ಶರೀರಕ್ಕೆ ಶಿರವೇ ಪ್ರಧಾನವಾಗಿ, ಶಿರಸ್ಸಿಗೆ ಮುಖವೇ ಪ್ರಧಾನ ವಾಗಿ, ಮುಖಕ್ಕೆ ವಾಕ್ಕೇ ಪ್ರಧಾನವಾಗಿ, ಆ ವಾಕ್ ಸಂಬಂಧವಾದ ಜಗದ್ಭೋ

ದನಾ ಸಮರ್ಥರಾದ ಮನ್ವಾದಿ ಪಂಚಬ್ರಹ್ಮರು ಆವಿರ್ಭವಿಸಿ ಅವರ ಸಂತಾನದವರು ಪೌರುಷೇಯ ಬ್ರಾಹ್ಮಣರೆಂದು ಖ್ಯಾತರಾಗಿದ್ದಾರೆ. ಇದುವೇ ಪೌರುಷೇಯ ಶಬ್ದದ ನಿಜವಾದ ಅರ್ಥ. ಪೌರುಷ ಉಳ್ಳವರು ಎಂದಾಗ ಬೇಕಾದರೆ ಧನವಾನ್, ವಿದ್ವಾನ್, ವಿದ್ಯಾವಾನ್, ಗುಣವಾನ್, ಶ್ರೀಮಾನ್ ಎಂಬ ರೀತಿಯಲ್ಲಿ ಪೌರುಷವಾನ್ ಎಂದಿರಬೇಕಾಗಿತ್ತಲ್ಲವೇ? ರಂಜಕಾರ್ಥವನ್ನು ಕೊಡಲು ಕೆಲವರು ಯತ್ನಿಸಿದರೆ ನಾವೂ ಅವರ ಸಂತೋಷದಲ್ಲಿ ಪಾಲುಗೊಳ್ಳೋಣ. ಆದರೆ ನಿಜಾರ್ಥದ ಗ್ರಹಿಕೆಯಲ್ಲಿ ಹಿಂದಾಗಬಾರದು

* * *

[ಪತ್ರ ದಿನಾಂಕ: ೧೧-೧೧-೧೯೭೮]....ಪೌರುಷೇಯ ಸಂಬಂಧವಾದ ನಿಮ್ಮವಾದವು ಮತ್ತೊಂದು ದಾರಿಯನ್ನು ಹಿಡಿದಿರುವಂತೆ ಕಾಣುತ್ತದೆ. ಪೌರುಷೇಯರೆಂದರೆ ಪುರುಷ ಮುಖೋದ್ಭವರೆಂದು ಅರ್ಥವಾಗಿ ಪುರುಷ ಸೂಕ್ತದ ಪ್ರಕಾರವೇ ವಿಶ್ವಕರ್ಮ ಬ್ರಾಹ್ಮಣರಲ್ಲದೆ ಬೇರೆಯಲ್ಲವಾಗುವುದರಿಂದ ಇವರೇ ಪೌರುಷೇಯರೆಂದು ನಿಮ್ಮ ವಾದ ಇರುವಂತೆ ಕಾಣುತ್ತದೆ.

ಆರ್ಷೇಯತ್ವ

ವಿಶ್ವಕರ್ಮ ವಂಶೀಯರಿಗೆ ಪಂಚಾಲ ಬ್ರಾಹ್ಮಣ, ವಿಶ್ವಕರ್ಮ ಬ್ರಾಹ್ಮಣ, ಪೌರುಷೇಯ ಬ್ರಾಹ್ಮಣ ಇತ್ಯಾದಿ ಅನೇಕ ಪರ್ಯಾಯ ನಾಮಗಳಿವೆ. ಇದನ್ನು ಆರ್ಷೇಯ ಬ್ರಾಹ್ಮಣ ಪದಕ್ಕೆ ಒಮ್ಮೊಮ್ಮೆ ವಿರುದ್ಧವಾಗಿ ಉಪಯೋಗಿಸುವುದೂ ಉಂಟು. ಆದರೆ ಇದು ಸರಿಯಲ್ಲ. ಆರ್ಷೇಯ ಪದವೂ ಕೂಡ ನಮಗೆ ಸಲ್ಲುತ್ತದೆ. ಪ್ರಥಮತಃ ವಿಶ್ವಕರ್ಮನೊಬ್ಬನೇ ಋಷಿಯೆಂದು ವಿಶ್ವಕರ್ಮ ಸೂಕ್ತವು ಹೇಳುತ್ತದೆ. ಅಲ್ಲದೆ ಅವನ ಮುಖದಿಂದ ಉಂಟಾದ ಸಾನಗಾದಿ ಪಂಚರ್ಷಿಗಳೂ ಅವರುಗಳಿಂದ ಹುಟ್ಟಿದ ಇಪ್ಪತ್ತೈದು ಮಂದಿ ಗೋತ್ರರ್ಷಿಗಳೂ ಅವರಿಂದ ಹುಟ್ಟಿದ ನೂರಾಇಪ್ಪತ್ತೈದು ಮಂದಿ ಸೂತ್ರರ್ಷಿಗಳೂ, ಅವರಿಂದ ಹುಟ್ಟಿದ ನಾಲ್ಕುನೂರ ಎಪ್ಪತ್ನಾಲ್ಕು ಪ್ರವರರ್ಷಿಗಳೂ ನಮ್ಮ ಮೂಲ ಪುರುಷರೇ ಆಗಿದ್ದಾರೆ. ಆದ್ದರಿಂದ ನಾವು ಆರ್ಷೇಯರಲ್ಲವೆಂದು ಹೇಳಲಿಕ್ಕಾಗದು. ಆದರೆ ಈ ಋಷಿಗಳು ಮೂಲತಃ ಪುರುಷ ಮುಖೋದ್ಭವರಾದುದರಿಂದ ತಮ್ಮ ಸಾಧನೆಗಳಿಂದ ಋಷಿತ್ವವನ್ನು ಪಡೆದ ಇತರ ಋಷಿಗಳಿಗಿಂತಲೂ

ಭಿನ್ನರು ಎಂಬ ಅರ್ಥದಲ್ಲಿ ಪೌರುಷೇಯವೆಂದು ಬಹುಶಃ ಪರರೇ ಗುರ್ತಿಸಿರುವುದನ್ನು ಕೆಲವು ಪುರಾಣಗಳಲ್ಲಿಯೂ, ಕಾಶೀ ಕ್ಷೇತ್ರದ ವಿದ್ವಾಂಸರು ಕೊಟ್ಟಿರುವ ಚಪ್ಪೋಡುಗಳಲ್ಲಿಯೂ ಕಾಣಬಹುದು.

...... ಪುರುಷನನ್ನು ಯಜ್ಞಪಶುವನ್ನಾಗಿ ಮಾಡಿಕೊಂಡಿರುವುದರಲ್ಲಿ ವಾಚ್ಯಾರ್ಥಕ್ಕಿಂತಲೂ ಸೂಚ್ಯಾರ್ಥವೇ ಹೆಚ್ಚಾಗಿದೆ. ಋಗ್ವೇದದಲ್ಲಿ ಪುರುಷ ಸೂಕ್ತವು ವಿಶ್ವಕರ್ಮ ಸೂಕ್ತದ ನಂತರ ಬರುತ್ತದೆ. ವಿಶ್ವಕರ್ಮ ಸೂಕ್ತದಲ್ಲಿ ಹೇಳಲ್ಪಟ್ಟಿರುವ ವಿಶ್ವಕರ್ಮನ ಆತ್ಮಯಜ್ಞವೇ ಪುರುಷ ಸೂಕ್ತದಲ್ಲಿ ವಿಸ್ತರಿಸಲ್ಪಟ್ಟಿದೆ.

... ಜಗತ್ತು ಹೇಗೆ ನಿರ್ಮಾಣವಾಯಿತೆಂಬುದನ್ನು ತಿಳಿಯುವುದು ವೇದಋಷಿಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಅದಕ್ಕಾಗಿಯೇ ಅವರು ಅನೇಕ ಶಿಶಿರ, ವಸಂತ, ಗ್ರೀಷ್ಮ, ಶರದೃತುಗಳನ್ನು ತಪಸ್ಸಿನಲ್ಲಿ ಕಳೆದರು. ಆಗ ಅವರಿಗೆ ತಿಳಿಯಿತು ಅವನೇ ಮೊದಲಿನಿಂದಲೂ ಇದ್ದವನು, ಅವನಿಂದಲೇ ದೇವತೆಗಳೂ, ಸಿದ್ಧರು, ಸಾಧ್ಯರು, ಯಕ್ಷ, ಗಂಧರ್ವರು, ಕಾಡು ಪ್ರಾಣಿಗಳು, ಗ್ರಾಮ ಪಶುಸಂಪತ್ತು, ಋಕ್-ಯಜುಸ್-ಸಾಮಾದಿವೇದಗಳೂ, ಅವನ ಮುಖದಲ್ಲಿ ಬ್ರಾಹ್ಮಣರೂ, ತೋಳುಗಳಿಂದ ರಾಜರು, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ, ಮನಸ್ಸಿನಿಂದ ಚಂದ್ರ, ಕಣ್ಣುಗಳಿಂದ ಸೂರ್ಯ, ಮುಖದಿಂದ ಇಂದ್ರಾಗ್ನಿಗಳು, ಪ್ರಾಣದಿಂದ ವಾಯು, ನಾಭಿಯಿಂದ ಅಂತರಿಕ್ಷ, ಶಿರಸ್ಸಿನಿಂದ ಸ್ವರ್ಗ, ಪಾದದಿಂದ ಭೂಮಿ, ಕಿವಿಗಳಿಂದ ದಿಕ್ಕುಗಳೂ ಹಾಗೆಯೇ ಅನೇಕ ಲೋಕಗಳು ಹುಟ್ಟಿದವೆಂದು, ಇದೆಲ್ಲವೂ ಅವನ ಆತ್ಮಾಹುತಿಯಿಂದಲೇ ಸಾಧ್ಯವಾಯಿತೆಂಬುದನ್ನು ಮನಗಂಡರು. ಇಷ್ಟು ರೂಪಕಾರ್ಥವು ಅವನನ್ನು ಪಶುವನ್ನಾಗಿ ಮಾಡಿಕೊಂಡರು ಎಂಬ ಸಾಮಾನ್ಯ ಮಾತಿನಲ್ಲಿ ಅಡಗಿದೆ.

* * *

[ಪತ್ರ ದಿನಾಂಕ: ೧೯-೧೦-೧೯೭೯] ಗ್ರಂಥ ಪ್ರಕಟಣೆಗಾಗಿ ನಮ್ಮವರ ಮುಂದೆ ಕೈಯೊಡ್ಡುವುದು ಅವರಿಂದ 'ಮುಂದೆ ಹೋಗಿ' ಎಂದು ಹೇಳಿಸಿಕೊಳ್ಳುವುದಲ್ಲದೆ ಏನೂ ಸಫಲವಾಗುವುದಿಲ್ಲ ಎಂಬುದು ನನ್ನ ಖಚಿತಾಭಿ

ಸಾಹಿತ್ಯಕ್ಕೆ ಆಶ್ರಯ-ಪ್ರಚಾರ

ಪ್ರಾಯ. ಅಂತಹ ಕೊಡುಗೈ ಪ್ರಭುಗಳು ನಮ್ಮಲ್ಲಿ ಇದ್ದಿದ್ದಲ್ಲಿ ಇಂತಹ ಅವನತ ಸ್ಥಿತಿ ನಮ್ಮವರಿಗೆ ಎಂದಿಗೂ ಬರುತ್ತಿರಲಿಲ್ಲ. ಭಗವಂತನಲ್ಲಿ ಪ್ರಾರ್ಥಿಸೋಣ. 'ಅಂಥಾ (ದಾನಿಗಳು) ಗುಣದವರು ಹುಟ್ಟಲಿ. ಅಂಥಾ (ಸ್ವಧರ್ಮ ಜ್ಞಾನ) ಬುದ್ಧಿ ಹುಟ್ಟಲಿ' ಎಂದು.

ವಿಶ್ವಕರ್ಮ ಧರ್ಮ ಗ್ರಂಥಗಳು ದೇವಸ್ಥಾನಗಳಲ್ಲಿ, ದೊಡ್ಡವರ ಮನೆಗಳಲ್ಲಿ, ಜಗುಲಿ ಕಟ್ಟೆಗಳ ಮೇಲೆ, ಅರಳೀ ಕಟ್ಟೆಗಳ ಮೇಲೆ ಅವ್ಯಾಹತವಾಗಿ ಓದಲ್ಪಟ್ಟು, ಜನರಿಗೆ ಇವರ (ವಿಶ್ವಕರ್ಮದ) ವಿಷಯವಾಗಿ ಈವರೆಗೆ ತಿಳಿಯಲ್ಪಟ್ಟಿದ್ದರೆ ನಮ್ಮ ಸಮಾಜ ಧರ್ಮಪ್ರಸಾರ ಮಾರ್ಗದಲ್ಲಿ ಈ ಅವನತಸ್ಥಿತಿಗಿಳಿಯುತ್ತಿತ್ತೇ ? ನಮ್ಮಲ್ಲಿ ಜನರಿಗೆ ತಮ್ಮ ಮತ ಗ್ರಂಥಗಳನ್ನು ಓದಿ, ಕೇಳಿ, ಉಪನ್ಯಾಸಗಳನ್ನು ಆಲಿಸುವ ಆಸಕ್ತಿ ಇದ್ದಿದ್ದರೆ ಅದೆಂತಹ ಸೊಗಸಿರುತ್ತಿತ್ತು !

* * *

ಆಚಾರ್ಯರ 'ಆತ್ಮಕಥೆ'ಯ ಪರಿಸಮಾಪ್ತಿಯಲ್ಲಿ ಹೇಳಿರುವ ತಮ್ಮ **ಆಶೆ-ಆಕಾಂಕ್ಷೆಗಳು** ಇಂತಿವೆ—

ನಮ್ಮ ಅಧ್ಯಯನದಲ್ಲಿ ಆದ್ಯತೆಯು ನಮ್ಮ ಮತ ಗ್ರಂಥಗಳಿಗೆ ದೊರೆಯಬೇಕಾಗಿದೆ. ನಮ್ಮಲ್ಲಿ ಮತ ಗ್ರಂಥಗಳ ಪರಿಚಯ, ಅವುಗಳ ಅಧ್ಯಯನ ಮಾಡದೆ ಪರ ಗ್ರಂಥಗಳನ್ನೇ ಹಿಡಿದು ನಮ್ಮಲ್ಲೇನೂ ಇಲ್ಲ ಇರುವುದೆಲ್ಲಾ ಅವರದೇ ಎಂಬುದಾಗಿ ತಿಳಿದು, ನಮ್ಮ ಆತ್ಮ ಗೌರವಕ್ಕೆ ತಿಲಾಂಜಲಿಯನ್ನು ಕೊಟ್ಟಿರುವ ಮನೋಭಾವವು ಹೆಚ್ಚು ಜನರನ್ನು ಆವರಿಸಿದೆ. ಸುಲಭ ಶೈಲಿಯಲ್ಲಿ ಮತಗ್ರಂಥಗಳು ಹೊರ ಬರಬೇಕು. ಎಷ್ಟು ಗ್ರಂಥಗಳು ಬಂದರೂ ನಮ್ಮವರಲ್ಲಿ ಓದುವವರು ಕಡಿಮೆಯಾಗಿದ್ದಾರೆ. ಇದಕ್ಕಾಗಿ ಪ್ರವಚನಗಳು ಅವಶ್ಯಕವಾಗಿ ನಡೆಯಬೇಕು. ನಮ್ಮವರು ಅಲ್ಲಲ್ಲಿ ಸೇರಿ ನಮ್ಮ ಮತ-ಧರ್ಮದ ಆಚಾರಗಳನ್ನೂ ಸ್ತೋತ್ರಮಂತ್ರಗಳನ್ನೂ ಹೇಳುವುದನ್ನು ಕಲಿಯಬೇಕು. ಮತ ಸಾಹಿತ್ಯವನ್ನು ಓದಿಸಿ ಕೇಳಬೇಕು. ಇದಕ್ಕಾಗಿ ಸಂಘ-ಸಂಸ್ಥೆಗಳ ಅವಶ್ಯಕತೆ ಹೆಚ್ಚಾಗಿ ಇದೆ.

ಸ್ವಧರ್ಮ ಪ್ರಚಾರ

ನಮ್ಮವರು ಅಲ್ಲಲ್ಲಿ ಆಗಾಗ್ಗೆ ಸೇರಲು ಅವರು ದೂರ ದೂರದಲ್ಲಿ ಇರುವುದು ಒಂದು ಕಾರಣ. ಎಷ್ಟೇ ದೂರವಿದ್ದರೂ ನಮ್ಮವರು ಮನಸ್ಸಿನಿಂದ ದೂರವಾಗಿಲ್ಲದಿದ್ದರೆ ಅಸಾಧ್ಯವೂ ಸಾಧ್ಯವಾಗುತ್ತದೆ; ಎಲ್ಲವೂ ಸುಖಕರವಾಗುವುದು. ಒಂದೊಂದು ಪ್ರದೇಶದವರಾದರೂ, ಸಣ್ಣ ಸಣ್ಣದಾಗಿಯೇ ಸೇರಿದರೂ ಎಷ್ಟೋ ಸಂತೋಷ-ಸೌಹಾರ್ದ ವಾತಾವರಣವೇರ್ಪಡುವುದು. ತಮಗಿರುವ ಅನುಕೂಲ್ಯಮದದಿಂದ ಇಂಥಾ ಸೇರುವಿಕೆ, ಇಂಥಾ ಒಡನಾಟ ಅನಾವಶ್ಯಕವೆಂದು ತಿಳಿಯಬಾರದು. ಇದು ನಮ್ಮ ಪೀಳಿಗೆಯನ್ನು, ನಮ್ಮ ಮುಂದಿನ ಪೀಳಿಗೆಯನ್ನು ದುರ್ಮಾರ್ಗಕ್ಕೆ ಎಳೆಯುತ್ತದೆ. ಅವರಿಗೆ ಧರ್ಮದ ತಳಹದಿ

ಸಂಘಟನೆ

ಇಲ್ಲದಿದ್ದರೆ ಅಧರ್ಮದ ಪ್ರಾಪಂಚಿಕ ವ್ಯವಹಾರಕ್ಕೆ ಇಳಿದು ಪತಿತರಾಗುವರು. 'ಧರ್ಮ ಏವ ಹತೋಹಂತಿ ಧರ್ಮೋ ರಕ್ಷತಿ ರಕ್ಷಿತಃ' ಧರ್ಮವನ್ನು ಕಾಪಾಡಿಕೊಂಡರೆ ನಮ್ಮನ್ನೇ ಅಲ್ಲದೆ ಮುಂದಿನ ಪೀಳಿಗೆಯನ್ನೂ ಅದು ರಕ್ಷಿಸಬಹುದು. ಇಲ್ಲದಿದ್ದಲ್ಲಿ ನಮ್ಮ ಜೊತೆಯಲ್ಲಿ ನಮ್ಮ ಪೀಳಿಗೆಯೂ ಹಾಳಾಗುವುದನ್ನು ನಮ್ಮ ಕಣ್ಣಿಂದಲೇ ನೋಡಬೇಕಾಗುತ್ತದೆಯೋ ಏನೋ! ಹಾಗಾದಲ್ಲಿ ನಾವು ಏನು ಗಳಿಸಿ ಏನು ಸಾರ್ಥಕ!

ನಮ್ಮ ಬಾಲಕರಿಗೆ ಪ್ರಾತರುತ್ಥಾನ, ದೇವಸ್ಮರಣೆ, ಸ್ನಾನ-ಸಂಧ್ಯಾ, ದೇವತಾರ್ಚನೆ ಮುಂತಾದ ಶಿಸ್ತುಗಳನ್ನು ಕಲಿಸದಿದ್ದರೆ ಮುಂದೆ ಅವರು ಯಾವ

ಅನುಷ್ಠಾನ

ಶಿಸ್ತಿಗೂ ಒಳಪಡರು. ಸ್ವಚ್ಛಂದ ವೃತ್ತಿಗೆ ಆರಂಭಿಸಿ ದೇಶಕ್ಕೆ ಹೊರೆಯಾಗುವರು. ಅವರಿಂದ ಯಾವ ದೇಶೋಪಕಾರವೂ ನಡೆಯದೇ ಹೋಗುವುದು. ಯಾವುದೇ ಮಾರ್ಗದಿಂದಲಾದರೂ ಸ್ವೋಪಕಾರ ನಿರತರಾಗುವರು.

ನಮ್ಮವರು ಎಲ್ಲಾ ಊರುಗಳಲ್ಲೂ ಸಂಘಟಿತರಾಗಬೇಕು. ಪ್ರತಿ ಊರಿನಲ್ಲೂ, ಗ್ರಾಮದಲ್ಲೂ ಸಂಘವೊಂದಿರಬೇಕು. ಈ ರೀತಿಯ ಎಲ್ಲಾ ಸಂಘ-ಸಂಸ್ಥೆಗಳ ಸಂಘಟನೆ ರಾಜ್ಯಮಟ್ಟದಲ್ಲಾಗಬೇಕು. ಈ ಕೆಲಸವು ಬೆಂಗಳೂರಿನ ರಾಷ್ಟ್ರೀಯ ವಿಶ್ವಕರ್ಮ ಸಮಾಜದಂತಹ ಪ್ರಧಾನ ಸಂಘದ

ಮೂಲಕ ಆಗಬೇಕು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಭೇಟಿ ಕೊಟ್ಟು ಅಲ್ಲಿ ಜಿಲ್ಲಾ ಸಂಘಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ತಾಲ್ಲೂಕು ಸಂಘಗಳು, ಹೋಬಳಿ (ಗುಂಪು ಗ್ರಾಮಗಳು) ಸಂಘಗಳನ್ನು ಏರ್ಪಾಟುಮಾಡಿ ಪ್ರತಿ ಜಿಲ್ಲೆಯಿಂದಲೂ ಪ್ರತಿನಿಧಿಗಳನ್ನು ಆರಿಸಿಕೊಂಡು ಕೇಂದ್ರ ಸಂಘವನ್ನು ಬಲಪಡಿಸಿಕೊಳ್ಳಬೇಕು. ಈ ಸಂಘಗಳಿಗೆ ಭೇಟಿ ನೀಡಿದಾಗ ಸಭೆಗಳನ್ನು ನಡೆಸಿ ಧಾರ್ಮಿಕ ತಿಳುವಳಿಕೆಯನ್ನು ಕೊಡುವುದಲ್ಲದೆ ಆಯಾ ಪ್ರದೇಶದ ಆರ್ಥಿಕ ಸಾಮಾಜಿಕ ಕುಂದುಕೊರತೆಗಳನ್ನು ತಿಳಿದು ಅವಕ್ಕೆ ಪರಿಹಾರ ಮಾರ್ಗವನ್ನು ಸಮಾಲೋಚಿಸಬೇಕಾಗುತ್ತದೆ. ಇದಕ್ಕೆ ಕೇಂದ್ರ ಸಂಘದಲ್ಲಿ ಒಂದು ಲಕ್ಷ ರೂಪಾಯಿಗಳಷ್ಟಾದರೂ ಮೂಲನಿಧಿ ಆಗಬೇಕು. ಅದರ, ಉತ್ಪತ್ತಿಯಿಂದ ಈ ಸಮಾಜದ ಕಾರ್ಯ ನಿರಂತರವಾಗಿ ನಡೆಯಬೇಕು. ಕಾರ್ಯಕರ್ತರ ವೆಚ್ಚವನ್ನು ಕೇಂದ್ರ ಸಂಘ ಭರಿಸುವಂತಿರಬೇಕು. ಸಾಹಿತ್ಯ ಮತ್ತು ತಿಳುವಳಿಕೆಯ ಪತ್ರಿಕೆಗಳನ್ನು ಉಚಿತವಾಗಿ ಹಂಚುವಂತಹ ವ್ಯವಸ್ಥೆಯನ್ನು ಮಾಡಬೇಕು.

ವ್ಯವಸ್ಥಿತ ಕೇಂದ್ರ ಸಂಘ ಮತ್ತು ಶಾಖೆಗಳು

ಇದಿಷ್ಟು ರಾಜ್ಯದಲ್ಲಿ ನಡೆಸಬೇಕಾದ ಕಾರ್ಯಕ್ರಮವಾದರೆ ಭಾರತ ದೇಶದ ಇತರ ಎಲ್ಲಾ ರಾಜ್ಯಗಳಿಗೂ ಭೇಟಿ ನೀಡಿ, ಅಲ್ಲಿಯ ಬಂಧುಗಳ ವಿಚಾರ ತಿಳಿದು, ಅಲ್ಲಿಯ ಸಂಘ ಸಂಸ್ಥೆಗಳೊಂದಿಗೆ ಬಾಂಧವ್ಯ ಬೆಳೆಸಿಕೊಂಡು ರಾಷ್ಟ್ರಮಟ್ಟದಲ್ಲಿ ಬಲವಾಗಬೇಕಾದ ಅವಶ್ಯಕತೆ ಇನ್ನೊಂದು ಮುಖ.

ನಮ್ಮ ಧರ್ಮ ಪ್ರಚಾರ ಮತ್ತು ನಮ್ಮ ಸಮಾಜದ ವಿದ್ಯಾಭಿವೃದ್ಧಿಯಾಗಬೇಕಾದರೆ ಸ್ವಸಂಸಾರ ಯೋಚನೆ ಇಲ್ಲದಿರುವ, ಸಮಾಜಕ್ಕೆ ತಮ್ಮ ಜೀವನವನ್ನು ಸಮರ್ಪಿಸಿರುವ ವಿರಕ್ತ ಗುರುಮಠವೊಂದು ನಮ್ಮಲ್ಲಿರಬೇಕು. ಅದಕ್ಕೂ ಮೂಲನಿಧಿಯೊಂದು ಏರ್ಪಟ್ಟು ಅದರಿಂದ ಮಠದ ದೈನಂದಿನ ವ್ಯವಹಾರವು ಸಾಗುವಂತಾಗಬೇಕು. ಗುರುಗಳಾಗಿರುವ ಬ್ರಹ್ಮಚಾರಿಗಳಾದ ಗುರುಗಳ ಜೀವನ ನಿರಾತಂಕವಾಗಿ ನಡೆಯಬೇಕು. ಆಗ ನಮ್ಮ ಧರ್ಮವು ಜನರ ಮನದಲ್ಲಿ ತನ್ನ ಪ್ರಭಾವವನ್ನು ಅಚ್ಚೊತ್ತಬಲ್ಲದು. ಸಮಾಜೋನ್ನತಿ ನಿರಾತಂಕವಾಗಿ ಸಾಗಬಲ್ಲದು.

ಬ್ರಹ್ಮಚಾರಿ ಗುರುಪೀಠ

ನಮ್ಮ ಮತಗ್ರಂಥಗಳಾದ ಮೂಲಸ್ತಂಭ, ವಿಶ್ವಕರ್ಮ ಪುರಾಣ, ವಿಶ್ವಕರ್ಮಾನ್ವಯ ಪ್ರದೀಪಿಕೆ, ರಥಕಾರಾಧಿಕರಣ, ವಿಶ್ವಕರ್ಮಾನ್ವಯಭೂಷಣ, ವಿಶ್ವಕರ್ಮ ಬ್ರಾಹ್ಮಣ ವಂಶಾಗಮವು, ವಿಶ್ವಬ್ರಹ್ಮಕುಲೋತ್ಸಾಹ ಮುಂತಾದವುಗಳ ತೌಲನಿಕ ಅಧ್ಯಯನ ನಡೆದು ಅವುಗಳ ಸಾರಾಂಶವು ಸುಲಭ ಶೈಲಿಯಲ್ಲಿ ಎಲ್ಲರಿಗೂ ಸುಲಭವಾಗಿ ಗ್ರಾಹ್ಯವಾಗುವಂತೆ ವ್ಯವಸ್ಥೆಯಾಗಬೇಕು. ಹಳ್ಳಿಹಳ್ಳಿಯ ಜಗುಲಿಗಳ ಮೇಲೆ ಈ ಗ್ರಂಥಗಳ ಪ್ರವಚನಗಳು ನಡೆದಂದೇ ನಮ್ಮ ಜನಾಂಗವು ಬೆಳಕನ್ನು ಕಾಣಲು ಸಾಧ್ಯವಾಗುವುದು. ಇಂಥ ಒಂದು ತೌಲನಿಕ ಅಧ್ಯಯನವನ್ನು ನಡೆಸುವುದು ನನ್ನ ಗುರಿಯಾಗಿದೆ. ಜಟಕಾ ಕುದುರೆಯಂತೆ ಇತರ ಧರ್ಮಗಳಿಗೆ ನಮ್ಮನ್ನು ಕುರುಡಾಗಿಸಿಕೊಂಡು ಮತ ಗ್ರಂಥಗಳನ್ನು ಅಧ್ಯಯನ ಮಾಡಬಾರದು. ಜೊತೆಜೊತೆಯಲ್ಲೇ ತೌಲನಿಕವಾಗಿ ಎಲ್ಲಾ ಧರ್ಮಗಳ ಅಧ್ಯಯನವನ್ನೂ ನಮ್ಮಲ್ಲಿಯ ಬುದ್ಧಿಜೀವಿಗಳು ನಡೆಸಬೇಕು. ಈಗಾಗಿರುವಂತೆ ಕೇವಲ ಅನ್ಯರನ್ನೇ ಅರಿತು ತೃಪ್ತಿಗೊಳ್ಳುವಂತಾಗಬಾರದು.

ಪ್ರಚಾರ, ತೌಲನಿಕ ಅಧ್ಯಯನ

ನಮ್ಮವರು ಕಲೆಯನ್ನು ಬಲ್ಲರು. ಶಿಲ್ಪ ಶಾಸ್ತ್ರವು ಎಷ್ಟೋ ಮಂದಿ ಶಿಲ್ಪಿಗಳ ಕುರುಡು ಕಟ್ಟಿಗೆ ಸಿಕ್ಕಿಬಿದ್ದಿದೆ. ಅವರನ್ನು ಶಾಸ್ತ್ರೀಯ ರೀತಿಯಲ್ಲಿ ಅವರಿಗೆ ತಿಳಿಸುವುದು ಅವಶ್ಯಕವಾಗಿದೆ. ಅವರ ಉಪಯೋಗಕ್ಕೆ ಸಂಗ್ರಹ ರೂಪದಲ್ಲಾದರೂ ಶಿಲ್ಪಶಾಸ್ತ್ರ ತಿಳಿಸಲ್ಪಡಬೇಕು.

ಶಿಲ್ಪಶಾಸ್ತ್ರ ಪ್ರಕಾಶನ

ಮ. ಗಂಗಾಧರಮೂರ್ತಿಗಳ ನಿತ್ಯ ಕರ್ಮಾನುಷ್ಠಾನ ಸಂಗ್ರಹ, ಯಾಜುಷೀ ಗೃಹ್ಯಬೋಧಿನೀ ಮುಂತಾದ ಕೃತಿಗಳು ಈಗ ಲಭ್ಯವಿಲ್ಲ. ಅನೇಕರು ಅವನ್ನು ಅಪೇಕ್ಷಿಸುತ್ತಿದ್ದಾರೆ. ಅವುಗಳ ಪುನರ್ಮುದ್ರಣದ ವ್ಯವಸ್ಥೆಯಾಗಬೇಕು. ಸಾಧ್ಯವಿಲ್ಲದಿದ್ದಲ್ಲಿ ತಕ್ಕ ತಿಳುವಳಿಕೆಯೊಂದಿಗೆ ಅವುಗಳನ್ನು ಸಂಗ್ರಹ ರೂಪದಲ್ಲಾದರೂ ಹೊರತರಬೇಕೆಂದು ಪ್ರಯತ್ನಿಸುತ್ತಿದ್ದೇನೆ.

ಪುನರ್ ಮುದ್ರಣ

ನಮ್ಮ ಮತ ವಿಷಯಿಕವಾದ ಅನೇಕ ಗ್ರಂಥಗಳು ನೆರೆಯ ರಾಜ್ಯಗಳ

ಭಾಷೆಗಳಲ್ಲಿ—ಮುಖ್ಯವಾಗಿ ಆಂಧ್ರದಲ್ಲಿ—ಪ್ರಕಟವಾಗಿವೆ. ಅವೆಲ್ಲವೂ ಅನುವಾದಗೊಂಡು ನಮ್ಮಲ್ಲಿ ಬರಬೇಕು, ಜನರಲ್ಲಿ ಪ್ರಚಾರಕ್ಕೆ ಬರಬೇಕು.

ಇತಿಹಾಸ ಕಾಯ್ದಿರಿಸುವ ಪ್ರಯತ್ನಗಳು

ನಮ್ಮ ಜನಾಂಗದಲ್ಲಿ ಹಿಂದೆ ಆಗಿಹೋದ ಮಹಾಪುರುಷರ ಬಗ್ಗೆ, ಜನಾಂಗದ ನಾಯಕರಾಗಿ ತಮ್ಮ ಜೀವನವನ್ನು ಈ ಸಮಾಜದ ಉದ್ಧಾರಕ್ಕಾಗಿ ಸವೆಸಿರುವ ಮಹನೀಯರ ಜೀವನ ಪರಿಚಯ, ನಮ್ಮವರು ಬಹುವಾಗಿ ಕೇಂದ್ರೀಕರಿಸಿರುವ ಸ್ಥಳಗಳ ಪೂರ್ವೇತಿಹಾಸ, ಪ್ರತಿಭಾವಂತರ ಪರಿಚಯ ಇತ್ಯಾದಿಗಳ ಕ್ಷೇತ್ರದಲ್ಲಿ ಬಹುವಾದ ಸಾಮಗ್ರಿ ನಮ್ಮಲ್ಲಿದ್ದರೂ ಪ್ರಕಟವಾಗಿರುವ ಕೃತಿಗಳ ಲೆಕ್ಕದಲ್ಲಿ ಸೊನ್ನೆಯೇ. ಈ ಪೂರ್ವ ಚರಿತ್ರೆ, ಮಹನೀಯರ ಜೀವನ ಚಿತ್ರಗಳನ್ನು ನಾವು ರಕ್ಷಿಸದೆಹೋದರೆ ನಮ್ಮ ಪೂರ್ವೇತಿಹಾಸವೇ ಕರಗುತ್ತದೆ. ಮುಂದಿನ ಪೀಳಿಗೆಗೆ ನಾವು ಯಾವ ರೀತಿಯ ಅನುಭವದ ಸಾಮಗ್ರಿಯನ್ನೂ ಬಿಟ್ಟು ಹೋಗದವರಾಗುತ್ತೇವೆ. ಈ ದಿಶೆಯಲ್ಲಿ ನಾವು ಕಾರ್ಯನಿರತರಾಗಬೇಕಾಗುತ್ತದೆ.

ವೇದಾಭ್ಯಾಸದತ್ತ ನಮ್ಮವರು ಹೆಚ್ಚು ಹೆಚ್ಚು ಗಮನ ನೀಡಿ ಸಕ್ರಮ ವೇದಪಾಠಕ್ಕೆ ಕನಿಷ್ಠ ಜಿಲ್ಲೆಗೊಂದಾದರೂ ಕೇಂದ್ರ ಸ್ಥಾಪಿಸಬೇಕು.

ಜ್ಯೋತಿಷ್ಯದಲ್ಲೂ ಲಗ್ನ ನಿರ್ಣಯ, ಭಾವ ಫಲಬೋಧಿನಿ ಮುಂತಾದ ಗ್ರಂಥಗಳನ್ನು ಪ್ರಕಟಿಸಬೇಕೆಂದು ಉದ್ದೇಶವಿದೆ.

ಇದಕ್ಕೆಲ್ಲಾ ಎಷ್ಟರಮಟ್ಟಿಗೆ ಸಹಕಾರ ಸಿಗುವುದೋ, ಎಷ್ಟರಮಟ್ಟಿಗೆ ನನ್ನಲ್ಲಿಯೇ ಶಕ್ತಿ ಸಾಮರ್ಥ್ಯಗಳುಳಿಯುವುವೋ, ಎಷ್ಟರಮಟ್ಟಿಗೆ ನನ್ನ ಜೀವಿತಾವಧಿಯಲ್ಲಿ ಸಾಧ್ಯವಾಗುವುದೋ ಅದೆಲ್ಲವೂ ಸರ್ವಶಕ್ತನಾದ ಆ ವಿಶ್ವಕರ್ಮ ಭಗವಂತನ ಕೃಪೆಯನ್ನವಲಂಬಿಸಿದೆ. ★



ಆಚಾರ್ಯ ರತ್ನ ಶ್ರೇಷ್ಠ

ಧರ್ಮಜ್ಯೋತಿಯು ಬೆಳಗಬೇಕಾದರೆ ಗುರುಪೀಠಗಳು ಜ್ಞಾನ ರೂಪೀ ತೈಲವಾದರೆ, ವೈದಿಕ ಆಚಾರ್ಯರು ಕರ್ಮರೂಪೀ ಬತ್ತಿ. ತನ್ನನ್ನು ತಾನೇ ಸುಟ್ಟುಕೊಂಡು ಸಮಾಜಕ್ಕೆ ಗುರುತತ್ತ್ವ-ಧರ್ಮತತ್ತ್ವ ಬೋಧನೆಯ ಬೆಳಕನ್ನು ಕೊಟ್ಟು ಪೋಷಿಸಬೇಕಾಗುತ್ತದೆ. ಯಾವುದೇ ಸಮಾಜದಲ್ಲಿ ಜ್ಞಾನ ಬೆಳಗಲು ಗುರು-ಆಚಾರ್ಯರಿಬ್ಬರೂ ಒಬ್ಬರಿಗೊಬ್ಬರು ಪೂರಕರು. ಒಂದೇ ತತ್ತ್ವದ ಪ್ರಚಾರಕರು. ಒಂದೇ ನಾಣ್ಯದ ಎರಡು ಮುಖಗಳು. ಒಂದು ಶುದ್ಧ ಜ್ಞಾನ; ಮತ್ತೊಂದು ಶುದ್ಧ ಕರ್ಮ. ಇವೆರಡೂ ಒಂದಕ್ಕೊಂದು ಪೂರಕವಾದಾಗಲೇ ಜೀವನ ಧರ್ಮ ವಿಕಾಸವಾಗುತ್ತದೆ. ಕರ್ಮ ಜ್ಞಾನ ಸಮುಚ್ಚಯವೇ ವೈಶ್ವ ಕರ್ಮಣ ಧರ್ಮದ ತಳಹದಿ. ಶುದ್ಧಕರ್ಮವು ಜ್ಞಾನದಲ್ಲಿ ಪರಿವರ್ತಿತಗೊಂಡು ಮಾನವನನ್ನು ದೇವನನ್ನಾಗಿ ಮಾಡುತ್ತದೆ.



ಮಲ- ವಿಕ್ಷಪ್ತ – ಆವರಾಣಾದಿಗಳಿಂದ ಆವೃತ್ತನಾಗಿರುವ ಮಾನವನಿಗೆ ದ್ವಿಜತ್ವವನ್ನು ಸಿದ್ಧಿಸಿ ಕೊಟ್ಟು, ತತ್ತ್ವಜ್ಞಾನವನ್ನು ಕೊಟ್ಟು

ಸದಾಚಾರ, ಸನ್ಮಾರ್ಗಕ್ಕೆ ಹಚ್ಚುವವನೇ ಆಚಾರ್ಯ. ಈ ಮಹತ್ವವನ್ನು ಅರಿತು ಆಚಾರ್ಯರ ಹಾದಿಯಲ್ಲಿ ನಡೆಯುತ್ತಾ ಸಮಾಜದ ಪಾಲಿಗೆ ದಾರಿದೀಪವಾಗಿರುವವರು ಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು.

ಅವರ ಗುರುಭಕ್ತಿ, ಸಮಾಜ ಪ್ರೇಮ, ವೈದಿಕ ವಿದ್ವತ್ತು ಅಪೂರ್ವ. ಅವರ ಅಸ್ಖಲಿತವಾಣಿಯನ್ನು, ಅವರ ವೈದಿಕ ಕ್ರಿಯೆಗಳನ್ನು ಕಂಡ ಯಾರಾದರೂ ಆಕರ್ಷಿತರಾಗದೆ ಇರಲು ಸಾಧ್ಯವೇ ಇಲ್ಲ. ಅವರ ವೇದ ಘೋಷ ಕೇಳಿದಾಗಲೆಲ್ಲಾ ಪುಲಕಿತಗೊಳ್ಳುತ್ತೇವೆ. ನಾವು ೧೯೬೮ರಲ್ಲಿ ಶಹಪುರದಲ್ಲಿ ನಡೆಸಿದ ವೈಶ್ವಕರ್ಮಣ ಯಾಗದಲ್ಲಿ ಪುಣೆಯ ಪದ್ಮಾಕರಶಾಸ್ತ್ರಿಗಳು ಪ್ರಧಾನಾಚಾರ್ಯರಾಗಿದ್ದರು. ಅವರೊಂದಿಗೆ ಶ್ರೀ 'ನಾಭಾ' ಅವರೂ ಆಗ ಸೇರಿದ್ದರೆ ಕಾರ್ಯಕ್ರಮಕ್ಕೆ ಮತ್ತೆಷ್ಟು ಶೋಭೆ ಬರುತ್ತಿತ್ತು ಎಂದು ಈಗಲೂ ಆಗಾಗ ಕಲ್ಪಿಸಿ ಕೊಳ್ಳುತ್ತಿರುತ್ತೇವೆ.

ಸತ್ಯ ಸದಾಚಾರ ಸಂಪನ್ನರು, ಸವಿನಯ ಭಾಷಿಗಳಾದ ಶ್ರೀ 'ನಾಭಾ' ಅವರಿಗೆ ಸಾಹಿತ್ಯ ಸರಸ್ವತಿಯೂ ಒಲಿದಿದ್ದಾಳೆ. ಚತುರ್ಭಾಷಾವಿದರಾಗಿರುವರು. ಒಳ್ಳೆಯ ವಾಗ್ಮಿಗಳು. ಇಂತಹ ರತ್ನಶ್ರೇಷ್ಠರಾದ ಆಚಾರ್ಯರನ್ನು ಅರಿಯುವುದು ಎಂದರೆ ಸ್ವಧರ್ಮವನ್ನು ಗುರುತಿಸುವುದೇ. ಶ್ರೀ 'ನಾಭಾ' ಶತಾಯುಷಿಗಳಾಗಲಿ, ಅವರ ಜ್ಞಾನದ ಬೆಳಕು ಚಿರಕಾಲದ ಸರ್ವರನ್ನೂ ಪುನೀತರನ್ನಾಗಿಸಲಿ.

ಶ್ರೀ ಶ್ರೀ ಶ್ರೀ ದೇವೇಂದ್ರ ಮಹಾಸ್ವಾಮಿಗಳು
ಶ್ರೀ ವಿಶ್ವಕರ್ಮ ಏಕದಂಡಿಗಿ ಮಠ, ಶಹಪುರ.

'ನಾಭಾ' ವೈಭವ

ನನ್ನ ಕನ್ನಡಕದಿಂದ 'ನಾಭಾ' ಅವರನ್ನೊಮ್ಮೆ ನೋಡಿ ಮುಂದುವರಿ,
ಮುಂದುವರಿ, ಮುಂದುವರಿ ..



'ನಾಭಾ' ಒಂದು ಜ್ಯೋತಿ – ಜ್ಯೋತಿ ಇದ್ದಲ್ಲಿ ಕತ್ತಲೆ ಇಲ್ಲ.

ಯಾಜ್ಞಿಕರಾಗಿ ಕುಳಿತಾಗ ಕರ್ಮಕಾಂಡ—ಭಾಷಣಕ್ಕೆ ಎದ್ದಾಗ ಜ್ಞಾನಕಾಂಡ.

'ನಾಭಾ' ಸಮಾಜ ವೃಕ್ಷದ ಮಧುರಫಲ.

'ನಾಭಾ' ಶತ್ರು--ನಿರಾಶೆ.

ಅವರ ವೃದ್ಧಾಪ್ಯವು ಸಂದ ಯೌವನದ ಸಾರ್ಥಕತೆಗೆ ಸಾಕ್ಷಿ ನುಡಿಯುತ್ತಿದೆ.

'ನಾಭಾ' ಮೌನ ಸುತ್ತಣ ವಾತಾವರಣವನ್ನು ಗಂಭೀರವಾಗಿಸುತ್ತದೆ.

ಸನಾತನ - ವಿನೂತನಗಳ ಸಂಗಮ 'ನಾಭಾ'.

'ನಾಭಾ' ಭಾಷಣ ಬಯಲು ಪ್ರದೇಶದ ನದಿಯ ಮಂಜುಳ ಪ್ರವಾಹ.

ಸಮಾಜದಲ್ಲಿ ಬಹಳೆಡೆಗಳಲ್ಲಿ ಲುಪ್ತವಾದ ಶ್ರದ್ಧೆ ಅವರಲ್ಲಿ ಮನೆ ಮಾಡಿದೆಯೇ ?

'ನಾಭಾ' ವೃದ್ಧಾಪ್ಯ ಯುವಕರನ್ನು ನೋಡಿ ನಗುತ್ತದೆ.

ಅವರು ಕೆಲವೊಮ್ಮೆ ಶುಂಠಿ—ಒಳ್ಳೆಯ ಔಷಧ.

'ನಾಭಾ' ಬರಹ – ನೈಷ್ಠಿಕ ಬ್ರಾಹ್ಮಣನ ಸಂಧ್ಯಾವಂದನೆ.

ಅವರ ರಸಿಕತೆ—ಕಲ್ಲುಸಕ್ಕರೆ.

ಅವರು ಸ್ವಾಗತಿಸುವ ಪರಿ—**ಅದ್ಯಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್**

ಸಂಗೀತಕ್ಕೆ ತೂಗುವ ಅವರ ತಲೆ ಆಗುತ್ತಿದೆಂಯೇನು ಒಳಗೆ ಆನಂದದ ಮಳೆ.

ಅವರ ಭೋಜನ – ಕಲಾರಾಧನೆ

ಅವರ ಉಪಾಸನೆಯ ಸರಸ್ವತಿ ಬಹು ಭಾಷಾ ರೂಪಿಣಿ.

ನೇಂದ್ರ ಬಾಳೆಹಣ್ಣು ತಿಂದಾಗ ನಾಭಾ ಉವಾಚ : "ಮಂಗಳೂರಿನಲ್ಲಿ ತಿನ್ನಲು ಪ್ರಾರಂಭಿಸಿದರೆ ಬೆಂಗಳೂರಿನಲ್ಲಿ ಮುಗಿಸಬಹುದು ! "

ಸಂಪ್ರದಾಯವು ಕುಂಬಳಕ್ಕೆ ಬಿಗಿದ ಕಬ್ಬಿಣ ಪಟ್ಟಿಯಾಗಬಾರದು. ವೃಕ್ಷದ ಬೆಳವಣಿಗೆಗೆ ಅಡ್ಡಿಯಾಗದ ತೊಗಟೆಯಂತೆ ಸಂಪ್ರದಾಯ ವ್ಯಕ್ತಿ ವಿಕಾಸಕ್ಕೆ ಪೂರಕವಾಗಬೇಕು. ಎರಡನೆಯದಕ್ಕೆಉದಾಹರಣೆ 'ನಾಭಾ'.



'ನಾಭಾ' ಸಮಾಜಕ್ಕೆ ಗುರುಪ್ರೇರ್ಣೆಮಿ.

ಶ್ರೀ ವಿಶ್ವಕರ್ಮನ ಒಡ್ಡೋಲಗ. ಮನ್ವಾದಿ ಪಂಚಬ್ರಹ್ಮರೂ, ಸಾನಗಾದಿ ಬ್ರಹ್ಮರ್ಷಿಗಳೂ ನೆರೆದಿದ್ದಾರೆ. ಆ ಮಹಾಸಭೆಗೆ 'ನಾಭಾ' ಸಾಷ್ಟಾಂಗವೆರಗಿದ್ದಾರೆ.

'ನಾಭಾ' ವ್ಯಕ್ತಿತ್ವವನ್ನು ಸಂಕೇತಕ್ಕೆ ಇಳಿಸಿದಾಗ — ವ್ಯಾಸಪೀಠದಲ್ಲಿ ತೆರೆದಿವೆ ಗ್ರಂಥ. ಬದಿಯಲ್ಲಿ ಉರಿಯುತ್ತಿದೆ ತುಪ್ಪದ ದೀಪ.

'ನಾಭಾ' ಸನ್ಮಾನ —

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥
(ಶ್ರೀ ಮದ್ಭಗವದ್ಗೀತೆ ೪:೩೪)

'ನಾಭಾ' ಸನ್ಮಾನ – ಉಪನಿಷತ್ತು

ಸನ್ಮಾನದ ಶಾಂತಿ ಮಂತ್ರ –

ಓಂ ಸಹ ನಾವವತು । ಸಹ ನೌಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ವಿದ್ಯಾಲಂಕಾರ
ಎಚ್. ನಾರಾಯಣರಾವ್, ಮಂಗಳೂರು.

ಆಚಾರ್ಯ ವರಿಷ್ಠ

ಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು ಸಮಾಜದ ಹಿರಿಯ ಮಾರ್ಗದರ್ಶಕರು, ವೈಶ್ವಕರ್ಮಣ ಸಾಹಿತ್ಯವನ್ನು ಪ್ರಚಾರಕ್ಕೆ ತಂದವರಲ್ಲಿ ಅಗ್ರಗಣ್ಯರು. ಈ ಧರ್ಮದ ಪ್ರಸಾರಕ್ಕಾಗಿ ತಮ್ಮ ಜೀವನದ ಬಹುಭಾಗವನ್ನು ತೆತ್ತಿರುವವರು. ಎಪ್ಪತ್ತರಲ್ಲೂ ಇಪ್ಪತ್ತರ ಉತ್ಸಾಹವಿದೆ; ಅವರ ಕೋಪ



ದಲ್ಲಿಯೂ ಪರೋಪಕಾರಾಂಕಾಕ್ಷೆ ಇದೆ. ಹಿರಿಯರಲ್ಲೂ ಕಿರಿಯರಲ್ಲೂ ಬೆರೆಯುವ ಅವರ ಗುಣ ಯಾರಾನ್ನಾದರೂ ಅಯಸ್ಕಾಂತದಂತೆ ತಮ್ಮತ್ತ ಸೆಳೆಯುತ್ತದೆ. ಕನ್ನಡ, ಸಂಸ್ಕೃತ, ಇಂಗ್ಲೀಷ್, ತೆಲುಗು ಭಾಷೆಗಳಲ್ಲಿ ಪಂಡಿತರು. ಕರ್ನಾಟಕ ರಾಜ್ಯವೇ ಅಲ್ಲದೇ ನೆರೆರಾಜ್ಯಗಳಲ್ಲೂ ತಮ್ಮ ಪಾಂಡಿತ್ಯದ ಪ್ರಭಾವವನ್ನು ಬೀರಿರುವರು. ವಿಶ್ವಬ್ರಾಹ್ಮಣ ಸಮಾಜಕ್ಕೆ ಶೋಭಾಯಮಾನರಾಗಿರುವರು. ಇದೇ ಆದಿಶಂಕರರ ಕಾಲವಾಗಿದ್ದಿದ್ದರೆ 'ನಾಭಾ' ಅವರು ಪೀಠಾಧಿಪತಿಗಳಾಗಿ ಗೌರವಿಸಲ್ಪಡುತ್ತಿದ್ದರು.

ಇಂತಹ ಅಪೂರ್ವ ಸಂಪನ್ನರಿಗೆ ಅಪೂರ್ವ ರೀತಿಯಲ್ಲಿ ಸನ್ಮಾನ ನಡೆಸ ತ್ತಿರುವುದು ಒಂದು ಆನಂದದ ಸಂಗತಿ. ಕರ್ನಾಟಕದ ವಿಶ್ವಬ್ರಾಹ್ಮಣರು ಪ್ರಧಾನವಾಗಿ ನಡೆಸುತ್ತಿರುವ ಸನ್ಮಾನ ಸಮಿತಿಗೆ ಆಂಧ್ರ, ಮಹಾರಾಷ್ಟ್ರ, ಕೇರಳ ಮತ್ತು ತಮಿಳುನಾಡುಗಳ ಪ್ರತಿನಿಧಿಗಳನ್ನೂ ಕೂಡಿಸಿಕೊಂಡು ಇದು ಇಡೀ ದಕ್ಷಿಣ ಭಾರತ ವಿಶ್ವಬ್ರಾಹ್ಮಣರು ನಡೆಸುತ್ತಿರುವ ಸನ್ಮಾನ ಸಮಾರಂಭವನ್ನಾಗಿ ರೂಪಿಸಿರುವುದು ವೈಶಿಷ್ಟ್ಯಪೂರ್ಣವಾದದ್ದು. ಇಂತಹ ಅಭೂತಪೂರ್ವ ಸನ್ಮಾನಕ್ಕೆ ಶ್ರೀ 'ನಾಭಾ' ಅವರು ಸರ್ವದೃಷ್ಟಿಗಳಿಂದಲೂ ಅರ್ಹರು.

ಜ್ಞಾನದ ಗುರಿಯು ಸಮಾನ ಜ್ಞಾನದ ಹಲವಾರು ಜ್ಯೋತಿಗಳನ್ನು ಬೆಳಗಿಸುವುದಂತೆ. ಈ 'ನಾಭಾ' ಜ್ಯೋತಿಯಿಂದ ನಮ್ಮ ಸಮಾಜದಲ್ಲಿ ನೂರಾರು ಮಂದಿ ಜ್ಞಾನ ಜ್ಯೋತಿಗಳಾಗಿ ಬೆಳಗುವಂತಾಗಲಿ. ಅವರಿಗೆ ದೀರ್ಘಾಯುರಾರೋಗ್ಯಾದಿ ಸಕಲಸನ್ಮಂಗಳಗಳು ಶ್ರೀ ವಿಶ್ವಕರ್ಮೇಶ್ವರನು ದಯ ಪಾಲಿಸಲಿ.

ಕೆ. ರಂಗಯ್ಯ, ಕರ್ನೂಲು

ಹುಟ್ಟು ಸಮಾಜ ಸೇವಕರು



ನಾ. ಭಾ. ಚಂದ್ರಶೇಖರಾಚಾರ್ಯರನ್ನು ೧೯೩೭ರಲ್ಲಿ ನಾನು ಮೊದಲು ನೋಡಿದಾಗ ನನ್ನ ಹೆಸರನ್ನು ಡೈರಿಯಲ್ಲಿ ಬರೆದಿಟ್ಟು ಕೊಂಡರು. ಅಲ್ಲಿಂದ ನಮಗೂ ಸಮಾಜ ಸೇವೆ ಮಾಡಬೇಕೆಂಬ ಹುಚ್ಚು ಹಿಡಿಸಿದವರು ಇವರೇ.

ನಾನು ಮತ್ತು ನನ್ನ ಸಹೋದರ ಸುಬ್ಬಯ್ಯಾಚಾರ್ಯನೂ ಸೇರಿ ಕೃಷ್ಣರಾಜನಗರ (ಹಳೇ ಎಡತೊರೆ ಶ್ರೀ ಅರ್ಕೇಶ್ವರ ಸ್ವಾಮಿ ದೇವಾಲಯ)ದಲ್ಲಿ ಒಂದು ವಿಶ್ವಕರ್ಮ ಮಹಾಜನ ಸಮ್ಮೇಳನವನ್ನು ಕರೆಯಬೇಕೆಂದು ತಿಳಿಸಿದರು. ಇದರಂತೆ ಮೊಟ್ಟ ಮೊದಲು ೧೯೪೦ನೆಯ ಇಸ್ವಿ ಜೂನ್ ತಿಂಗಳಲ್ಲಿ ಮೈಸೂರಿನ ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸ್‌ನ ಮಾಲೀಕರಾಗಿದ್ದ ದಿವಂಗತ ಟಿ. ಯಾಲಕ್ಕಾಚಾರ್ಯರ ಅಧ್ಯಕ್ಷತೆಯಲ್ಲಿ, ಮೈಸೂರು ಗಾಯಿತ್ರಿ ಟಾಕೀಸ್ ಮಾಲೀಕರಾದ ಶ್ರೀಮಾನ್ ವಾಸ್ತುಕಲಾ ಸೇವಾಸಕ್ತ ಟಿ. ಚೆಲುವಾಚಾರ್ಯರಿಂದ ಉದ್ಘಾಟನೆಯೂ ಆಗಿ ಬಹು ವಿಜೃಂಭಣೆಯಿಂದ ನಡೆಯಿತು. ಆ ಮಹಾ ಸಭೆಯಲ್ಲಿ ಸಹಸ್ರಾರು ಮಂದಿ ವಿಶ್ವಕರ್ಮರು ಭಾಗವಹಿಸಿ, ಚರ್ಚಿಸಿ ಅನೇಕ ನಿರ್ಣಯಗಳನ್ನು ಮಾಡಿ ಆಗಿನ ಸರ್ಕಾರಕ್ಕೆ ಕಳುಹಿಸಿ ಕೊಟ್ಟೆವು. ಇದಾದ ಮೇಲೆ ಪಾಂಡವಪುರ, ಹಿರೋಡೆಬೆಟ್ಟ, ಸಂತೆ ಸರಗೂರು ಕೃಷ್ಣರಾಜಪೇಟೆ (ಹೊಸ ಹೊಳಲು), ಬಳಿಕೆರೆ ಮತ್ತು ನಂಜನಗೂಡು ಮುಂತಾದ ಕಡೆಗಳಲ್ಲೆಲ್ಲಾ ವಿಶ್ವಕರ್ಮ ಮಹಾಜನ ಸಭೆಗಳು ನಡೆದವು. ಸರ್ಕಾರಕ್ಕೆ ನಮ್ಮ ಕುಂದುಕೊರತೆಗಳು ತಿಳಿದಿದ್ದು ಮಾತ್ರವೇ ಅಲ್ಲದೆ ನಮ್ಮವರಲ್ಲೂ ತಿಳುವಳಿಕೆಯುಂಟಾಯಿತು. ನಾನು ಮತ್ತು ನನ್ನ ಸಹೋದರ ಡಿ.ಎಸ್. ಸುಬ್ಬಯ್ಯಾಚಾರ್ಯನಿಗೆ ಅನೇಕ ಹೊಸ ಹೊಸ ಅನುಭವಗಳನ್ನು ಪಡೆದುಕೊಳ್ಳಲು ಮತ್ತು ಹೊಸ ಹೊಸ ಜನರ ಪರಿಚಯ ಮಾಡಿಕೊಳ್ಳಲು ತುಂಬಾ ಅನುಕೂಲವಾಯಿತು.

ಆಚಾರ್ಯರು ತುಂಬಾ ತೀಕ್ಷ್ಣ ಸ್ವಭಾವದವರು. ಆದರೆ ಸೋಮಾರಿಗಳು, ತಲೆಹರಟೆ ಹೊಡೆಯುವವರು, ಧೂಮಪಾನಾಸಕ್ತರು ಇಂತಹವರನ್ನು ಇವರು ಎಂದೂ ತಮ್ಮ ಹತ್ತಿರ ಸೇರಿಸುವುದಿಲ್ಲ. ವಿದ್ವಾಂಸರು, ಯೋಗ್ಯರು ಮತ್ತು ಸಮಾಜ ಸೇವಕರನ್ನು ಕಂಡರೆ ಬಹು ಪ್ರೀತಿ. ಇವರಿಗೆ ತಮ್ಮ ಕೈಯ್ಯಲ್ಲಾದ




ಸಹಾಯವನ್ನೆಲ್ಲಾ ಮಾಡಲು ಎಷ್ಟೇ ಕಷ್ಟವಾದರೂ ಹಿಂಜರಿಯುವವರಲ್ಲ. ಇವರ ಮನೆಗೆ ಹೋಗುವುದು, ಗಾಂಧೀಜಿ ಸೇವಾಶ್ರಮಕ್ಕೆ ಹೋಗುವುದು ಎರಡೂ ಒಂದೇ ಎಂದು ಭಾಸವಾಗುತ್ತದೆ. ಇವರು ಬೆಳಗಿನಿಂದ ಸಂಜೆಯು

ವರೆಗೆ ತಮ್ಮ ಕಾಲವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸುತ್ತಾರೆ. ಸ್ನಾನ - ಸಂಧ್ಯಾವಂದನೆ, ರೇಡಿಯೋ ಕೇಳುವುದು, ವೃತ್ತ ಪತ್ರಿಕೆ ಓದುವುದು, ಅಧ್ಯಯನ ಮತ್ತು ಬರೆಯುವುದು ಇವೆಲ್ಲಾ ಕಾರ್ಯಗಳನ್ನು ಒಂದು ಕ್ಲುಪ್ತ ಕಾಲದಲ್ಲಿ ಬಹು ಚಟುವಟಿಕೆಯಿಂದ ಮಾಡುತ್ತಾರೆ. ಇವರು ಸಮಾಜ ಸೇವ ಕರು ಮಾತ್ರವೇ ಅಲ್ಲ ಪುರೋಹಿತರೂ, ಜ್ಯೋತಿಷ್ಕರೂ ಮತ್ತು ಸಂಗೀತ ಗಾರರೂ ಹೌದು. ಇವರಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳು ತ್ರಿವೇಣಿ ಸಂಗಮದಂತೆ ಸೇರಿರುವುದರಿಂದ, ಘನವಿದ್ವಾಂಸರಾಗಿರುವ ಇವರಿಗೆ ವಿದ್ವಜ್ಜನರ ಸಭೆಯಲ್ಲಿ ತುಂಬಾ ಗೌರವ ಘನತೆಗಳು ಬರುತ್ತವೆ.

ದಿವಂಗತ ಬ್ರಹ್ಮಶ್ರೀ ಎಂ. ಗಂಗಾಧರಮೂರ್ತಿಗಳು ಹೊರಡಿಸುತ್ತಿದ್ದ 'ವಿಶ್ವಕರ್ಮ' ಮಾಸ ಪತ್ರಿಕೆಗೆ, ಶ್ರೀರಂಗಪಟ್ಟಣದಲ್ಲಿ ಕಾವೇರಿ ಪ್ರದೇಶದಲ್ಲಿ ನಡೆದ ವೈಶ್ವಕರ್ಮಣ ಮಹಾಯಾಗಕ್ಕೆ, ಈಗ ತುಮಕೂರಿನಿಂದ ಶ್ರೀ ಟಿ.ವಿ. ಮುತ್ತಾಚಾರ್ಯರು ಹೊರಡಿಸುತ್ತಿರುವ 'ವಿಶ್ವಕರ್ಮ ಪ್ರಕಾಶ'ಕ್ಕೂ 'ನಾ ಭಾ' ಅವರೇ ಸ್ಫೂರ್ತಿ.

ಹಿಂದೆ ಮೈಸೂರಿನಲ್ಲಿ ಪ್ರಾರಂಭವಾಗಿದ್ದ ವಿಶ್ವಕರ್ಮ ವಿದ್ಯಾರ್ಥಿ ನಿಲ ಯಕ್ಕೂ ಇವರ ಪೀಠಿಕೆಯೇ ಕಾರಣ. ವಿಶ್ವಕರ್ಮ ಸಮಾಜಕ್ಕೆ ನಾಮಿನೇಷನ್ ಕೊಡಬೇಕೆಂದು ಇವರೂ ಮತ್ತು ಬ್ರಹ್ಮಶ್ರೀ ಎಂ. ಗಂಗಾಧರಮೂರ್ತಿಗಳೂ ಶ್ರೀ ಎಲ್. ಸಿ. ಮಾನಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆದು ನಿರ್ಣಯ ಮಾಡಿ ಆಗಿನ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದರು. ಇವರ ಕೋರಿಕೆ ಯಂತೆ ಸರ್ಕಾರದವರು ಶ್ರೀ ಎಲ್. ಸಿ. ಮಾನಾಚಾರ್ಯರನ್ನೇ ಪ್ರಜಾಪ್ರತಿ ನಿಧಿ ಸಭೆಗೆ ಆರಿಸಿಕೊಂಡಿದ್ದು ಇವರ ಚಾಣಕ್ಯ ತಂತ್ರದಿಂದಲೇ.

ಇವರು ಮತ್ತು ಗಂಗಾಧರಮೂರ್ತಿಗಳು ಜತೆಗೂಡಿ ವಿಶ್ವಕರ್ಮ ಹಿತೈಷಿಣೀ ಗ್ರಂಥಮಾಲೆಯನ್ನು ಸ್ಥಾಪನೆ ಮಾಡಿ ಮೈಸೂರು ಶ್ರೀ ವಿಶ್ವಕರ್ಮ ಸಮಾಜ (ರಿ) ಸಂಘದ ಅಧ್ಯಕ್ಷ ರಾಗಿದ್ದ ಶ್ರೀ ಟಿ. ಯಾಲಕ್ಕಾಚಾರ್ಯರು ಮತ್ತು



ಶ್ರೀ ಪಿ. ಎರ್. ಶ್ರೀಕಂಠಾಚಾರ್ಯರು ಇವರ ನೆರವಿನಿಂದ ಅನೇಕ ಗ್ರಂಥಗಳನು ಪ್ರಕಟಿಸಿ ಮಹೋಪಕಾರ ಮಾಡಿದ್ದಾರೆ. ಅಡುಮುಟ್ಟದ ಸೊಪ್ಪಿಲ್ಲ ಎನು ವಂತೆ ಇವರು ವಿಶ್ವಕರ್ಮರ ಅಭ್ಯುದಯಕ್ಕೆ ಬರೆಯದಿದ್ದ ಲೇಖನವಿಲ್ಲ. ಇವರು ಎಲೆಮರೆಯ ಕಾಯಿಯಂತೆ ಹಿಂದೆಯೇ ಇದ್ದು ಕೆಲಸ ಮಾಡು ತ್ತಾರೆಯೇ ಹೊರತು ಮುಂದೆ ಬರುವುದಿಲ್ಲ. ಶಿಲ್ಪ, ಸಂಗೀತ, ಸಾಹಿತ್ಯ ಮುಂತಾದ ಎಲ್ಲಾ ವಿಷಯಗಳಲ್ಲಿಯೂ ಪೂರ್ಣ ಪಾಂಡಿತ್ಯ ಪಡೆದಿರುತ್ತಾರೆ. ಕೆಲಸಗಾರರಿಗೆ ಒಳ್ಳೊಳ್ಳೆ ಸಲಹೆಗಳನ್ನು ಕೊಡುವುದರಲ್ಲಿಯೂ ಬಹಳ ಚುರುಕು ಬುದ್ಧಿಯುಳ್ಳವರು. ಬಹಳ ವಿವೇಕಿಗಳು. ದಿವಂಗತ ವೆಂಕಟಾಚಾರ್ಯರು ವಿಶ್ವಕರ್ಮ ವಿದ್ಯಾರ್ಥಿ ನಿಲಯವನ್ನು ಸ್ವಂತವಾಗಿ ಕೊಟ್ಟು ಉಪಕಾರ ಮಾಡಿದ್ದು ಇವರ ಪ್ರೇರಣೆ ಮತ್ತು ಪ್ರೋತ್ಸಾಹದಿಂದಲೇ. ಯಾರ್ಯಾರಿಗೆ ಏನೇನು ಹೇಳಬೇಕು, ಎಷ್ಟೆಷ್ಟು ಪ್ರಮಾಣದಲ್ಲಿ ಹೇಗೆ ಹೇಳಬೇಕು ಎಂಬ ಸರ್ವೇಂಗಿತ ಜ್ಞಾನವಿರುವ ಇವರಿಂದ ಕಲಿಯಬೇಕಾದುದು ಬೇಕಾದಷ್ಟಿದೆ. ಅಷ್ಟು ಕುಶಾಗ್ರ ಬುದ್ಧಿಯುಳ್ಳವರು ಇವರು.

ಸಮಾಜ ಸೇವೆಯೇ ಇವರ ಹುಟ್ಟು ಗುಣ. ವಿಶ್ವಕರ್ಮ ಜನಾಂಗದ ವರಿಗೆ ಇವರಿಂದಾಗಿರುವ ಸಹಾಯ ಮತ್ತೆ ಯಾರಿಂದಲೂ ಆಗಿಲ್ಲ. ಇಂತಹ ಮಹನೀಯರು ಬಹುಕಾಲ ಬಾಳಿ ಬದುಕಿ ವಿಶ್ವಕರ್ಮ ಸಮಾಜದ ಉನ್ನತಿಗೆ ಇತೋಪ್ಯತಿಶಯವಾದ ಕೀರ್ತಿ ಗೌರವಗಳನ್ನು ತರುವಂತಹ ಕಾರ್ಯಗಳನ್ನು ಮಾಡುವ ಶಕ್ತಿ ಸಾಮರ್ಥ್ಯಗಳನ್ನು ಕೊಟ್ಟು ಕಾಪಾಡಲೆಂದು ಶ್ರೀ ವಿಶ್ವಕರ್ಮ ಭಗವಾನನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಸಿ ಕೆ. ಪುಟ್ಟಣ್ಣಯ್ಯ

ಸಮಾಜ ಭಕ್ತ



ವೇದೋಪನಿಷತ್ತುಗಳಲ್ಲಿ ಪ್ರಕಾಶನಾಗಿರುವ ವಿಶ್ವಕರ್ಮ ತತ್ತ್ವವನ್ನು ಅರಿಯಲು ಗಹನವಾದ ಅಧ್ಯಯನ ಮತ್ತು ಚಿಂತನೆ ಅವಶ್ಯಕ. ಈ ರೀತಿಯ ಕಠಿಣತರವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಆ ತತ್ತ್ವ ಶ್ರೀಸಾಮಾನ್ಯ

ನಿಗೆ ತಲುಪಿಸುವ ದೀಕ್ಷೆ ಕೈಗೊಂಡು ಕಳೆದ ಅರ್ಧ ಶತಮಾನದಿಂದ ಈ ಕ್ಷೇತ್ರದಲ್ಲಿ ದುಡಿಯುತ್ತಿರುವರು. ಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು ಸರ್ಕಾರದ ಸೇವೆಯಲ್ಲಿದ್ದಾಗ, ಸೇವಾ ವೃತ್ತಿಯಿಂದ ನಿವೃತ್ತಿಗೊಂಡ ಮೇಲೆ ಅನವರತ ಸಮಾಜದ ಉಚ್ಛ್ರಾಯದ ಚಿಂತನೆಯನ್ನೇ ನಡೆಸುತ್ತಿರುವ ನಿಷ್ಣಾತ ಭಕ್ತರು. ಸಮಾಜದ ಆಗುಹೋಗುಗಳನ್ನು ಸಮಸ್ಯೆಗಳನ್ನು ಚಿಂತಿಸುತ್ತಾ-ಅವನ್ನು ಪ್ರಗತಿಯ ಹಾದಿಗೆಳೆಯಲು ಅವರು 'ವಿಶ್ವಕರ್ಮ', 'ವಿಶ್ವಕರ್ಮ ಪ್ರಕಾಶ' ಮಾಸಿಕಗಳಲ್ಲೂ, ಅವರು ಭಾಗವಹಿಸಿ ಮಾತನಾಡುವ ಸಭೆಗಳಲ್ಲೂ ಅವ್ಯಾಹತವಾಗಿ ತಮ್ಮ ಚಿಂತನೆಗಳನ್ನು ಎಲ್ಲರ ಮುಂದಿರಿಸುತ್ತಲೇ ಬರುತ್ತಿದ್ದಾರೆ.


ಕರ್ನಾಟಕದಲ್ಲಿ 'ನಾಭಾ' ಅವರ ಮುನ್ನುಡಿಗಳನ್ನು ಪಡೆದು ಪ್ರಕಟವಾಗದೆ ಇರುವ ವೈಶ್ವಕರ್ಮಣ ಸಾಹಿತ್ಯ ಕೃತಿಗಳೇ ವಿರಳ.

ವೈದಿಕರಾಗಿ ಕೀರ್ತಿಯನ್ನು ಗಳಿಸಿದ್ದರೂ ಇವರು ಸಮಾಜದ ಆರ್ಥಿಕ, ರಾಜಕೀಯ ಪ್ರಗತಿಗಳ ಬಗ್ಗೆ ಹೆಚ್ಚಾಗಿ ಮಂಥನ ನಡೆಯಿಸಿ, ಅದರ ಬಗ್ಗೆ ಅನೇಕ ಸಭೆಗಳಲ್ಲಿ ಮಾತನಾಡಿರುವುದು ಒಂದು ವಿಶೇಷದ ಸಂಗತಿ.

ಹಿರಿಯರೂ, ಘನ ವಿದ್ವಾಂಸರೂ ಆದ ಶ್ರೀ 'ನಾಭಾ' ಅವರು ಸಮಾಜಕ್ಕೆ ಸಲ್ಲಿಸಿರುವ ಬಹುಮುಖ ಸೇವೆಯನ್ನು ಪುರಸ್ಕರಿಸಿ ಅವರ ಬಹುಮುಖೀ ವ್ಯಕ್ತಿತ್ವವನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿ ಸನ್ಮಾನ ಮಾಡುವ ಅವಕಾಶ ಈ ಸಮಾಜದವರಿಗೆ ದೊರೆತಿರುವುದು ಒಂದು ಪೂರ್ವ ಪುಣ್ಯವೇ.

ಶ್ರೀ 'ನಾಭಾ' ಅವರ ಅಮೂಲ್ಯಸೇವೆ ಮತ್ತು ಮಾರ್ಗದರ್ಶನಗಳು ಸಮಾಜಕ್ಕೆ ನೂರ್ಕಾಲ ದೊರೆಯಲಿ, ಅವರಿಗೆ ಶ್ರೀ ವಿಶ್ವಕರ್ಮೇಶ್ವರನು ಸುಖ, ಸಂಮೃದ್ಧಿ, ದೀರ್ಘಾಯುಸ್ಸುಗಳನ್ನು ಕರುಣಿಸಲಿ.

ಪಿ. ಈಶ್ವರಾಚಾರ್ಯ, ಎಂ.ಎ.ಬಿ.ಎಡ್.,
ಹೊಸದುರ್ಗ



ಸಮಾಜದ ಆಸ್ತಿ

ಸರಳರೂ ನಿರಾಡಂಬರಿಗಳೂ ಆದ 'ನಾಭಾ' ಅವರು ಎಳೆತನದಿಂದಲೂ ಅಧ್ಯಯನ-ಅಧ್ಯಾಪನಕ್ಕೆ ಅಂಟಿಕೊಂಡಿರುವವರು. ತಾವು ಅರಿತಿರುವ ಸಂಗತಿಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಸದಾ ಕಾತುರರಾಗಿದ್ದಾರೆ. ತಮ್ಮ ಮನೆಯಲ್ಲಿ ತಮ್ಮದೇ ಆದ ಗ್ರಂಥಾಲಯವನ್ನು ನಿರ್ಮಿಸಿಕೊಂಡಿದ್ದಾರೆ ಮೂರು ನಾಲ್ಕು ಭಾಷೆಯ ಗ್ರಂಥಗಳು, ಪತ್ರಿಕೆಗಳು. ಅಗಾಧವಾದ ನೆನಪಿನ ಶಕ್ತಿ. ಇಂದಿಗೂ ಗ್ರಂಥಾವಲೋಕನ, ಸಂಶೋಧನೆಗಳೇ ಅವರ ಮುಖ್ಯ ಹವ್ಯಾಸ.

ಎತ್ತರವಾಗಿದ್ದು ಆಜಾನುಬಾಹುಗಳು. ಸಾದುಗಪ್ಪು. ತೇಜೋವಂತ ಮುಖ. ಗಂಭೀರ ಮುಖಮುದ್ರೆ. ಅನುಭವದಿಂದ ಪಕ್ವವಾಗಿರುವ ಬುದ್ಧಿ. ಶಿಸ್ತಿನ ಜೀವನ. ಆಚಾರವಂತ ಸಂಪ್ರದಾಯಗಳ ಪಾಲಯನೆ, ಇವರ ಗೃಹಸ್ಥ ಜೀವನ ಕಂಡವರಿಗೆ ಪೂರ್ವಕಾಲದ ಆಶ್ರಮವಾಸಿ ಋಷಿಗಳನ್ನು ಕಂಡಂತೆ ಅನುಭವವಾಗುತ್ತದೆ.

ಸಂಸಾರದ ಅಷ್ಟ-ಕಷ್ಟಗಳಿಗೆ ಸಿಲುಕಿದ್ದರೂ ಸದಾ ಹಸನ್ಮುಖ. ವಿಚಾರ ವಿನಿಮಯದಲ್ಲಿ ಎದುರಿನವರ ಮಾತುಗ್ರಹಿಸಿ ಮಾರ್ಮಿಕವೂ ತೂಕವೂ ಆದ ಉತ್ತರಕ್ಕಾಗಿ ಹೆಚ್ಚು ಕಾಯುವ ಅವಶ್ಯಕತೆ ಇಲ್ಲ. ಒಂದು ವೇಳೆ ತಮ್ಮ ಶಬ್ದ ಪ್ರಯೋಗ ತಪ್ಪಿದಲ್ಲಿ ಅದನ್ನು ಸರಿಪಡಿಸಿಕೊಳ್ಳಲು ಅಷ್ಟೇ ಕಾತುರರಾಗಿರುತ್ತಾರೆ. ಇದೊಂದು ಅವರ ವೈಶಿಷ್ಟ್ಯ.

ಪೌರೋಹಿತ್ಯದಲ್ಲಿ ಎತ್ತಿದ ಕೈ. ಅವರು ಸೇರಿರುವೆಡೆ ಅವರಿಗೇ ಅಗ್ರತಾಂಬೂಲ. 'ವೇದಪಾಠ ನಮ್ಮಲ್ಲಿ ಕ್ರಮಬದ್ಧವಾಗಿ ನಡೆದು, ಹೆಚ್ಚು ಹೆಚ್ಚು ಮಂದಿ ವೈದಿಕ ಕ್ರಿಯೆಗಳನ್ನು ನಡೆಸಿಕೊಡಲು ದೊರೆಯುವಂತಾಗಬೇಕು' ಎಂಬುದು 'ನಾಭಾ' ಅವರ ಆಶಯ. ಮನೆಯಲ್ಲಿ ಈಗಲೂ ಆಸಕ್ತರಿಗೆ ವೇದ ಪಾಠ ನಡೆಸುತ್ತಲೇ ಇದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆ ಎಂಬುದು ಅವರ ಅಳಲು.



ಹಲವಾರು ಸಂಗತಿಗಳ ಬಗ್ಗೆ ಅನೇಕ ಲೇಖನಗಳನ್ನು, ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ಈಗಲೂ ಅವರ ಸಾಹಿತ್ಯ ಸೇವೆ ಅವ್ಯಾಹತವಾಗಿ ಸಾಗುತ್ತಿದೆ.

ಈ ಬಹುಮುಖೀ ವ್ಯಕ್ತಿಯಿಂದ ಪ್ರಭಾವಿತರಾಗದೆ ಇರುವವರು ವಿರಳ. ಸಮಾಜದ ಎಲ್ಲಾ ಸ್ತರಗಳ ಮಂದಿಗೂ ಪರಿಚಯವಾಗಿರುವ ವ್ಯಕ್ತಿಗಳು ಇವರು. ಇಂಥವರಿಂದಲೇ ಸಮಾಜ ಶ್ರೀಮಂತವಾಗಬಲ್ಲದು. ಇಂತಹವರೇ ಸಮಾಜದ ಆಸ್ತಿ. ಆದ್ದರಿಂದ ಆಚಾರ್ಯರ ಅನುಭವವನ್ನು ಪುರಸ್ಕರಿಸಿಕೊಂಡು ಸಮಾಜದ ಪುರೋಭಿವೃದ್ಧಿಗೆ ಅವಶ್ಯಕವಾದ ಯೋಜನೆಯನ್ನು ರೂಪಿಸಿ, ಅದನ್ನು ಕಾರ್ಯರೂಪಕ್ಕೆ ತರಲು ನಮ್ಮ ಸಂಘ-ಸಂಸ್ಥೆಗಳು, ಯುವ ಜನಾಂಗದವರು ಮುಂದಾಗಬೇಕು.

ವಿಶ್ವಕರ್ಮ ಪರಮಾತ್ಮನು ಆಚಾರ್ಯರಿಗೆ ಹೆಚ್ಚಿನ ಆಯುರಾರೋಗ್ಯ ಅಭಿವೃದ್ಧಿಯನ್ನು ದಯಪಾಲಿಸಿ, ಸಮಾಜಕ್ಕೆ ಅವರಿಂದ ಮತ್ತೂ ಹೆಚ್ಚಿನ ಸೇವೆ ಲಭಿಸಲಿ ಎಂದು ಪ್ರಾರ್ಥಿಸುತ್ತೇನೆ.

ಅನಂತ ಎಸ್. ಸವಣೂರ್, ಬಿ.ಎ.,ಎಲ್ಎಲ್‌ಬಿ., ಎಸಿಐಎಂ.,
ಬೆಂಗಳೂರು-೪.


ವೇದ ವಿದ್ಯಾನಿಧಿ

ವೇದಧರ್ಮದ ಸ[illegible] ಒಳ-ಹೊರಗಿನ ರೂಪಗಳೆರಡನ್ನೂ ತೋರಿಸುವ ಮಣಿದರ್ಪಣವೇ [illegible] ಶಾಸ್ತ್ರ. ಜನಾಂಗದ ಎಲ್ಲ ಆಶೆ, ಆಕಾಂಕ್ಷೆ, ಸಾಧನೆ, ಸಿದ್ಧಿಗಳ ಅನು[illegible]ಗಳನ್ನು ಏಕತ್ರ ಸೇರಿಸಿಕೊಂಡಿರುವ [illegible]ವ್ಯ ಭಂಡಾರವೇ ಶ್ರುತಿಗಳು. ಎಲ್ಲ ಪುರುಷಾರ್ಥಗಳ ಕಲ್ಪತರು ವೇದ ವೇದಾಂಗ, ಇತಿಹಾಸ, ಲೋಕ ವ್ಯವಹಾರ, ಆತ್ಮ ವ್ಯವಹಾರ, ಎಲ್ಲ ಶಾಸ್ತ್ರ



ಗಳ ಸಾರಸರ್ವಸ್ವವಾಗಿ ಅವುಗಳ ತತ್ತ್ವವನ್ನೂ ಉಚ್ಚತಮವಾಗಿಯೂ, ಗಂಭೀರವಾಗಿಯೂ ನಿರೂಪಿಸುವ ಅಪಾರವಾದ ಜ್ಞಾನವೇ ವೇದ. ಅಜ್ಞಾನದ ಕತ್ತಲೆಯಿಂದ ಕುರುಡಾಗಿ ಹಾದಿ ತಿಳಿಯದೇ ಮಿಡುಕಾಡುತ್ತಿರುವ ಲೋಕದ ಕಣ್ಣುಗಳನ್ನು ಜ್ಞಾನಾಂಜನದ ಶಲಾಕೆಯಿಂದ ತೆರೆಯಿಸಿದ ಅಗ್ಗಳಿಕೆ ಅದರದು. ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಪಡೆಯಲು ಸಂಸ್ಕೃತಿಯು ಬಗೆಬಗೆಯಾಗಿ ವಿಸ್ತಾರವಾಗಿ ಹೇಳಿದೆ. ಜನರಲ್ಲಿ ತಮಸ್ಸನ್ನು ಹೋಗಲಾಡಿಸುವ ಸೂರ್ಯನ ಪ್ರಕಾಶದಂತೆ, ಆ ವೇದಶ್ರುತಿಯು ಬೆಳ್ದಿಂಗಳನ್ನು ಪ್ರಸರಿಸುವ ಪೂರ್ಣ ಚಂದ್ರನಂತೆ, ಮನುಷ್ಯರ ಬುದ್ಧಿ ಎಂಬ ಜ್ಞಾನದ ಪರದೆಯನ್ನು ಅರಳಿಸುವ ಪೂರ್ಣ ಚಂದ್ರನಂತೆ ಪ್ರಕಾಶಿಸುವ ಜ್ಞಾನವೇ ವೇದಗಳ ತತ್ತ್ವಜ್ಞಾನ. ಇಂಥ ತತ್ತ್ವಜ್ಞಾನವನ್ನು ಅರಗಿಸಿಕೊಂಡಿರುವವರಲ್ಲಿ ನಾ.ಭಾ. ಚಂದ್ರಶೇಖರಾಚಾರ್ಯರು ಒಬ್ಬರು.

ವಿಶ್ವಕರ್ಮ ಬ್ರಾಹ್ಮಣಕುಲೊತ್ತಮ ಮಾರ್ತಾಂಡರು. ಇವರು ಸನಾತನ ಧರ್ಮವನ್ನು ಬೆಳೆಸಿಕೊಂಡು ಬಂದವರು. ಸರ್ವೇಶ್ವರನಾದ ವಿಶ್ವಕರ್ಮನನ್ನು ಅನುಕ್ಷಣವೂ ಧ್ಯಾನಿಸುತ್ತಾ ತಪೋನಿಷ್ಟರಾಗಿ ಅನವರತ ಸಮಾಜಕ್ಕಾಗಿ ಶ್ರಮಿಸುತ್ತಾ ಬಂದಿರುವುದರ ಫಲವಾಗಿ ಆ ದಯಾಘನನು ಇವರಿಗೆ ಆಯುರಾರೋಗ್ಯ ಸಂಪದಗಳನ್ನು ದಯಪಾಲಿಸಿರುವನು. ಇಂದೀಗೂ ಎಪ್ಪತ್ತು ವರುಷಗಳನ್ನು ದಾಟಿರುವ ವಿದ್ವನ್ ಮಣಿರತ್ನ ನಮ್ಮ ವಿಶ್ವಬ್ರಾಹ್ಮಣಕುಲಕ್ಕೆ ಮಕುಟ ಪ್ರಾಯವಾಗಿ ಶೋಭಿಸುತ್ತಿರುವರು. ಇವರ ವೇದ ಘೋಷ ಮತ್ತು ಯಾಗಕ್ರಿಯೆಗಳನ್ನೆಲ್ಲಾ ವೇದೋಕ್ತವಾಗಿ ಪ್ರವರ್ತಿಸುವ ಚಾಕಚಕ್ಯತೆ ಆಕರ್ಷಣೀಯವಾಗಿ ತೋರುತ್ತದೆ. ವೇದ ವಿದ್ಯಾಪಾಂಡಿತ್ಯದ ತವರೂರು ಪುಣೆ. ಇಂಥ ಪುಣ್ಯ ನಗರದಲ್ಲಿ ಫೆಬ್ರವರಿ ೧೬, ೧೯೮೦ ರಂದು ದಿನಖಗ್ರಾಸ ಸೂರ್ಯಗ್ರಹಣದಲ್ಲಿ **ವಿಶ್ವಕರ್ಮ ಮಹಾಯಜ್ಞ, ನವಚಂಡೀ ಹೋಮ ಮತ್ತು ಮಹಾಗಣಪತಿ ಹೋಮ**ವನ್ನು ನೆರವೇರಿಸುವ ಸಂಯೋಗ ಒದಗಿದಾಗ ವಿಶ್ವಕರ್ಮ ಮಹಾಯಜ್ಞವನ್ನು ಮಾಡುವಂತಹ ಪಂಡಿತರು ಪುಣೆ




ಯಲ್ಲಿ ದೊರೆಯದೇ ಇದ್ದಾಗ ಬ್ರ||ವೇ|| ನಾಭಾ ಚಂದ್ರಶೇಖರಾಚಾರ್ಯ, ಬೆಂಗಳೂರು ಇವರನ್ನು ವಿನಂತಿಸಿಕೊಂಡೆ. ಪುಣೆಗೆ ಬಂದು ಆನಂದ ಶಿಲ್ಪಕಲಾ ನಿಕೇತನದ ಅಂಗಳದಲ್ಲಿ ವಿಶ್ವಕರ್ಮಮಹಾಯಜ್ಞವನ್ನು 'ನಾಭಾ' ಅವರು ತಮ್ಮ ಪ್ರಧಾನ ಆಚಾರ್ಯತ್ವದಲ್ಲಿ ನಡೆಸಿದರು. ಈ ಯಜ್ಞಕ್ಕೆ ಸಾರ್ವತ್ರಿಕವಾಗಿ ಎಲ್ಲ ಧರ್ಮ ಬಾಂಧವರನ್ನೂ ಆಮಂತ್ರಿಸಲಾಗಿತ್ತು. ಅಲ್ಲದೇ ಗಣ್ಯವ್ಯಕ್ತಿಗಳು, ವೇದ ವೇದಾಂತ ಪಂಡಿತರೂ ಹೆಚ್ಚಿನ ಪ್ರಮಾಣದಲ್ಲಿ ಬಂದಿದ್ದರು. ಇಂಥ ಕಲ್ಯಾಣಕಾರಿ ವಿಶ್ವಕರ್ಮನ ಮಹಾಯಜ್ಞವು ಸಂಪೂರ್ಣ ಮಹಾರಾಷ್ಟ್ರದಲ್ಲಿಯೇ ಆಗಿರಲಿಲ್ಲವೆಂದು ಸ್ಮರಿಸಿ ಬ್ರ||ವೇ|| ನಾಭಾ ಚಂದ್ರಶೇಖರಾಚಾರ್ಯ ಅವರ ವೇದ ವಾಣಿಯು ಅಮೃತ ಪ್ರಾಯವಾಗಿ ಎಲ್ಲರಿಗೂ ಹಿತವನ್ನುಂಟು ಮಾಡಿತೆಂದೂ ಇಂಥ ವೇದ ವಿದ್ಯಾ ಪಾರಂಗತರನ್ನು ತಾವ್ಯಾರೂ ಕಂಡಿಲ್ಲವೆಂದೂ ಹೇಳಿದರು. ಇಂಥ ವೇದ ವಿದ್ಯಾಚೂಡಾಮಣಿಯು ನಮ್ಮ ವಿಶ್ವಕರ್ಮ ಬ್ರಾಹ್ಮಣ ಕುಲದವರಿಗೆ ಭೂಷಣ. ಇಂಥವರಿಗೆ ಅಖಿಲ ಭಾರತ ವಿಶ್ವಬ್ರಾಹ್ಮಣ ಸಮಾಜದ ವತಿಯಿಂದ ಹೃತ್ಪೂರ್ವಕವಾಗಿ ಅಭಿನಂದನೆಗಳು.

ನಾಗೇಶ್ ಎಸ್. ಶಿಲ್ಪಿ,
ಆನಂದ ಶಿಲ್ಪಕಲಾ ನಿಕೇತನ, ಪುಣೆ ೪೧೧ ೦೦೧

ವಿದ್ವಜ್ಜನ ಪ್ರೇಮಿ


೧೯೩೬ರಲ್ಲಿ ಮದರಾಸಿನಲ್ಲಿ ಒಂದು ವಿಶ್ವಬ್ರಾಹ್ಮಣ ಪಂಡಿತ ಸಭೆ ಏರ್ಪಾಡಾಗಿತ್ತು. ಅಲ್ಲಿಗೆ ನಾನು ಭಾಗವಹಿಸಲು ಹೋಗಿದ್ದಾಗ ನಾ.ಭಾ. ಚಂದ್ರಶೇಖರಾಚಾರ್ಯರ ಪರಿಚಯವಾಯಿತು. ಆ ಸಭೆಯಲ್ಲಿ ವಡ್ಡೆಪಾಟಿ ನಿರಂಜನಶಾಸ್ತ್ರಿ ಅವರ 'ವಿಶ್ವಕರ್ಮ ಬ್ರಾಹ್ಮಣ ವಂಶಾಗಮಮು' ಕೃತಿಯ ಬಗ್ಗೆ



ಚರ್ಚಿಸುವುದು ಅಂದಿನ ಸಭೆಯ ವಿಷಯಗಳಲ್ಲಿ ಒಂದಾಗಿತ್ತು. ಈ ಮಹಾ ಸಭೆಗೆ ಆಗಿನ ಮದರಾಸು ಸರ್ಕಾರದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ದೈವಶಿಖಾಮಣಿ ಆಚಾರ್ಯರ್ ಅಧ್ಯಕ್ಷರಾಗಿದ್ದರೆಂದು ನೆನಪು. ಸಾಹಿತ್ಯ ಶಿರೋಮಣಿ ಪಟ್ನಾಲ ರಾಮಲಿಂಗಶಾಸ್ತ್ರಿ, ತಲಕಾಡು ಗೋಪಾಲಕೃಷ್ಣಮಾಚಾರ್ಯ ಮುಂತಾದವರು ಆ ಸಭೆಯಲ್ಲಿ ಭಾಗವಹಿಸಿದ್ದರು. ಅಂದು ರಾಮಲಿಂಗ ಶಾಸ್ತ್ರಿಗಳು ಸಂಸ್ಕೃತದಲ್ಲೂ, ನಾನು ಸಂಸ್ಕೃತ-ಆಂಧ್ರಗಳಲ್ಲೂ ಭಾಷಣ ಮಾಡಿದೆವು.

'ನಾಭಾ' ಅವರು ಆಗಿನ ತಮ್ಮ ಯುವಾವಸ್ಥೆಯಲ್ಲಿಯೇ ಶ್ರೋತ್ರೀಯ ವೇಷದಲ್ಲಿದ್ದರು. ನ್ಯಾಯಾಂಗ ಇಲಾಖೆಯಲ್ಲಿ ಕೆಲಸದಲ್ಲಿದ್ದರು. ನನಗಿಂತಲೂ ಎರಡು-ಮೂರು ವರ್ಷಗಳು ಹಿರಿಯರು. ಕನ್ನಡ ಭಾಷೆಯಲ್ಲಿ ನಿರರ್ಗಳವಾಗಿ ಭಾಷಣ ಮಾಡಿದರು. ಅದೇ ಶುಭ ಮುಹೂರ್ತದಲ್ಲಿಯೇ ನಮ್ಮಿಬ್ಬರ ಸ್ನೇಹದ ಕೊಂಡಿ ಬೆಸೆಯಿತು. ಅಂದಿನಿಂದ ಇಂದಿನವರೆವಿಗೂ ಆ ಬೆಸುಗೆ ಕಾಲ ದೊಂದಿಗೆ ಹೆಚ್ಚು ಬಲಯುತವಾಗಿ ಬೆಳೆಯುತ್ತಾ ಹೋಗುತ್ತಿದೆ. ಇಬ್ಬರೂ ಅನೇಕ ಸೇವಾಕಾರ್ಯಗಳಲ್ಲಿ ಒಂದಾಗಿ ಸೇರಿ ದುಡಿದಿದ್ದೇವೆ.

ನಮ್ಮ ಎರಡನೆಯ ಭೇಟಿಯಾದದ್ದು ೧೯೩೯ರಲ್ಲಿ ಶ್ರೀಮದ್ಗಾಯತ್ರೀ ಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀ ಶ್ರೀ ವೀಪೂರಿ ವರವೆಂಕಟಾಚಾರ್ಯ ಗುರುಸ್ವಾಮಿ ಗಳು ಮೈಸೂರು ರಾಷ್ಟ್ರದಲ್ಲಿ ಸಂಚಾರ ಮಾಡುತ್ತಿದ್ದಾಗ, ನಾನು ಅವರ ಆಸ್ಥಾನ ಪಂಡಿತನಾಗಿ ಒಂದು ತಿಂಗಳ ಕಾಲ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಆಧ್ಯಾತ್ಮಿಕ ಭಾಷಣಗಳನ್ನು ಮಾಡುವ ಅವಕಾಶ ಲಭಿಸಿತು. ಆ ಸಮಯದಲ್ಲೂ ನಾ.ಭಾ. ಚಂದ್ರಶೇಖರಾಚಾರ್ಯರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಿಶ್ವಬ್ರಾಹ್ಮಣ ಸಮಾಜಕ್ಕೆ, ಗುರುಪೀಠಕ್ಕೆ ಅಮೂಲ್ಯವಾದ ಸೇವೆಯನ್ನು ಮಾಡಿದರು. ನನ್ನನ್ನು ಮೈಸೂರಿಗೆ ಆಹ್ವಾನಿಸಿ, ಅಲ್ಲಿ ಮೈಸೂರು ಮಹಾರಾಜರ ಗುರುಗಳಾಗಿದ್ದ ಶಿವಪ್ರಸಿದ್ಧಾಂತ, ಶಿವಯೋಗಿ ಶ್ರೀ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರ ಘನ ಅಧ್ಯಕ್ಷತೆಯಲ್ಲಿ ನನ್ನಿಂದ ಹಲವು ವಿದ್ವ



ತ್ಪೂರ್ಣ ಉಪನ್ಯಾಸಗಳನ್ನು ಮಾಡಿಸಿ, ನನ್ನನ್ನು ಅದ್ದೂರಿಯಿಂದ ಸನ್ಮಾನಿಸಿದರು. ಆಗ ಅವರು ಒಂದು ಸನ್ಮಾನ ಪತ್ರಿಕೆಯನ್ನು ಸಂಸ್ಕೃತದಲ್ಲಿ ಅಚ್ಚು ಮಾಡಿಸಿ ಅರ್ಪಿಸಿದರು. ಈ ಕೆಲಸದಲ್ಲಿ ಆಚಾರ್ಯರದು ಬಹುಪಾಲು ಶ್ರಮ ಸೇರಿತ್ತು ಎಂಬುದನ್ನು ನಾನು ಬಲ್ಲೆ.

ಇದರ ನಂತರ ೧೯೫೨ ರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ವೈಶ್ವಕರ್ಮಣ ಮಹಾಯಜ್ಞದ ಸಂದರ್ಭದಲ್ಲಿ ನಾನು ಆಹ್ವಾನಿತ ಅತಿಥಿಗಳಲ್ಲಿ ಒಬ್ಬನಾಗಿದ್ದು ಅಲ್ಲಿ ನಾನು ಮಾತನಾಡುವ ಅವಕಾಶ ಒದಗಿತ್ತು. ಈ ಕಾರ್ಯಗಳಲ್ಲಿ ವೇದಾಧ್ಯಯನ ಸಂಪನ್ನರೂ, ಯಾಜಕೋತ್ತಮರು ಆದ ಶ್ರೀ ಗಂಗಾಧರ ಮೂರ್ತಿಗಳ ಜತೆಯಲ್ಲಿ ಇವರು ಇರುತ್ತಿದ್ದರು. ಇವರಿಬ್ಬರೂ ಇನ್ನೂ ಕರ್ನಾಟಕದ ಕೆಲವು ಯಾಜಕೋತ್ತಮರೊಂದಿಗೆ ಆಂಧ್ರಪ್ರದೇಶದ ರಾಯವರಮು ಮುಂತಾದ ಪ್ರದೇಶಗಳಿಗೆ ಬಂದು ಅಲ್ಲಿ ಪಂಚಬ್ರಹ್ಮ ಯಜ್ಞಗಳನ್ನು ನಿರ್ವಹಿಸಿದ್ದಾರೆ. ಅಲ್ಲಿಯ ವಿದ್ವಾಂಸರ ಮೆಚ್ಚುಗೆ, ಗೌರವಗಳನ್ನು ಗಳಿಸಿದ್ದಾರೆ.

ಆಚಾರ್ಯರು ಇಂಗ್ಲೀಷಿನಲ್ಲೂ ನಿಷ್ಕರ್ಷವಾಗಿ, ನಿರರ್ಗಳವಾಗಿ ಬರೆಯಬಲ್ಲರು ; ಉಪನ್ಯಾಸ ನೀಡಬಲ್ಲರು. ಅವರ ಮಾತೃಭಾಷೆಯಾದ ಕನ್ನಡದಲ್ಲಿ ಅವರ ವೈದುಷ್ಯ, ಪ್ರಾವೀಣ್ಯತೆಯನ್ನು ತೆಲುಗನಾದ ನಾನು ನಿಮಗೆ ಹೇಳಬೇಕಾಗಿದೆಯೇ ? ತೆಲುಗು ಭಾಷೆಯಲ್ಲೂ ಆಚಾರ್ಯರು ಉಪನ್ಯಾಸ ನೀಡಬಲ್ಲರು ಎಂಬುದು ಒಂದು ವೈಶಿಷ್ಟ್ಯ. ನನ್ನ 'ಕಳಾರಾಧನ' ಕಾದಂಬರಿಯನ್ನು 'ಶಿಲ್ಪದರ್ಶನ'ದ ಕೆಲವು ಭಾಗಗಳನ್ನು ಅವರು ಈಗಾಗಲೇ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

ಆಚಾರ್ಯರಿಗೆ ವಿಶ್ವಕರ್ಮ ತತ್ವದಲ್ಲಿ ಅತ್ಯಂತ ಗಾಢವಾದ ತಿಳಿವಿದೆ. ವಿಶ್ವಬ್ರಾಹ್ಮಣ ಸಮಾಜಾಭ್ಯುದಯಕ್ಕಾಗಿ ಇವರು ಅಗಣಿತ ಸತ್ಕಾರ್ಯಗಳನ್ನು ನಿರ್ವಹಿಸಿ ಸಮಾಜಕ್ಕೆ ಚೈತನ್ಯವನ್ನು ತಂದು ಕೊಟ್ಟಿದ್ದಾರೆ. ಪರಮಶಾಂತ ಸ್ವಭಾವಿಗಳು. ಭಗವದ್ಭಕ್ತರು ಸಮಾಜೋದ್ಧಾರಕರು. ಶ್ರೀಮದಾಚಾರ್ಯರ



ಬಾಳೆಲ್ಲವೂ ವಿಶ್ವಬ್ರಾಹ್ಮಣ ಸಮಾಜದ ಉಚ್ಛ್ರಾಯಕ್ಕಾಗಿ ಕರ್ಪೂರ ನೀರಾಜನ ವನ್ನಾಗಿಸಿದ್ದಾರೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ.

ಆಚಾರ್ಯರ ಇನ್ನೊಂದು ವಿಶೇಷಗುಣವೆಂದರೆ ಸಹಪಂಡಿತರ ಬಗ್ಗೆ ಈರ್ಷ್ಯೆ, ಅಸೂಯೆಗಳು ಇಲ್ಲದಿರುವಿಕೆ. ಅಷ್ಟೇ ಅಲ್ಲ ಅವರ ಬಗ್ಗೆ ಇವರಲ್ಲಿ ಬಹು ಭಕ್ತಿ ಭಾವವು ಇರುವುದು. ಈ ಔದಾರ್ಯಗುಣ ತುಂಬಾ ವಿಶೇಷವೂ, ವಿರಳವೂ ಆದದ್ದು. ಇಷ್ಟೆಲ್ಲಾ ಸದ್ಗುಣಗಳು ಒಬ್ಬರಲ್ಲಿಯೇ ಇರುವುದು ತುಂಬಾ ಅಪರೂಪ.

ಈ ರೀತಿಯಲ್ಲಿ ಸಮಾಜಸೇವೆಯಲ್ಲಿಯೇ ತಮ್ಮ ಜೀವನದ ಆಯುಷ್ಯ ವನ್ನು ವಿನಿಯೋಗಿಸುತ್ತಿರುವ ಮಿತ್ರೋತ್ತಮರಾದ ಚಂದ್ರಶೇಖರಾಚಾರ್ಯರು ಸಂಪೂರ್ಣಾಯುರಾರೋಗ್ಯ ಭಾಗ್ಯೋಪೇತರಾಗಿ ಒಂದುನೂರಿಪ್ಪತ್ತು ವರ್ಷ ಗಳ ಕಾಲ ಸಮಾಜಕ್ಕೆ ತಮ್ಮ ಸೇವೆಯನ್ನು ಅರ್ಪಿಸುವಂತಾಗಲಿ ಎಂದು ಶ್ರೀ ವಿಶ್ವಕರ್ಮ ಪರಮೇಶ್ವರನಲ್ಲಿ ಪ್ರಾರ್ಥಿಸುತ್ತೇನೆ.

ದರ್ಶನಾಚಾರ್ಯ
ಡಾ ಕೊಂಡೂರು ವೀರರಾಘವಾಚಾರ್ಯ, ತೆನಾಲಿ.

ಸಾರ್ಥಕ ಜೀವನ

ಬ್ರಹ್ಮಶ್ರೀ ನಾ.ಭಾ. ಚಂದ್ರಶೇಖರಾಚಾರ್ಯರ ಪರಿಚಯ ನನಗಾದುದು ೧೯೩೮ರಲ್ಲಿ-ಮೈಸೂರಿನಲ್ಲಿ. ಆಗ ನಾನು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾರವರ ಕಾಲೇಜಿನಲ್ಲಿ ಆನರ್ಸ್ ತರಗತಿಯಲ್ಲಿ ಓದುತ್ತಿದ್ದೆ. ವಿಶ್ವಕರ್ಮ ಸಮಾಜ ಸುಧಾರಣೆಗಾಗಿ ಇಡೀ ಜೀವನವನ್ನೇ ಮುಡಿಪಾಗಿಟ್ಟು 'ವಿಶ್ವಕರ್ಮ' ಮಾಸಪತ್ರಿಕೆ ನಡೆಸುತ್ತಿದ್ದ ಮ. ಗಂಗಾಧರಮೂರ್ತಿಗಳವರಿಗೆ




ಬಲಭುಜವಾಗಿ ದುಡಿಯುತ್ತಿದ್ದ ಶ್ರೀ ಆಚಾರ್ಯರ ಧಾರ್ಮಿಕ ಜೀವನ ಪ್ರಭಾವ ದಿಂದಾಗಿ ಅಂದಿನಿಂದಲೇ ನಾನು ಬಹುಮಟ್ಟಿಗೆ ಸಮಾಜ ಸೇವಾ ಸ್ಫೂರ್ತಿ ಯನ್ನು ಪಡೆದೆ.

ಶ್ರೀಮದಾಚಾರ್ಯರು 'ವಿಶ್ವಕರ್ಮ' ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನಗಳು ಸಮಾಜದಲ್ಲಿ ನವಜಾಗೃತಿಯನ್ನುಂಟು ಮಾಡುವಷ್ಟು ಶಕ್ತಿ ಪೂರ್ಣ ವಾಗಿರುವುದೇ ಅವರ ನಿಜ ವ್ಯಕ್ತಿತ್ವದ ಕುರುಹಾಗಿ ವಿಚಾರಮತಿಗಳನ್ನು ಕೆರಳಿಸುತ್ತವೆ.

ವಿಶ್ವಬ್ರಾಹ್ಮಣ್ಯದ ಧಾರ್ಮಿಕ ಐತಿಹಾಸಿಕ ಚರಿತ್ರೆಗಳನ್ನವಲೋಕಿಸಿದಾಗ ಅವರು ಯಜನ, ಯಾಜನ, ಅಧ್ಯಯನ, ಅಧ್ಯಾಪನಾದಿಷಟ್ಕರ್ಮಗಳಲ್ಲಿ ತೊಡಗಿ ಲೋಕ ಕ್ಷೇಮ ಚಿಂತನೆಯಲ್ಲಿದ್ದರೆಂದು ತಿಳಿದು ಬರುತ್ತದೆ. ಇಂತಹ ಆದರ್ಶ ಜೀವನದ ಒಂದು ರೂಪುರೇಷೆಯನ್ನು ಇಂದಿಗೂ ನಾವು ಆಚಾರ್ಯರ ಬದುಕಿನಲ್ಲಿ ಕಾಣುತ್ತೇವೆ.

ಧರ್ಮವಿರುವುದು ಆಚರಣೆಗಾಗಿ ಎಂಬುದನ್ನು ಶ್ರೀ ಆಚಾರ್ಯರ ಜೀವನ ದಿಂದ ತಿಳಿಯಬಹುದಾಗಿದೆ. ಆಚಾರ್ಯರು ಪುರೋಹಿತರಾಗಿದ್ದರೂ ಸಂಪ್ರ ದಾಯವಾದಿಗಳಲ್ಲ. ವೇದನಿಷ್ಠರಾದರೂ ಆಧುನಿಕ ವಿಚಾರಗಳನ್ನು ಅವ ಹೇಳನ ಮಾಡುವವರಲ್ಲ. ನೂತನ ಪುರಾತನಗಳ ಸಮನ್ವಯತೆಯಲ್ಲಿ ನಿಷ್ಣಾ ತರಾಗಿರುವರು. ವೈಶ್ವಕರ್ಮಣ ಧರ್ಮವೆಂಬುದು ಚಿರನೂತನ ಸತ್ಯ ಸತ್ವ ಯುಕ್ತವೆಂದು ಮನಗಂಡ ಮಹನೀಯರವರು.

ವೈದುಷ್ಯವೆಂದರೆ ಸ್ವಪ್ರತಿಷ್ಠೆಅಲ್ಲ, ಅದು ನೈಷ್ಠಿಕ ಜೀವನಕ್ಕೆ ಉಪ ಯುಕ್ತವಾಗಬೇಕು. ವೈಶ್ವಕರ್ಮಣ ಜೀವನ ಸಿದ್ಧಾಂತವೆಲ್ಲಾ ಈ ಮಾತಿ ನಲ್ಲಡಗಿದೆಯೆನ್ನಬಹುದು. 'ತಿಳಿದುದನ್ನು ಕಲಾ ತ್ಮಕ ಕೃತಿಯಲ್ಲಿಳಿಸು. ಆಗ ಅದು ಜೀವ ನೋಪಯುಕ್ತವಾಗುತ್ತದೆ; ಲೋಕ ಕಲ್ಯಾಣ ಸಾಧಕ ವಾಗುತ್ತದೆ'. ಈ ವರ ಕಲೆಯನ್ನ ರಿತವನೇ ವೈಶ್ವಕರ್ಮಣ. ಆಚಾರ್ಯರು



ಇಂತಹ ಸಾಹಿತ್ಯ ಪ್ರಚಾರಕರಾಗಿ, ಲೇಖಕರಾಗಿ, ಗ್ರಂಥಕರ್ತರಾಗಿ, ಭಾಷಣಕಾರರಾಗಿ ನಮ್ಮ ಸಮಾಜದ ಆದರ್ಶ ವ್ಯಕ್ತಿಗಳಾಗಿದ್ದಾರೆ.

ಮೈಸೂರು ದೇಶದಲ್ಲಿ ಅಲ್ಲಲ್ಲಿ ಸಮಾಜ ಸೇವಾ ಸಂಘಗಳು ರಚಿತವಾಗುವಲ್ಲಿ ಆಚಾರ್ಯರ ಸಲಹೆ ಸೂಚನೆಗಳನ್ನಿತ್ತು ಮಾರ್ಗದರ್ಶನ ಮಾಡಿದ್ದಾರೆ; ಮಾಡುತ್ತಿದ್ದಾರೆ. ಸೇವಾ ಮನೋಭಾವದವರನ್ನು ಕಂಡರೆ ಸಾಕು, ಅಂದಿನಿಂದಲೇ ಇವರು ಅವರ ಆತ್ಮೀಯ ಸ್ನೇಹಿತರಂತೆ ಆತ್ಮೀಯವಾಗಿ ವರ್ತಿಸಿ ಅವರಿಗೆ ಸ್ಫೂರ್ತಿಯನ್ನು ತುಂಬುತ್ತಾರೆ. ನಾನು 'ವಿಶ್ವಕರ್ಮ ಪುರಾಣ'ವನ್ನು ಕನ್ನಡಕ್ಕಿಳಿಸುವಲ್ಲಿ, ಹಾಗೂ 'ವಿಶ್ವಕರ್ಮ ಪ್ರಕಾಶ' ಮಾಸಿಕವನ್ನು ಪ್ರಾರಂಭಿಸುವಲ್ಲಿ ಇವರೇ ಸ್ಫೂರ್ತಿ. ಅಷ್ಟೇ ಅಲ್ಲ ಪ್ರವಾಸ ಮಾಡಿ ಸ್ಫೂರ್ತಿಯುತ ಭಾಷಣಗಳ ಮೂಲಕ ಜನಕ್ಕೆ ಜ್ಞಾನದಾನ ಮಾಡಿದ್ದಾರೆಂದರೆ ಇವರ ಇಳಿವಯಸ್ಸಿನಲ್ಲಿ ಅದೆಂತಹ ದೊಡ್ಡ ಹುರುಪಿದೆಯೆಂಬುದು ಸುವಿದಿತ.

ಶ್ರೀಯುತರ ಲೇಖಣಿ ಹರಿತವಾದುದು; ಹುರುಪಾದುದು. ಮೈಸೂರಿನ ಹಾಗೂ ಮಂಗಳೂರಿನ 'ವಿಶ್ವಕರ್ಮ' ಪತ್ರಿಕೆಗಳಲ್ಲಿ, ತುಮಕೂರಿನ 'ವಿಶ್ವಕರ್ಮ ಪ್ರಕಾಶ'ದಲ್ಲಿ ಅಲ್ಲದೆ ಕನ್ನಡ ನಾಡಿನ ಪ್ರಮುಖ ವೃತ್ತಾಂತ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿರುವ ಅವರ ಲೇಖನಗಳು ಈ ಮಾತಿಗೆ ಸಾಕ್ಷಿಯಾಗಿವೆ. ಈಚೆಗೆ ಅವರು ಅನೇಕ ಅನುವಾದಗಳನ್ನೂ ಮಾಡಿರುವರು. ಅವುಗಳಲ್ಲಿ ಆಂಧ್ರ ಪ್ರದೇಶದ ಡಾ. ಕೊಂಡೂರು ವೀರರಾಘವಾಚಾರ್ಯರ 'ಕಳಾರಾಧನ' ಎಂಬ ತೆಲುಗು ಕಾದಂಬರಿಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಅವರ ಎಲ್ಲ ಲೇಖನಗಳನ್ನೂ ಒಂದೆಡೆ ಸೇರಿಸಿ ಪ್ರಕಟಿಸಿದರೆ ಅವರ ಬರೆಹಗಳ ವೈಶಿಷ್ಟ್ಯ ಹಾಗೂ ಆಳ ಎಷ್ಟೊಂದು ಎಂಬುದು ಕಂಡು ಬರುತ್ತದೆ.



"ವಿಶ್ವಕರ್ಮನೇ ಜಗತ್ಕರ್ತ. ಅವನ ವಂಶಜರಿಂದಲೇ ನಾಡಿನ ಧರ್ಮ, ಸಂಸ್ಕೃತಿ, ವಿದ್ಯೆ, ಜ್ಞಾನಗಳೆಲ್ಲಾ ಹುಟ್ಟಿದವು–ಬೆಳೆದವು; ಲೋಕಕ್ಕೆ ಶಾಂತಿ, ಸುಭಿಕ್ಷ, ತುಷ್ಟಿ–ಪುಷ್ಟಿಗಳುಂಟಾದವು. ವೇದಸಮ್ಮತವಾದ ವಿಶ್ವಕರ್ಮ

ಮತವನ್ನು ಕಡೆಗಣಿಸಿದಾಗಲೇ ದೇಶವೂ ಹಿಂದುಳಿಯಲು ಮೊದಲಾಯಿತು. ವಿಶ್ವಕರ್ಮ ವಂಶಜರು ವಿಶ್ವಕರ್ಮಾರಾಧನೆಯನ್ನು ಬಿಟ್ಟಂದಿನಿಂದಲೇ ಬಡತನ ಅಜ್ಞಾನಗಳಿಗೆ ತುತ್ತಾದರು. ಈಗಲೂ ನಮ್ಮ ಧರ್ಮವನ್ನು ನಾವು ಅರಿತು ಆಚರಿಸಿದರೆ ಮಾತ್ರ ನಮ್ಮ ಪೂರ್ವ ವೈಭವವನ್ನು ಗಳಿಸಿಕೊಂಡು ನಾಡಿನ ಉಪಯುಕ್ತ ಜನಾಂಗವೆನಿಸಿಕೊಳ್ಳಲು ಸಾಧ್ಯ" ಈ ಮಾತು ಅವರ ಪ್ರತಿದಿನದ ಜಪವಾಗಿದೆ. ಇಂತಹ ಮಹನೀಯರ ಸಂಖ್ಯೆ ನಮ್ಮಲ್ಲಿ ಹೆಚ್ಚಲಿ.

ಶ್ರೀ ಆಚಾರ್ಯರ ಈ ಆದರ್ಶ ತತ್ತ್ವಾಭಿಮಾನ ನಮ್ಮೆಲ್ಲರಿಗೂ ಮಾರ್ಗ ದರ್ಶಕವಾಗಿದೆ. ಅವರ ಸಪ್ತತ್ಯಬ್ದಿಯಂದು ನಮ್ಮ ಸಮಾಜದವರಿಗೆ ಈ ದಿವ್ಯ ಭವ್ಯ ಸಂದೇಶದ ಉಣಿಸು ಸಿಕ್ಕಲಿ. ಆಚಾರ್ಯರು ನೂರ್ಕಾಲ ಬಾಳಲಿ. ಅವರ ಬಾಳು ಬಂಗಾರವಾಗಲಿ.

ಸಂಗೀತವಿದ್ವಾನ್
ತಾ. ನೆಂ. ಮುತ್ತಾಚಾರ್ಯ, ಬಿ.ಎ(ಆನರ್ಸ್)., ಬಿಎಡ್,
ಸಂಪಾದಕರು : ವಿಶ್ವಕರ್ಮ ಪ್ರಕಾಶ, ಬೆಂಗಳೂರು.

ತ್ರಿಮೂರ್ತಿ

ಪುರೋಹಿತ, ಅಧಿಕಾರಿ, ಲೇಖಕ-ಇವರೆಲ್ಲ ವಿಭಿನ್ನರಂಗದ, ವಿಭಿನ್ನ ಅಭಿರುಚಿಯ, ವಿಭಿನ್ನವ್ಯಕ್ತಿಗಳು. ಒಬ್ಬ ವ್ಯಕ್ತಿಯಲ್ಲಿ ಈ ತ್ರಿಗುಣಗಳ ಸಮಾವೇಶ ಅಪೂರ್ವ. ಇಂತಹ ಅಪರೂಪದ ವ್ಯಕ್ತಿ ಪೂಜ್ಯ ಶ್ರೀ 'ನಾಭಾ'.

ಬ್ರಹ್ಮಕಲಶ ಮಹೋತ್ಸವ, ದೇವತಾರಾಧನೆ, ಬ್ರಹ್ಮೋಪದೇಶ, ಮದುವೆಗಳಂತಹ ಮಂಗಲ ಕಾರ್ಯಗಳಲ್ಲಿ ಪುರೋಹಿತರ ಸ್ಥಾನದಲ್ಲಿ ಭವ್ಯವಾಗಿ, ಸಾಲಂಕೃತರಾಗಿ ಮಂಡಿಸಿ, ಉಚ್ಚ ಕಂಠದ, ಸ್ವಚ್ಛ-ಸುಮಧುರ ಮಂತ್ರ ಘೋಷಕೆ ಮೊದಲು ಮಾಡಿದರೆಂದರೆ, ಶ್ರೀ 'ನಾಭಾ, ಅವರು ಅಧಿಕಾರಿ, ಲೇಖಕ ಎಂಬುದನ್ನು ಮರೆಯಬೇಕಾಗುತ್ತದೆ.



ಶಿರಸ್ತೇದಾರರಾಗಿ ಸರಕಾರೀ ರಂಗದಲ್ಲಿ ಸೇವೆಸಲ್ಲಿಸುತ್ತಿದ್ದಾಗಿನ ಶ್ರೀ 'ನಾಭಾ'ಅವರ ಕರ್ತವ್ಯ ನಿಷ್ಠೆ, ಆಡಳಿತ ನಿರ್ವಹಣೆಯ ಚಾಕಚಕ್ಯತೆ, ಪ್ರಾಮಾಣಿಕತೆಗಳೆಲ್ಲ ಇವರ ಸಹೋದ್ಯೋಗಿಗಳಲ್ಲಿ ಈಗಲೂ ಹಚ್ಚಹಸಿರು.

ಕನ್ನಡ, ಇಂಗ್ಲೀಷ್ ಭಾಷೆಗಳ ಇವರ ಪ್ರೌಢಲೇಖನಗಳಿಂದ ವ್ಯವಸಾಯಿ ಲೇಖಕರ ಸ್ಮರಣೆ.

ಯಜ್ಞದಲ್ಲಿ ಅಗ್ನಿಪ್ರಧಾನ. ಅಗ್ನಿ ಸೃಷ್ಟಿಯ ಸಂಕೇತ. ಈ ಅಗ್ನಿಯ ಮೂಲಕ ಮಂಗಲಕಾರ್ಯ ಎಂದರೆ, ದೈವೀಭಾವದ ಅವತರಣಕ್ಕೆ ಆಹ್ವಾನ ಅರ್ಥಾತ್ ಭಕ್ತಿಯ ಸೃಷ್ಟಿ. ಸೃಷ್ಟಿಕರ್ತ ಬ್ರಹ್ಮ.

ಕರ್ಮದಲ್ಲಿ ಅಪಾರ ನಿಷ್ಠೆ, ಶ್ರದ್ಧಾನ್ವಿತ, ಕರ್ಮಾಚರಣೆಯಿಂದ ಮಾತ್ರ ಜೀವನದಲ್ಲಿ ಸುಗತಿಯುಸ್ಥಿತಿ. ಸುಗತಿ-ಸುಸ್ಥಿತಿಗಾಗಿ ಧರ್ಮ-ಕರ್ಮದ ಸಂದೇಶ ವನ್ನು ನೀಡುವವನು ಪಾಲಕ ವಿಷ್ಣು.

ಲಯ ಪ್ರಪಂಚದ ಒಂದು ಅವಸ್ಥೆ. ಲಯದಲ್ಲೂ ಒಂದು ಅಚ್ಚು ಕಟ್ಟುತನ. ಲಯಕಾರ ಈಶ್ವರ.

ಶ್ರೀ 'ನಾಭಾ' ಮಂಗಲಕಾರ್ಯಗಳಿಂದ ಜನಮನದಲ್ಲಿ ದೈವೀಭಾವ ವನ್ನು ಸೃಷ್ಟಿಸಿದರು. ಅಧಿಕಾರಿಗಳಾಗಿ ಸಹೋದ್ಯೋಗಿಗಳ ಧರ್ಮ-ಕರ್ಮ ಗಳಲ್ಲಿ ಸುಸ್ಥಿತಿಯನ್ನು ರಕ್ಷಿಸಿದರು. ಸಿಂಹ ಘರ್ಜನೆಯಂತೆ ಗುಡುಗಿ, ಸಮಾಜದ ವ್ಯಕ್ತಿಗಳ ಆಚಾರ-ವಿಚಾರಗಳಲ್ಲಿ ಕವಿದಿದ್ದ ಅಜ್ಞಾನ, ಅಶ್ರದ್ಧೆ, ಅಂಧಕಾರ ಗಳನ್ನು ಲಯಗೊಳಿಸಿ, ಸುಜ್ಞಾನದ ತಿಳಿಬೆಳಕನ್ನು ಮೂಡಿಸಿದರು. ಈ ದೃಷ್ಟಿಯಿಂದ ಶ್ರೀ 'ನಾಭಾ' ತ್ರಿಮೂರ್ತಿ !

ಇಷ್ಟೇ ಅಲ್ಲ ಅವರ ವಿಶಿಷ್ಟತೆ—ಬಹುಭಾಷಾ ಪಂಡಿತರು. ಸೌಂದರ್ಯ ಜಿಜ್ಞಾಸೆಯೇ ಪ್ರಧಾನ ಜೀವವಾದ ಶ್ರೀ ಕೊಂಡೂರು ವೀರರಾಘವಾಚಾರ್ಯರ 'ಶಿಲ್ಪ ದರ್ಶನಮು' ತೆಲುಗು ಗ್ರಂಥವು, ಸಮಾಜದ ಮೈಸೂರಿನ ಮಾಸಿಕದಲ್ಲಿ ಧಾರಾವಾಹಿಯಾಗಿ ಬೆಳಕು ಕಂಡಾಗ, ಕನ್ನಡಿಗೆ ಇಷ್ಟೊಂದು



ಸವಿಯೇ ? ಸೊಗಸೇ ? ಎಂಬ ಪ್ರಶ್ನೆಗಳ ಬಿಳಿನೊರೆ. ತೆಲುಗಿನ ವೈಚಾರಿಕ ಮಾರ್ದವತೆಯನ್ನು, ಕನ್ನುಡಿಯ ಬಂಧುರತೆಯಲ್ಲಿ ಬಂಧಿಸಿದವರು ಶ್ರೀ 'ನಾಭಾ'.


ಪ್ರಕಾಂಡ ಪಂಡಿತರೊಬ್ಬರು, ಬೃಹತ್ ಸಭೆಯೊಂದರಲ್ಲಿ ದೇವ ಭಾಷೆ ಸುಲಲಿತ ಸಂಸ್ಕೃತದಲ್ಲಿ ಅಸ್ಖಲಿತವಾಣಿಯಿಂದ ತಮ್ಮ ಸಂದೇಶವನ್ನು ನೊಳಗಿದರು. ಪಂಡಿತೋತ್ತಮರ ವಾಗ್ಝರಿಯನ್ನು ಅಷ್ಟೇ ಮಧುರವಾಗಿ, ಲಾಲಿತ್ಯ ಪ್ರಕಾರವಾಗಿ ಕನ್ನಡೀಕರಿಸಿದವರು ಶ್ರೀ 'ನಾಭಾ'

ಕೋಯಂಬತ್ತೂರಿನ ಸಮಾಜದ ಬೃಹತ್ ಕೈಗಾರಿಕೋದ್ಯಮಿಗಳೊಬ್ಬರು, ತಮ್ಮ ಸತ್ಕಾರಕೂಟದಲ್ಲಿ ತೆಲುಗಿನಲ್ಲಿ ತಮ್ಮ ಸಾಧನೆಯ ಹಿಂದಿನ ಸ್ಫೂರ್ತಿ, ಸಮಾಜದ ಏಳಿಗೆಯ ವಿಚಾರ ಮಂಥನ ನಡೆಸಿದರು. ಇಲ್ಲಿಯೂ, ತೆಲುಗು ವಿಚಾರ ಧಾರೆಯನ್ನು ಕನ್ನಡಕ್ಕೆ ಸೊಗಸಾಗಿ ಭಟ್ಟಿ ಇಳಿಸಿದರು ಶ್ರೀ 'ನಾಭಾ'

ಶ್ರೀ 'ನಾಭಾ' ವಿಚಾರ, ಅವರ ಭವ್ಯಾಕೃತಿಯಂತೆ ಹಿಮಾಲಯ ಸದೃಶ. ವಿಚಾರದ ಹರಹು ಸಾಗರದಂತೆ ವಿಸ್ತಾರ; ಆಳ, ಅಷ್ಟೇ ಗಂಭೀರ.

ಗಾಂಭೀರ್ಯದ ಪ್ರತಿಮೂರ್ತಿಯೇ ಶ್ರೀ 'ನಾಭಾ' ಎನ್ನೋಣವೇ ? ತಪ್ಪು ತಪ್ಪು. ಗಂಭೀರ ಬಂಡೆಯ ಅಂತರಂಗದಲ್ಲಿ ನಿರ್ಮಲ ಸಲಿಲದ ಥಳಕು ಎಂತೋ, ಶ್ರೀ 'ನಾಭಾ'ರವರ ಗಾಂಭೀರ್ಯದ ಮಧ್ಯದಲ್ಲೂ ತಿಳಿಹಾಸ್ಯದ ಲಕಲಕ ಹೊಳಪು. ಅವರನ್ನು ವಿಚಾರ ವಿಮರ್ಶೆಗೆ, ವಾದಕ್ಕೆ ಎಳೆಯಬೇಕು. ವಿಚಾರದ ಹೊನಲಿಗೆ ಜೋಗದ ಧಾರೆಯ ಭೋರ್ಗರೆತ. ಮಧ್ಯೆ, ಮಧ್ಯೆ ಹಾಸ್ಯದ ತೂಂತುರಿನ ಲಾಸ್ಯ.

ಶ್ರೀ 'ನಾಭಾ' ಅವರ ಪಂಚಮುಖಗಳ ಅಧ್ಯಯನವೆಂದರೆ, ಪಂಚವರ್ಣ, ಪಂಚವದನಾರವಿಂದಗಳ ವಿಶ್ವಕರ್ಮದರ್ಶನದ ಆನಂದದ ಅನುಭವ ಪುಳಕ. ಸುಮಾರು ಅರ್ಧಶತಮಾನದಿಂದ ಸಮಾಜದಲ್ಲಿ ವೈಚಾರಿಕ ಕ್ರಾಂತಿಯ




ಮನೋಭಾವವನ್ನು ಅರಳಿಸಲು ಶ್ರಮಿಸಿದ, ಅಹರ್ನಿಶಿ ಕನ್ನಡ, ತೆಲುಗು ನೆಲ ವೆನ್ನದೆ ಅಲೆದಾಡಿ, ತಮ್ಮ ವಿಚಾರ ವೀಚಿಯನ್ನು ಹರಡಿದ ಶ್ರೀ 'ನಾ ಭಾ' ಅವರು, "ತಮ್ಮ ಜೀವಿತದ ಶ್ರಮ ವ್ಯರ್ಥವಾಗಿಲ್ಲ, ಸಮಾಜದಲ್ಲಿ ಒಂದು ರೀತಿಯ ಚೈತನ್ಯದ ಅಲೆ ಸುಳಿದಾಡುತ್ತಿದೆ. ಈ ಚೈತನ್ಯ ಪರಮ ಚೈತನ್ಯ ವಾಗಿ, ಸಮಾಜದ ಪೂರ್ವದ ತೇಜಸ್ಸು ದೇದೀಪ್ಯಮಾನವಾಗಿ ಬೆಳಗಲಿದೆ ಎಂಬ ಸಂತೃಪ್ತಿಯ ಸದಾಶಯವನ್ನು ತಮ್ಮಲ್ಲಿ ತುಂಬಿಕೊಳ್ಳಬಹುದು.

ಶ್ರೀ 'ನಾಭಾ' ಅವರು ಶತಾಯುಷಿಗಳಾಗಬೇಕು. ಸಮಾಜದ ಕೀರ್ತಿ ಪತಾಕೆ ನಭೋಮಂಡಲದಲ್ಲಿ ಪಟಪಟನೆ ತೂಗಾಡುವ ಸುದಿನಗಳನ್ನು ವೀಕ್ಷಿಸಬೇಕು.

ಕಾ. ವಾ. ಆಚಾರ್ಯ, ಶಿರ್ವ (ದ.ಕ)

ಶಿಲ್ಪ ವಿದ್ಯಾ ಪಾರಂಗತ

'ನಾಭಾ' ಅವರ ಪರಿಚಯವು ನನಗೆ ತುಂಬಾ ಹಳೆಯದು. ಅವರ ಉದ್ಬೋಧಕ ಲೇಖನಗಳನ್ನು ಓದಿ ಪ್ರಭಾವಿತನಾಗಿದ್ದೆ. ಅವರನ್ನು ಕಾಣ ಬೇಕೆಂಬ ಹಂಬಲವು ಬಹುವಾಗಿದ್ದರೂ ಅದು ಸಾಧ್ಯವಾದದ್ದು ಅವರು ಹುಬ್ಬಳ್ಳಿಗೆ ಬಂದಿದ್ದಾಗ ಸುಮಾರು ಹದಿನಾಲ್ಕು ವರ್ಷಗಳಹಿಂದೆ. ಅವರನ್ನು ಪ್ರಥಮಬಾರಿಗೆ ಸಂದರ್ಶಿಸಿದಂದೇ ನನ್ನಲಿದ್ದ ಗೌರವ ಭಾವ ಮತ್ತಷ್ಟು ದೃಢ ಗೊಂಡಿತು. ಅವರ ಮಾತಿನ ಶೈಲಿ, ಸಮಸ್ಯೆಗಳನ್ನು ವಿಶ್ಲೇಷಿಸುವ ವೈಖರಿ ಯನ್ನು ಮೆಚ್ಚಿದೆ. ಅವರ ಸಲಹೆಗಳು-ಸೂಚನೆಗಳು ಸಮಾಜದ ಉಚ್ಛ್ರಾಯವನ್ನೇ ಗಮನದಲ್ಲಿರಿಸಿ ಕೊಂಡಿರುವವು ಎಂಬುದನ್ನು ಗುರುತಿ ಸಿದ್ದೇನೆ.




ಈ ಪರಿಚಯ ನಾನು ಬೆಂಗಳೂರಿಗೆ ಬಂದು ನೆಲಸಿದ ಮೇಲೆ ಮತ್ತಷ್ಟು

ನಿಖರಗೊಂಡಿತು. ಹಲವು ವೇದಿಕೆಗಳಲ್ಲಿ ಅವರನ್ನು ಕಾಣುವ ಸುಯೋಗ ಲಭಿಸಿತು.

'ನಾಭಾ' ಅವರು ವೈದಿಕರಾಗಿ, ವಾಗ್ಮಿಗಳಾಗಿ, ಲೇಖಕರಾಗಿ, ಸಮಾಜ ಸೇವಕರಾಗಿ ಹಲವರಿಗೆ ಪರಿಚಯವಿರುವುದು ವಿಶೇಷವೇನೂ ಅಲ್ಲ. ಇದು ಸಾಮಾನ್ಯವಾಗಿ ಅವರನ್ನು ಎಲ್ಲರೂ ಗುರುತಿಸಿರುವ ಪರಿ. ಅವರ ವಿದ್ವತ್ತಿನ ಇನ್ನೊಂದು ಮುಖ ನೋಡುವ ಯೋಗ ನನಗೆ ಲಭಿಸಿತು.

ಮುಂಬೈನಲ್ಲಿರುವ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಅಧ್ಯಾಪಕರಾಗಿರುವ ನನ್ನ ಮಿತ್ರರೊಬ್ಬರು ನನ್ನಲ್ಲಿಗೆ ಬಂದಿದ್ದರು. ಅವರಿಗೆ ಶಿಲ್ಪ ಶಾಸ್ತ್ರದ ಬಗ್ಗೆ ಮಾಹಿತಿ ಬೇಕಾಗಿತ್ತು. ನನಗೆ ಈ ಬಗ್ಗೆ ಅಧಿಕಾರಯುತವಾಗಿ ತಿಳಿಸಬಲ್ಲವರ್ಯಾರೂ ತಿಳಿದಿರಲಿಲ್ಲ. 'ನಾಭಾ' ಅವರನ್ನು ಕೇಳಿದರೆ ಕನಿಷ್ಠ ನಾವು ಯಾರಲ್ಲಿ ಈ ಬಗ್ಗೆ ವಿವರಗಳನ್ನು ತಿಳಿಯಬಹುದೆಂಬುದಾದರೂ ತಿಳಿಯಬಹುದು ಎಂದು ಕೊಂಡು ಅವರಲ್ಲಿಗೆ ಹೊರಟೆವು.

ತುಂಬಾ ವಿಶ್ವಾಸದಿಂದ ನಮ್ಮನ್ನು ಸ್ವಾಗತಿಸಿದರು. ವಿವರ ತಿಳಿಸುತ್ತಲೇ ತುಂಬಾ ಉತ್ಸಾಹದಿಂದ ಶಿಲ್ಪ ಶಾಸ್ತ್ರಗಳು, ಅವುಗಳ ಪ್ರಸ್ತುತ ಸ್ಥಿತಿ, ನೆರೆ ನಾಡುಗಳಲ್ಲಿ ಅವುಗಳ ರಕ್ಷಣೆಗಾಗಿ ನಡೆಯುತ್ತಿರುವ ಪ್ರಯತ್ನಗಳು, ಶಿಲ್ಪಕಲಾ ಶಾಲೆಗಳು, ಶಿಲ್ಪಾಚಾರ್ಯರು ಹೀಗೆ ನಾನಾ ವಿಚಾರಗಳನ್ನು ತಿಳಿಸಿ ಶಿಲ್ಪ ಶಾಸ್ತ್ರದ ಬಗ್ಗೆ ತೆಲುಗು, ಇಂಗ್ಲೀಷಿನಲ್ಲಿ ಪ್ರಕಟವಾಗಿರುವ ಹಲವಾರು ಕೃತಿಗಳನ್ನು ತೆಗೆದು ಮುಂದೆ ಹರವಿ ಅವುಗಳಲ್ಲಿ ಹೇಳಿರುವ ವಿಶೇಷಗಳನ್ನು ತಾವೇ ಓದಿ ಹೇಳುತ್ತಾ ಕುಳಿತರು. ಎಪ್ಪತ್ತರಲ್ಲೂ ಅವರ ವಿಶೇಷ ಜ್ಞಾಪಕಶಕ್ತಿ, ಕನ್ನಡಕದ ಗೋಜಿಗೆ ಹೋಗದೆ ನಿರರ್ಗಳವಾಗಿ ಅವರೇ ಓದುವ ರೀತಿ, ಪ್ರತಿ ವಿಷಯದಲ್ಲೂ ಅವರು ಸಾಧಿಸಿರುವ ಪಾಂಡಿತ್ಯ, ಅಧ್ಯಯನದ ಆಳಗಳು ನಮ್ಮನ್ನೆಲ್ಲಾ ನಿಬ್ಬೆರಗಾಗಿಸಿದವು.



ಅಂದು ನನಗೆ ವಿಚಿತ್ರವಾಗಿ ಕಂಡದ್ದು ವೈದಿಕ ವಿದ್ವಾಂಸರಾಗಿ ವೈಶ್ವಕರ್ಮಣ

ಧರ್ಮ, ಸಮಾಜದ ಶ್ರೇಯಸ್ಸನ್ನೇ ತಮ್ಮ ಭಾಷಣಗಳ ವಸ್ತುವಾಗಿ ಆರಿಸಿಕೊಳ್ಳುತ್ತಿದ್ದವರು ಶಿಲ್ಪಶಾಸ್ತ್ರದ ಅಧ್ಯಯನ ಮಾತ್ರವಲ್ಲ ಅದರಲ್ಲಿ ಅಪಾರವಾದ ಪಾಂಡಿತ್ಯವನ್ನು ಸಾಧಿಸಿದ್ದಾರೆ ಎಂಬುದು ನನಗೆ ವಿಸ್ಮಯದ ಸಂಗತಿಯಾಗಿತ್ತು. ನನ್ನ ಮಿತ್ರರಿಗಂತು ಈ ವಿಚಾರಗಳು ತುಂಬಾ ಸಂತೃಪ್ತಿಯನ್ನು ಒದಗಿಸಿತ್ತು. ನಮ್ಮ ಈ ಮಾತುಕತೆ ಸುಮಾರು ನಾಲ್ಕೈದು ಘಂಟೆಗಳಕಾಲವೇ ನಡೆಯಿತಾದರೂ ಕಾಲ ಕಳೆದದ್ದೇ ನಮಗೆ ಗುರುತು ಸಿಗಲಿಲ್ಲ.

'ನಾಭಾ' ಅವರ ನೆನಪಾದಾಗಲೆಲ್ಲಾ ಅವರ ಶಿಸ್ತು, ಕಾರ್ಯ ನಿರತತೆಗಳೇ ನನ್ನ ಕಣ್ಮುಂದೆ ಸುಳಿಯುತ್ತವೆ. ಇವರ ಸಮಾಜಾಭಿಮಾನ ನೆನಪಾದಾಗಲೆಲ್ಲಾ ಇವರು ನಮ್ಮ ಸಮಾಜಕ್ಕೆ ವಿಶ್ವಕರ್ಮನು ಕೊಟ್ಟಿರುವ ಕಾಣಿಕೆ ಎನಿಸುತದೆ.

ಕೃಷ್ಣಮೂರ್ತಿ ಎನ್. ಮಯಾಚಾರ್ಯ, ಎಂ.ಎ., ಬೆಂಗಳೂರು

ಆದರ್ಶ ಪುರುಷ

ಪರಂಪರಾನುಗತವಾದ ಧರ್ಮವನ್ನು, ರೂಢಿಸಿಕೊಂಡುಬಂದ ಸಂಸ್ಕೃತಿಯನ್ನು ಅರಿಯುವುದರಿಂದಲೇ ಯಾವುದೇ ಸಮಾಜದ ಅಭ್ಯುದಯ ಸಾಧಿತವಾಗುವುದರಲ್ಲಿ ಹಾದಿ ಸುಗಮವಾಗುತ್ತದೆ. ಈ ಧರ್ಮ-ಸಂಸ್ಕೃತಿಗಳನ್ನು ಮರೆತಾಗ ಸಮಾಜವು ದಿಕ್ಕುಗಾಣದೆ ಸಾಗರದ ಮಧ್ಯೆ ಸಿಕ್ಕಿಕೊಂಡು ದಿಕ್ಕುಮರೆತ ಹಡಗಿನಂತೆ ಅನಾಥವಾಗುತ್ತದೆ. ಸಮಾಜಕ್ಕೆ ಮಾರ್ಗದರ್ಶಕರಾಗಿ ಆದರ ಧರ್ಮ ಸಂಸ್ಕೃತಿಗಳನ್ನು ಎತ್ತಿಹಿಡಿಯುವಂತಹ ಮಹನೀಯರು ತ್ರಿಕಾಲಸ್ಮರಣೀಯರಾಗಿ ಎಲ್ಲರ ಅಭಿವಂದನೆಗಳಿಗೂ ಭಾಜನರಾಗುತ್ತಾರೆ. ಇಂತಹ ಅಪೂರ್ವ ಮಹಾನ್ ವ್ಯಕ್ತಿ ಶ್ರೀ 'ನಾಭಾ'.



ಶ್ರೀರಂಗಪಟ್ಟಣದ ವೈಶ್ವಕರ್ಮ್ರಣ ಮಹಾಯಾಗದ ಸಂದರ್ಭದಲ್ಲಿ, ೧೯೫೨ ರಲ್ಲಿ, ಆಚಾರ್ಯರನ್ನು ಮೊದಲ ಬಾರಿಗೆ ಕಂಡೆ ಅಂದಿನ ವೈಭವ ಪೂರ್ಣಕಾರ್ಯಕ್ರಮ ನನ್ನ ಸ್ಮೃತಿ ಪಟಲದಿಂದ ಇಂದಿಗೂ ಅಳಿದಿಲ್ಲ. ಪ್ರಾತಃಸ್ಮರಣೀಯರಾದ ಮ. ಗಂಗಾಧರಮೂರ್ತಿಗಳ ಜೊತೆಯಲ್ಲಿ ಬಾಲ್ಯ ದಲ್ಲಿಯೇ ಸಮಾಜ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡು ಇದುವರೆವಿಗೂ ಎಡೆ ಬಿಡದೆ ಸೇವಾವೃತ್ತಿ ಸಾಗಿಸುತ್ತಿರುವ ಯೋಗಿಗಳು. ತಮ್ಮ ಲೇಖನ-ಭಾಷಣ ಗಳಿಂದ ಸಮಾಜವನ್ನು ಬಡಿದೆಚ್ಚರಿಸುತ್ತಿರುವರು. ಸಮಾಜೋದ್ಧಾರವು ಯಾವ ಮಾರ್ಗದಲ್ಲಿ ಸಾಗಬೇಕೆಂಬುದನ್ನು ತೋರಿಸುತ್ತಿರುವವರು.

ಮಂಗಳೂರು ಶ್ರೀಕಾಳಿಕಾಂಬಾ ವಿನಾಯಕ ದೇವಾಲಯದಲ್ಲಿ ಪಾಲ್ಕೆ ಬಾಬುರಾಯಾಚಾರ್ಯರು ಆಡಳಿತ ಮೊಕ್ತೇಸರರಾಗಿದ್ದಷ್ಟು ಕಾಲವೂ ಯುಗಾದಿ ಉತ್ಸವಗಳಲ್ಲಿ ಶ್ರೀ 'ನಾಭಾ' ಅವರು ತಪ್ಪದೆ ಭಾಗವಹಿಸಿ ಅಲ್ಲಿಯ ಸಮಾರಂಭಗಳಿಗೆ ಹೆಚ್ಚಿನ ಶೋಭೆಯನ್ನು ತರುತ್ತಿದ್ದರು. ಸಮಯನಿಷ್ಠರು, ಆಚಾರವಂತರು, ಸಮಾಜಕ್ಕೆ ಆದರ್ಶಪ್ರಾಯರು. ಇಂತಹ ಹಿರಿಯರು ಅನು ಸರಿಸಿದ ಹಾದಿಯನ್ನು ಗುರ್ತಿಸಿ ಕಿರಿಯರು ಅನುಸರಿಸುವುದರಲ್ಲಿ ಸಮಾಜಕ್ಕೆ ಹಿತವಿದೆ.

ಹಲವಾರು ಸಂಸ್ಥೆ, ಸಂಘಗಳಿಂದ ಗೌರವಿಸಲ್ಪಟ್ಟು ವಿದ್ಯಾಲಂಕಾರ, ವಿಶ್ವಕರ್ಮ ಜ್ಞಾನಧುರಿಣ, ಅಧ್ವರ್ಯು ಶಿರೋಮಣಿ, ವಿದ್ಯಾಭೂಷಣ ಮುಂತಾದ ಬಿರುದುಗಳಿಗೆ ಅರ್ಹರಾಗಿರುವ ಶ್ರೀ 'ನಾಭಾ' ಅವರು ನೂರು ವಸಂತಗಳನ್ನು ಕಾಣಲಿ. ಅವರಿಂದ ಇನ್ನೂ ಹೆಚ್ಚಿನ ಸೇವೆ ಸಮಾಜಕ್ಕೆ ಲಭಿಸಲಿ.

ಎಂ ಗೋಪಾಲ ಆಚಾರ್ಯ,
ಮಂಗಳೂರು.



ಅನುಭವದ ಸಾಗರ

ಆಚಾರ್ಯರು ಅನುಭವದ ಸಾಗರ. ಅವರ ಅನುಭವಗಳೂ ಬಹುಮುಖ. ಅವನ್ನು ಸಮೀಪವರ್ತಿಗಳು ಮಾತ್ರವೇ ಬಲ್ಲರು. ಅವುಗಳಲ್ಲಿ ಒಂದೆರಡನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವು ಆಚಾರ್ಯರ ಅಂತರಂಗವನ್ನು ತಮ್ಮಮುಂದೆ ಹರಪುವುದರಲ್ಲಿ ಸ್ವಲ್ಪ ಮಟ್ಟಿಗಾದರೂ ನೆರವಾಗುತ್ತವೆ ಎಂದು ಭಾವಿಸಿದ್ದೇನೆ.

* * *

೧೯೫೨ರಲ್ಲಿ ವೈಶ್ವಕರ್ಮಣ ಮಹಾಯಾಗದ ಸಂದರ್ಭ. ಶ್ರೀರಂಗ ಪಟ್ಟಣಕ್ಕೆ ಹೊಸ ಕಳೆ ಬಂದಿತ್ತು. ಪ್ರವಾಸೀ ಮಂದಿರದ ಮುಂಭಾಗದಲ್ಲಿ ಬೃಹತ್ ಚಪ್ಪರದಲ್ಲಿ ಸಮಾರಂಭ ನಡೆಯುತ್ತಿತ್ತು. ಶ್ರೀ ಗಾಯತ್ರಿ ಪೀಠಾಧ್ಯಕ್ಷರಾದ ಶ್ರೀ ಮೀಪೂರಿ ಸಂಸ್ಥಾನಾಧೀಶರ ಸಮ್ಮುಖದಲ್ಲಿ ಕಾರ್ಯಕ್ರಮ ವೈಭವಯುತವಾಗಿ ಸಾಗಿತ್ತು. ಪೂರ್ಣಾಹುತಿಯ ನಂತರ ಬ್ರಾಹ್ಮಣ ಸಂತರ್ಪಣೆ, ವಿದ್ವನ್ಮಣಿಗಳು, ಅರಮನೆಯಿಂದ ಆಹ್ವಾನಿತರಾಗಿದ್ದವರು, ಅತಿಥಿಗಳು ಹೀಗೆ ಅನೇಕರು ಭೋಜನ ಮಾಡುತ್ತಿದ್ದರು. ಯಾಗದ ಆಚಾರ್ಯ ಸ್ಥಾನದಲ್ಲಿ ನಾಥಾ ಅವರು ಎಲ್ಲರನ್ನು ಆಕರ್ಷಿಸಿದ್ದರು. ಬೆಲೆ ಬಾಳುವ ಆಕರ್ಷಕ ಶಾಲು ವನ್ನು ಹೊದೆದು ಗಂಧಾಕ್ಷತೆಗಳನ್ನು ಧರಿಸಿದ್ದ ಎತ್ತರವಾದ ವ್ಯಕ್ತಿ ಎಲ್ಲರ ಕಣ್ಮನಗಳನ್ನೂ ಸೆಳೆದಿದ್ದರು. ಊಟವೂ ತುಂಬಾ ಸೊಗಸಾಗಿತ್ತು. ಅಚ್ಚುಕಟ್ಟಾದ ವ್ಯವಸ್ಥೆ. ಶಾಂತಿ ಮಂತ್ರವನ್ನು ಪಠಿಸಿ ಉತ್ತರಾಪೋಶನ ತೆಗೆದುಕೊಂಡು ಕೈ ತೊಳೆಯಲು ಬಳಿಯಲ್ಲಿಯೇ ಇದ್ದ ನದಿಯತ್ತ ಓಡುತ್ತಿದ್ದರು.

ಆಚಾರ್ಯರೂ ಪಕ್ಕದಲ್ಲಿದ್ದವರೊಂದಿಗೆ ಏನೋ ಮಾತನಾಡುತ್ತಾ ಕೈ ತೊಳೆಯಲೆಂದು ಹೋಗುತ್ತಿದ್ದರು. ಯಾರೋ ಕರೆದಂತಾಯಿತು. ತಕ್ಷಣ ನಿಂತು ಹಿಂತಿರುಗುತ್ತಲೇ ಹಿಂದೆಯೇ ಬರುತ್ತಿದ್ದವರೊಬ್ಬರ ಕೈ ಶಾಲುವನ್ನು ತಾಕಿತು. ಎಂಜಲಾಯಿತಲ್ಲಾ ಎಂಬ ಭಾವನೆಯಿಂದ ತುಂಬಾ ಸಂಕೋಚ




ಗೊಂಡು "ಸ್ವಾಮಿ, ತಪ್ಪಾಯಿತು ಕ್ಷಮಿಸಿ. ತಮ್ಮ ಶಾಲು ಇತ್ತ ಕೊಡಿ ತೊಳೆದು ಕೊಡುತ್ತೇನೆ" ಎಂದು ಹೇಳಿದ.

ಎಲ್ಲರೂ ನಮ್ಮವರೆಂಬ ಹೃದಯ ವೈಶಾಲ್ಯದ ಆಚಾರ್ಯರು ಆತನ ಮನಸ್ಸಿಗೆ ಮುಜುಗರ ಉಂಟು ಮಾಡಬಾರದೆಂದು ಶಾಲು ತೆಗೆದು ಕೊಟ್ಟರು. ಆತನ ಹೆಸರು-ಊರು ಕೂಡ ಕೇಳಲಿಲ್ಲ. ಅದರ ಅವಶ್ಯಕತೆ ತಾನೇ ಏನು? ನಮ್ಮವರು ತಾನೇ?

ಊಟದ ಗದ್ದಲ ಅಡಗಿ, ಸಭಾ ಕಾರ್ಯಕ್ರಮಗಳು ಆರಂಭವಾಗುವ ಹೊತ್ತಾದರೂ ಆ ಆಗಂತುಕ ಕಾಣಿಸಲಿಲ್ಲ. ಶಾಲು ಒಣಗದೆ ಹೇಗೆ ಬರುವು ದೆಂದು ಆಚಾರ್ಯರೂ ಈ ಸಂಗತಿ ಮರೆತರು. ರಾತ್ರಿಯಾಯಿತು, ಕಾರ್ಯ ಕ್ರಮಗಳು ಸಾಂಗವಾಗಿ ನಡೆಯುತ್ತಿದ್ದವು. ಆ ವ್ಯಕ್ತಿಯ ಸುಳಿವೇ ಇಲ್ಲ. ಆಗ ಆಚಾರ್ಯರು ಖತಿಗೊಂಡರೂ ಅದರ ಬಗ್ಗೆ ಯೋಚಿಸಲು ಅವಕಾಶವೇ ಇರಲಿಲ್ಲ. ರಾತ್ರಿ ಭೋಜನ ಸಮಯಕ್ಕೂ ಅವರು ಕಾಣಿಸಲಿಲ್ಲ. ಯಾರೋ ಹೇಳಿದರು ಅವರು ವೃತ್ತಿ ನಾಟಕ ಸಂಸ್ಥೆಯೊಂದರಲ್ಲಿ ನಟರಾಗಿದ್ದಾರೆ ಎಂದು. ಹಾಗಾದರೇ ಇದು ಅವರ ನಟನಾ ಕೌಶಲ್ಯವೇ?

ರಾತ್ರಿಯ ಕಾರ್ಯಕ್ರಮಗಳು, ಅತಿಥಿಗಳೊಂದಿಗೆ ಚರ್ಚೆ. ಬಹುಕಾಲ ಎಚ್ಚರವಿದ್ದ ಆಚಾರ್ಯರು ಬೆಳಗಿನ ಜಾವಕ್ಕೆ ಎಲ್ಲರಗಿಂತಲೂ ಮೊದಲೇ ಪ್ರಾತ ರ್ವಿಧಿಗಳಿಗೆ ನದಿಯ ಕಡೆ ಹೊರಟರು. ಚಪ್ಪರದಲ್ಲಿ ಅನೇಕರು ಮಲಗಿದ್ದರು. ಛಳಿಗಾಗಿ ಕೆಲವರು ಮುದುಡಿದ್ದರು. ಬ್ಯಾಗನ್ನು ಪಕ್ಕದಲ್ಲಿರಿಸಿಕೊಂಡು ನಡು ಗುತ್ತಾ ಮುದುಡಿದ್ದ ಆಗಂತುಕನು ಕಂಡುಬಂದ. ಆಚಾರ್ಯರು ನೇರವಾಗಿ ಅವ ನತ್ತ ನಡೆದರು. ಬ್ಯಾಗಿನಲ್ಲಿ ತಮ್ಮ ಶಾಲುವಿತ್ತು. ಅದನ್ನು ತೆಗೆದು ಒಂದು ಕ್ಷಣ ನೋಡಿದರು. ಒಂದು ಪಂಚೆಯ ವಿನಾ ಆತನಲ್ಲಿ ಬೇರೇನೂ ಇರಲಿಲ್ಲ. ಅದನ್ನೇ ಆತ ಹೊದೆದಿದ್ದ. ಛಳಿ ತಡೆಯಲಾರದೆ ನಡಗು ತ್ತಿದ್ದ. ತಮ್ಮ ಶಾಲುವನ್ನು ಆತನಿಗೆ ಹೊದಿಸಿ, ತಮ್ಮ ಹಾದಿ ಹಿಡಿದರು.




ಇದನ್ನು ಆತನೂ ಗಮನಿಸಿದನೇನೋ? ಮತ್ತೆ ಆಚಾರ್ಯರು ಬರುವ ಹೇಳಿಗೆ ಆತನೇ ಜಾಗ ಖಾಲಿ ಮಾಡಿದ್ದ—ಶಾಲುವಿನೊಂದಿಗೆ!

* * *

ಪುರೋಹಿತರಿಗೆ ನೂರಾರು ರೀತಿಯ ಅನುಭವಗಳಾಗಿರುತ್ತವೆ. ಅನೇಕ ರೀತಿಯ ಜನರನ್ನೂ ಅವರು ಕಾಣುವ ಸಂಯೋಗ ದೊರೆಯುತ್ತದೆ. ಹಲವು ಪರಿಸರಗಳಲ್ಲಿ ಬೆಳೆದ ಜನರನ್ನು ತುಂಬಾ ಹತ್ತಿರದಿಂದ ನೋಡುವ ಅವಕಾಶ ದೊರೆಯುತ್ತದೆ.

ಒಂದು ಉಪನಯನದ ಕಾರ್ಯ. ವಟು ಹದಿನೈದು-ಇಪ್ಪತ್ತರಲ್ಲಿದ್ದ. ತಂದೆ-ತಾಯಿಗಳು ತಮ್ಮ ಮಗ ತುಂಬಾ ಜಾಣ ಎಂದೇ ಹೇಳುತ್ತಿದ್ದರು(ಇನ್ಯಾರು ತಾನೆ ಹೇಳಬೇಕು ಅಲ್ಲವೇ ?). ವಟು ಮಣೆಯ ಮೇಲೆ ಮಂಡಿಸಿದ್ದ, ಜಾಣನಾದವನಿಗೆ ಯಾವುದು ತಾನೇ ಕಷ್ಟ ಎಂಬ ಭಾವನೆ ಅವನ ಮುಖದ ಮೇಲೂ ಇತ್ತು. ಸಾಯಂ ಸಂಧ್ಯೆಯಿಂದ ಗಾಯತ್ರೀ ಮಂತ್ರಾನುಷ್ಠಾನ ಉಪದೇಶಿಸಬೇಕೆಂದು ಆಚಾರ್ಯರು ಮಂತ್ರಗಳನ್ನು ಹೇಳಿಸುತ್ತಿದ್ದರು. "ಪ್ರಾಣಾಯಾಮ ಮಾಡುವಾಗ ಮೂಗು ಹಿಡಿಯಬೇಕು" ಎಂದು ಹೇಳಿದರು. ಮಂತ್ರ ಹೇಳಿದರು. ವಟು ಮಂತ್ರ ಮಾತ್ರ ಹೇಳಿದ. ಮೂಗು ಹಿಡಿಯಲಿಲ್ಲ. ಗದರಿಸುವವರಂತೆ "ಮೂಗು ಹಿಡಿಯೋ ......" ಎಂದರು. ಸ್ವಲ್ಪಕಾಲ ಅತ್ತಿತ್ತ ನೋಡಿದ. ಪುರೋಹಿತರು ಇನ್ನೂ ಬಿಸಿಯಾಗುವ ಅವಕಾಶವಿದೆ ಎಂದು ವಟು ಬೆದರಿದ. ಅವರು ಅವನನ್ನು ಗಮನಿಸಿಸುತ್ತಿದ್ದಾರೆ ಎಂಬುದೂ ಗುರುತಿಸಿದ. ಧಡಬಡನೆ ಎದ್ದು ನೇರವಾಗಿ ಆಚಾರ್ಯರ ಮೂಗು ಬಿಗಿಯಾಗಿ ಹಿಡಿದ.

ಆಚಾರ್ಯರಿಗೆ ಕಣ್ಣೀರು ಬರುವುದೇ ಬಾಕಿ! ಜಾಣನೇ ಹೀಗಿದ್ದರೆ ದಡ್ಡ ಎನಿಸಿಕೊಳ್ಳುವವನು ಹೇಗಿದ್ದಾನು? ನಂತರ ಹಿಡಿಯಬೇಕಾದ್ದು ಎದುರಿನವರ ಮೂಗನ್ನಲ್ಲ ತನ್ನ ಮೂಗನ್ನೇ ಎಂದು ನಿಧಾನವಾಗಿ ವಿವರಿಸಿದರು. ೀದರಿಂದ ವಟು ನಾಚಿಕೊಂಡು ಮುಂದಿನ ಭಾಗದಲ್ಲಾದರೂ ಹೀಗೆ ನಗೆಯಪಾಲಾಗಬಾರದೆಂದು ನಿರ್ಧರಿಸಿದಂತಿತ್ತು.



ಗಾಯತ್ರಿ ಜಪದ ತನಕ ಬಂದ ಆಚಾರ್ಯರು "ಗಾಯತ್ರಿ ಜಪ ಮಾಡುವಾಗ ಜನಿವಾರದ ಗಂಟು ಹಿಡಿಯಬೇಕು" ಎಂದು ಹೇಳುತ್ತಿದಂತೆಯೇ "ಸ್ವಾಮಿ ಒಂದು ನಿಮಿಷ ಬಂದೆ" ಎಂದು ಒಳಗೆ ಓಡಿಹೋಗಿ ಮತ್ತೆ ಹಿಂತಿರುಗಿದ. ಪಾಠ ಮುಂದುವರಿಯಿತು. ಜನಿವಾರ ಹಿಡಿದು ಮಂತ್ರ ಜಪ ಮಾಡಿದ. ಆಚಾರ್ಯರು ಮುಂದಿನ ಮಂತ್ರಗಳನ್ನು ಹೇಳುತ್ತಿದ್ದರೆ ಮತ್ತೆ ಮುಜುಗರಕ್ಕೆ ಬಿದ್ದ. ಮೆಲ್ಲನೆ "ಸ್ವಾಮಿ, ಜನಿವಾರದ ಗಂಟು ಹಿಡಿದೇ ಇರಬೇಕಾ ?" ಎಂದು ಕೇಳಿದ.

ಆಗ ಆಚಾರ್ಯರು ನೋಡುತ್ತಾರೆ ಬಿಳಿ ಕರ್ಚೀಫ್‌ನಲ್ಲಿ ಅಂದವಾಗಿ ಕಟ್ಟಿರುವ ಒಂದು ಪುಟ್ಟಗಂಟನ್ನು ಎಡಗೈಯಲ್ಲಿ ಹಿಡಿದಿದ್ದಾನೆ. "ಅದೇನು ? " ಎಂದು ಆಚಾರ್ಯರು ಕೇಳಿದ್ದಕ್ಕೆ "ನೀವೇ ಹೇಳಿದ್ದಿರಲ್ಲ ಜನಿವಾರದ ಗಂಟು ಹಿಡಿಯಬೇಕು ಅಂತ......." ಎಂದು ಬೆಪ್ಪಾಗಿ ಉತ್ತರಿಸಿದ. ಯಜ್ಞೋಪವೀತದ ಬ್ರಹ್ಮ ಮುಡಿಗೆ ಬದಲಾಗಿ ಮನೆಯೊಳಗೆ ಭದ್ರಪಡಿಸಿದ್ದ ಯಜ್ಞೋಪವೀತಗಳ ಗಂಟೇ ಈ ಭೂಪ ಹಿಡಿದು ಜಪ ಸಾಗಿಸಿದ್ದ ಎಂಬುದು ಆಚಾರ್ಯರಿಗೆ ಸ್ಫುರಿಸಿತು.

ಇಂತಹ ಹಲವಾರು ಅನುಭವಗಳು ಆಚಾರ್ಯರಿಗೆ ಆಗಿವೆ. ಅಂಥವರಿಗೂ ಅಚ್ಚುಕಟ್ಟಾಗಿ ಮಂತ್ರ ಪಾಠ ಮಾಡಿಸಿದ್ದಾರೆ; ಅವರ ವಿದ್ಯಾಭ್ಯಾಸದಲ್ಲಿ ನೆರವಾಗಿದ್ದಾರೆ.

* * *

ಆಚಾರ್ಯರಲ್ಲಿ ಮಂತ್ರ ಪಾಠ ಮಾಡಲು ಬಯಸಿ ಬಂದವರು ಬಹು ಮಂದಿಯೇ. ಅನೇಕ ಬಾರಿ ಅಂತಹವರ ಉತ್ಸಾಹ ಕೇವಲ ಧನಾರ್ಜನೆಯ ಮಾರ್ಗಕ್ಕೇ ಸೀಮಿತವಾಗಿರುತ್ತಿದ್ದು, ಆಚಾರ್ಯರಿಗೆ ಬೇಸರ ತರಿಸಿರುವುದುಂಟು.

ಒಮ್ಮೆ ಪರಿಸ್ಥಳದವರೊಬ್ಬರು ಪತ್ರಬರೆದಿದ್ದರು : '....ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ. ನಾನೂ ಪುರೋಹಿತನಾಗಿ ನಿಮಗೆ ಹೆಸರು ತರುವಂತಹವನನಾಗಬೇಕೆಂದು ಆಸೆ. ನಾನೇನು ತಮಗೆ ಹೆಚ್ಚಿನ ತ್ರಾಸ ಕೊಡೋಲ್ಲ.



ಈಗಾಗ್ಗೆ ನಾನೇ ವಿಶ್ವಕರ್ಮ ಸೂತ್ಕ, ಪುರುಷ ಸೂತ್ಕ, ಸ್ತ್ರೀ ಸೂತ್ಕ, ರುದ್ರ ನಮುಕ್-ಚಮುಕ್‌ಗಳನ್ನು ತಕ್ಕಮಟ್ಟಿಗೆ ಗಟ್ಟಿ ಮಾಡಿದ್ದೇನೆ. ಕೇವಲ ನಾಲ್ಕೈದು ದಿನಗಳಲ್ಲೇ ಎಲ್ಲಾ ಕಲಿಯ ಬಲ್ಲೆ. ದಯಮಾಡಿ ಉಪಕರಿಸಿ....'

ಈ ಪತ್ರವನ್ನು ಕಂಡು ಆಚಾರ್ಯರ ಎದೆ ನಡುಗಿತಾದರೂ ವ್ಯಕ್ತಿಯ ಆಸೆ ಆತನನ್ನು ಕರೆಯಲು ಪ್ರೇರಿಸಿತು. ವ್ಯಕ್ತಿ ಬಂದ. ರೂಪ-ಅಲಂಕಾರ ಪರವಾಯಿಲ್ಲ ಎನಿಸುವಂತೆ ಇತ್ತು. ಮಾತಿನ ಶೈಲಿ ಮೋಜಿನದಾದರೂ 'ಮಹಾಪ್ರಾಣ' ಅವರದೇ ಸ್ವತ್ತು ಎನ್ನುವಂತೆ ಬಳಸುತ್ತಿದ್ದರು. ಅವರ ನಾಲಿಗೆಯಿಂದ ಸೂತ್ಕ ಕಿತ್ತೊಗೆದು, ನಮುಕ್-ಚಮುಕ್ ತೆಗೆದು, ಅವರ ಉಚ್ಚಾರಣೆಯನ್ನು ಶುದ್ಧಿಗೊಳಿಸಲು ಆಚಾರ್ಯರು ಪಟ್ಟ ಅವಸ್ಥೆ ಅವರು ಮಾತ್ರವೇ ಬಲ್ಲರು !

* * *

ಹಿರಿಯರಲ್ಲಿ ಹಿರಿಯರಾಗಿ ಬೆರೆಯುವ ಆಚಾರ್ಯರು ತಮ್ಮ ಅನುಭವಗಳನ್ನು ಹೇಳುವುದು ಕೇಳುವುದೇ ಒಂದು ಸಂತೋಷ.

ಸದ್ಯೋಜಾತಮೂರ್ತಿ, ಎಂ.ಎ., 'ವಿಶಾರದ'
ಕೃಷ್ಣರಾಜಪೇಟೆ.

Brahmarshi

I am very happy to know that a Sanmana Samithi has been formed to honour Pujya Brahma Shri Nabha Chandrasekharacharyulu on the eve of his completing Seventieth year of his life.




Sri Nabhaji is one of the towering personalities of eminent Vishvabrahmins of India, both physically and intellectually. His graceful stature is the highest

of his close contemporaries. SANMANANAM UTTAMA SLOKAH he is.

My first meeting with this great personality at Narasaraopet in Vishvakarma Pooja Mahotsavam in the month of March 1974 impressed me so much that I invited him to Nuzvid. Thus I had a chance to spend a couple of days in 1974 with him discussing issues relating to 'the renaissance movement' of Vishvabrahmanas. He readily enrolled himself as a member of Dharma Peetham and his valuable advice has always been welcomed for its programme complex.

Subsequently, we met at Hyderabad, Nuzvid, KGF, Bangalore, Narasaraopet and Nuzvid on several occassions connected with our common committment of propogating Vishvabrahmana Dharma. At every meeting we have been discussing, with interest, many topics of importance. In every discussion my impression of his depth of knowledge and his ability to interpret scriptures became heavier. And my respect for him has consequently been elevated to higher levels.

Shri NABHAJI is one who is complete in himself. He is learned. His knowledge in Vedic literature is intensive and extensive. He is cultured and experienced in the true sense. He is calm and quiet and is able to face any controversy or criticism with a smile. It is gratifying to note that after retirement from Government service he took up VAIDIKA VRITTI on full time basis



due to his love for VEDA MARGA. His attainments in spiritual way of life also is of high order. We can approach Sri NABHAJI for solution of any problem regarding VISHVABRAHMANA DHARMA. His line of thinking always forms a MILKYWAY towards VISHVAKARMA PAARAMYA whenever he takes up to interpret any Vedic Sukta. He is a PURNA PURUSHA and a BRAHMARSHI of Vishvabrahmin clan of our times. We are really fortunate to be his contemporaries.

May Lord Vishvakarma bless Sri NABHAJI and his family with hundred years of healty and comfortable life to propogate Vishvabrahmana Dharma.

Maha Guru
Prof. Y. Madhavacharyulu, M.A.,
Sabhapathi : Vishvabrahmana Dharma Peetham
Nuzvidu (AP)

Abhinava Vishvarupacharya

I know Pujya Shri Nabha Chandrasekharacharya for over several years. He is a great scholar and a versatile genius and a devoted servant of the society. His articles are very useful even to commoner for their purposeful messages. I have loved his writings and reproduced many of them in TELUGU in my magazines VISHVA SHILPI (Monthly), PANCHAYATHI



RAJYAM (Fortnightly). He is a very great Purohita whom I can gladly compare with VISHVARUPACHARYA of ancient times. Not only that he is a great social worker and one of the greatest of Vishvabrahmin community, he is a man of abiding service and has won the appreciation in Southa India. It is most befitting to honour him on completion of his seventy years of golden-servcie.

May Lord Vishvakarma bless him with long and healthy life so that he may continue his valuable service to the people at large.

Lokaseva Ratna
Ch. Nagabhushanacharyulu, B.A., B.Ed.,
Editor : Vishva Shilpi and Panchayathi Rajyam, Narasaraopet (AP).

The Wisest

It is with great pleasure I greet Shri Nabha Chandrasekharacharyaji on the eve of the felicitation arranged to him by the Sanmana Samithi formed for this purpose. Shri Nabhaji is perhaphs the acknowledged wisest most revered, learned and accomplished among the scholars of our community. By recognising the ardent services of the Acharyaji to the community and for the growth of Vishvabrahmin Literature we are indeed honouring ourselves.



His writings will serve as an indicator to all those interested in upliftment of the society in all directions. I suggest it is wise to have writings of Nabhaji collected and published in one Volume.

I sincerely congratulate all those associated with this Sanmana Samarambha to honour the great man and good person whose qualities of head and heart earned the admiration and affection of all those who have come into contact.

I invoke the Lord Vishvakarma to shower His choicest blessings on Shri Nabhaji, the chiefguest of honour.

Vishvakula Tilakam, Bhakta Shiromani, Vidya Ratna
S. Veeraswami Pathar, M.A., L.T.,
Tirucharapalli, Tamil Nadu

Veda-Agama Acharya

A very nice and blessed occasion it was for me on 26th September 1976 to meet good old and revered Sri Nabhaji for the first time at Kolar Gold Fields and join him in the holy performance of VAISHVAKARMANA HOMAM and other vedic rituals during the grand celebrations of SRI VISHVAKARMA POOJA MAHOTSAVAM organised by the Vishvakarma Vidya Vardhaka Sangha, BEML Nagar, Kolar Gold Fields. During my stay for a couple of days there, it was indeed really a great pleasure for me



to associate with such an erudite scholar of our community.

Since then Brahmashri Nabha Chandrasekhara-charyaji has become an honoured brother of mine. He is a veteran scholar in Kannada, Sanskrit, English, Telugu and Hindi with profound knowledge and prodigious intellect in Veda, Sastra and Prayogas. The very rare titles of VIDYALANKARA, VIDYABHUSHANA and ADHWARYU SHIROMANI conferred upon him, very clearly indicate his highest learning, intellectual integrity and towering genius.

Indeed it is a pleasure and pride for all our Vishva brahmanas to proclaim that our Nabhaji is really an asset and a precious treasure to our community, who brought much honour to Karnataka. His very deep and keen insight in all activities concerning our Vishva-brahmana community is highly noteworthy. The very fittest title of VISHVAKARMA JNANADHURINA adores his versatility and knowledge in VEDA-AGAMAS.

By the grace of Lord Almighty Shri Vishva-braman, he was blessed gloriously with BHEEMARATHA SHANTHI on completion of Seventieth year. Sri Nabha Sanmana Samithi with its untiring efforts is celebrating the Sanmana Samarambha and crowning our revered Sri Nabhaji with a memorable honour.



In commemoration of this unique event in the history of Vishvabramanas of South India, with pleasure, heartily I pray the Almighty to shower his choicest blessings on Sri Nabhaji for a very long, healthy and peaceful life to enlighten us in our herculean task of of rejuvenating our Vishvabrahmana Samaj.

Siddhanti

E. Sambandhachariyar, *Madras*



ಆಚಾರ್ಯಾಭಿವಂದನೆ
ವಿದ್ವತ್ಸಮಾವೇಶ

ಅನಂತ ಎಸ್. ಸವಣೂರ್ : ವಿದ್ಯಾರ್ಥಿ ದೆಶೆಯಿಂದಲೂ ಸಾಹಿತ್ಯ-ಸಾಮಾಜಿಕ ಕೆಲಸಗಳಲ್ಲಿ ಉತ್ಸಾಹ ತೋರುತ್ತಿರುವ ಇವರು ಹಲವು ಸಂಘ-ಸಂಸ್ಥೆಗಳಲ್ಲಿ ದುಡಿಯುತ್ತಿರುವರು. ಖಾದಿ ಮತ್ತು ಗ್ರಾಮೋದ್ಯಮಗಳ ಕಮೀಷನ್ನಿನ ಅರ್ಥ ವಿಭಾಗದಲ್ಲಿ ಅಧಿಕಾರಿಗಳಾಗಿದ್ದಾರೆ.ಬಿ.ಎ.,ಎಲ್ಎಲ್‌ಬಿ., ಪದವೀಧರರು. ಸನ್ಮಾನ ಸಮಿತಿಯ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿರುವರು. ಪ್ರಸ್ತುತ ಬೆಂಗಳೂರಿನಲ್ಲಿದ್ದಾರೆ.

ಅಶ್ವತ್ಥನಾರಾಯಣಾಚಾರ್ಯ, ವಿ. : ದೊಡ್ಡಬಳ್ಳಾಪುರದಲ್ಲಿರುವ ಆಚಾರ್ಯರು ಸಾಹಿತ್ಯ ಪ್ರೇಮಿಗಳು. ಹುಟ್ಟು ಕವಿಗಳು. ತ್ರಿಪದಿ ಛಂದಸ್ಸಿನಲ್ಲಿ 'ವಿಶ್ವಜ್ಞ ವಚನಗಳು' ಇವರ ಪ್ರಕಟಿತ ಕೃತಿ.

ಆಚಾರ್ಯ, ಕಾ. ವಾ. : ಶಿರ್ವಾ (ದ. ಕ)ದ ಹಿಂದೂ ಜ್ಯೂನಿಯರ್ ಕಾಲೇಜಿನಲ್ಲಿ ಕಲಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಆಚಾರ್ಯರು ಕನ್ನಡ ಸಾಹಿತ್ಯದಲ್ಲಿ ಲೇಖಕರಾಗಿ ಹೆಸರುಗಳಿಸಿದ್ದಾರೆ. ವೈಶ್ವಕರ್ಮಣ ಸಾಹಿತ್ಯದಲ್ಲಿ ಬಹುವಾಗಿ ಕೃಷಿ ಮಾಡುತ್ತಿದ್ದಾರೆ. ರೂಪಾ, ಆನಂದ ಕುಮಾರ ಸ್ವಾಮಿ, ಸಂಶೋಧಕರ ದೃಷ್ಟಿಯಲ್ಲಿ ವಿಶ್ವಬ್ರಾಹ್ಮಣರು ಮುಂತಾದವು ಇವರ ಪ್ರಕಟಿತ ಕೃತಿಗಳು. ಶಿಲ್ಪಿ ಸ್ಮರಣ ಸಂಚಿಕೆಯನ್ನು ಸಂಪಾದಿಸಿದ್ದಾರೆ. ಸಮಾಜಾಭಿಮಾನಿಗಳು. ಉತ್ಸಾಹೀ ಕಾರ್ಯಕರ್ತರು. ಸ್ನೇಹ ಪ್ರಿಯರು.

ಆದಿಶೇಷಶಾಸ್ತ್ರಿ, ವಿದ್ವಾನ್ ವೊಂಗವೋಲು : ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ನಾಗಂಡ್ಲ ನಿವಾಸಿಗಳಾಗಿರುವ ಶಾಸ್ತ್ರಿಗಳ: ಸಂಸ್ಕೃತಾಂಧ್ರಾಂಗ್ಲ ಭಾಷೆಗಳಲ್ಲಿ ಪಂಡಿತರು. ಆಶೂಕವಿಗಳು. ಅವಧಾನಿಗಳು. ಎಂ.ಎ.,ಬಿ.ಎಡ್ ಪದವಿಗಳನ್ನು ಪಡೆದಿರುವರು. ತೆಲುಗು ಸಂಸ್ಕೃತ ಭಾಷೆಗಳಲ್ಲಿ ಅನೇಕ ರಚನೆಗಳನ್ನು ಮಾಡಿದ್ದಾರೆ. ಬಾಲ ಸರಸ್ವತೀ ಕುಟೀರ ಗ್ರಂಥ

ಮಾಲೆ ನಿರ್ವಹಿಸುತ್ತಾ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ : ಹರಿಸ್ಮೃತಿ, ರಾಮತೀರ್ಥಸ್ವಾಮಿ, ಆನಂದ ಸಾಗರ ಸ್ತವಮು, ಅಭ್ಯುದಂಪಶ್ರೀ, ಧರ್ಮ ಪಾಲ ವಿಜಯಮು, ಮರುತ್ಸಂದೇಶಮು (ಅನುವಾದ), ವಚನ ವಿಶ್ವಕರ್ಮ ಪುರಾಣಮು.

ಈಶ್ವರಚಂದ್ರ ಚಿಂತಾಮಣಿ : ರಾಷ್ಟ್ರ ಪ್ರಶಸ್ತಿ ವಿಜೇತ ಅಧ್ಯಾಪಕರು. ಕಳೆದ ನಲವತ್ತು ವರ್ಷಗಳಿಂದಲೂ ಕನ್ನಡ ಸಾಹಿತ್ಯ ಕ್ಷೇತ್ರ ದಲ್ಲಿ ಸೇವೆ ಸಲ್ಲಿಸುತ್ತಿರುವ ಲಬ್ಧ ಪ್ರತಿಷ್ಠಿತ ಲೇಖಕರು. ವಿಜಾಪುರದ ನಿವಾಸಿಗಳು. ಆಧ್ಯಾತ್ಮದಲ್ಲಿ ಹೆಚ್ಚು ಒಲವು ಬೆಳೆಸಿ ಕೊಂಡಿರುವವರು. ಬಂಥನಾಳದ ಶಂಕರಲಿಂಗ ಸ್ವಾಮಿಗಳು ಇವರ ಇತ್ತೀಚಿನ ಪ್ರಕಟಿತ ಕೃತಿ.

ಈಶ್ವರಾಚಾರ್ಯ, ಪಿ. : ಪ್ರಸ್ತುತ ಹೊಸದುರ್ಗದ ಜ್ಯೂನಿಯರ್ ಕಾಲೇ ಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿರುವ ಆಚಾರ್ಯರು ಎಂ.ಎ., ಬಿ.ಎಡ್., ಪದವೀಧರರು. ಸಾಹಿತ್ಯದಲ್ಲಿ ಒಲವಿರುವವರು. ಹಲವು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಹುಲ್ಲೂರು ಶ್ರೀನಿವಾಸ ಜೋಯಿಸರ ಲೇಖನಗಳ ಸಂಕಲನ, ಪ್ರಕಟಣೆಯಲ್ಲಿ ಶ್ರಮಿಸುತ್ತಿದ್ದಾರೆ.

ಕಸ್ತೂರಿ, ನಾ. ಶ್ರೀ. : ಬೆಂಗಳೂರಿನಲ್ಲಿರುವ ಎನ್ ಜಿ ಇ ಎಫ್ ಕಾರ್ಖಾನೆಯ ಕಾರ್ಮಿಕ ಕಲ್ಯಾಣ ಇಲಾಖೆಯಲ್ಲಿ ಅಧಿಕಾರಿಗಳಾಗಿರುವ ಇವರು ಪದವೀಧರರು. ಪರಂಪರಾನುಗತ ವೈದಿಕ ವೃತ್ತಿಯನ್ನು ರೂಢಿಸಿ ಕೊಂಡಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ಲೇಖನ ವ್ಯವಸಾಯ ನಡೆಸುತ್ತಿ ದ್ದಾರೆ. ಶ್ರೀ 'ನಾಭಾ' ಅವರ ಕೆಲವು ಆಂಗ್ಲ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಸನ್ಮಾನ ಸಮಿತಿಯ ಕಾರ್ಯಕಾರಿ ಮಂಡಲಿಯ ಸದಸ್ಯರು.

ಕಾಳಾಚಾರ್ಯ, ಕೆ. ಪಿ. : ಕೇಂದ್ರ ಅಬ್ಕಾರಿ ಮತ್ತು ಸುಂಕದ ಇಲಾಖೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಆಚಾರ್ಯರು ಉತ್ಸಾಹೀ ಕಾರ್ಯನಿಷ್ಠರು. ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇದ್ದು ಸಮಾಜದಲ್ಲಿ ಅಭಿಮಾನವಿರಿಸಿಕೊಂಡಿರುವವರು. ಶ್ರೀ 'ನಾಭಾ' ಅವರಲ್ಲಿ ಮಂತ್ರಪಾಠ ಮಾಡಿರುವ ಅವರ ಶಿಷ್ಯರಲ್ಲಿ ಒಬ್ಬರು. ಸನ್ಮಾನ ಸಮಿತಿಯ ಉಪಾಧ್ಯಕ್ಷರಾಗಿ

ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಈಗ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ.

ಕೃಷ್ಣಮೂರ್ತಿ ಎನ್ ಮಯಾಚಾರ್ಯ : ಭಾಷಾಶಾಸ್ತ್ರದಲ್ಲಿ ಎಂ. ಎ., ಪದವಿಯನ್ನು ಪಡೆದಿರುವ ಈ ತರುಣರು ಕನ್ನಡ ಪತ್ರಿಕಾ ಪ್ರಪಂಚದಲ್ಲೂ ಕೆಲಕಾಲ ದುಡಿದಿದ್ದಾರೆ. ಸಾಮಾಜಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳುತ್ತಾರೆ. ಆಕಾಶವಾಣಿಯ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿರುತ್ತಾರೆ. ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ.

ಗುರುನಾಥ ಸ್ವಾಮಿಗಳು, ಶ್ರೀ ಶ್ರೀ ಶ್ರೀ : ಯಾತಗಿರಿ ಏಕದಂಡಿಗಿ ಪೀಠಾಧಿಪತಿಗಳು ತಪೋನಿಷ್ಠರು. ಸಾಹಿತ್ಯ ಪ್ರಿಯರು. ಶಿಷ್ಯರ ಅಪಾರ ಪ್ರೇಮ ಗೌರವಗಳನ್ನು ಗಳಿಸಿರುವವರು.

ಗುರುಲಿಂಗಾಚಾರ್ಯ, ವಿ. : ಉತ್ಸಾಹೀ ತರುಣ ಕವಿಗಳು. ವೈಶ್ವಕರ್ಮಣ ಸಾಹಿತ್ಯವನ್ನು ಆಸಕ್ತಿಯಿಂದ ಅಭ್ಯಾಸ ಮಾಡುತ್ತಿರುವ ಶ್ರದ್ಧಾಳುಗಳು. ಇವರ ಅನೇಕ ಲೇಖನಗಳು ವಿಶ್ವಕರ್ಮ, ವಿಶ್ವಕರ್ಮ ಪ್ರಕಾಶ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿಶ್ವಕರ್ಮ ಗುಣಗಾನ ಇವರ ಪ್ರಕಟಿತ ಕೃತಿ. ಮೌನೇಶ್ವರ ಶತಕ ಪ್ರಕಟವಾಗಲಿರುವ ಕೃತಿ. ಹೆಚ್ಚಿನ ನಿರೀಕ್ಷೆಗೆ ಅರ್ಹರಾಗಿರುವ ಇವರಿಂದ ಬಹುಕಾಲ ನಿಲ್ಲಬಲ್ಲ ಕೃತಿಗಳನ್ನು ನಿರೀಕ್ಷಿಸಬಹುದು. ಚನ್ನಗಿರಿ ತಾಲ್ಲೂಕಿನ ವಡ್ನಾಳು ಗ್ರಾಮದ ನಿವಾಸಿಗಳು.

ಗೋಪಾಲ ಆಚಾರ್ಯ, ಎಂ : ಮಂಗಳೂರಿನಲ್ಲಿರುವ ರತ್ನ ಶಿಲ್ಪಿಗಳಾದ ಶ್ರೀ ಆಚಾರ್ಯರು ಕಾಸರಗೋಡಿನವರು. ಉತ್ಕಟ ಸಮಾಜಾಭಿಮಾನಿಗಳು. ಸಾಹಿತ್ಯಪ್ರಿಯರು, ಸ್ನೇಹಪರರು. ಉತ್ತಮ ಅರ್ಥಧಾರಿಗಳು. ಶ್ರೀ ಹೊ. ನಾರಾಯಣರಾಯರನ್ನು ವೈಶ್ವಕರ್ಮಣ ಸಾಹಿತ್ಯಕ್ಕೆ ಕರೆ ತಂದವರು. ದಕ್ಷಿಣ ಕನ್ನಡದ ಹಲವಾರು ಚಟುವಟಿಕೆಗಳನ್ನು ನಡೆಸುತ್ತಿರುವ ಮಹನೀಯರು. ಸಂಘ ಸೇವಾ ಪರಾಯಣರು.

ಗೋವಿಂದ ಕೃಷ್ಣ ಪಿಳ್ಳೈ, ಡಾ. : ಭಾರತ ಸರ್ಕಾರದ ಪ್ರಧಾನ ಇಂಜನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪಿಳ್ಳೈ ಅವರು ಇಂಜನಿ

ಯರಿಂಗ್ ವಿಭಾಗದಲ್ಲಿ ಡಾಕ್ಟರೇಟ್‌ಗಳಿಸಿರುವುದು ಮಾತ್ರವೇ ಅಲ್ಲ, ಭಾರತದ ಸಂಸ್ಕೃತಿಯಲ್ಲಿ ತುಂಬಾ ಆಸಕ್ತಿವಹಿಸಿ ಅಧ್ಯಯನ ಮಾಡಿರುವ ವಿದ್ವಾಂಸರು. ಶಿಲ್ಪ ಶಾಸ್ತ್ರವನ್ನು ಆಧುನಿಕ ಗಣಿತ ಶಾಸ್ತ್ರದ ತಳಹದಿಯಲ್ಲಿ ಪರಿಶೀಲಿಸಿರುವ ಮೇಧಾವಿಗಳು. ಅವರ 'ದಿ ವೇ ಆಫ್ ಶಿಲ್ಪೀಸ್' ಅತ್ಯಂತ ಅಮೂಲ್ಯ ಸಂಶೋಧನಾ ಗ್ರಂಥ. ಪ್ರಸ್ತುತ ಗ್ರಂಥದಲ್ಲಿ ಈ ಕೃತಿಯಿಂದ ಆಯ್ದಿರುವ ಒಂದು ಭಾಗವನ್ನು ಮಾತ್ರ ಕೊಡಲಾಗಿದೆ (ಅನುವಾದಕರು: ಪುಣೆಯ ಶ್ರೀ ನಾಗೇಶ್ ಎಸ್. ಶಿಲ್ಪಿ ಅವರು). ಪ್ರಾಚೀನ ಶಿಲ್ಪಿಗಳ ಸಾಧನೆಗಳನ್ನು ಸಾಧಾರವಾಗಿ ನಿರೂಪಿಸಿರುವ ಈ ಕೃತಿ ಅಮೂಲ್ಯವಾದುದೆಂದು ವಿದ್ವಾಂಸರಿಂದ ಪರಿಗಣಿತವಾಗಿದೆ. ಇವರ ಅನ್ಯ ಪ್ರಕಟಣೆಗಳು: ಟ್ರೆಡಿಷನಲ್ ಹಿಸ್ಟರಿ ಆಫ್ ಇಂಡಿಯಾ, ಹಿಂದೂ ಗಾಡ್ಸ್ ಆಡ್ ಹಿಡನ್ ಮಿಸ್ಟ್ರೀಸ್, ವೇದಿಕ್ ಹಿಸ್ಟ್ರಿ ಸೆಟ್ ಇನ್ ಕ್ರೊನಾಲಜಿ.

ಗಂಗಾಧರಮೂರ್ತಿ, ಮ.: ೧೯೩೦ ರಿಂದ ಸುಮಾರು ಮೂರು ದಶಕಗಳ ಕಾಲ ಮೈಸೂರು ಹಾಗೂ ಕರ್ನಾಟಕದಲ್ಲಿ ವಿಶ್ವಕರ್ಮಣ ಧರ್ಮದ ಕಳಿ, ಸಂಸ್ಕೃತಿಯ ಪ್ರಚಾರ ಅವ್ಯಾಹತವಾಗಿ ಸಾಗಿಸಿದ ಮಹನೀಯರು. ಉತ್ಕಟ ಸಮಾಜಾಭಿಮಾನಿಗಳು. ಸಮಾಜದ ಉಚ್ಛ್ರಾಯಕ್ಕಾಗಿ 'ವಿಶ್ವ ಕರ್ಮ' ಎಂಬ ಮಾಸಿಕವನ್ನು ೧೯೪೯ನೇ ನವಂಬರ್‌ನಲ್ಲಿ ಪ್ರಾರಂಭಿಸಿ ಕೊನೆಯತನಕ ನಡೆಸಿದವರು. ಬೆಂಗಳೂರು, ಮೈಸೂರು ನಗರಗಳಲ್ಲಿ ವೇದ ಪಾಠ ಶಾಲೆಗಳನ್ನು ನಡೆಸಿ ನೂರಾರು ಮಂದಿ ಪುರೋಹಿತರನ್ನು ಸಿದ್ಧಪಡಿಸಿದ ಪುಣ್ಯಾತ್ಮರು, ಪ್ರಕಾಂಡ ಪಂಡಿತರು. ಇಂದಿಗೂ ಮೇರು ಕೃತಿಯಾಗಿ ಅವರು ಸಂಪಾದಿಸಿರುವ 'ಯಾಜುಷೀ ಗೃಹ್ಯ ಬೋಧಿನೀ' ಉಳಿದಿದ್ದು ಅವರ ವೈದುಷ್ಯಕ್ಕೆ ಸಾಕ್ಷಿಯಾಗಿದೆ. ಅವರ ಇತರ ಕೃತಿಗಳು: ಕಾಶ್ಯಪಶಿಲ್ಪೋಕ್ತ ಪ್ರತಿಷ್ಠಾವಿಧಿಃ, ನಿತ್ಯಕರ್ಮಾನುಷ್ಠಾನ ಸಂಗ್ರಹಃ, ಶ್ರಾದ್ಧತರ್ಪಣ ವಿಧಿಃ, ವಿಶ್ವಕರ್ಮಧರ್ಮವೋ? ವಿಶ್ವಧರ್ಮವೋ?, ವಿಶ್ವಕರ್ಮ ಸೂಕ್ತಾದಿಗಳು ಇತ್ಯಾದಿ, ವಿಶ್ವಕರ್ಮ ಪತ್ರಿಕೆಯು ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದಾಗ ಅನೇಕ ವಿದ್ವಾಂಸರ ಮೆಚ್ಚುಗೆ ಗಳಿಸಿತ್ತು. ಪ್ರಸ್ತುತ ಕೃತಿಯಲ್ಲಿ ಪ್ರಕಟಿತವಾಗಿರುವ ಇವರ ಲೇಖನ ಇವರ ವಿದ್ವತ್ಪ್ರತಿಭೆಗೆ ಸಾಕ್ಷಿ. ಸೆಪ್ಟಂಬರ್ ೫, ೧೯೫೩ರಲ್ಲಿ

ಹಠಾನ್ಮರಣಕ್ಕೆ ತುತ್ತಾಗಿ ವಿಶ್ವಬ್ರಾಹ್ಮಣ ಸಮಾಜಕ್ಕೆ, ಸಾಹಿತ್ಯಕ್ಕೆ ಅಪಾರ ನಷ್ಟವಾಗಿದೆ.

ಚಕ್ರವರ್ತಿ, ಪ್ರೊ.ಜಿ.ಎನ್ : ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ವಿಶ್ರಾಂತ ಜೀವನದಲ್ಲಿ ಯಜಿಸಿಯ ಆಶ್ರಯದಲ್ಲಿ ಸಂಶೋಧನಾ ಕಾರ್ಯ ಸಾಗಿಸುತ್ತಿರುವ ಈ ಮಹನೀಯರು ವೈದಿಕ ಸಾಹಿತ್ಯಾಭ್ಯಾಸಿಗಳಿಗೆಲ್ಲಾ ಚಿರಪರಿಚಿತರು. ಮೈಸೂರು ಅರಮನೆಯ ಪ್ರಕಟಣೆಯಾದ 'ಋಗ್ವೇದ ಸಂಹಿತೆ'ಯ ಸಂಪಾದಕ ಮಂಡಲಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ 'ದಿ ಕಾನ್ಸೆಪ್ಟ್ ಆಫ್ ಕಾಸ್ಮಿಕ್ ಹಾರ್ಮನಿ ಇನ್ ಋಗ್ವೇದ' ಕೃತಿಯು ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರುವ ಕೃತಿ. ಪ್ರಸ್ತುತ ಕೃತಿಯಲ್ಲಿ ನೀಡಲಾಗಿರುವ ವಿಶ್ವಕರ್ಮ ಸೂಕ್ತವನ್ನು ಇವರ 'ಋಕ್ಸಂಹಿತಾ ಸಾರ' ಎಂಬ ಕೃತಿಯಿಂದ ಆಯ್ಕೆ ಮಾಡಲಾಗಿದೆ, ಇವರ ಅನ್ಯಕೃತಿಗಳು-ಮಂಕುತಿಮ್ಮನ ತತ್ತ್ವಮಥನ, ಮಹಾಭಾರತದಲ್ಲಿ ವಿಧಿ ಮತ್ತು ವಿವೇಕ, ಇತ್ಯಾದಿಗಳು. ತುಂಬ ಸರಳ ಜೀವಿಗಳು. ಪ್ರಸ್ತುತದಲ್ಲಿ ಮೈಸೂರಿನಲ್ಲಿ (೧೦೩೨, ಗೀತಾ ರಸ್ತೆ)ರುವರು.

ಚಂದ್ರಶೇಖರ ಸ್ವಾಮಿಗಳು : ಹುಬ್ಬಳ್ಳಿಯ ನಾಗಶೆಟ್ಟಿ ಕೊಪ್ಪದಲ್ಲಿರುವ ಶಾಂಡಿಲ್ಯಾಶ್ರಮದ ಅಧಿಪತಿಗಳಾಗಿರುವ ಶೋತ್ರೀಯ ಬ್ರಹ್ಮ ನಿಷ್ಠರಾದ ಸ್ವಾಮಿಗಳು ಅದ್ಭುತವಾದ ಪ್ರವಚನಗಳಿಂದ ಜನಸಾಮಾನ್ಯರಿಗೂ ಅದ್ವೈತ ತತ್ತ್ವರಸಾಮೃತವನ್ನು ಉಣಬಡಿಸುತ್ತಿದ್ದಾರೆ. ಸ್ವಾಮಿಗಳು ತಪೋನಿಷ್ಠರೂ, ಯೋಗಸಿದ್ಧರೂ ಆಗಿರುವಂತೆಯೇ ಕವಿಗಳೂ ಹೌದು. ನಾಗಲಿಂಗಸ್ವಾಮಿ ಚರಿತ್ರೆ ಇವರ ಪ್ರಕಟಿತ ಕಾವ್ಯ 'ವಿಶ್ವಕರ್ಮ ಲೀಲಾ ವಿಲಾಸ' ಪ್ರಕಟವಾಗಬೇಕಾಗಿರುವ ಕಾವ್ಯ. ವಾಕ್ಚಾತುರ್ಯವುಳ್ಳ ಸ್ವಾಮಿಗಳು ಅದ್ಭುತ ಪಂಡಿತರು. ಕ್ಲಿಷ್ಟವಾದ ವೇದಾಂತ ವಿಷಯಗಳನ್ನೂ ಸುಲಭವಾಗಿ ಗ್ರಾಹ್ಯವಾಗುವಂತೆ ತಿಳಿಸುವ ಶಕ್ತಿಯುಳ್ಳವರು. ಅನೇಕ ತತ್ತ್ವಜ್ಞರ ಗೌರವಕ್ಕೆ ಪಾತ್ರರಾಗಿರುವವರು. 'ನಾಭಾ' ಅವರನ್ನು ತುಂಬಾ ಸನಿಹದಿಂದ ಬಲ್ಲವರು.

ಚಂದ್ರಶೇಖರಾಚಾರ್ಯ, ನಾ.ಭಾ. : ಸನ್ಮಾನಿಸಲ್ಪಡುತ್ತಿರುವ ಆಚಾರ್ಯರು. ವೈಶ್ವಕರ್ಮಣ ಸಾಹಿತ್ಯ ಸೇವೆ ಪ್ರಚಾರಕ್ಕಾಗಿ ತಮ್ಮ ಬಾಳನ್ನು ಸಮರ್ಪಿಸಿರುವವರು. ವಿವರಗಳಿಗೆ ಈ ಹೊತ್ತಗೆಯ ಸಂಭಾವನಾಂಕ ಮತ್ತು

ನಾನು ಕಂಡ 'ನಾಭಾ' ಲೇಖನ ಮಾಲಿಗಳನ್ನು ಅವಲೋಕಿಸಿ. ಈಗ ಬೆಂಗಳೂರಿನಲ್ಲಿ (ಬನಶಂಕರಿ) ವಾಸವಾಗಿದ್ದಾರೆ.

ಜೀವಣ್ಣ ಮಸಳಿ: ಬಾಗಲಕೋಟೆಯಲ್ಲಿರುವ ಇವರು 'ವಿಶ್ವದರ್ಶನ' ಎಂಬ ವಾರ ಪತ್ರಿಕೆಯ ಸಂಪಾದಕರಾಗಿದ್ದಾರೆ. ಮಹಾನೇಶ್ವರರ ವಚನಗಳನ್ನು ಅಧ್ಯಯನಮಾಡಿ ಅನೇಕ ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ವಿದ್ಯಾರ್ಥಿಗಳಾಗಿದ್ದಾಗಿನಿಂದಲೂ ಲೇಖನ ಕಲೆಯನ್ನು ರೂಢಿಸಿಕೊಂಡು ಬಂದಿರುವವರು. ಕಥಾ ಸಾಹಿತ್ಯದಲ್ಲೂ ಕೈಯಾಡಿಸಿ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

ಜೋಶಿ, ಡಾ|| ಶಂ. ಬಾ. : ಕರ್ನಾಟಕದ 'ಧೀರ' ಸಂಶೋಧಕರೆಂದು ಹೆಸರಾಗಿರುವವರು. ವೇದಕಾಲೀನ ಸಂಸ್ಕೃತಿಯ ಬಗ್ಗೆ ವಿಶೇಷವಾದ ಅಧ್ಯಯನ ಮಾಡಿರುವ ವಯೋವೃದ್ಧರು. ತಾವು ಸಂಶೋಧಿಸಿ ಕಂಡುಕೊಂಡಿರುವ ಸತ್ಯಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿ ಪಾದಿಸುತ್ತಾ ಬಂದಿದ್ದಾರೆ. ಪ್ರಸ್ತುತದಲ್ಲಿ ಆಯ್ಕೆ ಮಾಡಿರುವ ಭಾಗವು 'ಕಾಲುಮತ ದರ್ಶನ' ಕೃತಿಯದು. ಇವರ 'ಋಗ್ವೇದಸಾರ ಅಥವ ನಾಗಪ್ರತಿಮಾ ವಿಚಾರ' ಅಮೂಲ್ಯ ಸಂಗತಿಗಳನ್ನು ಒಳಗೊಂಡ ಕೃತಿ. 'ಪ್ರವಾಹ ಪತಿತರ ಕರ್ಮ ಹಿಂದು ಎಂಬ ಧರ್ಮ' ಕೃತಿಯು ಬೆಂಗಳೂರು ವಿಶ್ವವಿದ್ಯಾನಿಲಯದ ವಿಶೇಷ ಭಾಷಣ ಮಾಲೆಯ ಕೃತಿ. ಕರ್ನಾಟಕದಲ್ಲಿ ಎಲ್ಲಾ ವಿದ್ವಾಂಸರ, ಸಂಶೋಧಕರ ಗೌರವ ಆದರಗಳನ್ನು ಗಳಿಸಿರುವ ಧೀಮಂತರು. ಸುಮಾರು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಧಾರವಾಡದ ಸಾಧನ ಕೇರಿಯಲ್ಲಿ ವಾಸಿಸುತ್ತಿದ್ದಾರೆ.

ಜ್ಞಾನಾನಂದ, ಜಿ : 'ಆಚಾರ್ಯಾಭಿವಂದನೆ'ಯ ಸಂಪಾದಕರಲ್ಲಿ ಒಬ್ಬರು. ಇದುವರೆವಿಗೂ ಮುವ್ವತ್ತು ಗ್ರಂಥಗಳನ್ನು ಪ್ರಕಟಿಸಿದ್ದಾರೆ. 'ವಿಶ್ವಕರ್ಮಾನ್ವಯ ಪ್ರದೀಪಿಕಾ' ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅನೇಕ ಲೇಖನ, ಕತೆಗಳನ್ನೂ ಪ್ರಕಟಿಸಿದ್ದಾರೆ. ಶ್ರೀ 'ನಾಭಾ' ಸನ್ಮಾನ ಸಮಿತಿಯ ಕಾರ್ಯದರ್ಶಿಗಳು. ಕೆ.ಜಿ.ಎಫ್‌ನ ಬಿಇಎಂಎಲ್ ನಗರ ವಾಸಿಗಳು.

ತ್ರಿಪ್ಪಣಾಚಾರ್ಯ ಬಾ. ಪ್ರಭಾಕರ : ಹುಬ್ಬಳ್ಳಿಯವರು. ಸಂಸ್ಕೃತ ವಿದ್ವಾಂಸರಾದ ಇವರು ವೃತ್ತಿಯಿಂದ ಪುರೋಹಿತರು. ಸಾಹಿತ್ಯ ಪ್ರಿಯರು. 'ವಿಶ್ವಕರ್ಮ ವ್ರತ' ಇವರು ಪ್ರಕಟಿಸಿರುವ ಕೃತಿ. ಆಚಾರ್ಯಾಭಿನಂದನೆಗೆ ಇವರು ರಥಕಾರಾಧಿಕರಣಂ ಕೃತಿಯ ಒಂದು ಭಾಗವನ್ನು ಆಯ್ದು ಅನುವಾದಿಸಿದ್ದಾರೆ.

ದಿವಾಕರ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ : ಗಿಣಿಗೆರೆ ಮಠವೆಂದು ಹೆಸರಾಗಿರುವ ಸರಸ್ವತೀ ಪೀಠದ ಅಧಿಪತಿಗಳು. ಶ್ರೀ ರೂಢಾಚಾರ್ಯ ಪರಂಪರೆಯ ಸ್ವಾಮಿಗಳು. ವಿದ್ವಾಂಸರು. ವಾಗ್ಮಿಗಳು. ಸಮಾಜಾಭಿಮಾನಿಗಳು.

ದೀಕ್ಷಿತ. ವಿ. ಜಿ. : ಸಂಶೋಧಕರು. ವಿದ್ವಾಂಸರು. ಧಾರವಾಡದ ಭಾರತ್ ಹೈಸ್ಕೂಲಿನಲ್ಲಿ ಪ್ರಿನ್ಸಿಪಾಲರಾಗಿದ್ದಾರೆ. ಶಾಸನ ಸಾಹಿತ್ಯದಲ್ಲೂ ಪರಿಣತಿಗಳಿಸಿ ಅನೇಕ ಶೋಧನೆಗಳನ್ನು ಮಾಡಿದ್ದಾರೆ. ಮೂರುಜಾವೀದೇವನೆಂದು ಖ್ಯಾತನಾಗಿರುವ ಚಿಕ್ಕೋಜನ ಬಗ್ಗೆ ಅದ್ಭುತವಾದ ಸಂಶೋಧನೆ ನಡೆಸಿದ್ದಾರೆ. ಪ್ರಸ್ತುತ 'ಅಭಿನಂದನಾ' ಗ್ರಂಥದಲ್ಲಿ ಇವರ ಪ್ರಕಟಿತ ಕೃತಿ 'ರಾಜಾ ಭಾಷ ಸವಾರ ಚಾಂಗದೇವ' ದಿಂದ ಸಂಗ್ರಹಿಸಲಾಗಿದೆ 'ಕರ್ನಾಟಕದಲ್ಲಿ ವಿಶ್ವಬ್ರಾಹ್ಮಣ ಸಂಸ್ಕೃತಿ' ಮುಂತಾದ ಹಲವು ಇವರ ಪ್ರಕಟಣೆಗಳು.

ದೇವೇಂದ್ರ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ : ಶ್ರೀಮತ್ಕಾಳಹಸ್ತ್ಯಾಚಾರ್ಯಪರಂಪರೆಯ ಪೀಠಾಧಿಪತಿಗಳು. ಶಹಪುರ (ಗುಲ್ಬರ್ಗಾಜಿಲ್ಲೆ)ದಲ್ಲಿ ಸ್ವಾಮಿಗಳ ಪೀಠವಿದೆ. ಸಂಗೀತ ಸಾಹಿತ್ಯ ಪ್ರವೀಣರು; ಕವಿಗಳು. ಮೌನೇಶ್ವರ ಸುಪ್ರಭಾತ, ಜಗಳಾಂಬ ಸುಪ್ರಭಾತ, ವಿಶ್ವಕರ್ಮ ಸುಪ್ರಭಾತ ಮುಂತಾದವುಗಳೇ ಅಲ್ಲದೆ 'ಕರ್ನಾಟಕದ ಮುವ್ವರು ವಿಶ್ವಕರ್ಮ ಮಹನೀಯರು', 'ಶ್ರೀ ಮೌನೇಶ್ವರ ಮಹಾತ್ಮೆ' (ನಾಟಕ) ಮುಂತಾದ ಕೃತಿಗಳನ್ನೂ ಪ್ರಕಟಿಸಿದ್ದಾರೆ. 'ಮೌನೇಶ್ವರ ಮಹಾತ್ಮ್ಯೆ' ಎಂಬ ಕಾವ್ಯ ಪ್ರಕಟವಾಗಬೇಕಾಗಿದೆ. ಸಂಘಟನಾಚಾತುರ್ಯದೊಂದಿಗೆ ತಿಳಿಯಾದ ಭಾಷೆಯಲ್ಲಿ ಗಹನ ವಿಷಯಗಳನ್ನು ಮನದಟ್ಟು ಮಾಡಿಕೊಡುತ್ತಾ ಶಿಷ್ಯರ ಭಕ್ತ್ಯಾದರಗಳಿಗೆ ಪಾತ್ರರಾಗಿದ್ದಾರೆ.

ನಾಗಭೂಷಣಾಚಾರ್ಯಲು, ಚಿರ್ರಾವೂರು : 'ಪಂಚಾಯತಿ ರಾಜ್ಯಂ' 'ವಿಶ್ವಶಿಲ್ಪಿ' ಪತ್ರಿಕೆಗಳ ಸಂಪಾದಕರು. ಬಿಡಿಓ ಆಗಿ ಸರ್ಕಾರಿ

ಸೇವೆಯಲ್ಲಿದ್ದು ನಿವೃತ್ತರಾಗಿರುವ ಆಚಾರ್ಯರು ಒಳ್ಳೆಯ ಲೇಖಕರು. 'ಸಂಚಾರ ಜಾತುಲು' ಪುಸ್ತಕಕ್ಕೆ ಕೇಂದ್ರ ಸರ್ಕಾರ ಬಹುಮಾನಗಳಿಸಿದ್ದಾರೆ. ಹತ್ತಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಇತ್ತೀಚಿನದು 'ಮಹಾತ್ಮುಲು-ಮಹೋಪದೇಶಾಲು' ಸಮಾಜಸೇವೆ, ಗ್ರಂಥ ಭಂಡಾರಗಳ ಪ್ರಸಾರ ಮುಂತಾದ ಕಾರ್ಯಗಳಲ್ಲಿ ಅಗ್ರಮಾನ್ಯರು. ಶ್ರೀ ತತ್ತ್ವಾನಂದ ಶಿಲ್ಪಾಶ್ರಮದ ಪತಿಯಿಂದ ಬಹುಶ್ರಮದಿಂದ ಮಂಗಳಗಿರಿ (ಗುಂಟೂರು ಜಿಲ್ಲೆ)ಯಲ್ಲಿ ಓರಿಯಂಟಲ್ ಹೈಸ್ಕೂಲನ್ನು ನಡೆಸುತ್ತಿದ್ದಾರೆ. ಸನ್ಮಾನ ಸಮಿತಿಯಲ್ಲಿ ನೆರೆರಾಜ್ಯ ಪ್ರತಿನಿಧಿಯಾ ನೆರವಾಗಿದ್ದಾರೆ.

ನಾಗೇಶ್ ಎಸ್. ಶಿಲ್ಪಿ : ಪುಣೆಯಲ್ಲಿರುವ ಆನಂದ ಶಿಲ್ಪಕಲಾ ನಿಕೇತನದ ನಿರ್ದೇಶಕರು. ಶಿಲ್ಪಶಾಸ್ತ್ರದಲ್ಲಿ ಪಂಡಿತರು. ಹುಟ್ಟು ಕನ್ನಡಿಗರಾಗಿದ್ದು ಮಹಾರಾಷ್ಟ್ರದಲ್ಲಿ ಕಂಚಿನ ಎರಕದ ಕಲೆಯಲ್ಲಿ ನಿಷ್ಣಾತರಾಗಿದ್ದಾರೆ. ಮದಕರಿನಾಯಕನ ವಿಗ್ರಹವನ್ನು ನಿರ್ಮಿಸಿಕೊಟ್ಟಿದ್ದಾರೆ. ಸಾಹಿತ್ಯಾಭಿಮಾನಿಗಳು. 'ಆಚಾರ್ಯಾಭಿವಂದನೆ'ಯಲ್ಲಿ ಡಾ|| ಜಿ. ಕೆ. ಪಿಳ್ಳೈ ಅವರ ಲೇಖನದ ಅನುವಾದ ನಡೆಸಿರುವ ಶಿಲ್ಪಿಗಳು ಕರ್ನಾಟಕದ ಹಲವಾರು ಪತ್ರಿಕೆಗಳಲ್ಲಿ ಹಲವು ಸಂಗತಿಗಳ ಮೇಲೆ ಲೇಖನಗಳನ್ನು ಬರೆದಿದ್ದಾರೆ. ಸ್ನೇಹಪರರು. ಉತ್ಕಟ ಸಮಾಜಾಭಿಮಾನಿಗಳು.

ನಾಗೇಶ್ವರರಾವ್, ಪೂಸಪಾಟಿ : ತೆಲುಗು ಪಂಡಿತರಾಗಿ ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತರಾಗಿರುವವರು. ಕವಿಗಳು. ಡಾ|| ವಿಶ್ವನಾಥ ಸತ್ಯನಾರಾಯಣ ಅವರಿಂದ ಕವಿಗಂಡಪೆಂಡಾರ ಪ್ರಶಸ್ತಿ ಸನ್ಮಾನಿ ತರು. ಪ್ರಖ್ಯಾತ ಅಷ್ಟಾವಧಾನಿಗಳು. 'ಶ್ರೀ ವೀರಬ್ರಹ್ಮೇಂದ್ರ ಚರಿತ್ರಮು' ಕಾವ್ಯ ಇವರ ಶ್ರೇಷ್ಠಕೃತಿ. 'ಸಾಹಿತ್ಯ ಜಗತ್ತುಲೋ ವಿಶ್ವಕರ್ಮ' ಇವರು ಶ್ರಮ ಪೂರ್ವಕವಾಗಿ ಸಂಶೋಧಿಸಿ ರಚಿಸಿರುವ ಉತ್ತಮಕೃತಿ. 'ವಿಶ್ವಬ್ರಾಹ್ಮಣ ಸ್ಮೃತಿ-ಸಾಹಿತ್ಯ ಚಾರಿತ್ರ'ದಲ್ಲಿ ಐದು ನೂರು ಮಂದಿ ವಿಶ್ವ ಬ್ರಾಹ್ಮಣ ಲೇಖಕರ, ಕಲಾವಿದರ ಬಗ್ಗೆ ವಿಷಯ ಸಂಗ್ರಹಿಸಿದ್ದಾರೆ. 'ಶಿಲ್ಪ ಸುಂದರಿ', 'ಆದರ್ಶ ಪದ್ಮಿನಿ' ಇತರ ಗ್ರಂಥಗಳು. ಇತ್ತೀಚೆಗೆ ಅಂಧರಾದ ಮಾಚೂರಿ ವೀರನಾರಾಯಣಾಚಾರ್ಯ ಅವರ 'ಶ್ರೀ ವೀರಬ್ರಹ್ಮ ಸ್ವಾಮೀಶ್ವರ ಶತಕಮು'

ಕೃತಿಯನ್ನು ಪ್ರಕಟಿಸಿ ಆ ಕವಿಯನ್ನು ಬೆಳಕಿಗೆ ತಂದಿದ್ದಾರೆ. 'ಸಹಜಕವಿ ಪಂಚಾನನ' ಎಂಬುದು ಇವರ ಹಲವು ಬಿರುದುಗಳಲ್ಲಿ ಒಂದು. ಸರಳರು. ವಿದ್ವತ್ಪ್ರೇಮಿಗಳು.

ನಾಗೇಶ್ವರರಾವ್, ಪೆದಪಾಟಿ : ಹೈದರಾಬಾದಿನಲ್ಲಿರುವ ಶಿಲ್ಪ ಕಲಾ ಶಾಲೆಯಲ್ಲಿ ವೈಸ್ ಪ್ರಿನ್ಸಿಪಾಲರಾಗಿರುವ ಇವರು ಎಂ.ಎ., ಪದವೀಧರರು. ಕನ್ನಡ, ತೆಲುಗು, ಸಂಸ್ಕೃತ, ಮರಾಠಿ, ಹಿಂದಿ, ತಮಿಳು ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ವಿದ್ವಾಂಸರು. ಶ್ರೀನಾಥುನಿ ಪಂಚಪ್ರಾಣಮುಲು, ಶ್ರೀ ಶೈಲ ಗದ್ಯ ಇವರ ಪ್ರಕಟಿತ ಕೃತಿಗಳು. ಶಿಲ್ಪ ಶಾಸ್ತ್ರಗಳಲ್ಲಿ ನೈಪುಣ್ಯವನ್ನು ಗಳಿಸಿದ್ದಾರೆ.

ನಾರಾಯಣ ಅಯ್ಯಂಗಾರ್ಯರು, ಬಿಂಡಿಗನವಿಲೆ : ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಹಿರಿಯ ವಿದ್ವಾಂಸರು. ಇವರ 'ಇಂಡೋಆರ್ಯನ್ ಮೈಥಾಲಜಿ' (ಎರಡು ಭಾಗಗಳು) ಈ ಶತಕದ ಪ್ರಾರಂಭದಲ್ಲಿ ಇಂಗ್ಲೀಷಿನಲ್ಲಿ ಪ್ರಕಟವಾಗಿದ್ದು ಅನೇಕ ವಿಷಯಗಳನ್ನು ಅದು ಪಡೆದಿಕೊಂಡಿದೆ. ಈ ಕೃತಿಯ ಮೊದಲ ಭಾಗದಿಂದ ಆಯ್ದಿರುವ ಗಾಯತ್ರಿ ಮಂತ್ರಾರ್ಥ ಭಾಗವು ಈ ಸಂಪುಟದಲ್ಲಿ ಅನುವಾದಿಸಿಕೊಡಲಾಗಿದೆ.

ನಾರಾಯಣರಾವ್, ಹೊಸಬೆಟ್ಟು : ಮಂಗಳೂರಿನ ಇವರು ಒಳ್ಳೆ ವಿದ್ವಾಂಸರು, ವಾಗ್ಮಿಗಳು. ಪ್ರವಚನ ಪಟುಗಳೆಂದು ಹೆಸರಾಗಿದ್ದಾರೆ. 'ವಿದ್ಯಾಲಂಕಾರ' ಎಂಬ ಬಿರುದನ್ನೂ ಪಡೆದಿದ್ದಾರೆ. ಪ್ರಸ್ತುತ ಕೃತಿಯಲ್ಲಿ ೧೯೭೨ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಕೊಡಲಾಗಿದೆ. ವಿಶ್ವಕರ್ಮಣ ಧರ್ಮ, ಸಂಸ್ಕೃತಿಗಳ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಹಲವು ವಿದ್ವಾಂಸರಲ್ಲಿ ರಾಯರು ಪ್ರಮುಖರು. 'ವಿಶ್ವಕರ್ಮ ಪುರಾಣ' ಪ್ರವಚನವನ್ನು ಹಲವಾರು ಪಟ್ಟಣಗಳಲ್ಲಿ ನಡೆಸಿ ಜನಪ್ರಿಯರಾಗಿದ್ದಾರೆ.

ನಿರಂಜನ ಶಾಸ್ತ್ರಿ, [illegible] : ಆಂಧ್ರಪ್ರದೇಶದ ಪ್ರಕಾಂಡ ಪಂಡಿತರು. ತೆಲುಗಿನಲ್ಲಿ ಮೇಲು ಕೃತಿಯಾಗಿರುವ 'ವಿಶ್ವಕರ್ಮ ಬ್ರಾಹ್ಮಣ [illegible]ಗಮುಮು' ಕೃತಿಯ ಕರ್ತೃಗಳು. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ,

ತಮಿಳುನಾಡುಗಳಲ್ಲಿ ಸಂಚರಿಸಿ ಸಮಾಜ ಸೇವೆಯನ್ನು ಮಾಡಿರುವ ಮಹಾ ಪುರುಷರುಷರು.

ಪುಟ್ಟಣ್ಣಯ್ಯ, ಸಿ. ಕೆ : ಅಧ್ಯಾಪಕರಾಗಿದ್ದವರು. ಶ್ರೀ 'ನಾಥಾ' ಅವರಿಂದ ಪ್ರೇರಿತಗೊಂಡು ಸಮಾಜ ಸೇವಾ ಕಾರ್ಯಕ್ಕೆ ಪ್ರಾರಂಭಿಸಿ ಬಹಳ ಸೇವೆ ಮಾಡಿದವರು. ಕೆ. ಆರ್. ನಗರದ ಚಂದಗಾಲು ಇವರ ಜನ್ಮ ಸ್ಥಳ. 'ಉಪಧ್ಯಾಯ ವಾಣಿ' ಎಂಬ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುತ್ತಿದ್ದರು. ಒಳ್ಳೆಯ ಗಮಕಿಗಳು, ನಟನ ಕಲಾ ಚತುರರು.

ಬಸವಾಚಾರ್ಯ ಸ್ವಾಮಿಗಳು, ಶ್ರೀ ಶ್ರೀ ಶ್ರೀ ಕಸುಪರ್ತಿ : ಸರಸ್ವತೀ ಪೀಠಾಧ್ಯಕ್ಷರಾಗಿದ್ದ ಈ ಸ್ವಾಮಿಗಳು ವಿಜಯನಗರದ ವಿಜಯರಾಮ ರಾಯರ ಕಾಲದಲ್ಲಿದ್ದವರು. ಪೇರೂರು ಅಗ್ರಹಾರಿಕರು ನಡೆಸಿದ ವಾಗ್ವಾದವು ಶಾಲಿವಾಹನ ಶಕೆ ೧೬೭೮ ಧಾತು ನಾಮ ಸಂವತ್ಸರ ಚೈತ್ರ ಶುದ್ಧ ತದಿಗೆ ಗುರುವಾರ ನಡೆದಿರುವಂತೆ ತಿಳಿದು ಬರುತ್ತದೆ. ಅಗ್ರಹಾರೀಕರಿಂದ ಬ್ರಹ್ಮ ರಥದ ಗೌರವವನ್ನು ಪಡೆದ ಮಹಾ ವಿದ್ವಾಂಸರು. ಆ ಸದದರ್ಭದ ಪ್ರಶ್ನೋತ್ತರವೇ 'ರಥಕಾರಾಧಿಕರಣಃ' ಎಂಬ ಕೃತಿ. ಇದೇ ಸ್ವಾಮಿಗಳು 'ವಿಶ್ವ ವಿದ್ಯಾಭರಣಂ' ಎಂಬ ಮತ್ತೊಂದು ಕೃತಿಯನ್ನೂ ರಚಿಸಿದ್ದಾರೆ.

ಬುದ್ಧ ಪ್ರಕಾಶ್, ಡಾ. : ಕುರುಕ್ಷೇತ್ರ ವಿಶ್ವವಿದ್ಯಾನಿಲಯದ 'ಇಂಡಿಕ್ ಸ್ಟಡೀಸ್' ವಿಭಾಗದ ನಿರ್ದೇಶಕರಾಗಿರುವ ಈ ವಿದ್ವಾಂಸರು ಇಪ್ಪತ್ತಕ್ಕೂ ಹೆಚ್ಚಿನ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕೃತಿಗಳು ಇವರ ವಿದ್ವತ್ತಿಗೆ ಸಾಕ್ಷಿಯಾಗಿವೆ. ಪ್ರಸ್ತುತ ಆಚಾರ್ಯಾಭಿವಂದನೆಗೆ ಇವರ ವಿಖ್ಯಾತ 'ಋಗ್ವೇದ ಅಂಡ್ ಇಂಡಸ್ ವ್ಯಾಲಿ ಸಿವಿಲಿಜೇಷನ್' ಕೃತಿಯಿಂದ ಕೆಲವು ಪುಟಗಳನ್ನು ಆರಿಸಲಾಗಿದೆ.

ಮರುಳಯ್ಯ, ಡಾ॥ ಸಾ. ಶಿ. : ಕನ್ನಡಸಾಹಿತ್ಯ ಕ್ಷೇತ್ರದಲ್ಲಿ ವಿಖ್ಯಾತರಾಗಿರುವ ಇವರ ರಚನೆಗಳು ವೈವಿಧ್ಯಮಯ – ಕವಿತೆ, ಕತೆ, ಕಾದಂಬರಿ, ನಾಟಕ, ವಿಮರ್ಶೆ, ಸಂಶೋಧನೆ, ಸಂಪಾದನೆ ಇತ್ಯಾದಿ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇತ್ತೀಚಿನವರೆವಿಗೂ ಚನ್ನಪಟ್ಟಣದ ಶ್ರೀ ಕುವೆಂಪು ಮಹಾವಿದ್ಯಾಲಯದ ಪ್ರಾಂಶುಪಾಲರಾಗಿದ್ದ

ಮರು ಈಗ ಕಿರಿಯರ ವಿಶ್ವಕೋಶದ ಸಂಪಾದಕರಾಗಿದ್ದಾರೆ. ಬೆಂಗಳೂರು-೧೮ (೯೦/೧, ೪ನೇ ಮೈನ್, ೫ನೇ ಕ್ರಾಸ್, ಚಾಮರಾಜಪೇಟೆ)ಯಲ್ಲಿ ಇವರ ನಿವಾಸ. ಪ್ರಸ್ತುತ ಲೇಖನದಲ್ಲಿ ವಿಶ್ವಬ್ರಾಹ್ಮಣರ ಸಂಪ್ರದಾಯದ ಒಂದು ವಿಶಿಷ್ಟ ಮುಖ ದರ್ಶನದ ಹಾದಿಯಲ್ಲಿ ತಮ್ಮ ಲೇಖನ ನಿರೂಪಿಸಿ ಹೊಸ ಅನ್ವೇಷಣೆಗೆ ಹಾದಿ ಮಾಡಿಕೊಟ್ಟಿದ್ದಾರೆ.

ಮಹಾದೇವ ಸ್ವಾಮಿಗಳವರು, ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಶ್ರೀ : ಮೈಸೂರಿನ ಜಗದ್ಗುರು ಶ್ರೀಕರಸ್ಥಲ ನಾಗಲಿಂಗಸ್ವಾಮಿ ಮಠದ ಪೀಠಾಧ್ಯಕರು. ಕನ್ನಡ ಸಂಸ್ಕೃತಗಳಲ್ಲಿ ಅದ್ವಿತೀಯ ಪಂಡಿತರು. ಶಿಲ್ಪ ಸಿದ್ಧಾಂಗಳಾಗಿದ್ದು ಶಿಲ್ಪ ಶಾಸ್ತ್ರದಲ್ಲೂ ಮಹಾ ಮೇಧಾವಿಗಳು. ಶಿಲ್ಪಯೋಗವನ್ನೂ, ವೇದ ವಿಜ್ಞಾನವನ್ನೂ ಅನುಷ್ಠಾನ ಮಾಡುತ್ತಿರುವ ಮಹಾ ತಪಸ್ವಿಗಳು.

ಮಾಧವಾಚಾರ್ಯುಲು, ಪ್ರೊ. ಎರ್ರೋಜು ; 'ಮಹಾ ಗುರು' ಎಂಬ ಬಿರುದಿನಿಂದ ಗೌರವಿಸಲ್ಪಟ್ಟಿರುವ ಇವರು ನೂಜಿವೀಡಿನ ಧರ್ಮಅಪ್ಪಾ ರಾವ್ ಕಾಲೇಜನ್ನು ಪ್ರಾರಂಭಿಸಿದವರು. ವಿಶ್ವಬ್ರಾಹ್ಮಣ ಧರ್ಮ ಪೀಠದ ಸಭಾಪತಿಗಳು. ಎಳೆಯ ವಯಸ್ಸಿನಿಂದಲೂ ಸಮಾಜ ಸೇವೆಯನ್ನು ನಡೆಸು ತ್ತಿರುವ ಮಹನೀಯರು. 'ಮಘವಲಯಮು' (ಖಂಡಕಾವ್ಯ), ಪ್ರತಿಮಾ ಶಂಬೂಕಮು(ನಾಟಕ) ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಆಂಧ್ರಪ್ರದೇಶ ಸಾಹಿತ್ಯ ಅಕ್ಯಾಡೆಮಿಯ ಸದಸ್ಯರು. ಈಗ ಆಂಧ್ರ ವಿಶ್ವವಿದ್ಯಾನಿಲಯದ ಫೆಲೋ ಆಗಿದ್ದಾರೆ.

ಮುತ್ತಾಚಾರ್ಯ, ವಿದ್ವಾನ್ ತಾ. ವೆಂ. ; ಸಂಗೀತ - ಸಾಹಿತ್ಯಗಳಲ್ಲಿ ವಿದ್ವಾಂಸರು. ಸುಮಾರು ಇಪ್ಪತ್ತು ಕೃತಿಗಳನ್ನೂ ಪ್ರಕಟಿಸಿದ್ದಾರೆ. ಕನ್ನಡದ ವಾಗ್ಗೇಯಕಾರರೂ ಹೌದು. ಸಂಸ್ಕೃತ 'ವಿಶ್ವಕರ್ಮ ಪುರಾಣ'ವನ್ನು ಕನ್ನಡಕ್ಕೆ ಷಟ್ಪದಿ ರೂಪದಲ್ಲಿ ಅನುವಾದಿಸಿದ್ದಾರೆ. ರಂಗ ನಾಟಕಗಳನ್ನೂ ಬರೆದ್ದಾರೆ. 'ವಿಶ್ವಕರ್ಮ ಪ್ರಕಾಶ' ಮಾಸಿಕವನ್ನು ಕೆಲಕಾಲ ಸಂಪಾದಿಸಿ ಪ್ರಕಟಿಸುತ್ತಿದ್ದರು. ಬಹುಮುಖಿ ಪ್ರತಿಭಾನ್ವಿತರು.

ರೂಢಾಚಾರ್ಯ ಸ್ವಾಮಿಗಳವರು, ಶ್ರೀ ಶ್ರೀ ಶ್ರೀ : ಶ್ರೀಮತ್ಕಾಳ ಹಸ್ತಾಚಾರ್ಯ ಪರಂಪರೆಯಲ್ಲಿ ಮುದ್ದಾಬಳ್ಳಿ ಶಾಖಾ ಮಠಾಧೀಶ್ವರರಾಗಿರುವ

ಶ್ರೀ ಸ್ವಾಮಿಗಳು ಎಂ.ಎ.,ಬಿಎಡ್., ಪದವೀಧರರು. ಕಿತ್ತೂರಿನಲ್ಲಿ ಅಧ್ಯಾಪಕ ವೃತ್ತಿಯನ್ನು ನಡೆಸುತ್ತಿದ್ದಾರೆ. ಒಳ್ಳೆಯ ವಾಗ್ಮಿಗಳು.

ರಂಗಯ್ಯ, ಕೆ. : ಕರ್ನೂಲಿನವರು. ಆಂಧ್ರ ದೇಶದಲ್ಲಿರುವ ಕನ್ನಡಿಗರು. ತಹಸೀಲ್ದಾರರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿರುವರು. ಸಂಶೋಧನಾಶೀಲರು. ತೆಲುಗು ಮತ್ತು ಕನ್ನಡದಲ್ಲಿ ಹಲವಾರು ವಿಚಾರ ಪ್ರಚೋದಕ, ಸಂಶೋಧನಾಶೀಲ ಲೇಖನಗಳನ್ನು ಬರೆದಿದ್ದಾರೆ.

ಲಕ್ಷ್ಮೀಂದ್ರ ಸ್ವಾಮಿಗಳು, ಶ್ರೀ ಶ್ರೀ ಶ್ರೀ : ಶ್ರೀ ಮತ್ಕಾಳಹಸ್ತ್ಯಾಚಾರ್ಯ ಪರಂಪರೆಯಲ್ಲಿಯ ಏಕದಂಡಗಿ ಪೀಠಾಧೀಶರಾಗಿರುವ ಮಹಾ ಸ್ವಾಮಿಗಳು ಮಹಾ ತಪೋನಿಷ್ಠರು, ವಾಕ್ಸಿದ್ಧಿ ಸಾಧಿಸಿರುವ ಮಹಾಪುರುಷರು. ಮಂತ್ರಾನುಷ್ಠಾನ ಪರಾಯಣರು. ರಾಯಚೂರು ಜಿಲ್ಲಾ ಕೊಪ್ಪಳದ ಬಳಿಯ ಲೇಬಗಿರಿಯಲ್ಲಿ ಸ್ವಾಮಿಗಳ ಪೀಠವಿದೆ.

ವಾಸುದೇವಾಚಾರ್ಯ, ಕೆ. : ವೃತ್ತಿಯಿಂದ ಚಿನ್ನ ಬೆಳ್ಳಿ ಆಭರಣ ವ್ಯಾಪಾರಿಗಳಾದರೂ ಪ್ರವೃತ್ತಿಯಿಂದ ಸಾಹಿತ್ಯ ಪ್ರಿಯರು; ಸ್ವಯಂ ಸಾಹಿತಿಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಉತ್ಸಾಹೀ ಕಾರ್ಯದರ್ಶಿಗಳು. ಶಿವಮೊಗ್ಗದ ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹನೀಯರು ಶ್ರೀ 'ನಾಭಾ' ಸನ್ಮಾನ ಸಮಿತಿಯ ಖಜಾಂಚಿಗಳು.

ವಿಶ್ವರೂಪಾಚಾರ್ಯ 'ಬಾಲಬಂಧು', ಎನ್ : ಆರೋಗ್ಯ ಇಲಾಖೆಯಲ್ಲಿರುವ ಪದವೀಧರ ತರುಣರು. ತುಂಬಾ ಉತ್ಸಾಹಶೀಲ ಕಾರ್ಯಕರ್ತರು. ಬಾಲಕರಿಗಾಗಿ ಅನೇಕ ಪುಸ್ತಕಗಳನ್ನು ಪ್ರಕಟಿಸುವುದು ಮಾತ್ರವೇ ಅಲ್ಲ ಅಖಿಲ ಕರ್ನಾಟಕ ಬಾಲ ಬರಹಗಾರರ ಸಮ್ಮೇಳಗಳನ್ನು ಹಲವು ಬಾರಿ ಯಶಸ್ವಿಯಾಗಿ ನಡೆಸಿದ್ದಾರೆ. ನಾಟಕ ಇವರ ಅಭಿರುಚಿಯ ಮಾಧ್ಯಮ. ಸ್ವಯಂ ಅಣಕು ಕಲಾವಿದರಾದ ಇವರು ಅಣಕು ಕಲಾವಿದರ ಕೂಟವನ್ನೂ ಏರ್ಪಡಿಸಿದ್ದಾರೆ. ಸನ್ಮಾನ ಸಮಿತಿಯ ಕಾರ್ಯಕಾರಿ ಮಂಡಲಿಯ ಸದಸ್ಯರು.

ವೀರಪ್ಪಾಚಾರ್ಯ. ಬಿ. ಆರ್. : ಶ್ರೀರಂಗಪಟ್ಟಣದಲ್ಲಿ ಶ್ರೀ 'ನಾಭಾ' ಇವರ ಪ್ರಭಾವಕ್ಕೆ ಸಿಕ್ಕಿ ಜೀವನ ಮಾರ್ಗವನ್ನೇ ಪರಿವರ್ತಿಸಿ

ಕೊಂಡು ಸಮಾಜ ಸೇವೆಗೆ ನಿಂತ ಮಹನೀಯರು. ಕೆಲಕಾಲ ಶ್ರೀರಂಗಪಟ್ಟಣದ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಿಂದುಳಿದ ಜನಾಂಗದವರಿಗಾಗಿ ವಿಶೇಷ ಸವಲತ್ತುಗಳನ್ನು ಪಡೆಯಲು ಹೋರಟವನ್ನು ಪ್ರಾರಂಭಿಸಿ ನಡೆಸಿದವರು. ಈಗ ಬೆಂಗಳೂರಿನ ಮೌನೇಶ್ವರ ದೇವಾಲಯದಲ್ಲಿ ಅರ್ಚಕರಾಗಿದ್ದಾರೆ.

ವೀರಾಚಾರ್ಯರು, ಕೆ. ಎನ್. : ಶಿವಾರಪಟ್ಟಣದ ಇವರು ಸಾಹಿತ್ಯ ಸಂಸ್ಕೃತಗಳಲ್ಲಿ ಹೆಚ್ಚು ಒಲವು ಬೆಳೆಸಿಕೊಂಡಿರುವ ಶಿಲ್ಪಿಗಳು. ಪರಂಪರಾನುಗತ ಶಿಲ್ಪಕಲೆಯೊಂದಿಗೆ ವೈದಿಕ ವೃತ್ತಿಯನ್ನೂ ಸಾಗಿಸುತ್ತಾ ಸಾಹಿತ್ಯ ರಚನೆಯನ್ನೂ ಮಾಡುತ್ತಿರುತ್ತಾರೆ. ಈಗ ಬೆಂಗಳೂರಿನ ಶಿವಾಜಿನಗರದ ಶ್ರೀಗಣನಾಥರ್ ಆಲಯಂನಲ್ಲಿ ಅರ್ಚಕರಾಗಿದ್ದಾರೆ.

ವೀರರಾಘವ ಶರ್ಮ, ವಿದ್ವಾನ್ ತಾಡಿಚರ್ಲ : ಇಂಗಳದಹಾಳು (ಕರ್ನೂಲು ಜಿಲ್ಲೆ)ನಲ್ಲಿಯ ಜಿಲ್ಲಾ ಪರಿಷತ್ತಿನ ಪ್ರೌಢ ಶಾಲೆಯಲ್ಲಿ ತೆಲುಗು ವಿದ್ವಾಂಸರಾಗಿರುವ ಇವರು ಹೆಸರುಗಳಿಸಿರುವ ವೈದಿಕರು. ಅನೇಕ ಪ್ರತಿಷ್ಠೆಗಳನ್ನು, ಸ್ಮಾರ್ತ ಕರ್ಮಗಳನ್ನು ನಿರ್ವಹಿಸಿರುವ ತರುಣರು. ತೆಲುಗು ಸೀಮೆಯಲ್ಲಿರುವ ಕನ್ನಡಿಗರು. 'ವಿಶ್ವಬ್ರಾಹ್ಮಣ ಸಂಕ್ಷಿಪ್ತ ಚರಿತ್ರೆ' 'ಪಂಚಬ್ರಹ್ಮ ಸ್ತೋತ್ರಮು' ಇವರ ಪ್ರಕಟಣೆಗಳು.

ವೀರರಾಘವಾಚಾರ್ಯುಲು, ಡಾ. ಕೊಂಡೂರು : ಆಂಧ್ರಪ್ರದೇಶದ ಖ್ಯಾತ ವಿದ್ವಾಂಸರು. ದರ್ಶನಾಚಾರ್ಯ ಮುಂತಾದ ಬಿರುದುಗಳಿಂದ ಸನ್ಮಾನಿತರಾಗಿರುವರು ಆತ್ಮದರ್ಶನಮು, ಶಿಲ್ಪದರ್ಶನಮು, ಯೋಗದರ್ಶನಮು ಎಂಬ ಮೂರು ಅಮೂಲ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಕಳಾರಾಧನ, ಲೇಪಾಕ್ಷಿ, ಮೋಹನಾಂಗಿ ಎಂಬ ಐತಿಹಾಸಿಕ ಕಾದಂಬರಿಗಳನ್ನು, ಅಮರಾವತಿ, ತೋರಣಮು, ಮಿತ್ರ ಸಹಸ್ರಿ ಮುಂತಾದ ಪದ್ಯಕೃತಿಗಳನ್ನೂ, ಮನಗುರುದೇವುಡು, ನಿರಂಜನ ವಿಜಯಮು ಮುತಾದ ಜೀವನ ಚರಿತ್ರೆಗಳನ್ನೂ ಬರೆದಿದ್ದಾರೆ. ಸಂಸ್ಕೃತದಲ್ಲಿ ಶ್ರೀ ವೀರಬ್ರಹ್ಮೇಂದ್ರ ಸುಪ್ರಭಾತಮ್ ರಚಿಸಿದ್ದಾರೆ. ದಾರ್ಶನೀಕರು; ತಪೋನಿಷ್ಠರು. ವಿಶ್ವಬ್ರಾಹ್ಮಧರ್ಮ ಪೀಠದಸಂಚಾಲಕರಾಗಿ, ಶಿಲ್ಪಕಳಾ ಪರಿಷತ್ತಿನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತೆನಾಲಿ (ಗುಂಟೂರು ಜಿಲ್ಲೆ)ಯ ಗಾಂಧಿನಗರ್‌ನಲ್ಲಿದ್ದಾರೆ. ಒಳ್ಳೆಯ ವಾಗ್ಮಿಗಳು; ವಿಮರ್ಶಕರು. ಕಲಾಪ್ರೇಮಿಗಳು. ಉಭಯಭಾಷಾ ವಿಶಾರದರು.

ವೀರಾಸ್ವಾಮಿ ಪತ್ತಾರ್. ಎಸ್. : ತಿರುಚಿರಾಪಳ್ಳಿಯಲ್ಲಿರುವ ಈ ಮಹನೀಯರು ಎಂ.ಎ.,ಎಲ್.ಟಿ., ಪದವೀಧರರು. ಜಿಲ್ಲಾ ವಿದ್ಯಾಧಿಕಾರಿಗಳಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. 'ಗಾಯತ್ರಿ', 'ದಿ ಸಿಗ್ನಿಫಿಕೆನ್ಸ್ ಆಫ್ ಟೆಂಪಲ್', 'ಕ್ವಿನ್ಟೆಸೆನ್ಸ್ ಆಫ್ ನಾರಾಯಣೀಯಂ' ಮುಂತಾದ ಕೃತಿಗಳನ್ನು ಇಂಗ್ಲೀಷಿನಲ್ಲಿ ರಚಿಸಿ ಅನೇಕ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 'ವಿಶ್ವಕುಲತಿಲಕಂ', 'ಭಕ್ತ ಶಿರೋಮಣಿ' ಮುಂತಾದ ಬಿರುದುಗಳಿಂದ ಗೌರವಿಸಲ್ಪಟ್ಟಿದ್ದಾರೆ.

ವೆಂಕಟರಾಮಾಚಾರ್ಯುಲು, ದುರಿಶೇಟಿ : ಅಭಿನವ ಮುರಾರಿ, ಮಧುವಿದ್ಯಾತೀರ್ಥ ಇತ್ಯಾದಿ ಬಿರುದುಗಳಿಂದ ಸನ್ಮಾನಿತರಾಗಿರುವ ಈ ವಿದ್ವಾಂಸರು ಸಂಸ್ಕೃತ ತೆಲುಗುಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಹೆಸರಾಂತ ಕವಿಗಳು. ಇವರ 'ಶ್ರೀಮದ್ವಿಶ್ವಕರ್ಮ ಸುಪ್ರಭಾತಂ', 'ಶ್ರೀ ಕಾಳಿಕಾಂಬ ಸುಪ್ರಭಾತಂ' ಬಹು ಜನಪ್ರಿಯವಾಗಿವೆ. ಕನ್ನಡ ಭಾಷೆಯಲ್ಲೂ ಪ್ರಕಟವಾಗಿವೆ. ಸಂಸ್ಕೃತ ಭಾಷೆಯ 'ಶಿಲ್ಪ ಶ್ರೀ' ಖಂಡಕಾವ್ಯ 'ಹಯಗ್ರೀವಶತಕಂ' ಅನೇಕ ವಿದ್ವಾಂಸರಿಂದ ಮೆಚ್ಚುಗೆ ಪಡೆದಿವೆ. ಅಥರ್ವಣಾಚಾರ್ಯ, ಅನಾರ್ಕಲಿ ಇವರ ತೆಲುಗು ಪದ್ಯರಚನೆಗಳು. ಆಂಧ್ರಪ್ರದೇಶದ ಸರ್ಕಾರಕ್ಕಾಗಿ ಶಿಲ್ಪಶಾಸ್ತ್ರಗಳನ್ನು ತೆಲುಗಿಗೆ ಅನುವಾದಿಸುತ್ತಿದ್ದಾರೆ. ಇವರ 'ವಿಶ್ವಕರ್ಮ ತತ್ತ್ವ' ಮತ್ತು 'ಪ್ರಬೋಧ ತರಂಗಿಣಿ-ಸಮಾಧಾನ ತರಂಗ' ಕನ್ನಡದಲ್ಲಿ ಪ್ರಕಟವಾಗಿವೆ.

ಶರಭಾಚಾರ್ಯ. ಪುಲಿವರ್ತಿ : ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದು ನಿವೃತ್ತರಾಗಿರುವ ಈ ವಿದ್ವಾಂಸರು ಇಂಗ್ಲೀಷು, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಕಾವ್ಯ ರಚಿಸಿದ್ದಾರೆ. ಅಷ್ಟಾವಧಾನಿಗಳು. ಗಣಿತಾವಧಾನಿಗಳು. 'ಕರ್ಮವೀರ' ತೆಲುಗಿನಲ್ಲಿ, 'ಡಾಕ್ಟರ್‌ಸಾರ್' ಇಂಗ್ಲಿಷಿನಲ್ಲಿ, 'ಮರುತ್ಸಂದೇಶಮು' ಸಂಸ್ಕೃತದಲ್ಲಿ ಇವರು ರಚಿಸಿರುವ ಖಂಡ ಕಾವ್ಯಗಳು. ಇತ್ತೀಚೆಗೆ 'ಇಂದಿರಾ ಇನ್ ದಿ ಕೋರ್ಟ್ ಆಫ್ ಜಸ್ಟಿಸ್' ಎಂಬ ಪದ್ಯಕೃತಿ ರಚಿಸಿದ್ದಾರೆ. ಅನೇಕ ಬಿರುದುಗಳಿಂದ ಸನ್ಮಾನಿತರಾಗಿದ್ದಾರೆ. ತುಂಬಾ ಸರಳ ಜೀವಿಗಳು. ೮-೯-೮೦ರಂದು ವಿಶ್ವಕರ್ಮ ಸಾಯುಜ್ಯ ಪಡೆದರು.

ಶಂಕರಾಚಾರ್ಯ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ : ವಡ್ಡನಹಾಳು ಬೆಲಗೂರು ಮಠಾಧೀಶ್ವರರಾದ ಸ್ವಾಮಿಗಳು ತಪೋನಿಷ್ಠರು. ಸಮಾಜ, ಸಾಹಿತ್ಯಗಳ ಪ್ರಗತಿಯಲ್ಲಿ ಆಸಕ್ತಿ ವಹಿಸಿರುವವರು.

ಸದ್ಯೋಜಾತಮೂರ್ತಿ : ಶ್ರೀ 'ನಾಭಾ' ಅವರ ಹಿರಿಯ ಮಕ್ಕಳು. ಎಂ.ಎ., ರಾಷ್ಟ್ರ ಭಾಷಾವಿಶಾರದ ಪದವೀಧರರು. ಕಾವ್ಯಗಾನ, ಜಿನಜ್ಯೋತಿ (ನಾಟಕ), ಕಾವ್ಯಾಂತರ್ಲಹರಿ (ವಿಮರ್ಶೆ), ನಂದನಗಿರಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಗ್ರಂಥಗಂಗೋತ್ರಿ ಪ್ರಕಾಶನವನ್ನು ನಿರ್ವಹಿಸುತ್ತಿದ್ದಾರೆ. ಕೆಆರ್ ಪೇಟೆಯಲ್ಲಿಯ ಕೋರ್ಟಿನಲ್ಲಿ ಉದ್ಯೋಗ.

ಸರಿತಾ ಜ್ಞಾನಾನಂದ : 'ಆಚಾರ್ಯಾಭಿವಂದನೆ'ಯ ಸಂಪಾದಕರಲ್ಲಿ ಒಬ್ಬರು. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಲೇಖಕಿಯಾಗಿ ಸ್ಥಾನಗಳಿಸಿದ್ದಾರೆ. 'ಒಂದೂರಲ್ಲಿ ಒಬ್ಬ ನಿರ್ಮಲ', 'ಪರಿಪೂರ್ಣ' ಮುಂತಾದ ಕಾದಂಬರಿಗಳನ್ನೂ, 'ಹೆಣ್ಣೇ ಹೆಚ್ಚು', 'ನಾಯಕೊಡೆ' 'ಯಕ್ಷಿಣಿ' ಮುಂತಾದ ನಾಟಕಗಳನ್ನೂ, ಮಕ್ಕಳಿಗಾಗಿ ನಾಟಕ ಹಾಡು, 'ಮೀರಾಬಾಯಿ', 'ಅಶ್ವಘೋಷ' ಇತ್ಯಾದಿ ಪುಸ್ತಕಗಳನ್ನೂ ಬರೆದಿದ್ದಾರೆ. ಬಿ.ಎ.,ಬಿಎಡ್, ರಾಭಾ ಪ್ರವೀಣ ಪದವಿಗಳನ್ನು ಪಡೆದಿರುವ ಇವರು ಪ್ರೌಢಶಾಲಾಧ್ಯಾಪಕಿಯಾಗಿದ್ದಾರೆ. ಉತ್ತಮ ಸಂಗೀತಕಾರರು. ಕೆಜಿಎಫ್‌ನಲ್ಲಿ ವಾಸಿಸುತ್ತಾರೆ.

ಸ್ವಾಮಿ, ಕೆ. ಪಿ. : ಎಂ.ಎ., ಪದವೀಧರರಾದ ಇವರು ಉತ್ಸಾಹಿಗಳು. ಸಾಹಿತ್ಯದಲ್ಲಿ ಕೃಷಿ ಮಾಡುತ್ತಿರುವವರು. 'ಸೂರ್ಯ ವಿವಾಹ'ವೆಂಬ ನಾಟಕವನ್ನು ಬರೆದು ಹಲವು ಪ್ರಯೋಗಗಳನ್ನು ಮಾಡಿರುವವರು. ಸಿದ್ಧಪ್ಪಾಜಿಯವರ ಬಗ್ಗೆ ವಿಶೇಷ ಆಸಕ್ತಿಯಿಂದ ಅನ್ವೇಷಣೆ ಸಾಗಿಸುತ್ತಿದ್ದಾರೆ. ಪ್ರಸ್ತುತ ಲೇಖನವು ನೀಲಗಾರರು ಹಾಡುವ 'ಮಂಟೇಸ್ವಾಮಿ ಕಾವ್ಯ'ದ ಆಧಾರದಿಂದ ಸಿದ್ಧಪಡಿಸಿದ್ದಾರೆ.

ಸಿದ್ಧಲಿಂಗ ಸ್ವಾಮಿಗಳವರು, ಶಿಲ್ಪ ಸಿದ್ಧಾಂತಿ ಶ್ರೀ ಶ್ರೀ ಶ್ರೀ : ಭಾರತದಲ್ಲೆಲ್ಲಾ ಶಿಲ್ಪರ್ಷಿಗಳೆಂದು ಖ್ಯಾತಿಗಳಿಸಿದ ಮಹಾಪುರುಷರು. ಜಗದ್ಗುರು ಕರಸ್ಥಲ ನಾಗಲಿಂಗ ಸ್ವಾಮಿಗಳ ಮಠದ ಪೀಠಾಧ್ಯಕ್ಷರಾಗಿದ್ದ ಮಹಾತಪೋನಿಷ್ಠರು. ಇವರ ಅಧ್ಯಕ್ಷತೆಯಲ್ಲಿ ಋಗ್ವೇದ ಸಂಹಿತೆಯ ಮುಪತ್ತಾರು

ಸಂಪುಟಗಳಾಗಿ ಪ್ರಕಟಗೊಂಡಿದೆ. ಶ್ರೀ ಜಯಚಾಮರಾಜ ಒಡೆಯರ್ ಅವರ ಗುರುಗಳಾಗಿದ್ದವರು. ಶಿಲ್ಪೋಪನಿಷತ್ತು, ಕರಸ್ಥಲನಾಗಲಿಂಗ ಸ್ವಾಮಿ ಚರಿತ್ರೆ, ಶಿಲ್ಪ ಸಾರ ಇತ್ಯಾದಿ ಕೃತಿಗಳನ್ನೂ ಸಂಪಾದಿಸಿ ಪ್ರಕಟಿಸಿದ್ದಾರೆ. ವಿಶ್ವವಿಖ್ಯಾತ 'ಮಾನಸಾರ' ಕೃತಿಗೆ ಚಿತ್ರಗಳನ್ನು ಬರೆದಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಅವರು ೧೧-೨-೧೯೩೮ರಲ್ಲಿ ಕೃಷ್ಣರಾಜ ನಗರದ ತಾಲ್ಲೂಕಿನ ದರಸಾಳು ಹೊಸ ಹಳ್ಳಿ ಗ್ರಾಮದಲ್ಲಿ ವಿಶ್ವಕರ್ಮ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಸಭಾಧ್ಯಕ್ಷ ಸ್ಥಾನದಿಂದ ನೀಡಿರುವ ಅನುಗ್ರಹ ಭಾಷಣದ ಸಾರ.

ಸುಬ್ಬಯ್ಯಾಚಾರ್ಯ, ಡಿ ಎಸ್. : ಚಾಮರಾಜ ನಗರದ ಡಿಂಕ ಗ್ರಾಮದವರು. ಅಧ್ಯಾಪಕರು. ಸಮಾಜ ಸೇವೆಗಾಗಿ ಶ್ರೀ ನಾಘಾ ಅವರಿಂದ ಪ್ರೇರಿತರಾದವರಲ್ಲಿ ಒಬ್ಬರು.


ಸುಬ್ಬರಾಯಾಚಾರ್, ಪ್ರೊ. ಉ. ಕಾ. : ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಇವರು ರಾಮಕೃಷ್ಣ ಹಾಗೂ ಅರವಿಂದ ದರ್ಶನಗಳಿಂದ ಪ್ರಭಾವಿತರಾಗಿರುವ ಮಹನೀಯರು. ಬ್ರಹ್ಮಚಾರಿಗಳು. ಮಂಗಳೂರಿನಲ್ಲಿ ನಡೆದ ಪರಿಷತ್ತಿನ ಅಧ್ಯಕ್ಷರಾಗಿದ್ದವರು. ಕಾರ್ಯಶೀಲರು. ಶಿಸ್ತಿನ ಜೀವನ ನಡೆಸುತ್ತಿರುವವರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಖ್ಯಾತಿಗಳಿಸಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ಕೃತಿಗಳ ಬಗ್ಗೆ ಅಧಿಕಾರ ಯುತವಾಗಿ ಮಾತನಾಡಬಲ್ಲ ಕೆಲವೇ ಮಂದಿಯಲ್ಲಿ ಇವರು ಅಗ್ರಮಾನ್ಯರು. ಮೈಸೂರಿನ ವಿಶ್ವಕರ್ಮ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ಅಲ್ಲಿ ವಿಧ್ಯಾರ್ಥಿ ನಿಲಯದ ನಿರ್ಮಾಣ ಕಾರ್ಯ ಸಾಗಿಸುತ್ತಿದ್ದಾರೆ. ಶ್ರೀ ನಾಘಾ ಸನ್ಮಾನ ಸಮಿತಿಯ ಅಧ್ಯಕ್ಷರು. ಮೈಸೂರಿನಲ್ಲಿದ್ದಾರೆ.

ಸುಬ್ರಹ್ಮಣ್ಯ ಕವಿ, ಸ್ವರ್ಣ : ಆಂಧ್ರ ಪ್ರದೇಶದ ವೇದಪಾಲೆಂ (ಪೊನ್ನೂರು ಮಾರ್ಗ, ಗುಂಟೂರು ಜಿಲ್ಲೆ)ನಲ್ಲಿರುವ ಈ ವಯೋವೃದ್ಧರು ಶಿಲ್ಪಶಾಸ್ತ್ರಜ್ಞರು, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ವಿದ್ವಾಂಸರು. 'ಭಾರ ತೀಯ ಮಹಾಶಿಲ್ಪವು' ಎಂಬ ಅಪೂರ್ವ ಕೃತಿಯ ಕರ್ತೃಗಳು. ಇತ್ತೀಚೆಗೆ ಆಂಧ್ರಪ್ರದೇಶದ ಸರ್ಕಾರವು ಇವರನ್ನು ಶಿಲ್ಪಶಾಸ್ತ್ರಗಳ ಅನುವಾದಕರಾಗಿ

ನೇಮಿಸಿತ್ತು. ನಿರಂಕುಶೋಪಾಖ್ಯಾನವು, ವಿಶ್ವಬ್ರಾಹ್ಮಣುಲಕು ಪ್ರಥಮ ಪೂಜಾರ್ಹತ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಸಂಬಂಧಾಚಾರ್ಯ, ಸಿದ್ಧಾಂತಿ ಈ : ಮದರಾಸಿನ ಆವಡಿಯಲ್ಲಿರುವ ಇವರು ಸಂಸ್ಕೃತ, ತಮಿಳು, ಮತ್ತು ಇಂಗ್ಲೀಷುಗಳಲ್ಲಿ ವಿದ್ವಾಂಸರು. ವೈದಿಕ ವೃತ್ತಿಯೊಂದಿಗೆ ಜ್ಯೋತಿಷ್ಯದಲ್ಲೂ ಪ್ರವೀಣರು. ಆವಡಿಯ ಟ್ಯಾಂಕ್ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದು ವಿಶ್ರಾಂತಿ ಪಡೆದಿದ್ದಾರೆ.

ಸುಂದರ, ಡಾ|| ಎ. : ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನಾ ವಿಭಾಗದಲ್ಲಿ ರೀಡರ್ ಆಗಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಲೇಖನವು ಇವರ ಇಂಗ್ಲೀಷ್ ಲೇಖನದ ಅನುವಾದ.



ಶ್ರೀ 'ಸ್ವಾಮಿ' ಸನ್ಮಾನ ಸಮಿತಿ
ಕಾರ್ಯಕಾರಿ ಮಂಡಲಿ

ಅಧ್ಯಕ್ಷರು : ಪ್ರೊ. ಉ. ಕಾ. ಸುಬ್ಬರಾಯಾಚಾರ್, ಎಂ. ಎ.,
೨೩, ೩ನೇಬ್ಲಾಕು, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೦

ಉಪಾಧ್ಯಕ್ಷರು : ಕೆ. ಸಿ. ಕಾಳಾಚಾರ್ಯ, ಬಿ.ಎಸ್ಸಿ.,
೩೭೦, ಮಹಾಲಕ್ಷ್ಮಿ ಲೇ ಔಟ್, ರಾಜಾಜಿನಗರ,
ಬೆಂಗಳೂರು ೫೬೦ ೦೧೦.

ಖಚಾಂಚಿ : ಕೆ. ವಾಸುದೇವಾಚಾರ್ಯ,
ಸರಾಫ್, ಗಾಂಧೀಬಜಾರ್, ಶಿವಮೊಗ್ಗ ೫೭೭ ೨೦೧

ಕಾರ್ಯದರ್ಶಿ : ಜಿ. ಜ್ಞಾನಾನಂದ, ಎಂ.ಎ., ಬಿ.ಎಸ್ಸಿ., 'ಪ್ರವೀಣ್'
೨ - ೧೬೩, ಬಿಇಎಂಎಲ್ ನಗರ, ಕೆಜಿಎಫ್ ೫೬೩ ೧೧೫

ಪ್ರತಿನಿಧಿಗಳು

ಬೆಂಗಳೂರು ನಗರ —

ಎಂ. ನೀಲಕಂಠನ್, ಬಿ.ಎ.,
೨೪೪, ೯ನೇ ಮೈನ್, ೩ನೇ ಬ್ಲಾಕ್, ಜಯನಗರ

ಎಲ್. ಶಿವಲಿಂಗಯ್ಯ, ಬಿ.ಎ.,
೯ ಎ, ೧೨ನೇ ಕ್ರಾಸು, ಜಯಮಹಲ್ ಬಡಾವಣೆ

ಎ.ಎಸ್. ಸವಣೂರ್, ಖಾದಿಗ್ರಾಮೋದ್ಯೋಗ, ಡಿವಿಜಿ ರಸ್ತೆ, ಬಸವನಗುಡಿ

ರಾಮಭದ್ರಾಚಾರ್,
೨೨೩/೧೨, ೧೨ನೇ ಕ್ರಾಸು, ೩ನೇ ಮೈನ್, ವಿಲ್ಸನ್ ಗಾರ್ಡನ್ಸ್

ಜಿ. ಚಂದ್ರಶೇಖರಯ್ಯ, ಬಿ.ಎಸ್ಸಿ.,
ಶ೮. ೭ನೇ ಕ್ರಾಸು, ನೆಹರು ರಸ್ತೆ, ಗುಡ್ಡದಹಳ್ಳಿ ಹತ್ತಿರ.
ಎ. ಭಾಸ್ಕರಾಚಾರ್ಯ, ೪ಬಿ ರಸ್ತೆ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ.
ಕೆ. ವಿ. ನಾರಾಯಣಾಚಾರ್ಯ, ಡಿ೩೩,
ಪುಟ್ಟಾಚಾರ್ಯ ಬಿಲ್ಡಿಂಗ್, ರಾಮಮೂರ್ತಿ ನಗರ.
ಜಿ. ಸಾಂಬಶಿವಾಚಾರ್ಯ, ಬಿ.ಎ., ಬಿ.ಎಲ್.,
೨೬, ಸುಬ್ರಮಣ್ಯ ಲೇನ್, ಅರಳೇಪೇಟೆ.
ಎ. ಕುಮಾರಸ್ವಾಮಿ,
೯೫೫-ಎ, ೨ನೇ ಮೈನ್, ೪ನೇ ಬ್ಲಾಕು, ರಾಜಾಜಿನಗರ.
ಜಿ. ಶ್ರೀಕಂಠಾಚಾರ್ಯ,
೧೧೯ ಜುಮ್ಮಾಮಸೀದಿ ರಸ್ತೆ, ಅವಿನ್ಯೂರಸ್ತೆ ಕ್ರಾಸು.
ಎನ್. ಎಸ್. ಶ್ರೀನಿವಾಸಾಚಾರ್ಯ,
ಎಂ-೧೦೨, ಸೆಕ್ಟಾರ್ ೪, ಹೆಚ್‌ಎಂಟಿ, ಜಾಲಹಳ್ಳಿ.
ಕೆಂ. ಶ್ರೀ. ನಂಜಪ್ಪ,
ಡಬ್ಲ್ಯೂ-೮೧೯, ಹೆಚ್‌ಎಂಟಿ ಕಾಲೋನಿ, ಜಾಲಹಳ್ಳಿ.
ಕೆ. ವಿ. ಲಿಂಗಾಚಾರ್ಯ, ಬೇಲೂರು ಲೇನ್, ಮಾರತಹಳ್ಳಿ.
ಸುಬ್ರಹ್ಮಣ್ಯಾಚಾರ್ಯ, ೨೮, ಲಕ್ಷ್ಮೀ ನಿಲಯ, ಬಯ್ಯಪ್ಪನಹಳ್ಳಿ ಬಡಾವಣೆ.
ಎನ್. ವಿಶ್ವರೂಪಾಚಾರ್ಯ, ೮೬, ೬ನೇ ಬ್ಲಾಕು, ರಾಜಾಜಿ ನಗರ.

ಜಿಲ್ಲೆಗಳಿಂದ —

ಎಂ. ಮೋನೇಶ್‌ರಾವ್, ಎಕ್ಸಿಕ್ಯುಟೀವ್ ಎಂಜಿನಿಯರ್, ನರಗುಂದ
ಪ್ರೊ. ಆರ್. ಎಲ್. ಬಡಿಗೇರ್, ಎಂ.ಎ.,
ಶರಣಬಸವೇಶ್ವರಾ ಕಾಮರ್ಸ್ ಕಾಲೇಜು, ಗುಲ್ಬರ್ಗ.
ಗುಂಡಪ್ಪ ಜಿ. ಮರೇಗುದ್ದಿ, ಅಧ್ಯಕ್ಷರು : ವಿಶ್ವಕರ್ಮ ಸಮಾಜ, ಬಿಜಾಪುರ-೧.
ಪಿ. ನಾಗಾಚಾರ್ಯ, ಎಂ.ಎ.,
ಡಿವಿಷನಲ್ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಬೆಳಗಾವಿ-೧,

ಬಿ. ಎ. ಆಚಾರ್ಯ, ಎಂಐಟಿ, ಮಣಿಪಾಲ (ದ. ಕ.).
ಡಿ. ಎಂ. ಕಣಗಿನಹಾಳ, ಸರಾಫ್, ಹುಬ್ಬಳ್ಳಿ ೫೮೦ ೦೨೦.
ಜಿ. ಬಿ. ಮನ್ನಾಚಾರ್ಯ, ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ-೩.
ಮಲ್ಲಿಕಾರ್ಜುನಾಚಾರ್ಯ ಮತ್ತು ಕೆ. ರಾಜ
ಳ೯೧, ಗುರುಬ್ರಹ್ಮ ನಿವಾಸ, ಹುವ್ವಿನ ಬೀದಿ, ಬಳ್ಳಾರಿ ೫೮೩ ೧೦೧.
ಎ. ಎನ್. ಸೂರ್ಯನಾರಾಯಣಾಚಾರ್ಯ,
ಸರಾಫ್, ಜಿಎಸ್ ೩೯/೬೪, ಸಂತೆ ಬಾಗಿಲ ಬಳಿ, ಚಿತ್ರದುರ್ಗ.
ಸಿ. ಜಕ್ಕಣಾಚಾರ್ಯ, ಚೀರನಹಳ್ಳಿ, ತರಿಕೆರೆ ತಾಲ್ಲೂಕು
ಡಾ. ಕೆ. ಪಿ. ವೀರಪ್ಪಾಚಾರ್ಯ,
ವಿನಾಯಕ ಕ್ಲಿನಿಕ್, ವಲ್ಲಭಭಾಯಿ ರಸ್ತೆ, ಹಾಸನ.
ಶಿಲ್ಪಕಲಾರತ್ನ ನಾ. ಸೂ. ವೆಂಕಟಾಚಾರ್ಯ,
ಕಶ್ಯಪ ಶಿಲ್ಪಕಲಾಶಾಲ, ಕೆ ಆರ್ ಪುರಂ, ಹಾಸನ.
ವಿದ್ವಾನ್ ತಾಡಿಚರ್ಲ ವೀರರಾಘವಶರ್ಮ, ಇಂಗಳದ ಹಾಳು.
ಹೆಚ್. ಎಂ. ವರದಾಚಾರ್ಯ,
೧೦೧೫, ಕಾಳಿಕಾ ದೇವಾಲಯರಸ್ತೆ, ಮಂಡಿ ಮೊಹಲ್ಲಾ, ಮೈಸೂರು.
ಎಸ್ ಕೆ. ನರಸಿಂಹಾಚಾರ್ಯ, ಹೊಸಹಳ್ಳಿ ಬಡಾವಣೆ, ಮಂಡ್ಯ.
ಪ್ರಭಾಕರ್ ಬಿ. ಸೋನಾರ್, ಕಾರ್ಯದರ್ಶಿ, ವಿಶ್ವಕರ್ಮ ವಿದ್ಯಾವರ್ಧಕ ಸಂಘ,
೨-೧೬೩, ಬಿಇಎಂಎಲ್ ನಗರ, ಕೆಜಿಎಫ್-೫೬೩ ೧೧೫.

ನೆರನಾಡುಗಳಿಂದ —

ಮಹಾರಾಷ್ಟ್ರ :

ನಾಗೇಶ್ ಎಸ್. ಶಿಲ್ಪಿ, ಆನಂದ ಶಿಲ್ಪ ಕಲಾನಿಕೇತನ,
೧/ಎ, ಪ್ರಿನ್ಸ್ ಆಫ್ ವೇಲ್ಸ್ ಡ್ರೈವ್, ಪುಣೆ-೪೧೧ ೦೦೧.
ಡಾ. ಜನಾರ್ದನ ಶಾಸ್ತ್ರಿ ನಾ. ಪಂಡಿತ್,
೧೨೫೮, ಉತ್ತರ ಕಸಬ, ಸೋಲಾಪುರ-೪೧೩ ೦೦೧.

ಆಂಧ್ರ ಪ್ರದೇಶ :

ಪ್ರೊ. ವೈ. ಮಾಧವಾಚಾರ್ಯುಲು, ಎಂ.ಎ.,
ಸಭಾಪತಿ, ವಿಶ್ವಬ್ರಾಹ್ಮಣ ಧರ್ಮ ಪೀಠಂ, ನೂಜಿವೀಡು

ಚಿರ್ರಾವೂರು ನಾಗಭೂಷಣಾಚಾರ್ಯುಲು,
ಸಂಪಾದಕರು : ವಿಶ್ವಶಿಲ್ಪಿ & ಪಂಚಾಯತಿರಾಜ್ಯಂ, ನರಸರಾವುಪೇಟ.

ತಮಿಳು ನಾಡು :

ಈ. ಸಂಬಂದಾಚಾರ್ಯ, ಅಸ್ಸೆಲ್ ಹೌಸ್,
೪೮ ವೈನ್ ರಸ್ತೆ, ಕೋವಿಲ್ ಪತಗೈ, ಮದರಾಸು-೬೦೦ ೦೬೨.

ಎಸ್. ವೀರಾಸ್ವಾಮಿ ಪತ್ತಾರ್, ಎಂ.ಎ., ಎಲ್.ಟಿ.,
೧, ಕಾಲೇಜು ರಸ್ತೆ, ತಿರುಚಿರಾಪಳ್ಳಿ-೬೨೦ ೦೦೨.

ಕೇರಳ :

ಎಂ. ವಿ. ದಾಮೋದರನ್,
ಸಂಪಾದಕ : ನಿರ್ಮಿತಿ, ಪಳಂಜಿವಿಳಾ, ತಾಲವೂರು-೬೯೧ ೫೧೪.

ದಾನಿಗಳು

ಪಾಲ್ಕಿ ಬಾಬುರಾಯಾಚಾರ್ಯ, ಕೆನರ ಜ್ಯುಯಲರ್ಸ್, ಮಂಗಳೂರು.	೫೦೧
ಬಿ. ಎನ್. ಮಲ್ಲಾಚಾರ್ಯ, ಆಚಾರ್ಯ ಕಾಟೇಜ್ ಇಂಡಸ್ಟ್ರೀಸ್, ಬೆಳ್ಗಾವೆ.	೨೦೧
ನಾಗೇಶ್ ಎಸ್. ಶಿಲ್ಪಿ, ಆನಂದ ಶಿಲ್ಪಕಲಾನಿಕೇತನ, ಪುಣೆ-೧	೧೨೫
ಹೆಚ್. ಡಿ. ಸನತ್ಕುಮಾರ ಶಾಸ್ತ್ರಿ, ಎಂ.ಎಸ್ಸಿ., ವಿಲ್ಸನ್‌ಗಾರ್ಡನ್ಸ್, ಬೆಂಗಳೂರು-೨೭	೧೦೩
ಸಿ. ಆರ್. ಕೃಷ್ಣಾಚಾರ್ಯ, ಎಂ.ಜಿ. ರಸ್ತೆ, ರಾಮನಗರಂ	೧೦೧
ಬಿ. ಚೌಡಾಚಾರ್ಯ, ಜ್ಯುಯಲರ್ಸ್, ಗಾಂಧೀಬಜಾರ್, ಶಿವಮೊಗ್ಗ	೧೦೧
ಸಿ. ಜಕ್ಕಣಾಚಾರ್ಯ, ಚೀರನಹಳ್ಳಿ	೧೦೧
ಜಿ. ಜ್ಞಾನಾನಂದ ಮತ್ತು ಸರಿತಾ ಜ್ಞಾನಾನಂದ, ಕೆಜಿಎಫ್	೧೦೧
ನಾಗೇಶ್ ರಾಯ್ಕರ್, ಜ್ಯುಯಲರ್ಸ್, ಜಯನಗರ, ಶಿವಮೊಗ್ಗ	೧೦೧
ಎಂ. ನಿಲಕಂಠನ್, ೩ನೇ ಬ್ಲಾಕ್, ಜಯನಗರ, ಬೆಂಗಳೂರ-೧೧	೧೦೧
ಹೆಚ್. ಎ. ಭವೇಂದ್ರಕುಮಾರ್, ವಿಜಯಾ ಟ್ರೇಡರ್ಸ್, ಶಿವಮೊಗ್ಗ	೧೦೧
ಜಿ. ಬಿ. ಮನ್ವಾಚಾರ್, ಡೈರೆಕ್ಟರ್, ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ	೧೦೧
ಬಿ. ಪಿ. ಮಹಾಬಲೇಶಾಚಾರ್ಯ, ಜಮೀನ್ದಾರರು, ಬುಕ್ಕಾಂಬುಧಿ	೧೦೧
ಎಂ. ಮೋನೇಶರಾವ್, ಬಿ.ಇ., ಎಂ.ಐ.ಇ., ಎಕ್ಸಿಕ್ಯುಟೀವ್ ಎಂಜಿನಿಯರ್, ನರಗುಂದ	೧೦೧
ಬಿ. ಎ. ರಾಮಾಚಾರ್ಯ, ಅಧ್ಯಕ್ಷರು, ವಿಶ್ವಕರ್ಮ ಸಮಾಜ, ಚಳ್ಳಕೆರೆ	೧೦೧

ರಾಮಲಿಂಗಾಚಾರ್ಯ,
ಜ್ಯುಯಲರ್ಸ್, ೧೬೫/೧ ಕಿಲಾರಿ ರಸ್ತೆ, ಬೆಂಗಳೂರು. ೧೦೧
ಕೆ. ವಾಸುದೇವಾಚಾರ್ಯ,
ಜ್ಯುಯಲರ್ಸ್, ಗಾಂಧೀಬಜಾರ್, ಶಿವಮೊಗ್ಗ ೧೦೧
ಪಿ. ಸತ್ಯನಾರಾಯಣಾಚಾರ್, ರೂಪವಾಣಿ ರಸ್ತೆ, ಚಿತ್ರದುರ್ಗ ೧೦೧
ಬಿ. ಪಿ. ಸುರೇಂದ್ರ & ಬ್ರದರ್ಸ್, ಬಳೆಪೇಟೆ, ಬೆಂಗಳೂರು-೫೩ ೧೦೧
ಶ್ರೀಶೈಲಾಚಾರ್ಯ ಮತ್ತು ಹನುಮಂತಾಚಾರ್ಯ,
ಸತ್ಯನಾರಾಯಣ ಜ್ಯುಯಲರ್ಸ್, ಹಿರಿಯೂರು ೭೫
ಬೆಂಗಳೂರು ವಿಶ್ವಕರ್ಮ ಮಹಾಸಭಾ (ಶ್ರೀಗಣನಾಥರ್ ಆಲಯಂ)
ತೊಪ್ಪಮೊದಲಿಯಾರ್ ಬೀದಿ, ಬೆಂಗಳೂರು-೫೬೦ ೦೦೧ ೬೯
ಶಿವಶಂಕರಪ್ಪ ಭೀಮಪ್ಪ ದೇವಪುರ,
ಅಕ್ಕಸಾಲಿಗರ ಓಣಿ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ ೫೩
ಎಸ್. ಎ. ಪಂಜಿಕಲ್, ಶ್ರೀವಾಣಿ ಜ್ಯುಯಲರ್ಸ್, ಮಂಗಳೂರು-೧ ೫೨
ಶ್ರೀಮತಿ ಇಂದಿರಾಬಾಯಿ ಮಹದೇವಪ್ಪ ಗುಳೇದಗುಡ್ಡ, ಹುಬ್ಬಳ್ಳಿ-೨೦ ೫೧
ಶ್ರೀಮತಿ ಈಶ್ವರಮ್ಮ ಶಂಕರ್, ಜ್ಞಾನಾನಂದ ಆಶ್ರಮ, ನಂದಿ ೫೧
ಎನ್. ಕೃಷ್ಣಾಚಾರ್,
ಕರುಣಾ ಆರ್ಟ್ಸ್, ವಿನಾಯಕ ನಗರ, ಬೆಂಗಳೂರು-೨೭ ೫೧
ಬಿ. ಕೊಂಡಾಚಾರ್ಯ,
ಶ್ರೀಗಾಯತ್ರಿ ಏಜನ್ಸಿಸ್, ಬೆಂಗಳೂರು ರಸ್ತೆ, ಬಳ್ಳಾರಿ-೧ ೫೧
ಬಿ. ಎಸ್. ಗುಳೇದಗುಡ್ಡ, ವಾಳ್ವೇಕರ್ ಗಲ್ಲಿ, ಹುಬ್ಬಳ್ಳಿ ೨೦ ೫೧
ತಾಡಿಚರ್ಲ ವೀರರಾಘವಶರ್ಮ, ಇಂಗಳದಹಾಳು, (ಆದೋಣಿ) ೫೧
ದತ್ತಾತ್ರೇಯ ಮ. ಕಣಗಿನಹಾಳ, ಸರಾಫಕಟ್ಟಿ, ಹುಬ್ಬಳ್ಳಿ-೨೦ ೫೧
ಪಿ. ಬಿ. ಪುಟಾಚಾರ್ಯ, ಅಧ್ಯಕ್ಷರು : ವಿಶ್ವಕರ್ಮ ಸಮಾಜ, ಚಿತ್ರದುರ್ಗ ೫೧
ಕೆ. ಮಲ್ಲಿಕಾರ್ಜುನಾಚಾರ್ಯ, ಹುಮ್ಮಿನ ಬೀದಿ, ಬಳ್ಳಾರಿ ೫೧
ಮಹಾನಂದಾಚಾರ್ಯ,
ಕಾರ್ಯದರ್ಶಿ, ವಿಶ್ವಕರ್ಮ ಸಮಾಜ, ಹಿರಿಯೂರು ೫೧
ಕೆ. ರಾಜ, ೯೯೧, ಹುಮ್ಮಿನ ಬೀದಿ, ಬಳ್ಳಾರಿ ೫೧

ರಾಮಕೃಷ್ಣ ಕು. ಪತ್ತಾರ, ಗಾಜಿಪೇಟೆ, ಹಳೇ ಹುಬ್ಬಳ್ಳಿ	೫೧
ಸಿ. ಹೆಚ್. ರಾಮಾಚಾರ್ ಮತ್ತು ಬ್ರದರ್ಸ್, ಬಸ್‌ಸ್ಟ್ಯಾಂಡ್, ಚಳ್ಳಕೆರೆ	೫೧
ಎಸ್. ರಾಮಕೃಷ್ಣಾಚಾರ್ಯ, ಬುರುಗನ ಹಟ್ಟಿ ರಸ್ತೆ, ಚಿತ್ರದುರ್ಗ	೫೧
ಕೆ. ರಂಗಯ್ಯ, ಲಕ್ಷ್ಮೀನಗರ, ಬಿಕ್ಯಾಂಪ್ (ಪೂರ್ವ), ಕರ್ನೂಲು	೫೧
ಕೆ. ಲಿಂಗಾಚಾರ್ಯ, ಅಶೋಕ ರಸ್ತೆ, ಹಿರಿಯೂರು	೫೧
ವಿಶ್ವಬ್ರಾಹ್ಮಣ ಮಹಿಳಾ ಮಂಡಳ, ಹುಬ್ಬಳ್ಳಿ ೫೮೦೦೨೦	೫೧
ಶಿವರಾಯಪ್ಪ ಗುರಪ್ಪ ಲಕ್ಕುಂಡಿ, ಸರಾಫ್, ಹುಬ್ಬಳ್ಳಿ-೨೦	೫೧
ಎ. ಶಂಕರಾಚಾರ್ಯ, ಹಳೇಪೋಸ್ಟಾಫೀಸ್ ರಸ್ತೆ, ಚಿತ್ರದುರ್ಗ	೫೧
ಎಸ್. ಸಿದ್ಧರಾಮಾಚಾರ್ಯ, ಜಯಲಕ್ಷ್ಮೀ ಜ್ಯುಯಲರಿ ಹಾಲ್, ಚಳ್ಳಕೆರೆ	೫೧
ಪಿ. ಸುಬ್ರಮಣ್ಯ ಆಚಾರ್ಯ, ೨೬೧ ನಾರಾಯಪಿಳ್ಳೆ ರಸ್ತೆ, ಬೆಂಗಳೂರು	೫೧
ಎ. ಎನ್. ಸೂರ್ಯನಾರಾಯಣಾಚಾರ್ಯ, ಸಂತೆ ಬಾಗಿಲಬಳಿ, ಚಿತ್ರದುರ್ಗ	೫೧
ಕಾಳಪ್ಪ ಕೋರವಾರ, ಸ್ಟೇಷನ್ ಏರಿಯಾ, ಶಹಬಾದ್, ೫೮೫ ೨೨೮	೫೦
ನಾರಾಯಣರಾವ್ ಹೆರಕಲ್, ಸರಾಫ್, ಬದಾಮಿ ೫೮೭ ೨೦೧	೫೦
ಸಿ. ಶ್ರೀಕಂಠಾಚಾರ್ಯ, ಅಕೌಂಟ್ಸ್ ಸೂಪರಿಂಟೆಂಡೆಂಟ್, ಪಿ.ಡಬ್ಲ್ಯುಡಿ. ಬೆಂಗಳೂರು	೫೦
ಶಿಲ್ಪಕಲಾರತ್ನ ಎನ್. ಎಸ್. ವೆಂಕಟಾಚಾರ್ಯ, ಕಶ್ಯಪ ಶಿಲ್ಪಶಾಲಾ (ರಿ), ಹಾಸನ	೪೦
ವಿ. ಗಂಗಾಧರಾಚಾರ್ಯ, ಹಳೇ ಸಂತೆ ಮೈದಾನ, ಚಿತ್ರದುರ್ಗ	೪೦
ಆರ್. ತಿಪ್ಪೇಸ್ವಾಮಿ, ಶಕ್ತಿ ಜ್ಯೂಯಲರಿ ಹಾಲ್, ಎಸ್. ಬಿ. ರಸ್ತೆ, ಚಳ್ಳಕೆರೆ	೩೫
ಎಸ್. ಕೆ. ಶ್ರೀರಾಮಾಚಾರ್ ಮತ್ತು ಬಿ. ಆರ್. ಕೃಷ್ಣಾಚಾರ್, ಲಕ್ಷ್ಮೀಮಣಿ ಜ್ಯೂಯಲರಿ ಮಾರ್ಟ್, ಚಳ್ಳಕೆರೆ	೩೫

ಎ. ಎನ್. ಯಲ್ಲಪ್ಪಾಚಾರ್ ಮತ್ತು ಮಕ್ಕಳು,
ಕಾಳಿಕಾಂಬ ಜ್ಯುಯಲರಿ ಮಾರ್ಟ್, ನೆಹರು ಸರ್ಕಲ್, ಚಳ್ಳಕೆರೆ ೩೧
ಟಿ. ಶಿವಣ್ಣಾಚಾರ್ಯ, ಬಂಬೂಬಜಾರ್, ಹಿರಿಯೂರು ೩೧
ಹೆಚ್. ಶಿವಾಚಾರ್, ಜ್ಯುಯಲರ್ಸ್, ಪಾವಗಡಕ್ರಾಸ್, ಚಳ್ಳಕೆರೆ ೩೧
ಜಿ. ಅಪ್ಪಾಜಾಚಾರ್ಯ,
೬೨೫, ೫ನೇ ಕ್ರಾಸ್, ೨ನೇ ಬ್ಲಾಕ್, ಬನಶಂಕರಿ, ಬೆಂಗಳೂರು ೩೦
ಡಾ॥ ವಿ. ಜಗನ್ನಾಥಾಚಾರ್ಯ, ಬಿ.ಎಸ್ಸಿ, ಎಂ.ಬಿ.ಬಿ.ಎಸ್.
ಕೆ. ಆರ್. ಆಸ್ಪತ್ರೆ, ಮೈಸೂರು ೩೦
ಡಿ. ಬಿ. ಪತ್ತಾರ, ಬಿ.ಎಸ್ಸಿ.ಬಿ.ಎಡ್.,
ಮುಖ್ಯೋಪಾಧ್ಯಾಯರು, ಸಂಕ್ರಟ್ಟಿ ವಿದ್ಯಾಲಯ, ಸಂಕ್ರಟ್ಟಿ ೩೦

ಸದಸ್ಯರು

ಕೋಲಾರ ಜಿಲ್ಲೆ

ಕೋಲಾರ (೫೬೩ ೦೦೧)

ಎನ್. ನಾರಾಯಣಾಚಾರ್ಯ (ಕಾಂಗ್ರೆಸ್), ೧೫೭೧ ಕಾಳಿಕಾ ದೇವಾಲಯ ರಸ್ತೆ

ಕೋಲಾರ ಚಿನ್ನದ ಗಣಿ ಪ್ರದೇಶ-ರಾಬರ್ಟ್‌ಸನ್ ಪೇಟೆ (೫೬೩ ೧೨೨)

ಎಂ. ಆನಂದಾಚಾರ್ಯ, ಅಧ್ಯಕ್ಷರು, ಸ್ವರ್ಣಕಾರರ ಸಂಘ, ಒಂದನೇ ಕ್ರಾಸು

ಡಾ. ಹೆಚ್. ಬಿ. ದೊರೆಸ್ವಾಮಿ, ಎಂಬಿಬಿಎಸ್., ಎಂ.ಡಿ.,
ಡಿಸ್ಟ್ರಿಕ್ಟ್ ಸರ್ಜನ್, ಸಿವಿಲ್ ಆಸ್ಪತ್ರೆ

ವಿ. ಶ್ರೀನಿವಾಸಾಚಾರ್ಯ, ಮುನ್ಸಿಫ್ ಕೋರ್ಟ್

ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (೫೬೩ ೧೧೫)

ಅಂಕುಶ್ ಕೆ. ಪೋದ್ದಾರ್ (ಮೆಷಿನ್ ಷಾಪ್)

ಬಿ. ಈಶ್ವರಾಚಾರ್ಯ (ಪ್ಲೇಟ್ ಷಾಪ್)

ಬಿ. ಉಮಾಪತಿ, ಡಿಎಂಇ., (ಮೆಷಿನ್ ಷಾಪ್)

ಕೇಶವಾಚಾರ್ಯ (ಮೆಷಿನ್ ಷಾಪ್)

ಗುರುನಾಥ ಬಿ. ಪತ್ತಾರ್ (ಟೂಲ್ ರೂಂ)

ಹೆಚ್. ತುಕಾರಾಂ (ಮೆಷಿನ್ ಷಾಪ್)

ಎಸ್. ನರಸಿಂಹಾಚಾರ್ಯ (ಮೆಷಿನ್ ಷಾಪ್)

ಆರ್. ಬಿ. ಪತ್ತಾರ (ಮೆಷಿನ್ ಷಾಪ್)

ಪರಪ್ಪ ಪತ್ತಾರ (ಸಿ ಟಿ ಅಸೆಂಬ್ಲಿ)

ಪ್ರಭಾಕರ ಬಿ. ಪತ್ತಾರ (ಗೇರ್ ಷಾಪ್)

ಪ್ರಭಾಕರ ಬಿ. ಸೋನಾರ್, ಡಿಎಂಇ, (ಫಾಬ್ರಿಗೇಷನ್ ಪ್ರೋಗ್ರೆಸ್)
ಭಾಸ್ಕರ್ ಎಸ್. ಬಡಿಗೇರ್, ಎಲ್ಎಇ.,
ಎಂಜಿನಿಯರ್ (ಟೂಲ್ ಪ್ಲಾನಿಂಗ್)
ಎಲ್. ರಾಜಶೇಖರ್ (ಟೂಲ್ ರೂಂ)
ಎಸ್. ರಂಗಾಚಾರ್ಯ (ಪ್ಲೇಟ್ ಷಾಪ್)
ವಸಂತ ಜಿ. ಮರೆಗುದ್ದಿ (ಪ್ಲೇಟ್ ಷಾಪ್)
ವೈ. ಎಸ್. ಶೇಖರ್, (ಪ್ಲೇಟ್ ಷಾಪ್)
ಶೇಖರ್ ಐ. ಬಡಿಗರ್ (ಪೇಟ್ ಷಾಪ್)
ಬಿ. ಎನ್. ಸೋಮಲಿಂಗಾಚಾರ್ಯ (ಪ್ಲೇಟ್ ಷಾಪ್)

ಚಿಕ್ಕಬಳ್ಳಾಪುರ (೫೬೨ ೧೦೧)
ಜಿ. ವೀರೇಂದ್ರ, ಶಂಕರ್ ಸ್ಟೂಡಿಯೋ, ಬಿ.ಬಿ. ರಸ್ತೆ

ಚಿಂತಾಮಣಿ (೫೬೩ ೧೨೫)
ಆರ್. ಎಸ್. ವೆಂಕಟರಮಣಾಚಾರ್ಯ, ವೀರಭೋಜ ಫಿಲಮ್ಸ್

ಗುಲ್ಬರ್ಗ ಜಿಲ್ಲೆ

ಗುಲ್ಬರ್ಗ (೫೮೫ ೧೦೧)
ಅಣವೀರಪ್ಪ ಘಟ್ಟೇಕಾರ್, ಸರಾಫ್, ಸರಾಫ್ ಬಜಾರು
ಶ್ರೀಕಾಳಿಕಾಂಬ ದೇವಸ್ಥಾನ ಸಮಿತಿ, ಸಂಗತ್ರಾಸವಾಡಿ
ಪ್ರೊ ಆರ್. ಎಲ್. ಬಡಿಗರ್, ಶರಣ ಬಸವೇಶ್ವರ ಕಾಮರ್ಸ್ ಕಾಲೇಜು
ಮಾರುತಿರಾವ್ ಚೌಧುರಿ, ಷೇಕ್ ರೋಜಾ
ರುದ್ರಪ್ಪ ಕಂಚುಗಾರ್, ಐ.ಟಿ.ಐ.

ಚಿಕ್ಕಮಂಗಳೂರು ಜಿಲ್ಲೆ

ಬಿ. ಚಂದ್ರಾಚಾರ್ಯ, ವಿಜಯನಗರ ಬಡಾವಣೆ, **ಚಿಕ್ಕಮಗಳೂರು**
ಕೆ. ಎಲ್. ಬಾಲಗೋಪಾಲ,
ರಾಜ್ರೇಶ್ವರಿ ಆಟೋ ಎಂಜನೀರಿಂಗ್ ವರ್ಕ್ಸ್, ಚಿಕ್ಕಮಗಳೂರು

ಶಂಕರಾಚಾರ್ಯ, ಬಿಳೀ ಕಲ್ಲಿನಮನೆ ೫೯, ವಿಜಯನಗರ ಬಡಾವಣೆ ,,
ಬಿ. ಸಿಂಗಾಚಾರ್ಯ,
ಗಾಯತ್ರೀ ಇಂಜನಿಯರಿಂಗ್ ವರ್ಕ್ಸ್, ಜೈಲ್ ರಸ್ತೆ, ಚಿಕ್ಕಮಗಳೂರು
ಬಿ. ಪಿ. ಸರ್ವೇಶಪ್ರಭು, ಜಮೀನ್ದಾರರು, **ಬುಕ್ಕಾಂಬುಧಿ ೫೭೭ ೧೪೫**
ಬಿ. ವಿ. ಫಾಲಾಕ್ಷಯ್ಯ (ಆರ್‌ಎಂಎಸ್), **ಬೀರೂರು** ೫೭೭ ೧೧೬

ಚಿತ್ರದುರ್ಗ ಜಿಲ್ಲೆ

ಚಿತ್ರದುರ್ಗ (೫೭೭ ೧೦೧)
ಸಿ. ಪಿ. ನೀಲಕಂಠಾಚಾರ್ಯ & ಸನ್ಸ್, ಸ್ವರ್ಣಶಿಲ್ಪಿಗಳು, ಚಿಕ್ಕಪೇಟೆ
ಮಲ್ಲಿಕಾರ್ಜುನಾಚಾರ್ಯ, ಸ್ವರ್ಣಶಿಲ್ಪ, ಚಿಕ್ಕಪೇಟೆ
ಸಿ. ಪಿ. ರಾಮಾಚಾರ್ಯ, ಸ್ವರ್ಣಶಿಲ್ಪಿಗಳು, ಚಿಕ್ಕಪೇಟೆ
ಚಳ್ಳಕೆರೆ (೫೭೭ ೫೨೨)
ಎನ್. ಅಶ್ವತ್ಥನಾರಾಯಣಾಚಾರ್ಯ, ರಾಜಪ್ಪಶೆಟ್ಟಿ ಕಾಂಪೌಂಡ್
ಬಿ. ಎನ್. ಗೋವಿಂದಾಚಾರ್ಯ, ವೆಂಕಟೇಶ್ವರಾ ಜ್ಯುಯಲರಿ ಮಾರ್ಟ್
ಕೆ. ಚನ್ನಕೇಶವಾಚಾರ್ಯ, ಬಸ್‌ಸ್ಟಾಂಡ್
ಸಿ. ಪಿ. ತಿಪ್ಪೇಸ್ವಾಮಿ, ಬಿಎಸ್ಸಿ., ಕಾರ್ಯದರ್ಶಿ ವಿಶ್ವಕರ್ಮ ಸಮಾಜ
ಸಿ. ಎ. ರಂಗನಾಥ, ಪಾವಗಡ ರಸ್ತೆ
ಎ. ಟಿ. ವೀರಭದ್ರಾಚಾರ್ಯ, ಸ್ವರ್ಣ ಶಿಲ್ಪಿಗಳು, ಪ್ರೈಮರಿಶಾಲಾ ರಸ್ತೆ
ಸಿ. ಆರ್. ಶಂಕರಾಚಾರ್ಯ, ತಿಪ್ಪೇಸ್ವಾಮಿ ಜ್ಯೂಯಲರಿ ಮಾರ್ಟ್,
ಹೊಸದುರ್ಗ (೫೭೭ ೫೨೭)
ಪಿ. ಈಶ್ವರಾಚಾರ್ಯ, ಎಂ.ಎ.,ಬಿಎಡ್.,
ಉಪನ್ಯಾಸಕರು, ವಿನಾಯಕ ಎಕ್ಸ್‌ಟೆನ್ಷನ್
ಹಿರಿಯೂರು (೫೭೨ ೧೪೩)
ಟಿ. ಪುಟ್ಟಾಚಾರ್ಯ, ಬಂಬೂ ಬಜಾರ್
ವೆಂಕಟರಮಣಾಚಾರ್ಯ, ಸ್ವರ್ಣ ಶಿಲ್ಪಿ, ಅಶೋಕ ರಸ್ತೆ

ತುಮಕೂರು ಜಿಲ್ಲೆ

ಎ. ಆರ್. ಕೆ. ಆಚಾರ್ಯ, ರಾಮಕೃಷ್ಣ ಆಯಿಲ್ ಮಿಲ್ಸ್, **ತುಮಕೂರು**
ಸ್ವಾತಿ ರಾಮಕೃಷ್ಣಾಚಾರ್ಯ, ನಗರ ಸಭಾ ವಸತಿ ಗೃಹ, **ಕುಣಿಗಲು**
ರಾಮಕೃಷ್ಣಾಚಾರ್ಯ, ಮೈನ್ ರೋಡ್, ಸಿರಾ

ದಕ್ಷಿಣ ಕನ್ನಡ ಜಿಲ್ಲೆ

ಮಂಗಳೂರು

ಎಂ. ಗೋಪಾಲ ಆಚಾರ್ಯ, ಮಿಷನ್ ಸ್ಕೂಲ್ ಕ್ರಾಸ್, ರಥ ಬೀದಿ
ವಿ. ಸೋಮನಾಥ ಆಚಾರ್ಯ, ಭವಾನಿ ಫರ್ನಿಚರ್ಸ್, ರಥ ಬೀದಿ
ಎಚ್. ನಾರಾಯಣರಾವ್, 'ಅನುಗ್ರಹ' ಬಪ್ಪಾಲ್, ನಂದಿಗುಡ್ಡ
ಬೈಕಾಡಿ ಜನಾರ್ಧನ ಆಚಾರ್ಯ, ಎಂ.ಎ., ಬಿ ಕಾಂ., ರತ್ನ, ಕೆನರ ಹೈಸ್ಕೂಲ್
ಕೆ. ಪ್ರಭಾಕರ ಆಚಾರ್ಯ, ಬಿಎ., ಎಲ್ಎಲ್ಬಿ., ಡಿಸ್ಟ್ರಿಕ್ಟ್ ಕೋರ್ಟ್

ಉಡುಪಿ (೫೭೬ ೧೦೧)

ಬಿ. ಕೇಶವ ಆಚಾರ್ಯ, ಜನತಾ ಫ್ಲೋರ್ ಮಿಲ್ಸ್, ತೆಂಕುಪೇಟೆ
ಎಂ. ಗಣಪತಿ ಆಚಾರ್ಯ, ಜ್ಯುಯಲರ್ಸ್, ಹರಿಶ್ಚಂದ್ರ ರಸ್ತೆ
ನಾರಾಯಣಾಚಾರ್ಯ, ಹಾವಂಜೆ, ಕೊಳಲಗಿರಿ ಅಂಚೆ
ಎಂ. ನರಸಿಂಹಾಚಾರ್ಯ, ಸಿಂಡಿಕೇಟ್ ಬ್ಯಾಂಕ್, ಪಡುಬಿದ್ರಿ
ಕೆ. ಪದ್ಮನಾಭಾಚಾರ್ಯ. ಜ್ಯುಯಲರ್ಸ್, ಕೋರ್ಟ್ ರಸ್ತೆ
ಎ. ಪ್ರಭಾಕರ್, ಮಂಗಳ ಜ್ಯುಯಲರ್ಸ್, ವ್ಯವಹಾರ್ ಕಾಂಪ್ಲೆಕ್ಸ್
ಯು. ಬಿ. ಭಾಸ್ಕರಾಚಾರ್ಯ,
ಮ್ಯಾನೇಜರ್, ಮಂಗಳೂರು ಗೋಲ್ಡ್ ಸ್ಮಿತ್ಸ್ ಕೊ–ಆಪರೇಟಿವ್ ಸೊಸೈಟಿ ಬ್ರಾಂಚ್
ಮೋಹನ ಆಚಾರ್ಯ, ಬಡಗುಪೇಟೆ
ಪಿ. ಸಿ. ವಾಸುದೇವಾಚಾರ್ಯ, ಜ್ಯುಯಲರ್ಸ್, ಬಡಗುಪೇಟೆ
ಕೆ. ಶ್ರೀಧರ ಆಚಾರ್ಯ, ಜ್ಯುಯಲರ್ಸ್, ಬಡಗುಪೇಟೆ
ಶ್ರೀನಿವಾಸಾಚಾರ್ಯ, ವಿಶ್ವಕರ್ಮ ಜ್ಯುಯಲರ್ಸ್, ಕಡಕರ ಅಂಚೆ
ಕೆ. ಹರಿಶ್ಚಂದ್ರಾಚಾರ್ಯ, ಜ್ಯುಯಲರ್ಸ್, ತೆಂಕುಪೇಟೆ

ಮಣಿಪಾಲ (೫೭೬ ೧೧೯)
ಬಿ. ಎ. ಆಚಾರ್ಯ, ಎಂಐಟಿ

ಧಾರವಾಡ ಜಿಲ್ಲೆ

ಧಾರವಾಡ (೫೮೦ ೦೦೧)
ಡಾ. ವೈ. ಸಿ. ಪಂಚಾಳ್ ಎಂ.ಎಸ್ಸಿ., ಕೃಷಿ ಮಹಾವಿದ್ಯಾಲಯ, ಧಾರವಾಡ
ಎನ್. ಎಂ. ಬಡಿಗರ್, ಆಶೀರ್ವಾದ್ ಬಿಲ್ಡಿಂಗ್, ಕೊಪ್ಪದಕೇರಿ
ಎ. ಎಂ. ಯರಕದ, ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಹುಬ್ಬಳ್ಳಿ (೫೮೦ ೦೨೦)
ತಿಪ್ಪಣಾಚಾರ್ಯ ಬಾ. ಪ್ರಭಾಕರ, ಶ್ರೀಕಾಳಿಕಾದೇವಿ ದೇವಾಲಯ
ಎ. ಎಂ. ಮುಳಗುಂದ ಮತ್ತು ಮಕ್ಕಳು, ಸರಾಫರು, ವಾಳ್ವೆಕರ್‌ಗಲ್ಲಿ
ರುದ್ರಪ್ಪ ಭೀಮಪ್ಪ ಹಿತ್ತಾಳಿ,
೧೦, ೩ನೇ ರಸ್ತೆ, ದೇಸಾಯಿಗಲ್ಲಿ, ಬಂಕಾಪುರಚೌಕ
ಲಕ್ಷ್ಮಣ, ಸದಾಶಿವ ವೇದ ಪಾಠಕ (ಹುಚ್ಚಪ್ಪ), ಕಂಚುಗಾರಗಲ್ಲಿ
ವಸಂತರಾವ್ ಮಾನಪ್ಪ ಬೆಳ್ಳಿಗಟ್ಟಿ, ಅಕ್ಕಸಾಲಿಗರ ಓಣಿ, ಹಳೇ ಹುಬ್ಬಳ್ಳಿ
ಶಿವರಾಯಪ್ಪ ಮಾನಪ್ಪ ಮಾನಣ್ಣನವರ್, ಬೆಳಮುಕರಗಲ್ಲಿ, ಹಳೇ ಹುಬ್ಬಳ್ಳಿ
ವಿ. ವಿ. ಸವಣೂರ್, ೨೨/೧ ಅಕ್ಕಿಪೇಟೆ, ಹಳೇ ಹುಬ್ಬಳ್ಳಿ
ಜಿ. ಎನ್. ಹಂಸಭಾವಿ, ಪ್ರವೀಣ್ ಪ್ರಿಂಟರ್ಸ್, ಬ್ರಾಡ್ವೇ
ನರಗುಂದ (೫೮೨ ೨೦೭)
ಈರಣ್ಣ ಕುಂದಣಗಾರ, (ಶಂಭುಲಿಂಗೇಶ್ವರ ದೇವಸ್ಥಾನದ ಹಿಂದೆ)
ಕಾಳಪ್ಪಾಚಾರ್ಯ, ಅಗ್ರಿಕಲ್ಚರಲ್ ಅಸಿಸ್ಟೆಂಟ್
ಕೃಷ್ಣಪ್ಪ ಕುಂದಣಗಾರ್, ಸರಾಫ್
ದೇವನಕೊಂಡ, ಸೆಕ್ಯೂರಿಟಿ ಆಫೀಸರ್, ನಂದಿ & ಹಸ್ಬಿ ಮಿಲ್ಸ್
ಮಲ್ಲೇಶಪ್ಪ ಕೆರೂರು ಜಂತ್ಲಿ, ಜವಳಿ ಬಜಾರ್
ಮೋನಪ್ಪ, ಮುನ್ಸಿಪಲ್ ಆಫೀಸ್
ಎಸ್ಕೆ. ರಾಜಶೇಖರಾಚಾರ್ಯ,
ಅಕೌಂಟ್ಸ್ ಸೂಪರಿಂಟೆಂಡೆಂಟ್, ಎಂಡಿಸಿ ವಿಭಾಗ

ರಾಮಚಂದ್ರ ಲಕ್ಷ್ಮಣ ಜಂತ್ಲಿ, ಜವಳಿ ಬಜಾರ್
ಕುಮಾರಿ ಸುಧಾ ಪಂಡಿತ್ c/o ಎಕ್ಸಿಕುಟೀವ್ ಎಂಜನಿಯರ್
ಉ. ಬೆಟಗೇರಿ (೫೮೧ ೨೦೬)
ಕೆ. ಕೆ. ಸಾಬಣ್ಣನವರ್, ಕಲಾಧ್ಯಾಪಕರು, ಎಸ್ವಿಜಿ ಹೈಸ್ಕೂಲ್
ರೋಣ ನ್ಯೂರು (೫೮೧ ೧೧೫)
ಚನ್ನವೀರಪ್ಪ ಬೆಳ್ಳೋಡಿ, ಸ್ವರ್ಣಶಿಲ್ಪಿಗಳು
ರಾಚಪ್ಪ ಐ ಅರ್ಕಾಚಾರ್ಯ, ಸ್ವರ್ಣ ಶಿಲ್ಪಿಗಳು
ಗದಗ (೫೮೨ ೧೦೧)
ಎಂ. ವಿ. ಹಡಗಲಿ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್

ಬಳ್ಳಾರಿ ಜಿಲ್ಲೆ

ಬಳ್ಳಾರಿ (೫೮೩ ೧೦೧)
ಕೆ. ಕಾಳಪ್ಪಾಚಾರ್ಯ, ಹೂವಿನ ಬೀದಿ
ಗುರುಮೂರ್ತಿ ಆಚಾರ್ಯ, ಹೂವಿನಬೀದಿ
ಕೆ. ಜಯಣ್ಣಾಚಾರ್ಯ, ಸಿಂದಗಿ ಓಣಿ
ಕೆ. ತಿಪ್ಪೇಸ್ವಾಮಿ, ಬಿಎಸ್ಸಿ., ಬಿಎಡ್., ಲಾಲ್‌ಕಮಾನ್
ವೈ. ಪಾಂಡುರಂಗಾಚಾರ್ಯ, ಲಾಲ್‌ಕಮಾನ್
ಬಸವಣ್ಣಾಚಾರ್ಯ, ಕನ್ಟ್ರಾಕ್ಟರ್, ಮದ್ದಾನೆ ಸ್ವಾಮಿಮಠ
ಕೆ. ವೈ ಭೀಮಾಚಾರ್ಯ, ಹೂವಿನ ಬೀದಿ
ಕೆ. ಮಾಣಿಕ್ಯ ಆಚಾರ್ಯ, ಡೈಮಂಡ್ ಸೆಟ್ಟರ್, ೧೯೨, ಕಂಬ್ಳಿ ಬಜಾರ್
ರವಿಕುಮಾರ್, ಕಮಿಂಗ್‌ರೋಡ್
ಎಸ್ವಿ. ರಾಜು, ಬಿ.ಇ., ೫೦ ಅಜೀಜ್ ಮನ್ಜಿಲ್, ಕಂಟೋನ್ಮೆಂಟ್
ಹರಪನಹಳ್ಳಿ (೫೮೩ ೧೩೧)
ಚಂದ್ರಶೇಖರಪ್ಪ ಪಂಪಣ್ಣ, ಸರಾಫ್
ಸಂಡೂರು (೫೮೩ ೧೧೯)
ಆ. ವೃಷಭೇಂದ್ರಾಚಾರ್ಯ, ಎಂಎ., ಎಸ್‌ಇಎಸ್ ಕಾಲೇಜು

ಹೊಸಪೇಟೆ (೫೮೩ ೨೦೧)
ಕೆ. ವಿ. ಪತ್ತಾರ್, ಅಂಬರ್ ಚರಕಾ ಸೊಸೈಟಿ
ಏಂಬಿ ಅಯ್ಯನಹಳ್ಳಿ (೫೮೩ ೧೩೫)
ಕೆ. ಶ್ರೀ ಶೈಲಾಚಾರ್ಯ
ಹೂವಿನ ಹಡಗಲಿ (೫೮೩ ೨೧೯)
ಎಂ. ಟಿ. ವೇದಮೂರ್ತಿ, ಸರ್ಕಾರಿ ಪ್ರೌಢಶಾಲೆ

ಬಿಜಾಪುರ ಜಿಲ್ಲೆ

ಬಿಜಾಪುರ (೫೮೬ ೧೦೧)
ಅನಂತ ಮಾರಪ್ಪ ಕುಂದಣಗಾರ್, ಛತ್ರಿ ಚಾಳ್, ಸರಾಫ್ ಬಜಾರ್
ಕಲ್ಲಪ್ಪ ನಾಗಪ್ಪ ಕುಂದಣಗಾರ, ಶಹಪುರ ಪೇಟೆ, ಪಟೇಲ್ ಗಲ್ಲಿ
ಕಾಳಹಸ್ತ್ಯಾಚಾರ್ಯ, ಡೆಪ್ಯುಟಿ ರಿಜಿಸ್ಟ್ರಾರ್ ಕೋ ಆಪರೇಟೀವ್ಸ್
ಗುಡ್ಡೇವಾಡಿ, ಎಂಎ., ಅಕೌಂಟ್ಸ್ ಸೂಪರಿಂಟೆಂಡೆಂಟ್, ಆರ್ಮಿ ಆಫೀಸ್
ಗುಂಡಪ್ಪ ಜಿ. ಮರೇಗುದ್ದಿ,
ವಿಜಯಾ ರೇಡಿಯೋ ಸರ್ವೀಸ್, ಸರಾಫ್ ಬಜಾರ್
ಚಿಂತಾಮಣಿ ಮೋನಪ್ಪ ಕುಂದಣಗಾರ್, ಶಹಪುರ ಪೇಟೆ
ದೇವೇಂದ್ರ ಕಲ್ಲಪ್ಪ ಬಡಿಗೇರ್, ಸಿಂಡಿಕೇಟ್ ಬ್ಯಾಂಕ್
ನಾಗಪ್ಪ ಕಲ್ಲಪ್ಪ ಕುಂದಣಗಾರ್,
ಮುನ್ಸಿಪಲ್ ಕೌನ್ಸಿಲರ್, ಸರಾಫ್ ಬಜಾರ್
ವಿ. ಕೆ. ಪಂಡಿತ್, (ಮಾಜಿ ಪುರಸಭಾಧ್ಯಕ್ಷರು), ಸರಾಫ್ ಬಜಾರ್
ಬಸಪ್ಪ ಮೋನಪ್ಪ ಪತ್ತಾರ್, ಪೈಂಟರ್, ಸರಾಫ್ ಬಜಾರ್
ವಿಠ್ಠಲ ಈರಪ್ಪ ಸೋನಾರ್, ಮೂರೇಣಕೇರಿ
ಕೆ. ಸದಾಶಿವ ಆಚಾರ್ಯ, ಕಾರ್ಪೊರೇಷನ್ ಬ್ಯಾಂಕ್
ಬಾಗಲಕೋಟೆ (೫೮೭ ೧೦೧)
ವಿ. ಜಿ. ಟಂಕಸಾಲಿ, ಸ್ವರ್ಣ ಶಿಲ್ಪಿಗಳು, ಕಿಲ್ಲೆ
ಜೀವಣ್ಣ ಮುಸಳಿ, ಸಂ : ವಿಶ್ವದರ್ಶನ, ಕಲಾದಗಿ ರಸ್ತೆ
ಎನ್. ಆರ್. ಬರ್ಗಿ, ಭಾರತ್ ಆರ್ಟ್ ಸ್ಟುಡಿಯೋ

ಜಿ. ಡಿ. ಮಯಾಚಾರ್ಯ, ಶಿಲ್ಪಿಗಳು
ಎನ್. ಎಂ. ಸೋನಾರ್, ಸೋನಾರ್ ಪೋಟೋ ಸ್ಟೂಡಿಯೋ
ಗುಡೂರು (೫೮೭ ೨೦೨)
ಚಿದಾನಂದ ವಿ ಬಡಿಗೇರ, ಹೆಡ್ಮಾಸ್ಟರ್, ಎಸ್.ಎ-ವಿ. ಹೈಸ್ಕೂಲ್
ತಾಳಿಕೋಟೆ (೫೮೬ ೨೧೪)
ಆರ್. ಆರ್. ಬಡಿಗೇರ ಬಿ.ಎಸ್ಸಿ., ಅಧ್ಯಾಪಕರು
ಇಳಕಲ್ಲು (೫೮೭ ೧೨೫)
ಸುಗೂರಪ್ಪ ರಾ. ಮರೋಳ್, ಸೀರೇ ವ್ಯಾಪಾರಿಗಳು
ಜಮಖಂಡಿ (೫೮೭ ೩೦೧)
ಬಿ. ಡಿ. ಸೊನಾರ್, ಟ್ಯಾಕ್ಸ್ ಕನ್ಸಲ್ಟೆಂಟ್
ವಿರೂಪಾಕ್ಷ ಜಿ. ಕುಲ್ಹಳೀಕರ್, ಗಾಯತ್ರಿ ಜ್ಯೂಯಲರ್ಸ್
ಕೆ. ಬಿ. ವಿಶ್ವ ಬ್ರಾಹ್ಮಣ, ವರ್ತಕರ ಗಲ್ಲಿ
ಮುಧೋಳ (೫೮೭ ೩೧೩)
ವಿ. ಜಿ. ದಿವಾಕರ್, ತಹಸೀಲ್ದಾರರು
ಶಾಮರಾವ್ ಆರ್. ಟಂಕಸಾಲಿ, ಸರಾಫರು
ಶ್ಯಾಮರಾವ್ ಎಸ್. ಟಂಕಸಾಲಿ, ಬಿಎಸ್ಸಿ., ಬಿಎಡ್.,

ಬೆಳಗಾವಿ ಜಿಲ್ಲೆ

ಬೆಳಗಾವಿ (೫೯೦ ೦೦೧)
ಈಶ್ವರಪ್ಪ ವಿ. ಕುಂದಣಗಾರ ೮೮೯, ಆಚಾರ್ಯ ಗಲ್ಲಿ
ಕ್ಯಾಪ್ಟನ್ ಮುಲ್ಕಿ ಗಣೇಶರಾವ್, ಇಂಡಿಯನ್ ಏರ್‌ಲೈನ್ಸ್
ಪಿ. ಡಿ. ಪತ್ತಾರ(ಹಂಚಿನಾಳ), ಅಡ್ವೋಕೇಟ್, ೧೮೬೬ ಜೇಡ್ ಗಲ್ಲಿ
ಎನ್. ಡಿ. ಪತ್ತಾರ, ಶಿರಸ್ತೆದಾರರು ಡಿಸಿ ಆಫೀಸ್
ಜಿ ಎಂ. ಪಂಡಿತ್, ೩೯೮೦, ಕಕ್ತಿವೇಸ್, ಎಸ್‌ಹೆಚ್‌ಎಸ್ ಗ್ರೌಂಡ್
ಬಸವಂತಪ್ಪ ವಿ. ಕಡ್ಲಾಸ್ಕರ್, ೧೪೯೦, ಗಣೇಶಪುರಗಲ್ಲಿ, ಶಹಪುರ
ಬಾಲಕೃಷ್ಣ ಆರ್. ಮಧುವಾಲ್, ೨೧೪೦, ಕೋರೆಗಲ್ಲಿ, ಶಹಪುರ
ಎಂ. ಸಿ. ಬಿಳಗಿ, ಸರಾಫರು, ಗಣಪತಿಗಲ್ಲಿ,

ನಾಗಪ್ಪ ಕಾಳಪ್ಪ ಪೋತದಾರ್, ೩೩, ಹೊಸೂರು ಬಸವಣ್ಣ ಗಲ್ಲಿ, ಶಹಪುರ
ಪಿ. ನಾಗಾಚಾರ್ಯ, ಎಂ.ಎ., ಸಿ೨/೧೧, ವಿಶ್ವೇಶ್ವರಯ್ಯ ನಗರ
ರಾಂಭಾವು ಅಂಬೆನಾಡಿಕರ್, ೭೨೩/೫, ಅನಗೋಳ್ ರಸ್ತೆ, ತಿಲಕ್‌ವಾಡಿ
ಶಂಕರರಾವ್ ಈ. ಸೊನದ್, ೨೨೮೫ ಹಟ್ಟಿಹೊಳಿಗಲ್ಲಿ, ಶಹಪುರ
ಶ್ರೀಕಾಂತ್ ಬಿ. ಮರಿಗುದ್ದಿ, ಬಿ.ಇ., ಅಸಿಸ್ಟೆಂಟ್ ಎಂಜಿನಿಯರ್, ಕೆಇಬಿ(ಸಿಟಿ)
ಎಂ. ವಿ. ಸಾಬಣ್ಣನವರ್, ೨೪೦೫ ಕಂಚುಗಾರ ಗಲ್ಲಿ, ಶಹಪುರ

ಬೈಲಹೊಂಗಲ (೫೯೧ ೧೦೨)

ಎಸ್. ಎಲ್. ಪತ್ತಾರ್, ಅಸಿಸ್ಟೆಂಟ್ ಎಂಜಿನಿಯರ್
ವಿ. ಕೆ. ನಾಗರಕಟ್ಟಿ, ಸೆಕ್ಷನ್ ಆಫೀಸರ್ (ಕೆಇಬಿ)

ರಾಮದುರ್ಗ (೫೯೧ ೧೨೩)

ಎಂ. ವಿ. ಪತ್ತಾರ್, ಜೆ. ಇ. ಪಡಕೋಟಿ

ಸವದತ್ತಿ (೫೯೧ ೧೨೬)

ಚಂದ್ರಕಾಂತ್ ಎಸ್. ಸುಳ್ಳದ್, ಬಿ.ಎಸ್ಸಿ,

ಖಾನಾಪುರ (೫೯೧ ೩೦೪)

ದಾಮೋದಾರ್ ಎಸ್. ಪೊತದಾರ್

ಬೆಂಗಳೂರು ಜಿಲ್ಲೆ

ಬೆಂಗಳೂರು ನಗರ (೫೬೦ ೦೦೧)

ಆರ್. ದೊರೈವೇಲು ಆಚಾರ್ಯ ಮತ್ತು ಮಕ್ಕಳು, ವೀರಪಿಳ್ಳೈ ರಸ್ತೆ
ಡಾ. ಎಸ್. ನಾಗೇಶ್ವರ್, ಪ್ರಾಧ್ಯಾಪಕರು, ಸೆಂಟ್ರಲ್ ಕಾಲೇಜು
ಪುಟ್ಟಸೋಮಾಚಾರ್ಯ,
ನಿರ್ದೇಶಕರು, ಬ್ಯೂರೋ ಆಫ್ ಎಕನಾಮಿಕ್ ಸ್ಟ್ಯಾಟಿಸ್ಟಿಕ್ಸ್
ಬಿ. ಎಸ್. ರಾಮಲಿಂಗಾಚಾರ್,
ನಿರ್ದೇಶಕರು, ಸೋಪು ಗಂಧದ ಕಾರ್ಖಾನೆ
ಸರ್ಕಾರಿ ಮುದ್ರಣಾಲಯದ ಸಿಬ್ಬಂದಿ
೫೬೦ ೦೦೨
ಎಂ. ಆರುಮುಗಂ ಆಚಾರ್ಯ, ೩ ಸಂಜೀವಪ್ಪ ಲೇನ್, ಅವೆನ್ಯು ರಸ್ತೆ

ಟಿ. ಆರ್. ಈಶ್ವರಾಚಾರ್ಯ, ೯ ಗಾಣಿಗರಗಲ್ಲಿ, ಜೆಎಂ ರಸ್ತೆ
ವಿ. ಕಬಾಲಿ, ೩ ಸಂಜೀವಪ್ಪ ಲೇನ್, ಅವೆನ್ಯು ರಸ್ತೆ
ಎಂ. ವಿ. ಕೃಷ್ಣಾಚಾರ್ಯ, ೧೯ ಪಿಳ್ಳಪ್ಪ ಲೇನ್, ಜೆಎಂ ರಸ್ತೆ
ವಿ. ಎಂ. ಕೃಷ್ಣಾಚಾರ್ಯ, ೩೫ ಚನ್ನರಾಯಸ್ವಾಮಿ ಗುಡಿ ಬೀದಿ
ವಿ. ಗುರುಮೂರ್ತಿ ಆಚಾರ್,

ಲಕ್ಷ್ಮೀ ಡೈಮಂಡ್ಸ್, ೪, ಚನ್ನರಾಯ ಸ್ವಾಮಿಗುಡಿ ಬೀದಿ

ಡಂಕಣ ಕಮರ್ಷಿಯಲ್ ಡಿಸೈನರ್ಸ್, ೫೮ ಬಿ.ವಿ.ಕೆ. ಐಯಂಗಾರ್ ರಸ್ತೆ
ಜಿ. ನಂಜಪ್ಪಾಚಾರ್ಯ, ಚೌಡೇಶ್ವರಿ ಗುಡಿ ರಸ್ತೆ
ನಂಜುಂಡಸ್ವಾಮಿ, ೧೪ ಕೆಂಪಣ್ಣಗಲ್ಲಿ, ನಗರ್ತರ ಪೇಟೆ
ಎನ್. ಆರ್. ಪುಟ್ಟಾಚಾರ್ಯ, ೨೩ ಕೆಂಪಣ್ಣ ಗಲ್ಲಿ, ನಗರ್ತರ ಪೇಟೆ
ಹೆಚ್. ಎಂ. ಭದ್ರಾಚಾರ್,

೪೬(೩), ಅಪ್ಪಾಜಿರಾವ್ ಲೇನ್, ಚೌಡೇಶ್ವರಿ ಗುಡಿ ರಸ್ತೆ

ಹೆಚ್. ಬಾಸ್ಕರಾಚಾರ್ಯ, ೧೪ ಗಾಣಿಗರ ಗಲ್ಲಿ, ಜೆಎಂ ರಸ್ತೆ
ಎಲ್. ಭೀಮಾಚಾರ್ಯ, ಪತ್ತಿ ಬಿಲ್ಡಿಂಗ್ಸ್, ಚೌಡೇಶ್ವರಿಗುಡಿ ಬೀದಿ
ಎಂ. ಎಸ್. ಬ್ರಹ್ಮಯ್ಯಾಚಾರ್ಯ,

೧೦೦ ಬ್ಯಾಟಪ್ಪ ಲೇನ್, ಚೌಡೇಶ್ವರಿ ಗುಡಿ ಬೀದಿ

ಎನ್. ಮೋಹನಾಚಾರ್ಯ, ೨೩/೩ ಅಪ್ಪಾಜಿರಾವ್ ಗಲ್ಲಿ,
ಕೆ. ವೆಂಕಟೇಶ್ವರುಲು, ಬಿಎ., ಸ್ವರ್ಣಶಿಲ್ಪಿ, ೧೦, ಬ್ಯಾಟಪ್ಪ ಲೇನ್,
ಶಿಲ್ಪಿ ಶ್ಯಾಮಾಚಾರ್ಯ, ಮಲ್ಲಿಕಾರ್ಜುನ ಗಲ್ಲಿ, ಕೆ. ಆರ್. ಶೆಟ್ಟಿ ಪೇಟೆ
ಜಿ. ಶ್ರೀಕಂಠಾಚಾರ್ಯ. (ಹೆಚ್. ಎಂ. ಟಿ.) ೧೦೯, ಜೆ ಎಂ. ರಸ್ತೆ
ಕೆ. ಶ್ರೀನಿವಾಸಾಚಾರ್ಯ, ಅಪ್ಪಾಜಿರಾವ್ ಗಲ್ಲಿ
ಎಂ. ಜಿ. ಶ್ರೀನಿವಾಸನ್,

ಶ್ರೀನಿವಾಸ ಫರ್ನೀಚರ್ ಹಾಲ್, ನರಸಿಂಹರಾಜ ರಸ್ತೆ

೫೬೦ ೦೦೩ (ಮಲ್ಲೇಶ್ವರಂ)

ಹೆಚ್ ನರಸಿಂಹಾಚಾರ್ಯ,

(ಮೈಕೋ) ೧೩, ೧೧ನೇ ಕ್ರಾಸ್, ವೈಯಾಳಿಕಾವಲ್

ಸಿ. ನಾಗರಾಜ್, ನಾಗರಾಜ್ ಆಟೋವರ್ಕ್ಸ್, ೧೨, ೪ನೇ ಮೈನ್
ಶಿಲ್ಪಿ ಎನ್. ಜಿ. ನೀಲಕಂಠಾಚಾರ್ಯ,
    ೨೯, ೧ನೇ ಮೈನ್, ಕೆ. ಆರ್. ಪುರ
ಶಾಸ್ತ್ರಿ ಬಿ. ವಿ. ನಂಜುಂಡಾಚಾರ್ಯ ವಿಶ್ವಕರ್ಮ,
    ೨೯೯/೧೭, ವೈಯಾಳಿಕಾವಲ್
ಹೆಚ್. ಎಸ್. ರಾಜಶೇಖರಾಚಾರ್ಯ,
    ಕಲರ್ ಕ್ರಾಫ್ಟ್, ೪೪, ೫ನೇ ಕ್ರಾಸ್
೫೬೦ ೦೦೪(**ಬಸವನ ಗುಡಿ**)
ಟಿ. ಕೆ. ಆಚಾರ್ಯ, ೧೦ ಡಾ. ಡಿ. ವಿ.ಜಿ. ರಸ್ತೆ
ಅನಂತ ಎಸ್. ಸವಣೂರ್,
    ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್, ಡಿ.ವಿ.ಜಿ. ರಸ್ತೆ
ಟಿ. ಚಂದ್ರಶೇಖರ್,
    ಶ್ರೀ ತಾಂಡವೇಶ್ವರ ಆಪ್ಟೀಷಿಯನ್ಸ್, ೧೦ ನಾಗಸಂದ್ರ ರಸ್ತೆ
ಎನ್. ಚಂದ್ರಶೇಖರ್ ಮತ್ತು ಸೋದರರು,
    ೫೮, ಹೆಚ್. ಬಿ. ಸಮಾಜ ರಸ್ತೆ
ಯು. ಜೆ. ಸದಾಶಿವ (ಎನ್ಜಿಇಎಫ್), ೪ ರಿಸರ್ವಾಯರ್ ಬೀದಿ
೫೬೦ ೦೦೮ (**ಅಲಸೂರು**)
ಎನ್ನಾರ್. ನಂಜುಂಡಸ್ವಾಮಿ, ೧/೧ ಡಿ, ೨ನೇ ಕ್ರಾಸ್, ಕೇಂಬ್ರಿಡ್ಜ್ ರಸ್ತೆ
೫೬೦ ೦೦೯ (**ಗಾಂಧೀನಗರ**)
ಎ. ವಿವೇಕ್, ಶಾರದಾ ಜ್ಯುಯಲರ್ಸ್, ಸುಬೇದಾರ್ ಛತ್ರಂ ರಸ್ತೆ
ಬಿ. ಎಂ. ಶಾಮಣ್ಣ, (ಪಿಡಬ್ಲ್ಯುಡಿ),ಆನಂದರಾವ್ ಸರ್ಕಲ್
೫೬೦ ೦೧೦ (**ರಾಜಾಜಿ ನಗರ**)
ಎನ್. ಕಾಳಾಚಾರ್ಯ, ಬಿಕಾಂ., ೮೯೨, ೧೬ನೇ ಮೈನ್, ३ನೇ ಬ್ಲಾಕ್
ಕೆ. ಸಿ. ಕಾಳಾಚಾರ್ಯ, ಬಿ.ಎಸ್‌ಸಿ.,
    ३೭೦, ಮಹಾಲಕ್ಷ್ಮಿ ಲೇ ಔಟ್, ೧೦ನೇ ಅಡ್ಡ ರಸ್ತೆ
ಕುಮಾರಸ್ವಾಮಿ, ೯೫೫-ಎ, ೨ನೇ ಮೈನ್, ೪ನೇ ಬ್ಲಾಕ್

ಚಂದ್ರಶೇಖರಾಚಾರ್ಯ ಮತ್ತು ಸೋದರರು,
ಳ೩ ಮಹಾಲಕ್ಷ್ಮಿ ಲೇ ಔಟ್
ಮಲ್ಲಣ್ಣ ಸುರಭಿ, ೭/೧೭, ೧ನೇ ಬ್ಲಾಕ್
ಮಯಮೂರ್ತಾಚಾರ್ಯ, ೬೦/೨೧, ೫ನೇ ಕಾಸ್, ೪ನೇ ಬ್ಲಾಕ್
ಎಂ. ಮಾಯಾಚಾರ್ಯ, ಬಿಎಸ್ಸಿ. ಬಿಎಲ್.,
೭೯, ಎಲ್ಲೈಸಿ ಕಾಲೋನಿ, ೨ನೇ ಸ್ಟೇಜ್
ವಾಸುದೇವ ಹಂಸಭಾವಿ, ೯೩೭, ೪ನೇ ಬ್ಲಾಕ್
ಎಂ. ವಿಶ್ವನಾಥಾಚಾರ್ಯ, ೪೩೫, ೧೦ನೇ ಮೈನ್, ೬ನೇ ಬ್ಲಾಕ್
ವಿ. ಪಿ. ವಿಶ್ವಮೂರ್ತಿ, ೯೩೩, ೨ನೇ ಮೈನ್ ೪ನೇ ಬ್ಲಾಕ್
ಎನ್. ವಿಶ್ವರೂಪಾಚಾರ್ಯ, ೮೬, ೬ನೇ ಬ್ಲಾಕು, ರಾಜಾಜಿನಗರ
ಎನ್. ವಿಶ್ವರೂಪಾಚಾರ್ಯ, (ಹೆಚ್‌ಎಎಲ್)
೧೭೮೮, ೬ನೇ ಕ್ರಾಸ್, ಎರಡನೇ ಹಂತ
ಎಸ್. ಆರ್. ಶಿರಾಲ್‌ಕರ್, ೧೭೦ಎ, ೪ನೇಬ್ಲಾಕ್

೫೬೦ ೦೧೧ (ಜಯನಗರ)

ಕೃಷ್ಣಾಚಾರ್ಯ (ಮೈಕೋ), ೪-೯ನೇ ಮೈನ್, ೪ನೇ ಬ್ಲಾಕ್
ಎನ್. ರಾಜಗೋಪಾಲಚಾರ್ಯ, ೨ನೇ ಬ್ಲಾಕ್,

೫೬೦ ೦೧೨ (ಸೈನ್ಸ್ ಇನ್ಸ್‌ಟಿಟ್ಯೂಟ್)

ಎಸ್ಸಿ. ಸುವರ್ಣೇಶ್ವರ,
ಎಲೆಕ್ಟ್ರೋಪೋರ್ಸಿಲೈನ್ ವಿಭಾಗ, ಬಿ ಹೆಚ್ ಇ ಎಲ್

೫೬೦ ೦೧೭ (ವಿಮಾನಪುರ)

ಎನ್. ಕೃಷ್ಣಮೂರ್ತಿ, ಬಿಇಎಂಎಲ್ (ರೈಲ್‌ಕೋಚ್)
ವಿರೂಪಾಕ್ಷಾಚಾರ್ಯ,
ಫ್ಲೈಟ್ ಟೆಸ್ಟ್ ಗ್ರೂಪ್ (ಡಿಸೈನ್ ಬ್ಯೂರೊ), ಹೆಚ್ ಎ ಎಲ್

೫೬೦ ೦೧೮ (ಚಾಮರಾಜಪೇಟೆ)

ನಾಗರಾಜಪ್ಪ, ೩೩, ೨ನೇ ಕ್ರಾಸ್, ಆಜಾದ್ ನಗರ
ಎ. ಲಿಂಗಾಚಾರ್, ಅರ್ಕ ವಾಚ್ ಕಂಪನಿ

೫೬೦ ೦೯೯ (ಕೆಂಪೇಗೌಡನಗರ)
ಚಿಕ್ಕಶಾಮಾಚಾರ್ಯ (ಮೈಕೋ), ೭೮, ೨ನೇ ಮೈನ್
ಟಿ. ದೇವರಾಜ್ (ಹೆಚ್ಎಂಟಿ)
೫೪೭, ೭ನೇ ಮೈನ್, ೧ನೇ ಕ್ರಾಸ್, ಹನುಮಂತನಗರ
ಎಸ್. ರಾಮಕೃಷ್ಣಾಚಾರ್ಯ, ವಿ-೬, ೨ನೇ ಮೈನ್, ಹನುಮಂತನಗರ
ಎಂ. ವಿ. ವಿಶ್ವಜ್ಞಾಚಾರ್ಯ (ಮೈಕೋ), ೭೮, ೨ನೇ ಮೈನ್
ವೆಂಕಟಾಚಲಯ್ಯ (ಮೈಕೋ), ಎಫ್-೧, ಶಂಕರಮಠ ರಸ್ತೆ
೫೬೦ ೦೨೦ (ಶೇಷಾದ್ರಿಪುರಂ)
ಎನ್. ಕೃಷ್ಣಪ್ಪ,
೧೩, ೪ನೇ ಬ್ಲಾಕ್, ೩ನೇ ಕ್ರಾಸ್, ಕುಮಾರಪಾರ್ಕ್(ಪಶ್ಚಿಮ)
ಸಿ. ವಿ. ನರಸಿಂಹಮೂರ್ತಿ (ಕೆಎಸ್ಆರ್‌ಟಿಸಿ) ೨೨/೧೨, ಶೇಷಾದ್ರಿಪುರಂ
೫೬೦ ೦೨೧ (ಶ್ರೀರಾಮಪುರಂ)
ಸಿ. ಬಿ. ಚನ್ನಕೇಶವಾಚಾರ್ಯ, ೨೪/೧, ೧ನೇ ಕಾಸ್, ಶ್ರೀರಾಮಪುರಂ
ಎನ್. ಆರ್. ಚಂದ್ರಾಚಾರ್ಯ, ೩೮, ಕಾಳಪ್ಪ ಬ್ಲಾಕ್, ೩ನೇಕ್ರಾಸ್,
ರಾಮಚಂದ್ರಪುರ
ಮಾಳಿಗಾಚಾರ್ಯ, ೩೯೭೯, ೭ನೇ ಕ್ರಾಸ್, ಗಾಯತ್ರಿ ನಗರ
ನರಸಿಂಹಗೋಪಾಲಾಚಾರ್ಯ, ೨೪, ೧ನೇ ಕ್ರಾಸ್, ಶ್ರೀರಾಮಪುರಂ
ಡಿ. ಎಂ. ವಿಶ್ವಮೂರ್ತ್ಯಾಚಾರ್ಯ, ೨೫೦೧, ರಾಜಾಜಿನಗರ-೨ನೇ ಹಂತ
೫೬೦ ೦೨೬ (ಹೊಸ ಗುಡ್ಡದಹಳ್ಳಿ)
ಜಿ. ಕೃಷ್ಣಾಚಾರ್ಯ (ಮೈಕೋ), ಕಾಳಿಕಾಂಬ ವಿಶ್ವಕರ್ಮ ಸಮಾಜ
ಜಿ. ಚಂದ್ರಶೇಖರಯ್ಯ, ಬಿಎಸ್ಸಿ., ೫೮, ೭ನೇ ಕ್ರಾಸ್, ನೆಹರು ರಸ್ತೆ
ಬಸವಾಚಾರ್ಯ, c/o (ಮೇಲಿನ ವಿಳಾಸ)
ರಾಜಾಚಾರ್ಯ (ಬಿಇಎಲ್) c/o (ಮೇಲಿನ ವಿಳಾಸ)
ಎ. ಭಾಸ್ಕರಾಚಾರ್ಯ, ಅಧ್ಯಕ್ಷರು : ಕಾಳಿಕಾಂಬ ವಿಶ್ವಕರ್ಮ ಸಮಾಜ
೫೬೦ ೦೨೭ (ಸಂಪಂಗಿರಾಮನಗರ)
ಗಣೇಶಮೂರ್ತಿ (ಐಟಿಐ), ೬೬, ೭ನೇ ಕ್ರಾಸು,
ಎನ್. ಮರಿಶಾಮಾಚಾರ್, ಕಲಾವಿದರು. ೨೮, ೫ನೇ ಕ್ರಾಸು

ಎಂ. ವಿ. ರಾಜಾಚಾರ್ಯ, ೨೦೭, ೧೧ನೇ ಕ್ರಾಸು, ವಿಲ್ಸನ್ ಗಾರ್ಡನ್ಸ್

ರಾಮಭದ್ರಾಚಾರ್ಯ,
೨೨೩/೧೨, ೧೨ನೇ ಕ್ರಾಸು, ೩ನೇ ಮೈನ್, ವಿಲ್ಸನ್ ಗಾರ್ಡನ್ಸ್

ಎಸ್. ರಾಮಲಿಂಗಂ, ೯೬, ೩ನೇ ಕ್ರಾಸು, ಸುಧಾಮನಗರ

ಶಿಲ್ಪಿ ಟಿ. ಆರ್. ವೆಂಕಟಾಚಾರ್ಯ, ಯು-೭/೩, ೩ನೇ ಮೈನ್

ಪಿ. ಶಿವರಾಂ,
ಶಿವರಾಂ ಎಂಜನಿಯರಿಂಗ್ ವರ್ಕ್ಸ್, ಲಾಲ್‌ಬಾಗ್ ಮೈನ್ ರಸ್ತೆ

ರಾಷ್ಟ್ರ ಪ್ರಶಸ್ತಿ ವಿಜೇತ ಶಿಲ್ಪಿ ಎನ್.ವಿ. ಶ್ರೀನಿವಾಸಾಚಾರ್ಯ,
ಗಜನಿಲಯ ತಾನಪ್ಪ ಗಾರ್ಡನ್ಸ್

೫೬೦ ೦೨೮ (ತ್ಯಾಗರಾಜನಗರ)

ಎ. ಪ್ರಭಾಕರಾಚಾರ್ಯ, ೯೦, ಸಿಟಿಎಸ್ ಬಿಲ್ಡಿಂಗ್, ೩ನೇ ಬ್ಲಾಕು

ಯಶೋದಮ್ಮ ಲಕ್ಷ್ಮೀನರಸಿಂಹ,
೧೩೪/೩ ಗಣೇಶ ಮಂದಿರ ರಸ್ತೆ, ೨ನೇ ಬ್ಲಾಕು

೫೬೦ ೦೩೦ (ಆಡುಗೋಡಿ)

ದಕ್ಷಿಣಾಮೂರ್ತಿ (ನಾರಾಯಣಾಚಾರ್ಯ) (ಮೈಕೋ), ನಂಜಪ್ಪ ಫ್ಲಾಟ್

ನಾರಾಯಣಮೂರ್ತಿ (ಮೈಕೋ), ೩ನೇ ಮೈನ್, ಸೊಸೈಟಿ ಕಾಲೋನಿ

ಕೆ. ರಾಜಶೇಖರಾಚಾರ್ಯ c/o ದೇವೇಗೌಡ, ಬಜಾರ್ ರಸ್ತೆ

೫೬೦ ೦೩೧ (ಜಾಲಹಳ್ಳಿ)

ಎನ್. ಎಸ್. ಶ್ರೀನಿವಾಸಾಚಾರ್ಯ, ಎಂ-೧೦೨, ೪ನೇ ಸೆಕ್ಟರು ಹೆಚ್.ಎಂ.ಟಿ.

ಕೆ. ಎಸ್. ನಂಜಪ್ಪ, ಡಬ್ಲ್ಯು-೮೧೯, ಹೆಚ್‌ಎಂಟಿ ಕಾಲೋನಿ

೫೬೦ ೦೩೭ (ಮಾರತ್‌ಹಳ್ಳಿ)

ಗೋಪಾಲಾಚಾರ್ಯ, ದೊಡ್ಡನೆಕ್ಕುಂದಿ

ಎಸ್. ನಾರಾಯಣನ್, ಜಿ. ೧೪೨೯, ನ್ಯೂ ಟೌನ್‌ಷಿಪ್

ಪುಟ್ಟಾಚಾರ್ಯ, ಜಿ ೮೧೯, ೯ನೇ ಕ್ರಾಸು, ೨ನೇ ಮೈನ್, ನ್ಯೂ ಟೌನ್ ಷಿಪ್

ಕೆ. ವಿ. ಲಿಂಗಾಚಾರ್ಯ, ಬೇಲೂರ್ ಲೇನ್

೫೬೦ ೦೩೮ (ಇಂದಿರಾನಗರ)

ಎನ್. ಎಸ್. ಕಸ್ತೂರಿ, ೫೧, ಎನ್ಜಿಇಎಫ್ ಕ್ವಾರ್ಟರ್ಸ್
ಡಾ|| ಕೆ. ಎಸ್. ವೀರಬ್ರಹ್ಮಾಚಾರ್ಯ, ೮೪೪, ಹೆಚ್ಎಎಲ್ ಎರಡನೆ ಹಂತ
ಸುಬ್ರಹ್ಮಣ್ಯಾಚಾರ್ಯ, ೪೮, ಶ್ರೀ ಲಕ್ಷ್ಮೀನಿಲಯ ಬೈಯ್ಯಪ್ಪನ ಹಳ್ಳಿ ಬಡಾವಣೆ
೫೬೦ ೦೪೦ (ವಿಜಯನಗರ)
ಹೆಚ್. ಎನ್. ನರಸಾಚಾರ್ಯ, (ಎನ್ಜಿಇಎಫ್), ೮೬೪, ೪ನೇ ಮೈನ್
ಡಾ|| ನಿಲಕಂಠಾಚಾರ್ಯ ೮೩೦, ೫ನೇ ಮೈನ್, ಮಾಗಡಿ ಕಾರ್ಡ್ ರಸ್ತೆ
ಎಂ. ಭಾಸ್ಕರಾಚಾರ್, (ಐಟಿಐ) ೪೮೯, ೮ನೇ ಮೈನ್ ರಸ್ತೆ
ವಿ. ಎನ್. ರಾಜಾಚಾರ್ಯ, (ಸೂಪರ್‌ವೈಸರ್ ಬಿಇಎಲ್)
೧೮೭೬ ಐದನೆ ಮೈನ್ ರಸ್ತೆ, ೧೨ನೇ ಅಡ್ಡರಸ್ತೆ, ಆರ್.ಪಿ.ಸಿ. ಲೇಔಟ್
೫೬೦ ೦೪೧ (ಜಯನಗರ)
ಎನ್. ಸಿ. ಛಾಯಾಪತಿ, ಬಿಇ., ೫೬೮, ೪೩ನೇ ಕ್ರಾಸ್, ೮ನೇ ಬ್ಲಾಕು
ಶ್ರೀಮತಿ ಸಾವಿತ್ರಮ್ಮ (ಮೇಲಿನ ವಿಳಾಸ)
ಸುರೇಂದ್ರಮೂರ್ತಿ (ಹೆಚ್ಎಎಲ್)
೪೩೫, ಮೊದಲ ಹಂತ-೧ ಬ್ಲಾಕು, ಬನಶಂಕರಿ
೫೬೦ ೦೪೬ (ಜಯಮಹಲ್ ಬಡಾವಣೆ)
ಎಲ್. ಶಿವಲಿಂಗಯ್ಯ, ೯/ಎ, ೧೨ನೇ ಕ್ರಾಸು
೫೬೦ ೦೫೩ (ಚಿಕ್ಕಪೇಟೆ)
ಕೃಷ್ಣಮೂರ್ತಿ ಮಯಾಚಾರ್ಯ, ೧೬ ಜಂಗಮ ಮೇಸ್ತ್ರಿಗಲ್ಲಿ, ಬಳೇಪೇಟೆ
ಬಿ. ಎಸ್. ದಕ್ಷಿಣಾಮೂರ್ತಿ, ೨೦ನೇ ಕ್ರಾಸು, ರಂಗಸ್ವಾಮಿ ಗುಡಿ ಬೀದಿ
ಪುರೋಹಿತ ವಿ. ಎಂ. ಮಾಯಾಚಾರ್ಯ,
೭, ಏಫ್, ೧೦ನೇ ಕ್ರಾಸು, ಮಾಗಡಿ ರಸ್ತೆ
ಎನ್. ಮುನಯ್ಯಾಚಾರ್ಯ, ೧/೮, ಕಿಲಾರಿ ರಸ್ತೆ ೩೦ನೇ ಕ್ರಾಸು
ರಾಜಣ್ಣ (ಐಟಿಐ), ೧೭೦/೧, ಕಿಲಾರಿ ರಸ್ತೆ
ರಾಮಕೃಷ್ಣಾಚಾರ್ಯ ೨, ೧೦ನೇ ಕ್ರಾಸು, ಮಾಗಡಿರಸ್ತೆ
ವಿ. ಎಂ. ವರದರಾಜು (ಬಿಇಎಲ್), ೯೨, ೧೨ನೇ ಕ್ರಾಸು, ಮಾಗಡಿ ರಸ್ತೆ
ಡಿ. ವಿ. ಶೇಷಾಚಾರ್ಯ, ೩/೪, ೧೧ನೇ ಕ್ರಾಸು, ಕಿಲಾರಿ ರಸ್ತೆ
ಎನ್. ವಿ. ಶ್ರೀಕಂಠಾಚಾರ್ಯ, ೯೨, ಎಎಂ ಲೇನ್, ಚಿಕ್ಕಪೇಟೆ,

ಸಿ. ಶ್ರೀನಿವಾಸಾಚಾರ್ಯ, ೬, ೨೭ನೇ ಕ್ರಾಸ್, ಕಿಲಾರಿ ರಸ್ತೆ
ಟಿ. ಪಿ. ಶಂಕರ್, ಆಶಾ ಸ್ಟೂಡಿಯೋ, ೧೪, ಬಳೇಪೇಟೆ

೫೬೦ ೦೭೫ (ಜೀವನ ಭೀಮಾನಗರ)

ನೀಲಕಂಠಾಚಾರ್, ೧೬, ಗುರುಮೂರ್ತಿ ರೆಡ್ಡಿ ಲೇನ್

೫೬೦ ೦೭೯ (ವೆಸ್ಟ್ ಆಫ್ ಕಾರ್ಡ್ ರೋಡ್)

ಡಿ. ಕೃಷ್ಣಾಚಾರ್ಯ, ೭೫೯, ೧ನೇಕ್ರಾಸು, ೩ನೇ ಹಂತ
ವಿ. ಎಸ್. ರಾಮಚಂದ್ರಾಚಾರ್ಯ, ೭೧೬, ೧ನೇ ಕ್ರಾಸು, ೩ನೇ ಹಂತ
ಎಸ್. ಆರ್. ಪಿ. ಸ್ವಾಮಿ, ಆರ್ಕಿಟೆಕ್ಟ್, ೭೪೯, ೧ನೇ ಕ್ರಾಸು

ಐಟಿಐ ವಿಶ್ವಕರ್ಮ ಸಂಘ, ದೂರವಾಣಿ ನಗರ

ಜಿ. ಡಿ. ಆಚಾರ್(ಗಿರಿಯಪ್ಪಾಚಾರ್ಯರ ಮಗ), ಖಾಜಿಸೊನ್ನೇ ಹಳ್ಳಿ
ಡಾ|| ಎನ್. ಕೃಷ್ಣಮೂರ್ತಿ, ೨೬ ಸುಬ್ರಹ್ಮಣ್ಯ ಲೇನ್, ಅರಳೇಪೇಟೆ
ಗಂಗಾಧರಾಚಾರ್ಯ, ನೆಹರೂ ಬಿಲ್ಡಿಂಗ್, ಅರಳೇಪೇಟೆ
ಆರ್. ಗಂಗಾಧರಾಚಾರ್, ೪೩ ಬೆನ್ನಿಗಾನ ಹಳ್ಳಿ
ಕೆ. ಜಗನ್ನಾಥಾಚಾರ್, ೩-೧೪, ಐಟಿಐ ಟೌನ್‌ಷಿಪ್
ಜಯಣ್ಣಾಚಾರ್, ಕುಂಬಾರಪೇಟೆ, ಕೃಷ್ಣರಾಜಪುರಂ
ಎಂ. ನರಸಿಂಹಯ್ಯ, ೪ನೇ ಕ್ರಾಸ್, ೨ನೇ ಮೈನ್ ಗವೀಪುರಂ ಗುಟ್ಟಹಳ್ಳಿ
ಕೆ. ನಾರಾಯಣಾಚಾರ್, ೭೨೪, ೬ನೇ ಮೈನ್, ವಿಜಯನಗರ
ಕೆ. ವಿ. ನಾರಾಯಣಾಚಾರ್,
ಪುಟ್ಟಾಚಾರ್ ಬಿಲ್ಡಿಂಗ್, ರಾಮಮೂರ್ತಿ ನಗರ
ಸಿ. ನಾರಾಯಣನ್. ೧೫, ೫/೨ ಕೇಂಬ್ರಿಡ್ಜ್ ರಸ್ತೆ, ಅಲಸೂರು
ಎನ್. ನಾಗರಾಜಾಚಾರ್, ಕೃಷ್ಣರಾಜಪುರ
ನಂಜುಂಡಾಚಾರ್, ಖಾಜಿ ಸೊನ್ನೇ ಹಳ್ಳಿ
ಪರಮೇಶ್ವರಾಚಾರ್, ಡಿ ಬ್ಲಾಕ್, ರಾಜಾಜಿನಗರ
ಎನ್. ಪುಟ್ಟಮಂಚಾಚಾರ್,
ಅಸಿಸ್ಟೆಂಟ್ ಎಂಜಿನಿಯರ್, ಕೆಂಪೇಗೌಡ ನಗರ
ಎನ್. ಪುಟ್ಟಾಚಾರ್, ಮಾರುತಿ ನಿಲಯ, ರಾಮಮೂರ್ತಿ ನಗರ
ಎ. ಬಸವರಾಜ್, ೪೪೨, ೬ನೇ ಮೈನ್, ದೋಬಿಘಾಟ್

ಹೆಚ್. ಡಿ. ಬಸವಾಚಾರ್, ೧೭೪, ಸಿಂಗಯ್ಯನ ಪಾಳ್ಯ
ಟಿ. ಎಸ್. ಮನ್ನಾಚಾರ್, ಬಿ. ನಾರಾಯಣಪುರ
ಹೆಚ್. ಎಸ್. ಮುನಿಕೃಷ್ಣಾಚಾರ್,
೬೧೯, ೪ನೇ ಟಿ. ಬ್ಲಾಕ್, ಜಯನಗರ
ಮುನಿಶ್ಯಾಮಾಚಾರ್, ಬಿಲ್ಡಿಂಗ್ ಕಂಟ್ರಾಕ್ಟರ್, ದ್ಯಾವಸಂದ್ರ
ಎಂ. ಎನ್. ಮುನೀಶ್ವರಾಚಾರ್, ಗಾಯಿತ್ರೀ ನಿಲಯ, ವಿಜನಾಪುರ
ರಾಜಗೋಪಾಲಾಚಾರ್ಯ. ೧೨೧ ದ್ಯಾವಸಂದ್ರ
ಡಿ. ರಾಜಾಚಾರ್, ಅಂಕಮ್ಮ ದೇವಾಲಯದ ಹಿಂದೆ, ರಾಮಮೂರ್ತಿನಗರ
ವೆಂಕಟಶ್ಯಾಮಾಚಾರ್, ೩೧೭, ಚರ್ಚ್ ರಸ್ತೆ, ರಾಮಮೂರ್ತಿ ನಗರ
ಎಂ. ವೆಂಕಟಾಚಾರ್, ಜನತಾ ಎಂಟರ್‌ಪ್ರೈಸಸ್, ಕೃಷ್ಣರಾಜಪುರ
ಶ್ರೀನಿವಾಸಾಚಾರ್ S/O ದಾಸಾಚಾರ್ಯ, ಬೆಳ್ಳಂಡೂರು
ಎ. ಎಸ್. ಶ್ರೀರಾಮಚಂದ್ರಾಚಾರ್, ವರ್ತೂರು
ಬಿ. ಎ. ಸುಬ್ಬಾಚಾರ್, ದ್ಯಾವಸಂದ್ರ ಕೃಷ್ಣರಾಜಪುರಂ
ಜಿ. ಸಾಂಬಶಿವಾಚಾರ್, ೨೬ ಸುಬ್ರಹ್ಮಣ್ಯ ಲೇನ್, ಅರಳೇಪೇಟೆ
ಹೊನ್ನಾಚಾರ್, ಬಿಎಸ್ಸಿ., ೨೪೧, ೫ನೇ ಕ್ರಾಸ್, ಕೆಂಪೇಗೌಡ ನಗರ

ಮಾಗಡಿ(೫೬೨ ೧೨೦)
ಹೆಚ್. ವಿ. ಚಂದ್ರಾಚಾರ್ಯ, ಅಧ್ಯಕ್ಷರು, ವಿಶ್ವಕರ್ಮ ಸಮಾಜ
ಪ್ರಸನ್ನಾಚಾರ್ಯ, ಅಗ್ರಹಾರ ರಸ್ತೆ
ಕೆ. ಭಾಸ್ಕರಾಚಾರ್ಯ, ಗಣೇಶ ಸಾ ಮಿಲ್ಸ್

ದೊಡ್ಡಬಳಾಪುರ (೫೬೧ ೨೦೩)
ವಿ. ಅಶ್ವತ್ಥನಾರಾಯಣಾ ಚಾರ್ಯ. ೨೭೦೩, ಚಿಕ್ಕಪೇಟೆ

ಚನ್ನಪಟ್ಟಣ(೫೭೧ ೫೦೧)
ಕೆ. ಕಲ್ಯಾಣಾಚಾರ್, ಕೃಷ್ಣಾ ಸಾ ಮಿಲ್ಸ್
ಎಸ್. ಚಂದ್ರಶೇಖರಾಚಾರ್ಯ, ೬ನೇ ಕ್ರಾಸ್, ಎಕ್ಸ್‌ಟೆನ್ಷನ್

ರಾಮನಗರಂ(೫೭೧ ೫೧೧)
ಕೆ. ರಾಮಾಚಾರ್ಯ

ಟಿ. ನಾಗಲಿಂಗ ಸ್ವಾಮಿ, ಮಿಡಲ್‌ಸ್ಕೂಲ್ ಸರ್ಕಲ್ ಎಕ್ಸ್‌ಟೆರ್ಷ
ಪಿ. ಎನ್. ವೆಂಕಟಾಚಾರ್ಯ, ಲೇಬರ್ ಇನ್ಸ್‌ಪೆಕ್ಟರ್
ಪಿ. ಭಾಸ್ಕರಾಚಾರ್ಯ, ರಾಜೇಶ್ವರಿ ಇಂಡಸ್ಟ್ರಿಯಲ್ ವರ್ಕ್ಸ್, ಐಜೂರು

ಮೈಸೂರು ಜಿಲ್ಲೆ

ಮೈಸೂರು
ವಿ. ಕುಮಾರಸ್ವಾಮಿ,
ಜ್ಯುಯಲರ್, ೬೪೭ ಕಾಮಾಟಗೇರಿ, ಮಂಡಿಮೊಹಲ್ಲಾ
ಕೆ. ಕೃಷ್ಣಾಚಾರ್ಯ, ೧೨೬೭ ಬಿಎನ್ ರಸ್ತೆ
ಎನ್ನೆಸ್. ಜನಾರ್ದನಮೂರ್ತಿ, ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟ್ಯೂಟ್,
ವೈ. ಕೆ. ತಿಮ್ಮಯ್ಯ, ವಿದ್ಯಾರಣ್ಯಪುರಂ
ಜಿ. ನಟರಾಜ್ & ಬ್ರದರ್ಸ್, ೧೫೩೦, ಕೆಟಿ ಸ್ಟ್ರೀಟ್, ಮಂಡಿಮೊಹಲ್ಲಾ
ಎನ್. ನರಸಿಂಹಾಚಾರ್ಯ, ೮೧೩ ಕಾಮಾಟಗೇರಿ
ಇ. ಪುಟ್ಟಸ್ವಾಮಾಚಾರ್, ಜ್ಯುಯಲರ್, ೧೧೫೮, ಕುರುಬಗೇರಿ
ಮೃತ್ಯುಂಜಯಾಚಾರ್, ಸರ್ವೇಯರ್
ಹೆಚ್ಚೆಂ. ವರದಾಚಾರ್ಯ, ೧೦೧೫, ಕೆಟಿ ಸ್ಟ್ರೀಟ್, ಮಂಡಿಮೊಹಲ್ಲಾ
ಎಂ. ಪಿ. ವರದಾಚಾರ್ಯ, ೫೬೭, ಇರ್ವಿನ್‌ರಸ್ತೆ.
ಪ್ರೊ. ಉ. ಕಾ. ಸುಬ್ಬರಾಯಾಚಾರ್, ಜಯಲಕ್ಷ್ಮೀಪುರಂ.
ಎನ್. ಸ್ವಾಮಿ, ಕಲಾವಿದರು, ೨೯೮೮ ವಿವಿ ಮೊಹಲ್ಲಾ
ಗುಂಡ್ಲುಪೇಟೆ
ಎಂ. ಎನ್. ಎಲ್. ಸ್ವಾಮಿ, ಮ್ಯಾನೇಜರ್, ಮೈಸೂರು ಬ್ಯಾಂಕ್
ಡಿ. ಎಸ್. ಸುಬ್ಬಯ್ಯಾಚಾರ್ಯ, **ಕಾಡುಹಂಪಾಪುರ,** ಪಡುವನಕೋಟೆ ಅಂಚೆ

ಮಂಡ್ಯ ಜಿಲ್ಲೆ

ಮಂಡ್ಯ (೫೭೧ ೪೦೧)
ಎಸ್. ಕೆ. ನರಸಿಂಹಾಚಾರ್ಯ, ಜೈನರಬೀದಿ
ಎನ್. ಸತ್ಯ, ಶ್ರೀಕೃಷ್ಣ ಜ್ಯುಯಲರಿ ಮಾರ್ಟ್, ಜೈನರಬೀದಿ

ಕೆ. ಪಿ. ಸ್ವಾಮಿ, ಎಂ.ಎ.,ಡಿ.ಎಂ.ಇ., ಕರ್ನಾಟಕ ಅಗ್ರೊ, ಇನ್ಡಸ್ಟ್ರೀಸ್ ಲಿ.,
ಬಿಸಗರಹಳ್ಳಿ (೫೭೧ ೪೮೯) [ವಿಶ್ವಕರ್ಮ ಕುಶಲ ಕಲಾ ಸಂಘ]
ಡಾ|| ಆರ್. ಡಿ. ಈಶ್ವರಾಚಾರ್ಯ, (ಕಾರ್ಯದರ್ಶಿ)
ಮಹಾಲಿಂಗಪ್ಪಾಚಾರ್ಯ (ಅಧ್ಯಕ್ಷರು)
ಮರಿಯಪ್ಪಾಚಾರ್ಯ (ಉಪಾಧ್ಯಕ್ಷರು)
ಪಿ. ವೆಂಕಟರಾಮಾಚಾರ್ಯ (ಖಜಾಂಚಿ)
ಶ್ರೀನಿವಾಸಾಚಾರ್ಯ (ಡೈರೆಕ್ಟರ್)
ಆನಂದಾಚಾರ್ಯ (ಡೈರೆಕ್ಟರ್)
ನೆಲ್ಲಿಗೆರೆ (೫೭೧ ೪೧೮)
ತಿಮ್ಮಪ್ಪಾಚಾರ್ಯರು, ಶಿಲ್ಪಿಗಳು, ಯಕ್ಷಗಾನ ಸೂತ್ರದಗೊಂಬೆ ಕಲಾವಿದರು
ಕೃಷ್ಣರಾಜಪೇಟೆ (೫೭೧ ೪೨೬)
ಸದ್ಯೋಜಾತಮೂರ್ತಿ, ಎಂ.ಎ ,ರಾ ಭಾವಿ., ಮುನ್ಸಿಫ್‌ಕೋರ್ಟ್

ರಾಯಚೂರು ಜಿಲ್ಲೆ

ಶ್ರೀ ಶ್ರೀ ಶ್ರೀ ಲಕ್ಷ್ಮೇಂದ್ರಸ್ವಾಮಿಗಳು, **ಲೇಬಗಿರಿ**, ಕೊಪ್ಪಳ ತಾಲ್ಲೂಕು
ಡಾ|| ಶ್ರೀನಿವಾಸಮೂರ್ತಿ ಹೊಸಮನಿ, ಕಾದಗಲ್ ಮಸೀದಿಬಳಿ, **ಗಂಗಾವತಿ**
ತಿಪ್ಪಣ್ಣ, ಸ್ವರ್ಣಶಿಲ್ಪಿ, **ಜಾಲಹಳ್ಳಿ**, ದೇವದುರ್ಗ ತಾಲ್ಲೂಕು
ಡಾ|| ನಾಗಪ್ಪ, **ಕವಿತಾಳ**, ಮಾನ್ವಿ ತಾಲ್ಲೂಕು

ಶಿವಮೊಗ್ಗ ಜಿಲ್ಲೆ

ಶಿವಮೊಗ್ಗ (೫೭೭ ೨೦೧)
ಕೆ. ಕಾಂತಪ್ಪಾಚಾರ್ಯ, ಮಂಜುನಾಥಾ ಆಟೋವರ್ಕ್ಸ್, ಸವಾರ್‌ಲೈನ್
ವಿ. ಬಿ. ಗೋವಿಂದಾಚಾರ್ಯ, ನಿವೃತ್ತ ತಹಸೀಲ್ದಾರರು, ಕೋಟೆರಸ್ತೆ
ಎಸ್. ಹೆಚ್. ಚಂದ್ರಹಾಸ್, ವಿಜಯ ಜ್ಯುಯಲರ್ಸ್, ಪಾರ್ಕ್ ಬಡಾವಣೆ
ಡಾ|| ಎ. ಎಫ್. ಮೋಹನ್‌ರಾವ್, ವಿಜಯ ಕ್ಲಿನಿಕ್, ಗಾಂಧಿಬಜಾರ್
ಎ. ಎಸ್. ಮಂಜಪ್ಪ & ಸನ್ಸ್, ಜ್ಯುಯಲರ್ಸ್, ಗಾಂಧಿಬಜಾರ್

ಆರ್. ರತ್ನಾಕರ್‌ಶೇಟ್, ಜ್ಯುಯಲರ್ಸ್, ಗಾಂಧಿಬಜಾರ್
ಡಿ. ರವಳಪ್ಪ, ಪ್ರಕಾಶ್ ಫ್ರೇಂ ವರ್ಕ್ಸ್, ಗಾಂಧಿಬಜಾರ್
ಪಿ. ಎ. ಲಕ್ಷ್ಮಣನ್, ಲಕ್ಷ್ಮೀ ಗ್ಯಾರೇಜ್, ಸವಾರ್ ಲೈನ್
ಎ. ಆರ್. ಶ್ರೀನಿವಾಸ್, ರತ್ನಪಡಿ ವ್ಯಾಪಾರಿಗಳು, ಉಪ್ಪಾರಕೇರಿ
ಎಸ್. ಡಿ. ಶ್ರೀನಿವಾಸ್, ದುರ್ಗಪ್ಪ ಜ್ಯುಯಲರ್ಸ್, ಗಾಂಧಿಬಜಾರ್

ಭದ್ರಾವತಿ (೫೭೭ ೩೦೧)
ಡಿ. ವೈ. ಕೃಷ್ಣಮೂರ್ತಿ, ಸ್ವರ್ಣಶಿಲ್ಪಿ, ಎನ್ನೆಸ್ಟಿ ರಸ್ತೆ
ವಿ. ದಾಮೋದರ ಪವಾಸ್ಕರ್, ಸ್ವರ್ಣಶಿಲ್ಪಿ, ಎನ್ನೆಸ್ಟಿ ರಸ್ತೆ
ಕೆ. ಬಾಬುಆಚಾರ್ಯ, ಸ್ವರ್ಣಶಿಲ್ಪಿ, ಬಿಹೆಚ್ ರಸ್ತೆ
ಬಿ. ಎನ್. ಭಾಸ್ಕರಾಚಾರ್ಯ, ಐಡಿಕೆ ೧೬, ನ್ಯೂಟೌನ್
ಎ. ಎನ್. ರಂಗಸ್ವಾಮಿ, ಸ್ವರ್ಣಶಿಲ್ಪಿ, ಜನ್ನಾಪುರ
ಎನ್. ಶ್ರೀಕಂಠಾಚಾರ್ಯ, ಅಸಿಸ್ಟೆಂಟ್ ಲಾ ಆಫೀಸರ್, ವಿಐಎಸ್ಎಲ್
ಎಂ. ವಿ. ಸುಬ್ರಾಯಶೇಟ್, ಸ್ವರ್ಣಶಿಲ್ಪಿ, ೬ನೇ ಕ್ರಾಸು, ಬಿಹೆಚ್ ರಸ್ತೆ
ವೈ. ಸೂರ್ಯನಾರಾಯಣಾಚಾರ್ಯ, ಐಡಿಕೆ ೬೦/ಬಿ, ನ್ಯೂಟೌನ್
ಎನ್. ಸುಂದರಮೂರ್ತಿ ಆಚಾರ್ಯ, ಜ್ಯುಯಲರ್ಸ್, ಎನ್ನೆಸ್ಟಿ ರಸ್ತೆ

ಮೇಲಿನ ಬೆಸುಗೆ ೫೭೭ ೪೧೮)
ಕೆ. ಪಿ. ಯಲ್ಲಪ್ಪಾಚಾರ್ಯ, ಕಲ್ಲ್ಲುಗುಡ್ಡೆ (ಹೊಸನಗರ ತಾಲ್ಲೂಕು)

ಮೇಗರವಳ್ಳಿ (೫೭೭ ೪೨೪)
ಎಂ. ಜಿ. ಲಿಂಗಪ್ಪಾಚಾರ್ಯ, ಸ್ವರ್ಣಶಿಲ್ಪಿ

ಶಿಕಾರಿಪುರ (೫೭೭ ೪೨೭)
ಗಣಪತಿ ಕೃಷ್ಣಶೇಟ್, ಜ್ಯುಯಲರ್ಸ್, ಪೇಟೆಬೀದಿ
ಎಸ್. ಗೋವಿಂದರಾವ್, ಜ್ಯುಯಲರ್ಸ್, ಮಂಡಿಪೇಟೆ
ಡಾ|| ಕೆ. ಆರ್. ತ್ಯಾರಣಗಿ, ಸಂಜೀವಿನಿ ಕ್ಲಿನಿಕ್
ಸುಬ್ರಾಯ ಗೋವಿಂದಸಾನು, ಜ್ಯುಯಲರ್ಸ್, ಬಸ್‌ಸ್ಟಾಂಡ್ ಸರ್ಕಲ್

ಹಾಸನ ಜಿಲ್ಲೆ

ಹಾಸನ (೫೭೩ ೨೦೧)
ಎಂ. ಸಿ. ಈಶ್ವರಾಚಾರ್ಯ, ಕುಟುಂಬಕಲ್ಯಾಣ ಕೇಂದ್ರ
ಎಂ. ವೈ. ಕೃಷ್ಣಾಚಾರ್ಯ, ಕೃಷ್ಣಾ ಜ್ಯುಯಲರಿ ಹಾಲ್, ಗಾಂಧಿಬಜಾರ್,
ಹೆಚ್. ಸಿ. ಗೋಪಾಲಾಚಾರ್ಯ, ೪೪೧೯, ೩ನೇ ಕ್ರಾಸು, ವಲ್ಲಭಭಾಯಿರಸ್ತೆ
ಕೆ. ಎಸ್. ಗೋಪಾಲಾಚಾರ್ಯ, ಶೋಭಾ ಇಂಡಸ್ಟ್ರೀಸ್, ಜಾತ್ರೆ ಮೈದಾನ
ಎ. ಎ. ಗಂಗಾಧರಾಚಾರ್ಯ, ಶ್ರೀ ವಿನಾಯಕ ಫರ್ನಿಚರ್ ವರ್ಕ್ಸ್, ನೆಹ್ರುರಸ್ತೆ
ವಿ. ಚಾಮಯ್ಯರಾಜು, ಸ್ವರ್ಣಶಿಲ್ಪಿಗಳು, ಹಳೇ ಗಾಣಿಗರರಸ್ತೆ
ಧೃವಕುಮಾರ್, ಮಹೇಶ್ ಪವರ್ ರೋಲಿಂಗ್ ವರ್ಕ್ಸ್, ಈಶ್ವರಗುಡಿರಸ್ತೆ
ಎಂ. ಬಿ. ನಟರಾಜ್ c/o ಶಿಲ್ಪಿ ಎನ್ನೆಸ್ವಿ ಆಚಾರ್ಯ, ಕೆ. ಆರ್. ಪುರಂ
ಕೆ. ಸಿ. ನಿಂಗಪ್ಪಾಚಾರ್ಯ, ಬಾಲಾಜಿ ಜ್ಯುಯಲರಿ ವರ್ಕ್ಸ್, ಚಿಕ್ಕಬಸದಿ ರಸ್ತೆ
ಪದ್ಮನಾಭಾಚಾರ್ಯ,
ಶ್ರೀ ದುರ್ಗಾಪರಮೇಶ್ವರಿ ಉಡ್ ವರ್ಕ್ಸ್, ಜಾತ್ರೆ ಮೈದಾನ
ಬಿ. ಆರ್. ಪುಟ್ಟವೀರಾಚಾರ್ಯ,
ಗುಮಾಸ್ತೆ, ಡಿಸಿ ಆಫೀಸ್ (ಆಹಾರ ವಿಭಾಗ)
ಪಿ. ಕೆ. ಪುರುಷೋತ್ತಮಾಚಾರ್ಯ, ಕರ್ನಾಟಕ ಬ್ಯಾಂಕ್
ಬಿ. ಟಿ. ಬ್ಯಾಟಾಚಾರ್ಯ, ಜ್ಯುಯಲರ್ಸ್, ಈಶ್ವರಗುಡಿ ಬೀದಿ
ಎಸ್. ಯೋಗಾಚಾರ್, ಆರ್‌ಟಿಓ ಆಫೀಸ್
ರಾಜಣ್ಣಾಚಾರ್ಯ, ಟೈಪಿಸ್ಟ್, ಕೃಷಿ. ನಿರ್ದೇಶಕರ ಕಛೇರಿ, ರವೀಂದ್ರನಗರ
ಎಂ. ರಾಮಯ್ಯ, ಬಿ.ಇ., ಮುಖ್ಯರು, (ಎಲೆಕ್ಟ್ರಿಕಲ್), ಎಲ್ವಿ ಪಾಲಿಟೆಕ್ನಿಕ್
ಶ್ರೀಮತಿ ಲಲಿತಮ್ಮ, ೩೧೨೩, ಹಳೇ ಗಾಣಿಗರ ಬೀದಿ
ಡಾ|| ಲಕ್ಷ್ಮಣಾಚಾರ್ಯ, ಸರ್ಜನ್, ಸರ್ಕಾರಿ ಆಸ್ಪತ್ರೆ
ಎಲ್. ವಿಜಿತಾಶ್ವಾಚಾರ್ಯ, ಇನ್ಸ್‌ಟ್ರಕ್ಟರ್, ಐಟಿಐ
ಡಾ|| ಕೆ. ಪಿ. ವೀರಪ್ಪಾಚಾರ್ಯ, ಶ್ರೀ ವಿನಾಯಕ ಹೋಮಿಯೋ ಕ್ಲಿನಿಕ್
ಹೆಚ್. ವೀರಭದ್ರಾಚಾರ್ಯ,
ಶ್ರೀ ರಂಗನಾಥ ವುಡ್ ಫರ್ನಿಚರ್ ವರ್ಕ್ಸ್, ಕೆ. ಆರ್. ಪುರಂ

ಪಿ. ವೀರಭದ್ರಾಚಾರ್ಯ, ಸ್ವರ್ಣಶಿಲ್ಪಿಗಳು, ಚಿಕ್ಕಬಸದಿ ರಸ್ತೆ
ಹೆಚ್. ಎನ್. ಸಿದ್ದಪ್ಪಾಚಾರ್ಯ,
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್, ಗಾಂಧಿಬಜಾರ್
ಸುಮಂತ ಆಚಾರ್ಯ, ಕಲಾಧ್ಯಾಪಕರು, ಸೆಂಟ್‌ಜೋಸಫ್ ಹೈಸ್ಕೂಲ್
ಹೆಚ್ಕೆ. ಸುಂದರಾಚಾರ್ಯ, ಹೆಚ್ಕೆಎಸ್ ಜ್ಯುಯಲರಿಷಾಪ್, ಚಿಕ್ಕಬಸದಿ ರಸ್ತೆ
ಎಂ. ಪಿ. ಸೋಮಸುಂದರಾಚಾರ್ಯ, ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್, ಐಟಿಐ
ಟಿ. ಶಾಂತಾರಾಮ ಆಚಾರ್ಯ, ದೊಡ್ಡಿರಸ್ತೆ, ಕೆ. ಆರ್. ಪುರಂ

ತಿಪಟೂರು (೫೭೨ ೨೦೧)

ಎಂ. ಸಿ. ಬಸವಾಚಾರ್ಯ, ಸ್ವರ್ಣಶಿಲ್ಪಿ, ದೊಡ್ಡಪೇಟೆ
ಜಿ. ಮರಿಬಸವಾಚಾರ್ಯ, ಸ್ವರ್ಣಶಿಲ್ಪಿ
ಆರ್. ರಾಮಕೃಷ್ಣಾಚಾರ್ಯ, ಸ್ವರ್ಣಶಿಲ್ಪಿ
ಟಿ ಬಿ. ರುದ್ರಾಚಾರ್ಯ, ಜವಳಿ ವ್ಯಾಪಾರಿ, ಬಿಹೆಚ್‌ರಸ್ತೆ

ಅರಸೀಕೆರೆ (೫೭೩ ೧೦೩)

ಹೆಚ್. ಬಿ. ಚಲುವಾಚಾರ್ಯ ಅಂಡ್ ಸನ್ಸ್,
ರಾಜೇಶ್ವರಿ ಜ್ಯುಯಲರಿ ಮಾರ್ಟ್

ಬೇಲೂರು (೫೭೩ ೧೧೫)

ಸಿ: ಲಿಂಗಾಚಾರ್ಯ, ಗ್ರಾಮ ಲೆಕ್ಕಿಗರು

ನೆರೆನಾಡುಗಳಿಂದ

ಉಲ್ಲಾಳ ಪುರುಷೋತ್ತಂ,
ಇ-೩ ದತ್ತಗುರು ಹೌಸಿಂಗ್ ಸೊಸೈಟಿ (ಟೆಲಿಕಂ ಫ್ಯಾಕ್ಟರಿ ಬಳಿ)
ದಿಯಾನರ್, ಮುಂಬೈ (ಮಹಾರಾಷ್ಟ್ರ)
ಉಲ್ಲಾಳ ವಾಸುದೇವ ಆಚಾರ್ಯ,
೭/೯೭, ಆಜಾದ್ ನಗರ್, ಧಾಕೆ ಕಾಲೋನಿ, ಜೆ. ಪಿ. ರಸ್ತೆ, ಅಂಧೇರಿ
(ಪಶ್ಚಿಮ), ಮುಂಬೈ ೪೦೦ ೦೫೮
ಡಾ|| ಜನಾರ್ದನ ಶಾಸ್ತ್ರಿ ನಾ ಪಂಡಿತ್,
೧೨೫೮, ಉತ್ತರ ಕಸಬ, ಸೋಲಾಪುರ-೨

ಪಿ. ಎನ್. ಚಾರಿ, ಜ್ಯೂನಿಯರ್ ಎಂಜಿನಿಯರ್, ಅಮರಾವತಿ (ಮಹಾರಾಷ್ಟ್ರ)

ದೇವದಾಸ್ ಹೆಚ್. ಆಚಾರ್ಯ,
ಶ್ಯಾಮರಾವ್ ವಿಠ್ಠಲ ಕೋ-ಆಪ್ ಬ್ಯಾಂಕ್, ಕಲ್ಯಾಣ

ಪ್ರೊ. ನಾಗೇಶ್ ಬಿ. ಸಾಬಣ್ಣನವರ್,
ಬ್ಲಾಕ್ ೭, ಮೊದಲ ಅಂತಸ್ತು, ಮೋಹನ್ ಮನೋಹರ್, ೧೬೨ ಇ,
ಅಂಬೇಡ್ಕರ್ ರಸ್ತೆ, ದಾದರ್, ಮುಂಬೈ-೧೪

ಎಂ. ನಾಗೇಶ್,
ಮಿರ್ಜ್ಹೋಲಿ ಮನ್ಜಿಲ್, ಫ್ಲಾಟ್ ೪೦, ಮೂರನೇ ರಸ್ತೆ, ತಿಲಕ್ ನಗರ್,
ಗೋರೆಗಾವ್, ಮುಂಬೈ ೪೦೦ ೦೯೨

ಎಸ್. ಎ. ಪಡುಬಿದ್ರಿ,
೪೦೩, ಶ್ರೀಜಿ ಅಪಾರ್ಟ್‌ಮೆಂಟ್ಸ್ ೪ನೇ ಅಂತಸ್ತು, ಜೆ. ಪಿ. ರಸ್ತೆ,
ವಾರ್ಸೋವ ರಸ್ತೆ, ಅಂಧೇರಿ (ಪಶ್ಚಿಮ) ಮುಂಬೈ ೪೦೧ ೦೫೮

ಪ್ರಭಾಕರ್ ಪಂಡಿತ್,
೧೭೧, ಗೋಲ್ಡ್‌ಫಿಂಚ್ ಪೇಟ್, ದಿನಕರ ಮಂಗಳ ಕಾರ್ಯಾಲಯ,
ಸೋಲಾಪುರ (ಮಹಾರಾಷ್ಟ್ರ) ೪೧೩ ೦೦೧

ಜಿ. ಎ. ಬಸ್ರೂರು,
೨೪, ಮೊದಲ ಅಂತಸ್ತು, ಹರಿಲೋಗ್ ಕೋ-ಆಪ್ ಸೊಸೈಟಿ
ಶಂಕರ್‌ಲೇನ್, ಕಂಡಿವ್ಲಿ, ಮುಂಬೈ ೪೦೦ ೬೦೭

ಎಸ್. ಎ. ಬಸ್ರೂರು,
೨೦೧/೧೬೫, ಉನ್ನತ ನಗರ, ಡಿವಿಷನ್ ೨, ಗೋರೆಗಾಂವ್,
ಮುಂಬೈ ೪೦೦ ೦೬೨

ಶಾಮರಾವ್ ಬಿ. ಪೋತದಾರ್ ವಶಿಕರ್,
ಸರಾಫ್, ಗಾಂಧಿ ಚೌಕ್, ಇಸ್ಲಾಂಪುರ್, ಸಾಂಗ್ಲಿ ಜಿಲ್ಲೆ (ಮಹಾರಾಷ್ಟ್ರ)

ಮಂಗಳಾಪುರಪು ದಕ್ಷಿಣಾಮೂರ್ತಿ,
ವಿಶ್ವಕರ್ಮ ಸಾಹಿತ್ಯ ಪ್ರಚಾರ ಮಂಡಲಿ, ಸರಾಫ್ ಬಜಾರ್, ತೆನಾಲಿ
ಗುಂಟೂರು ಜಿಲ್ಲಾ (ಆಂಧ್ರ)

ಚಿರ್ರಾವೂರು ನಾಗಭೂಷಣಾಚಾರ್ಯ, ಬಿಎ., ಬಿಎಡ್.,
ಸಂ: ವಿಶ್ವಶಿಲ್ಪಿ, ನರಸರಾವುಪೇಟೆ, ಗುಂಟೂರು ಜಿಲ್ಲಾ (ಆಂಧ್ರಪ್ರದೇಶ)

ಪೆದಪಾಟಿ ನಾಗೇಶ್ವರರಾವು, ಎಂ.ಎ., (ಪ್ರಿನ್ಸಿಪಾಲ್: ಶಿಲ್ಪಕಲಾಶಾಲ)
೧-೨-೨೧೮, ಎಂ. ಗಣೇಶಂ ಮನೆ, ಬಕ್ರಂ, ಮುನ್ಷಿರಾಬಾದ್, ಹೈದರಾಬಾದ್

ಪ್ರೊ. ಯರ್ರೋಜು ಮಾಧವಾಚಾರ್ಯುಲು, ಎಂಎ.,
ಸಭಾಪತಿ, ವಿಶ್ವಬ್ರಾಹ್ಮಣ ಧರ್ಮ ಪೀಠಂ, ನೂಜಿವೀಡು ೫೨೧ ೨೦೧ (ಆಂಧ್ರ)

ದುರಿಶೇಟಿ ವೆಂಕಟರಾಮಾಚಾರ್ಯುಲು, ನೂಜಿವೀಡು, ೫೨೧ ೨೦೧

ಜಿ. ದಾಮೋದರರಾವ್,
ವಿಕ್ರಂ ಮ್ಯಾನುಫ್ಯಾಕ್ಚರಿಂಗ್ ಜ್ಯುಯಲರ್ಸ್, ೮೫-ಎ, ಎಡೆಯರ್ ರಸ್ತೆ, ಕೊಯಮುತ್ತೂರು ೬೪೧ ೦೦೧

ಎಸ್. ವೀರಾಸ್ವಾಮಿ ಪತ್ತಾರ್, ಕಾಲೇಜ್ ರಸ್ತೆ, ತಿರುಚಿರಾಪಳ್ಳಿ ೬೨೦ ೦೦೨

ಯು. ಶ್ರೀನಿವಾಸ್, ೨೩/೧೬೫, ಥಾಮಸ್ ರಸ್ತೆ, ಕೊಯಮುತ್ತೂರು-೧

ಈ. ಸಂಬಂಧಾಚಾರ್ಯ,
೪೦, ಮೈನ್ ರೋಡ್, ಕೋವಿಲ್ ಪತಗ್ಗೈ, ಮದರಾಸ್-೬೨

ಎಂ. ವಿ. ದಾಮೋದರನ್, ಸಂ: ನಿರ್ಮಿತಿ, ತಾಲವೂರು ೬೮೧ ೫೧೪ (ಕೇರಳ)



ಆಚಾರ್ಯಾಭಿವಂದನೆ

ವಿಶ್ವಕರ್ಮ ಸಂಪ್ರದಾಯದ ಬಗ್ಗೆ ನಮ್ಮ ನಾಡಿನಲ್ಲಿ ಜನಜಾಗ್ರುತಿಯನ್ನು ಒದಗಿಸಿರುವವರಲ್ಲಿ ವೇದ ಬ್ರಹ್ಮಶ್ರೀ 'ನಾಭಾ' ಚಂದ್ರಶೇಖರಾಚಾರ್ಯರು ಅಗ್ರಗಣ್ಯರು. ಅವರ ವೈದಿಕ ವೈದುಷ್ಯ, ಶಾಸ್ತ್ರ ಚಿಂತನೆ, ವಿಮರ್ಶಾತ್ಮಕವಾದ ವಿಚಾರಧಾರೆ, ಮನವೊಪ್ಪಿಸುವಂಥ ವಾಗ್ಧೋರಣೆ ಇವು ಅವರಿಗೆ ಪ್ರಸಿದ್ಧಿಯನ್ನು ತಂದು ಕೊಟ್ಟಿವೆ

ಅವರಿಗೆ ಸಲ್ಲಿಸುವ **ಅಭಿವಂದನೆಯ** ನೆಪದಿಂದ ನಮ್ಮ ಸಂಸ್ಕೃತಿಯಲ್ಲಿ ವಿಶ್ವಕರ್ಮ ಕಲ್ಪನೆಯ, ಜನಾಂಗದ, ಪಾತ್ರವನ್ನು ಕುರಿತು ಚಿಂತನೆ ಇಲ್ಲಿ ನಡೆದಿದೆ. **ಆಚಾರ್ಯಾಭಿವಂದನೆಗೆ** ಐದು ಆವರಣಗಳು: ವೇದ ಸಂಶೋಧನೆ, ಮಹನೀಯರು, ಸಂಭಾವನೆ ಮತ್ತು ಸಂಘ . ಹೀಗೆ ಸರ್ವಾಂಗ ಸುಂದರವಾದ **ಆಚಾರ್ಯಾಭಿವಂದನೆ** ನಾಲ್ಕುಕಾಲ ನಿಲ್ಲುವಂಥ ಸಂಭಾವನಾಗ್ರಂಥ.

-ಪ್ರೊ. ಎಸ್. ಕೆ. ರಾಮಚಂದ್ರರಾವ್.



SRI 'NABHA' SANMANA SAMITHI
2-163, BEML Nagar, ☆ KGF-563 115